ಕನಕಪುರ ಪ್ರದೇಶದ ಇತಿಹಾಸ ಮತ್ತು ಸಂಸ್ಕೃತಿ
(ಕ್ರಿ.ಶ. 1800ರ ವರೆಗೆ)

ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಹೆಚ್.ಡಿ ಪದವಿಗಾಗಿ ಸಲ್ಲಿಸಿದ ಮಹಾಪ್ರಬಂಧ

ಸಂಶೋಧಕರು

ಕೆ.ಪಿ. ಪ್ರಕಾಶ ಎಂ.ಎ. ಎಂ. ಫಿಲ್.

ಮಾರ್ಗದರ್ಶಕರು,

ಡಾ. ದೇವರ ಕೊಂಡಾರೆಡ್ಡಿ

ಕನ್ನಡ ವಿಶ್ವವಿದ್ಯಾನಿಲಯ,
ವಿದ್ಯಾರಣ್ಯ, ಹಂಪಿ.

ಶಾಸನಶಾಸ್ತ್ರ ವಿಭಾಗ,
ಸಮಾಜ ವಿಜ್ಞಾನಗಳ ನಿಕಾಯ,
ಕನ್ನಡ ವಿಶ್ವವಿದ್ಯಾಲಯ ವಿದ್ಯಾರಣ್ಯ, ಹಂಪಿ.

2012

ಕನಕಪುರ ಪ್ರದೇಶದ ಇತಿಹಾಸ ಮತ್ತು ಸಂಸ್ಕೃತಿ
(ಕ್ರಿ.ಶ. 1800ರ ವರೆಗೆ)

ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಹೆಚ್.ಡಿ ಪದವಿಗಾಗಿ ಸಲ್ಲಿಸಿದ ಮಹಾಪ್ರಬಂಧ

ಸಂಶೋಧಕರು

ಕೆ.ಪಿ. ಪ್ರಕಾಶ ಎಂ.ಎ.ಎಂ.ಫಿಲ್.,

ಮಾರ್ಗದರ್ಶಕರು

ಡಾ. ದೇವರ ಕೊಂಡಾರೆಡ್ಡಿ

ಕನ್ನಡ ವಿಶ್ವವಿದ್ಯಾಲಯ,
ವಿದ್ಯಾರಣ್ಯ, ಹಂಪಿ.

ಶಾಸನಶಾಸ್ತ್ರ ವಿಭಾಗ,
ಸಮಾಜ ವಿಜ್ಞಾನಗಳ ನಿಕಾಯ,
ಕನ್ನಡ ವಿಶ್ವವಿದ್ಯಾಲಯ ವಿದ್ಯಾರಣ್ಯ, ಹಂಪಿ.

2012

'ಪ್ರಮಾಣ ಪತ್ರ'

ಈ ಮಹಾ ಪ್ರಬಂಧವನ್ನು ನಾನು ಪಿ.ಹೆಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಒಪ್ಪಿಸಲು ಡಾ॥ ದೇವರ ಕೊಂಡಾರೆಡ್ಡಿಯವರ ಮಾರ್ಗದರ್ಶನದಲ್ಲಿ ಸಿದ್ದಪಡಿಸಿದ್ದು, ಪ್ರಸ್ತುತ ಮಹಾಪ್ರಬಂಧ ಅಥವಾ ಅದರ ಯಾವುದೇ ಭಾಗವನ್ನು ಹಿಂದೆ ಯಾವುದೇ ಪದವಿಗಾಗಲೀ, ಅಥವಾ ಇತರೆ ಉದ್ದೇಶಗಳಿಗಾಗಲೀ ಬಳಸಿಕೊಂಡಿಲ್ಲ ಎಂದು ಈ ಮೂಲಕ ಘೋಷಿಸುತ್ತೇನೆ.

ಸ್ಥಳ – ಶೃಂಗೇರಿ

ದಿನಾಂಕ – 10/10/2012

ಕೆ.ಪಿ. ಪ್ರಕಾಶ

ಪಿ.ಹೆಚ್.ಡಿ ವಿದ್ಯಾರ್ಥಿ

ಶ್ರೀ ಜೆ.ಸಿ.ಬಿ.ಎಂ. ಕಾಲೇಜು

ಶೃಂಗೇರಿ.

'ಧೃಢೀಕರಣ ಪತ್ರ'

ಕೆ.ಪಿ. ಪ್ರಕಾಶ ಇವರು [illegible] ಇತಿಹಾಸ ಮತ್ತು ಸಂಸ್ಕೃತಿ. (ಕ್ರಿ.ಶ. 1800 ರವರೆಗೆ) ಎಂಬ ಶೀರ್ಷಿಕೆಯ ಮಹಾ ಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಕನ್ನಡ ವಿಶ್ವವಿದ್ಯಾಲಯ ಹಂಪಿ, ಶಾಸನಶಾಸ್ತ್ರ ವಿಭಾಗಕ್ಕೆ ಪಿ.ಹೆಚ್.ಡಿ. ಪದವಿಗಾಗಿ ಸಲ್ಲಿಸುತ್ತಿರುವ ಈ ಮಹಾ ಪ್ರಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಧೃಢೀಕರಿಸುತ್ತೇನೆ.

ಸ್ಥಳ : ಹಂಪಿ

ದಿನಾಂಕ – 10/10/2012

ಡಾ॥ದೇವರ ಕೊಂಡಾರೆಡ್ಡಿ

ನಿವೃತ್ತ ಪ್ರಾಧ್ಯಾಪಕರು

ಶಾಸನ ಶಾಸ್ತ್ರ ವಿಭಾಗ.

ಹಂಪಿ.

ಪರಿವಿಡಿ

ಅಧ್ಯಾಯ – 1

ಪೀಠಿಕೆ

ಗಿಡದ ಸೀಮೆ, ಅರೆಮಲೆನಾಡು ಎಂದು ಅನ್ವರ್ಥ ಪಡೆದಿರುವ ಕಾನಕಾನಹಳ್ಳಿ ಪ್ರದೇಶವು ದಟ್ಟವಾಗಿ ಹಬ್ಬಿರುವ ಬೆಟ್ಟ ಸಾಲುಗಳು ಹಸಿರುಕಾಡುಗಳು, ನದಿ ಕಣಿವೆಗಳು, ಹಳ್ಳ ಕೆರೆಗಳಿಂದ ಪ್ರಕೃತಿಯ ರಮ್ಯ ತಾಣವಾಗಿ, ಸಾವಿರಾರು ವರ್ಷಗಳಿಂದ ಜನವಸತಿ ಕೇಂದ್ರವಾಗಿ ಆಕರ್ಷಣೆಯಿಂದ ಕೂಡಿದೆ. ಪ್ರಾಗೈತಿಹಾಸಿಕ ಕಾಲದಿಂದಲೂ, ಬೃಹತ್ ಶಿಲಾಯುಗದ ಶಿಲಾಸಮಾಧಿಗಳ ಸಾಕ್ಷ್ಯಾಧಾರಗಳಿಂದ ಇಲ್ಲಿ ಜನ ವಸತಿಯ ನೆಲೆ ಇದ್ದುದು ದೃಢಪಟ್ಟಿದೆ. ಶಿಲಾಯುಗಗಳ ವಿವಿಧ ಕಾಲಘಟ್ಟಗಳ ಚರಿತ್ರೆ, ಇರುವ ಕುರುಹುಗಳಿಂದ ಅರಿಯಬಹುದೇ ಹೊರತು ಈ ವಿಷಯದಲ್ಲಿ ಇನ್ನೂ ಸಂಶೋಧನೆಗಳನ್ನು ನಡೆಸಬೇಕಾಗಿದೆ. ಆಗ ಇನ್ನಷ್ಟು ನೆಲೆಗಳು ಗೋಚರಲಾಗಬಲ್ಲವು.

ಇತಿಹಾಸದ ಕಾಲಘಟ್ಟಗಳಿಗೆ ಬಂದರೆ, ಸ್ಥಳೀಯ ದೊರೆಗಳಾದ ತಲಕಾಡು ಗಂಗರರಿಂದ ಪ್ರಾರಂಭವಾಗಿ ಮೈಸೂರು ಅರಸರ ಕಾಲದವರೆಗೆ ಶಾಸನ, ವೀರಗಲ್ಲುಗಳ ಸಾಕ್ಷ್ಯಾಧಾರಗಳಿಂದ ಅಧಿಕೃತ ನೆಲೆಗಳ ಸಾಕ್ಷ್ಯಾಧಾರಗಳಿಂದ ದೃಢಪಟ್ಟಿವೆ. ಈ ಪ್ರದೇಶವು ಉತ್ತರದಿಂದ ದಕ್ಷಿಣಕ್ಕೆ ಇಳಿಜಾರಾಗಿ ಕಣಿವೆಗಳಿಂದ ಕೂಡಿರುವ ಕಾರಣದಿಂದಲೋ, ಬೆಟ್ಟಗುಡ್ಡಗಳ ಅಡೆತಡೆ ಇದ್ದುದರಿಂದಲೇ ಯಾವುದೇ ರಾಜವಂಶದವರು ನೆಲೆನಿಂತು ರಾಜಧಾನಿ ಮಾಡಿಕೊಂಡು ಆಳ್ವಿಕೆ ಮಾಡಲು ಸಾಧ್ಯವಾಗಿಲ್ಲ ಎನಿಸುತ್ತದೆ ಗಂಗರು ಹೊಯ್ಸಳರು, ಮೈಸೂರು ಅರಸರುಗಳೆಲ್ಲಾ ಈ ಪ್ರದೇಶವನ್ನು ಸಾಮಂತರು, ಪಾಳೇಗಾರರನ್ನು ಆಡಳಿತಗಾರರು ಬಿಟ್ಟು ಚಿಕ್ಕ ಚಿಕ್ಕ ಪ್ರಾಂತ್ಯಗಳನ್ನಾಗಿ ವಿಂಗಡಿಸಿ ಆಳ್ವಿಕೆ ಮಾಡಿರಬಹುದೆಂದು ಊಹಿಸಬಹುದಾಗಿದೆ.

ಆದ್ದರಿಂದಲೇ, ಸಮೃದ್ಧವಾದ ಇತಿಹಾಸ, ವರ್ಣರಂಜಿತವಾದ ಸಾಂಸ್ಕೃತಿಕ ಘಟನೆಗಳು, ಇವುಗಳನ್ನು ನಿಬಿಡವಾಗಿ ತುಂಬಿ ತುಳುಕಿಸಿ, ಬೆರಗುಗೊಳಿಸುವ ಶಾಸನಗಳೂ ಕೂಡ ಈ ಪ್ರದೇಶದಲ್ಲಿ ಅಷ್ಟಾಗಿ ಕಂಡು ಬರುವುದಿಲ್ಲ. ದೊರೆತಿರುವ ಸ್ವಲ್ಪವೇ ಸಂಖ್ಯೆಯ ಶಾಸನಗಳು, ವೀರಗಲ್ಲುಗಳು, ಮಾಸ್ತಿಗಲ್ಲುಗಳು, ಶಿಲಾಮೂರ್ತಿಗಳ ಸಹಾಯದಿಂದ, ಕಾಲದಿಂದ ಕಾಲಕ್ಕೆ ಆಳ್ವಿಕೆ ಮಾಡಿದ ಮೂಲ ರಾಜರುಗಳ, ಆಶ್ರಿತ ಸಾಮಂತ, ಪಾಳೇಗಾರರ ಕರ್ತವ್ಯಪಾಲನೆಯ ಸಾಮಾನ್ಯ ವಿದ್ಯಾಮಾನಗಳು ತಿಳಿದುಬರುತ್ತವೆ.

ಕಾಣಿಕಾರನಹಳ್ಳಿಯ ಪ್ರಭುಗಳ ಚಟುವಟಿಕೆಗಳು ಹಾಸನ, ಮೈಸೂರು ಜಿಲ್ಲೆಗಳ ಶಾಸನಗಳಿಂದ ತಿಳಿದು ಬರುತ್ತವೆ. ಆದರೆ ಸ್ಥಳದ ಶಾಸನಗಳು ಏನನ್ನೂ ತಿಳಿಸುವುದಿಲ್ಲ. ಆದರೂ, ಮೂಲರಾಜರ ಆಶ್ರಿತ ಆಡಳಿತಗಾರರು, ಸಿಗಲನಾಡು ಪಾಳೇಗಾರರ ಸಂಬಂಧಗಳನ್ನು ಸ್ಥಳೀಯ ಶಾಸನಗಳಿಂದ ತಿಳಿಯಬಹುದು.[1]

ಕನಕಪುರ ಎಂದು ದಿನಾಂಕ 10–4–1952ರಂದು (ಅನುಬಂಧ) ನಾಮಕರಣ ಆಗುವುದಕ್ಕಿಂತ ಮುಂಚೆ ಈ ಕಾನಕಾನಹಳ್ಳಿ ಪ್ರದೇಶವು 16–17ನೇ ಶತಮಾನದವರೆಗೂ ಒಂದು ಸಣ್ಣ ಸಾಮಾನ್ಯ ಸ್ಥಳವಾಗಿತ್ತು. ಇದರ ಆಸುಪಾಸಿನಲ್ಲೇ ಇರುವ ಅರಳಾಳು, ತುಂಗಣಿ, ಮರಳಲಾಡಿ, ಅಚ್ಚಲು ಇತ್ಯಾದಿ ಹಲವು ಸ್ಥಳಗಳು ರಾಜಕೀಯ ಮತ್ತು ಧಾರ್ಮಿಕ ಚಟುವಟಿಕೆಗಳ ಕೇಂದ್ರಗಳಾಗಿ ಪ್ರಸಿದ್ಧಿಗೊಂಡಿರುವ ಉಲ್ಲೇಖಗಳು ಸಿಗುತ್ತವೆ.

ದೊರೆತಿರುವ ಐತಿಹಾಸಿಕ ಕುರುಹುಗಳೂ ಅಷ್ಟೆ. ಥಟ್ಟನೆ ಗೋಚರಿಸುವ ದಾಖಲೆಗಳು ಕಡಿಮೆ ಇಲ್ಲ ಎಂದರೂ ಸರಿಯೆ. ಪ್ರಾಚೀನ ದೇವಾಲಯಗಳೇನೋ ಶಿಥಿಲಾವಸ್ಥೆಯಲ್ಲಿದ್ದರೂ, ಅವುಗಳು ಎಷ್ಟು ಹಳೆಯವು, ಅವುಗಳ ನಿರ್ಮಾಣ ಯಾವಾಗ, ಪೂಜಾ ವ್ಯವಸ್ಥೆ ಹೇಗೆ ಇವನ್ನು ತಿಳಿಸುವ ಶಾಸನಗಳೇ ಇಲ್ಲ, ಇದ್ದು ಕಾಲ ಗರ್ಭದಲ್ಲಿ ಕಣ್ಮರೆಯಾದುವೇ ತಿಳಿಯದು. ಆ ದೇವಾಲಯಗಳ ರಚನೆ, ಮೂರ್ತಿ ಶಿಲ್ಪಗಳ ವರ್ಣನೆ, ಆಕಾರಗಳ ಆಧಾರದ ಮೇಲೆ ಕಾಲ ಘಟ್ಟಗಳನ್ನು ಊಹಿಸಬಹುದೇ ವಿನಹ, ಖಚಿತವಾಗಿ ತಿಳಿಯಲು ಬರುವುದಿಲ್ಲ.

ವಿವಿಧ ಹೆಸರುಗಳು

ನಾಯಕರು, ನಾಡಪ್ರಭುಗಳು ಮೊದಲಾದ ಹೆಸರುಗಳಲ್ಲಿ ಕರಸಿಕೊಳ್ಳುವ ಸ್ಥಳದ ಆಡಳಿತ ಮುಖ್ಯರು ಅಚ್ಚಲನಾಡು, ನೂಲನಾಡು, ಕೆಳಲೆನಾಡು, ಹೊಮ್ಮಳಿಗೆನಾಡು, ಚೊಕ್ಕನಾಡು, ಸಿಗಲನಾಡು, ಹನಿಯೂರು ನಾಡು, ಎಳವಲೆನಾಡು, ದೇಸಿಗರ ನಾಡು, ಮಹಾನಾಡು ಇಂತಹ ಪ್ರದೇಶಗಳ ಆಡಳಿತ ವ್ಯವಹಾರಗಳನ್ನು ನೋಡಿಕೊಳ್ಳುತ್ತಿದ್ದಂತೆ ತಿಳಿಯುವುದಾದರೂ, ಈ ನಾಡುಗಳ ಗಡಿರೇಖೆಗಳು ಯಾವುವು, ಅಸ್ತಿತ್ವದ ಕಾಲಘಟ್ಟಗಳು ಎಲ್ಲಿಂದ ಎಲ್ಲಿಯವರೆಗೆ ಇವು ಇನ್ನೂ ಸ್ಪಷ್ಟಪಡಬೇಕಾಗಿವೆ.[2]

ಸ್ಪಷ್ಟಪಡಿಸಲು ಬೇಕಾಗುವಷ್ಟು ವಿವರಗಳು ಸಹ ಶಾಸನಗಳಲ್ಲಿ ಇರುವಂತಿಲ್ಲ. ಸಿಗಲನಾಡು ಪಾಳೆಯಗಾರರ ವಿಚಾರದಲ್ಲಿ ಕೊಂಚಮಟ್ಟಿಗೆ ವಿಶ್ಲೇಷಿಸಲು ಸಾಧ್ಯವಾಗಬಹುದಾದ ವಿವರಗಳಿವೆ. ಕನಕಪುರದ ರಾಜಕೀಯ ಇತಿಹಾಸದಲ್ಲಿ ಮುಖ್ಯಧಾರೆಯಾಗಿ ಇವರು ಕಾಣಿಸಿಕೊಂಡಿದ್ದಾರೆ. ಅಧಿರಾಜರಾದ ಚೋಳರ ಮತ್ತು ಹೊಯ್ಸಳರ ಆಳ್ವಿಕೆಯ ಇತಿಹಾಸದೊಂದಿಗೆ ಇವರ ಇತಿಹಾಸ ಹೆಣೆದುಕೊಂಡು ಸಾಕಷ್ಟು ದೀರ್ಘಕಾಲದ ವರೆಗೆ ಗೋಚರಿಸುತ್ತದೆ. ಇವರ ಕಾಲದ ಸಾಮಾಜಿಕ ಸಾಂಸ್ಕೃತಿಕ ವಿದ್ಯಮಾನಗಳ ಅಧ್ಯಯನ ಇನ್ನೂ ಹೆಚ್ಚಿಗೆ ನಡೆಯಬೇಕಾಗಿದೆ.

ಕನಕಪುರದ ಸುತ್ತಮುತ್ತ ದೊರೆತಿರುವ ವೀರಗಲ್ಲುಗಳು, ವೀರರ ಗುಡಿಗಳು ಸಂಖ್ಯೆ ವೈವಿಧ್ಯಗಳ ದೃಷ್ಟಿಯಿಂದ ಅಧ್ಯಯನಕ್ಕೆ ಯೋಗ್ಯವಾದವು. ಪ್ರದೇಶದ ಇತಿಹಾಸದಲ್ಲಿ ಸಣ್ಣಪುಟ್ಟ ಸಂಘರ್ಷಗಳ, ಸಾಮಾಜಿಕ ಸಂಚಲನಗಳ ಕಥೆಗಳನ್ನು ಇವು ಹೇಳುತ್ತವೆ. ಕುಶಲಕರ್ಮಿಗಳಾದ ಪಾಂಚಾಳರ, ಕಲ್ಲುಕುಟಿಗರ, ಮಡಿವಾಳರ, ನಾಯಿಂದರ ಸಂಬಂಧವಾದ ಕಟ್ಟು ಕಟ್ಟಳೆಗಳು, ಸಂತೆಯ ಏರ್ಪಾಡು, ಕೆರೆಯ ತೂಬಿನ ನಿರ್ಮಾಣ ಇವು ಸಣ್ಣ ಸಂಗತಿಗಳಾದರೂ ಕುತೂಹಲಕರವಾದವು. ಹಾಗೆಯೇ ಒಂದು ಬರಗಾಲದಲ್ಲಿ ಜನರ ನಡವಳಿ ಹೇಗಿತ್ತು ಎನ್ನುವುದು ಕೂಡ.

ಗಂಗವಾಡಿ, ಚಿಕ್ಕಗಂಗವಾಡಿ, ಮುಡಿಗೊಂಡ ಚೋಳಮಂಡಲ, ಹೊಯ್ಸಳ, ವಿಜಯನಗರ ಈ ಅರಸುಮನೆತನಗಳ ಕೈಯಲ್ಲಿ ಕ್ರಮಾಗತವಾಗಿ ಸಾಗುತ್ತ ಬಂದ ಕನಕಪುರದ ಇತಿಹಾಸ 16ನೆಯ ಶತಮಾನದ ಉತ್ತರಾರ್ಧದಿಂದ ವಿಜಯನಗರದ ಅರಸರ ಆಶ್ರಿತರಾದ ಚನ್ನಪಟ್ಟಣದ ಸೀಮೆಯ ಪಾಳೆಗಾರರ ಕೈಯಲ್ಲಿ ಸ್ವಲ್ಪ ಸ್ವಲ್ಪವಾಗಿ ಮುನ್ನಡೆಗೆ ಸಂದಿತು, ಮುನ್ನೆಲೆಗೆ ಬಂದಿತು ಎಂದು ತೋರುತ್ತದೆ. ಕನಕಪುರದ ಕೋಟೆ ಮತ್ತು ಮುಖ್ಯವಾದ ರಂಗನಾಥಸ್ವಾಮಿ ದೇವಾಲಯ ಈ ಪಾಳೆಯಗಾರರ ಆಡಳಿತದ ಕಾಲದಲ್ಲಿ ನಿರ್ಮಾಣಗೊಂಡವು ಎನ್ನುವುದಕ್ಕೆ ಖಚಿತವಾದ ಸಾಕ್ಷ್ಯಗಳ ಕೊರತೆಯಿದ್ದರೂ ಅದು ಸಾಮಾನ್ಯವಾಗಿ ಅಂಗೀಕೃತವಾಗಿರುವ ಐತಿಹಾಸಿಕ ವಿದ್ಯಮಾನ. ಒಟ್ಟಾಗಿ ಈ ಪಾಳೆಯಗಾರರ ಕಾಲದಲ್ಲಿ ಸ್ಥಳದ ಗತಿ ಸ್ಥಿತಿಗಳು ಏನು ಎನ್ನುವುದನ್ನು ಇನ್ನೂ ವಿಶದವಾಗಿ ತಿಳಿಯುವುದು ಸಾಧ್ಯವಾಗಿಲ್ಲ. ಇಲ್ಲಿಂದ ಮುಂದೆ ಮೈಸೂರು ಒಡೆಯರ ಅಧೀನಕ್ಕೆ ಈ ಪ್ರದೇಶ ಬಂದ ಮೇಲೆ ದೇವಾಲಯಗಳ, ಮಠ ಮಾನ್ಯಗಳ ನಿರ್ಮಾಣ ಪುನರುಜ್ಜೀವನಗಳು ಅಬಾಧಿತವಾಗಿ ನಡೆದಂತೆ ತೋರುವುದು. ದತ್ತಿಗಳ ವ್ಯವಸ್ಥೆಗಳಿಗೂ ಅವಕಾಶವಾಗಿ ಇಲ್ಲಿಯ ಬ್ರಾಹ್ಮಣ್ಯ ಪೋಷಣೆಗೊಂಡಿರಬೇಕು. ಯಾವ ಕಾರಣಕ್ಕೋ ಏನೋ ತಾಲ್ಲೂಕು ಪರಿಸರದ ಅನೇಕ ಪ್ರಾಚೀನ ದೇವಾಲಯಗಳು ಬಹಳ ಹಿಂದೆಯೇ ಭಗ್ನಗೊಂಡವು, ಜೀರ್ಣಾವಸ್ಥೆಗೆ ಸಂದುವು ಎನ್ನುವುದು ಹರಿಹರ, ಅರಳಾಳು ಮೊದಲಾದೆಡೆಯ ಅಳಿದುಳಿದ ಅವಶೇಷಗಳು ಅಲ್ಲಿ ಇಲ್ಲಿ ಚದುರಿರುವ ರೀತಿಯಿಂದ ಗಮನಕ್ಕೆ ಬರುತ್ತದೆ. ಜೈನಧರ್ಮಕ್ಕೆ, ಬಸದಿಗಳಿಗೆ ಚೇತರಿಕೆಯಾಗದ ಮಟ್ಟಿಗೆ ಪೆಟ್ಟುಬಿದ್ದ ಹಾಗೆ ತೋರುತ್ತದೆ.

ಚನ್ನಪಟ್ಟಣ ಸೀಮೆಗೆ ವಳಿತವಾದ ತುಂಗಣಿನಾಡ ಸ್ಥಳದ ಕಾಣಿಕಾರನಹಳ್ಳಿಯ ಪ್ರಭುಗಳು ಪ್ರಭಾವಶಾಲಿಗಳಾಗಿ ಕಂಡರೂ ಅವರ ಚಟುವಟಿಕೆಗಳು ಸ್ಥಳದಲ್ಲಿ ಏನು, ಎಷ್ಟು ಎಂಬುದನ್ನು ತಿಳಿಯಲು ತಕ್ಕ ಸಾಕ್ಷ್ಯಗಳೇ ಸಿಕ್ಕುತ್ತಿಲ್ಲ. ಅವರು ಧಾರ್ಮಿಕವಾಗಿ, ಸಾಮಾಜಿಕವಾಗಿ ಹೆಚ್ಚು ಕ್ರಿಯಾಶೀಲರಾಗಿ, ಮೈಸೂರು ಒಡೆಯರಿಗೆ ನಿಷ್ಠರಾಗಿ, ಅವರ ವಿಶ್ವಾಸಿಗಳಾಗಿ ತಮ್ಮ ಕರ್ತವ್ಯಗಳನ್ನು ನಿರ್ವಹಿಸಿದ್ದು ಶಾಸನಸಾಕ್ಷ್ಯಗಳಿಂದ ಸ್ಪಷ್ಟವಾಗಿ ತಿಳಿದ ಸಂಗತಿಯಾಗಿದೆ. ಅವರು ಕೈಗೂಡಿಸಿದ 'ಕಾರ್ಯಗಳು ಚನ್ನರಾಯಪಟ್ಟಣ, ಬೆಟ್ಟದಪುರ ಶಾಸನಗಳ ಮೂಲಕ ವಿದಿತಗೊಂಡಿವೆ. ತಮ್ಮನ್ನು ಕಾಣಿಕಾರನಹಳ್ಳಿಯ, ಎಂದರೆ ಕಾನಕಾನಹಳ್ಳಿಯ ಪ್ರಭುಗಳು ಎಂದು ಕರೆದುಕೊಳ್ಳುವಲ್ಲಿ ಅವರಿಗೆ ಹೆಮ್ಮೆಯಿದೆ. ಸಿಗಲನಾಡು ಪಾಳೆಯಗಾರರ ಕರ್ಮಭೂಮಿ ಕನಕಪುರ ತಾಲ್ಲೂಕಿನ ಅರಳಾಳು ಮತ್ತು ಕಾಣಿಕಾರನಹಳ್ಳಿಯ ಪ್ರಭುಗಳ ಕರ್ಮಭೂಮಿ ಕನಕಪುರ. ಈ ಸ್ಥಳಗಳಲ್ಲಿ ತಾವು ಆ ಪಾಳೆಯಗಾರರ ವಂಶಸ್ಥರು ಎಂದು ಹೇಳಿಕೊಳ್ಳುವ ಯಾರೂ ಇಲ್ಲವೇ, ಅವರಲ್ಲಿ ತಾಮ್ರ ಶಾಸನಗಳೋ ಪ್ರಾಚ್ಯವಸ್ತುಗಳೋ ಏನೂ ಇಲ್ಲವೇ, ಇದು ವಿಚಾರ ಮಾಡಬೇಕಾದ ಸಂಗತಿ.[3]

ಪಾಕೃತಿಕ ಅಂಶಗಳು ಮಾನವನ ಜೀವನದ ರೂಪರೇಷೆಗಳನ್ನು ರೂಪಿಸುತ್ತವೆ. ಅವನ ನಡೆ, ನುಡಿ, ಆಹಾರ, ಆಚಾರ, ವಿಚಾರ, ಕಸುಬು, ಉಡುಗೆ, ತೊಡುಗೆಗಳು ಮುಂತಾದ ಸಾಂಸ್ಕೃತಿಕ ಅಂಶಗಳು ಸ್ಥಳೀಯ ಪರಿಸರದಿಂದ ಪ್ರೇರಿತವಾಗಿರುತ್ತವೆ. ಕಾಲಗಣನೆ ಶಾಸ್ತ್ರ ಹಾಗೂ ಭೂಗೋಳ ಶಾಸ್ತ್ರಗಳು ಇತಿಹಾಸಕ್ಕೆ ಎರಡು ಕಣ್ಣುಗಳಿದ್ದಂತೆ. ಯಾವುದೇ ಒಂದು ಸ್ಥಳ ಅಥವಾ ಪ್ರಾಂತ್ಯ ಅಥವಾ ದೇಶದ ಇತಿಹಾಸವನ್ನು ಅಧ್ಯಯನ ಮಾಡುವುದಕ್ಕೆ ಮೊದಲು ಆ ಪ್ರದೇಶದ ಭೌಗೋಳಿಕ ಲಕ್ಷಣಗಳನ್ನು ಅಧ್ಯಯನ ಮಾಡಿ ಮುನ್ನಡಿಯಿಡುವುದು ಸೂಕ್ತ. ಭೌಗೋಳಿಕ ಅಂಶಗಳ ಪರಿಚಯವಿಲ್ಲದೆ ಇತಿಹಾಸದ ಅಧ್ಯಯನ ಅಪೂರ್ಣ.

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಎಂಟು ತಾಲ್ಲೂಕುಗಳಲ್ಲಿ ಒಂದಾದ ಕನಕಪುರ ಭಾರತದಲ್ಲಿಯೇ ಅತಿ ದೊಡ್ಡ ಲೋಕಸಭಾ ಕ್ಷೇತ್ರವೆಂದು ಹೆಗ್ಗಳಿಕೆಗೆ ಪಾತ್ರವಾಗಿದೆ. ಕರ್ನಾಟಕದಲ್ಲಿ ಎರಡನೆಯ ಅತಿದೊಡ್ಡ ತಾಲ್ಲೂಕು ಇದಾಗಿದೆ. ಬೆಂಗಳೂರಿನಿಂದ ಆಗ್ನೇಯಕ್ಕೆ 56ಕಿಲೋ ಮೀಟರ್ ದೂರದಲ್ಲಿರುವ ಕನಕಪುರ ಅರ್ಕಾವತಿ ನದಿಯ ಬಲದಂಡೆಯ ಮೇಲಿದೆ. ಸಮುದ್ರ ಮಟ್ಟದಿಂದ 800 ರಿಂದ 900 ಮೀಟರ್ ಎತ್ತರದಲ್ಲಿರುವ ಈ ಪ್ರದೇಶ ಬೆಟ್ಟಗುಡ್ಡಗಳಿಂದ ಕೂಡಿದ್ದು, ನಿಸರ್ಗ ದತ್ತವಾದ ಚೆಲುವನ್ನು ಹೊಂದಿದೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿಯೇ ಅತಿ ಹೆಚ್ಚು ಅರಣ್ಯ ಪ್ರದೇಶವನ್ನು ಹೊಂದಿರುವ ಕನಕಪುರ ತಾಲ್ಲೂಕಿನ ವಿಸ್ತೀರ್ಣ 1590 ಚ.ಕಿ.ಮೀಗಳಾಗಿದ್ದು, ಭೂಪಟದಲ್ಲಿ ಉತ್ತರ ಅಕ್ಷಾಂಶ 12.33 ಅಂಶ ಹಾಗೂ ಪೂರ್ವರೇಖಾಂಶ 77.29 ಅಂಶಗಳಲ್ಲಿ ಗುರುತಿಸಬಹುದು. ಸರಾಸರಿ ಮೇ ಇಂದ ನವೆಂಬರ್‌ವರೆಗೆ 805.2 ಮಿ.ಮೀ ಮಳೆಯಾಗುತ್ತದೆ. ಈ

ತಾಲ್ಲೂಕಿನ ಭೂಪಟವು ಹಿಪ್ಪನೇರಳೆಯ ಎಲೆ ಆಕಾರದಲ್ಲಿದ್ದು 740 ಕಂದಾಯ ಗ್ರಾಮಗಳು ಹಾಗೂ 321 ಉಪ-ಗ್ರಾಮಗಳನ್ನು ಹೊಂದಿದೆ. 45.262 ಹೆಕ್ಟೇರ್ ಅರಣ್ಯ ಪ್ರದೇಶವನ್ನು ಹೊಂದಿರುವ ಈ ತಾಲ್ಲೂಕಿನ ಭೂ ಪ್ರದೇಶದ ಶೇಕಡ 30ರಷ್ಟು ಪ್ರದೇಶದಲ್ಲಿ ಅರಣ್ಯವನ್ನು ಕಾಣಬಹುದು. ಬಿಳಿಕಲ್ಲು ಬೆಟ್ಟ, ತೇರುಬೀದಿ, ಸಂಗಮ, ಹುಣಸನ ಹಳ್ಳಿ, ಚೀಲಂದವಾಡಿ ಮತ್ತಿತರ ಪ್ರದೇಶದಲ್ಲಿ ದಟ್ಟವಾದ ಅರಣ್ಯವನ್ನು ಕಾಣಬಹುದು. ಬಹುತೇಕ ಅರಣ್ಯ ಪ್ರದೇಶ ಇಂದು ಒತ್ತುವರಿಗೆ ಒಳಪಟ್ಟಿದ್ದರೂ ಕೂಡ ಶ್ರೀಗಂಧ, ತೇಗ, ಬೀಟೆ ಮತ್ತಿತರ ಅಮೂಲ್ಯವಾದ ಬೆಲೆಬಾಳುವ ಮರಗಳನ್ನು ಕಾಣಬಹುದು.

ಸರಾಸರಿ ಕನಿಷ್ಠ 21.2° ಸೆಲ್ಸಿಯಸ್ ಹಾಗೂ ಗರಿಷ್ಠ 38.9° ಸೆಲ್ಸಿಯಸ್ ಉಷ್ಣಾಂಶವನ್ನು ಹೊಂದಿರುವ ಈ ತಾಲ್ಲೂಕು ಪೂರ್ವದಲ್ಲಿ ತಮಿಳುನಾಡಿನ ಗಡಿಯಿಂದ ಪಶ್ಚಿಮದಲ್ಲಿ ಚನ್ನಪಟ್ಟಣ ಮತ್ತು ಮಳವಳ್ಳಿಯವರೆಗೆ, ಉತ್ತರದಲ್ಲಿ ರಾಮನಗರ, ಬೆಂಗಳೂರು ಹಾಗೂ ಆನೇಕಲ್ಲಿನಿಂದ ದಕ್ಷಿಣದಲ್ಲಿ ಕಾವೇರಿ ನದಿ ಹಾಗೂ ಕೊಳ್ಳೇಗಾಲ ತಾಲ್ಲೂಕಿನವರೆಗೆ ವಿಸ್ತರಿದೆ. ನಂದಿ ಬೆಟ್ಟದಲ್ಲಿ ಹುಟ್ಟಿ ತಾಲ್ಲೂಕಿನ ಹೃದಯ ಭಾಗದಲ್ಲಿ ಸುಮಾರು 45ಕಿ.ಮೀ ಹರಿದು ಹೋಗುವ ಅರ್ಕಾವತಿ ನದಿ, ಪ್ರಾಚೀನ ಕಾಲದಿಂದಲೂ ತಾಲ್ಲೂಕಿನ ಕೃಷಿ ಚಟುವಟಿಕೆಗಳ ಮೇಲೆ ನಿಚ್ಚಳ ಪ್ರಭಾವ ಬೀರಿದೆ. ಇತರೆ ಉಪನದಿಗಳಾದ ಸುವರ್ಣಮುಖಿ, ವೃಷಾಭಾವತಿ, ಸನಂದ, ಚಿಕ್ಕಹೊಳೆ, ಬಸವನಹೊಳೆ, ಕೊಟ್ಲೆಹೊಳೆ, ಶೀತನ-ಕೊಟ್ಟ ಮೊದಲಾದ ನದಿಗಳು ಈ ಸೀಮೆಯ ಜನಜೀವನಕ್ಕೆ ಉಪಕಾರಿಯಾಗಿವೆ. ಹಳ್ಳ-ದಿಣ್ಣೆ, ಬೆಟ್ಟ-ಗುಡ್ಡಗಳಿಂದ ಕೂಡಿರುವ ಈ ಸೀಮೆಯ ಕಡಿದಾದ ಲಿಂಗಾಕಾರದ ಕಬ್ಬಾಳು ಬೆಟ್ಟ 1000 ಮೀಟರ್ ಎತ್ತರವಾಗಿದೆ. ಇವುಗಳ ಜೊತೆಗೆ ಭೀಮನಕಂಡಿ, ಕಡಿಕಲ್ ಹಾಗೂ ಮುದುವಾಡಿ ಬೆಟ್ಟಗಳು ಪರಮುಖವಾಗಿದೆ. ಈ ತಾಲ್ಲೂಕಿನ ಬಹುಪಾಲು ಪ್ರದೇಶ ಕಣಶಿಲೆಗಳಿಂದ ಕೂಡಿದೆ. ಈ ಕಣಶಿಲೆಗಳು ಅಗ್ನಿಶಿಲೆಯ ಪ್ರಮುಖ ಪ್ರಭೇದಗಳಾಗಿವೆ. ಭೂಪದರರೂಪುಗೊಂಡಾಗ ಸುಮಾರು 500 ಕೋಟಿ ವರ್ಷಗಳ ಹಿಂದೆ ಶಿಲಾದ್ರವ ಅಥವಾ ಲಾವಾರಸ ಭೂಮಿಯಕೇಂದ್ರಭಾಗದಿಂದ ಹೊರಚಿಮ್ಮಿ ಆರಿ ಘನೀಭವಿಸಿ ಉಂಟಾದ ಶಿಲೆಯೇ ಕಣಶಿಲೆ. ಈ ಪ್ರದೇಶದಲ್ಲಿ ಕಂಡುಬರುವ ಗ್ರಾನೈಟ್‌ಶಿಲೆ ಈ ಮಾದರಿಯ ಶಿಲೆಗೆ ಅತ್ಯುತ್ತಮ ಉದಾಹರಣೆ. ಈ ಭೂಪ್ರದೇಶದ ಶೇಕಡಾ 75ಭಾಗ ಗ್ರಾನೈಟ್ ಜಿನಸೆಸ್‌ನಿಂದ ಕೂಡಿದ್ದು 30 ರಿಂದ 130 ಮೀಟರ್ ದಪ್ಪದ ಪದರವನ್ನು ಹೊಂದಿದೆ. ಇಲ್ಲಿ ದೊರೆಯುವ ಗ್ರಾನೈಟ್ ಶಿಲೆಯನ್ನು ನವಿರಾಗಿ ಕತ್ತರಿಸಿ ಅತ್ಯಂತ ಕಲಾತ್ಮಕವಾಗಿ ಮೆರಗು ನೀಡಿದರೆ ವಿದೇಶಗಳಲ್ಲಿ ಅಧಿಕ ಬೇಡಿಕೆಗೆ ಕಾರಣವಾಗುತ್ತದೆ. ಕನಕಪುರ ಪ್ರದೇಶದಲ್ಲಿ ಗ್ರಾನೈಟ್ ಉದ್ಯಮ ಇತ್ತೀಚಿನ ವರ್ಷಗಳಲ್ಲಿ ವಿದೇಶಿ ವಿನಿಮಯಕ್ಕೆ ಸಹಕಾರಿಯಾಗಿದೆ. ಆದರೆ ನಿಸರ್ಗದ ಒಡಲನ್ನು ಸೀಳಿ ನಡೆಸುತ್ತಿರುವ ಈ ಗಣಿಗಾರಿಕೆ ಮಿತಿಮೀರಿದರೆ ನಿಸರ್ಗ ರೊಚ್ಚಿಗೆದ್ದು ಜೀವಕೋಟಿಯ ಮೇಲೆ ಹರಿಹಾಯುವ ಸಾಧ್ಯತೆಗಳನ್ನು ತಳ್ಳಿಹಾಕುವಂತಿಲ್ಲ.

ಬೆಟ್ಟಸಾಲುಗಳು

ನೆಲಮಂಗಲದ ಪಶ್ಚಿಮದ ಕಡೆಯಿಂದ ಬರುವ ಬೆಟ್ಟಸಾಲುಗಳು ಮಾಗಡಿ ರಾಮನಗರ ತಾಲ್ಲೂಕುಗಳನ್ನು ಹಾಯ್ದು ಕನಕಪುರ ತಾಲ್ಲೂಕನ್ನು ಉತ್ತರಭಾಗದಿಂದ ಪ್ರವೇಶಿಸಿ ಪೂರ್ವ ಪಶ್ಚಿಮ ಮತ್ತು ದಕ್ಷಿಣ ದಿಕ್ಕುಗಳ ಅಂಚಿನಲ್ಲಿ ಕವಚದಂತೆ ಒತ್ತಾಗಿ ಹಬ್ಬಿಕೊಂಡಿವೆ. ಇವುಗಳಲ್ಲಿ ಮುಖ್ಯವಾದವು ಎಂದರೆ: ಪಶ್ಚಿಮದಲ್ಲಿ ಬಾಣಂತಿ ಮಾರಮ್ಮನ ಬೆಟ್ಟ (ಸಮುದ್ರಮಟ್ಟದಿಂದ 1043 ಮೀ. ಎತ್ತರ); ಭೀಮನ ಕಿಂಡಿ, ಕಡಕಲ್ ಮತ್ತು ಮುದವಾಡಿ ನರಸಿಂಹದೇವರ ಬೆಟ್ಟಗಳು; ಅಗ್ನೇಯದಲ್ಲಿ ದೇವರ ಬೆಟ್ಟ, ಬರಿಕಲ್ಲುಬೆಟ್ಟ ಮತ್ತು ಕೊಪ್ಪಬೆಟ್ಟ (670 ಮೀ ಎತ್ತರ) ಎಂಬ ಬೆಟ್ಟಸಲುಗಳು; ನೈರುತ್ಯದಲ್ಲಿ ಪತ್ರಧಾರಿದೇವಬೆಟ್ಟ; ಪೂರ್ವದಲ್ಲಿ ಬಿಳಿಕಲ್ಲುಬೆಟ್ಟ (ಸುಮರು 1000 ಮೀ. ಎತ್ತರ ಗುಲಕಲ್ ಬೆಟ್ಟಗಳು; ಉತ್ತರದಲ್ಲಿ ಗಂಗಾಧರಬೆಟ್ಟ; ದಕ್ಷಿಣದಲ್ಲಿ ಪ್ರಸಿದ್ಧವಾದ ಕಬ್ಬಾಳುಬೆಟ್ಟ (1069 ಮೀ ಎತ್ತರ). ತಾಲ್ಲೂಕಿನ ಬೆಟ್ಟಗಳಲ್ಲೆಲ್ಲ ತುಂಬ ಕಡಿದಾದುದು ಎಂದರೆ ಕಬ್ಬಾಳು ಬೆಟ್ಟವೇ.

ತಾಲ್ಲೂಕಿನ ಈ ಬೆಟ್ಟಗಳು ಪ್ರವಾಸಿಗರನ್ನು ಅಕರ್ಷಿಸುವ. ಚಾರಣಿಗರನ್ನು ಉತ್ತೇಜಿಸುವ ರಮ್ಯಸ್ಥಾನಗಳಾಗಿವೆ. ಬಿಳಿಕಲ್ ಬೆಟ್ಟವೂ ಸಾತನೂರು ಬಳಿಯ ಬಸವನ ಬೆಟ್ಟವೂ ಗಿರಿಧಾಮಗಳಂತೆ ಅಕರ್ಷಕಗಳಾಗಿವೆ; ಬಾಣಂತಿಮಾರಮ್ಮನ ಬೆಟ್ಟ, ಶಿವಾಲ್ದಪ್ಪನ (ಶಿವಾಲಯದಪ್ಪನ?) ಬೆಟ್ಟ, ಗುಂಡಪ್ಪನ ಬೆಟ್ಟ, ನರಸಿಂಹ ಸ್ವಾಮಿ ಬೆಟ್ಟ, ರಾಮದೇವರ ಬೆಟ್ಟ ಮತ್ತು ಮುದವಾಡಿ ಬೆಟ್ಟ ಚಾರಣದ ಸಾಹಸಿಗರನ್ನು ಸಾಹಸಕ್ಕೆ ಪ್ರೇರಿಸತಕ್ಕವಾಗಿದೆ.

ಕನಕಪುರ ತಾಲ್ಲೂಕು ಹೆಚ್ಚಾಗಿ ಸಮತಟ್ಟುನೆಲದಿಂದ ಕೂಡಿದೆ. ಆದರೂ ಒಟ್ಟಿನಲ್ಲಿ ನೋಡಿದಾಗ ಉತ್ತರದಿಕ್ಕಿನಿಂದ ದಕ್ಷಿಣದ ಕಾವೇರಿನದಿಯ ಕಣಿವೆಯ ಕಡಗೆ ಸಾಗಿದಂತೆಲ್ಲ ನೆಲಮಟ್ಟ ಇಳಿಯುತ್ತ ಹೋಗುತ್ತದೆ. ದಕ್ಷಿಣದ ತ್ರಿಭುಜಾಕೃತಿಯ ತಗ್ಗುಪ್ರದೇಶದಲ್ಲಿ ಎರೆಮಣ್ಣು, ಉಳಿದ ಕಡೆಗಳಲ್ಲಿ ಅಗ್ನಿಶಿಲೆಯಿಂದಾದ ಹಗುರರಚನೆಯ ಕೆಂಪುಮಣ್ಣು ವಿಶೇಷವಾಗಿ ಕಾಣುತ್ತದೆ.

ನದಿಗಳು

ಕನಕಪುರ ತಾಲ್ಲೂಕಿನ ಮುಖ್ಯವಾದ ನದಿ ಅರ್ಕಾವತಿ, ನಂದಿಬೆಟ್ಟದಲ್ಲಿ ಹುಟ್ಟುವ ಈ ನದಿ ವಾಯುವ್ಯದಿಂದ ಈ ತಾಲ್ಲೂಕನ್ನು ಪ್ರವೇಶಿಸಿ, ತಾಲ್ಲೂಕಿನ ಮಧ್ಯಭಾಗದಲ್ಲಿ ಉತ್ತರದಿಂದ ದಕ್ಷಿಣದ ಕಡೆಗೆ ಮುಖಮಾಡಿ ಹರಿದು ಸಂಗಮದ ಬಳಿ ಕಾವೇರಿನದಿಯ್ನು ಸೇರಿಕೊಳ್ಳುತ್ತದೆ. ನಂದಿಯಲ್ಲಿ ಹುಟ್ಟಿದ ಮೇಲೆ ದೊಡ್ಡಬಳ್ಳಾಪುರ, ನೆಲಮಂಗಲ, ಮಾಗಡಿ, ರಾಮನಗರ ಹಾಗೂ ಕನಕಪುರ ತಾಲ್ಲೂಕುಗಳಲ್ಲಿ ಒಟ್ಟು 190 ಕಿ.ಮೀ ಉದ್ದಕ್ಕೆ ಹರಿಯುತ್ತದೆ; ಕನಕಪುರ ತಾಲ್ಲೂಕು ಮಾತ್ರವನ್ನೇ ಗಣಿಸಿದರೆ, 45ಕಿ.ಮೀ. ಅದರ ಸಂಚಾರ.

ವೃಷಭಾವತಿ ಅರ್ಕಾವತಿಯ ಪ್ರಮುಖ ಉಪನದಿಗಳಲ್ಲಿ ಒಂದು. ಬೆಂಗಳೂರಿನ ಗವಿಗಂಗಾಧರೇಶ್ವರ ದೇವಾಲಯದಲ್ಲಿ ಹುಟ್ಟಿ, ಕನಕಪುರದ ಎಲ್ಲೆಯಲ್ಲಿಯೇ ಮುದವಾಡಿಯ ಸಮೀಪದಲ್ಲಿ ಅರ್ಕಾವತಿಯ್ನು ಅದು ಕೂಡುತ್ತದೆ. ಸುವರ್ಣಮುಖಿ ನದಿ ಗಾಣಾಳುದೊಡ್ಡಿ ಸಮೀಪದಲ್ಲಿ, ಈಶಾನ್ಯದಿಕಿನಿಂದ ಹರಿದುಬರುವ ಅಂತರಗಂಗೆ, ಬಸವ ಹೊಳೆ ಕೂಟ್ಲೆ ಹೊಳೆಗಳು ಕನಕಪುರದ ಸಮೀಪದಲ್ಲಿ, ಚಿಕ್ಕಹೊಳೆ ದೇಗುಲಮಠದ ಹತ್ತಿರದಲ್ಲಿ, ಸನಂದಹೊಳೆ ದಕ್ಷಿಣದಲ್ಲಿ ಕೋಡಿಹಳ್ಳಿ ಕಡೆಯಲ್ಲಿ, ಅಗ್ನೇಯ ಎಲ್ಲೆಯಾಗಿ ಹರಿದು ಬರುವ ದೊಡ್ಡಹೊಳೆ ಮಾಹಳ್ಳಿಯ ಬಳಿಯಲ್ಲಿ, ಚಿಕ್ಕ ಅರ್ಕಾವತಿ (ಸೀತನ ಕೊಟ್ಟ) ಸಂಗಮದ ಸಮೀಪದಲ್ಲಿ ಈ ಜೀವನದಿಯಾದ ಅರ್ಕಾವತೀ ನದಿಯನ್ನು ಕೂಡಿಕೊಳ್ಳುವ ಉಪನದಿಗಳಾಗಿವೆ. ನಾಂತರವಾಗಿ ಹರಿದು ಪಶ್ಚಿಮದಿಕ್ಕಿನಿಂದ ಅರ್ಕಾವತೀನದಿಗೆ ಸೇರುತ್ತದೆ. ಹೀಗೆ ಸಂಚಾರಪಥವನ್ನು ಪಡೆದಿರುವ ಅರ್ಕಾವತಿಯ ಪಶ್ಚಿಮದ ಕಡೆಗೆ ಹಬ್ಬಿರುವ ಕಾನಕಾನಹಳ್ಳಿ (ಕನಕಪುರ) ಒಂದು ನದೀಪಾತ್ರದ ಗ್ರಾಮವಾಗಿದ್ದು, ಜನಸಮುದಾಯವನ್ನು ಬೆಳಸಿತು, ಅದರ ಜೀವನವನ್ನು ಪೋಷಿಸಿತು; ಜೀವನ ಕಲೆ ಸಾಹಿತ್ಯ ಧರ್ಮ ಸಂಸ್ಕೃತಿಗಳಿಂದ ಸಂಪದ್ಯುಕ್ತವಾಗದಂತೆ ಜೀವಧಾತುವನ್ನೆರೆಯಿತು. ಆದರೆ ಈಗ ಇವುಗಳ ಹರಿವು, ತುಂಬು, ಘೋಷ ಹಾಗೂ ರಭಸಗಳು ನಾನಾ ಕಾರಣಗಳಿಗಾಗಿ ಕುಗ್ಗಿವೆ, ಕುಸಿದಿವೆ.

ಸಂಗಮದ ಸ್ಥಾನ ಕಾವೇರಿ – ಅರ್ಕಾವತಿಗಳಿಂದಾದುದು. ಇದೊಂದು ನಿಸರ್ಗಧಾಮ, ನೀರವಸೀಮೆ. ನದಿಗೆ ಮುಂದಿನ ಪಥವಾದ ತಮಿಳುನಾಡು ಸೇರುವ ಮೊದಲು ರಮ್ಯಾದ್ಭುತಸನ್ನಿವೇಶವನ್ನು ಸೃಷ್ಟಿಸಿರುವ ಮೇಕೆದಾಟುವಿನ ಶಿಲೋಚ್ಚಯಗಳ ನಡುವೆ ಜಲರಾಶಿ ತುಂಬಿ ಹರಿಯುವ ದೃಶ್ಯ ಕಣ್ಣುತುಂಬುತ್ತದೆ, ಮನಸ್ಸು ತಣ್ಣಸಗೊಳ್ಳುತ್ತದೆ.

ಜಲಸಂಪತ್ತು

ಬೆಂಗಳೂರು ಗ್ರಾಮಾಂತರಜಿಲ್ಲೆಯ ಇತರ ತಾಲ್ಲೂಕಿಗಳಿಗೆ ಹೋಲಿಸಿದರೆ ಕನಕಪುರ ತಾಲ್ಲೂಕಿನ ಜಲಸಂಪತ್ತು ಹೆಚ್ಚಿನ ಪ್ರಮಾಣದಲ್ಲಿದೆ. ಆದರೆ ಅದರ ಬಳಕೆ ಸರಿಯಾಗಿ ಆಗುತ್ತಿಲ್ಲ. ಅರ್ಕಾವತಿಯೂ ಅದರ ಉಪನದಿಗಳೂ ತಾಲ್ಲೂಕಿನ ಕೃಷಿಗೆ ಜೀವನಾಡಿಗಳು, ಜೀವವಾಹಿನಿಗಳು, ತಾಲ್ಲೂಕಿನಲ್ಲಿ 140 ದೊಡ್ಡಕೆರೆಗಳಿದ್ದು ಸು. 4000 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸಾಧ್ಯವಾಗಿದೆ. ಲಭ್ಯವಿರುವ 31 ಅಣೆಕಟ್ಟುಗಳಿಂದ 857 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಸಿಕ್ಕಿದೆ ಹಾಗೂ 6 ಏತ ನೀರಾವರಿಯೋಜನೆಗಳು ಜಾರಿಯಲ್ಲಿದ್ದು, 679 ಹೆಕ್ಟೇರ್ ಪ್ರದೇಶ ಆ ಸೌಲಭ್ಯವನ್ನು ಪಡೆದುಕೊಂಡಿದೆ. ತಾಲ್ಲೂಕಿನಲ್ಲಿ 3789 ಬಾವಿಗಳಿದ್ದು, ಅವನ್ನೂ ತಾಲ್ಲೂಕಿನ ಲಭ್ಯ ಅಂತರ್ಜಲಪ್ರಮಾಣ 17,603 ಹೆಕ್ಟೇರ್ ಮೀಟರ್‌ಗಳೆಂದು ಅಂದಾಜಿಸಲಾಗಿದ್ದು, ಬಳಕೆಯ ಪ್ರಮಾಣ ತೀರ ಸ್ವಲ್ಪವೇ ಆಗಿದೆ.

ನಿರ್ಮಾಣದ ವಿವಿಧ ಹಂತಗಳಲ್ಲಿರುವ ಹಲವಾರು ನೀರಾವರಿ ಯೋಜನೆಗಳು ತಾಲ್ಲೂಕಿನಲ್ಲಿವೆ. ಪ್ರಮುಖವಾಗಿ ಮರಳವಾಡಿ ಸಮೀಪದ ರಾಹುತನ ಹಳ್ಳ ನೀರಾವರಿಯೋಜನೆಯಿಂದ 3000 ಹೆಕ್ಟೇರ್ ನೀರಾವರಿ ಪ್ರದೇಶವಾಗುತ್ತದೆ. ದೊಡ್ಡ ಯೋಜನೆ 'ಅರ್ಕಾವತಿ ಜಲಾಶಯ ಹಾರೋಬೆಲೆಯ ಸಮೀಪದಲ್ಲಿ ನಿರ್ಮಾಣದ ಹಂತದಲ್ಲಿದೆ. ಇದು ಪೂರ್ಣವಾದರೆ ತಾಲ್ಲೂಕಿನ 8560 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ದೊರೆಯುತ್ತದೆ. ಜಲಾಶಯ ಎತ್ತರ 24.68 ಮೀ ಮತ್ತು ಉದ್ದ 716 ಮೀ. ಕಾಲುವೆ ಹಾಗೂ ಏತನೀರಾವರಿ ಮೂಲಕ ನೀರಾವರಿಸೌಲಭ್ಯ ಒದಗಿಸುವ ಈ ಜಲಾಶಯದ ಎಡದಂಡೆ ಕಾಲುವೆ 25 ಕಿ.ಮೀ. ಉದ್ದವಿದ್ದು, 3238 ಹೆಕ್ಟೇರ್ ಪ್ರದೇಶಕ್ಕೆ ನೀರುಣಿಸಿದರೆ, ಏತನೀರಾವರಿಗೆ 1457 ಹೆಕ್ಟೇರ್ ಪ್ರದೇಶ ಲಭ್ಯವಾಗುವುದು. ಅಲ್ಲದೆ ಹೆಚ್ಚುವರಿ ನೀರನ್ನು ಹೊನ್ನಗನ ಹಳ್ಳಿ ಮತ್ತು ಮರಿಗೌಡನ ದೊಡ್ಡಿಗೂ ಬಳಸಬಹುದಾಗಿದೆ.

ಅರಣ್ಯಗಳು

ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿಯೇ ಅತಿ. ಹೆಚ್ಚಿನ ಅರಣ್ಯಪ್ರದೇಶವನ್ನು ಹೊಂದಿರುವ ತಾಲ್ಲೂಕು ಎಂದರೆ ಕನಕಪುರದೇ, ತಾಲ್ಲೂಕಿನಲ್ಲಿ ಲಭ್ಯವಿರುವ ಅರಣ್ಯಪ್ರದೇಶ 45,262 ಹೆಕ್ಟೇರ್‌ಗಳು. ತಾಲ್ಲೂಕಿನ ಒಟ್ಟು ವಿಸ್ತೀರ್ಣದಲ್ಲಿ ಇದು ಶೇಕಡ 30 ಕ್ಕಿಂತ ಹೆಚ್ಚಾಗಿದೆ. ಈ ಪ್ರದೇಶದಲ್ಲಿ ಅರಣ್ಯಗಳು ಬೆಟ್ಟಗಳ ನಡುವಣ ಕಣಿವೆಗಳನ್ನು ಆಕ್ರಮಿಸಿದ ಗಿಡಮರಗಳಿಂದಲೂ ಕುರುಚಲು ಪೊದೆಗಳಿಂದಲೂ ಆಗಿವೆ. ತಾಲ್ಲೂಕಿನ ಬಿಳಿಕಲ್ಲುಬೆಟ್ಟ, ಸಂಗಮ, ತೇರುಬೀದಿ, ಹುಣಸನಹಳ್ಳಿ, ಚಿಲಂದವಾಡಿ, ಕಬ್ಬಾಳು ಮೊದಲಾದ ಪ್ರದೇಶಗಳಲ್ಲಿ ದಟ್ಟಕಾಡುಗಳನ್ನು ಕಾಣಬಹುದಾಗಿದೆ. ಮೂಗೂರು, ತಲ್ಲೂರು, ಬಾಣಂತಮಾರಿ, ಬಿಳಿಕೆರೆ, ರಾಗಿಹಳ್ಳಿ ಇವನ್ನೂ ಅರಣ್ಯಪ್ರದೇಶಗಳಾಗಿ ಗುರುತಿಸಬಹುದಾಗಿದೆ.

ಈ ಅರಣ್ಯಪ್ರದೇಶಗಳಲ್ಲಿ ಬೆಲೆಬಾಳುವ ತೇಗ ಹೊನ್ನೆ ಬೀಟೆ ಜಾಲರಿ ದಿಂಡಿಗ ಮುಂತಾದ ವಿರಳಜಾತಿಯ ಮರಗಳು ಹೆಚ್ಚಿನ ಸಂಖ್ಯೆಯಲ್ಲಿದೆ. ಅಲ್ಲದೆ ಮಾವು ನೇರಳೆ ಬೇವು ಹುಣಿಸೆ ಬಿದಿರು ಮೊದಲಾದವು ಕೂಡ. ಕೆಲವು ಪ್ರದೇಶಗಳಲ್ಲಿ ಶ್ರೀಗಂಧವೂ ಉಂಟು. ಆದರೆ ಬಹುಪಾಲು ಭಾಗ ಕುರುಚಲು ಗಿಡಗಳು, ಪೊದೆಗಳು ತುಂಬಿರುವಂಥವೇ ಆಗಿವೆ.

ಈಚಿನ ದಿನಗಳಲ್ಲಿ ಬೆಟ್ಟದ ಇಳಿಜಾರುಗಳಲ್ಲಿ, ಸಾಮಾಜಿಕ ಅರಣ್ಯ ಪ್ರದೇಶಗಳಲ್ಲಿ ನೀಲಗಿರಿ ನೆಡುತೋಪಗಳನ್ನು ಬೆಳಸಲಾಗುತ್ತಿದೆ. ಅಲ್ಲದೆ ಬಿದಿರು ಕೂಡ ಸಾಕಷ್ಟು ಪ್ರದೇಶಗಳಲ್ಲಿ ಬೆಳೆದಿದೆ. ಗಿರಿಜನರು ಅರಣ್ಯ ಉತ್ಪನ್ನಗಳ ಆಧಾರದಿಂದಲೇ ಬದುಕಬೇಕಾಗಿದೆ. ಇಂತಹ ಉತ್ಪನ್ನಗಳಲ್ಲಿ ಮುಖ್ಯವಾದವು ಹುಣಿಸೆ ಹೊಂಗೆ ಅಂಟುವಾಳ ರಾಳ ಗೋಂದು ಅಳಲೇಕಾಯಿ ಸೀಗೆಕಾಯಿ ಮಾವು

ನೇರಳೆ ಸೀಬೆ ಸೀತಾಫಲ ನೆಲ್ಲಿಕಾಯಿ. ಅಲ್ಲದೆ ಜೇನುತುಪ್ಪಮೇಣ ಇವೂ ಸೇರುತ್ತವೆ. ಅರಣ್ಯಗಳ ಅಭಿವೃದ್ಧಿಗೆ ಅಕ್ರಮಸಾಗುವಳಿ ಆತಂಕಕಾರಿಯಾಗಿದೆ.

ಇಲ್ಲಿ ಹಾದುಹೋಗಿರುವ 209ನೇ ರಾಷ್ಟ್ರೀಯ ಹೆದ್ದಾರಿ ಈ ಪ್ರದೇಶದ ಪ್ರಗತಿಗೆ ನೆರವಾದೀತು. ಕ್ರಿ.ಶ. 1949ರಲ್ಲಿ ಆಡಳಿತಾತ್ಮಕವಾಗಿ ಕನಕಪುರವೆಂದು ಕರೆಯಲ್ಪಟ್ಟಿರುವ ಇದು ಕಾಣಿಕಾರನಹಳ್ಳಿ ಕನಕಪುರ ಎಂಬ ಹೆಸರಿನಿಂದಲೇ ಕರೆಯಲ್ಪಟ್ಟಿದೆ. ಕನಕಪುರ ಎಂಬ ಪದದ ಮೂಲವನ್ನು ಈ ರೀತಿ ಗುರುತಿಸಬಹುದಾಗಿದೆ.

1. ಹೊಯ್ಸಳರ ಕಾಲದ ಕ್ರಿ.ಶ. 1317 ಹಾಗೂ ಕ್ರಿ.ಶ. 1319ರ ನಾಯಕನಹಳ್ಳಿ ಹಾಗೂ ಅಚ್ಚಲು ಶಾಸನದಲ್ಲಿ ಕಾಣಿಕಾರನಹಳ್ಳಿ ಉಲ್ಲೇಖವಾಗಿದೆ. ಕ್ರಿ.ಶ 1319ರ ನಾಯಕನಹಳ್ಳಿ ಶಾಸನದ ಪ್ರಕಾರ ಹೊಯ್ಸಳರ ಕಾಲದ ಸೀಮೆಯ ಕೇಂದ್ರವಾಗಿದ್ದ ಕಾಣಿಕಾರನಹಳ್ಳಿ ಕ್ರಮೇಣವಾಗಿ ಕನಕಪುರವಾಗಿದೆ.

2. ಸಂಶೋಧಕರಾದ ಎಂ.ಜಿ ನಾಗರಾಜರವರು, ಈ ಸ್ಥಳದ ಬೆಸ್ತ ಜನಾಂಗ ತಮ್ಮ ವೃತ್ತಿಯಾದ ಮೀನು ಹಿಡಿಯುವ ಕಸುಬಿನ ನಿರ್ವಹಣೆಗಾಗಿ, ಸಾಮಾಜ್ಯವಾಗಿ ನದಿ ದಂಡೆಯ ಪ್ರದೇಶದಲ್ಲಿ ಇರುತ್ತಿದ್ದರು. ತಮ್ಮ ಕಸುಬಿನ ನಿರ್ವಹಣೆಗಾಗಿ ಬಲೆಗಳನ್ನು ಹೆಣೆಯುವ ನೈಪುಣ್ಯತೆಯನ್ನು ಪಡೆದಿದ್ದು, ಬಲೆಗಳನ್ನು ಕುಣಿಕೆ ಹಾಕುವ ರೀತಿಯಲ್ಲಿ ನೇಯ್ಯುವುದರಿಂದ ಕುಣಿಕ ಕಾರನಹಳ್ಳಿ ಕಾಣಿಕಾರನಹಳ್ಳಿಯಾಗಿ, ಕನಕಪುರವಾಗಿ ಮಾರ್ಪಟ್ಟಿರಬಹುದು ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

3. ಪ್ರಾನ್ಸಿಸ್ ಬುಕನ್‌ರವರ ಪ್ರಕಾರ ಕಾಣಿ ಎಂದರೆ ಗದ್ದೆ, ಕಾರ ಎಂದರೆ ಭೂ ಮಾಲೀಕ ಅಥವಾ ಒಡೆಯ ಎಂಬ ಅರ್ಥದೊಂದಿಗೆ ನಾಮವಿವೇಚನೆ ಮಾಡಿದ್ದಾರೆ.

4. ಹೊಯ್ಸಳರ ಕಾಲದಲ್ಲಿ ಚಲಾವಣೆಯಲ್ಲಿದ್ದ ಐದುರತಿ ಅಥವಾ ಐದು ಗುಲಗಂಜಿ ತೂಕದ ಕಾಣಿ ಎಂಬ ತಾಮ್ರದ ನಾಣ್ಯವನ್ನು ಪೇರು ಎಂದು ಬಳಸುತ್ತಿದ್ದರು, ಇಂತಹ ನಾಣ್ಯಗಳ ತಯಾರಕನೇ ಕಾಣಿಕಾರ. ಇವನಿದ್ದ ಊರೇ ಕಾಣಿಕಾರನಹಳ್ಳಿ. ಈ ವ್ಯವಸ್ಥೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದ ವಿಶ್ವಕರ್ಮ ಜನಾಂಗದವರ ಮೂಲ, ನೆಲೆ, ಆರಾಧ್ಯದೈವ ಮುಂತಾದ ಐತಿಹಾಸಿಕ ಕುರುಹುಗಳು ಇಲ್ಲಿವೆ. ಈ ಹಿನ್ನೆಲೆಯಲ್ಲಿ ಈ ಸ್ಥಳಕ್ಕೆ ಕಾಣಿಕಾರನಹಳ್ಳಿ ಎಂಬ ಹೆಸರು ಬಂದಿದೆ ಎಂದು ಡಾ॥ ಮುನಿರಾಜಪ್ಪ ಅಭಿಪ್ರಾಯ ಪಡುತ್ತಾರೆ.

ಇಂತಹ ಚಾರಿತ್ರಿಕ ಹಿನ್ನೆಲೆಯುಳ್ಳ ಕನಕಪುರ ಪ್ರದೇಶದ ಇತಿಹಾಸ ಹಾಗೂ ಸಂಸ್ಕೃತಿಯನ್ನು ಪುನರ್ ರಚಿಸಲು ನಡೆಸಿರುವ ಪ್ರಯತ್ನವೇ ಪ್ರಸ್ತುತ ಅಧ್ಯಯನದ ವಿಷಯ.

ಅಧ್ಯಯನದ ವ್ಯಾಪ್ತಿ

ನಮ್ಮ ಇತಿಹಾಸ ಮತ್ತು ಪರಂಪರೆಯನ್ನು ತಿಳಿಯಲು ಐತಿಹಾಸಿಕ ಪ್ರಜ್ಞೆ

ಅತ್ಯವಶ್ಯಕ. ಕಾಲಚಕ್ರಕ್ಕೆ ಸಿಲುಕಿದ ಚರಿತ್ರೆಯಲ್ಲಿ ಪ್ರಾದೇಶಿಕ ಎಲ್ಲೆಗಳು ಬದಲಾವಣೆಗೊಳಪಡುತ್ತವೆ. ಆದ್ದರಿಂದ ನಿರ್ದಿಷ್ಟ ಪ್ರಾದೇಶಿಕ ವ್ಯಾಪ್ತಿಯಲ್ಲಿ ಇತಿಹಾಸವನ್ನು ಹುಡುಕುವುದು ಕಷ್ಟ. ವಸ್ತುನಿಷ್ಠ ಇತಿಹಾಸ ಪುನರ್ ನಿರ್ಮಾಣವನ್ನು ಅಧ್ಯಯನದ ಅನುಕೂಲಕ್ಕಾಗಿ ಈಗಿರುವ ತಾಲ್ಲೂಕಿನ ಗಡಿಗಳನ್ನೂ ದಾಟಿ, ಚರಿತ್ರೆಯ ಮಹತ್ವ ಮತ್ತು ಸಾಂಸ್ಕೃತಿಕ ಹಿರಿಮೆಗೆ ಕಾರಣವಾದ ಅಂಶಗಳನ್ನು ಸಂಗ್ರಹಿಸಲಾಗುವುದು. ಈ ಪ್ರದೇಶ ಶಿಲಾಯುಗದ ಕಾಲದಿಂದಲೂ ಮಾನವನ ನೆಲೆಯಾಗಿತ್ತು ಎಂಬುದಕ್ಕೆ ಬಾಣಂತಮಾರಮ್ಮನ ಬೆಟ್ಟ, ವೆಂಕಟರಾಯನದೊಡ್ಡಿ, ಬನವಾಸಿ, ಗೊಟ್ಟಿಗೆಹಳ್ಳಿ, ಚನ್ನಸಂದ್ರ ಮೊದಲಾದ ಕಡೆ ದೊರೆತಿರುವ ಬೃಹತ್ ಶಿಲಾ ಗೋರಿಗಳೇ ಸಾಕ್ಷಿ.

ಕರ್ನಾಟಕದ ಚರಿತ್ರೆಗೆ ಸಾಂಸ್ಕೃತಿಕ ಬುನಾದಿಯನ್ನು ಹಾಕಿದ ಗಂಗರ ರಾಜಧಾನಿಗಳಲ್ಲೊಂದಾದ ಮುಂಕುಂದ ಕನಕಪುರಕ್ಕೆ ಸಮೀಪದಲ್ಲಿದ್ದು, ಗಂಗರ ಕಾಲದ ಪ್ರಭಾವ ಈ ಪ್ರದೇಶದ ಮೇಲಾಗಿರುವುದು ಸ್ಪಷ್ಟ. ಗಂಗವಾಡಿಯ ಒಂದು ಭಾಗವಾಗಿದ್ದ ಕನಕಪುರದಲ್ಲಿ ಗಂಗರದೊರೆ ಎರಡನೆ ರಾಚಮಲ್ಲನ (ಕ್ರಿ.ಶ. 870 ರಿಂದ 919ರ ವರೆಗೆ) ಕಾಲಕ್ಕೆ ಸಂಬಂಧಿಸಿದ ಐತಿಹಾಸಿಕ ಮತ್ತು ಸಾಂಸ್ಕೃತಿಕ ಮಹತ್ವವುಳ್ಳ ಶಾಸನಗಳು ಯಳಚಗೆರೆ ಮತ್ತು ಸಾತನೂರುಗಳಲ್ಲಿ ದೊರೆತಿದ್ದು, ಈ ಸೀಮೆ ಎರಡನೇ ರಾಚಮಲ್ಲನ ಆಳ್ವಿಕೆಗೆ ಒಳಪಟ್ಟಿತ್ತೆಂದು ತಿಳಿದುಬರುತ್ತದೆ. ಕ್ರಿ.ಶ.1000ದಲ್ಲಿ ಗಂಗವಾಡಿ ಚೋಳರ ಆಳ್ವಿಕೆಗೆ ಒಳಪಟ್ಟಿತ್ತು. ತಮಿಳುಪ್ರಾಂತ್ಯದ ಗಡಿ ಭಾಗವಾದ್ದರಿಂದ ಈ ಸೀಮೆಯ ರಾಜಕೀಯ ಮತ್ತು ಸಾಂಸ್ಕೃತಿಕ ಕ್ಷೇತ್ರದ ಮೇಲೆ ತಮಿಳರ ಆಳ್ವಿಕೆಯ ಪ್ರಭಾವವನ್ನು ಕಡೆಗಣಿಸಲಾಗದು. ಇದಕ್ಕೆ ಸೀಮೆಯಾದ್ಯಂತ ಇರುವ ಅನೇಕ ದೇವಾಲಯಗಳು ಹಾಗೂ ತಮಿಳು ಶಾಸನಗಳೇ ಸಾಕ್ಷಿ. ಕನಕಪುರ ಪ್ರದೇಶ ಹಿಂದೆ ಸೀಗಲನಾಡಾಗಿತ್ತು.

ಸೀಗಲನಾಡಿನ ರಾಜಧಾನಿಯಾದ ಈಗಿನ ಅರಳಾಳು, ಕನಕಪುರದಿಂದ ಕೇವಲ 3 ಕಿ.ಮೀ ದೂರದಲ್ಲಿದೆ. ಇದು ಮುಡಿಗುಂಡ ಚೋಳ ಒಳನಾಡಿನ ಒಂದು ಭಾಗವಾಗಿತ್ತು. ಹೊಯ್ಸಳರ ವಿಷ್ಣುವರ್ಧನ ಗಂಗವಾಡಿಯನ್ನು ವಶಪಡಿಸಿಕೊಂಡು ಚೋಳರ ಆಳ್ವಿಕೆಯನ್ನು ಕೊನೆಗಾಣಿಸುವವರೆಗೂ ಈ ಪ್ರದೇಶದ ಮೇಲೆ ಚೋಳರ ಪ್ರಭಾವವಿತ್ತು. ಹೊಯ್ಸಳರ ಆಳ್ವಿಕೆ ಬಹುತೇಕವಾಗಿ ರಾಜನ ಅಧೀನದಲ್ಲಿ ಕೇಂದ್ರೀಕೃತವಾಗಿದ್ದರೂ, ಕೂಡ ಕೊನೆಯ ದಿನಗಳಲ್ಲಿ ಕೆಲವು ಸಾಮಂತ ಪ್ರಭುಗಳು ಏಳ್ಗೆಗೆ ಬಂದು ವಂಶಪಾರಂಪರ್ಯವಾಗಿ ಆಳ್ವಿಕೆ ನಡೆಸಿದ್ದಾರೆ. ಅಂತಹ ನಾಡಪ್ರಭುಗಳ ಪ್ರಾಂತ್ಯಗಳಲ್ಲಿ ಸೀಗಲನಾಡು ಒಂದಾಗಿತ್ತು. ಈ ಮನೆತನದ ನಾಯಕರನ್ನು ಸೀಗಲನಾಡ ಪ್ರಭುಗಳೆಂದು ಕರೆಯಲಾಗಿದೆ.

ತಮಿಳು ಆಧಾರಗಳಲ್ಲಿ ಈ ಪ್ರಾಂತ್ಯ ಸೀಯಾಲನಾಡು ಆಗಿದೆ. ಈಗಿನ ಕನಕಪುರ ತಾಲ್ಲೂಕಿನ ಹಲವಾರು ಹಳ್ಳಿಗಳನ್ನೊಳಗೊಂಡಂತೆ, ಚನ್ನಪಟ್ಟಣದ ಗಡಿಯವರೆಗೂ ಈ ಪ್ರಾಂತ್ಯ ವಿಸ್ತರಿಸಿತ್ತೆಂದು ತಿಳಿದುಬರುತ್ತದೆ. ಕ್ರಿ.ಶ. 1295ರ ನಾಯಕನಹಳ್ಳಿ ಶಾಸನವೇ ಈ ಪ್ರದೇಶದ ಪ್ರಾಚೀನ ಶಾಸನ. ಇದು ಅರುಳಹಳ್ಳಿಯ ಮಾರಪ್ಪ ಅಥವಾ ಮಾರದೇವನನ್ನು ಸೀಗಲನಾಡಿನ ಮಾನಪ್ರಭು ಎಂದು ಕರೆದಿದೆ. ಮುಳ್ಳಹಳ್ಳಿ, ತುಂಗಣಿ ಮತ್ತು ಅಚ್ಚಲು ಶಾಸನದನ್ವಯ ಅರಳಾಳಿನ ಮಾರಪ್ಪ, ಹೊಯ್ಸಳ ಪ್ರಸಿದ್ಧ ಕೊನೆಯ ದೊರೆಯಾದ ಮೂರನೇ ಬಲ್ಲಾಳನ ಸಾರ್ವಭೌಮತ್ವವನ್ನು ಒಪ್ಪಿಕೊಂಡಿದ್ದನು. ಮೂರನೇ ಬಲ್ಲಾಳನ ಮತ್ತೊಂದು ಶಾಸನ ಕಬ್ಬಾಳಿನಲ್ಲಿ ದೊರೆತಿದೆ. ಈ ಮನೆತನ ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿಯೂ ವಂಶಪರಂಪರ್ಯ ಸಾಮಂತ ಮನೆತನವಾಗಿತ್ತು. ಎರಡನೇ ಹರಿಹರನ ಕಾಲದಲ್ಲಿ ಸೀಗಲನಾಡಿನ ಪ್ರಭು ಮಾರಗೌಡನ ಮಗ ಅಲ್ಲಗೌಡ ಮಾರಸಮುದ್ರದ ಕೆರೆಯನ್ನು ಅಭಿವೃದ್ಧಿಪಡಿಸಿದ್ದನೆಂದು ತಿಳಿದುಬರುತ್ತದೆ. ಕ್ರಿ.ಶ. 1530ರ ನಲ್ಲಹಳ್ಳಿ ಶಾಸನದ ಪ್ರಕಾರ ಚನ್ನಪ್ಪ ಈ ಪ್ರಾಂತ್ಯದ ಸಾಮಂತನಾಗಿದ್ದನು. ಕ್ರಿ.ಶ. 1563ರಲ್ಲಿ ದೇವಪ್ಪ ಇಲ್ಲಿನ ರಾಜಕುಮಾರನಾಗಿದ್ದನೆಂದು ತಿಳಿದುಬರುತ್ತದೆ. ವಿಜಯನಗರ ಕಾಲದಲ್ಲಿ ಚನ್ನಪಟ್ಟಣದ ಜಗದೇವರಾಯ ಕನಕಪುರವನ್ನು ತನ್ನ ನಿಯಂತ್ರಣಕ್ಕೆ ತೆಗೆದುಕೊಂಡು ಅರ್ಕಾವತಿ ದಂಡೆಯ ಮೇಲೆ ಕೋಟೆಯೊಂದನ್ನು ನಿರ್ಮಿಸಿದ್ದನು. ಇಂದಿಗೂ ಆ ಕೋಟೆಯ ಕುರುಹುಗಳಿವೆ. ವಿಜಯನಗರ ಸಾಮ್ರಾಜ್ಯ ಮತ್ತು ಸ್ಥಳೀಯ ನಾಯಕರ ಸಂಬಂಧಗಳನ್ನು ಕುರಿತಂತೆ ಮಹತ್ವದ ಬೆಳವಣಿಗೆಗಳ ಎಳೆಗಳಿವೆ. ಕಬ್ಬಾಳು ಶಾಸನದ ಪ್ರಕಾರ ವಿಜಯನಗರ ಸಾಮ್ರಾಜ್ಯದ ದೊರೆ ಪ್ರತಾಪ ರುದ್ರದೇವ ಇಲ್ಲಿನ ಕಾಳಿಕಾದೇವಿಗೆ ದಾನ ನೀಡಿರುವ ವಿಷಯ ತಿಳಿಸುತ್ತದೆ. ಕ್ರಿ.ಶ. 1630ರ ವೇಳೆಗೆ ಕನಕಪುರ ಮೈಸೂರು ಸಾಮ್ಯಾಜ್ಯದ ಅವಿಭ್ಯಾಜ್ಯ ಅಂಗವಾಯಿತು, ಮೈಸೂರಿನ ದಳವಾಯಿಗಳಾದ ದೇವರಾಜಯ್ಯ ಹಾಗೂ ನಂಜರಾಜಯ್ಯ, ಏಳನೇ ಚಾಮರಾಜ ಒಡೆಯರು ಮತ್ತು ಅವರ ಪತ್ನಿಯನ್ನು ಕಬ್ಬಾಳು ದುರ್ಗದಲ್ಲಿ ಸೆರೆಯಲ್ಲಿಟ್ಟು ಕ್ರಿ.ಶ. 1734ರಲ್ಲಿ ಕಬ್ಬಾಳು ದುರ್ಗದಲ್ಲೇ ಮರಣಹೊಂದಿದ್ದಾರೆ. ಹೈದರಾಲಿ ಕ್ರಿ.ಶ. 1779ರಲ್ಲಿ ಗುತ್ತಿಯ ಮುರಾರಿರಾವ್ ಘೋರ್ಪಡೆಯನ್ನು ಕಬ್ಬಾಳು ದುರ್ಗದಲ್ಲಿಯೇ ಸೆರೆಯಲ್ಲಿಟ್ಟು ಕೊಂದುಹಾಕಿದನು. ಇದಕ್ಕೆ ಐತಿಹಾಸಿಕ ದಾಖಲೆಗಳ ಪುರಾವೆಗಳು ಲಭ್ಯವಿಲ್ಲದಿದ್ದರು ಜನರ ಬಾಯಿಯಿಂದ ಬಾಯಿತೆ ಉಳಿದುಕೊಂಡು ಬಂದು ಇಂದಿಗೂ ಜನಜನಿತವಾಗಿವೆ. ಟಿಪ್ಪುಸುಲ್ತಾನ್ ತನ್ನ ಆಳ್ವಿಕೆಯ ಕಾಲದಲ್ಲಿ ಕಬ್ಬಾಳಿಗೆ ಜಾಫರ್ ಬಾದ್ ಎಂದು ನಾಮಕರಣ ಮಾಡಿದ್ದನು.[4] ಹೈದರಾಲಿ ಹಾಗೂ ಟಿಪ್ಪುಸುಲ್ತಾನ್ ಅನೇಕ ಬ್ರಿಟಿಷ್ ಸೆರೆಯಾಳುಗಳನ್ನು ಬಂಧನದಲ್ಲಿರಿಸಿ ಕೊಂದುದ್ದಕ್ಕೆ ಅಧಾರಗಳಿವೆ. ಹೈದರಾಲಿ ಹಾಗೂ ಟಿಪ್ಪುಸುಲ್ತಾನ್ ಕಾಲದಲ್ಲಿ ಕನಕಪುರ ಪ್ರಮುಖ ಸೈನಿಕ ನೆಲೆಯಾಗಿತ್ತು. ಕ್ರಿ.ಶ. 1793 ಹಾಗೂ 1799ರಲ್ಲಿ ಬ್ರಿಟಿಷ್ ಸೈನ್ಯ ಕನಕಪುರ ಮಾರ್ಗವಾಗಿ ಶ್ರೀರಂಗಪಟ್ಟಣಕ್ಕೆ ಬರುವುದನ್ನು ತಡೆಯುವುದಕ್ಕಾಗಿ ಟಿಪ್ಪು ಕನಕಪುರವನ್ನು ಎರಡು ಬಾರಿ ಬೆಂಕಿ ಹಾಕಿ ಸುಟ್ಟನೆಂದು ತಿಳಿದುಬರುತ್ತದೆ.

ತಾಲ್ಲೂಕಿನ ಧಾರ್ಮಿಕ ಹಾಗೂ ಶೈಕ್ಷಣಿಕ ಕ್ಷೇತ್ರದಲ್ಲಿ ಬಹುಮುಖ್ಯ ಪಾತ್ರವಹಿಸಿರುವ ಶ್ರೀ ದೇಗುಲ ಮಠದ ಈಶಾನ್ಯ ಮೂಲೆಯಲ್ಲಿರುವ ಕ್ರಿ.ಶ. 1686ರ ಶಾಸನದಂತೆ ದೇವರಾಜ ಒಡೆಯರ ದಳವಾಯಿ ವಿರೂಪಸಂದ್ರದ ಕೋಮಾರಯ್ಯನ ತಾಯಿ ತಿಮ್ಮಮ್ಮ ಹೊಂಬನಾಡ ಕಾಣಿಕಾರನಹಳ್ಳಿ ನಿರ್ವಾಣ ದೇವರ ಮಠವನ್ನು ಸ್ಥಾಪಿಸಿ. ಹೊಲಕೊಂಗಗಳವರಹ ಭೂ ಸರ್ವಮಾನ್ಯ ದಾನಮಾಡಿದ ವಿಚಾರವಿದೆ. ಕನಕಪುರ ಸೀಮೆಯ ಇತಿಹಾಸ ಗಂಗ, ಚೋಳ, ಹೊಯ್ಸಳ, ವಿಜಯನಗರ, ಜಗದೇವರಾಯ ಮತ್ತು ಸ್ಥಳೀಯ ನಾಯಕರ ಆಳ್ವಿಕೆಗೆ ಒಳಪಟ್ಟು ವೈಶಿಷ್ಟ್ಯ ಪೂರ್ಣವಾಗಿರುವದರಿಂದ ಆಳವಾದ ಅಧ್ಯಯನಕ್ಕಾಗಿ ಕ್ರಿ.ಶ. 1800ರವರೆಗೆ ಕಾಲಮಿತಿಯನ್ನು ಹಾಕಿಕೊಳ್ಳಲಾಗಿದೆ.

ಅಧ್ಯಯನದ ಉದ್ದೇಶ

ಸಾವಿರಾರು ವರ್ಷಗಳ ಐತಿಹಾಸಿಕ ಪರಂಪರೆಯುಳ್ಳ ಭಾರತ ಹಾಗೂ ಕರ್ನಾಟಕ ಇತಿಹಾಸದ ಹತ್ತಾರು ಗೊಂದಲಗಳು ನಿವಾರಣೆಗೊಂಡು ಪರಿಪೂರ್ಣಗೊಳ್ಳಬೇಕಾದರೆ, ಸ್ಥಳೀಯ ಸೂಕ್ಷ್ಮಸ್ತರದ ಇತಿಹಾಸದ ಅಧ್ಯಯನ ಅತ್ಯವಶ್ಯಕ. ಭೌಗೋಳಿಕವಾಗಿ ಹಾಗೂ ಸಾಂಸ್ಕೃತಿಕವಾಗಿ ವೈವಿಧ್ಯತೆಯಿಂದ ಕೂಡಿರುವ ಭಾರತದಲ್ಲಿ ಸ್ಥಳೀಯ ಇತಿಹಾಸ ಮತ್ತು ಸಂಸ್ಕೃತಿಯು ಜೊತೆಜೊತೆಯಾಗಿ ಬೆಳೆದು ಮತ್ತಷ್ಟು ವೈವಿಧ್ಯತೆಯಿಂದ ಕೂಡಿದೆ. ನಮ್ಮ ಸಾಮಾಜಿಕ ವ್ಯವಸ್ಥೆಯ ಒಳಿತು-ಕೆಡುಕುಗಳೆಲ್ಲಾ ಸ್ಥಳೀಯವಾಗಿ ಬೇರು ಬಿಟ್ಟಿರುವುದರಿಂದ ಸೂಕ್ಷ್ಮಸ್ತರದ ಇತಿಹಾಸದ ಅಧ್ಯಯನದಿಂದ ಮಾತ್ರ ಸ್ಥೂಲಸ್ತರದ ಇತಿಹಾಸದ ಅಧ್ಯಯನ ಪರಿಪೂರ್ಣವಾದೀತು. ಈ ದಿಸೆಯಲ್ಲಿ ವಾಲ್ಟೇರ್‌ರವರ ಮಾತು ಜ್ಞಾಪಕಕ್ಕೆ ಬರುತ್ತದೆ. "ನಾನು ರಾಜಮಹಾರಾಜರ ಯುದ್ಧ, ಆಡಳಿತ, ಸಾಧನೆ ಹಾಗೂ ವಿಫಲತೆಯನ್ನು ಕುರಿತು ಬರೆಯುವುದಕ್ಕಿಂತ, ಜನಸಾಮಾನ್ಯರ ನೋವು, ನಲಿವು, ಜೀವನ ಸಾಧನೆ ಹಾಗೂ ವಿಫಲತೆಯನ್ನು ಕುರಿತು ಅಧ್ಯಯನ ಮಾಡುತ್ತೇನೆ. ಏಕೆಂದರೆ ಮಾನವೀಯ ಚಿಂತನೆಯೇ ಇತಿಹಾಸದ ಪ್ರಮುಖ ವಸ್ತು ವಿಷಯ."[5]

ಈ ಹಿನ್ನೆಲೆಯಲ್ಲಿ ಸಾಂಸ್ಕೃತಿಕ ಸಂಗತಿಗಳನ್ನು ಕಡೆಗಣಿಸಿದ ಚರಿತ್ರೆ ಅಪೂರ್ಣತೆಯ ಲಕ್ಷಣಗಳನ್ನು ಬಿಂಬಿಸುತ್ತದೆ. ಹಲವಾರು ಗೊಂದಲ ಸಂಶಯಗಳಿಗೆ ಎಡೆಮಾಡಿಕೊಡುತ್ತದೆ. ಜನಜೀವನದ ಭಾಗವಾದ ರೂಢಿ, ಸಂಪ್ರದಾಯ ಮತ್ತಿತರ ಸಾಂಸ್ಕೃತಿಕ ಸಂಗತಿಗಳ ಅಧ್ಯಯನಕ್ಕೆ ಒತ್ತು ನೀಡುವ ಪ್ರಯತ್ನ ಪ್ರಸ್ತುತ ಅಧ್ಯಯನದಲ್ಲಿದೆ. ಕನಕಪುರ ಪ್ರದೇಶದ ಇತಿಹಾಸ ಮತ್ತು ಸಂಸ್ಕೃತಿಯನ್ನು ಕುರಿತು ಸಮಗ್ರವಾದ ಅಧ್ಯಯನ ನಡೆದಿಲ್ಲ. ಗಂಗ, ಚೋಳ, ಹೊಯ್ಸಳ, ವಿಜಯನಗರ, ಒಡೆಯರು, ಹೈದರಾಲಿ ಹಾಗೂ ಟಿಪ್ಪುಸುಲ್ತಾನ್ ಕಾಲದ ಇತಿಹಾಸ ಮತ್ತು ಸಂಸ್ಕೃತಿಯನ್ನು ತನ್ನ ಕಾಲಗರ್ಭದಲ್ಲಿ ಹುದುಗಿಸಿಟ್ಟುಕೊಂಡಿದೆ. ಅದನ್ನು ಕಾಲಕ್ರಮವಾಗಿ ಸತ್ಯ ಸಂಗತಿಗಳಿಗೆ ಅಪಚಾರವಾಗದಂತೆ ಜೋಡಿಸಿ,

ವಿಶ್ಲೇಷಣಾತ್ಮಕವಾಗಿ ಪುನರ್ ರಚಿಸುವುದೇ ಈ ಅಧ್ಯಯನದ ಉದ್ದೇಶ. ಗಂಗರ ಕಾಲದಲ್ಲಿ ಗಂಗವಾಡಿ 96000ದ ಭಾಗವಾಗಿದ್ದ ಈ ಪ್ರದೇಶ ತಮಿಳುನಾಡಿನ ಗಡಿಭಾಗದಲ್ಲಿದೆ. ಹೊಯ್ಸಳರ ಕಾಲದಲ್ಲಿ ಒಂದು ಪ್ರಮುಖ ಪ್ರಾಂತ್ಯವಾಗಿದ್ದ ಈ ಸೀಮೆಯಲ್ಲಿ ಮೂರನೇ ಬಲ್ಲಾಳನ ಕಾಲದ ಶಾಸನಗಳು ಅಚ್ಚಲು, ನಾಯಕನಹಳ್ಳಿ, ಅರಳಾಳು ಮೊದಲಾದ ಕಡೆ ದೊರೆತಿವೆ. ಹೊಯ್ಸಳರ ಕಾಲದ ಶಾಸನಗಳ ಉಲ್ಲೇಖದಂತೆ ಸೀಗಲನಾಡು, ಕೆಸುಮಣ್ಣನಾಡು, ಅಚ್ಚಲುನಾಡು, ಹೊಂಬನಾಡು, ವುಮ್ಮಳಿಗೆ ನಾಡು ಎಂದು ಕರೆಯಲ್ಪಡುತ್ತಿದ್ದ ಈ ಸೀಮೆಯ ವ್ಯಾಪ್ತಿ ಮತ್ತು ಆಡಳಿತ ವಿಧಾನಗಳನ್ನು ಎಚ್ಚರಿಕೆಯಿಂದ ಪರಿಶಿಲಿಸಿದ್ದೇನೆ. ಈ ಪ್ರಾಂತ್ಯವನ್ನಾಳಿದ ನಾಯಕರು ಕಟ್ಟಿಸಿದ ಕೆರೆ, ಕಟ್ಟೆ, ಗುಡಿಗೋಪುರಗಳ ಮಹತ್ವವನ್ನು ಉಲ್ಲೇಖಿಸುವುದು, ಶಾಸನಾಧಾರಗಳನ್ನು ಪರಿಶೀಲಿಸಿ ಸಂಸ್ಕೃತಿಯ ಬೆಳವಣಿಗೆಗೆ ಕಾರಣವಾದ ಹಿನ್ನೆಲೆಯನ್ನು ವಿಶ್ಲೇಷಿಸಬೇಕಾಗಿದೆ. ಗಂಗರು, ಚೋಳರು, ಹೊಯ್ಸಳರು, ವಿಜಯನಗರದ ಅರಸರು, ನೆರೆಯ ಚನ್ನಪಟ್ಟಣದ ಜಗದೇವರಾಯ, ಮೈಸೂರಿನ ಒಡೆಯರು, ಹೈದರಾಲಿ, ಟಿಪ್ಪುಸುಲ್ತಾನ್ ಮೊದಲಾದವರು ಈ ಸೀಮೆಯೊಡನೆ ಹೊಂದಿದ್ದ ಸಂಬಂಧಗಳ ಮೇಲೆ ಬೆಳಕು ಚೆಲ್ಲಲಾಗಿದೆ. ಕರ್ನಾಟಕದ ಮೇಲೆ ಚೋಳರ ಆಕ್ರಮಣದ ಸಂದರ್ಭದಲ್ಲಿ ಕನಕಪುರ ಸೈನಿಕ ಪ್ರಾಮುಖ್ಯತೆಯನ್ನು ಪಡೆದುಕೊಂಡಿತ್ತು. ಕಬ್ಬಾಳುದುರ್ಗ, ಚಿಕ್ಕಮುದುವಾಡಿ ದುರ್ಗಗಳು ರಾಜ್ಯದ ಆಯಕಟ್ಟಿನ ಸೈನಿಕ ನೆಲೆಯಾಗಿದ್ದು ಅವುಗಳ ಚಾರಿತ್ರಿಕ ಮಹತ್ವವನ್ನು ತಿಳಿಸಿದ್ದೇನೆ. ಈ ಸೀಮೆಯಾದ್ಯಂತ ಬನ್ನಿಮುಕ್ಕೋಡ್ಲು, ಕೋಟೆಕೊಪ್ಪ, ಕನಕಪುರ, ಗಾಣಾಳು ಮೊದಲಾದ ಕಡೆ ಅಳಿದುಳಿದಿರುವ ಕೋಟೆಗಳು, ಸೇನಾ ಚಟುವಟಿಕೆಗಳ ಮೇಲೆ ಬೆಳಕು ಚೆಲ್ಲುತ್ತವೆ. ಟಿಪ್ಪೂಸುಲ್ತಾನ್ ಮತ್ತು ಹೈದರಾಲಿಯ ಕಾಲದಲ್ಲಿ ದಂಡುಸಾಗಣೆಯ ದಾರಿಯಾಗಿದ್ದ ಕನಕಪುರ, ತುಂಗಣಿ, ಕಗ್ಗಲಹಳ್ಳಿ ಸೈನ್ಯದ ತಂಗುದಾಣಗಳಾಗಿದ್ದವೆಂಬ ಜನಾಭಿಪ್ರಾಯವನ್ನು ಸತ್ಯದ ಒರೆಗಲ್ಲಿಗೆ ಹಚ್ಚಿ ನೋಡಲಾಗಿದೆ.

ಮಾನವನ ಆಧ್ಯಾತ್ಮಿಕ ಮತ್ತು ಬೌದ್ಧಿಕ ಪ್ರಗತಿಯೇ ಸಂಸ್ಕೃತಿ. ದಟ್ಟ ಅರಣ್ಯ, ಬೆಟ್ಟಗುಡ್ಡ, ಕಾವೇರಿ ಮತ್ತು ಅರ್ಕಾವತಿ ನದಿ ಬಯಲಿನಲ್ಲಿ ನೆಲೆಗೊಂಡಿರುವ ಈ ಪ್ರದೇಶದ ಜನಾಂಗದ ಸಂಸ್ಕೃತಿ ವಿಶೆಷ್ಟವಾಗಿದ್ದು, ಒಕ್ಕಲಿಗರು, ಲಿಂಗಾಯಿತರು, ಬ್ರಾಹ್ಮಣರು, ವಿಶ್ವಕರ್ಮರು, ತಿಗಳರು, ಕಮ್ಮಾರರು, ಮಡಿವಾಳರು, ಕ್ಷೌರಿಕರು, ಆದಿಕರ್ನಾಟಕ, ಆಸಿ ದ್ರಾವಿಡ, ಮರಾಠಿ, ಬೆಸ್ತರು, ಬಣಜಿಗರು, ಕುಂಬಾರರು, ಕೊರಮರು, ಮುಸ್ಲಿಮರು, ಕ್ರಿಶ್ಚಿಯನ್ನರು ಮುಂತಾದ ಜಾತಿಯ ಜನರ ಆಚಾರ, ವಿಚಾರ, ನಡವಳಿಕೆಗಳನ್ನು ಸಂಸ್ಕೃತಿಯ ಚೌಕಟ್ಟಿನಲ್ಲಿ ಅಧ್ಯಯನಕ್ಕೊಳಪಡಿಸಲಾಗುವುದು. ಇವುಗಳ ಜೊತೆಗೆ ಲಂಬಾಣಿಗಳು, ಇರುಳಿಗರು, ಕಾಡುಗೊಲ್ಲರು, ಬುಡಬುಡಿಕೆ ಮುಂತಾದ ಬುಡಕಟ್ಟು ಜನಾಂಗಗಳ ಜೀವನ ಕ್ರಮವನ್ನು ವಿಶೇಷವಾಗಿ ಅಧ್ಯಯನ ಮಾಡಬೇಕಾಗಿದೆ. ಜಾತಿ ಕಲಹಕ್ಕೆ ಸಂಬಂಧಿಸಿದ ಬೂತಗನಹಳ್ಳಿ ಶಾಸನ, ಸತಿಪದ್ಧತಿಗೆ ಸಂಬಂಧಿಸಿದಂತೆ ಯಲಚವಾಡಿ ಶಾಸನ, ತುರಗೋಳ ಕದನಕ್ಕೆ

ಸಂಬಂಧಿಸಿದ ಸಾತನೂರು ಶಾಸನ. ಸಂತೆ ಸ್ಥಾಪನೆಗೆ ಸಂಬಂಧಿಸಿದಂತೆ ಗಾಣಾಳ ಶಾಸನಗಳು ಮಹತ್ವದ ಸಂಗತಿಗಳು ವಿಶ್ಲೇಷಣೆಗೊಳಗಾಗಬೇಕಾಗಿದೆ. ಕೃಷಿ ಬಹುಸಂಖ್ಯಾತರ ಕಸುಬು. ಈ ಸೀಮೆಯ ಪ್ರಮುಖ ಬೆಳೆಗಳಾದ ತೆಂಗು, ರಾಗಿ, ನೆಲಗಡಲೆ, ಭತ್ತ ಹಾಗೂ ಪಶುಪಾಲನೆ ಗಣಿಗಾರಿಕೆ, ರೇಷ್ಮೆ ಕೃಷಿ ಮೊದಲಾದವು ಜನರ ಆರ್ಥಿಕ ಜೀವನದ ಮೇಲೆ ಬೀರಿರುವ ಪ್ರಭಾವವನ್ನು ದಾಖಲಿಸಬೇಕಾಗಿದೆ. ಈ ಪ್ರದೇಶದ ಹಬ್ಬ, ಆಚರಣೆಗಳು ಜಾನಪದ ಕಲೆಗಳು, ಆರಾಧನೆಗಳು, ಆಚಾರ, ವಿಚಾರಗಳನ್ನು ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಅಧ್ಯಯನ ಮಾಡಬೇಕಾಗಿದೆ. ಬಸವೋತ್ತರ ಚಳುವಳಿಯ ಹಿನ್ನೆಲೆಯಲ್ಲಿ ಸ್ಥಾಪನೆಗೊಂಡು ಉದಾತ್ತ ಸಮಾಜ ಸೇವಾ ಕೈಂಕರ್ಯದಲ್ಲಿ ತೊಡಗಿರುವ ವೀರಶೈವ ಮಠಗಳ ಪಾತ್ರವನ್ನು ಸಾಂಸ್ಕೃತಿಕ ಬೆಳವಣಿಗೆಯೊಂದಿಗೆ ಸಮೀಕರಿಸಿ ನೋಡಬೇಕಾಗಿದೆ ಮತ್ತು ಮಲೆಮಹದೇಶ್ವರಸ್ವಾಮಿ ಮತ್ತು ಸಿದ್ಧಪ್ಪಾಜಿ ದೇವರುಗಳ ಅನುಯಾಯಿಗಳ ಸಂಸ್ಕೃತಿ ಮತ್ತು ಸಂಬಂಧಗಳನ್ನು ಅರಿಯುವ ಪ್ರಯತ್ನ ಮಾಡಲಾಗಿದೆ.

ಚರಿತ್ರೆಯ ಸಮಗ್ರತೆಯನ್ನು ಪರಿಪೂರ್ಣಗೊಳಿಸುವುದಕ್ಕಾಗಿ ಇಂತಹ ಸೂಕ್ಷ್ಮಸ್ತರದ ಐತಿಹಾಸಿಕ ಸಂಶೋಧನೆಗಳು ಪ್ರಾಮುಖ್ಯತೆ ಪಡೆದುಕೊಳ್ಳುತ್ತಿರುವುದು ಉತ್ತಮ ವಿಚಾರ. ಇಂತಹ ಸೂಕ್ಷ್ಮಸ್ತರದ ಅಧ್ಯಯನಗಳಾದ ಮಾಗಡಿ ಸೀಮೆ, ಶ್ರವಣಬೆಳಗೊಳ, ಹರಪ್ಪನಹಳ್ಳಿ ಪಾಳೇಗಾರರು, ಹಾಗಲವಾಡಿ ನಾಯಕರು, ಸುಗ್ಗನಹಳ್ಳಿ ಕುರಿತ ಹಲವಾರು ಸಂಶೋಧನೆಗಳು ನನ್ನ ಈ ಪ್ರಯತ್ನಕ್ಕೆ ಪ್ರೇರಣೆಯಾಗಿವೆ. ಸ್ಥಳೀಯ ಇತಿಹಾಸದ ಅಧ್ಯಯನಕ್ಕೆ ಪಾಶ್ಚಿಮಾತ್ಯರ ವೈಜ್ಞಾನಿಕ ದೃಷ್ಟಿಕೋನವನ್ನೇ ನಂಬಿಕೂರಬೇಕಾಗಿಲ್ಲ. ಸ್ಥಳೀಯ ಶಾಸನಗಳು, ರೂಢಿ, ಸಂಪ್ರದಾಯ, ನಂಬಿಕೆಗಳು, ಆಚರಣೆಗಳು, ಹಬ್ಬಗಳು, ಪುರಾಣಗಳು, ಜಾನಪದಗಳು, ಕಥೆ, ಕೈಪಿಯತ್ತು, ಇತಿವೃತ್ತಿ ಮೊದಲಾದವುಗಳೊಂದಿಗೆ ಕ್ಷೇತ್ರಾಧ್ಯಯನ ಕೈಗೊಂಡು ಸತ್ಯದ ಒರೆಗಲ್ಲಿಗೆ ಹಚ್ಚುವ ಉದ್ದೇಶವಿದೆ.

ಸಂಶೋಧನಾ ಮಾರ್ಗ

ಪುರಾತನ ಹಾಗೂ ವಾಸ್ತವಿಕ ವಿಚಾರಗಳನ್ನು ಹುಡುಕಿ ಹೊರತೆಗೆಯುವುದಕ್ಕಾಗಿ ನಡೆಸುವ ಪ್ರಯತ್ನವೇ ಸಂಶೋಧನಾ ಮಾರ್ಗ. ಯಾವುದೇ ವಿಚಾರಗಳನ್ನು ಸಂಗ್ರಹಿಸುವಾಗ ಪೂರ್ವಾಗ್ರಹ ಪೀಡಿತರಾಗದೇ ವೈಜ್ಞಾನಿಕ ಸಂಶೋಧನಾ ಮಾರ್ಗದಲ್ಲಿ ನಡೆದಾಗ ಮಾತ್ರ ನಿಖರ ಹಾಗೂ ಸ್ಪಷ್ಟ ಇತಿಹಾಸವನ್ನು ರಚಿಸಲು ಸಾಧ್ಯ. ಇತಿಹಾಸದಲ್ಲಿ ಸಂಶೋಧನಾ ಮಾರ್ಗವೆಂಬ ಪ್ರತ್ಯೇಕ ಶಾಸ್ತ್ರವೇ ಇದೆ. ಆ ಶಾಸ್ತ್ರದಡಿಯಲ್ಲೇ ನನ್ನ ಸಂಶೋಧನಾ ಮಾರ್ಗವನ್ನು ಮುಂದುವರಿಸಿದ್ದೇನೆ. ಹಲವಾರು ವಿದ್ವಾಂಸರು ರಚಿಸಿರುವ ಗ್ರಂಥಗಳನ್ನು ಪರಾಮರ್ಶಿಸಿ ಮಾಹಿತಿ ಸಂಗ್ರಹಿಸಿ, ಜೋಡಿಸಿ, ವಿಶ್ಲೇಷಣಾ ಮಾರ್ಗದಲ್ಲಿ ನಿರೂಪಿಸುವ ಅಲೋಚನೆಯಿದೆ. ಇದಕ್ಕಾಗಿ ಗ್ರಂಥಾಲಯಗಳು, ವಸ್ತುಸಂಗ್ರಹಾಲಯಗಳು, ಅಧ್ಯಯನ

ಸಂಸ್ಥೆಗಳ ಪೂರ್ಣಪ್ರಯೋಜನ ಪಡೆದಿದ್ದೇನೆ. ರಾಜ್ಯ ಪತ್ರಾಗಾರ ಇಲಾಖೆ, ಪ್ರಾಕ್ತಾರಿತ್ರಿಕ ಇಲಾಖೆ, ಕನ್ನಡ ಸಾಹಿತ್ಯ ಪರಿಷತ್ತು, ಮಿಥಿಕ್ ಸೊಸೈಟಿ, ತಾಲ್ಲೂಕು ಕಛೇರಿ ಮತ್ತು ಮುಜರಾಯಿ ಇಲಾಖೆಯ ದಾಖಲೆಗಳನ್ನು ಪರಿಶೀಲಿಸಿದಾಖಿಲಿಸುತ್ತಿದ್ದೇನೆ. ಶಾಸನ ಸಂಪುಟಗಳು, ಗೆಝೆಟಿಯರ್‌ಗಳು, ಜಾನಪದ ಗ್ರಂಥಗಳನ್ನು ಅಭ್ಯಸಿಸಿ, ಉಪಯುಕ್ತ ಮಾಹಿತಿಗಳನ್ನು ಸಂಗ್ರಹಿಸುವ ಆಲೋಚನೆ ಇದೆ. ಸಮಾಜದ ರೂಢಿ, ಸಂಪ್ರದಾಯ, ಕಥೆ, ಪುರಾಣಗಳು, ಹಬ್ಬ ಹರಿದಿನಗಳು ಮೊದಲಾದ ಸಾಂಸ್ಕೃತಿಕ ಎಳೆಗಳನ್ನು ಆಧರಿಸಿ ವೈಜ್ಞಾನಿಕ ಮಾರ್ಗದಲ್ಲಿ ಅಧ್ಯಯನ ನಡೆಸಲಾಗಿದೆ.

ಪ್ರಬಂಧದ ಸಮಗ್ರತೆ ಹಾಗೂ ವಸ್ತು ನಿಷ್ಠತೆಗೆ ಆದ್ಯತೆ ನೀಡಿ ಅಧ್ಯಯನದಲ್ಲಿ ಕ್ಷೇತ್ರ ಕಾರ್ಯಕ್ಕೆ ಹೆಚ್ಚಿನ ಸಮಯವನ್ನು ವಿನಿಯೋಗಿಸುತ್ತೇನೆ. ಇರುಳಿಗರು, ಲಂಬಾಣಿಗಳು ಮುಂತಾದ ಬುಡಕಟ್ಟು ಜನಾಂಗದ ಹಟ್ಟಿ ಹಾಗೂ ತಾಂಡ್ಯಗಳಿಗೆ ಭೇಟಿ ಕೊಟ್ಟು ಮಾಹಿತಿ ಕಲೆಹಾಕಿರುತ್ತೇನೆ. ಅಧ್ಯಯನದ ಚೌಕಟ್ಟೀನೊಳಗೆ ಬರುವ ಗ್ರಾಮಗಳ ಕ್ಷೇತ್ರಾಧ್ಯಯನ ನಡೆಸುವುದರೊಂದಿಗೆ ಮುಖ್ಯವಾದ ಸಂಗತಿಗಳ ಭಾವಚಿತ್ರಗಳನ್ನು ಸಂಗ್ರಹಿಸಿ ಪ್ರಕಟಿಸುವ ಚಿಂತನೆ ಇದೆ. ಇದಕ್ಕಾಗಿ ಕ್ಷೇತ್ರ ಕಾರ್ಯ ವಿಷಯ ಸಂಗ್ರಹಣ ಪಟ್ಟಿಯಂತೆ, ಜನಸಾಮಾನ್ಯರು ಹಾಗೂ ಪಂಡಿತ ಪಾಮರರಿಂದ ಮಾಹಿತಿ ಸಂಗ್ರಹಿರುತ್ತೇನೆ.

ಟಿಪ್ಪಣಿಗಳು

1 ಕಾನಕಾನಹಳ್ಳಿ ಚರಿತ್ರೆ, ಲೇ. ಡಾ. ಟಿ.ವಿ.ವಿ., ಪುಟ. 2.

2 ಅದೇ ಪುಟ. 7.

3 ಅದೇ ಪುಟ 16.

4 ಡಾ. ಮುನಿರಾಜಪ್ಪ, ಸಂದರ್ಶನ.

5 ಡಾ. ದೇವರಕೊಂಡಾರೆಡ್ಡಿ, ಸಂದರ್ಶನ.

ಅಧ್ಯಾಯ – 2

ಪ್ರಾಗೈತಿಹಾಸಿಕ ನೆಲೆಗಳು

ಅರ್ಧ ಸತ್ಯವನ್ನು ಮಾತ್ರ ಅನಾವರಣ ಮಾಡುತ್ತಿರುವ ಈ ಭೂಮಿ ಕೋಟಿ ಕೋಟಿ ವರ್ಷಗಳಿಂದ ತಿರುಗುತ್ತಿದೆ, ಬದಲಾಗುತ್ತಿದೆ. ಚಲನೆ ಮತ್ತು ಪರಿವರ್ತನೆಯೊಳಗೆ ಸ್ವಲ್ಪ ತೋರಿಸುತ್ತ, ಸ್ವಲ್ಪ ಬಚ್ಚಿಡುತ್ತ ಲೆಕ್ಕವಿಲ್ಲದಷ್ಟು ಅಂಶಗಳನ್ನು ತನ್ನೊಡಲೊಳಗೆ ಬಚ್ಚಿಟ್ಟುಕೊಂಡು, ಒಮ್ಮೆ ಗಂಭೀರವಾಗಿ, ಒಮ್ಮೆ ಭಯಾನಕವಾಗಿ ದೃಶ್ಯಾದೃಶ್ಯಗಳ ಆಟದಲ್ಲಿ ಸಸ್ಯ, ಪ್ರಾಣಿಗಳನ್ನು ತನ್ನ ಆಟಿಕೆ ಮಾಡಿಕೊಂಡು, ಯುಗಯುಗಗಳಿಂದ 'ಪುನರಪಿ ಮರಣಂ, ಪುನರಪಿ ಜನನಂ' ಎಂಬ ಮಂತ್ರ ಘೋಷದಿಂದ ತನ್ನ ನಟನೆಯನ್ನು ಮುಂದುವರಿಸುತ್ತಿದೆ.

ಬೆಟ್ಟಗುಡ್ಡಗಳು, ಸಸ್ಯ-ಪ್ರಾಣಿಗಳು, ನದಿ-ಕಡಲುಗಳೆಲ್ಲಾ ಸಂಕುಚಿತ ವಿಕಾಸ ಮತ್ತು ಸವೆತ, ಬೆಳವಣಿಗೆಗಳಿಂದ ರೂಪಾಂತರಗೊಂಡು ಆಶ್ರಯದ, ಆಲಿಂಗನದ ಭಾವದಿಂದ ಮಿಲಿಯನ್ ವರ್ಷಗಳಿಂದಲೂ, ಉರುಳುತ್ತಿರುವ ಮಾತೃ ಸ್ವರೂಪದ ಈ ವಿಶ್ವ ಅನೇಕ ಕುರುಹು, ದಾಖಲೆಗಳನ್ನು ಬಿಟ್ಟುಕೊಡುತ್ತಿದೆ. ತೆಂಗಿನ ಮರದ ಗರಿ ಹಣ್ಣಾಗಿ ಬಿದ್ದುಹೋದ ಮೇಲೆ, ಆ ಜಾಗದಲ್ಲಿ ಗುರುತು ಉಳಿದು ಆ ವೃಕ್ಷದ ವಯೋಮಾನ ತಿಳಿಯುವಂತೆ ಪ್ರಾಣಿ, ಪಕ್ಷಿಗಳು ಬಿಟ್ಟುಹೋದ ಗುರುತುಗಳಿಂದ, ಅವುಗಳ ವಿಕಾಸದ ಹೆಜ್ಜೆ ಗುರುತು ಪತ್ತೆ ಹಚ್ಚುವ ಕಾರ್ಯವೇ ಇತಿಹಾಸದ ಕೆಲಸ. ಗತಕಾಲದ ಚಿಹ್ನೆಗಳಿಂದ ಆಧುನಿಕತೆಯ ಪಾಠದ ಅರಿವಾಗುತ್ತದೆ.

ಈ ಭೂಮಿಯ ಇತಿಹಾಸ ಅರಿಯಲು, ಅದು ಬಿಟ್ಟು ಹೋದ ಪಳೆಯುಳಿಕೆ, ಕೊಟ್ಟು ಹೋದ ದಾಖಲೆಗಳನ್ನು ಹುಡುಕುವ ಕೆಲಸ ಮಾನವನ ಅರಿವು ಮೈತಳೆದಾಗಿನಿಂದಲೂ ನಡೆದುಕೊಂಡು

ಬರುತ್ತಿದೆ. ನಾವು ಎಷ್ಟೇ ಅಹರ್ನಿಷಿ ಕಡುಕಷ್ಟ ಬಿದ್ದು ಅನ್ವೇಷಿಸಿದರೂ, ಅದು ಅಪೂರ್ಣವೇ, ಸಿಗಬೇಕಾದದ್ದು ಇನ್ನೂ ಏನೋ ನಿಗೂಢವಾಗಿ ಇರುತ್ತದೆ. ಈ ಭೂಖಂಡದ ನೆಲ, ಜಲಗಳ ಪುರಾತತ್ವ ನೆಲೆಗಳನ್ನು ಕಂಡುಹಿಡಿಯುವ ದುಸ್ಸಾಹಸ ಮನುಷ್ಯನ ನೆಲೆ ಕಂಡುಕೊಂಡ ದಿನಗಳಿಂದಲೇ ಪ್ರಾರಂಭವಾಗಿ ಇನ್ನೂ ಮುಂದುವರಿಯುತ್ತಿದೆ.

ಪುರಾತತ್ತ್ವ

ಮನುಕುಲದ ಸಂಸ್ಕೃತಿಗಳು ಕಾಲಗರ್ಭದಲ್ಲಿ ಉಳಿಸಿಹೋದ ಅವಶೇಷಗಳನ್ನು ಅನ್ವೇಷಿಸಿ, ಉತ್ಖನನದಿಂದ ಹೊರತೆಗೆದು, ಇವುಗಳ ಆಧಾರದಿಂದ ಸಾಂಸ್ಕೃತಿಕ ಇತಿಹಾಸವನ್ನು ಪುನಾರಚಿಸುವ ಅಧ್ಯಯನ ಶಿಸ್ತು. ವಿವಿಧ ಪ್ರದೇಶಗಳಲ್ಲಿಂದ ಜನಸಮುದಾಯಗಳ ಇತಿಹಾಸವನ್ನು ತಿಳಿಯಲು ಹಾಗೂ ಪುನಾರಚಿಸಲು ಸಾಹಿತ್ಯ ಪ್ರಮುಖ ಆಕರವೆಂಬುದು ತಿಳಿದ ಸಂಗತಿ. 18–19ನೆಯ ಶತಮಾನಗಳಲ್ಲಿ ಅನಿರೀಕ್ಷಿತ ಪರಿಸರದಲ್ಲಿ ಅಸಾಮಾನ್ಯ ವಿಚಿತ್ರ ವಸ್ತುಗಳು ಕೆಲವು ಕುತೂಹಲಿಗಳ ಗಮನ ಸೆಳೆದವು ಸಾಹಿತ್ಯ ಹಾಗೂ ಇತರ ಆಕರಗಳಿಂದ ಅದುವರೆಗೆ ಅಲ್ಪ ಸ್ವಲ್ಪ ತಿಳಿದಿದ್ದ ಇತಿಹಾಸ ಕಾಲಘಟ್ಟಕ್ಕಿಂತ ಬಹಳ ಹಿಂದೆಯೇ ಮಾನವನ ಅಸ್ತಿತ್ವವಿದ್ದುದನ್ನು ಇಂಥ ಅಧ್ಯಯನ ಸೂಚಿಸಿತು. ಈ ಮಾನವನ ಜೀವನ ವಿಧಾನವನ್ನು ಗ್ರಹಿಸುವುದು ಸಾಧ್ಯವೆಂಬುದು ಇದರಿಂದ ತಿಳಿಯಿತು. ಕಲ್ಲು, ಮಣ್ಣು, ಲೋಹ, ಎಲುಬು, ದಂತ ಮುಂತಾದವುಗಳಿಂದ ಮಾಡಿದ ಈ ವಸ್ತುಗಳನ್ನು ತಮ್ಮ ರಕ್ಷಣೆ, ಜೀವನಾಭರಣಕೋಸ್ಕರ ಆಯಾ ಜನಗಳು ಮಾಡಿಕೊಂಡಿದ್ದರೆಂಬುದು ಇವುಗಳ ಕ್ರಮಬದ್ಧ ಅಧ್ಯಯನದಿಂದ ತಿಳಿದು ಕ್ರಮೇಣ ಇಂಥ ವಸ್ತುಗಳ, ಮನುಷ್ಯ ಹಾಗೂ ಪ್ರಾಣಿಗಳ ಅಸ್ಥಿಗಳಿದ್ದ ನೆಲೆಗಳ ಹುಡುಕಾಟ ಮತ್ತು ಅಧ್ಯಯನ ಒಂದು ಶಾಸ್ತ್ರವಾಗಿ ಬೆಳೆಯಿತು. ಈ ಪ್ರಕಾರದ ಅಧ್ಯಯನಗಳಿಗೆ ಒಳಪಡಿಸಬಹುದಾದ ವಸ್ತು ಅವಶೇಷಗಳೇ ಪುರಾತತ್ತ್ವ ಆಕರಗಳು. ಇಂಥ ಆಕರಗಳಿಗೆ ವೈಜ್ಞಾನಿಕ ಅಧ್ಯಯನವೇ ಪುರಾತತ್ತ್ವ ಶಾಸ್ತ್ರ (ಆರ್ಕಿಯಾಲಜಿ). ಈ ಅಧ್ಯಯನ ಕೇವಲ ಇತಿಹಾಸ ಪೂರ್ವದ, ಅಂದರೆ ಪ್ರಾಗಿತಿಹಾಸ ಕಾಲದ ಜನಸಂಸಕೃತಿಗಳ ಅವಶೇಷಗಳೆ ವೈಜ್ಞಾನಿಕ ಅಧ್ಯಯನವೇ ಪುರಾತತ್ತ್ವಶಾಸ್ತ್ರ (ಆರ್ಕಿಯಾಲಜಿ). ಈ ಅಧ್ಯಯನ ಕೇವಲ ಇತಿಹಾಸ ಪೂರ್ವದ, ಅಂದರೆ ಪ್ರಾಗಿತಿಹಾಸ ಕಾಲದ ಜನಸಂಸ್ಕೃತಿಗಳ ಅವಶೇಷಗಳ ಅಧ್ಯಯನಕ್ಕೆ ಸೀಮಿತವಾಗಿಲ್ಲ. ಇತಿಹಾಸ ಕಾಲದ ನಗರ–ಗ್ರಾಮಗಳವಿನ್ಯಾಸ, ಕೋಟೆ ಕೊತ್ತಳ, ಕೆರೆ–ಬಾವಿ, ಮನೆ–ಅರಮನೆ, ಶಿಲೆ, ಮಣ್ಣು, ದಂತ ಹಾಗೂ ಲೋಹ ವಸ್ತುಗಳು, ನಾಣ್ಯ, ವರ್ಣಚಿತ್ರ ಮೊದಲಾದ ರಾಜ–ಮಹಾರಾಜರ, ವರಿಷ್ಠ ಅಧಿಕಾರಿಗಳು ಹೊರಡಿಸಿದ. ಲೋಕೋಪಯೋಗಿ ಕಾರ್ಯಗಳಿಗೆ ಸಂಬಂಧಿಸಿದ ಶಾಸನಗಳು ಪುರಾತತ್ತ್ವ ಅಧ್ಯಯನ ವ್ಯಾಪ್ತಿಯಲ್ಲಿ ಬರುತ್ತವೆ. ಇವುಗಳ ಅಧ್ಯಯನದಿಂದ ಆಯಾಯ ಕಾಲದ ಜನಸಮುದಾಯಗಳ ರಕ್ಷಣಾ ವಿಧಾನಗಳು, ವಾಸ್ತು–ಮೂರ್ತಿ–

ಶಿಲ್ಪ ಕಲೆ, ವಾಣಿಜ್ಯ ಚಲಾವಣೆಯಲ್ಲಿದ್ದ ನಾಣ್ಯ ಪ್ರಕಾರಗಳು, ಭಾಷೆ, ಲಿಪಿಗಳ ಬೆಳವಣಿಗೆ ಮೊದಲಾದ ಸ್ವಾರಸ್ಯಕರ ಹಾಗೂ ಮಹತ್ತ್ವದ ವಿಷಯಗಳ ಸ್ಪಷ್ಟ, ನಂಬಲರ್ಹ ಚಿತ್ರ ದೊರೆಯುತ್ತದೆ.

1960ರ ದಶಕದ ತನಕ ಪುರಾತತ್ತ್ವ ಸಂಶೋಧನೆ ಕ್ರಮಬದ್ಧ ವಿಧಾನಗಳಿಂದ ಆಕರಗಳ ಸಂಗ್ರಹ, ಅವುಗಳ ವೈಜ್ಞಾನಿಕ ಅಧ್ಯಯನ ಮತ್ತು ವಿವರಣೆಗಷ್ಟೇ ಸೀಮಿತವಾಗಿತ್ತು. ಅನಂತರ ಪುರಾತತ್ತ್ವ ಆಕರಗಳಿಂದ ಆಯಾಯ ಕಾಲದ ಪರಿಸರ, ಅವು ಅಲ್ಲಿದ್ದ ಜನ ಸಮುದಾಯಗಳಿಗೆ ಒಡ್ಡುತ್ತಿದ್ದ ಸವಾಲುಗಳು, ಅವುಗಳಿಗೆ ಅನುಗುಣವಾಗಿ ತಮ್ಮ ಜೀವನವನ್ನು ಸುಗಮ ಮತ್ತು ವೃದ್ಧಿ ಮಾಡಿಕೊಳ್ಳಲು ಸಮುದಾಯಗಳು ಬೆಳೆಸಿಕೊಂಡ ಸೂಕ್ಷ್ಮ ತಿಳಿವಳಿಕೆ, ತಂತ್ರಜ್ಞಾನ ಬೆಳವಣಿಗೆ, ಸಾಧನೆ, ಏಳು – ಬೀಳುಗಳು, ಸಾಂಸ್ಕೃತಿಕ ಪ್ರಸರಣ ಮೊದಲಾದ ಒಳನೋಟಗಳನ್ನು ಪಡೆಯುವ ಪ್ರಯತ್ನಗಳು ಸುಧಾರಣೆಯಾಗುತ್ತ ಸಾಗಿವೆ. ಈ ಅಧ್ಯಯನಗಳಲ್ಲಿ ನಾನಾ ವಿಜ್ಞಾನಿಗಳ ಪಾತ್ರ ಹಾಗೂ ವೈಜ್ಞಾನಿಕ ವಿಧಾನಗಳ ಬಳಕೆ ಇತ್ತೀಚಿನ ದಶಕಗಳಲ್ಲಿ ಹೆಚ್ಚಾಗುತ್ತಿದ್ದು ಪುರಾತತ್ತ್ವ ಬಹುಮಟ್ಟಿಗೆ ಒಂದು ವೈಜ್ಞಾನಿಕ ಶಾಸ್ತ್ರವೇ ಆಗುತ್ತಿದೆ. ಈ ರೀತಿ ವಸ್ತು ಅವಶೇಷ–ನೆಲೆಗಳನ್ನು ಗುರುತಿಸಿ, ಲಕ್ಷಾನುಗಟ್ಟಲೆ ಬರ್ಷಗಳ ಹಿಂದಿನಿಂದ ನಡೆದು ಬಂದ ಮಾನವನ ದೈಹಿಕ, ಮಾನಸಿಕ ಮತ್ತು ಸಾಂಸ್ಕೃತಿಕ ಬೆಳವಣಿಗೆಯನ್ನು ಗುರುತಿಸಕುವ ಹಾಗೂ ಇದರ ಬಗ್ಗೆ ವಿವರಗಳನ್ನು ಪಡೆಯುವ ಈ ಅಧ್ಯಯನದ ಪ್ರಗತಿಯ ಒಂದು ಸ್ಥೂಲ ಚಿತ್ರವನ್ನು ಇಲ್ಲಿ ನಿರೂಪಿಸಲಾಗಿದೆ.[1]

ಸಮಾಧಿ ನಮೂನೆಗಳು : ಈ ಕೆಳಕಂಡ ನಮೂನೆಗಳನ್ನು ವಿ.ಡಿ. ಕೃಷ್ಣಸ್ವಾಮಿಯವರು ಗುರುತಿಸಿದ್ದಾರೆ.

1. **ನಿಲಸುಗಲ್ಲುಗಳು (ಮೆನ್ಹಿರ್)** : ನೇರವಾಗಿ ನಿಲ್ಲಿಸಿರುವ ಉದ್ದದ ಚಪ್ಪಡಿಗಲ್ಲು ಅಥವಾ ಬಂಡೆಗಳು ಈ ವರ್ಗಕ್ಕೆ ಸೇರುತ್ತವೆ. ಇವುಗಳ ಸುತ್ತ ಕೆಲವೊಮ್ಮೆ ಕಲ್ಲು ವೃತ್ತಗಳಿರುತ್ತವೆ. ಎರಡು ವಿಶಿಷ್ಟ ನಮೂನೆಗಳೆಂದರೆ ಸಮನಾಂತರ ಪಂಕ್ತಿಯಲ್ಲಿ ನಿಲ್ಲಿಸಿದ ಕಲ್ಲುಗಳು ಮತ್ತು ಒಂದು ನಿರ್ದಿಷ್ಟ ವಿನ್ಯಾಸದಲ್ಲಿ ನೆಟ್ಟಿರುವ ಕಲ್ಲುಗಳು (ಅಲೈನ್‌ಮೆಂಟ್).

2. **ಕಲ್ಮನೆ (ಡಾಲ್ಮೆನ್)** : ಭೂಮಟ್ಟದಲ್ಲಿ 4–5 ಚಪ್ಪಡಿಕಲ್ಲುಗಳಿಂದ ರಚಿಸಿದ ಪುಟ್ಟ ಕೋಣೆಯನ್ನು ಕಲ್ಮನೆ ಎನ್ನುವರು. ಕೋಣೆಯ ಮೇಲ್ಭಾಗವನ್ನು ಚಪ್ಪಡಿಕಲ್ಲಿನಿಂದ ಮುಚ್ಚಲಾಗಿರುತ್ತದೆ. ಕೆಲವೊಮ್ಮೆ ಯಾವುದಾದರೊಂದು ಬದಿಯ ಗೋಡೆಯಂತಿರುವ ಚಪ್ಪಡಿಕಲ್ಲಿನಲ್ಲಿ ವೃತ್ತಾಕಾರದ ಕಂಡಿಯಿರುತ್ತದೆ.

3. **ಕಲ್ಲುಗ್ಪೆಗಳು (ಕೇಯಿರ್ನ್)** : ಸಮಾಧಿಯ ಮೇಲೆ ಗುರುತಿಗಾಗಿ ಒತ್ತಾಗಿ ಗುಪ್ಪೆ ಹಾಕಿದ ಸಣ್ಣ ಕಲ್ಲುಗಳೇ ಕಲ್ಲುಗ್ಪೆಗಳು.

4. **ಕಲ್ಲುವೃತ್ತಗಳು (ಸರ್ಕಲ್)** : ಸಮಾಧಿಯ ಸುತ್ತಲೂ ಸಣ್ಣಬಂಡೆಗಳನ್ನು ನೆಲಮಟ್ಟದಲ್ಲಿ ವೃತ್ತಾಕಾರದಲ್ಲಿ ಜೋಡಿಸಿರುತ್ತಾರೆ. ಸಾಮಾನ್ಯವಾಗಿ ಒಂದು ಸಮಾಧಿಗೆ ಒಂದೇ ಕಲ್ಲು ವೃತ್ತವಿರುತ್ತದೆ. ಏಕ ಕೇಂದ್ರದ ಎರಡು ಅಥವಾ ಹೆಚ್ಚಿನ ವೃತ್ತಗಳು ವಿರಳವಾಗಿ ಕಂಡುಬಂದಿವೆ.

5. **ಅಸ್ಥಿ ಮಡಕೆಗಳು (ಅರ್ನ್)** : ಅಸ್ಥಿ ಅವಶೇಷಗಳನ್ನು ಮಡಕೆಗಳೊಳಗೆ ಇಟ್ಟು ಅವುಗಳನ್ನು ಹೂಳಲಾಗುತ್ತಿತ್ತು. ಇಂತಹ ಮಡಕೆಗಳು ಗುಡಾಣದ ಆಕಾರ–ಗಾತ್ರಗಳಲ್ಲಿರುತ್ತವೆ; ಇವುಗಳ ತಳ ಪುಟ್ಟದಾಗಿರುತ್ತದೆ. ಅಲೆಯಾಗಿ ಹೊಟ್ಟೆಯುಬ್ಬಿರುತ್ತವೆ. ಮಡಕೆಗಳನ್ನು ಗುಳಿಗಳೊಳಗೆ ಹೂಳಿರುತ್ತಾರೆ. ಭೂ ಮಟ್ಟದಲ್ಲಿ ಇವುಗಳ ಸುತ್ತ ಗುರುತಿಗಾಗಿ ಕಲ್ಲು ವೃತ್ತವಿರ ಬಹುದು ಅಥವಾ ಮಡಕೆಯ ಮೇಲೆ ಒಂದು ದೊಡ್ಡ ಚಪ್ಪಡಿಕಲ್ಲನ್ನು ಹಾಸಿರಬಹುದು.

6. **ಶವಪೆಟ್ಟಿಗೆ (ಸಾರ್ಕೋಫೇಗಸ್)** : ಈ ಪ್ರಕಾರದಲ್ಲಿ ಸುಡಾವೆಮಣ್ಣಿನಿಂದ ತಯಾರಿಸಿದ ಕಾಲಿರುವ ಪೆಟ್ಟಿಗೆಯೊಳಗೆ ಅಸ್ಥಿಯನ್ನು ಇಟ್ಟಿರುತ್ತಾರೆ.

7. **ಸಮಾಧಿದಿಬ್ಬ (ಬರೊ)** : ಗೋಲ ಅಥವಾ ಅಂಡಾಕಾರದಲ್ಲಿ ನಿರ್ಮಿಸಿರುವ ಮಣ್ಣಿನ ದಿಬ್ಬ. ಈ ಪ್ರಕಾರದಲ್ಲಿ ಕಲ್ಲನ್ನು ಬಳಸಿರುವುದಿಲ್ಲ.

8. **ನೆಲಕೋಣೆ (ಸಿಸ್ಟ್)** : ನೆಲದಡಿಯಲ್ಲಿ ರಚಿಸಿರುವ ಆಯತಾಕಾರದ ಕಲ್ಲುಚಪ್ಪಡಿಯ ಕೋಣೆ ಅಥವಾ ಪೆಟ್ಟಿಗೆ. ನಾಲ್ಕು ಚಪ್ಪಡಿಕಲ್ಲುಗಳನ್ನು ಒಂದಕ್ಕೊಂದು ಅನಿಕೆಯಾಗಿರುವಂತೆ ನಿಲ್ಲಿಸಿ ಮೇಲ್ಭಾಗವನ್ನು ಮತ್ತೊಂದು ಚಪ್ಪಡಿಕಲ್ಲಿನಿಂದ ಮುಚ್ಚಿರುತ್ತಾರೆ. ಈ ಪ್ರಕಾರದಲ್ಲಿ ಪ್ರಾದೇಶಿಕ ವೈವಿದ್ಯ ಕಂಡುಬರುತ್ತದೆ.

9. **ಟೋಪಿಕಲ್ಲು** : ಒಂದು ಬದಿ ಸಮತಲವಾಗಿದ್ದು ಇನ್ನೊಂದು ಬದಿಯಲ್ಲಿ ಅರೆ ವೃತ್ತಾಕಾರವಾಗಿರುವಂತೆ ಮತ್ತು ತುದಿಯ ಕಡೆ ಸಪೂರವಾಗುತ್ತ ಹೋಗುವಂತೆ ಕೆತ್ತಿದ 4 ಚಪ್ಪಡಿಕಲ್ಲುಗಳನ್ನು ತ್ರಿಪದಿಯ ರೀತಿಯಲ್ಲಿ ತುದಿ ಒಂದನ್ನೊಂದು ಸೇರುವಂತೆ ಓರೆಯಾಗಿ ನಿಲ್ಲಿಸಿ ಅದರ ಮೇಲೆ ಗುಮ್ಮಟಾಕರದ ಕಲ್ಲನ್ನು ಇಡಲಾಗುತ್ತದೆ.

10. **ಹೆಡೆಕಲ್ಲು (ಹುಡ್‌ಸ್ಟೋನ್)** : ಹೆಡೆಯ ರೀತಿಯಲ್ಲಿರುವ ಜಂಬುಕಲ್ಲಿನ ಶಿಲೆ.

11. **ಮಾನವಾಕೃತಿಯ ಚಪ್ಪಡಿಕಲ್ಲು (ಆಂಥ್ರೊಪೊಮಾರ್ಫ್)** : ಸು. 20ಸೆಂ.ಮೀ ದಪ್ಪದ ಚಪ್ಪಡಿಕಲ್ಲಿನಲ್ಲಿ ಕೆತ್ತಿದ ಮಾನವ ಆಕೃತಿಯನ್ನು ಹೋಲುವ ಕಲ್ಲುಗಳು. ಬೃಹತ್ತಾದ ಚಪ್ಪಡಿಕಲ್ಲಿನ ಮನುಷ್ಯಾಕಾರದ ಗೊಂಬೆಗಳು ಬೃಹತ್ ಶಿಲಾಸಂಸ್ಕೃತಿಯ ಮತ್ತೊಂದು ಅಪರೂಪದ ಅವಶೇಷಗಳು. ಇಂತಹ ಅವಶೇಷಗಳು ಕಳೆದ ಶತಮಾನದ ಕೊನೆಯ ದಶಕಗಳಿಂದ ಹೆಚ್ಚು ಬೆಳಕಿಗೆ ಬಂದಿವೆ.

ಭಾರತದ ಪುರಾತತ್ವ ನೆಲೆಗಳನ್ನು ಹುಡುಕಿದವರಲ್ಲಿ ವಿದೇಶೀಯರೇ ಹೆಚ್ಚು. ಭಾರತೀಯರಿಗೆ ಅದರ ಶಾಸ್ತ್ರೀಯ ಕಲೆಯನ್ನು ಕಲಿಸಿದವರು ಅವರೇ. 'ಪ್ರವಾಸೀ ಕಂಡ ಇಂಡಿಯಾ'[2] ಎಂಬ ಪುಸ್ತಕದಲ್ಲಿ "ವಿದೇಶಿಯರ ಕುತೂಹಲ, ಅವರ ಕಾಳಜಿ, ತಲ್ಲೀನತೆ, ಅವರಿಗಿದ್ದ ಬದ್ಧತೆ ಹಠಯೋಗದ ಕಠೋರ ಸಾಹಸ; ಸಾವಿಗೂ ಅಂಜದೆ ಅವರು ತೋರಿಸುತ್ತಿದ್ದ ಮುನ್ನಡೆಯುವ ಗುಣದಿಂದಾಗಿ ಭಾರತೀಯರ ಸಾಂಸ್ಕೃತಿಕ ಇತಿಹಾಸವನ್ನು ರಚಿಸಲು ಸಾಧ್ಯವಾಯಿತು" ಎಂಬ ಹೆಚ್.ಎಲ್. ನಾಗೇಗೌಡರ ಮಾತು ಪುರಾತನ ಚರಿತ್ರೆಯನ್ನು ರಚಿಸಲು, ತಿಳಿಯಲು ಮುನ್ನಡೆಯಲು ಅನುಕೂಲವಾಯಿತು. ಕರ್ನಾಟಕದ ಪುರಾತತ್ವ ನೆಲೆಗಳ ಬಗೆಗಳು, ಅವುಗಳ ವಿಧಗಳು ಕನ್ನಡ ನಾಡಿನ ಪ್ರಾಗೈತಿಹಾಸಿಕ ವಿಚಾರಗಳನ್ನು ಹಿಂದಿನ ಅಧ್ಯಾಯಗಳಲ್ಲಿ ವಿವರವಾಗಿ ನೋಡಿದ್ದೇವೆ.

ಕಾನಕಾನಹಳ್ಳಿ ಪ್ರದೇಶದ ಪ್ರಾಗೈತಿಹಾಸಿಕ ನೆಲೆಗಳ ಹುಡುಕಾಟದಲ್ಲಿ ತೊಡಗಿದಾಗ ಅಲ್ಲಿಯ ಬೆಟ್ಟಗಳು, ಗವಿಗಳು, ಬಂಡೆಗಲ್ಲುಗಳ ಆಕಾರಗಳು, ಅರಣ್ಯಪ್ರದೇಶಗಳು, ಇಳಿಜಾರು ಕಣಿವೆಗಳು, ಜಲಪಾತಗಳು, ನದಿಗಳು ಇತ್ಯಾದಿ ಕಾಲಾಂತರದ ಭೂಭಾಗಗಳನ್ನು ಅಧ್ಯಯನ ಮಾಡಿದಾಗ ಅನೇಕ ಅಂಶಗಳು ಬೆಳಕಿಗೆ ಬಂದವು. ಇಂತಹ ಪ್ರಕೃತಿ ತಾಣದಲ್ಲಿ ಪ್ರಾಚೀನ ಮಾನವರು ವಾಸಮಾಡಿದುದರ ಬಗ್ಗೆ ಅನೇಕ ಶಿಲಾಸಮಾದಿಗಳು ಪಾಂಡುಗುಡಿಗಳೆಂದು ಇಂದಿಗೂ ಕರೆಯಲ್ಪಡುತ್ತಿರುವ ಚಿಕ್ಕ ಚಿಕ್ಕ ಗುಹಾಮನೆಗಳು ಸಿಕ್ಕುತ್ತವೆ. ಇವೇ ಶಿಲಾ ಸಮಾಧಿಗಳು.

ಗೊಟ್ಟಿಗೆಹಳ್ಳಿ ಶಿಲಾ ಸಮಾಧಿಗಳು

ಗೊಟ್ಟಿಗೆ ಹಳ್ಳಿಯು ಕಾನಕಾನಹಳ್ಳಿಯಿಂದ 25 ಕಿ.ಮೀಟರ್ ದೂರದಲ್ಲಿದೆ. ಈಗ ಬೆಳೆದಿರುವ ಊರಿನ ಹೊರ ವಲಯದಲ್ಲಿ ಸುತ್ತಲೂ ಸುಮಾರು ಮುನ್ನೂರಕ್ಕು ಹೆಚ್ಚು ಶಿಲಾಸಮಾಧಿಗಳು ಕಂಡು ಬರುತ್ತವೆ. ಇವುಗಳ ಕಾಲ ಸುಮಾರು ಕ್ರಿ.ಪೂ. 800 ಇರಬಹುದು. ಈ ಊರು ಜೇನುಕಲ್ಲು ಬೆಟ್ಟದೊಡ್ಡರೆ, ಬಯಣ್ಣರೆ, ಮುನಿಕ್ಲಲುಬೆಟ್ಟ, ಮಾಸ್ತಿಕಲ್ಲು ಬೆಟ್ಟಗಳು, ದಟ್ಟವಾದ ಕಾಡುಗಳಿಂದ ಸುತ್ತುವರಿದಿದೆ.

ಗೊಟ್ಟಿಗೆಹಳ್ಳಿ ಎಂಬುದು 'ಕೊಟ್ಟಿಗೆ' ಎಂಬ ಪದದಿಂದ ಬಂದಿರಬಹುದು. ಪ್ರಾಚೀನ ಕಾಲದಿಂದ ಇಂದಿಗೂ ದನಗಳ ಪಾಲನೆ, ಕೃಷಿಕರ ಉಪಕಸುಬಾಗಿದ್ದು ಅವುಗಳ ಆಶ್ರಯತಾಣ ಕೊಟ್ಟಿಗೆ>ಗೊಟ್ಟಿಗೆ ಆಗಿರಬಹುದು. ಕಿಟ್ಟೆಲ್ ಪದ ಕೋಶದ ಪ್ರಕಾರ ಗೊಟ್ಟು ಎಂದರೆ "The state of being hard or very scare" ಎಂಬ ಅರ್ಥವಿದೆ.[3]

ಈ ಹಳ್ಳಿಗೆ ದಕ್ಷಿಣ ಭಾಗದಲ್ಲಿ ಒಂದು ಫರ್ಲಾಂಗು ದೂರದಲ್ಲಿ ಬಯಣ್ಣರೆ ಎಂಬ ಕಲ್ಲು ಗುಡ್ಡವಿದ್ದು, ಇಲ್ಲಿ 30ಕ್ಕೂ ಹೆಚ್ಚು ಶಿಲಾ ಸಮಾಧಿಗಳಿದ್ದು ಕೆಲವು ಹಾಳಾಗಿ, 12 ಮಾತ್ರ ಸುಸ್ಥಿತಿಯಲ್ಲಿವೆ.

ಈ ಶಿಲಾಸಮಾಧಿಗಳು ನಾಲ್ಕು ಕಡೆಗಳಿಂದಲೂ ಚಪ್ಪಟೆ ಕಲ್ಲುಗಳನ್ನು ನೆಟ್ಟಗೆ ನಿಲ್ಲಿಸಿ ಮೇಲೆ ಮುಚ್ಚಳಿಕೆ ಕಲ್ಲುಗಳನ್ನು ಇಟ್ಟಿರುತ್ತಾರೆ. ಕೆಲವು ಸಮಾಧಿಗಳಲ್ಲಿ ಮೂರು ಕಡೆ ಮಾತ್ರ ಇದ್ದು, ನೆಲ ಹಾಸುಕಲ್ಲು ಇರುತ್ತದೆ. ಇನ್ನು ಕೆಲವಕ್ಕೆ ಹಾಸುಕಲ್ಲು ಇರುವುದಿಲ್ಲ, ಎಲ್ಲ ಶಿಲಾ ಸಮಾಧಿಗಳು ಒರೆ ಆಗದಂತೆ ಸಣ್ಣ ಸಣ್ಣ ಆಸರೆ ಕಲ್ಲುಗಳನ್ನು ಒಡ್ಡಿದ್ದಾರೆ. ಸ್ಥಳೀಯರು, ಇವುಗಳನ್ನು ಪಾಂಡುಗುಡಿಗಳೆಂದು ಕರೆದು, ಪೂರ್ವಕಾಲದಲ್ಲಿ ಕುಬ್ಜ ಮಾನವರು ಇದರೊಳಗೆ ವಾಸಿಸುತ್ತಿದ್ದರೆಂದು ಮಾತಾಡಿಕೊಳ್ಳುತ್ತಾರೆ. ಇವುಗಳು ಕೆಲವು ಕಡೆ ಒಂದರ ಪಕ್ಕದಲ್ಲಿ ಒಂದರಂತೆ ಇವೆ. ಮತ್ತೆ ಕೆಲವು ಕಡೆ ಬೇರೆ ಬೇರೆಯಾಗಿವೆ.

ಇವುಗಳ ಮುಚ್ಚಳ ಕಲ್ಲಿನ ಆಕಾರದ ಆಧಾರ ಮೇಲೆ ದೊಡ್ಡವರು ಮಕ್ಕಳ ಶಿಲಾಸಮಾಧಿಗಳೆಂದು ವಿಂಗಡಿಸಬಹುದು. ದೊಡ್ಡವರ ಶಿಲಾ ಸಮಾಧಿಯ ಮುಚ್ಚಳಿಕೆ ಕಲ್ಲು 350 ಸೆ.ಮೀ. ಉದ್ದ, 275 ಸೆ.ಮೀ. ಅಗಲ, 33 ಸೆ.ಮೀ ದಪ್ಪ ಇವೆ. ಮಕ್ಕಳ ಶಿಲಾ ಸಮಾಧಿಯ ಉದ್ದ 145 ಸೆ.ಮೀ. ಅಗಲ 84 ಸೆ.ಮೀ ಇದೆ.

ದೊಡ್ಡರೆಯು ಗೊಟ್ಟಿಗೆಹಳ್ಳಿಯಿಂದ ಪೂರ್ವಕ್ಕೆ ಸುಮಾರು ಅರ್ಧ ಫರ್ಲಾಂಗು ದೂರದಲ್ಲಿದೆ. ಇಲ್ಲಿ ನಾಲ್ಕು ಶಿಲಾಸಮಾಧಿಗಳು ಇವೆ. ಅವುಗಳಲ್ಲಿ ಎರಡು ರಚನೆಯಲ್ಲಿ ತೊಟ್ಟಿಯ ಆಕಾರದಲ್ಲಿವೆ. ನಾಲ್ಕು ಕಡೆಗಳಿಗೂ ನಾಲ್ಕು ಕಲ್ಲು ಚಪ್ಪಡಿಗಳನ್ನು ಅಡ್ಡವಾಗಿ ನಿಲ್ಲಿಸಿ ಮೇಲೆ ಮುಚ್ಚಳಿಕೆ ಕಲ್ಲನ್ನು ಇರಿಸಿದ್ದು, ಮುಂಭಾಗದ ಕಲ್ಲು ಚಪ್ಪಡಿಯಲ್ಲಿ ಒಳಗೆ ಕಾಣಲು ಸ್ವಲ್ಪವೇ ಜಾಗವಿದೆ. ಈ ಶಿಲಾಸಮಾಧಿಗಳು ಯಲಹಂಕದ ಬಳಿಯ ಚಿಕ್ಕಜಾಲದಲ್ಲಿ ದೊರೆತಿರುವ ಬೃಹತ್ ಶಿಲಾಯುಗದ ಶಿಲಾಸಮಾಧಿಗಳನ್ನೂ ಮತ್ತು ಸಾವನದುರ್ಗ, ಬೆಂಗಳೂರಿನ ಬಳಿಯ ಕಣ್ಣೂರುಗಳಲ್ಲಿ ದೊರೆತಿರುವ ಶಿಲಾ ಸಮಾಧಿಗಳನ್ನು ಹೋಲುತ್ತವೆ. ಮತ್ತೆರಡು ಸಮಾಧಿಗಳಿಗೆ ಈಗಾಗಲೆ ದೊಡ್ಡರೆಯಲ್ಲಿ ಸಿಕ್ಕಿರುವ ಶಿಲಾಸಮಾಧಿಗಳಂತೆ ಸುತ್ತಲೂ ಆಸರೆಗಾಗಿ ತುಂಡು ಕಲ್ಲುಗಳನು ಎತ್ತರಕ್ಕೆ ಜೋಡಿಸಿ ಮುಚ್ಚಿದ ಕಲ್ಲಿದೆ.

ಮುನಿಕಲ್ಲು ಬೆಟ್ಟವು ಗೊಟ್ಟಿಗೆಹಳ್ಳಿಯಿಂದ ಉತ್ತರಕ್ಕೆ ಸುಮಾರು 2 ಕಿ.ಮೀ. ದೂರದಲ್ಲಿರುವ ಚಿಕ್ಕ ಬೆಟ್ಟ. ಇಲ್ಲಿ ಸುಮಾರು ಇನ್ನೂರ ಐವತ್ತಕ್ಕೂ ಹೆಚ್ಚು ಶಿಲಾ ಸಮಾಧಿಗಳು ಕಂಡುಬಂದಿದ್ದು ರಚನೆಯಲ್ಲಿ ಇವುಗಳು ವಿವಿಧ ಬಗೆಯವುಗಳಾಗಿವೆ. ತುಂಡು, ತುಂಡು ಕಲ್ಲುಗಳನ್ನು ಒಂದರ ಮೇಲೊಂದರಂತೆ ನಾಲ್ಕು ಮೂಲೆಗಳಲ್ಲೂ ಇರಿಸಿ ಮೇಲೆ ಮುಚ್ಚಳ ಕಲ್ಲನ್ನು ನಿಲ್ಲಿಸಿದ್ದು ಒಳಗೆ ಭೂಮಿಯ ಮೇಲೆ ಹಾಸುಗಲ್ಲೊಂದನ್ನು ಹಾಸಿ, ಪಕ್ಕದಲ್ಲಿ ಸಣ್ಣ ಸಣ್ಣ ಕಲ್ಲುಗಳನ್ನು ಹಾಕಿದ್ದಾರೆ. ಇವುಗಳೂ ಸಹ ಈಗಾಗಲೇ ದೊರೆತಿರುವ ದೊಡ್ಡರೆ, ಬಯಣ್ಣರೆಗಳ ಶಿಲಾಸಮಾಧಿಗಳನ್ನು ಹೋಲುತ್ತವೆ. ಕೆಲವು ಶಿಲಾಸಮಾಧಿಗಳಿಗೆ ಸುತ್ತಲೂ ತುಂಡು ಕಲ್ಲುಗಳ ಎತ್ತರದ ಆಸರೆಗೆ ಮೇಲೆ 250 ಸೆಂ.ಮೀ. ಗೂ ಹೆಚ್ಚಿನ ಉದ್ದದ ಮುಚ್ಚಳ ಕಲ್ಲುಗಳನ್ನು ಇರಿಸಿದ್ದಾರೆ. ಇವುಗಳು ಸ್ವಾಭಾವಿಕವಾಗಿ ದೊರೆಯುವ ಕಲ್ಲುಚಪ್ಪಡಿಗಳಾಗಿದ್ದು ಕೃತಕವಾಗಿ ಮಾಡಿದವುಗಳೋ ಎಂಬಂತಿವೆ. ಮತ್ತೆ ಕೆಲವು ಸಮಾಧಿಗಳನ್ನು ಕಮಾನಾಕಾರದ ತುಂಡು ಕಲ್ಲುಗಳ

ಎತ್ತರದ ಸಾಲಿಗೆ ಮುಂದೆ ಒಂದು ಸಾಲು ಇಂತಹುದೆ ತುಂಡು ಕಲ್ಲುಗಳ ಎತ್ತರದ ಸಾಲನ್ನು ನಿಲ್ಲಿಸಿ ಮೇಲೆ ಮುಚ್ಚಳ ಕಲ್ಲನ್ನು ಹಾಕಿ ಮಾಡಲಾಗಿದೆ. ಇನ್ನೂ ಕೆಲವು ಶಿಲಾಸಮಾಧಿಗಳಿಗೆ ವಿಸ್ತಾರವಾದ ಮುಚ್ಚಳ ಕಲ್ಲಿಗೆ ಕೆಳಗೆ ಸುತ್ತಲೂ ಸಣ್ಣ ಸಣ್ಣ ಕಲ್ಲುಗಳ ಆಸರೆಯನ್ನು ಕೊಟ್ಟು ಒಳಭಾಗಕ್ಕೆ ಸ್ವಲ್ಪವೇ ಜಾಗ ಬಿಟ್ಟಿದೆ. ಇವುಗಳಿಗೆ ಒಳಭಾಗದ ಭೂಮಿಯ ಮೇಲೆ ಕಲ್ಲು ಚಪ್ಪಡಿಯ ಹಾಸು ಇರುವುದಿಲ್ಲ. ಇದೇ ರೀತಿ ಇನ್ನೂ ಹಲವು ಶಿಲಾ ಸಮಾಧಿಗಳಿದ್ದು, ಕಮಾನಾಕಾರದಲ್ಲಿ ಸುತ್ತಲೂ ತುಂಡು ಕಲ್ಲುಗಳ ಆಸರೆಕೊಟ್ಟು ಮೇಲೆ ಮುಚ್ಚಳದ ಕಲ್ಲನ್ನು ಹಾಸಿದ್ದರೂ ಮುಂಭಾಗ ಖಾಲಿ ಇದೆ.

ಕೆಲವು ಶಿಲಾಸಮಾಧಿಗಳಿಗೆ ವೃತ್ತಾಕಾರದ ತುಂಡು ಕಲ್ಲುಗಳ ಎತ್ತರವಾದ ಆಸರೆಯನ್ನು ಹಾಕಿ ಮೇಲೆ ಮುಚ್ಚಳಿಕೆ ಕಲ್ಲನ್ನು ಹಾಕಿದ್ದರೂ ಒಳಭಾಗವನ್ನು ಸಣ್ಣ ಸಣ್ಣ ಚಪ್ಪಡಿಗಳಿಂದ ಜೋಡಿಸಿ ನಿರ್ಮಾಣ ಮಾಡಿರುವ ಕೌಶಲ ಗಮನಸೆಳೆಯುತ್ತದೆ. ಶಿಲಾಸಮಾಧಿಯೊಂದರ ಮುಂಭಾಗದ ಬಳಿಯಲ್ಲೆ ಒಂದು ಸಣ್ಣ ಗುಳಿಯೊಂದು ಇದ್ದು ಇದು ಅಳತೆಯಲ್ಲಿ ಉದ್ದ 38 ಸೆಂ.ಮೀ. ಗಳಾಗಿದ್ದು ಅದರ ಸುತ್ತಲೂ ಸಣ್ಣ ಸಣ್ಣ ಚಕ್ಕೆ ಕಲ್ಲುಗಳನ್ನು ನಿಲ್ಲಿಸಿ ನೀರು ನಿಲ್ಲುವ ಆಸರೆಗಾಗಿ ನಿರ್ಮಾಣಮಾಡಿರುವಂತಿದೆ.

ಮುನಿಕಲ್ಲು ಬೆಟ್ಟದ ಎದುರುಕಡೆ ಇರುವ ಮಾಸ್ತಿಕಲ್ಲು ಬೆಟ್ಟದಲ್ಲಿಯೂ ಇಂತಹುದೇ ಹಲವಾರು ಶಿಲಾಸಮಾಧಿಗಳಿವೆ. ಮುನಿಕಲ್ಲು ಬೆಟ್ಟದ ಶಿಲಾಸಮಾಧಿಗಳಲ್ಲಿ ಕೆಂಪು ಮತ್ತು ಬೂದುಬಣ್ಣದ ಮಣ್ಣಿನಪಾತ್ರೆಯು ದೊರೆತಿದ್ದು ಹೊಳಪುಳ್ಳದ್ದಾಗಿದ್ದು ಹಗುರವಾಗಿದೆ. ಸಣ್ಣ ಅಂಚಿನಿಂದ ಕೂಡಿದೆ. ಸಣ್ಣ ಕುಡಿಕೆಯ ಚೂರೆಂದು ಸಿಕ್ಕಿದ್ದು ಇದೂ ಸಹ ತೆಳುವಾಗಿದೆ. ಅಲ್ಲದೆ ಹೊಳಪುಳ್ಳ ಕಪ್ಪುಬಣ್ಣದ ಮತ್ತು ಕೆಂಪು ಬಣ್ಣದ ಮಡಕೆ ಚೂರುಗಳು, ಬೂದು ಬಣ್ಣದ ಮಡಕೆಯ ಚೂರುಗಳು, ದಪ್ಪ ತುಟಿಯ ಅಂಚುಳ್ಳ ಮಡಕೆಯ ಭಾಗಗಳೂ, ಒಳಭಾಗದಲ್ಲಿ ಕಪ್ಪು ಮತ್ತು ಮೇಲೆ ಕೆಂಪು ಬಣ್ಣ ಇರುವ ಮಡಕೆಯ ಚೂರುಗಳು, ಕಪ್ಪು, ಕೆಂಪು ಮಡಕೆಯ ಚೂರುಗಳು ದೊರೆತಿವೆ. ಇವುಗಳ ಜೊತೆಯಲ್ಲಿ ಮಧ್ಯದಲ್ಲಿ ಉಂಗುರಾಕಾರದ ರಂಧ್ರ ಇರುವ ದುಂಡಾದ ಮಣ್ಣಿನ ವಸ್ತುವೊಂದು ದೊರೆತಿದ್ದು ಕೆಂಪು ಮಣ್ಣಿನಿಂದ ಮಾಡಿದ ಈ ವಸ್ತುವಿಗೆ ಮೇಲೆ ಬಿಳಿಯ ಬಣ್ಣವನ್ನು ಲೇಪಿಸಿದ್ದಾರೆ. ಸುಟ್ಟ ಮಣ್ಣಿನ ವಸ್ತು ಇದಾಗಿದ್ದು ಇದನ್ನು ಯಾವ ಉದ್ದೇಶಕ್ಕಾಗಿ ಬಳಸುತ್ತಿದ್ದರೆಂದು ಊಹಿಸುವುದು ಕಷ್ಟವಾಗಿದೆ.

ಪಾದ್ದಾರೆಕಲ್ಲು, ರಾಗಳಿಕಲ್ಲು, ಮನಗಲ್ಲು, ಮುನಿನಗರಬೆಟ್ಟ, ಮಾಸ್ತಿಕಲ್ಲು ಬೆಟ್ಟ, ಮುತ್ರಾಯನಕಲ್ಲು, ಕೊಂಬಿನಕಲ್ಲು, ಜೇನುಕಲ್ಲುಗಳಿಂದ ಆವರಿಸಿರುವ ಗೊಟ್ಟಿಗೆ ಹಳ್ಳಿಯು ಒಂದು ಬೃಹತ್ ಶಿಲಾಯುಗದ ಸ್ಥಳವಾಗಿದ್ದು ಈ ಶಿಲಾಯುಗದ ಕಾಲ ಸುಮಾರು ಕ್ರಿ.ಪೂ. 800 ಎಂದು ಗೊಟ್ಟಿಗೇಹಳ್ಳಿಯಿಂದ ಸುಮಾರು 12 ಕಿ.ಮೀ. ದೂರದಲ್ಲಿರುವ ಬನ್ನೇರುಘಟ್ಟ ಮತ್ತು ಸುತ್ತಮುತ್ತ ದೊರೆತಿರುವ ಬೃಹತ್ ಶಿಲಾಯುಗದ ಸ್ಥಳಗಳನ್ನು ಡಾ. ದೇವರ ಕೊಂಡಾರೆಡ್ಡಿಯವರು ಗುರುತಿಸಿದ್ದಾರೆ, ಅದನ್ನು ಗಮನಿಸಬಹುದು.

ಉದಾರಹಳ್ಳಿ ಬೃಹತ್ ಶಿಲಾಸಮಾಧಿಗಳು

ಕ್ಲೋಸ್‌ಪೇಟೆ (ರಾಮನಗರ) ಕಡೆಯಿಂದ ಕಾನಕಾನಹಳ್ಳಿಯ ಕಡೆಗೆ ಬರುವಾಗ ದಾರಿಯಲ್ಲಿ ಸಿಗುವ ಉದಾರಹಳ್ಳಿ ಹಾಗೂ ಅದರ ಸುತ್ತಮುತ್ತ ಇರುವ ಹಳ್ಳಿಗಳಾದ ಅಳ್ಳಿಮಾರನಹಳ್ಳಿ, ಹೊನ್ನಿಗನಹಳ್ಳಿ, ಬೇಲಕುಪ್ಪೆ, ವಾಡೇದೊಡ್ಡಿ, ಬಸವನಹಳ್ಳಿ, ಕೊತ್ತನೂರು, ಬಾಣಂತಮಾರಮ್ಮ ಬೆಟ್ಟದ ಬದಿಯ ಅರಣ್ಯದ ಭಾಗಗಳಲ್ಲಿ ಸುಮಾರು ಕ್ರಿ.ಪೂ. 800ಕ್ಕೆ ಸೇರಿರಬಹುದಾದ ಬೃಹತ್ ಶಿಲಾಯುಗದ ಸಮಾಧಿಗಳು ಕಂಡುಬಂದಿವೆ.

ಪ್ರಸ್ತುತ ಉದಾರಹಳ್ಳಿಯಲ್ಲಿ 30ಕ್ಕೂ ಹೆಚ್ಚು ಬೃಹತ್ ಶಿಲಾಗೋರಿಗಳು ಕಂಡುಬಂದಿವೆ. 30 ಅಡಿ ವ್ಯಾಸವಿರುವ ಮಧ್ಯಭಾಗದಲ್ಲಿ 12 ರಿಂದ 15 ಅಡಿ ಅಳತೆಯ ನಿಲುವುಗಲ್ಲುಗಳು ಇದ್ದು 20 ಅಡಿ ಅಳತೆಯ ಮುಚ್ಚುಕಲ್ಲುಗಳಿವೆ. ಇವುಗಳನ್ನು ಟೋಪಿಕಲ್ಲುಗಳೆಂದು ಕರೆಯುತ್ತಾರೆ. ಇವುಗಳೊಳಗೆ ಕೆಂಪುಬಣ್ಣದ ಮಡಕೆ ಚೂರುಗಳಲ್ಲಿ ಬೂದಿ ಕೂಡ ದೊರೆತಿದೆ.

ಸಿದ್ದೇದೇವರ ಬೆಟ್ಟದ ಬುಡದ ಹೊಲವೊಂದರಲ್ಲಿ ಕ್ರಿ.ಶ. 8ನೇ ಶತಮಾನಕ್ಕಿಂತ ಹಿಂದಿನದಿರಬಹುದಾದ ಗೋರಿಯಿದೆ. ಈ ಗೋರಿಯ ಶಿಲೆಯ ಮೇಲೆ ಸುಖಾಸೀನ ಮುದ್ರೆಯಿಂದ ಚುತುರ್ಭುಜದ ದುರ್ಗಿಯ ಮೂರ್ತಿಯೊಂದು ಇಲ್ಲಿಯೇ ದೊರೆತಿದೆ.

ಉದಾರಹಳ್ಳಿಗೆ ಸ್ವಲ್ಪ ದೂರದಲ್ಲಿರುವ ಲಿಂಗದಹಳ್ಳಿಯಲ್ಲಿ ಸುಮಾರು ಕ್ರಿ.ಶ. 11–12ನೇ ಶತಮಾನಕ್ಕೆ ಸೇರಿದೆ ಎನ್ನಬಹುದಾದ, ರಸ್ತೆ ಬದಿಯ ಮಣ್ಣಿನಲ್ಲಿ ಮುಚ್ಚಿ ಹೋಗಿದ್ದ ದೇವಿ ಮೂರ್ತಿಯೊಂದು ಸಿಕ್ಕಿದೆ. ಇದನ್ನು ಸ್ಥಳೀಯರು, ಮೂರ್ತಿಯ ಪೀಠದ ಕೆಳಗೆ ಇಗ್ಗುಂಡು ಕೆತ್ತನೆ (ಆಣಟಛ – ಃಜಟಟ) ವಿಶೇಷತೆಯನ್ನು ಅರಿತು, ಇದನ್ನು 'ಬಂಡಿ ಮಾಂಕಾಳಮ್ಮ' ಎಂಬ ಹೆಸರಿನಿಂದ ಕರೆಯುತ್ತಾರೆ. ಇಲ್ಲಿಯೇ ಇನ್ನೆರಡು ಭಿನ್ನವಾಗಿರುವ ಮೂರ್ತಿಗಳಿವೆ. ಇವುಗಳ ಶಿರೋಭಾಗದಲ್ಲಿ ಮುಡಿಯನ್ನು ಜ್ವಾಲಾರೂಪದಲ್ಲಿ ತೋರಿಸಿರುವುದು ತಮಿಳುನಾಡಿನಲ್ಲಿ ಇಂತಹದೇ ಮೂರ್ತಿಗಳು ಹೆಚ್ಚಾಗಿರುವುದು ಕಂಡುಬಂದಿರುವುದರಿಂದ, ಕ್ರಿ.ಶ. 9–10ನೇ ಶತಮಾನದ ಕಾನಕಾನಹಳ್ಳಿಯನ್ನು ಆಳಿದ ಚೋಳರ ಕಾಲದ ಶಿಲಾಮೂರ್ತಿಗಳಾಗಿವೆ.

ಇಲ್ಲಿನ ಮತ್ತೊಂದು ಮೂರ್ತಿ ಎರಡು ಅಡಿ ಎತ್ತರ, ಒಂದೂವರೆ ಅಡಿ ಅಗಲವಿದ್ದು ಇದೂ ಸಹ ಚತುರ್ಭುಜವನ್ನು ಹೊಂದಿದೆ. ಬಲಗಾಲನ್ನು ಪೀಠದ ಮೇಲೆ ಮಡಚಿ ಕುಳಿತು ಎಡಗಾಲನ್ನು ಪೀಠದಿಂದ ಇಳಿಬಿಟ್ಟಿರುವ ಅರ್ಧ ಪದ್ಮಾಸನಾವಸ್ಥೆಯಲ್ಲಿದೆ. ಮೇಲಿನ ಮೂರ್ತಿಯ ರೀತಿಯಲ್ಲಿಯೇ ಈ ಶಿಲ್ಪದಲ್ಲಿಯೂ ವೀರಾವೇಶತನವಿದ್ದು ಬಲದ ಮೇಲಿನ ಕೈಯಲ್ಲಿ ಕತ್ತಿ, ಕೆಳಗಿನ ಕೈನಲ್ಲಿ ಡಮರುವಿದೆ.

ಎಡದ ಮೇಲಿನ ಕೈನಲ್ಲಿ ತ್ರಿಶೂಲ, ಕೆಳಗಿನ ಕೈನಲ್ಲಿ ಪಾಣಿ ಬಟ್ಟಲು ಇದೆ. ತ್ರಿಶೂಲವಿರುವ ಭಾಗ ಈ ಶಿಲ್ಪದಲ್ಲಿಯೂ ಒಡೆದುಹೋಗಿದ್ದು ಶಿರದ ಕೇಶದಿಂದ ಜ್ವಾಲೆ ಭುಗಿಲೆದ್ದಿದೆ. ಈ ಮೂರ್ತಿ ಗ್ರಾನೈಟ್ ಕಲ್ಲಿನಿಂದ ಮಾಡಿಸಿರುವುದರಿಂದ ಶಿಲ್ಪಿಗೆ ಹೆಚ್ಚಿನ ಅಲಂಕಾರ ಮೂಡಿಸಲು ಸಾಧ್ಯವಾಗಿಲ್ಲ. ಶರೀರದಲ್ಲಿ ವಸ್ತ್ರ, ಮುಂಗೈ, ತೋಳು, ಕಾಲುಕಡಗಳನ್ನು ಮಾತ್ರ ಬಿಡಿಸಲಾಗಿದೆ. ಈ ಶಿಲ್ಪದಲ್ಲಿ ದೇವಿಯ ಕುಚದ ಭಾಗ ಒಡೆದಿದೆ.

ಒಂದೂವರೆ ಅಡಿ ಎತ್ತರ, ಒಂದೂಮುಕ್ಕಾಲು ಅಡಿ ಅಗಲವಿರುವ ಮತ್ತೊಂದು ದುರ್ಗಿಯ ವಿಗ್ರಹ ಅಷ್ಟೇನೂ ಸುಂದರವಿಲ್ಲ. ಬಲಗಾಲು ಮಡಚಿ ಎಡಗಾಲನ್ನು ಇಳಿಬಿಟ್ಟು ಕುಳಿತಿರುವಂತೆ ಚಿತ್ರಿಸಿದ್ದು ಚತುರ್ಭುಜೆಯಾದ ಈ ಶಿಲ್ಪದ ಬಲದ ಮುಂಗೈನಲ್ಲಿ ಪಾಣಿಬಟ್ಟಲು ಹಿಂಗೈನಲ್ಲಿ ತ್ರಿಶೂಲವಿದೆ. ಕಲ್ಲಿನ ಮೇಲಿನ ಭಾಗ ಒಡೆದಿರುವುದರಿಂದ ಕತ್ತಿ ತ್ರಿಶೂಲಗಳು ಮುರಿದು ಹೋಗಿವೆ. ಶಿರವೂ ಸಹ ತುಸು ಒಡೆದಿದ್ದು ಮುಖವೂ ಸಹ ಅಸ್ಪಷ್ಟವಾಗಿದೆ. ಶಿರೋಮುಡಿಯನ್ನು ಎತ್ತಿ ಕಟ್ಟಿರುವುದು ಗಮನಾರ್ಹ.

ಈ ಮೇಲೆ ತಿಳಿಸಿರುವ ಶಿಲ್ಪಗಳಲ್ಲಿ ಮೂರು ಮತ್ತು ನಾಲ್ಕನೆಯವುಗಳ ಶಿಲ್ಪಗಳು ದೇವಿಯ ವೀರಾವೇಶದ ರೂಪವನ್ನೂ ಶಿರದಲ್ಲಿ ಭುಗಿಲೆದ್ದಿರುವ ಜ್ವಾಲೆಯನ್ನೂ ಹೊಂದಿವೆ ಎಂದು ಮೇಲೆ ತಿಳಿಸಲಾಗಿದೆಯಷ್ಟೆ. ಈ ಬಗೆಯ ಶಿಲ್ಪಗಳು ದಕ್ಷಿಣ ಭಾರತದ ಇತರೆಡೆಗಳಲ್ಲೂ ದೊರೆಯುತ್ತವೆ. ಆದುದರಿಂದ ಇದನ್ನು ಇಲ್ಲಿ ತುಸು ವಿಶದವಾಗಿ ಪರಿಶೀಲಿಸುವದು ಸೂಕ್ತವಾದುದಾಗಿದೆ.[4]

ಕಂಚಿಪುರಂನ ಏಕಾಂಬರನಾಥ ದೇವಾಲಯದಲ್ಲಿರುವ ಪ್ರಳಯ – ಬಂಧನ – ಶಕ್ತಿ ಅಥವಾ ಪ್ರಳಯ – ಕಾಲ – ಶಕ್ತಿಗೂ ಸಹ ಶಿರೋಭಾಗದಲ್ಲಿ ಜ್ವಾಲೆ ಭುಗಿಲೇಳುವಂತೆ ಇದೆ. ಆದರೆ ಕೈಯಲ್ಲಿ ಹಿಡಿದಿರುವ ಆಯುಧಗಳಲ್ಲಿ ವ್ಯತ್ಯಾಸವಿದ್ದು ಕೈಗಳು ನಾಲ್ಕಕ್ಕಿಂತ ಹೆಚ್ಚಿಗೆ ಇವೆ.

ಅಡಂಜನೂರು (ತಮಿಳುನಾಡು)ನ ತಿರುವನಂತೇಶ್ವರ ಮುಂದಿರದಲ್ಲಿರುವ ಸುಂದಲಮ್ಮನ್ ಮೂರ್ತಿಗೂ ಸಹಜಜ್ವಾಲೆ ಭುಗಿಲೆದ್ದಿದ್ದು ಅದು ನಿಂತ ನಿಲವು ಚತುರ್ಭುಜಧಾರಿಯಾಗಿದ್ದು ಆಯುಧಗಳಲ್ಲಿ ವ್ಯತ್ಯಾಸವಿದೆ.

ಮಳಕ್ಕಡೇನ್‌ಸೂರ್ (ತಮಿಳುನಾಡು) ನಲ್ಲಿರುವ ಶ್ರೀ ಅಮೃತಕಾಳೇಶ್ವರ ಮಂದಿರದಲ್ಲಿರುವ ಭೈರವಿಗೂ ಸಹ ಭುಗಿಲೆದ್ದ ಜ್ವಾಲೆ ಇದೆ.

ಮದ್ರಾಸ್ ಮ್ಯೂಸಿಯಂನಲ್ಲಿರುವ ಭೈರವಕಾಳಿಗೂ ಸಹ ಭುಗಿಲೆದ್ದ ಜ್ವಾಲೆ ಇದೆ.

ಚಿಂಗಲ್‌ಪೇಟೆ ಜಿಲ್ಲೆಯ ಅಲಿನ್‌ಜಿವಕ್ಕಂನಲ್ಲಿನ ಶ್ರೀ ವಿರೂಪಾಕ್ಷೇಶ್ವರರ್ ಮಂದಿರದಲ್ಲಿರುವ ಪ್ರತ್ಯಾಂಗಿರ ದುರ್ಗಿಗೂ ಇದೇ ರೀತಿಯ ಭುಗಿಲೆದ್ದ ಜ್ವಾಲೆ ಇದೆ.

ಸೇಲಂ ಜಿಲ್ಲೆಯ ಹೊಸೂರು ಚಂದ್ರಚೂಡಸ್ವಾಮಿ ಮಂದಿರದಲ್ಲಿರುವ ನಂದಾದೇವಿಗೂ ಸಹ ಶಿರದಲ್ಲಿ ಜ್ವಾಲೆ ಭುಗಿಲೆದ್ದಿದೆ.

ರಾಮನಾಥಪುರಂ ಜಿಲ್ಲೆಯ ಕೋವಿಲೂರ್‌ನಲ್ಲಿನ ಕೊಟ್ಟವಲೇಶ್ವರ ಮಂದಿರದ ಮಹಾಕಾಳಿಗೂ ಇದೇ ರೀತಿಯ ಜ್ವಾಲೆ ಇದೆ. ಇನ್ನುಳಿದ ಮೂರ್ತಿಗಳ ಪಟ್ಟಿಯನ್ನು ಹೀಗೆ ನೋಡಬಹುದು.

1. ಭದ್ರಕಾಳಿ ಮದ್ರಾಸ್ ಮ್ಯೂಸಿಯಂ

2. ಕಾಳಿ ಶ್ರೀರಂಗನಾಥ ದೇವಾಲಯ, ಶ್ರೀರಂಗಂ

3. ನರ್ತನಕಾಳಿ ಶ್ರೀದೇವರ ಸಿಂಗಪೆರುಮಾಳ್‌ರ ದೇವಾಲಯ, ತಿರುವಲನ್‌ಕಾಡು

4. ಕಾಳಿ ಶ್ರೀ ಸುಂದರೇಶ್ವರರ್ ದೇವಾಲಯ, ಪಲಯನೂರ್, ತಂಜಾವೂರ್ ಜಿಲ್ಲೆ

5. ಬಾಲವಿಕರ್ಣಿಕ ಏಕಾಮ್ರನಾಥ ದೇವಲಯ, ಕಂಚಿ

6. ಭದ್ರಕಾಳಿ ಶ್ರೀ ದಂಡಾಯುಧಸ್ವಾಮಿ ದೇವಾಲಯ, ಪಳನಿ

7. ಕಾಳಿ ಸೋಮಾನಂದ ಸ್ವಾಮಿ ದೇವಾಲಯ, ನಿಡೂರು

8. ಅಗ್ನಿದುರ್ಗ ಬೃಂದಾವನ್, ಮಥುರ (ಉ.ಪ್ರ)

ಇಷ್ಟಲ್ಲದೇ ರಿಪುಮಾರಿದುರ್ಗಾ ಸಂಸಾನಕಾಳಿ, ರುದ್ರಾಂಶದುರ್ಗಾ, ಅಗ್ನಿದುರ್ಗಾ ಹಾಗೂ ಕಾತ್ಯಾಯಿನಿಗೂ ಸಹ ಹೀಗೆಯೇ ಇರುತ್ತದೆ. ಇವುಗಳಲ್ಲಿ ಶಿರೋಕೇಶದಲ್ಲಿ ಅಗ್ನಿಜ್ವಾಲೆ ಭುಗಿಲೆದ್ದಿದ್ದು ವೀರಾವೇಶದಿಂದ ಆಸೀನವಾಗಿರುವ ಮೂರ್ತಿಗಳ ವಿವರಗಳು ಇಂತಿವೆ.

1. ಮಾರಿಯಮ್ಮನ್ : ಶ್ರೀ ಅನುರಾಮನ್ ದೇವಾಲಯ, ಪಳಯಕೋಟ್ಟೈ

2. ಪ್ರಳಯಕಾಲ ಶಕ್ತಿ ಅಥವಾ ಪ್ರಳಯ ಬಂಧನ ಶಕ್ತಿ : ಏಕಾಂಬರನಾಥ ದೇವಾಲಯ ಕಾಂಚೀಪುರಂ

3. ಕಾಳಿ : ಶ್ರೀ ಸುಂದರೇಶ್ವರರ್ ದೇವಾಲಯ, ಪಳಯನೂರು, ತಂಜಾವೂರು ಜಿಲ್ಲೆ

4. ಭದ್ರಕಾಳಿ : ಶ್ರೀ ದಂಡಾಯುಧಸ್ವಾಮಿ ದೇವಾಲಯ, ಪಳನಿ

5. ಕಾಳಿ : ಶ್ರೀ ಸೋಮನಾಥಸ್ವಾಮಿ ದೇವಾಲಯ, ನಿಡೂರು

ದುರ್ಗೆಯ ಮೂರ್ತಿಗಳಲ್ಲಿ ಶಿರೋಮುಡಿ ಜ್ವಾಲೆಯ ರೀತಿಯಲ್ಲಿ ಭುಗಿಲೆದ್ದಿದ್ದು, ವೀರಾವೇಶದಿಂದ ಆಸೀನವಾಗಿರುವ ಶಿಲ್ಪಗಳು ಅತಿ ವಿರಳವಾಗಿ ದೊರೆಯುತ್ತವೆ. ಕನಕಪುರ ತಾಲ್ಲೂಕಿನಲ್ಲಿ ದುರ್ಗಿಯ ರೂಪಗಳನ್ನು ಕಾಳಿ, ಭೈರವಿ, ಭದ್ರಕಾಳಿ, ಮಾರಮ್ಮ ಎಂದು ಕರೆಯುವುದರಿಂದ ಉದಾರಹಳ್ಳಿಯ ಈ ಶಿಲ್ಪಗಳು ಮೇಲಿನ ಮೂರ್ತಿಗಳಲ್ಲಿ ಭೈರವಿಯನ್ನು ಹೋಲುವುದರಿಂದ ಅವುಗಳು ಪೂಜಿತವಾಗುತ್ತಿದ್ದಾಗ ಜನತೆಯಿಂದ ಭೈರವಿಯೆಂದು ಕರೆಸಿಕೊಳ್ಳುತ್ತಿದ್ದಿರಬೇಕು. ಮೇಲಿನ ನಾಲ್ಕು ಶಿಲ್ಪಗಳು ಕ್ರಿ.ಶ. 9ನೇ ಶತಮಾನದಿಂದ 13ನೇ ಶತಮಾನಕ್ಕೆ ಸೇರಿದವುಗಳಾಗಿದ್ದು ಆ ವೇಳೆಯಲ್ಲಿ ಈ ಸ್ಥಳದಲ್ಲಿ ಮಾತೃದೇವತಾರಾಧನೆ ಹೆಚ್ಚಾಗಿ ಪ್ರಚಲಿತದಲ್ಲಿದ್ದಂತೆ ತೋರುತ್ತದೆ.

ಹರಿಹರ

ಸಾತನೂರಿನ ಪಕ್ಕದಲ್ಲೆ ಇರುವ ಈ ಗ್ರಾಮ ಪರಿಸರ ಪ್ರಾಗೈತಿಹಾಸಿಕ ಕಾಲದಿಂದಲೂ ಜನವಸತಿಯ ಬೀಡಾಗಿದ್ದುದಕ್ಕೆ ಇಲ್ಲಿ ದೊರೆತಿರುವ ಆಯುಧಗಳೇ ಸಾಕ್ಷಿ. 27 ಕೈ ಕೊಡಲಿಗಳು, ಕೈಬಾಚಿಗಳು, ಈಗ ಇವನ್ನು ಬ್ಯಾಟರಾಯನ ಗುಡಿಯಲ್ಲಿ ಇಡಲಾಗಿದೆ. ಇದು ಸುಮಾರು ಕ್ರಿ.ಪೂ. 3000 ವರ್ಷಗಳಷ್ಟು ಪ್ರಾಚೀನ ಕಾಲದವಾಗಿವೆ. ಇದೇ ಊರಿನ ಪಕ್ಕದಲ್ಲಿರುವ ಕುಪ್ಪೆದೊಡ್ಡಿಯಲ್ಲಿ ಕ್ರಿ.ಪೂ. ಸುಮಾರು 800 ವರ್ಷಗಳ ಹಿಂದಿನ ಶಿಲಾಸಮಾಧಿಗಳು 50 ಕ್ಕಿಂತ ಹೆಚ್ಚು ಬೆಳಕಿಗೆ ಬಂದಿವೆ.

ಬಸವನಬೆಟ್ಟ ಅರಣ್ಯದಲ್ಲಿ ಪ್ರಾಗೈತಿಹಾಸಿಕ ಅವಶೇಷಗಳು

ಕಾನಕಾನಹಳ್ಳಿ ಹತ್ತಿರದ ಪಶ್ಚಿಮಕ್ಕೆ ಬಸವಬೆಟ್ಟ ಅರಣ್ಯ ಪ್ರದೇಶದಲ್ಲಿ ನವಶಿಲಾಯುಗಕ್ಕೆ (ಕ್ರಿ.ಪೂ. 3100) ಸೇರಿದ ಹಾಗೂ ಬೃಹತ್ ಶಿಲಾಯುಗದ (ಕ್ರಿ.ಪೂ. 800) ಶಿಲಾಯುಧಗಳು ಮತ್ತು ಕಲ್ಲುಗೋರಿಗಳು ಅಲ್ಲದೆ, ಕ್ರಿ.ಶ. 15ನೇ ಶತಮಾನದ ಶಾಸನವೊಂದು ದೊರೆತಿದೆ.

ಅರಣ್ಯದಲ್ಲಿರುವ ಕದಂಬ ರಾಮನ ಗುಡಿಯ ಬಂಡೆಯ ಮೇಲೆ ಶಾಸನವು ಪತ್ತೆಯಾಗಿದ್ದು, ಈ ಅರಣ್ಯ ಪ್ರದೇಶ ಪ್ರಾಗೈತಿಹಾಸಿಕ ಕಾಲದಿಂದಲೂ ಜನವ ವಸತಿಯುಳ್ಳ ಸಾಂಸ್ಕೃತಿಕ ಕೇಂದ್ರವಾಗಿತ್ತು ಎಂದು ತಿಳಿದುಬಂದಿದೆ.

ಬಸವಬೆಟ್ಟದ ಬ್ಯಾಟರಾಯನ ಗುಡಿಯ ಬಳಿ ನವಶಿಲಾಯುಗಕ್ಕೆ ಸೇರಿದ ಇಪ್ಪತ್ತೇಳು ಕೈಕೊಡಲಿ ಮತ್ತು ಕೈಬಾಚಿಗಳು ದೊರೆತಿವೆ. ಇವುಗಳಲ್ಲಿ ಇಪ್ಪತ್ತಾರು ಆಯುಧಗಳು ಕರಿಯ ಟ್ರಾಪ್ ಕಲ್ಲಿನಲ್ಲಿ ಹಾಗೂ ಮತ್ತೊಂದನ್ನು ಗ್ರಾನೈಟ್‌ನಲ್ಲಿ ತಯಾರಿಸಲಾಗಿದೆ.

ಇವುಗಳೆಲ್ಲಾ ತ್ರಿಕೋಣ ಆಕಾರದಲ್ಲಿದ್ದು, ಅಡ್ಡ ಛೇದದಲ್ಲಿ ದುಂಡು ವೃತ್ತಾಕಾರದಲ್ಲಿವೆ. ಕೆಳಗಿನ ಅಲಗು ನೇರವಾಗಿದ್ದು, ಮೇಲೆ ಹೋದಂತೆ ಸಣ್ಣದಾಗುತ್ತಾ ಚೂಪು ಮತ್ತು ಬಟ್ಟತಲೆ ಹೊಂದಿವೆ.

ಆಯುಧಗಳ ತಯಾರಿಕೆಯಲ್ಲಿ ನವ ಶಿಲಾಯುಗದ ಜನರು ಮಧ್ಯ ಶಿಲಾಯುಗ ಮತ್ತು ಆದಿಶಿಲಾಯುಗದ ಜನರಿಗಿಂತ ಹೆಚ್ಚು ತಾಂತ್ರಿಕತೆ ಹೊಂದಿರುವುದನ್ನು ಈ ಆಯುಧಗಳಲ್ಲಿ ಕಾಣಬಹುದಾಗಿದೆ.

ಈಗ ದೊರೆತಿರುವ ಆಯುಧಗಳಲ್ಲಿ ದೊಡ್ಡ ಆಯುಧವು 7 ಅಂಗುಲ ಉದ್ದ, 3 ಅಂಗುಲ ಅಗಲವಿದ್ದರೆ, ಅತಿ ಚಿಕ್ಕ ಶಿಲಾಯುಧ 3 ಅಂಗುಲ ಉದ್ದ, 2 ಅಂಗುಲ ಅಗಲವಾಗಿದೆ.

ಗೋರಿಗಳು

ಇಲ್ಲಿಯ ಸಂಬಾಪುರದ ಬಳಿಯ ಕೊಕ್ಕಲ್ಲುಪುರದಲ್ಲಿ ಬೃಹತ್ ಶಿಲಾಯುಗ ಕಾಲದ 70ಕ್ಕೂ ಹೆಚ್ಚು ಕಂಡಿಕಲ್ಲು ಗೋರಿಗಳು ಪತ್ತೆಯಾಗಿವೆ. ಇವುಗಳಲ್ಲಿ ಕೆಂಪುಬಣ್ಣದ ಮಡಕೆಯ ಚೂರುಗಳು ದೊರೆತಿವೆ. ಪೂರ್ವಕ್ಕೆ ಮುಖ ಮಾಡಿರುವ ಇವುಗಳ ಕಲ್ಲು ಚಪ್ಪಡಿಗಳಲ್ಲಿ 2 ಅಡಿ ವ್ಯಾಸದ ವೃತ್ತಾಕಾರದ ಕಿಂಡಿಗಳಿವೆ.

ಕದಂಬರಾಯನ ಗುಡಿಯ ಬಂಡೆಯ ಮೇಲೆ ದೊರೆತಿರುವ ಶಾಸನದ ಪ್ರಕಾರ ಬಸವಬೆಟ್ಟ ಅರಣ್ಯ ಪ್ರದೇಶ ಐದು ಸಾವಿರ ವರ್ಷಗಳಿಂದ ಮಾನವನ ನಿರಂತರ ಚಟುವಟಿಕೆಯ ಸ್ಥಳವೆಂದು ನಿರ್ಧರಿಸಬಹುದಾಗಿದೆ.

ಸಾತನೂರು ಸುತ್ತಮುತ್ತಲ ಶಿಲಾಗೋರಿಗಳು ಮತ್ತು ಮೂರ್ತಿಗಳು

ಈ ಊರಿನ ಪಕ್ಕದಲ್ಲೇ ಇರುವ ವೀರೇಗೌಡನ ದೊಡ್ಡಿ ಬಳಿಯ ಶ್ರವಣನ ಅರೆ ಎಂಬ 'ಬೋಳರೆ'ಗೆ (ಬೋಳುಗುಡ್ಡ) ಪೂರ್ವದಿಕ್ಕಿನಲ್ಲಿ 15 ಕ್ಕೂ ಹೆಚ್ಚು ಬೃಹತ್ ಶಿಲಾಯುಗದ ಗೋರಿಗಳು ಕಂಡುಬಂದಿದ್ದು ಇವುಗಳಲ್ಲಿ ಕೆಲವು, ಜನರ ಅಸಡ್ಡೆ ಮತ್ತು ಅಜ್ಞಾನದಿಂದ ಹಾಳಾಗಿವೆ. 15 ಅಡಿ ಸುತ್ತಳತೆ 13 ಅಡಿ ಒಳ ಅಳತೆಯ ಈ ಗೋರಿಗಳಿಗೆ ಮುಚ್ಚುಕಲ್ಲುಗಳೇ ಇಲ್ಲ. ಓರೆಯಾಗಿಕೊಟ್ಟಿದ್ದ ಆಸರೆ ಕಲ್ಲುಗಳನ್ನು ಸಮಾಧಿಯ ಮೇಲೆ ಮುಚ್ಚುಕಲ್ಲಿನಂತೆ ಹೇರಲಾಗಿದೆ. ಇಲ್ಲಿ ಒಂದು ವಿಷಯವನ್ನು ವಿಶೇಷವಾಗಿ ಗಮನಿಸಬಹುದು. ಅದೇನೆಂದರೆ ಶ್ರವಣಬೆಳಗೊಳ ಸಮೀಪದ ಕಂಬದಳ್ಳಿಯ ಬಳಿಯ ಅರೆಯನ್ನೂ 'ಬೋಳರೆ' ಎಂದು ಕರೆಯುತ್ತಾರೆ.

ಇದು ಒಂದು ಜೈನ ವಸತಿ ಕೇಂದ್ರವಾಗಿತ್ತು ಎಂಬುದಕ್ಕೆ ಭಗ್ನಗೊಂಡ ಜೈನ ತೀರ್ಥಂಕರರ ಶಿಲಾಮೂರ್ತಿ ಇರುವ ಶಿಥಿಲ ಶಿಲಾಮಂಟಪವಿದೆ. ಕ್ರಿ.ಶ. 9ನೇಯ ಶತಮಾನಕ್ಕೆ ಸೇರಿದೆ ಎನ್ನಬಹುದಾದ ಈ ಮಂಟಪ ಮೂಲತಃ 32, ಕಲ್ಲು ಕಂಬದಿಂದ ನಿರ್ಮಾಣವಾಗಿದ್ದರ ಕುರುಹಿದ್ದು ಇದನ್ನು ಸುಲಭವಾಗಿ ತಳಭಾಗದ ವೇದಿಕೆಯ ಆಧಾರದ ಮೇಲೆ ಜೈನಮಂದಿರವೆಂದು ಹೇಳಬಹುದು ಈ

ಜಿನಮೂರ್ತಿಯು ಆದಿನಾಥನೆಂದು ಊಹಿಸಲಾಗಿದೆ. ಈಗಲೂ, ಎಂದೋ ಜೈನರಿಗೂ, ಶೈವರಿಗೂ ಸಂಘರ್ಷವಾಗಿ ಜಿನ ನೆಲೆ ಧ್ವಂಸವಾಗಿರಬೇಕೆಂದು ಜನ ಮಾತಾಡಿಕೊಳ್ಳುತ್ತಾರೆ.[5]

"ಮಲೆ ಮಹದೇಶ್ವರನಿಂದ ಈ ಜಿನ ಮೂರ್ತಿಯ ಶಿರಶ್ಛೇದನವಾಯಿತ್ತೆನ್ನುವುದು, ಛಿನ್ನವಾದ ಶಿರಸ್ಸನ್ನು 'ಲಿಂಗದ ಕೆರೆ'ಯ ಬಳಿಯಿರಿಸಿ ಪೂಜಿಸಲಾಗುತ್ತದೆ ಎಂಬುದು ಇಲ್ಲಿನ ಐತಿಹ್ಯ. ಶ್ರವಣ ಬೆಳಗೊಳ, ಕಲ್ಯ ಮೊದಲಾದೆಡೆ ನಡೆದಿರುವಂತೆ ಸಂಘರ್ಷಗಳು ಇಲ್ಲಿಯೂ ನಡೆದಿರಬಹುದು. ಆಗ, ಜೈನರ ವಲಸೆ ಮತ್ತು ಮತಾಂತರ ನಡೆದಿರಲೂಬಹುದು. ಹತ್ತಿರದ ಕೆಮ್ಮಾಳೆ ಎಂಬ ಊರಿನಿಂದ ಬಸವಲಿಂಗಪ್ಪ ಎಂಬ ಜೈನಧರ್ಮದಿಂದ ಶೈವಮತಾಂತರಿಯೊಬ್ಬ ಇಲ್ಲಿ ಪೂಜೆಗೆ ಆಗಾಗ ಬರುವನೆಂದು, ಇವನ ಪೂರ್ವಿಕರು ಜೈನರಾಗಿದ್ದರೆಂದು ಈ ಐತಿಹ್ಯದ ಮುಖ್ಯಾಂಶ.

ಇದೇ ಪ್ರದೇಶಕ್ಕೆ ಸೇರಿದ ದೂರದ ಹುಣಸನಹಳ್ಳಿಯಲ್ಲಿ ಜೈನ ಮತ್ತು ಇಸ್ಲಾಂ ಧರ್ಮ ಸಂಬಂಧಿ ಕುರುಹುಗಳು, ಐತಿಹ್ಯದ ರೂಪದಲ್ಲಿ ರೂಢಿಯಲ್ಲಿವೆ. 'ದಿಗಂಬರ ಸ್ವಾಮಿಗಳ ಒಡ್ಡು' ಎಂಬ ಪ್ರದೇಶದಲ್ಲಿ ಜೈನ ಮುನಿಯೊಬ್ಬ ಕಲ್ಲಿನ ಆಸರೆಯ ಛಾವಣಿಗೆ ಕಬ್ಬಿಣದ ಕೊಕ್ಕೆ ಜಿಗಿದು ಹಗ್ಗ ಕಟ್ಟಿ ಉಯ್ಯಾಲೆಯಾಡುತ್ತಿದ್ದನು ಎಂಬುದಕ್ಕೆ ಈಗಲೂ ಜಿನ ಮುನಿಯ ಪಾದಗಳು ಇರುವುದು ಜನ ಮಾತಾಡುವುದಕ್ಕೆ ಪುಷ್ಟಿ ನೀಡುತ್ತವೆ. ಅಲ್ಲಿ ಸಮಾಧಿಯಾಕಾರದ ಸ್ಮಾರಕವನ್ನು ಅವರು ತೋರಿಸುತ್ತಾರೆ. 16ನೇ ಶತಮಾನದ ನಂತರ 'ಇಮಾಮ್ ಸಾಬ್' ಎಂಬ ಮುಸ್ಲಿಂ ಸಂತನೊಬ್ಬನು ಇಲ್ಲಿ ವಾಸವಿದ್ದನೆಂದು ಹೇಳುತ್ತಾರೆ. ಈ ಅವಶೇಷಗಳು ಹತ್ತಿರದ ಹಳ್ಳಿಯ ವಿಜಯನಗರ ಕಾಲದ ಊರೊಂದಕ್ಕೆ ಸಂಬಂಧಿಸಿದ್ದು ಎಂಬ ವಾದವೂ ಇದೆ. ಈ ಬೆಟ್ಟದ ಆಸು–ಪಾಸುಗಳಲ್ಲಿ ಪ್ರಾಕ್ ಚಾರಿತ್ರ ಕಾಲದ ಕುರುಹುಗಳಾದ ಬೃಹತ್ ಶಿಲಾಯುಗದ ಅವಶೇಷಗಳು ಕಂಡುಬಂದಿದ್ದು ಈ ಸ್ಥಳವೂ ಸಹ ಪ್ರಾಗ್ಯೈತಿಹಾಸಿಕ ಕಾಲದಿಂದಲೂ ಮಾನವನ ನಿರಂತರ ಒಡನಾಟವಾಗಿತ್ತೆಂದು ಪರಿಗಣಿಸಬಹುದು.

ಸಾತನೂರಿನಿಂದ ಮುತ್ತತ್ತಿಗೆ ಹೋಗುವ ಮಾರ್ಗ ಮಧ್ಯದ ಕಾಲೇರಿ ಕಣಿವೆಯ ಒಂದು ಊರು 'ಗದ್ದೆಮಡಿ ನಕ್ಕಲು'. ಇಲ್ಲಿ 10 ಶಿಲಾಸಮಾಧಿಗಳಿವೆ. ಇವು ಬೃಹತ್ ಶಿಲಾಯುಗಕ್ಕೆ ಸೇರಿದವುಗಳು. ಸ್ಥಳೀಯರು ಇವನ್ನು ನೆಲ ಮೋರಿಗಳು ಅಥವಾ ಪಾಂಡವರ ಗುಡಿಗಳೆಂದು ಕರೆಯುತ್ತಾರೆ. ಈ ಜಾಗದಲ್ಲಿ ಕೆಂಪು ಮತ್ತು ಕಪ್ಪು ಬಣ್ಣದ ನುಣುಪಾದ ಮಡಕೆಚೂರುಗಳು, ಕಬ್ಬಿಣದ ಕಿಟ್ಟದ ಕಲ್ಲುಗಳು ಕಂಡುಬಂದಿವೆ.

ಇಲ್ಲಿಗೆ ಹತ್ತಿರದ 'ನಾಗರಸನ ಕೋಟೆ' ಎಂಬ ಹಳ್ಳಿಯ ಪಶ್ಚಿಮಕ್ಕೆ ಒಂದು ಕಿ.ಮೋ. ದೂರದಲ್ಲಿರುವುದು ಬಂಡೆಗುಡಿ. ಇದನ್ನು ಬಂಡೆ ಬಸಪ್ಪನ ದೇವಾಲಯ ಎನ್ನುತ್ತಾರೆ. ಸುಮಾರು 50

ಅಡಿ ಎತ್ತರದ ಈ ಬಂಡೆಯ ಮೇಲೆ ನೀರಿನ ದೋಣಿಯೂ ಕೆಲವು ಕಲ್ಲಾಸರೆಗಳೂ ಇವೆ. ಇಲ್ಲಿ ಐದು ಶಿಲಾಗೋರಿಗಳಿವೆ. ಇವು ನಿಲುವುಗಲ್ಲು, ಆಸರೆಕಲ್ಲು, ಮುಚ್ಚಳಿಕೆ ಕಲ್ಲುಗಳಿಂದ ಕೂಡಿವೆ.

ಮರಳೇ ಗವೀಮಠದ ಶಿಲಾ ಗೋರಿಗಳು

ಮರಳೆ ಗವಿಮಠದ ಉತ್ತರಕ್ಕೆ ಅರ್ಧ ಕಿ.ಮೀ. ದೂರದಲ್ಲಿರುವ ಪರ್ವತಕೊಳದ ಹತ್ತಿರ ಮುನೇಶ್ವರಬೆಟ್ಟದ ಪಕ್ಕದಲ್ಲಿ 20 ಶಿಲಾಗೋರಿಗಳು ಕಂಡುಬಂದಿವೆ. ಚಿಕ್ಕ ದೊಡ್ಡ ವೃತ್ತವ್ಯಾಸದ ರಚನೆಗಳು. ಇವು ಕೆಲವಕ್ಕೆ ಮುಚ್ಚಳಿಕೆ ಕಲ್ಲುಗಳುಂಟು. ಈ ಮಠವಿರುವ ಹಳ್ಳಿಯಿಂದ ಉತ್ತರದಿಕ್ಕಿಗೆ ಸ್ವಲ್ಪ ದೂರದಲ್ಲಿ ಮತ್ತೆ 10 ಶಿಲಾಗೋರಿಗಳನ್ನು ಕಾಣಬಹುದಾಗಿದೆ. ಮತ್ತೆ ಪೂರ್ವದಿಕ್ಕಿಗೆ ಮುನೇಶ್ವರ ಬೆಟ್ಟದ ಮಗ್ಗುಲಲ್ಲಿ 20 ಇಂಥ ಸಮಾಧಿಗಳಿವೆ ಇಲ್ಲಿ ಪ್ರಾಗೈತಿಹಾಸಿಕ ಕಾಲಮಾನದ ಕಪ್ಪು – ಕೆಂಪು ಬಣ್ಣದ ಹೊಳಪಿನ ಮಡಕೆ ಚೂರುಗಳು ದೊರೆತಿವೆ.

ಹೀಗೆಯೇ ಮೇಕೆದಾಟುವಿಗೆ ಹೋಗುವ ಮಾರ್ಗದಲ್ಲಿ ತಿಗಳರ ಹೊಸಹಳ್ಳಿಯ ಹತ್ತಿರವೂ 10 ಶಿಲಾಗೋರಿಗಳು ಕಂಡುಬಂದಿವೆ. ಸಮೀಪದ ಹುಲಿಕಲ್ಲುವಿನಲ್ಲಿ ಕೂಡ ಇಂಥ ಗೋರಿಯನ್ನು ಅಗೆದಾಗ ಬೂದುಬಣ್ಣದ ಮುಗ್ಗಾಲು ಮಣ್ಣಿನ ಮಡಕೆಯಲ್ಲಿ ಮನುಷ್ಯರ ಮೂಳೆಗಳು ದೊರೆತವು ಎಂದು ಹೇಳಲಾಗಿದೆ.[6]

ಸಾತನೂರಿಗೆ ಸುಮಾರು ಮೂರು ಕಿ.ಮೀ. ದಲ್ಲಿರುವ ಸಂಬೇಗೌಡನದೊಡ್ಡಿಗೆ ಬೋಳರೆ ಎನ್ನುವುದು ಸುಮಾರು ಒಂದು ಕಿ.ಮೀ. ದೂರದಲ್ಲಿದೆ. ಇಲ್ಲಿ 'ಪಾಯು ಒಡ್ಡು'ಗಳು ಎಂದು ಕರೆಯುವ 20ಕ್ಕೂ ಹೆಚ್ಚು ಶಿಲಾ ಗೋರಿಗಳಿವೆ. ಇಲ್ಲಿಯ ಗೋರಿಗಳ ವೃತ್ತವ್ಯಾಸ ಬೇರೆ ಬೇರೆ ಪ್ರಮಾಣದಲ್ಲಿದೆ. ಈ ಸ್ಥಳದಿಂದ ಉತ್ತರಕ್ಕೆ ಕಾವರೆ ಬೋಳರೆಗಳ ನಡುವೆ, ಮಾದಮ್ಮರೆಯ ಸಮೀಪ ಇರುವ ದಪ್ಪಗಾತ್ರದ ನಿಲವುಗಲ್ಲು ಸಹ ಗಮನಾರ್ಹ.

ಸೂಳೆಕಲ್‌ಮಠದ ಗುಹಾಚಿತ್ರಗಳು

ಸೂಳೆಕಲ್ ಮಠವು ಕನಕಪುರ ತಾಲ್ಲೂಕು ಹಲಸೂರಿನಿಂದ ದಕ್ಷಿಣಕ್ಕೆ ಸುಮಾರು 8 ಕಿ.ಮಿ. ದೂರದಲ್ಲಿದೆ. ಇದು ಅಕ್ಕರಗಲ್ಲು, ಜೇನುಕಲ್ಲು, ಆಬಲಸೊಣೆ, ಕುಂಡರಗಲ್ಲು, ತುಡುಬೇಒಡ್ಡಿನಏಣು, ಮುತ್ತಾಸನಕೆರೆ ಹಗ್ಗು, ಕೆಂಬರೆ, ಭದ್ರಕಾಳಮ್ಮನ ಒಡ್ಡು ಇವುಗಳಿಂದ ಸುತ್ತುವರೆಯಲ್ಪಟ್ಟಿದೆ. ಸೂಳೆಕಲ್ಲು ಎಂಬುದಕ್ಕೆ ಜನಪದ ಕಥೆಯೊಂದಿದ್ದು, ಆದರೇ ವಾಸ್ತವವಾಗಿ ಪರಿಶೀಲಿಸಿದಾಗ ಸೀಳುಕಲ್ಲು ಸೂಳೇಕಲ್ಲು ಆಗಿ ಬಳಕೆಗೊಂಡಿದೆ. ದೊಡ್ಡದಾದ ಬಂಡೆಯಿಂದ ಬೇರ್ಪಟ್ಟು ಬಿದ್ದಿರುವ ಕಲ್ಲಿನ ಮೇಲೆಯೇ ಕುಳಿತು ಕಲ್ಲುಮನೆಯ ಒಳಚಾವಣಿಯಲ್ಲಿ ಚಿತ್ರಗಳನ್ನು ಬರೆದಿರುವುದನ್ನು ಗಮನಿಸಬಹುದು.

ಈ ಕಲ್ಲು ಮನೆಯ ಒಳಭಾಗ ರೂಟ್‌ಸ್ಕ್ವೇರ್ ಆಕಾರದಲ್ಲಿದೆ. ಒಳಭಾಗದಲ್ಲಿ ಅಗಲ 56 ಅಡಿಗಳು ಉದ್ದ 24 ಅಡಿಗಳು ಅದೇ ಕಲ್ಲುಮನೆಯ ಬಲಗಡೆಯ ಮತ್ತೊಂದು ಭಾಗದ ಅಗಲ 20 ಅಡಿಗಳು ಉದ್ದ 12 ಅಡಿಗಳು.

ಈ ಅರ್ಧಭಾಗದ ಮೇಲೆ ಒಂಬತ್ತು ಲಂಬ ರೇಖೆಗಳಿಗೆ ಮೇಲೊಂದು ಅಡ್ಡರೇಖೆಯಿಂದ ತೋರಣದ ರೀತಿಯಲ್ಲಿ ಬಿಳಿಬಣ್ಣದ ಚಿತ್ರ ಮೂಡಿಸಿದ್ದಾರೆ. ಇದು ಬಹುಶಃ ಧಾರ್ಮಿಕಾಚರಣೆಯ ನಂಬಿಕೆಯ ಸಂಕೇತವೋ ಅಥವಾ ಕುಟುಂಬವರ್ಗದ ಎಣಿಕೆಯೋ ಆಗಿರಬಹುದು. ಇದರ ಕೆಳಗಡೆಯೇ ರಂಗೋಲಿ ರೀತಿಯ ಮಂಡಲವಿದ್ದು, ಬಿಳಿಯ ಬಣ್ಣದಿಂದ ರಚಿತವಾದ ಈ ಮಂಡಲವು ದಪ್ಪ ರೇಖೆಗಳಿಂದ ರಚಿತವಾದುದಾಗಿದೆ.

ಬಳಿಯಲ್ಲೆ ಬಿಳಿ ಬಣ್ಣದಲ್ಲಿ ಬರೆದ ಇಬ್ಬರ ಮನುಷ್ಯರ ರೇಖಾಚಿತ್ರವಿದ್ದು ದಪ್ಪ ರೇಖೆಗಳಿಂದ ಮೂಡಿಸಿದ ಈ ಮಾನವರ ಕೈಗಳಲ್ಲಿ ಆಯುಧಗಳನ್ನು ಗಮನಿಸಬಹುದಾಗಿದೆ.

ಐದು ಲಂಬ ರೇಖೆಗಳಿಗೆ ಒಂದು ಅಡ್ಡರೇಖೆಯನ್ನೆಳೆದಿರುವ ಮತ್ತೊಂದು ಚಿತ್ರವಿದೆ.

ಪ್ರಾಣಿಯೊಂದರ ಮೇಲೆ ಕುಳಿತ ಮನುಷ್ಯನೊಬ್ಬನ ಚಿತ್ರವಿದ್ದು ಪ್ರಾಣಿಯು ತಲೆಯನ್ನು ನೆಲದ ಕಡೆಗೆ ಬಾಗಿಸಿದ್ದು ಕುದುರೆ ಎಂಬಂತೆ ಕಂಡುಬರುತ್ತದೆ.

ತುಸು ಸಣ್ಣನೆಯ ರೇಖಾಚಿತ್ರವೊಂದರಲ್ಲಿ ಮನುಷ್ಯ ತನ್ನ ಬಲಗೈಯಿಂದ ಕತ್ತಿ ಇಲ್ಲವೇ ಕೋಲನ್ನು ತನ್ನ ಶಿರೋಭಾಗದ ಮೇಲ್ಗಡೆಗೆ ಬರುವಂತೆ ಎತ್ತಿ ಹಿಡಿದಿದ್ದು ಎಡಗೈಯನ್ನು ಮುಂದೆ ಚಾಚಿದಂತಿದೆ. ಕಾಲುಗಳು ಎರಡೂ ಬದಿಗಳಿಗೂ ಚಾಚಿದಂತಿದೆ.

ಸ್ವಲ್ಪ ಮೇಲ್ಗಡೆಗೆ ಸಸ್ಯ ಒಂದರ ಚಿತ್ರವೊಂದಿದ್ದು ಲಂಬ ರೇಖೆಯೊಂದಕ್ಕೆ ಎರಡೂ ಬದಿಗಳಲ್ಲೂ ಸಣ್ಣ ಸಣ್ಣ ಅಡ್ಡರೇಖೆಗಳನ್ನೆಳೆದು ಈ ಚಿತ್ರವನ್ನೂ ಸಹ ಬಿಳಿ ಬಣ್ಣದಿಂದಲೇ ಮೂಡಿಸಿದ್ದಾರೆ. ಕಾಂಡದ ಭಾಗ ತುಸು ದಪ್ಪಗಿದ್ದು, ಬೇರುಗಳನ್ನು ಗಮನಿಸಬಹುದು. ಇನ್ನೂ ಸ್ವಲ್ಪ ಮೇಲ್ಗಡೆಗೆ ಪ್ರಾಣಿಯೊಂದರ ಮೇಲೆ ಕುಳಿತು ಸವಾರಿ ಮಾಡುತ್ತಿರುವ ಮಾನವನ ಚಿತ್ರವಿದೆ.

ಸಸ್ಯಚಿತ್ರದ ಮೇಲ್ಭಾಗದಲ್ಲಿ ಸಣ್ಣ ಸಣ್ಣ ಚುಕ್ಕೆಗಳಿಂದ ಮೂಡಿಸಿದ ಚಿತ್ರವಿದ್ದು ಅಸ್ಪಷ್ಟವಾಗಿದೆ.

ಮತ್ತೊಂದು ಮನುಷ್ಯನ ರೇಖಾಚಿತ್ರದಲ್ಲಿ ಉದ್ದನೆಯ ದೇಹ, ದೇಹದ ಎರಡೂ ಬದಿಗಳಿಗೂ ಅಗಲವಾಗಿ ಚಾಚಿದ ಕೈಗಳು ಇವೆ. ಕೈಯಲ್ಲಿ ಬೆರಳುಗಳನ್ನು ಸ್ಪಷ್ಟವಾಗಿ ಮೂಡಿಸಿರುವುದು ಗಮನಾರ್ಹ.

ಎಕ್ಸ್ ಆಕಾರದ ಮನುಷ್ಯನೊಬ್ಬನು ಒಂದು ಕೈಯಲ್ಲಿ ಗುರಾಣಿಯನ್ನು ಮತ್ತೊಂದು ಕೈಯಲ್ಲಿ ಕತ್ತಿಯನ್ನು ಹಿಡಿದಿರುವಂತಿದೆ.

ಮುಂದೆ ಸ್ಪಷ್ಟವಿಲ್ಲದ ಕೆಲವು ರೇಖಾ ಚಿತ್ರಗಳಿದ್ದು ಅದರ ಮುಂದೆಯೇ ಮನುಷ್ಯರು ಕೈ ಕೈ ಹಿಡಿದು ನರ್ತನ ಮಾಡುವ ರೇಖಾ ಚಿತ್ರಗಳಿವೆ.

ಎರಡು ಮನೆಗಳ ಚಿತ್ರಗಳಿವೆ. ಐದು ಲಂಬರೇಖೆಗೆ ಕೆಳಭಾಗಕ್ಕೊಂದು ಅಡ್ಡ ರೇಖೆಯನ್ನೆಳೆದು ಮೇಲ್ಗಡೆಯ ಅಡ್ಡರೇಖೆಗೆ ಬದಲಾಗಿ ಸಣ್ಣ ಸಣ್ಣ ಚುಕ್ಕೆಗಳಿಂದ ಆರು ಸಾಲುಗಳನ್ನು ಮೂಡಿಸಿ, ಮೇಲೊಂದು ಕಮಾನಾಕೃತಿಯ ರೇಖೆಯನ್ನೆಳೆದು ಮನೆಯ ಚಿತ್ರವನ್ನು ಚಿತ್ರಿಸಿದ್ದಾರೆ. ಮೇಲ್ಗಡೆ ಬೆಂಕಿಯ ಜ್ವಾಲೆ ಬುಗಿಲೆದ್ದ ರೀತಿಯಲ್ಲಿ ಚುಕ್ಕೆ, ಚುಕ್ಕೆಗಳಿಂದ ಬರೆದಿದ್ದಾರೆ. ಮನೆಯ ಬಾಗಿಲು ಇದು ಎಂದು ಸೂಚಿಸುವ ಸಲುವಾಗಿಯೇ ಎಂಬಂತೆ ಎರಡನೇ ಲಂಬರೇಖೆಗೆ ತಾಗುವಂತೆ ಒಂದು ಗೆರೆಯನ್ನು ಎಳೆಯಲಾಗಿದೆ.

ಮತ್ತೊಂದು ಮನೆಯ ರೇಖಾಚಿತ್ರ ಸಣ್ಣದಾಗಿದ್ದು ವಿಶೇಷವೇನೂ ಇಲ್ಲ.

ಮತ್ತೆ ಅಸ್ಪಷ್ಟವಾದ ಮನುಷ್ಯರ ಚಿತ್ರಗಳಿದ್ದು ಒಂದು ರೇಖಾಚಿತ್ರದಲ್ಲಿ ದೇಹದ ಕೆಳಭಾಗದ ಕಾಲಿನ ಭಾಗದಲ್ಲಿ ಬಲತೊಡೆಯ ಭಾಗದಿಂದ ಕಾಲು ಬಾಗಿದಂತಿದ್ದು ಎಡಭಾಗ ನೀಳವಾಗಿದೆ. ಪಾದಗಳು ಸ್ಪಷ್ಟವಾಗಿ ಮೂಡಿಬಂದಿವೆ. ಎರಡೂ ತೊಡೆಗಳ ಮಧ್ಯಭಾಗದಲ್ಲಿ ಶಿಶ್ನ ಸೂಚಕ ರೇಖೆ ಇದೆ. ಚಿಕ್ಕದಾದ ಉದರ ಸಣ್ಣ ಕೈಗಳು ಬಾಗಿ ಶಿರೋಭಾಗ ಸಣ್ಣಗಿದೆ.

ಅತೀ ಕೆಳಗಡೆ ಭೂಮಿಗೆ ತಾಗಿರುವ ಬಂಡೆಯ ಭಾಗದಲ್ಲಿ ಮೂರು ರೇಖಾಚಿತ್ರಗಳು ಸ್ಪಷ್ಟವಿದ್ದು ಎರಡು ರೇಖಾ ಚಿತ್ರಗಳು ಮಾನವರದಾಗಿದ್ದರೆ, ಒಂದು ಪ್ರಾಣಿಯ ಚಿತ್ರವಾಗಿದೆ. ಮಾನವನೊಬ್ಬನು ತನ್ನೆರಡೂ ಕೈಗಳನ್ನು ಸೊಂಟದ ಮೇಲೆ ಇಟ್ಟು ನಿಂತಿರುವ ಚಿತ್ರ ಒಂದಾದರೆ, ಮತ್ತೊಬ್ಬ ಮಾನವ ತನ್ನೆರಡೂ ಕೈಗಳನ್ನು ಸೊಂಟದ ಮೇಲಿಟ್ಟು ಬಲಗಾಲಿನಿಂದ ಜಿಗಿಯುತ್ತಿರುವ ಚಿತ್ರವಿದೆ.

ಎಡಭಾಗಕ್ಕೆ ಮುಖ ಮಾಡಿದ ಜಿಂಕೆಯೊಂದರ ಚಿತ್ರವಿದ್ದು, ತೆಳ್ಳನೆಯ, ಉದ್ದವಾದ ಉದರ, ಚೂಪಾದ ಮುಖ, ಕೊಂಬುಗಳು, ಕಾಲುಗಳು ಮತ್ತು ಬಾಲಗಳನ್ನು ಗುರುತಿಸಬಹುದು.

ಇದರ ಬದಿಯಲ್ಲೆ ಬ್ರಾಹ್ಮೀ ಅಕ್ಷರಗಳನ್ನು ಅಂದರೆ ಫ, ಕೊ, ಅ ಗಳನ್ನು ಹೋಲುವ ಬರಹಗಳಿವೆ.

ಸ್ವಲ್ಪ ಅಂತರದಲ್ಲಿ ಮತ್ತೊಂದು ಪ್ರಾಣಿಯ ಚಿತ್ರವಿದ್ದು ಕಾಡುಹಂದಿಯ ಚಿತ್ರದಂತಿದೆ.

ಮೇಲ್ಭಾಗದಲ್ಲಿರುವ ಒಂದು ರೇಖಾ ಚಿತ್ರದಲ್ಲಿ ಮನುಷ್ಯ ಪ್ರಾಣಿಯೊಂದರ ಮೇಲೆ ಕುಳಿತು ಸಾಗುತ್ತಿರುವ ಚಿತ್ರವಿದ್ದು ಪ್ರಾಣಿಯ ತಲೆ ಮತ್ತು ಬಾಲಗಳನ್ನು ಸೂಚಿಸುವ ಗೆರೆಗಳು ಸ್ಪಷ್ಟವಾಗಿವೆ.

ಈ ಮೇಲಿನ ಬಿಳಿ ಬಣ್ಣದಿಂದ ಬರೆದ ರೇಖಾಚಿತ್ರಗಳ ನಡುವೆ ಸಣ್ಣದಾಗಿ ಬರೆದ ಕಿತ್ತಳೆ ಬಣ್ಣದ ಮನುಷ್ಯರನ್ನು ಸೂಚಿಸುವ ರೇಖಾ ಚಿತ್ರಗಳಿವೆ.

ದಪ್ಪನೆಯ ರೇಖೆಗಳಿಂದ ಸುಮಾರು ಕ್ರಿ. 6ನೇ ಶತಮಾನಕ್ಕೆ ಸೇರುವ ಶಂಖಲಿಪಿಯ ಶಾಸನವೊಂದಿದೆ. ಸೂರ್ಯ, ಚಂದ್ರರ ಚಿತ್ರಗಳಿದ್ದು ನಾಲ್ಕು ಸಾಲುಗಳನ್ನು ಹೊಂದಿದೆ. ಉದ್ದನೆಯ ದಪ್ಪ ಅಕ್ಷರಗಳಿಂದ ಕೆಂಪು ಬಣ್ಣದಿಂದ ಬರೆದ ಈ ಶಂಖಲಿಪಿಯ ಶಾಸನವು ದಕ್ಷಿಣ ಕರ್ನಾಟಕದಲ್ಲಿ ಕ್ವಚಿತ್ತಾಗಿ ದೊರಕುವ ಅಪರೂಪದ ಶಂಖಲಿಪಿಯ ಶಾಸನಗಳಲ್ಲಿ ಒಂದಾಗಿದೆ. ಚಿತ್ರದುರ್ಗದ ಬಳಿಯಲ್ಲಿ ಈ ರೀತಿಯ ಶಂಖಲಿಪಿಯ ಶಾಸನವು ಕಲ್ಲಿನದೋಣೆಯೊಂದರ ಮೇಲೆ ಬರೆದಿರುವಂತೆ ಕಂಡುಬಂದರೆ, ಮಾಗಡಿ ತಾಲ್ಲೂಕಿನ ದೊಡ್ಡಿಪಾಳ್ಯದ ಸಣ್ಣ ಗುಹೆಯೊಂದರಲ್ಲಿ ಬೃಹದಾಕಾರವಾಗಿ ಕೆಂಪು ಬಣ್ಣದಿಂದಲೇ ಬರೆದ ಶಂಖಲಿಪಿಯ ಶಾಸನವನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು.

ಕೇಸರಿ ಬಣ್ಣ ಮತ್ತು ಕೆಂಪು ಬಣ್ಣಗಳನ್ನು ಬಳಕೆಗಾಗಿ ಪ್ರಾಣಿಗಳ ರಕ್ತ ಮತ್ತು ಸಸ್ಯದ ರಸಗಳಿಗೆ ಕಬ್ಬಿಣದ ಆಕ್ಸೈಡ್ ಬೆರಸಿ ತಯಾರಿಸುತ್ತಿದ್ದರು ಎಂಬುದಾಗಿ ಈಗಾಗಲೇ ತಿಳಿದು ಬಂದಿರುವುದರಿಂದ ಈ ಬಣ್ಣಗಳನ್ನು ಅದೇ ರೀತಿ ತಯಾರಿಸಿರಬಹುದು.

ಕಲ್ಲುಮನೆಯ ಮೇಲ್ಭಾವಣಿಯ ಮೇಲಿನ ಒಳಭಾಗದಲ್ಲೂ ಬಿಳಿ, ಸಿಂಧೂರ ಮತ್ತು ಕೆಂಪು ಬಣ್ಣಗಳಿಂದ ಬರೆದ ಚಿತ್ರಗಳಿದ್ದು ಅಸ್ಪಷ್ಟವಾಗಿವೆ. ಇವುಗಳನ್ನು ಮನುಷ್ಯ ಸೀಳಾಗಿ ಬಿದ್ದಿರುವ ಬಂಡೆಯ ಮೇಲೆ ಕುಳಿತು ಅಲ್ಲವೇ ನಿಂತು ಮೂಡಿಸಿದ್ದಾನೆ.

ಮೊದಲಿಗೆ ಈ ಕಲ್ಲು ಮನೆಯಲ್ಲಿ ಬಿಳಿ ಚಿತ್ರಗಳನ್ನು ಬರೆದಿದ್ದು ಅವುಗಳ ಮೇಲೆ ನಂತರ ಸಿಂಧೂರ ಬಣ್ಣದಿಂದ ಮತ್ತು ಕೆಂಪು ಬಣ್ಣದಿಂದ ಚಿತ್ರಗಳನ್ನು ಬರೆದಿರುವುದು ಗಮನಾರ್ಹ.

ಈ ಕಲ್ಲು ಮನೆಯಲ್ಲಿ ಭೂಮಿಯ ಮೇಲ್ಮೈಯಲ್ಲಿ ವಿವಿಧ ಬಗೆಯ ಮಡಕೆಯ ಚೂರುಗಳು ದೊರೆತಿರುವುದಲ್ಲದೇ, ಭೂಮಿಯಲ್ಲಿ ಸ್ವಲ್ಪ ಒಳಗೆ ಹೂತುಹೋಗಿದ್ದ ಮಣ್ಣಿನ ತಟ್ಟೆಯ ಭಾಗವೂ ದೊರೆತಿದೆ. ಮಡಕೆಯ ಚೂರುಗಳು ಕೆಂಪು ಬಣ್ಣದಿಂದಲೂ, ಕಪ್ಪು – ಕೆಂಪು ಬಣ್ಣದಿಂದಲೂ ಕೂಡಿದ್ದು ತುಸು ಹೊಳಪುಳ್ಳವಾಗಿವೆ. ವಿವಿಧ ರೀತಿಗಳಲ್ಲಿ ಬಾಗಿರುವ ಕಂಠಗಳ ಮಡಕೆಗಳಿಂದ ಕುಂಬಾರನ ತಿದಿಯಿಂದ ಹೊರಬಂದ ರೇಖೆಗಳು ವಿವಿಧ ರೀತಿಯಲ್ಲಿವೆ. ಕೆಲವು ತೆಳುವಾಗಿ ಹಗುರವಾದ ಮಡಕೆಯ ಚೂರುಗಳಾಗಿದ್ದರೆ ಮತ್ತೆ ಕೆಲವು ದಪ್ಪನೆಯ ಗಟ್ಟಿಯಾದ ಮಡಕೆಗಳ ಚೂರುಗಳಾಗಿವೆ.

ಈ ಕಲ್ಲು ಮನೆಯಿಂದ ಸುಮಾರು ಎರಡು ಕಿ.ಮೀ. ಹಿಂದೆಯೇ ಕೆಂಬರೆ ಎಂಬಲ್ಲಿ ಎರಡು ವೃತ್ತಾಕಾರದ ಶವಗುಣಿಗಳು ಕಂಡುಬಂದಿವೆ. ಒಂದು ಶವಕುಣಿಯ ಮೇಲ್ಭ್ವ ವೃತ್ತಾಕಾರದ ಭಾಗವು ಭಾಗಶಃ ಹಾಳಾಗಿದ್ದರೆ ಮತ್ತೊಂದು ಸುಸ್ಥಿತಿಯಲ್ಲಿದೆ. ಇವು ಬೃಹತ್ ಶಿಲಾಯುಗಕ್ಕೆ ಸೇರಿದವುಗಳಾಗಿದ್ದು ಈ ಸ್ಥಳದಲ್ಲಿ ಈಗ ಜನವಸತಿಯೊಂದು ನಿರ್ಮಾಣವಾಗುತ್ತಲಿದ್ದು ಹೆಚ್ಚಿನ ಶೋಧನೆಗೆ ಅಡಚಣೆಯಾಗಿದೆ.

ಗುಹಾಚಿತ್ರಗಳು ನೂತನ ಶಿಲಾಯುಗದಲ್ಲಿ ಪ್ರಾರಂಭವಾಗಿ ಬೃಹತ್ ಶಿಲಾಯುಗದಲ್ಲಿ ವಿಕಸಿತವಾಗಿರುವುದರಿಂದ, ದಕ್ಷಿಣ ಕರ್ನಾಟಕದಲ್ಲಿನ ಬೃಹತ್ ಶಿಲಾಯುಗದ ಕಾಲವನ್ನು ಈಗಾಗಲೇ ಕ್ರಿ.ಪೂ. ಸು. 800 ವರ್ಷಗಳಿಂದ ಪ್ರಾರಂಭವಾಗಿರುವುದೆಂದು ನಿರ್ಧಾರವಾಗಿರುವುದರಿಂದಲೂ ಸೂಳೇಕಲ್ಲು ಮಠದ ಗುಹಾಚಿತ್ರಗಳು ಬೃಹತ್ ಶಿಲಾಯುಗಕ್ಕೆ ಸೇರಿದವುಗಳೆಂದು ಹೇಳಬಹುದು. ಬಳಿಯಲ್ಲೇ ದೊರೆತ ಶವಗುಣಿಗಳು ಸಹ ಇದನ್ನು ಪುಷ್ಟೀಕರಿಸುತ್ತವೆ.

ಟಿಪ್ಪಣಿಗಳು

1 ಪ್ರವಾಸಿ ಕಂಡ ಇಂಡಿಯಾ – ಹೆಚ್.ಎಲ್. ನಾಗೇಗೌಡ, ಸಂಪುಟ 1 ಪು : 6.

2 ಗೊಟ್ಟಿಗೆಹಳ್ಳಿ ಬೃಹತ್ ಶಿಲಾಯುಗದ ಶಿಲಾ ಸಮಾಧಿಗಳು ಕರ್ನಾಟಕ ಲೋಚನ ಸಂ : 7 ಸಂಚಿಕೆ : 1 ಬಿ.ಎಂ. ಶ್ರೀ ಸ್ಮಾರಕ ಪ್ರತಿಷ್ಠಾನ – 1997 – ಮುತ್ತುರಾಜು.

3 ಬನ್ನೇರುಘಟ್ಟ : ಪ್ರಾಗೈತಿಹಾಸಿಕ ಕಾಲದಿಂದ ಇಂದಿನವರೆಗೆ ಇತಿಹಾಸ ದರ್ಶನ ಸಂ. : 8, ಪುಟ 2 – 1993 – ಡಾ. ದೇವರ ಕೊಂಡಾರೆಡ್ಡಿ.

4 ಕನಕಪುರ ತಾಲ್ಲೂಕಿನಲ್ಲಿ ದೊರೆತ ಕೆಲವು ಪ್ರಾಚ್ಯಾವಶೇಷಗಳು – ಒಂದು ಶೋಧನೆ 6 ಕನಕಪುರ ಎಂಬ ಕಾನಕಾನಹಳ್ಳಿಯ ಚರಿತ್ರೆ, ಪುಟ : 19, 2007 – ಡಾ. ಟಿ.ವಿ. ವೆಂಕಟಾಚಲ ಶಾಸ್ತ್ರಿ.

5 ಕನ್ನಡಪ್ರಭ : 14–11–1997 ಪುಟ : 5 – ಮುತ್ತುರಾಜು.

6 ಸೂಳೆಕಲ್ ಮಠದ ಗುಹಾ ಚಿತ್ರಗಳು, ಇತಿಹಾಸ ದರ್ಶನ ಸಂ. 10, ಪುಟ : 71 – 73 – 1995 – ಮುತ್ತುರಾಜು.

ಅಧ್ಯಾಯ – 3

ರಾಜಕೀಯ ಇತಿಹಾಸ

ಕಾನಕಾನಹಳ್ಳಿ ಪ್ರದೇಶದ ಶಾಸನಗಳ ಆಧಾರದ ಮೇಲೆ ರಾಜಕೀಯ ಇತಿಹಾಸವನ್ನು ಗುರುತಿಸುವ ಪ್ರಯತ್ನ ಮಾಡಲಾಗುವುದು.

ಕಾನಕಾನಹಳ್ಳಿ ಪ್ರದೇಶವು ಕಾವೇರಿ ಮತ್ತು ಅರ್ಕಾವತಿ ನದಿ ಪ್ರದೇಶದ ಹರವಿನಲ್ಲಿ ಹರಡಿರುವ ಪ್ರದೇಶವಾಗಿದೆ. ಈ ಪ್ರದೇಶದ ದಕ್ಷಿಣಭಾಗವು ಅರಣ್ಯಪ್ರದೇಶವಾಗಿದ್ದು, ಬೆಟ್ಟ–ಗುಡ್ಡಗಳಿಂದ ಕೂಡಿದೆ. ಈ ಕಾರಣದಿಂದಾಗಿ ಈ ಪ್ರದೇಶದ ಶಾಸನಗಳು ಪೂರ್ಣವಾಗಿ ಬೆಳಕಿಗೆ ಬಂದಿಲ್ಲ. ಶ್ರೀ ರೈಸ್ ಮತ್ತು ಆರ್. ನರಸಿಂಹಾಚಾರ್ ಹಾಗೂ ಇತರರ ನೆರವಿನಿಂದ ಕನ್ನಡ ಭಾಷೆಯ 113, ತಮಿಳು ಭಾಷೆಯ 25, ಒಟ್ಟು 138 ಶಾಸನಗಳು ಮಾತ್ರ ಇದುವರೆಗೆ ಪ್ರಕಟವಾಗಿವೆ. ಇವುಗಳಲ್ಲಿ ಐತಿಹಾಸಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಪ್ರಮುಖವಾದ ಶಾಸನಗಳು ಬೆರಳೆಣಿಕೆಯಷ್ಟು ಮಾತ್ರ. ಈವರೆಗೆ ದೊರಕಿರುವ ಶಾಸನಗಳು ಬೆರಳೆಣಿಕೆಯಷ್ಟು ಮಾತ್ರ. ಈವರೆಗೆ ದೊರಕಿರುವ ಶಾಸನಗಳಲ್ಲಿ ದಾನ ಶಾಸನಗಳು ಹೆಚ್ಚಾಗಿವೆ. ವೀರಶಾಸನಗಳಲ್ಲಿ ಸಾಮಾನ್ಯ ಹೋರಾಟವೇ ಅಧಿಕವಾಗಿವೆ. ಕನಕಪುರ ತಾಲ್ಲೂಕಿನ ಅತ್ಯಂತ ಪ್ರಾಚೀನ ಕನ್ನಡ ಶಾಸನಗಳೆಂದರೆ ಸಾತನೂರು ಬಳಿಯಿರುವ ಸುಮಾರು 8ನೇ ಶತಮಾನಕ್ಕೆ ಸೇರಿದ ಮೂರು ವೀರಗಲ್ಲುಗಳು. ಇತ್ತೀಚಿನ ಶಾಸನವೆಂದರೆ ಹೊನ್ನವಳ್ಳಿ ಗ್ರಾಮದ ಸೋಮನಾಥ ದೇವಾಲಯದ ಬಳಿಯಿರುವ 19ನೇ ಶತಮಾನದ ಒಂದು ದಾನ ಶಾಸನ.[1]

ಇತರ ಭಾಷೆಯ ಶಾಸನಗಳು : ಕರ್ನಾಟಕದಲ್ಲಿ ತಮಿಳು, ತೆಲುಗು, ಪರ್ಷಿಯನ್, ಅರಾಬಿಕ್, ಮಲೆಯಾಳಂ, ಮರಾಠಿ, ತುಳು ಈ ಮುಂತಾದ ಭಾಷೆಯ ಶಾಸನಗಳು ದೊರೆತಿವೆ. 11ನೆಯ

ಶತಮಾನದ ಆರಂಭದಲ್ಲಿ ಚೋಳರು ಗಂಗವಾಡಿಯ ಕೆಲವು ಭಾಗಗಳನ್ನು ಆಕ್ರಮಿಸಿಕೊಂಡಮೇಲೆ ಕರ್ನಾಟಕದ ಈ ಭಾಗಗಳಲ್ಲಿ ತಮಿಳು ಶಾಸನಗಳನ್ನು ಹಾಕಿಸಲಾರಂಭವಾಯಿತು. ಚೋಳರು ತಾವು ಆಕ್ರಮಿಸಿದ ಕೋಲಾರ, ಬೆಂಗಳೂರು, ಮಂಡ್ಯ, ಮೈಸೂರು ಜಿಲ್ಲೆಗಳಲ್ಲಿ ಆರಂಭದಲ್ಲಿ ಅಲ್ಲಿನ ಆಡುನುಡಿಯಾದ ಕನ್ನಡದಲ್ಲೆ ಶಾಸನಗಳನ್ನು ಹಾಕಿಸಿದ್ದುಂಟು. ರಾಜ ರಾಜನ ಬನ್ನೂರು ಶಾಸನ. ಅಪ್ರಮೇಯನ ಕಲಿಯೂರು ಶಾಸನ. ರಾಜೇಂದ್ರ ಚೋಳನ ಬಲಮುರಿ ಶಾಸನ ಮೊದಲಾದವು ಕನ್ನಡದಲ್ಲಿಯೇ ಇವೆ. ಆದರೆ ಬಹುಬೇಗನೆ ಅವರು ಈ ಪ್ರಾಂತ್ಯದಲ್ಲಿ ತಮ್ಮ ಪ್ರಾಂತ್ಯಾಧಿಕಾರಿಗಳನ್ನು ನೇಮಿಸಿ ತಮಿಳನ್ನು ಆಡಳಿತ ಭಾಷೆಯನ್ನಾಗಿ ಮಾಡಿ ಶಾಸನಗಳನ್ನು ತಮಿಳಿನಲ್ಲಿಯೇ ಕೆತ್ತಿಸಲಾಗಿದೆ. ಇದುವರೆಗೆ ಕನಕಪುರ ಪ್ರದೇಶದಲ್ಲಿ 30ಕ್ಕೂ ಹೆಚ್ಚು ತಮಿಳು ಶಾಸನಗಳು ದೊರೆತಿವೆ. ಅವುಗಳ ವಿಶ್ಲೇಷಣೆ ಮುಂದೆ ಮಾಡಲಾಗಿದೆ.[2]

ಕಾನಕಾನಹಳ್ಳಿ ಪ್ರದೇಶದ ಇತಿಹಾಸ

ಜನ ವ್ಯವಸ್ಥಿತವಾಗಿ, ಸ್ಥಿರವಾಗಿ, ಬದುಕಿರಬಹುದಾದ, ಸಾಂಘಿಕವಾಗಿ ಜೀವನ ನಿರ್ವಹಣೆ ಮಾಡಿರುವ ಆಧಾರಗಳು ಖಚಿತವಾಗಿ ಪ್ರಾಗಿತಿಹಾಸದ ಶಿಲಾಯುಗದ ಕಾಲದಲ್ಲಿ ತಿಳಿದುಬರುವುದಿಲ್ಲ. ಕ್ರಮಬದ್ಧ ಜೀವನ, ಕಾಲದಲ್ಲಿ ಆಳುವ, ಆಳಿಸಿಕೊಳ್ಳುವವರ ಪ್ರಜೆಗಳ ಪ್ರಭುಗಳ ಇತಿಹಾಸದ ಉಲ್ಲೇಖಗಳೆಂದರೆ; ಶಾಸನಗಳು, ಕೈಫಿಯತ್ತುಗಳು, ಹಾಡುಗಬ್ಬಗಳು, ವೀರಗಲ್ಲುಗಳು, ಮಾಸ್ತಿಗಲ್ಲುಗಳು, ಶಿಲಾಮೂರ್ತಿಗಳು, ಕವಿಗಳ ಕಾವ್ಯಗಳು ಇತ್ಯಾದಿ.

ಕಾಡು, ನೀರು ಇರುವ ಕಡೆ ಜನವಸತಿ ಇರುವುದು ಸಹಜ. ಪ್ರಾಚೀನ ಕಾಲದಿಂದಲೂ ಇಲ್ಲಿ ಜನ ಬದುಕಿರಬಹುದಾದ ಕುರುಹುಗಳನ್ನು ಶಿಲಾ ಸಮಾಧಿ ಮೂಲಕ ಪರಿಚಯಿಸಿಕೊಂಡ ಮೇಲೆ. ನದೀ ಕಣಿವೆ ನಾಗರೀಕತೆ ಕಾಲಕ್ಕೆ ಜನರು ನಿಯಮಬದ್ಧ ಜೀವನ ಪದ್ಧತಿಗಳನ್ನು ಅಳವಡಿಸಿಕೊಂಡು ಅನ್ನ, ವಸತಿ ಸಂಪಾದನೆಯ ಜೊತೆಗೆ ಭಾವನೆಗಳ ಅಭಿವ್ಯಕ್ತಿಯಿಂದ ಪ್ರೀತಿ, ವಿಶ್ವಾಸ, ನಂಬಿಕೆಗಳು ಮುಂತಾದ ನಡವಳಿಕೆಯ ಗುಣಶೀಲ ಜೀವನ ಕ್ರಮಗಳನ್ನು ಅಳವಡಿಸಿಕೊಳ್ಳುಲು ಪ್ರಾರಂಭಿಸಿದರು.

ಬಹು ಪ್ರಾಚೀನ ಕಾಲದಲ್ಲಿದ್ದ ಜನ ಬಹುಮಟ್ಟಿಗೆ ನಿಸರ್ಗಾವಲಂಬಿಗಳಾಗಿದ್ದರು. ಪ್ರಾಣಿ ಬೇಟೆಯಾಡಿಕೊಂಡು, ಅಲೆಮಾರಿಗಳಾಗಿ ಜೀವನ ಸಾಗಿಸುತ್ತಿದ್ದರು. ಈ ರೀತಿಯಲ್ಲಿ ಸಹಸ್ರಾರು ವರ್ಷಗಳು ಕಳೆದ ಮೇಲೆ ಅವರು ವ್ಯವಸಾಯ ಮತ್ತು ಪಶುಪಾಲನೆಗಳ ಮೂಲಕ ಆಹಾರ ಉತ್ಪಾದನೆಯಲ್ಲಿ ತೊಡಗಿ ಗ್ರಾಮಗಳನ್ನು ಸ್ಥಾಪಿಸಿಕೊಂಡು ಒಂದೆಡೆ ನೆಲೆ ನಿಲ್ಲುವಂತಾದರು. ಕಾಲ ಕ್ರಮೇಣ ಇದು ನಾಗರೀಕತೆಯ ಭಾಗವಾಗಿ, ಕಂಡುಬರುವ ಅನೇಕ ಸಾಂಸ್ಕೃತಿಕ ಅಂಶಗಳು ರೂಢಿಗೆ ಬರಲಾರಂಭಿಸಿದವು. ಈ ಸಾಂಸ್ಕೃತಿಕ ವಿಕಸನದಲ್ಲಿ ಬರವಣಿಗೆಯ ಕಲೆಯ ಆವಿಷ್ಕಾರ ಮುಖ್ಯ ಘಟ್ಟ.

ಯಾವುದೇ ದೇಶದ ಇತಿಹಾಸದಲ್ಲಿ ಆ ಘಟ್ಟದಾರಭ್ಯ ಐತಿಹಾಸಿಕ ಆಗು ಹೋಗುಗಳನ್ನು ತಿಳಿಯಲು ಲಿಖಿತ ದಾಖಲೆಗಳು ದೊರಕಲಾರಂಭಿಸುತ್ತವೆ. ಯಾವ ಕಾಲದಿಂದ ಈ ರೀತಿಯ ದಾಖಲೆಗಳು ದೊರಕಲಾರಂಭಿಸುತ್ತವೆಯೋ ಅಂದಿನಿಂದ ಈಚಿನ ಕಾಲವನ್ನು ಐತಿಹಾಸಿಕ ಯುಗವೆಂದು ಕರೆಯುತ್ತೇವೆ.[3]

ಕರ್ನಾಟಕಕ್ಕೆ ಸಂಬಂಧಪಟ್ಟಂತೆ ಐತಿಹಾಸಿಕ ಯುಗ ಅಶೋಕನ ಶಾಸನಗಳು ದೊರಕಿರುವುದರಾರಭ್ಯ ಅಂದರೆ ಕ್ರಿ.ಶ.ಸು. 3ನೇ ಶತಮಾನದಿಂದ ಪ್ರಾರಂಭವಾಗುತ್ತದೆ ಎಂದು ಹೇಳಬಹುದು. ಕಾನಿಕಾನಹಳ್ಳಿ ಪ್ರದೇಶದ ಇತಿಹಾಸವು ಗಂಗರ ಕಾಲದ ಲಭ್ಯವಿರುವ ವೀರಗಲ್ಲು ಶಿಲಾಶಾಸನಗಳಿಂದ ಪ್ರಾರಂಭವಾಗುತ್ತದೆ ಎಂಬುದನ್ನು ಗುರುತಿಸಬಹುದು. ಈ ಪ್ರದೇಶದ ಸುಮಾರು ಸಾವಿರಕ್ಕಿಂತಲೂ ಹೆಚ್ಚು ವಿವಿಧ ಭಾಷೆಯ, ವಿವಿಧ ಮೂರ್ತಿಯ ಶಿಲ್ಪಗಳು, ಉಬ್ಬುಶಿಲ್ಪಗಳು ಲಭ್ಯವಿವೆ.

ಇತಿಹಾಸ

ಕಾನಕಾನಹಳ್ಳಿ ಪ್ರದೇಶವು ಪ್ರಾಗೈತಿಹಾಸಿಕ ಕಾಲದಿಂದಲೂ ಜನವಸತಿಯುಳ್ಳ ಪ್ರದೇಶವಾಗಿತ್ತು. ಇಲ್ಲಿನ ಅನೇಕ ಸ್ಥಳಗಳಲ್ಲಿ ಸೂಕ್ಷ್ಮಶಿಲಾಯುಗದ ಆಯುಧಗಳು ಮತ್ತು ಕಬ್ಬಿಣಯುಗದ ಬೃಹತ್ ಶಿಲಾಸಮಾಧಿಗಳು ದೊರೆತಿವೆ. ಈ ತಾಲ್ಲೂಕಿನ ಕಾಡಳ್ಳಿಗೊಟ್ಟಿಗಹಳ್ಳಿ ಮೊದಲದೆಡೆಗಳಲ್ಲಿ ಆದಿಚಾರಿತ್ರಿಕ ಕಾಲದ ನೆಲೆಗಳು ಕಂಡುಬಂದಿವೆ. ಜಿಲ್ಲೆಯ ಇತಿಹಾಸ ಸ್ಪಷ್ಟವಾಗಿ ಪ್ರಾರಂಭವಾಗುವುದು ತಲಕಾಡಿನ ಗಂಗರ ಕಾಲದಿಂದ. ಅವರ ಆಳ್ವಿಕೆಗೆ ಸಂಬಂಧಿಸಿದಂತೆ ಅವಿನೀತನ ಕಾಲದ ಸು. 469–520 ಒಂದು ಶಾಸನ ಈ ಪ್ರದೇಶದ ಅತ್ಯಂತ ಪ್ರಾಚೀನ ದಾಖಲೆ.

ಹಿಂದೆ ಈ ಜಿಲ್ಲೆ ಗಂಗವಾಡಿ 96,000 ಭಾಗವಾಗಿದ್ದುದಲ್ಲದೆ, ಚನ್ನಪಟ್ಟಣ ತಾಲ್ಲೂಕಿನ ಹೊಂಗನೂರು, ಕಾನಕಾನಹಳ್ಳಿಯ ಪ್ರದೇಶ ಚಿಕ್ಕಗಂಗವಾಡಿ ಪ್ರಾಂತ್ಯದ ಕೇಂದ್ರವಾಗಿತ್ತು. 7 ಹಾಗೂ 8ನೆಯ ಶತಮಾನಗಳಲ್ಲಿ ಚನ್ನಪಟ್ಟಣ ತಾಲ್ಲೂಕಿನ ಮಂಕುಂದ ಸ್ಥಳ ಭೂವಿಕ್ರಮ ಮತ್ತು ಒಂದನೆಯ ಶಿವಮಾರ ಇವರ ಉಪರಾಜಧಾನಿಯಾಗಿತ್ತು. 8ನೆಯ ಶತಮಾನದಲ್ಲಿ ಶ್ರೀಪುರುಷ ನೆಲಮಂಗಲ ತಾಲ್ಲೂಕಿನ ಮಣ್ಣೆಯನ್ನು ಕೆಲಕಾಲ ತನ್ನ ರಾಜಧಾನಿಯಾಗಿ ಮಾಡಿಕೊಂಡಿದ್ದ. ಆದರೆ ಶತಮಾನದ ಅಂತ್ಯದಲ್ಲಿ ಈ ಜಿಲ್ಲೆಯ ಅನೇಕ ಭಾಗಗಳು ರಾಷ್ಟ್ರಕೂಟರ ವಶವಾಗಿ ಆಗ ಇಲ್ಲಿಯ ಪ್ರಾಂತ್ಯಾಧಿಕಾರಿಯಾದ ಕಂಬ ಸಹ ಮಣ್ಣೆಯಲ್ಲಿ ನೆಲಸಿದ್ದಂತೆ ತೋರುತ್ತದೆ. 9–10ನೆಯ ಶತಮಾನಗಳಲ್ಲಿ ಜಿಲ್ಲೆಯ ಹೊಸಕೋಟೆ, ದೇವನಹಳ್ಳಿ ತಾಲ್ಲೂಕಿನ ಭಾಗಗಳು ನೊಳಂಬ ಪಲ್ಲವರ ವಶದಲ್ಲಿತ್ತಾದರೂ ಅನಂತರ ಗಂಗ ರಾಜ್ಯಕ್ಕೆ ಸೇರಿದುವು. ಸು.1004ರ ಹೊತ್ತಿಗೆ ರಾಜರಾಜಚೋಳನ ಗಂಗಾಕ್ರಮಣದೊಡನೆ ಗಂಗವಾಡಿಯ ಇತರ ಭಾಗಗಳಂತೆ ಈ ಜಿಲ್ಲೆ ಸಹ ಜೋಳರ ವಶವಾಯಿತು. ಆಗ ಜಿಲ್ಲೆಯ ದಕ್ಷಿಣ

ಭಾಗಕ್ಕೆ ಚೋಳ ಮಂಡಲವೆಂಬ ಹೆಸರಿತ್ತು. ಈ ದಕ್ಷಿಣಭಾಗವೇ ಕಾನಕಾನಹಳ್ಳಿ ಪ್ರದೇಶ ಚನ್ನಪಟ್ಟಣ ಮತ್ತು ತಲಕಾಡು ಪ್ರದೇಶಗಳಾಗಿವೆ.

12ನೆಯ ಶತಮಾನದ ಆದಿಭಾಗದಲ್ಲಿ ಜಿಲ್ಲೆಯ ಪಶ್ಚಿಮ ಭಾಗ ಹೊಯ್ಸಳರ ಅಧೀನಕ್ಕೆ ಬಂದರೂ ಪೂರ್ವ ಮತ್ತು ದಕ್ಷಿಣ ಭಾಗಗಳಲ್ಲಿ ಚೋಳರ ಆಳ್ವಿಕೆ ಸು. 1200ರ ವರೆಗಾದರೂ ಮುಂದುವರಿದಂತೆ ತೋರುತ್ತದೆ. 13ನೆಯ ಶತಮಾನದ ಮಧ್ಯಭಾಗದ ಹೊತ್ತಿಗೆ ಈ ಭಾಗಗಳೂ ಹೊಯ್ಸಳ ರಾಮನಾಥನ ವಶಕ್ಕೆ ಬಂದಿದ್ದು, ದೇವನಹಳ್ಳಿ ತಾಲ್ಲೂಕಿನ ಕುಂದಾಣ ಅವರ ರಾಜಧಾನಿಯಾಗಿತ್ತು. ಹೊಯ್ಸಳ ನರಸಿಂಹ ಮತ್ತು ರಾಮನಾಥರ ನಡುವೆ ಕೆಲವು ಘರ್ಷಣೆಗಳು ಸಂಭವಿಸಿದುವು. 13ನೆಯ ಶತಮಾನದ ಅಂತ್ಯದ ಹೊತ್ತಿಗೆ ಜಿಲ್ಲೆ 3ನೆಯ ಬಲ್ಲಾಳನ ಆಧಿಪತ್ಯಕ್ಕೆ ಒಳಪಟ್ಟು ಅನಂತರ ವಿಜಯನಗರ ಸಾಮ್ರಾಜ್ಯದ ಸ್ಥಾಪನೆಯೊಡನೆ ಅದರಲ್ಲಿ ವಿಲೀನವಾಯಿತು. 15ನೆಯ ಶತಮಾನದ ಆರಂಭದ ಹೊತ್ತಿಗೆ ವಿಜಯನಗರದ ಸಾಮಂತರಾಗಿ ಆವತಿಯ ಪಾಳೆಯಗಾರರು ತಲೆಎತ್ತಿದರು. ಅವರ ಅನೇಕ ಶಾಖೆಗಳ ಪ್ರಭುತ್ವ ಜಿಲ್ಲೆಯ ನಾನಾ ಭಾಗಗಳಲ್ಲಿ ಆಳ್ವಿಕೆ ನಡೆಸುತ್ತಿತ್ತು. ಆವತಿ, ದೇವನಹಳ್ಳಿ, ಯಲಹಂಕ, ದೊಡ್ಡಬಳ್ಳಾಪುರ, ಬೆಂಗಳೂರು, ಮಾಗಡಿ ಮೊದಲಾದವು ಅಂಥ ಪಾಳೆಯ ಪಟ್ಟುಗಳಲ್ಲಿ ಕೆಲವು. ತಾಳೀಕೋಟೆ ಯುದ್ಧದ ಅನಂತರವೂ ಇವು ಮುಂದುವರಿದುವು. ಆದರೆ ಚನ್ನಪಟ್ಟಣ ಮತ್ತು ಸುತ್ತಲ ಪ್ರದೇಶ ಮಾತ್ರ ಪೆನುಗೊಂಡೆಯಲ್ಲಿ ನೆಲೆಗೊಂಡಿದ್ದ ವಿಜಯನಗರ ಪ್ರಭುವಿನ ಸಂಬಂಧಿಯೊಬ್ಬನಾದ ಜಗದೇವರಾಯನ ವಶಕ್ಕೆ ಬಂದು ಅವನ ವಂಶದವರು ಸು. 1630ರ ತನಕವೂ ಆಳಿದರು. ಅನಂತರ ಮೈಸೂರಿನ ಚಾಮರಾಜ ಅದನ್ನು ವಶಪಡಿಸಿಕೊಂಡ. 1638ರಲ್ಲಿ ಬಿಜಾಪುರದ ಸರದಾರ ರಣದುಲ್ಲಾಖಾನ್ ಬೆಂಗಳೂರು ಸೇರಿದಂತೆ ಜಿಲ್ಲೆಯ ಉತ್ತರ ಭಾಗವನ್ನೆಲ್ಲಾ ವಶಪಡಿಸಿಕೊಂಡ. ಮಾಗಡಿ ಭಾಗದಲ್ಲಿ ಕೆಂಪೇಗೌಡನ ವಂಶಸ್ಥರ ಆಳ್ವಿಕೆಯೂ ಚನ್ನಪಟ್ಟಣ, ಕನಕಪುರ ಭಾಗಗಳಲ್ಲಿ ಮೈಸೂರು ಒಡೆಯರ ಆಳ್ವಿಕೆಯೂ ಮುಂದುವರಿದುವು. ಬಿಜಾಪುರದ ಆಳ್ವಿಕೆಗೆ ಸೇರಿದ ಜಿಲ್ಲೆಯ ಭಾಗಗಳು ಶಿವಾಜಿಯ ತಂದೆ ಷಹಜಿಗೆ ಜಹಗೀರಾಗಿ ದೊರೆತು ಈ ಪ್ರದೇಶದಲ್ಲಿ ಮರಾಠ ಸರದಾರರು ಬಂದು ನೆಲಸಲಾರಂಭಿಸಿದರು.

1654ರಲ್ಲಿ ಮೈಸೂರು ಕಂಠೀರವ ನರಸರಾಜ ಮಾಗಡಿಯನ್ನು ವಶಪಡಿಸಿಕೊಂಡನಲ್ಲದೇ ಬೆಂಗಳೂರನ್ನು ಷಹಜಿಯ ವಂಶದ ವೆಂಕಾಜಿಯಿಂದ ಖರೀದಿಮಾಡಿ ಈ ಜಿಲ್ಲೆಯ ಬಹು ಪ್ರದೇಶದ ಮೇಲೆ ತನ್ನ ಅಧಿಕಾರವನ್ನು ವಿಸ್ತರಿಸಿದ. ಈ ಮಧ್ಯದಲ್ಲಿ 17ನೆಯ ಶತಮಾನದ ಕೊನೆಯ ಹೊತ್ತಿಗೆ ಹೊಸಕೋಟೆ, ದೊಡ್ಡಬಳ್ಳಾಪುರ ಪ್ರದೇಶಗಳು ಮೊಘಲರ ವಶವಾಗಿದ್ದುವು. 1749ರ ಹೊತ್ತಿಗೆ ದೇವನಹಳ್ಳಿ ಪಾಳೆಯಪಟ್ಟು ಮೈಸೂರು ರಾಜ್ಯಕ್ಕೆ ಸೇರಿತಲ್ಲದೆ 1761ರಲ್ಲಿ ಹೊಸಕೋಟೆ ಮತ್ತು ದೊಡ್ಡಬಳ್ಳಾಪುರಗಳನ್ನು ಮೈಸೂರು ರಾಜ್ಯಕ್ಕೆ ಪಡೆದುಕೊಳ್ಳಲಾಯಿತು. ಮುಂದೆ ಈ ಜಿಲ್ಲೆಯ ಪ್ರದೇಶ

ಹೈದರ್ ಮತ್ತು ಟಿಪ್ಪುಸುಲ್ತಾನರ ವಶದಲ್ಲಿತ್ತು. 1799ರ ಅನಂತರ ಇದು ಮೈಸೂರು ಅರಸರವಶಕ್ಕೆ ಬಂದು ಅಂದಿನಿಂದ ಮೈಸೂರು ರಾಜ್ಯದ ಭಾಗವಾಗಿ ಮುಂದುವರಿಯಿತು.

ಗಂಗವಂಶ ಶಾಸನಗಳು

ಸು. 700 ವರ್ಷಗಳಷ್ಟು ಕಾಲ ಆಳಿದ ಗಂಗವಂಶದ ರಾಜರ ಶಾಸನಗಳ ಸಂಖ್ಯೆ ಕಡಿಮೆಯೆಂದೇ ಹೇಳಬೇಕು. ಆದರೂ ಅವು ಹಲವು ರೀತಿಯಲ್ಲಿ ಮುಖ್ಯವೂ ವೈವಿಧ್ಯಪೂರ್ಣವೂ ಆದಂಥವು. ಮೊದಮೊದಲ ಗಂಗ ರಾಜರ ಇತಿಹಾಸವನ್ನರಿಯಲು ಇವೇ ಪೂರ್ಣ ಆಧಾರ. ಗಂಗರ ಶಾಸನಗಳು ಸ್ಥೂಲವಾಗಿ ಮೂರು ಬಗೆ 1. ತಾಮ್ರಶಾಸನಗಳು, 2. ಶಿಲಾಶಾಸನಗಳು ಮತ್ತು 3 ವೀರಗಲ್ಲುಗಳು. 8ನೆಯ ಶತಮಾನದವರೆಗೂ ಇವರ ಶಿಲಾಶಾಸನಗಳು ಬಲು ವಿರಳವಾಗಿವೆ. 726ರಲ್ಲಿ ಪಟ್ಟಕ್ಕೆ ಬಂದ ಶ್ರೀಪುರುಷನಿಗಿಂತ ಹಿಂದಿನ ರಾಜರ ಶಿಲಾಶಾಸನಗಳೆಂದರೆ ಕೋಲಾರ ಜಿಲ್ಲೆ ಅವನಿಯಲ್ಲಿ ದೊರೆತಿರುವ ತುಂಡುಶಾಸನ, ಚಿಕ್ಕಮಗಳೂರು ಜಿಲ್ಲೆ ಸಿರಿಗುಂದದ ನಿರ್ವಿನೀತನ ಶಾಸನ, ಕೋಲಾರ ಜಿಲ್ಲೆಯ ಕಲ್ಲೂರಿನ ಶ್ರೀವಿಕ್ರಮನ ಶಾಸನ ಮತ್ತು ತಮಿಳುನಾಡಿನ ತಿರುವಳ್ಳೂರಿನ 1ನೆಯ ಶಿವಮಾರನ ಶಾಸನ ಇವಿಷ್ಟೆ. ಆದರೆ ಇದೇ ಅವಧಿಯಲ್ಲಿ ಗಂಗರ ಹಲವಾರು ತಾಮ್ರ ಶಾಸನಗಳು ದೊರೆತಿವೆ.

ಪ್ರಾಚೀನ ಕನ್ನಡ ಅರಸುಮನೆತನಗಳಲ್ಲಿ ಬಹುಶಃ ಗಂಗರಷ್ಟು ತಾಮ್ರಶಾಸನಗಳನ್ನು ಹಾಕಿಸಿರುವವರು ಬೇರೆ ಇಲ್ಲ. ಇದುವರೆಗೂ ಸುಮಾರು ನೂರಕ್ಕೂ ಮೀರಿ ಅವರ ತಾಮ್ರಶಾಸನಗಳು ದೊರೆತಿವೆ. ಇಮ್ಮಡಿ ಮಾರಸಿಂಹನವರೆಗೂ ಗಂಗರಾಜರು ತಾಮ್ರಶಾಸನಗಳನ್ನು ಹಾಕಿಸಿದ್ದಾರೆ. ಮುಂದಿನ ರಾಜರ ತಾಮ್ರಶಾಸನಗಳು ದೊರೆತಿಲ್ಲ.

ಗಂಗರ ತಾಮ್ರಶಾಸನಗಳಿಗೂ ಶಿಲಾಶಾಸನಗಳಿಗೂ ಹಲವು ಮುಖ್ಯವಾದ ವ್ಯತ್ಯಾಸಗಳುಂಟು. ತಾಮ್ರಶಾಸನಗಳು ಬಹುಪಾಲು ಸಂಸ್ಕೃತದಲ್ಲಿವೆ; ಶಿಲಾಶಾಸನಗಳು ಕನ್ನಡದಲ್ಲಿವೆ. ತಾಮ್ರಶಾಸನಗಳಲ್ಲಿ ಒಕ್ಕಣೆ ಹೆಚ್ಚು. ಗಂಗವಂಶದ ಮೂಲ ಪುರುಷ ಕೊಂಗುಣಿವರ್ಮನಿಂದ ಆರಂಭಿಸಿ ಶಾಸನ ಕೊರೆಸಿದ ರಾಜನವರೆಗೂ ಪೀಳಿಗೆಯನ್ನು ಸವಿವರವಾಗಿ ಕೊಟ್ಟಿರುತ್ತವೆ. ಶಿಲಾಶಾಸನಗಳಲ್ಲಾದರೋ ಹೆಚ್ಚು ವಿಷಯಗಳಿರುವುದಿಲ್ಲ; ಅವನ್ನು ಹಾಕಿಸಿದ ರಾಜರ ಹೆಸರು, ಒಮ್ಮೊಮ್ಮೆ ಅವರ ಬಿರುದುಗಳು, ಶಾಸನಗದ ಕಾಲ ಮತ್ತು ಉದ್ದೇಶಗಳನ್ನು ಅವು ನೇರವಾಗಿ ಸರಳವಾಗಿ ತಿಳಿಸಿರುತ್ತದೆ; ಆವನಿಯ ತುಂಡುಶಿಲಾಶಾಸನ ಇದಕ್ಕೆ ಅಪವಾದ. ಇದು ತಾಮ್ರ ಶಾಸನಗಳಂತೆ ಸಂಸ್ಕೃತದಲ್ಲಿದೆ; ಗಂಗರ ಪೀಳಿಗೆಯನ್ನು ಕೊಡುತ್ತದೆ. ಆದರೆ ನಡುವೆಯೇ ನಿಂತುಹೋಗುವುದರಿಂದ ಇದು ಯಾರ ಕಾಲದ್ದೆಂದು ಹೇಳಲು ಬಾರದು.

ಗಂಗರ ತಾಮ್ರಶಾಸನಗಳು ಹೆಚ್ಚಾಗಿದ್ದರೂ ಅವುಗಳ ನೈಜತೆಯ ವಿಷಯದ ಬಗ್ಗೆ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯಗಳಿವೆ. ರೈಸ್ ತಮಗೆ ದೊರೆತ ತಾಮ್ರಶಾಸನಗಳೆಲ್ಲವನ್ನೂ ಸಾಮಾನ್ಯವಾಗಿ ನೈಜವೆಂದೇ ಪ್ರತಿಪಾದಿಸಿದರೆ, ಫ್ಲೀಟ್ ಮೊದಮೊದಲು ಈ ಎಲ್ಲ ಶಾಸನಗಳೂ ಕೂಟಶಾಸನಗಳೆಂದೇ ಹೇಳಿದರು. ಆದರೆ ಕಡೆಗೆ ಪೆನುಗೊಂಡೆ ತಾಮ್ರಶಾಸನವೇ ಮೊದಲಾದ ಕೆಲವನ್ನಾದರೂ ನೈಜವೆಂದು ಫ್ಲೀಟ್ ಒಪ್ಪಿಕೊಳ್ಳಬೇಕಾಯಿತು. ಈಚೆಗೆ ಗಂಗರ ಹಲವು ತಾಮ್ರಶಾಸನಗಳು ದೊರೆತಿರುವುದರಿಂದ ಇವುಗಳ ತೌಲನಿಕ ಅಧ್ಯಯನದಿಂದ ನೈಜ ಮತ್ತು ಕೂಟ ಶಾಸನಗಳನ್ನು ಬೇರ್ಪಡಿಸುವುದು ಸಾಧ್ಯವಾಗಿದೆ. ಈಗ ಪರಿಶೀಲಿಸಿದಾಗ ಅವುಗಳಲ್ಲಿ ಕೆಲವಾದರೂ ಕೂಟಶಾಸನಗಳಿರಬೇಕೆಂಬುದು ವ್ಯಕ್ತವಾಗುತ್ತದೆ. ಇಂಥ ಶಾಸನಗಳಲ್ಲಿ ಗಂಗರ ವಂಶಾವಳಿಯನ್ನು ಸರಿಯಾಗಿ ಕೊಟ್ಟಿದ್ದರೂ ಲಿಪಿ, ಭಾಷೆ, ಕೊಟ್ಟಿರುವ ಕಾಲ ಮುಂತಾದವುಗಳಲ್ಲಿಯೂ ಶಾಸನಗಳನ್ನು ಕೊರೆದಿರುವ ರೀತಿ, ಹಲಗೆಗಳ ಆಕಾರಗಳಲ್ಲಿಯೂ ಅವು ಹುಟ್ಟಿದುವೆಂದು ಹೇಳಲಾದ ಕಾಲದವಲ್ಲದೆ ಬೇರೆಯ ಕಾಲದವರಾಗಿರುತ್ತವೆ. ಸು.5ನೆಯ ಶತಮಾನದಲ್ಲಿದ್ದ 1ನೆಯ ಮಾಧವನದೆಂದು ತಿಳಿಸುವ ನಂದಿಯ ತಾಮ್ರಶಾಸನದ ಲಿಪಿ ಒಂಬತ್ತನೆಯ ಶತಮಾನದ್ದಕ್ಕಿಂತ ಹಿಂದೆ ಹೋಗಲಾರದು; ಕನ್ನಡ ಬೆರೆತ ಸಂಸ್ಕೃತ ಭಾಷೆ, ಅದರಲ್ಲಿಯ ಹೇರಳವಾದ ವ್ಯಾಕರಣದೋಷಗಳು, ಕಂಡರಿಸಿರುವ ಒರಟು ರೀತಿ ಇವುಗಳನ್ನು ನೋಡಿದಾಗ ಇವು ಗಂಗರ ಆಸ್ಥಾನದಲ್ಲಿದ್ದ ವಿಶ್ವಕರ್ಮರಿಂದ ರಚಿತವಾದವೇ ಎಂಬ ಸಂದೇಹ ಬರುತ್ತದೆ. ತಗಡೂರು, ತಂಜಾವೂರು, ಕೂಡಲೂರುಗಳಲ್ಲಿ ದೊರೆತ ಹರಿವರ್ಮನವೆಂದು ಹೇಳಿಕೊಳ್ಳುವ–ಶಾಸನಗಳು. ಮಡಿಕೇರಿಯಲ್ಲಿ ದೊರೆತ ಹರಿವರ್ಮನವೆಂದು ಹೇಳಿಕೊಳ್ಳುವ–ಶಾಸನಗಳು, ಮಡಿಕೇರಿಯಲ್ಲಿ ದೊರೆತ ಅವಿನೀತನ ತಾಮ್ರಶಾಸನ ಮುಂತಾದವನ್ನು ಈ ಗುಂಪಿಗೆ ಸೇರಿಸಬಹುದು. ಗಂಗರ ತಾಮ್ರಶಾಸನಗಳಲ್ಲಿ ಸು.12ರಿಂದ 15ರ ವರೆಗೆ ಇಂಥ ಕೂಟಶಾಸನಗಳಿರಬಹುದೆಂದು ಈಗ ವಿದ್ವಾಂಸರು ಒಪ್ಪುತ್ತಾರೆ.

ಇವರ ತಾಮ್ರಶಾಸನಗಳು ಮೂರರಿಂದ ಏಳು ಹಲಗೆಗಳವರೆಗೆ ಇರುತ್ತವೆ. ಮೊದಮೊದಲ ಅರಸರ ಶಾಸನಗಳ ಹಲಗೆಗಳ ಅಗಲ ಕಿರಿದಾಗಿದ್ದು ಓಲೆಗರಿಯ ಆಕಾರದಲ್ಲಿವೆ. ಹಲಗೆಯ ಒಂದೊಂದು ಮುಖದಮೇಲೂ ಸ್ಫುಟವಾಗಿ ಹಳಗನ್ನಡ ಲಿಪಿಯಲ್ಲಿ ಕಡೆದ 4 ಅಥವಾ 5 ಪಂಕ್ತಿಗಳಿವೆ. ಮುಂದೆ ಕ್ರಮೇಣ ಹಲಗೆಯ ಅಗಲ ಹೆಚ್ಚಾಗಿದೆ. ಸಾಲುಗಳು ಹೆಚ್ಚಿವೆ. ಒಕ್ಕಣೆ ಬೆಳೆದಿದೆ. ಶಾಸನದ ಹಲಗೆಗಳನ್ನು ಎಡಭಾಗದಲ್ಲಿರುವ ರಂಧ್ರಗಳ ಮೂಲಕ ಹಾದುಹೋಗುವ ಒಂದು ಬಳೆಯಿಂದ ಬಂಧಿಸಿ ಬಳೆಯ ತುದಿಗಳನ್ನು ಜೋಡಿಸಿ ಆನೆಯ ಮುದ್ರೆ ಹಾಕಲಾಗುತ್ತಿತ್ತು. ಲಿಪಿ ಆಯಾ ಶತಮಾನದ ಕನ್ನಡದಲ್ಲಿದ್ದರೂ ಭಾಷೆ ಸಂಸ್ಕೃತ, ಪ್ರೌಢಶೈಲಿಯ ಗದ್ಯ: ಶಾಸನಗಳ ಒಕ್ಕಣೆ ಬೆಳೆದಿದೆ. ಶಾಸನದ ಹಲಗೆಗಳನ್ನು ಎಡಾಗದಲ್ಲಿರುವ ರಂಧ್ರಗಳ ಮೂಲಕ ಹಾದುಹೋಗುವ ಒಂದು ಬಳೆಯಿಂದ ಬಂಧಿಸಿ ಬಳೆಯ ತುದಿಗಳನ್ನು ಜೋಡಿಸಿ ಆನೆಯ ಮುದ್ರೆ ಹಾಕಲಾಗುತ್ತಿತ್ತು.

ಲಿಪಿ ಆಯಾ ಶತಮಾನದ ಕನ್ನಡದಲ್ಲಿದ್ದರೂ ಭಾಷೆ ಸಂಸ್ಕೃತ, ಪ್ರೌಢಶೈಲಿಯ ಗದ್ಯ; ಶಾಸನಗಳ ಒಕ್ಕಣೆ ಒಂದೇ ಬಗೆ. ಜೈನ ಶಾಸನಗಳಲ್ಲಿ ಮೊದಮೊದಲಿನ ತಾಮ್ರ ಶಾಸನಗಳು ಪೂರ್ತಿಯಾಗಿ ಸಂಸ್ಕೃತದಲ್ಲಿದ್ದರೂ ದುರ್ವಿನೀತನಿಂದೀಚೆಗೆ ದಾನ ಕೊಟ್ಟ ಗ್ರಾಮದ ಬಳಕೆಗೆ ಬಂತು. ಗಂಗ ದುರ್ವಿನಿತನ ಆಳ್ವಿಕೆಯ ನಾಲ್ಕನೆಯ ವರ್ಷದ ಪೆಣ್ಣೂರು ತಾಮ್ರಶಾಸನದಲ್ಲಿ ಕೊನೆಯ ಒಂದು ವಾಕ್ಯ ಮಾತ್ರ ಕನ್ನಡದಲ್ಲಿದೆ. ಶಾಸನವನ್ನು ಕಂಡರಿಸಿದ ಚೋಮತ್ತಟ್ಟಾರನಿಗೆ ಕೊಟ್ಟ ದತ್ತಿಯನ್ನು ತಿಳಿಸುವ ಮಕ್ಕಣ್ಣಕತ್ತು ಮಣಮ್ಮನೆಯಾಮ್ಪಾರು ಮಟ್ಟಿಯುನ್ತರಕ್ಕುಮ್‌ಒಡೆಅನ್ ಎಂಬ ವಾಕ್ಯ ಆ ಕಾಲದ ಕನ್ನಡದ ಸ್ವರೂಪವನ್ನು ಚೆನ್ನಾಗಿ ಪ್ರತಿಬಿಂಬಿಸುತ್ತದೆ.

ಗಂಗರ ಕೆಲವು ಕಂಬಶಾಸನಗಳೂ ಉಂಟು. ಇವುಗಳಲ್ಲಿ ಶ್ರವಣಬೆಳಗೊಳದ ಕೂಗೆಬ್ರಹ್ಮದೇವರ ಕಂಬದ ಬುಡದಲ್ಲಿರುವ ಮಾರಸಿಂಹನ ಶಾಸನ ಗಂಗರ ಶಿಲಾಶಾಸನಗಳಲ್ಲಿಯೇ ಉದ್ದವಾದ್ದೆನ್ನಬಹುದು. ಇದು ಮಾರಸಿಂಹ ತೀರಿಕೊಂಡ ಅನಂತರ ಅವನ ನೆನಪಿಗಾಗಿ ನಿಲ್ಲಿಸಿದ ಶಾಸನಗಂಬ. ಈ ದೊಡ್ಡ ಶಾಸನದಲ್ಲೂ ಮಾರಸಿಂಹನ ವಂಶಾವಳಿಯನ್ನು ತಿಳಿಸಿಲ್ಲ. ತನ್ನ ಜೀವಿತಕಾಲದಲ್ಲಿ ಮಾರಸಿಂಹ ನಡೆಸಿದ ಯುದ್ಧಗಳನ್ನು ಮತ್ತು ಅವನ ಸಾಧನೆಗಳನ್ನು ಹೃದಯಂಗವಾಗಿ ಚಿತ್ರಿಸಿದೆ. ತ್ಯಾಗದ ಬ್ರಹ್ಮದೇವರ ಕಂಬ ಇನ್ನೊಂದು. ರಾಚಮಲ್ಲನ ಮಂತ್ರಿ ಚಾವುಂಡರಾಯನ ಗುಣಗಾನ ಮಾಡುವ ಈ ಕಂಬದ ಮೇಲಿನ ಶಾಸನ ಮೊದಲು ಕಂಬದ ನಾಲ್ಕು ಮುಖಗಳಲ್ಲಿತ್ತು. ಈಗ ಮೂರು ಮುಖಗಳ ಮೇಲೆ ಅಳಿಸಿಹೋಗಿದೆ.

ಗಂಗರ ಕಾಲದ ವೀರಗಲ್ಲುಗಳು ತಮ್ಮದೇ ಆದ ವೈಶಿಷ್ಟ್ಯ ಹೊಂದಿವೆ. ಇವರ ಕಾಲದ ದಾನಶಾಸನಗಳಿಗಿಂತ ವೀರಗಲ್ಲಿನ ಶಾಸನಗಳ ಸಂಖ್ಯೆಯೇ ಹೆಚ್ಚೆಂದು ಹೇಳಬಹುದು. ಸಾಂಪ್ರದಾಯಿಕವಾದ, ಮೂರು ಅಂತಸ್ತುಗಳ ವೀರಗಲ್ಲುಗಳು ಕೆಲವಿವೆ. ಅವುಗಳಲ್ಲಿ ಯಳ್ಳಂಬಳಸೆಯ ವೀರಗಲ್ಲು ದೊಡ್ಡದಾಗಿಯೂ ಅತ್ಯಂತ ಸುಂದರವಾಗಿಯೂ ಇದೆ. ಬೂದುಬಣ್ಣದ ಕಗ್ಗಲ್ಲಿನಲ್ಲಿ ಈಗ ತಾನೇ ಕಡೆದು ನಿಲ್ಲಿಸಿರುವಷ್ಟು ಹೊಸದಾಗಿ ಕಾಣಿಸುವ ಈ ವೀರಗಲ್ಲಿನ ಮೊದಲ ಅಂತಸ್ತು ವೀರರು ಯುದ್ಧದಲ್ಲಿ ತೊಡಗಿರುವುದನ್ನೂ ಎರಡನೆಯದು ಅವರು ಅಪ್ಸರೆಯರ ತೋಳತೆಕ್ಕೆಯಲ್ಲಿ ಸ್ವರ್ಗದೆಡೆಗೆ ಹಾರುತ್ತಿರುವುದನ್ನೂ ಮೇಲಿನ ಅಂತಸ್ತುಗಳಲ್ಲಿ ಸ್ವರ್ಗದಲ್ಲಿ ಸುಖಾಸೀನರಾಗಿ ಕುಳಿತಿರುವ ನಾಲ್ವರು ವೀರರನ್ನೂ ಚಿತ್ರಿಸಿದೆ. ಅಡ್ಡಪಟ್ಟಿಕೆಗಳಲ್ಲಿ ಶ್ರೀಪುರುಷ ಶಿವಮಾರ ಮೊದಲಾದವರು ತೀರಿಕೊಂಡ ವಿಷಯವನ್ನು ತಿಳಿಸುವ ಶಾಸನವಿದೆ. ಅದರೂ ಇವರ ವೀರಗಲ್ಲುಗಳು ಒರಟು ಹಾಸುಗಲ್ಲುಗಳ ಮೇಲಿರುವುದೇ ಹೆಚ್ಚು. ಎಷ್ಟೋ ವೇಳೆ ಈ ಹಾಸುಗಲ್ಲುಗಳಿಗೆ ನಿರ್ದಿಷ್ಟವಾದ ಆಕಾರ, ಅಳತೆ ಇರುವುದಿಲ್ಲ. ಬಂಡೆಯಿಂದ ಸಿಡಿಸಿದ ಈ ಹಲಗೆಗಳು ಯಾವ ಆಕಾರದಲ್ಲಿದ್ದರೆ ಹಾಗೆಯೇ ಅವನ್ನು ಕಂಡರಿಸಲು ಉಪಯೋಗಿಸುತ್ತಾರೆ. ಶಿಲ್ಪವನ್ನೂ ಶಾಸನವನ್ನೂ ಕಂಡರಿಸಿರುವ ಮುಖವನ್ನು ಕೂಡ

ನಯಗೊಳಿಸಿರುವುದಿಲ್ಲ. ಇದರಲ್ಲಿ ಹೆಚ್ಚು ಭಾಗ ವೀರರ ಆಕೃತಿಗಳಿಗಾಗಿ ಮೀಸಲು; ಒಂದೇ ಅಂತಸ್ತಿನಲ್ಲಿ ಕತ್ತಿಗುರಾಣಿಗಳನ್ನು ಹಿಡಿದ ವೀರರು ಒಬ್ಬರನ್ನೊಬ್ಬರು ಎದುರಿಸುತ್ತಿರವಂತೆಯೋ ಆನೆಕುದುರೆಗಳ ಮೇಲೆ ಕುಳಿತು ಯುದ್ಧಮಾಡುತ್ತಿರುವಂತೆಯೋ ಆನೆಕುದುರೆಗಳ ಮೇಲೆ ಕುಳಿತು ಯುದ್ಧಮಾಡುತ್ತಿರುವಂತೆಯೋ ತೆಳುವುಬ್ಬುಶಿಲ್ಪದಲ್ಲಿ ಬಿಡಿಸಿದ್ದು ಭಾವಯುಕ್ತವಾಗಿರುತ್ತದೆ. ಈ ಶಿಲ್ಪದ ಸುತ್ತಲೂ ಯುದ್ಧದ ವಿಷಯವನ್ನು ತಿಳಿಸುವ ಒಂದು ಶಾಸನ ಹಿರೇಗುಂಡುಗಳಲ್ಲಿನಲ್ಲಿದೆ. ಇಂಥ ಇಪ್ಪತ್ತಕ್ಕೂ ಹೆಚ್ಚು ವೀರಗಲ್ಲುಗಳ ಒಂದು ದೊಡ್ಡ ಗುಂಪೇ ಇದೆ. ರಾಷ್ಟ್ರಕೂಟರಿಗೂ ಗಂಗ ಶ್ರೀಪುರುಷ ಶಿವಮಾರರಿಗೂ ಬೇರೆ ಬೇರೆಕಡೆ ನಡೆದ ಯುದ್ದಗಳಲ್ಲಿ ಮಡಿದ ವೀರರ ಸ್ಮಾರಕವಾಗಿ ಇವು ನಿಂತಿವೆ. ಈಗ ಬೆಂಗಳೂರು ವಸ್ತುಸಂಗ್ರಹಾಲಯದಲ್ಲಿರುವ ಬೇಗೂರಿನದಾದ, ಏಳು ಅಡಿ ಉದ್ದ ಏಳು ಅಡಿ ಅಗಲ ಇರುವ ದೊಡ್ಡದೊಂದು ವೀರಗಲ್ಲು, ಗಂಗ ಎರೆಯಪ್ಪನಿಗೂ ನೊಳಂಬರ ವೀರ ಮಹೇಂದ್ರನಿಗೂ ನಡೆದ ಯುದ್ದದಲ್ಲಿ ತುಂಬೆಪಾಡಿಯಲ್ಲಿ ಗಂಗರ ಸಾಮಂತನಾಗಿದ್ದ ನಾಗತ್ತರ ಶತ್ರುವಿನ ಆನೆಯನ್ನೆದುರಿಸಿ ತುಮುಲ ಯುದ್ಧ ಮಾಡಿ ಮಡಿದ ವಿಷಯವನ್ನು ತಿಳಿಸುತ್ತದೆ; ಯುದ್ಧದಲ್ಲಿ ಸತ್ತವೀರರಿಗಷ್ಟೇ ಅಲ್ಲ ರಾಜರಿಗಾಗಿ ವೇಳೆಗೊಂಡು ಸತ್ತ ವೀರರಿಗಾಗಿ ನಿಲ್ಲಿಸಿರುವ ವೀರಗಲ್ಲುಗಳೂ ಹಲವಿವೆ. ನೀತಿಮಾರ್ಗಸ್ವರ್ಗಸ್ಥನಾದಾಗ, ಅವನ ಮನೆಮಗತಿಯಾಗಿದ್ದ (ಎಂದರೆ ಮನೆಯಲ್ಲಿ ಹುಟ್ಟಿದವನಂತೆಯ ಇದ್ದು ವಂಶಪಾರಂಪರ್ಯವಾಗಿ ಕೆಲಸಮಾಡುತ್ತ ಬಂದ ಮನೆಯಾಳು) ಅಗರಯ್ಯ ಸಾಯಲು ಸಿದ್ಧವಾಗಿರುವಂತೆ ಆ ಶಾಸನದ ಮೇಲಿರುವ ಶಿಲ್ಪದಲ್ಲಿ ಬಿಡಿಸಿದೆ. ರಾಚಮಲ್ಲ ಕುಂಬಳೆಯಲ್ಲಿ ಸ್ವರ್ಗಸ್ಥನಾದಾಗ ಬೆದನ್ತೆ ರಾಚಯ ಎನ್ನುವವನು ಕಿಚ್ಚು ಹೊಕ್ಕುದನ್ನೂ ಗಂಗ ಚನ್ದಿಯಮ್ಮರಸ ಕಾಲವಾದಾಗ ಕೀರ್ಗುಂತೆಯಾದ್ದನ್ನೂ ವೀರಗಲ್ಲುಗಳು ತಿಳಿಸುತ್ತವೆ. ಆತಕೂರಿನಲ್ಲಿ ದೊರೆತ ದೊಡ್ಡದೊಂದು ವೀರಗಲ್ಲು ಸ್ವಾರಸ್ಯವಾದ್ದು. ಗಂಗ ಬೂತುಗ ರಾಷ್ಟ್ರಕೂಟರೊಡನೆ ಸೇರಿ ಚೋಳ ರಾಜಾದಿತ್ಯನ ಮೇಲೆ ತಕ್ಕೋಲದಲ್ಲಿ ಯುದ್ಧ ಮಾಡಿದಾಗ ಮಣಲೆರನೆಂಬ ವೀರ ತೋರಿಸಿದ ಶೌರ್ಯಕ್ಕೆ ಮೆಚ್ಚಿ ಬೇಡಿಕೊ ಎಂದಾಗ, ಕಾಳಿ ಎಂಬ ಬೇಟೆನಾಯಿಯನ್ನು ಮಣಲೆರ ಕೇಳಿ ಪಡೆಯುತ್ತಾನೆ. ಒಮ್ಮೆ ಆ ನಾಯಿಯನ್ನು ಕಾಡುಹಂದಿಯೊಂದರ ಮೇಲೆ ಬಿಟ್ಟಾಗ ನಾಯಿಯೂ ಹಂದಿಯೂ ಒಟ್ಟಿಗೆ ಸಾಯುತ್ತವೆ. ಮಣಲೆರ ಆ ನಾಯಿಗಾಗಿ ವೀರಗಲ್ಲನ್ನು ನಿಲ್ಲಿಸಿ ಅದರ ಪೂಜೆಗಾಗಿ ಭೂಮಿದಾನ ಮಾಡಿದ್ದಾನೆ. ಶಾಸನದ ಮೇಲೆ ನಾಯಿಹಂದಿಗಳು ಕಚ್ಚಾಡುತ್ತಿರುವ ಶಿಲ್ಪವಿದೆ.

ಗಂಗರ ಕಾಲದ ಕಾನಕಾನಹಳ್ಳಿ

ಕಾನಕಾನಹಳ್ಳಿ ಪ್ರದೇಶದ ಶಾಸನಗಳಲ್ಲಿ ಗಂಗರ ಕಾಲದವುಗಳು ಹೆಚ್ಚಿನವು ವೀರಗಲ್ಲುಗಳಾಗಿವೆ. ಮೊದಲನೆಯದಾಗಿ ಸಾತನೂರು ಗ್ರಾಮದಲ್ಲಿ ದೊರೆತ ಇಮ್ಮಡಿ ರಾಚಮಲ್ಲನ (ಕ್ರಿ.ಶ. 870–919)

ಆಳ್ವಿಕೆಯ ಕಾಲದ 29ನೇ ವರ್ಷದಲ್ಲಿ ಸಾಂತನೆಂಬುವವನು ದರೋಡೆಗೆ ಬಂದವರ ಮೇಲೆ ಎರಗಿ ತನ್ನ ಪೌರುಷ ಮೆರೆದು ಸತ್ತ ಸಂಗತಿಯನ್ನು ತಿಳಿಸುತ್ತದೆ. ಈ ದೊರೆಯ ಮತ್ತೊಂದು ಹೆಸರು ಸತ್ಯವಾಕ್ಯ ಪೆರ್ಮಾಡಿ ಎಂದು ತಿಳಿಯುತ್ತದೆ. ಈ ವೀರಗಲ್ಲೇ ಗಂಗದೊರೆಯನ್ನು ಎರೆಯಪ್ಪರಸನ ಮಗ ಎಂದಿದೆ. ಈ ಎರೆಯಪ್ಪನೇ ನೀತಿಮಾರ್ಗ, ಸತ್ಯಸಂದ ಎರೆಯಂಗ (ಕ್ರಿ.ಶ.ಸು 842–70). ಈ ಸಾಂತನೆಂಬುವನ ವೀರ ಕೀರ್ತಿಯನ್ನು ಸ್ತುತಿಸಲು ಹಾಕಿಸಿರುವುದೇ ಈ ವೀರಗಲ್ಲು. ಈ ಸಾಂತನಿಂದಲೇ ಈ ಊರಿಗೆ ಸಾಂತನೂರು ಬಂದಿರಬಹುದು. ಅದೇ ಜನರ ಬಾಯಲ್ಲಿ ಸಾತನೂರಾಗಿದೆ. (ಶಾಂತನೂರು>ಸಾಂತನೂರು>ಸಾತನೂರು) ಅರ್ಥ ಸಾಂತನ ಊರು ಎಂಬುದು ಸ್ಪಷ್ಟ – ಎಂದು ಪ್ರೊ॥ ಟಿ.ವಿ.ವಿ. ಅಭಿಪ್ರಾಯ ಪಡುತ್ತಾರೆ.[4]

ಹಲಗೂರು ಪಕ್ಕದಲ್ಲಿ ಒಂದು ಕಿ.ಮೀ. ದೂರದಲ್ಲಿರುವ ಯಲಚಗೆರೆ ಗ್ರಾಮದ ವೀರಗಲ್ಲು (ಸಂ:88/ಸು.870) ಸಹ ಇದೇ ಪೆರ್ಮನಾಡಿಯ ಕಾಲಕ್ಕೆ ಸೇರಿದ್ದಾಗಿ ತೋರುತ್ತದೆ. ಕಿಟ್ಟಪಳ್ಳಿಯನ್ನು ಹಾಳುಗೆಡವಿ ತುರುಗೋಳು ನಡೆಸಿದ ಸಂದರ್ಭದಲ್ಲಿ ಚಿಕ್ಕಮಾದಯ್ಯ ಎಂಬುವನು ಹೋರಾಡಿ ಸತ್ತ ಸಂಗತಿಯನ್ನು ಈ ವೀರಗಲ್ಲು ತಿಳಿಸುತ್ತದೆ.

ಸಾತನೂರು ಹೋಬಳಿ ದೂಂತೂರು ಗ್ರಾಮಕ್ಕೆ ಸೇರಿದ ಕುಂದೂರು ದೊಡ್ಡಿಯಲ್ಲಿ ದೊರೆತ ವೀರಗಲ್ಲು (ನಂ:52/ಕಿ.ಶ. 900) ಸೇನೆಮಾರನ ಮಗ ಮಂದಣ್ಣ ಎಂಬುವನು ತುರುಗೋಳು ನಡೆದಾಗ ಪ್ರಾಣಾರ್ಪಣೆ ಮಾಡಿದ ಘಟನೆಯನ್ನು ಹೇಳುತ್ತದೆ.

ಭಾಷೆಯ ಆಧಾರದಿಂದ ಮರಳವಾಡಿ ಪಕ್ಕದ ತೇರು ಬೀದಿ ವೀರಗಲ್ಲುಗಳು ಸಹ (ನಂ. 14, 15, 16) ಗಂಗರ ಕಾಲದವೇ ಇರಬಹುದೆಂದು ತೋರುತ್ತವೆ.

ಈ ಉಲ್ಲೇಖಗಳು ಕಾನಕಾನಹಳ್ಳಿ ಪ್ರದೇಶದ ಸುತ್ತಮುತ್ತ ತಲಕಾಡುಗಂಗದೊರೆ ಇಮ್ಮಡಿ ರಾಚಮಲ್ಲ (ಕ್ರಿ.ಶ. 870–916) ನ ಮತ್ತು ಒಂದನೆಯನೇ ಬೂತುಗನ ಮಗ ಎರೆಯಂಗ (ಎರೆಗಂಗ) ನ ಕಾಲ 886–920ಕ್ಕೆ ಒಳಪಟ್ಟಿದ್ದವು ಎಂದರೆ ಗಂಗವಾಡಿ – 96 ಸಾವಿರ ಸೀಮೆಗೆ ಸೇರಿದ್ದವು ಎಂಬುದನ್ನು ಸೂಚಿಸುತ್ತವೆ.

ತುರುಗೋಳು, ಕಳ್ಳರ ಏರು ಇಂತಹ ಸಾಮಾಜಿಕ ಸಂದರ್ಭಗಳು ಮಾತ್ರವೇ ಇಲ್ಲಿ ಗೋಚರಿಸುತ್ತಿದ್ದು, ಹೇಳಿಕೊಳ್ಳಬಹುದಾದ ರಾಜಕೀಯ ಚಲನವಲನಗಳು, ದೊಡ್ಡ ಹೋರಾಟಗಳು ಯಾವುವೂ ಈ ಭಾಗದಲ್ಲಿ ಆಗ್ಗೆ ನಡೆದಂತೆ ತೋರುವುದಿಲ್ಲ.[5]

16ನೇ ಶತಮಾನ ಪೂರ್ವಾರ್ಧದಲ್ಲಿ ಚನ್ನಪಟ್ಟಣ ಸೀಮೆಗೆ ಕಾನಕಾನಹಳ್ಳಿ ಪ್ರದೇಶ ಮಿಳತವಾಗುವುದಕ್ಕೆ ಮುನ್ನ, ಈ ಪ್ರದೇಶಗಳು ಗಂಗವಾಡಿ, ಚಿಕ್ಕಗಂಗವಾಡಿ ಪ್ರದೇಶಗಳಿಗೆ ಒಳಪಟ್ಟು ಅಚ್ಚಲು ನಾಡು, ಕೆಳಲೆನಾಡು (ಕಿ ಲೈನಾಡು) ಹೊಮ್ಮಳಿಗೆ ನಾಡು, ಸಿಗಲನಾಡು, ಹನಿಯೂರ ನಾಡು, ಚೊಕ್ಕನಾಡು, ಈಚೆಗೆ ಮಧ್ಯಕಾಲೀನದಲ್ಲಿ ಅರಳಾಳು ರಾಜ್ಯ, ಚುಳ್ಳಕನ ಸೀಮೆ, ನೂಲನಾಡು, ತುಂಗಣಿನಾಡು ಇತ್ಯಾದಿ ಸಣ್ಣ ಸಣ್ಣ ವಿಭಾಗಗಳ ಕೆಳಗೆ ಸೇರಿದ್ದುವೆಂದು ಶಾಸನಾಧಾರಗಳಿಂದ ತಿಳಿಯುತ್ತದೆ. ಆದರೆ ಕಾನಕಾನಹಳ್ಳಿಯ ಸುತ್ತಮುತ್ತ ವಿಶೇಷವಾಗಿ ರಾಜಕೀಯ ಕಾರ್ಯಗಳನ್ನು, ಕೆಲವು ಶತಕಗಳ ಕಾಲ ನಿರ್ವಹಿಸಿದ ಕೀರ್ತಿ, 'ಸಿಗಲನಾಡು ಪ್ರಭು'ಗಳಿಗೆ ಸಲ್ಲುತ್ತದೆ. ಇದರ ವಿಚಾರವನ್ನು ಮುಂದೆ ಪ್ರತ್ಯೇಕವಾಗಿ, ವಿವರವಾಗಿ ನೋಡಬಹುದು.

ಈ ಭಾಗದ ಗಡಿಗಳನ್ನು, ಕಾಲಘಟ್ಟಗಳನ್ನು ವಿವರವಾಗಿ ಗುರುತಿಸುವ ಕಾರ್ಯ ಇನ್ನೂ ಸಮರ್ಪಕವಾಗಿ ನಡೆಯಬೇಕಗಿದೆ. ಈ ನಾಡುಗಳು ವಿಸ್ತಾರದಲ್ಲಿ ಚನ್ನಪಟ್ಟಣದ ಪ್ರದೇಶಗಳನ್ನು ಒಳಗೊಂಡಂತೆಯೂ ಅವು ಉಲ್ಲೇಖಗೊಂಡಿರುವ ಆಯಾ ಸಂದರ್ಭಗಳು ಸೂಚಿಸುತ್ತವೆ. ಮಧ್ಯಕಾಲದಲ್ಲಿ ಕಾನಕಾನಹಳ್ಳಿ ಅರಳಾಳು ರಾಜ್ಯಕ್ಕೆ ಆಮೇಲೆ ತುಂಗಣಿನಾಡ ಸ್ಥಳಕ್ಕೆ ಸೇರಿದ್ದ ಉಲ್ಲೇಖಗಳು ಸ್ಪಷ್ಟವಾಗಿಯೇ ಇವೆ.[6]

ಚೋಳರ ಆಳ್ವಿಕೆ

ಮರಳವಾಡಿ ಹೋಬಳಿ ಎಲಚವಾಡಿ ಗ್ರಾಮಕ್ಕೆ ಪಶ್ಚಿಮದಲ್ಲಿ ಹೊನ್ನೇಗೌಡರ ಹೊಲದಲ್ಲಿ ದೊರೆತ ಒಂದು ತಮಿಳು ಶಾಸನ (ನಂ. 12, 1118) ಸಹ ಒಂದು ವೀರಗಲ್ಲೇ ಆಗಿದೆ. ಇದು ಕುಲೋತ್ತುಂಗ ಚೋಳದೇವನ 49ನೇ ಆಳ್ವಿಕೆಯ ವರ್ಷಕ್ಕೆ ಸೇರಿದುದಾಗಿದ್ದು ಈ ದೊರೆಯ ಕೀರ್ತಿ, ಜಯ, ಭೂಮಿ ಮತ್ತು ಭಾಗ್ಯಗಳ ದೇವತೆಯರಿಂದ ಕೂಡಿ ಸಪತ್ನಿಕನಾಗಿ, ಗಂಗ ಮಂಡಲವನ್ನು ತನ್ನ ಆಳೊತ್ತಿಗೆ ಸೇರಿಸಿಕೊಂಡಿರುವಾಗ ಶಕ್ಕ ಗಾಮುಂಡನ ಮಗ ಶಿಂಜಗಾಮುಂಡನು ಹುಲಿಯೊಂದಿಗೆ ಹೋರಾಡಿ ಸತ್ತುಹೋದ ಸಂಗತಿಯಿಂದ ಕೂಡಿದೆ. ಆಗ ಅವನ ಹೆಂಡತಿ, ವಸವ (ಮಗ) ಗಾಮುಂಡನ ಮಗಳು ಶಿಕ್ಕವ್ವೆ (ಚಿಕ್ಕವ್ವ) ಸಹಗಮನ ಮಡಿದಳೆಂದು ಹೇಳಿದೆ. ಮುದಿಗೊಂಡ ಚೋಳ ಮಂಡಳ ರಾಜೇಂದ್ರ ಚೋಳನ ವಿಚಾರ ಸಿಗಲನಾಡ ಪ್ರಭುಗಳ ಕಾಲದ ಶಾಸನಗಳಲ್ಲಿ ಕಾಣುವ ಮೊದಲೇ ಇಲ್ಲಿ ಕಾಣಿಸತೊಡಗಿದೆ.[7]

ದಕ್ಷಿಣ ಕರ್ನಾಟಕವನ್ನೇ ಸುಮಾರು ನೂರು ವರ್ಷಗಳವರೆಗೆ ಆಳಿದ ಚೋಳರು ಕ್ರಿ. 990ರ ನಂತರ ರಾಜ್ಯ ವಿಸ್ತರಣೆಯಲ್ಲಿ ತೊಡಗಿ ಗಂಗರ ಆಳ್ವಿಕೆಯ ಪ್ರದೇಶಗಳನ್ನೆಲ್ಲಾ ವಶಪಡಿಸಿಕೊಂಡರು. ಕ್ರಿ.ಶ. 1004ರಲ್ಲಿ ರಾಜೇಂದ್ರ ಚೋಳನು ತಲಕಾಡನ್ನು ವಶಪಡಿಸಿಕೊಂಡು ಗಂಗರ ಪರಮಾಧಿಕಾರವನ್ನು ತೊಡೆದು ಹಾಕಿದನು. ಹೊಯ್ಸಳರ ಪ್ರಾಬಲ್ಯ ಪ್ರಕಾಶಿಸುವವರೆಗೆ ಚೋಳರು ಚನ್ನಪಟ್ಟಣ ಸೀಮೆಯನ್ನು

ಅದಕ್ಕೆ ಸೇರಿದ ಕಾನಕಾನಹಳ್ಳಿ ಪ್ರದೇಶದ ಅನೇಕ ಚಿಕ್ಕ ಚಿಕ್ಕ ಪ್ರಾಂತ್ಯಗಳನ್ನು ಅಬಾಧಿತವಾಗಿ ಆಳ್ವಿಕೆ ಮಾಡಿದರು.

ಚೋಳರ ಪ್ರಮುಖ ದೊರೆ ರಾಜ ರಾಜ ಚೋಳನು (ಕ್ರಿ.ಶ. 985-1016) ಮುಡಿಗೊಂಡ ಚೋಳಮಂಡಲವೆಂದು ಹೆಸರು ಕೊಟ್ಟ ಮೇಲೆ ಚನ್ನಪಟ್ಟಣ ಸೀಮೆಯೂ, ಅದರ ಸುಪರ್ಧಿಗೆ ಸೇರಿದ್ದ ಕಾನಕಾನಹಳ್ಳಿಯೂ ಸುತ್ತಮುತ್ತಲ ಇತರ ಸ್ಥಳಗಳೂ ಕಿಳಲೆನಾಡಿನ (ಕಿ ವಿಲ್ಯೆನಾಡು) ಭಾಗವಾಗಿ ಆ ಮಂಡಲದೊಳಗೆ ಸೇರಿಕೊಂಡವೆಂದು ತೋರುವುದು (ಸು. 1000-1100) ಆದರೆ ವಿಷ್ಣುವರ್ಧನನ ಸೇನಾನಿ ಗಂಗರಾಜನು ಚೋಳರನ್ನು ಓಡಿಸಿದಾಗ ಅವರು ಮೈಸೂರು ಸೀಮೆಯಿಂದ ಕಾಲ್ತೆಗೆದರು. ದಕ್ಷಿಣ ಮೈಸೂರಿನಿಂದ ಚೋಳ ಸಾಮಂತರೂ ತಮ್ಮ ನೆಲೆಗಳನ್ನು ವಿಧಿಯಿಲ್ಲದೆ ಹುಡುಕಿಕೊಳ್ಳಬೇಕಾಯಿತು.

ಅಂದರೆ, ದಕ್ಷಿಣ ಕರ್ನಾಟಕದ ತುಮಕೂರು, ಬೆಂಗಳೂರು (ಕಾನಕಾನಹಳ್ಳಿ ಪ್ರದೇಶ ಸೇರಿದೆ) ಮಂಡ್ಯ ಹಾಗೂ ಮೈಸೂರು ಜಿಲ್ಲೆಗಳು ಚೋಳರ ವಶದಲ್ಲಿ ಉಳಿದಿದ್ದರೂ, 11ನೇ ಶತಮಾನದಲ್ಲಿ ಪ್ರಬಲರಾದ ಹೊಯ್ಸಳರು ಚೋಳರನ್ನು ಹೊರದೂಡಲು ಪ್ರಯತ್ನಿಸಿ ಚೋಳ ಕುಲೋತ್ತುಂಗನ ಆಳ್ವಿಕೆಯ ಭಾಗವಾಗಿದ್ದ (ಸು.ಕ್ರಿ.ಶ. 1116) ತಲಕಾಡನ್ನು ವಶಪಡಿಸಿಕೊಂಡು ತಲಕಾಡುಗೊಂಡ ಎಂಬ ಬಿರುದು ಪಡೆದ. ಇದರಲ್ಲಿ ಮೇಲೆ ಹೇಳಿದಂತೆ ಇವನ ದಂಡನಾಯಕ ಗಂಗರಾಜ ಚೋಳರ ಪ್ರತಿನಿಧಿಯಾಗಿ ಗಂಗವಾಡಿಯ ಆದಿಯಮನನ್ನು, ದಾಮೋದರ ಮತ್ತು ನರಸಿಂಹವರ್ಮರೆಂಬ ಇನ್ನಿಬ್ಬರನ್ನು ಸೋಲಿಸಿ ಆ ಪ್ರದೇಶವನ್ನು ಅವರಿಂದ ಕಸಿದುಕೊಂಡನು. ಕುಲೋತ್ತುಂಗ ಚೋಳ ಹೀಗೆ ಗಂಗವಾಡಿಯನ್ನು ಕಳೆದುಕೊಂಡನು ಕೋಲಾರ ಜಿಲ್ಲೆಯ ಕೆಲವು ಭಾಗಗಳು ಅವನ ಅಧೀನದಲ್ಲಿದ್ದವು.

ಚೋಳರ ಮೊದಲನೆಯ ರಾಜೇಂದ್ರಚೋಳ, ಗಂಗ ಸಾಮ್ರಾಜ್ಯವನ್ನು ವಶಪಡಿಸಿಕೊಂಡು, ಚೋಳ ಸಾಮ್ರಾಜ್ಯದ ಮಾದರಿಯಲ್ಲಿ ತುಂಡು ತುಂಡಾಗಿ ವಿಭಜಿಸಿ ವಿವಿಧ ಚೋಳ ಮಂಡಲಗಳಾಗಿ ವಿಂಗಡಿಸಿದನು. ಇದರಿಂದ ಈಗಿನ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಪ್ರದೇಶ, ಮುದಿಗೊಂಡ ಚೋಳ ಮಂಡಲದ ಭಾಗವಾಗಿತ್ತು. ಇದರಲ್ಲಿ ಕಿಳಲೆನಾಡು, ಮೊರಸುನಾಡು, ಸೀಗಲನಾಡು, ರಾಜೇಂದ್ರ ಚೋಳ ಒಳನಾಡೆಂಬ ಉಪವಿಭಾಗಗಳಿದ್ದವು. ರಾಜೇಂದ್ರ ಚೋಳ ಒಳನಾಡಿಗೆ ಸೇರಿದ್ದ ಕುಣಿಗಲು ರಾಜೇಂದ್ರ ಚೋಳಪುರವಾಗಿತ್ತು. ಮಣ್ಣಿನಾಡು ವಿಕ್ರಮ ಚೋಳ ಮಂಡಲದ ಭಾಗವಾಗಿತ್ತು.[8]

ಎಲ್ಲಾ ರಾಜ ವಂಶಗಳ ಕಾಲದಲ್ಲಿಯೂ ಸ್ಥಳೀಯ ಆಡಳಿತ ವ್ಯವಸ್ಥೆ ಪಾಳೇಗಾರರ. ನಾಡಪ್ರಭುಗಳ ನೇತೃತ್ವದಲ್ಲಿ ನಿರಾಂತಕವಾಗಿ ನಡೆಯುತ್ತಿತ್ತು.

ಕ್ರ.ಸಂ.	ಆಯಗಾರರು	ಕಾರ್ಯಚಟುವಟಿಕೆ
1.	ಗೌಡ – ಪ್ರಭು	ಗ್ರಾಮಗಳಲ್ಲಿ ನ್ಯಾಯ ತೀರ್ಮಾನ ಮತ್ತು ಗ್ರಾಮಾಡಳಿತದ ಮೇಲ್ವಿಚಾರಣೆ.
2.	ಶಾನುಭೋಗ – ಕರಣಿಕ	ದಾಖಲಾತಿ ಮತ್ತು ನಿರ್ವಹಣೆ
3.	ತಳವಾರ	ಕಾವಲುಗಾರಿಕೆ, ಕಳ್ಳರನ್ನು ಹಿಡಿಯುವುದು
4.	ತೋಟಿ	ಆಡಳಿತ ಮತ್ತು ಜನತೆಯೊಂದಿಗೆ ಸಂಪರ್ಕ ಮಾಧ್ಯಮದಂತೆ ಕಾರ್ಯನಿರ್ವಹಣೆ
5.	ನೀರುಗಂಟಿ	ಕೆರೆ ಕಟ್ಟೆಗಳಲ್ಲಿ ನಿಷ್ಪಕ್ಷಪಾತವಾಗಿ ನೀರು ಹಂಚುವುದು.
6.	ಪುರೋಹಿತ	ಶುಭಕಾರ್ಯಕ್ಕೆ ಶುಭ ಸಂದರ್ಭ, ಮಳೆ ನಕ್ಷತ್ರಗಳನ್ನು ತಿಳಿಸುವುದು. ಗ್ರಾಮದ ದೇವರುಗಳಿಗೆ ನಿಯತವಾಗಿ ಪೂಜೆ ಪೂರೈಸುವುದು.
7.	ಕಮ್ಮಾರ	ಕೃಷಿ ಉಪಕರಣಗಳನ್ನು ತಯಾರಿಸುವುದು ಮತ್ತು ದುರಸ್ತಿ ಮಾಡುವುದು
8.	ಬಡಗಿ	ಕೃಷಿ ಉಪಕರಣಗಳನ್ನು ತಯಾರಿಸುವುದು ಮನೆ ಕಟ್ಟುವುದು ಇತ್ಯಾದಿ.
9.	ಕುಂಬಾರ	ಮಡಿಕೆ ಕುಡಿಕೆ, ಗುಂಬ, ವಾಡೆ, ದೀಪ, ಹೆಂಚು, ಇತ್ಯಾದಿಗಳನ್ನು ತಯಾರಿಸುವುದು.
10.	ಅಗಸ	ಬಟ್ಟೆ ಶುಚಿಗೊಳಿಸುವುದು
11.	ಕ್ಷೌರಿಕ	ಮುಡಿ ತೆಗೆಯುವುದು, ಮಂಗಳ ವಾದ್ಯ ನುಡಿಸುವುದು ಮತ್ತಿತರ ಸಾಂಪ್ರದಾಯಿಕ ಸಮಾರಂಭದಲ್ಲಿ ಪಾಲ್ಗೊಳ್ಳುವುದು.
12.	ಅಕ್ಕಸಾಲಿಗ	ದೇವರ ವಿಗ್ರಹ, ಆಭರಣ, ನಾಣ್ಯ, ಮತ್ತಿತರ ಅಳತೆ ಮಾಪನಗಳ ತಯಾರಿಕೆ[9]

ವೃತ್ತಿಯ ಶ್ರಮ ವಿಭಜನೆ ಹೀಗೆ ನಡೆಯುತ್ತ, ಒಂದು ವೃತ್ತಿ ಮತ್ತೊಂದರೊಡನೆ ಆಶ್ರಯಿಸಿಕೊಂಡು, ಬೆಸೆದುಕೊಂಡು ಸೌಹರ್ದಯುತವಾದ ಸ್ಥಳೀಯ ಜೀವನ ನಡೆಯುತ್ತಿತ್ತು.

ವೀರಗಲ್ಲುಗಳು

ಹೊಯ್ಸಳ ಆಳ್ವಿಕೆಯ ಕಾಲದ ವೀರಗಲ್ಲುಗಳ ಕಲ್ಲುಗಳ ಮೇಲೆ ಕೆತ್ತಿದ ಉಬ್ಬು ಶಿಲ್ಪಗಳಾಗಿರದೆ ಅವುಗಳ ವಿವರಣೆಯ ಸಾಹಿತ್ಯಾತ್ಮಕ ವರ್ಣನೆ ಕೂಡ. ಇರುವುದನ್ನು ಗಮನಿಸಬಹುದಾಗಿದೆ.

ಮುಮ್ಮಡಿ ವೀರಬಲ್ಲಾಳನ ಕಾಲದ (1292 – 1343) ವೀರಗಲ್ಲು ಶಾಸನ (ನಂ. 46/1293). ಇವನ ಪರವಾಗಿ ಮಾದಿಗದೇವನಗೌಡ, ಪುರುಷಗೊಂಡನಹಳ್ಳಿ ಭೀಮನಗೌಡನ ಮಗ ರಾಮೇಗೌಡ ಇಬ್ಬರೂ, ರನ್ನ ಒಡೆಯನ ಮೇಲೆ ಏರಿಹೋಗಿ ಎದುರಿಸಿದರು. ಆಗ ರಾಮೇಗೌಡ ಸ್ವರ್ಗಸ್ಥನಾದನು ಅವನ ತಂದೆ ಭೀಮನಗೌಡ ಮಗನಿಗಾಗಿ ಹಾಕಿಸಿದ ವೀರಗಲ್ಲು ಇದು.

ಇದೇ ದೊರೆಯ ಕಾಲದಲ್ಲಿ ಮರಳವಾಡಿ ಪಕ್ಕದ ದೇವನಹಳ್ಳಿ ಗ್ರಾಮದ ದಕ್ಷಿಣಕ್ಕೆ ದೇವಮ್ಮನ ಗುಡಿಯ ಪಕ್ಕದಲ್ಲಿ ಕಂಡು ಬಂದ ವೀರಗಲ್ಲು ಅದರ ಮೇಲಿನ ಬರಹ ತಮಿಳಿನಲ್ಲದೆ ಅದು ನಂ : 11/1310 ಕಾಲಕ್ಕೆ ಸೇರಿದೆ. ಸಾಮಾನ್ಯವಾಗಿ ಎಲ್ಲ ವೀರಗಲ್ಲುಗಳು ಊರಿಗಾಗಿ, ದನದ ರಕ್ಷಣೆಗಾಗಿ ವನ್ಯ ಮೃಗಗಳೊಂದಿಗೆ ಹೋರಾಡಿ ವೀರಮರಣವನ್ನಪ್ಪಿದ ವೀರರಿಗಾಗಿ ಹಾಕಿಸಿದವುಗಳೇ ಆಗಿದೆ.

ಚೊಕ್ಕ ಇಳಂಗೋತ್ತೋನ್ ಹಂದಿ ಬೇಟೆಗೆ ತನ್ನ ನಾಯಿಯೊಂದಿಗೆ ಹೋಗಿ ಹಂದಿಯೊಂದಿಗೆ ಹೋರಾಡಿ ಅವನೂ ಅವನ ನಾಯಿಯು ಸಾಯುತ್ತಾರೆ. ಅವನ ಸಲುವಾಗಿ ಮಂಜಿ ಸೆಟ್ಟಿಯ ಮಗ ಅಂಜಿಸೆಟ್ಟಿ ಸ್ವಭೂಮಿ ದತ್ತಿ ಬಿಟ್ಟು ಅವನ ಮಗ ಶಿಕ್ಕಣ್ಣಿ ವೀರಗಲ್ಲು ಹಾಕಿಸುತ್ತಾನೆ. ಇಲ್ಲಿ ದಾಖಲಾರ್ಹವಾದ ಆತಗೂರು ಶಾಸನ ನೆನಪಿಗೆ ಬರುತ್ತದೆ.

3ನೇ ವೀರಬಲ್ಲಾಳನ ಆಳ್ವಿಕೆ ಅವಧಿ (1292-1343) ಧಾರ್ಮಿಕ ಮತ್ತು ಸಾಮಾಜಿಕ ಕೈಂಕರ್ಯದ ವಿಷಯ ದಾಖಲಾಗಿದೆ. ಕಾನಕಾನಹಳ್ಳಿ ಪ್ರದೇಶದಲ್ಲಿ ಅಂತಹ ಕಾರ್ಯಗಳಲ್ಲಿ ಕೆಲವನ್ನು ಗುರುತಿಸಬಹುದಾಗಿದೆ. ಒಂದು ತಮಿಳು ಶಾಸನದಲ್ಲಿ (ನಂ. 7/1296) ಚೊಕ್ಕ ನಾಯಕನ ಮಗ ತಾಮತ್ತಾಳ್ವರ್ ಕೆಲವು ಭೂಮಿಯನ್ನು ದೇವ ದೇವರಿಗೆ ದಾರಾಪೂರ್ವಕ ನೀಡಿದ್ದು ಶಿಲಾ ಮತ್ತು ತಾಮ್ರ ಶಾಸಗಳೆರೆಡರಲ್ಲೂ ದಾಖಲಾಗಿವೆ. ಹಾರೋಹಳ್ಳಿ ಹೋಬಳಿಯ ಹುಲ್ಲುಗೊಂಡ ಹಳ್ಳಿಯಲ್ಲಿ ಇದು ಸಿಕ್ಕಿದೆ. ಇನ್ನೊಂದು ತಮಿಳು ಶಾಸನದಲ್ಲಿ (ನಂ. 18/1314) ದೇವರಿಗೆ ದತ್ತಿ ನೀಡಿದ ಪ್ರಸ್ತಾಪಿಸಿದೆ.

ಹೊಯ್ಸಳ ಕಾವೇರಿವಲ್ಲಭ ಮಾರದೇವನೂ ಇತರ ಕೆಲವರೂ ರಾಜಗುರು ಹರದಯ್ಯ ದೇವರಿಗೆ, ಸೋಮಣ್ಣ ದೇವರಿಗೆ ನಾಡುಗಳನ್ನು ದತ್ತಿ ನೀಡಿದ ಒಂದು ಧಾರ್ಮಿಕಮಹತ್ತರ ಶಾಸನ (ನಂ. 70/1314) ಸಾತನೂರು ಹೋಬಳಿ ಚಿಕ್ಕಾಲಹಳ್ಳಿ ಗ್ರಾಮದಲ್ಲಿ ದೊರೆತಿದೆ. ಇದು ಕೂಡ ಮುಮ್ಮಡಿ ವೀರಬಲ್ಲಾಳನ ಆಳ್ವಿಕೆಯ ಕಾಲದೊಳಗಿನದೇ. ಇಲ್ಲಿ ರಾಜಗುರು ಹರದಯ್ಯನನ್ನು ಸಕಲಗುಣಸಂಪನ್ನನೆಂದು ವಿಶೇಷಿಸಿದೆ.

ಹಾರೋಹಳ್ಳಿ ಹೋಬಳಿ ಗಾಣಾಳುಕೊಪ್ಪ ಗ್ರಾಮದ ಶಾಸನ (ನಂ. 6/1316?) ಸಾಮಾಜಿಕ ಮಹತ್ತ್ವದ ದಾಖಲೆಯಿಂದ ಕೂಡಿದೆ. ಹೊಯ್ಸಳ 3ನೆಯ ವೀರಬಲ್ಲಾಳನು ರಾಜ್ಯವಾಳುತ್ತಿದ್ದ ಕಾಲದಲ್ಲಿ (1292-1343) ಹೊಯ್ಸಳರ ಅಧಿಕಾರಿ ಸಿಂಗಯ್ಯ ದಣ್ಣಾಯಕನಿಗೆ ವಿಧೇಯನಾಗಿ ನಡೆದುಕೊಳ್ಳುತ್ತಿದ್ದ ಮಾಚಯ್ಯ ನಾಯಕನೆಂಬವನೂ ಹೊಮ್ಮಳಿಗೆ ನಾಡಿನ ರಾಮದೇವ, ಮಾಳಿಯಣ್ಣ ನಾಯಕ, ಪಿಳ್ಳೆಯಪ್ಪ, ಇರಿಸೆಟ್ಟಿ, ಚೊಕ್ಕಣ್ಣ, ಸಸಣದೇವ ಸೇರಿದಂತೆ ಚೊಕ್ಕನಾಡೊಳಗಣ ಸಮಸ್ತ ಗೌಡರೂ ಹಲವು ಹದಿನೆಂಟು ಸಮಯದವರೂ ಒಂದಾಗಿ ಪಟ್ಟಣಸ್ವಾಮಿ ನಾಗಪ್ಪನ ಮಗ ಚೊಕ್ಕಸೆಟ್ಟಿಗೆ ಆತ

ಗಾಳಿಹಳು ಗ್ರಾಮದಲ್ಲಿ ಸಂತೆ ಕಟ್ಟಿಸಿದ್ದಕ್ಕಾಗಿ ಊರ ಮುಂದಿನ ಕೆರೆಯ ಕೆಳಗೆ ಗದ್ದೆ ಹೊಲ ಮನೆಗಳು ಮುಂತಾದವನ್ನು ಕೊಡುಗೆಯಾಗಿ ಕೊಟ್ಟರು ಎನ್ನುವುದು ಶಾಸನದ ವಿಷಯ. ಇಲ್ಲಿ ಸಮಾಜ ಜೀವನದಲ್ಲಿ ಸಂತೆ ಎಷ್ಟು ಮುಖ್ಯವಾದ ಸಂಗತಿಯಾಗಿತ್ತು ಎನ್ನುವುದು ವಿದಿತವಾಗುತ್ತದೆ. ಗಾಣಾಳು ಗ್ರಾಮದ ಹಳೆಯ ಹೆಸರು ಗಾಳಿಹಾಳು ಎನ್ನುವುದು ಗಮನಿಸಬೇಕಾದ ಸಂಗತಿ (ಗಾಳಿ ಹಾಳ ಸಂತೆ ಕಟ್ಟಿಸುವಲ್ಲಿ). "ಬೆಂಗಳೂರು ದಕ್ಷಿಣ ತಾಲ್ಲೂಕಿನ ತುದಿ ಕನಕಪುರ ತಾಲ್ಲೂಕು ಉತ್ತರದ ಭಾಗ, ಬನ್ನೇರುಘಟ್ಟದ ಸುತ್ತಮುತ್ತ ಹೊಮ್ಮಳಿಗೆ ನಾಡು".[10]

ಇದೇ ಹೊಯ್ಸಳ ಚಕ್ರವರ್ತಿಯ ಕಾಲದಲ್ಲಿ ಪ್ರಧಾನಿ ದಾದಿ ಸೋಮೆಯ ದಣ್ಣಾಯಕ ಮತ್ತು ಮಾರದೇವಿ ದೇವ ಇಬ್ಬರೂ ಬೋಗಾಯಿ ಅಕ್ಕಲಾಡು ಪಟ್ಟಣ ಸ್ವಾಮಿ ಪರೆಪ್ಪಸೆಟ್ಟಿಗೆ ಕೊಟ್ಟ ಕೊಡುಗೆ ಬಹುಶಃ ಒಂದು ದೇವದೇಯ ಶಾಸನಬ್ದ (ನಂ. 69/1319?). ಇದು ಸಾತನೂರು ಹೋಬಳಿಯ ಅಚ್ಚಲು ಗ್ರಾಮದ್ದು, ಇದೇ ಅಚ್ಚಲು ಗ್ರಾಮದ ಸಣ್ಣನಿಂಗೇಗೌಡನ ಮಗ ಕೆಂಪಣ್ಣ ಬೇವುಕುಪ್ಪೆಯಲ್ಲಿ ತಮ್ಮ ಅಣ್ಣ ಕಟ್ಟಿಸಿದ ಕೆರೆಯಲ್ಲಿ ವಿರುಪಣ್ಣಯ್ಯನಿಗೆ ದಾನವಾಗಿ ಕೊಳಗ ಗದ್ದೆ ನೀಡಿದ ಸಂಗತಿ ಕಾನಕಾನಹಳ್ಳಿ ಹೋಬಳಿ ಶ್ರೀನಿವಾಸನ ಹಳ್ಳಿಯ ದೊಡ್ಡಕೆರೆ ಹುಟ್ಟುಬಂಡೆ ಶಾಸನದಲ್ಲಿ (ನಂ. 102/?) ಉಕ್ತವಾಗಿದೆ. ಇಲ್ಲಿಯ ಬೇವುಕುಪ್ಪೆಯೇ ಈಗಿನ ಬೇಕುಪ್ಪೆ.

ಈವರೆಗೆ ಗಮನಿಸಿದಂತೆ ಕಾನಕಾನಹಳ್ಳಿ ತಾಲ್ಲೂಕಿನಲ್ಲಿ ಹೊಯ್ಸಳ ವಿಷ್ಣುವರ್ಧನನ ಮಗ 1ನೆಯ ನರಸಿಂಹನ ಕಾಲದಿಂದ (1142 – 72) 3ನೆಯ ನರಸಿಂಹನ ಮಗ ಮೂರನೆಯ ಬಲ್ಲಾಳನ ಕಾಲದವರೆಗೆ (1292–1343) ಹಾರೋಹಳ್ಳಿ, ಸಾತನೂರು, ಹಲಗೂರು, ಮರಳವಾಡಿ ಹೋಬಳಿಗಳಿಗೆ ಸೇರಿದ ಕೆಲವು ಹಳ್ಳಿಗಳಲ್ಲಿ ವೀರಗಲ್ಲುಗಳೂ ಸಾಮಾಜಿಕ ಧಾರ್ಮಿಕ ವಿದ್ಯಮಾನಗಳ ದಾಖಲಾತಿಗಳಿರುವ ಶಿಲಾಶಾಸನಗಳೂ ಕಂಡುಬಂದಿವೆ. ಇವುಗಳ ಸಂಖ್ಯೆ ಹೆಚ್ಚಿಲ್ಲವಾದರೂ, ತ್ರುಟಿತವಾಗಿದ್ದರೂ, ದೇವದೇಯಗಳಿಗೆ ಅರಸರ, ದಣ್ಣಾಯಕರ ಹಾಗೂ ಊರಗೌಡರ ಸಹಕಾರ ಬಹುವಾಗಿ ದೊರೆತಿರುವುದನ್ನು ಅವುಗಳಿಂದ ತಿಳಿಯಬಹುದಾಗಿದೆ. ಹೊಯ್ಸಳರು ವಿಷ್ಣುವರ್ಧನನ ಕಾಲದಿಂದೀಚೆಗೆ ಪ್ರಬಲಿಸಿದ ಮೇಲೆಯೂ ಕೆಲವು ಕಾಲ ಚೋಳರ ಪ್ರಭಾವ, ವಿಶೇಷವಾಗಿ ಮುದಿಗೊಂಡ ಚೋಳರ ಪ್ರಭಾವ ಚಿಕ್ಕಗಂಗವಾಡಿ ಪ್ರಾಂತದಲ್ಲಿ ಕಂಡುಬಂದಿರುವುದನ್ನು ನಾವು ಗಮನಿಸಬಹುದಾಗಿದೆ. ಈ ಚಿಕ್ಕಗಂಗವಾಡಿ ಶಿಂಷಾಕಣಿವೆಯ ಪ್ರದೇಶಗಳನ್ನು ವ್ಯಾಪಿಸಿತ್ತು ಚನ್ನಪಟ್ಟಣದ ಹೊಂಗನೂರು ಅವರ ಮುಖ್ಯ ಪಟ್ಟಣವಾಗಿತ್ತು.

ಕಾನಕಾನಹಳ್ಳಿಯಲ್ಲಿಯೂ ಆ ತಾಲ್ಲೂಕಿಗೆ ಸೇರಿದ ಪ್ರದೇಶಗಳಲ್ಲಿಯೂ ಚೋಳರ, ಹೊಯ್ಸಳರ ಆಡಳಿತ ಕಾಲಕ್ಕೆ ಸಿಗಲನಾಡು, ನೂಲನಾಡು, ತುಂಗಣೆನಾಡು, ಕೆಳಲೆನಾಡು, ಹೊಮ್ಮಳಿಗೆನಾಡು,

ಎಳವಲೆನಾಡು, ದೇಸಿಗಜಿ ನಾಡು, ಅಚಲನಾಡು, ಚೊಕ್ಕನಾಡು, ಮಹಾನಾಡು ಈ ಮೊದಲಾದ ಪ್ರದೇಶಗಳು ಗ್ರಾಮಸಮುಚ್ಚಯದ ಕೇಂದ್ರಗಳಿಗಾಗಿ ಆಡಳಿತ ನಿರ್ವಹಿಸಿದಂತೆ ತೋರುವುದು. ಈ ವೇಳೆಗೆ ಕಾನಕಾನಹಳ್ಳಿ ಅಂತಹ ಪ್ರಸಿದ್ಧಿಯ ಪಟ್ಟಣವೇನೂ ಆಗಿರಲಿಲ್ಲ, ಅದರ ಸುತ್ತಮುತ್ತಣ ಕೆಲವು ಪ್ರದೇಶಗಳು, ಅರಳಾಳು, ನಿಟ್ಟೂರು, ಮರಳವಾಡಿ, ತುಂಗಣಿ, ಅಚ್ಚಲು ಈ ಕೆಲವು ಸ್ಥಳಗಳು ಚಟುವಟಿಕೆಯ ಕೇಂದ್ರಗಳಾಗಿದ್ದವು ಎಂದು ಭಾವಿಸಲು ಅವಕಾಶವಿದೆ. ಇಲ್ಲಿ ಸ್ಥಳೀಯ ಆಡಳಿತದ ಮುಖ್ಯ ವ್ಯಕ್ತಿಗಳಾಗಿ ಕಾರ್ಯ ನಿರ್ವಹಿಸುವ ನಾಯಕರು, ನಾಡ ಪ್ರಭುಗಳು, ಗೌಡರು ಇರುತ್ತಿದ್ದರು. ಕಾನಕಾನಹಳ್ಳಿ ಚರಿತ್ರೆ ಲೇಖಕರು : ಡಾ. ಟಿ.ವಿ.ವಿ. ಪುಟ 33/34."

ಹೊಯ್ಸಳ ವಂಶದ ಶಾಸನಗಳು

ಹೊಯ್ಸಳರ ಆಳಿಕೆಯ ಕಾಲ ಶಾಸನಗಳ ರಚನೆಯ ಸಮೃದ್ಧಿಯ ಕಾಲ. ಕರ್ನಾಟಕದ ಶಾಸನಗಳ ರಚನೆಯಲ್ಲ ಈ ಕಾಲವನ್ನು ಸುವರ್ಣಯುಗವೆನ್ನಬಹುದು. ಶಾಸನಗಳ ರಚನೆಯ ಕಲೆಗಾರಿಕೆಯಲ್ಲಾಗಲಿ, ಲಿಪಿಯ ಸೌಂದರ್ಯದಲ್ಲಾಗಲಿ, ಭಾಷೆ ಹಾಗೂ ಸಾಹಿತ್ಯದ ಸಮೃದ್ಧಿಯಲ್ಲಾಗಲಿ ಹೊಯ್ಸಳ ಶಾಸನಗಳನ್ನು ಸರಿತೂಗುವ ಶಾಸನಗಳು ಅಪರೂಪ. ಐತಿಹಾಸಿಕ ಮಹತ್ತ್ವದ ದೃಷ್ಟಿಯಿಂದಲೂ ಈ ಶಾಸನಗಳನ್ನು ಕಡೆಗಣಿಸುವಂತಿಲ್ಲ. ಹೊಯ್ಯಳರು ಆಳಿದ ಸು.300 ವರ್ಷಗಳ ಅವಧಿಯಲ್ಲಿ 2,000ಕ್ಕೂ ಮೀರಿ ಶಾಸನಗಳು ಹುಟ್ಟಿಕೊಂಡಿವೆ. ವಿಷ್ಣುವರ್ಧನನ ಕಾಲಕ್ಕೆ ಮುನ್ನ ಶಾಸನಗಳನ್ನು ಹಾಕಿಸುವಲ್ಲಿ ಅಷ್ಟು ಸಮೃದ್ಧಿಯಾಗಲಿ ವೈವಿಧ್ಯತೆಯಾಗಲಿ ಕಂಡುಬರುವುದಿಲ್ಲ. ಶಾಸನಗಳು ಕಗ್ಗಲ್ಲಿನ ಮೇಲೋ, ಒರಟುಕಲ್ಲಿನ ಮೇಲೊದಪ್ಪ ಅಕ್ಷರಗಳಲ್ಲಿದ್ದು ವಿವರಗಳು ಬಹು ಕಡಿಮೆ ಇರುತ್ತಿದ್ದವು. ವಿಷ್ಣುವರ್ಧನನ ಕಾಲದಲ್ಲಿ ಶಾಸನಗಳ ರಚನೆಯಲ್ಲಿ ಒಂದು ಸಿದ್ಧರೂಪವನ್ನು ಕೊಡಲು, ವೈವಿಧ್ಯವನ್ನು ತರಲು ಪ್ರಯತ್ನಿಸಿದ್ದಂತೆ ತೋರುತ್ತದೆ.

ಹೊಯ್ಸಳರ ಶಾಸನಗಳಲ್ಲಿ ಕಂಡುಬರುವ ಒಂದು ವೈಲಕ್ಷಣ್ಯವೆಂದರೆ ಅವರು ಶಾಸನಗಳನ್ನು ಹಾಕಿಸುವಲ್ಲಿ ಒಂದು ಕಡೆ ಚೋಳರನ್ನು ಅನುಕರಿಸಿದ್ದರೆ ಮತ್ತೊಂದು ಕಡೆ ಚಾಳುಕ್ಯರ ಮೇಲ್ಪಂಕ್ತಿಯನ್ನು ಅನುಸರಿಸಿರುವುದು. ಚೋಳರು ಆಕ್ರಮಿಸಿದ್ದ ಗಂಗವಾಡಿಯ ಭಾಗವಾಗಿದ್ದ ಕೋಲಾರ, ಬೆಂಗಳೂರು, ಮಂಡ್ಯ, ಮೈಸೂರು ಜಿಲ್ಲೆಗಳ ಭಾಗಗಳನ್ನು ಹಿಂದಕ್ಕೆ ಪಡೆದ ಮೇಲೆ ಬಹುಕಾಲ ಆ ಭಾಗಗಳಲ್ಲಿ ಹೊಯ್ಸಳರೂ ತಮಿಳಿನಲ್ಲಿಯೇ ಶಾಸನಗಳನ್ನು ಹಾಕಿಸಿದರು. ಅಷ್ಟೇ ಅಲ್ಲ, ಚೋಳರಂತೆ ಇವರೂ ದೇವಾಲಯದ ತಳಪಾದಿ ಕಲ್ಲುಗಳು, ಗೋಡೆಗಳು, ಕಂಬಗಳನ್ನೇ ಶಾಸನ ಹಾಕಿಸಲು ಬಳಸಿದರು. ಚೋಳರನ್ನು ಓಡಿಸಿ ತಲಕಾಡನ್ನು ಗೆದ್ದುಕೊಂಡು, ಅಲ್ಲಿ ವಿಷ್ಣುವರ್ಧನ ಕಟ್ಟಿಸಿದ ಕೀರ್ತಿನಾರಾಯಣಸ್ವಾಮಿ ದೇವಾಲಯದ ತಳಪಾದಿಯ ಮೇಲೆ ಈ ವಿಷಯವನ್ನು ತಿಳಿಸುವ ಮತ್ತು

ದತ್ತಿ ಕೊಟ್ಟುದನ್ನು ತಿಳಿಸುವ ಹಲವಾರು ಶಾಸನಗಳಿರುವುದು ತಮಿಳಿನಲ್ಲಿಯೇ. ಇವು ಸಾಮಾನ್ಯವಾಗಿ ವಸ್ತು ನಿಷ್ಠವಾದ ಕಿರುಗದ್ಯ ಶಾಸನಗಳು. ಕನ್ನಡ ಶಾಸನಗಳಿಗೆ ಹೋಲಿಸಿದರೆ ಇಂಥ ಶಾಸನಗಳ ಸಂಖ್ಯೆ ಬಹು ಕಡಿಮೆ ಎನ್ನಬಹುದು. ಹೊಯ್ಸಳರ ಒಟ್ಟು ಶಾಸನಗಳಲ್ಲಿ ಈ ತಮಿಳು ಶಾಸನಗಳ ಸಂಖ್ಯೆ ಬಹು ಕಡಿಮೆ.

ಹೊಯ್ಸಳರು ಹೇರಳವಾಗಿ ಹಾಕಿಸಿರುವ ಕನ್ನಡ ಶಾಸನಗಳು ಪ್ರಸಿದ್ಧವಾದುವು. ಸೊಸವೂರಿನ ಆಸುಪಾಸಿನಲ್ಲಿ ದೊರೆತಿರುವ ಇವರ ಮೊದಮೊದಲ ಶಾಸನಗಳು ಪ್ರತ್ಯೇಕ ಮೈಲಿಗಲ್ಲುಗಳಾಕಾರದ ಶಿಲಾ ಹಲಗೆಯ ಮೇಲೆ ರಚಿಸಿದವುಗಳಾಗಿವೆ. ಮುಂದೆ ದೇವಾಲಯದ ಗೋಡೆಗಳ ಮೇಲೆ ಶಾಸನಗಳನ್ನು ಹಾಕಿಸುವ ಪದ್ಧತಿಯನ್ನನುಸರಿಸಿದರೂ ಶಾಸನಗಳನ್ನು ಕಂಡರಿಸುವುದಕ್ಕಾಗಿಯೇ ಬೇರೆಯಾಗಿ ಶಿಲಾಫಲಕಗಳನ್ನು ಸಿದ್ಧಪಡಿಸುವ ಪದ್ಧತಿ ಸಾಮಾನ್ಯವಾಯಿತು. ವಿಷ್ಣುವರ್ಧನ ಬೇಲೂರಿನಲ್ಲಿ ವಿಜಯನಾರಾಯಣಸ್ವಾಮಿ ದೇವಾಲಯವನ್ನು ಕಟ್ಟಿಸಿದಾಗ ಅದರ ವಿವರಗಳನ್ನು ತಿಳಿಸುವ ದೀರ್ಘವಾದ ಶಾಸನವನ್ನು ಆ ದೇವಾಲಯದೊಳಗಿನ ಗೋಡೆಯ ಮೇಲೆ ಹಾಕಿಸಿದ್ದಾನೆ. ಹಾಗೆಯೇ ಹಳೇಬಿಡಿನ ಹೊಯ್ಸಳೇಶ್ವರ ದೇವಾಲಯದ ಒಳಗೋಡೆಯ ಮೇಲೆ ಹದಿನಾರು ದತ್ತಿ ಶಾಸನಗಳಿವೆ. ಶಾಂತಿಗ್ರಾಮದ ನರಸಿಂಹ ದೇವಾಲಯದ ಮುಂಭಾಗದ ಗೋಡೆಯ ತುಂಬ ಕಂಡರಿಸಿರುವ ಶಾಸನಗಳನ್ನೂ ನಿಟ್ಟೂರಿನ ಜೈನಬಸದಿಯ ಮುಂಭಾಗದ ಗೋಡೆಯ ಮೇಲೆ ಆ ಬಸದಿಯನ್ನು ಕಟ್ಟಿಸಿದ ವಿವರಗಳನ್ನು ತಿಳಿಸುವ ಶಾಸನವನ್ನೂ ನೋಡಬಹುದು. ಗೋಡೆಗಳನ್ನೂ ಶಿಲ್ಪಗಳಿಂದ ತುಂಬಿಸುತ್ತಿದ್ದುದರಿಂದ ಮತ್ತು ಕಾರ್ನೀಸುಗಳೂ ಅಲಂಕರಣಗಳಿಂದ ಕೂಡಿರುತ್ತಿದ್ದುದರಿಂದ ಮತ್ತು ಕಾರ್ನಿಸುಗಳೂ ಅಲಂಕರಣಗಳಿಂದ ಕೂಡಿರುತ್ತಿದ್ದುದರಿಂದ ಅವುಗಳ ಮೇಲೆ ಶಾಸನ ಹಾಕಿಸುವ ಪದ್ಧತಿ ಕೈಬಿಟ್ಟು ಹೋಗಿರಬೇಕು. ಇದರ ಬದಲು ಕೆಲವು ವೇಳೆ ಕಂಬದ ಬುಡದ ಮುಖಗಳ ಮೇಲೋ, ಅಡ್ಡತೊಲೆಗಳ ಮೇಲೋ ದತ್ತಿಶಾಸನಗಳಿರುವುದುಂಟು. ನರಸೀಪುರದ ನರಸಿಂಹ ದೇವಾಲಯ, ಹೆಗ್ಗೆರೆಯ ಜೈನಬಸದಿ, ಹಿರೇನಲ್ಲೂರಿನ ಈಶ್ವರ ದೇವಾಲಯ, ಬಗ್ಗವಳ್ಳಿಯ ನರಸಿಂಹ ದೇವಾಲಯಗಳ ಮುಖಮಂಟಪ ಅಥವಾ ನವರಂಗದ ತೊಲೆಗಳ ಮೇಲೆ ಈ ರೀತಿಯ ಶಾಸನಗಳಿವೆ. ಆದರೆ ಇವರ ಶಾಸನಗಳಲ್ಲಿ ಮುಖ್ಯವಾದುವೂ ವಿಶಿಷ್ಟವಾದುವೂ ಎಂದರೆ ದೇವಾಲಯ, ಬಸದಿಗಳ ಮುಂದೆ ಬೇರೆಯಾಗಿ ನಿಲ್ಲಿಸಿರುವ ಶಾಸನ ಕಲ್ಲುಗಳು. ಈ ಕಾಲದಲ್ಲಿ ಇಂಥ ಶಾಸನ ಲೇಖನವೂ ಒಂದು ಕಲೆಯಾಗಿ ಬೆಳೆಯಿತು. ಸುಂದರವಾದ ಕಲ್ಲಿನ ಹಲಗೆ, ಅದರ ಮೇಲ್ಭಾಗ ಕಮಾನಾಗಿದ್ದು ಅದಕ್ಕೆ ಬಳ್ಳಿಸುರುಳಿಯ ಅಂಚು; ಆ ಕಮಾನಿನ ಕೆಳಗೆ ಆಯಾ ದೇವಾಲಯ, ಬಸದಿಗಳಿಗೆ ಸಂಬಂಧಿಸಿದಂತೆ ದೇವತಾಮೂರ್ತಿಗಳು–ಶಿವದೇವಾಲಯವಾದರೆ ಲಿಂಗ, ನಂದಿ, ಪೂಜಾರಿ ಭಕ್ತಮೂರ್ತಿಗಳು; ವಿಷ್ಣುದೇವಾಲಯವಾದರೆ ಆ ದೇವಾಲಯದ ಮೂಲಮೂರ್ತಿಗಳಾದ ಕೇಶವ ಅಥವಾ ನರಸಿಂಹ

ಅಥವಾ ವೇಣುಗೋಪಾಲ, ಬಸದಿಯಾದರೆ ಮುಕ್ಕೊಡೆಯ ಕೆಳಗೆ ಜಿನಮೂರ್ತಿ–ಅಲ್ಲಿಂದ ಕೆಳಗೆ ಮಟ್ಟಸವಾಗಿ ನುಣುಪಾಗಿ ಮಾಡಿರುವ ಕಲ್ಲಿನ ಮೇಲೆಗುಂಡಾಗಿ ಒಂದೇ ಪ್ರಮಾಣದಲ್ಲಿ ಅಂದವಾಗಿ ಕೊರೆದಿರುವ ಪಂಕ್ತಿಗಳು, ಅದರಲ್ಲಿಯೂ ಮೊದಲ ಮತ್ತು ಕಡೆಯ ಸಾಲುಗಳಲ್ಲಿ ತಲೆಕಟ್ಟನ್ನೋ ಒತ್ತಕ್ಷರವನ್ನೋ ದೀರ್ಘವನ್ನೊ ಬಳ್ಳಿಸುರುಳಿಯಂತೆ, ಎಲೆಯಂತೆ, ಹಕ್ಕಿಯಂತೆ, ಗರಿಯಂತ ಬೆಳೆಸಿರುವಲ್ಲಿ ಬರೆದವನ ಅಥವಾ ಕೊರೆದವನ ಕಲೆಗಾರಿಕೆಯ ಸೊಗಸು ಎದ್ದು ಕಾಣುತ್ತದೆ. ಸೋಮನಾಥ ಪುರದ ಕೇಶವ ದೇವಾಲಯದ, ಪಂಚಲಿಂಗ ದೇವಾಲಯದ ಶಾಸನಗಳು, ಶ್ರವಣಬೆಳಗೊಳದ ಅಕ್ಕನ ಬಸದಿಯ ಶಾಸನ, ತಿಪ್ಪೂರಿನ ಗಂಗರಾಜನ ಶಾಸನ, ಗೋವಂದನಹಳ್ಳಿ, ಕೆರೆಸಂತೆ, ವರಾಹನಾಥ ಕಲ್ಲಹಳ್ಳಿಯ ಶಾಸನಗಳು ಈ ಮೊದಲಾದುವು ಇಂಥ ಸುಂದರವಾದ ಅಭಿವ್ಯಕ್ತಿಗೆ ಮಾದರಿಗಳು.

ದೇವಾಲಯದ ಗೋಡೆಗಳ ಮೇಲೆ ಕಂಡರಿಸಿರುವ ಮೂರ್ತಿಗಳ ಪೀಠಗಳ ಮೇಲೆ ಅವುಗಳ ಹೆಸರನ್ನೋ ಅಥವಾ ಕಂಡರಿಸಿದ ರೂವಾರಿಯ ಹೆಸರನ್ನೋ ತಿಳಿಸುವ – ತ್ರಿವಿಕ್ರಮ, ಸಂಕ್ರಂದನ, ಅಚ್ಯುತ ಅಥವಾ ಮಲ್ಲಿತಂಮ, ಮಸಣ, ಮಾಬ, ಮಾಣಿಬಲಕಿ ಇತ್ಯಾದಿ–ಒಂದೇ ಪದದ ಪೀಠಸಾಸನಗಳಿಂದಾರಂಭಿಸಿ, ಮೇಲೆ ಹೇಳಿದ ಶಾಸನಗಳನ್ನು ಕಂಡರಿಸಲೆಂದೇ ತಯಾರಿಸಿದ ಸುಂದರವಾದ ಶಿಲಾಫಲಕಗಳ ಮೇಲಿನ ವಿಸ್ತಾರವಾದ ದೇವತಾಸ್ತುತಿ, ರಾಜಮನೆತನದ ಪೀಳಿಗೆಯ ವರ್ಣನೆ, ರಾಜನ ವಿಸ್ತಾರವಾದ ಹೆಗ್ಗಳಿಕೆ, ಅವನ ಕೈಕೆಳಗಿನ ಸಾಮಂತ ಅಥವಾ ಅಧಿಕಾರಿಯ ಹೆಗ್ಗಳಿಕೆ, ಅವನ ವಂಶ, ಅವನು ನಿರ್ಮಿಸಿದ ದೇವಾಲಯ, ಬಿಟ್ಟ ದತ್ತಿ ಹಾಗೂ ಅವುಗಳ ವರ್ಣನೆ, ದತ್ತಿ ಪಡೆದವರ ವಂಶಾವಳಿ ಕೊನೆಯಲ್ಲಿ ಶಪನ ಮುಂತಾದ ಹತ್ತಾರು ವಿವರಗಳನ್ನೊಳಗೊಂಡ ದೀರ್ಘವಾದ ಶಾಸನ ಗವರೆಗೂ ವಿಷಯ ವ್ಯಾಪ್ತಿಯುಂಟು. ಹೊಯ್ಸಳ ರಾಜರಂತೆ ಅವರ ಪ್ರಧಾನಿಗಳು, ದಂಡನಾಯಕರು, ಇತರ ಅಧಿಕಾರಿಗಳು ದೇವಾಲಯಗಳನ್ನು ನಿರ್ಮಿಸಿ ಅವುಗಳಿಗೆ ದತ್ತಿಬಿಟ್ಟ ಶಾಸನಗಳು ಹೀಗೆ ವಿಸ್ತಾರವಾಗಿರುತ್ತವೆ. ಗಂಗರಾಜ, ಪುಣಿಸ, ಹುಳ್ಳ, ಚಂದ್ರಮೌಳಿ, ಬೂಚಿರಾಜ, ಗೋವಿಂದ, ಪೋಲಾಳ್ವ, ಸೋಮನಾಥ ಮೊದಲಾದವರು ಹಾಕಿಸಿರುವ ಇಂಥ ಶಾಸನಗಳಲ್ಲಿ ವಿವರಗಳನ್ನು ಗದ್ಯಪದ್ಯಾತ್ಮಕವಾಗಿ ಚಂಪೂ ಶೈಲಿಯಲ್ಲಿ ಕೊಡುವುದು ಪದ್ಧತಿ. ಅಂದವಾದ ಕಲ್ಲಿನ ಕಂಡರಣೆ, ಸುಂದರವಾದ ಲಿಪಿಗಳಿರುವಂತೆ ಉತ್ತಮ ಸಾಹಿತ್ಯ ಲಕ್ಷಣಗಳನ್ನೂ ಈ ಶಾಸನಗಳಲ್ಲಿ ಕಾಣಬಹುದು. ಚಿದಾನಂದ ಬುಧ, ಜನ್ನ ಮೊದಲಾದ ಪ್ರಸಿದ್ಧ ಕವಿಗಳೂ ಇಂಥ ಶಾಸನಗಳನ್ನು ರಚಿಸಿದ್ದಾರೆ. ರಾಜರ ಪೀಳಿಗೆಯನ್ನು ಕೊಡುವಲ್ಲಿ, ಅವರ ಗುಣಗಾನ ಮಾಡುವಲ್ಲಿ ಒಂದೇ ಬಗೆಯ ಪದ್ಯಗಳನ್ನು ಹಲವಾರು ಶಾಸನಗಳಲ್ಲಿ ಕಾಣಬಹುದು. ಬಹುಶಃ ಆಸ್ಥಾನದಲ್ಲಿದ್ದ ಪಂಡಿತರಿಂದ ರಾಜವಂಶ ಪ್ರಶಸ್ತಿಯನ್ನು ಬರೆಸಿಟ್ಟಿದ್ದು ಹೊಸ ಹೊಸ ಶಾಸನಗಳನ್ನು ರಚಿಸುವಾಗ ಆ ಪ್ರಶಸ್ತಿಯಿಂದ ಕೆಲ

ಪದ್ಯಗಳನ್ನು ಆಯ್ದುಕೊಳ್ಳುತ್ತಿದರೆಂದು ತೋರುತ್ತದೆ. ಧರ್ಮಕಾರ್ಯಗಳನ್ನು, ಪುಣ್ಯಕಾರ್ಯಗಳನ್ನು, ದಾನದತ್ತಿಗಳನ್ನು ಉಲ್ಲೇಖಿಸುವುದೇ ಈ ಶಾಸನಗಳ ಉದ್ದೇಶವಾದರೂ ಅವುಗಳಲ್ಲಿ ಆಯಾ ಕಾಲದಲ್ಲಿ ಆಳುತ್ತಿದ್ದ ರಾಜನ ವಂಶ ಮತ್ತು ಪ್ರಶಸ್ತಿಗಳನ್ನು ಕೊಡುವ ಪದ್ಧತಿ ಇದ್ದುದರಿಂದ ಸ್ವಾಭಾವಿಕವಾಗಿ ಐತಿಹಾಸಿಕ ವಿಷಯಗಳು ಇವುಗಳಲ್ಲಿ ತುಂಬಿರುತ್ತವೆ. ಅನೇಕ ಶಾಸನಗಳು ಆ ಕಾಲದ ಜನಜೀವನ, ಸಾಮಾಜಿಕ ಆರ್ಥಿಕ ಸ್ಥಿತಿ, ಸಾಂಸ್ಕೃತಿಕ ಬೆಳವಣಿಗೆ, ಮತಗಳಲ್ಲಿನ ಸೌಹಾರ್ದ ಮೊದಲಾದ ಅನೇಕ ವಿಷಯಗಳ ಮೇಲೆ ಬೆಳಕು ಚೆಲ್ಲುತ್ತವೆ.

ಹೊಯ್ಸಳರ ಕಾಲದ ತಾಮ್ರಶಾಸನಗಳ ಸಂಖ್ಯೆ ಬಹು ಕಡಿಮೆ. ಅಲ್ಲಿಯವರೆಗೆ ಈ ಭಾಗದಲ್ಲಿ ಹಾಕಿಸುತ್ತಿದ್ದ ತಾಮ್ರಶಾಸನಗಳ ಮಾದರಿಯನ್ನು ಕೈಬಿಟ್ಟು ಹೊಯ್ಸಳರು ಚೋಳರನ್ನು ಅನುಸರಿಸಿ ತಾಮ್ರದ ಹಲಗೆಗಳನ್ನು ದಪ್ಪನಾಗಿಯೂ ಅಗಲವಾಗಿಯೂ ಇರುವಂತೆ ಮಾಡಿದರು. ಮೂರರಿಂದ ಏಳರವರೆಗೆ ಈ ಹಲಗೆಗಳಿದ್ದು ದಪ್ಪನಾದ ಬಳೆಗೆ ಅವುಗಳನ್ನು ಸೇರಿಸಿರುತ್ತಿತ್ತು. ಈ ಬಳೆಗೆ ಹುಲಿಯ ಗುರುತಿನ ಮುದ್ರೆ ಹಾಕಿಸುತ್ತಿದ್ದರು. ಓಲೆಯ ಗರಿಯಂತೆ ಅಡ್ಡಡ್ಡಲಾಗಿರುತ್ತಿದ್ದ ತಾಮ್ರ ಶಾಸನಗಳು ಈಗ ಉದ್ದುದ್ದವಾಗಿದ್ದು ಮೇಲ್ಭಾಗದಲ್ಲಿ ಉಂಗುರ ಮುದ್ರೆಗಳು ಸೇರಿದುವು. ಶಿಲಾಶಾಸನಗಳಂತೆ ಅಕ್ಷರಗಳನ್ನು ಅತಿ ಗುಂಡಾಗಿ ಕೊರೆದು ಮೇಲಿನ ಮತ್ತು ಕೆಳಗಿನ ಸಾಲುಗಳ ಅಕ್ಷರಗಳಿಗೆ ಬಗೆಬಗೆಯ ಅಲಂಕರಣ ಮಾಡಿರುವುದುಂಟು.

ಈ ಕಾಲದಲ್ಲಿ ವೀರಗಲ್ಲುಗಳೂ ಹೇರಳವಾಗಿ ದೊರೆತಿವೆ. ಗಂಗರ ಕಾಲದ ವೀರಗಲ್ಲುಗಳಿಗಿಂತ ಭಿನ್ನವಾಗಿರುವ ಈ ವೀರಗಲ್ಲುಗಳಲ್ಲಿ ಗೊತ್ತಾದ ಒಂದು ಆಕಾರ ಬಳಕೆಗೆ ಬಂದಿದೆ. ಆದರೆ ಇಲ್ಲಿನ ಶಿಲ್ಪಗಳಲ್ಲಿ ಗಂಗರ ವೀರಗಲ್ಲುಗಳ ಮೇಲೆ ಕಾಣುವ ಕೆಚ್ಚು ಕಸುವು ಅಷ್ಟಾಗಿ ಕಂಡುಬರುವುದಿಲ್ಲ.

ಹೊಯ್ಸಳರ ಕಾಲಕ್ಕೇ ವಿಶಿಷ್ಟವಾದ ಕೆಲವು ಶಾಸನಗಳುಂಟು. ಈ ರಾಜರಿಗೆ ನಿಷ್ಠರಾಗಿದ್ದ ಲೆಂಕರು ತಮ್ಮ ರಾಜ ಕಾಲವಾದಲ್ಲಿ ತಾವೂ ಉಳಿಯುವುದಿಲ್ಲವೆಂಬ ಪ್ರತಿಜ್ಞೆ ಮಾಡಿ ಅದೇ ರೀತಿ ಪ್ರಾಣ ಬಿಟ್ಟ ಉದಾಹರಣೆಗಳಿವೆ. ಇಂಥವರನ್ನು ಗರುಡರೆಂದು ಶಾಸನಗಳು ಕರೆದಿವೆ. ಇಂಥ ಗರುಡರ ನೆನಪಿಗಾಗಿ ಹಾಕಿಸಿದ ಶಾಸನಗಳನ್ನು ಸಾಮಾನ್ಯವಾಗಿ ಅದಕ್ಕೆ ಮೀಸಲಾದ ಕಂಬಗಳ ಬುಡದ ಮುಖಗಳ ಮೇಲೆ ಕಂಡರಿಸಿ ದೇವಾಲಯಗಳ ಬಳಿ ನಿಲ್ಲಿಸಿರುತ್ತಾರೆ. ಇವುಗಳನ್ನು ಗರುಡಗಂಬಗಳೆಂದು ಕರೆಯಬಹುದು. ಅಗ್ರಹಾರ ಬಾಚಹಳ್ಳಿಯ ಹುಣಸೇಶ್ವರ ದೇವಾಲಯದ ಮುಂದೆ ನಿಂತಿರುವ ಮೂರು ಕಂಬಗಳ ಮೇಲಿನ ಶಾಸನಗಳು ಹೊಯ್ಸಳ ರಾಜರಿಗೆ ಗರುಡರಾದ ಲೆಂಕರ ಒಂದು ಪೀಳಿಗೆಯನ್ನೇ ಕೊಡುತ್ತವೆ.

ಕಲೆ, ಲಿಪಿ, ಭಾಷೆ, ಸಾಹಿತ್ಯ, ಸಮೃದ್ಧಿ, ವೈವಿಧ್ಯ – ಹೀಗೆ ಯಾವ ದೃಷ್ಟಿಯಿಂದ ನೋಡಿದರೂ ಹೊಯ್ಸಳರ ಶಾಸನಗಳು ಕರ್ನಾಟಕ ಶಾಸನಸಂಪತ್ತಿಗೆ ಮೆರುಗನ್ನು ನೀಡಿವೆ ಎನ್ನಬಹುದು.

ಶಾಸನಗಳು : ದಕ್ಷಿಣ ಭಾರತದಲ್ಲಿ ದೊರೆತಿರುವ ಹಲವಾರು ಮನೆತನಗಳ ಶಾಸನಗಳಲ್ಲಿ ಬಹುಶಃ ವಿಜನಗರದ ಅರಸರದೇ ಅತ್ಯಧಿಕ ಸಂಖ್ಯೆಯ ಶಾಸನಗಳು. ಈ ಸಾಮ್ರಾಜ್ಯ ಸಮಗ್ರ ದಕ್ಷಿಣ ಭಾರತದ ವ್ಯಾಪ್ತಿಯನ್ನು ಪಡೆದಿದ್ದುದರಿಂದ ಸಂಸ್ಕೃತ, ಕನ್ನಡ, ತೆಲುಗು ಮತ್ತು ತಮಿಳು ಭಾಷೆಗಳಲ್ಲಿ ಶಾಸನಗಳು ದೊರೆತಿವೆ. ಸು. 9,000 ಶಾಸನಗಳು ಈವರೆಗೆ ಗಮನಕ್ಕೆ ಬಂದಿವೆ. ಅವುಗಳಲ್ಲಿ ಅತಿಸ್ವಲ್ಪ ಭಾಗ ಪ್ರಕಟವಾಗಿವೆ. ಇವರ ಶಾಸನಗಳಲ್ಲಿನ ಲಿಪಿಗಳನ್ನು ಕುರಿತು ಒಂದೆರಡು ಅಂಶಗಳನ್ನು ಗಮನಿಸಬಹುದು. ಕರ್ನಾಟಕ ಹಾಗೂ ಆಂಧ್ರ ಪ್ರದೇಶಗಳಲ್ಲಿ ಈವರೆಗೆ ಬಹಳಷ್ಟು ಶಾಸನಗಳು ಕಪ್ಪು ಬಳಪದ ಶಿಲೆಯ ಮೇಲೆ ಬರೆದವುಗಳಾಗಿದ್ದುವು. ಎಂತಲೇ ಅಕ್ಷರಗಳನ್ನು ಮುದ್ದಾಗಿ, ನಾಜೂಕಾಗಿ ಕೆತ್ತುವುದು ಒಂದು ವಿಶಿಷ್ಟ ಕಲೆಯಾಗಿ ಪರಿಗಣಿತವಾಗಿತ್ತು. ಆದರೆ ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿ ಶಾಸನ ಬರೆಯಲು ಬಳಸಿದುದು ಗಟ್ಟಿಯಾದ ಗ್ರಾನೈಟ್ ಶಿಲೆ. ಇದರಲ್ಲಿ ಸಣ್ಣ ಪ್ರಮಾಣದ ಅಕ್ಷರಗಳನ್ನು ಕೆತ್ತುವುದು ಸುಲಭವಾಗಿರಲಿಲ್ಲ. ಅಲ್ಲದೆ ಆ ಸಾಮ್ರಾಜ್ಯ ಅಸ್ತಿತ್ವದಲ್ಲಿದ್ದ ಸುಮಾರು ಮೂರು ಶತಮಾನಗಳ ಕಾಲ ದಕ್ಷಿಣ ಭಾರತದಲ್ಲಿ ಪ್ರಕ್ಷುಬ್ಧ ವಾತಾವರಣವಿದ್ದು ಯಾವಾಗಲೂ ನೆರೆಯ ಶತ್ರುಗಳೊಡನೆ ಕದನದಲ್ಲಿ ತೊಡಗಿರಬೇಕಾದ ಪರಿಸ್ಥಿತಿಯಿತ್ತು. ಹೀಗಾಗಿ ಜನತೆ ರಾಜ್ಯದ ರಕ್ಷಣೆಗಾಗಿ ಸದಾ ಉದ್ಯೋಗಗಳಲ್ಲಿ ನಿರತವಾಗಿದ್ದು ಶಾಂತಿ ತೃಪ್ತಿಗಳು ಅಪರೂಪವಾಗಿದ್ದಾಗ ಶಾಸನಗಳನ್ನು ಸ್ಪಷ್ಟವಾಗಿ, ನಾಜೂಕಾಗಿ ಬರೆಯುವ, ಬರೆಸುವ ವ್ಯವಧಾನವಿರಲಿಲ್ಲವೆನ್ನಬಹುದು. ಅಲ್ಲದೆ ಅಸಂಖ್ಯಾತ ಶಾಸನಗಳನ್ನು ಬರೆದಿಡಬೇಕಾದಾಗ ಪ್ರತಿಯೊಂದಕ್ಕೂ ಉತ್ತಮವಾದ ಶಿಲೆಯನ್ನು ಆರಿಸಿ ತರುವುದು ಸುಲಭವಾಗಿರಲಿಲ್ಲ. ಈ ಕಾರಣಗಳಿಂದ ಶಾಸನಗಳ ಅಕ್ಷರಗಳು ಸುಂದರವಾಗಿರದೆ ದಪ್ಪವಾಗಿ, ಮನಬಂದಂತೆ ಕೆತ್ತಿದವುಗಳಾಗಿದ್ದುವು. ಈ ದೃಷ್ಟಿಯಿಂದ ಒಂದು ವಿಧದಲ್ಲಿ ಶಾಸನಕಲೆಯಲ್ಲಿ ಪ್ರತಿಭೆ ಇಳಿಮುಖವಾಗಿತ್ತು.

ಭಾಷೆಯ ವಿಷಯದಲ್ಲೂ ಸಹ ಇವೇ ಮಾತುಗಳನ್ನು ಹೇಳಬಹುದು. ಈ ಕಾಲದ ಶಾಸನಗಳಲ್ಲಿ ಸಾಹಿತ್ಯಕ ಅಂಶ ಬಹಳ ಕಡಿಮೆ. ಅರಸರು ತಮ್ಮ ಆಸ್ಥಾನ ಕವಿಗಳಿಂದ ಬರೆಸಿದ ಶಾಸನಗಳನ್ನು ಹೊರತುಪಡಿಸಿದರೆ, ಇತರ ಶಾಸನಗಳು ವಿಷಯಕ್ಕೆ ನೇರವಾಗಿ ಸಂಬಂಧಿಸಿದ್ದವುಗಳಾಗಿದ್ದವು. ಸಮಕಾಲೀನ ಸಾಹಿತ್ಯದಲ್ಲಿದ್ದಂತೆ ಶಾಸನಗಳಲ್ಲೂ ಸಂಖ್ಯೆ ಅಪಾರವಾದರೂ ಪ್ರೌಢಿಮೆ ಲಾಲಿತ್ಯಗಳಲ್ಲಿ ಹಿಂದಿನ ಶತಮಾನಗಳಲ್ಲಿ ಬೆಳಕು ಕಂಡ ಶಾಸನಸಾಹಿತ್ಯಕ್ಕೆ ಇವು ಸಾಟಿಯಲ್ಲವೆಂಬುದು ಕಟುಸತ್ಯ. ಲೌಕಿಕದ ತುದಿಯನ್ನು ಮುಟ್ಟಿತೆಂಬಂತೆ ಅದರಲ್ಲಿ ಬರುವ ಶಾಪ ಭಾಗಗಳಲ್ಲಿ ಅನೇಕವೇಳೆ ಅಶ್ಲೀಲ, ಅವಾಚ್ಯ ಶಬ್ದಗಳ ಪ್ರಯೋಗವನ್ನು ನಾವು ಕಾಣುತ್ತೇವೆ.

ಈ ಅರಸರ ನೂರಾರು ತಾಮ್ರಶಾಸನಗಳು ಲಭಿಸಿವೆ. ಇವುಗಳ ಭಾಷೆ ಸಂಸ್ಕೃತ. ಬಹುಮಟ್ಟಿಗೆ ಲಿಪಿ ನಂದಿನಾಗರೀ ಎನಿಸಿಕೊಳ್ಳುವ ನಾಗರೀಲಿಪಿ. ಈ ತಾಮ್ರಶಾಸನಗಳು ಸಾಮಾನ್ಯವಾಗಿ ಹಿರಿಯ ಆಕಾರ-ಗಾತ್ರಗಳದ್ದಾಗಿದ್ದು, ಅನೇಕ ಶಾಸನಗಳಲ್ಲಿ ಅರಸರ ವಂಶಾವಳಿಗಳನ್ನು ನೀಡಿದೆ. ಈ ವಿಷಯಕ್ಕೆ ಸಂಬಂಧಿಸಿದ ಭಾಗದ ಶಾಸನಪಾಠಗಳು ಬಹುಮಟ್ಟಿಗೆ ಒಂದೇ ಪಡಿಯಚ್ಚಿನವು. ಪ್ರತಿಯೊಬ್ಬ ಅರಸನ ಗಣನೀಯವೆನ್ನಬಹುದಾದ ಸಾಧನೆಗಳ ಉಲ್ಲೇಖಗಳನ್ನು ಇವುಗಳಲ್ಲಿ ಕಾಣುತ್ತೇವೆ. ಅರಸರು ಬದಲಾದಂತೆಲ್ಲ ಹಿಂದಿನ ಅರಸರಿಗೆ ಸಂಬಂಧಿಸಿದ ಅದೇ ಶಾಸನಪಾಠಗಳನ್ನಿರಿಸಿಕೊಂಡು ಅನಂತರದ ಅರಸರಿಗೆ ಸಂಬಂಧಿಸಿದ ಹೊಸ ವಿವರಗಳನ್ನು ಕಾಣುತ್ತೇವೆ. ಬಹುಮಟ್ಟಿಗೆ ಇವು ಅರಮನೆಯ ಶಾಸನಾಧಿಕಾರಿಯಿಂದ ರಚಿತವಾದ ಕಾರಣ ಆತ ಮೂಲತಃ ಹಿಂದಣ ದಾಖಲೆಯನ್ನು ಆಧರಿಸಿ ಕರಡುಪ್ರತಿಗಳನ್ನು ತಯಾರಿಸಿರುತ್ತಾನೆ. ಅನಂತರದ ಅಧಿಕಾರಿಗಳೂ ಅದೇ ದಾಖಲೆಯನ್ನು ಬಳಸಿ ಅದಕ್ಕೆ ಹೊಸ ವಿಷಯಗಳನ್ನು ಸೇರಿಸುತ್ತ ಹೋಗುವುದರಿಂದ ಈ ಶಾಸನಗಳು ಒಂದೇ ರೂಪದಲ್ಲಿರುವುದು ಸಹಜ. ಅಲ್ಲದೆ ಈ ಶಾಸನಗಳನ್ನು ರಚಿಸಿದ ಕವಿಗಳಲ್ಲಿ ಕೆಲವರು ವಂಶಪಾರಂಪರ್ಯವಾಗಿ ಆಸ್ಥಾನ ಕವಿಗಳಾಗಿದ್ದು, ತಮ್ಮ ಹಿರಿಯರು ಬರೆದಿಟ್ಟದ್ದುದರ ಮುಂದಿನ ಭಾಗಗಳನ್ನು ತಾವೂ ರಚಿಸಿದ್ದಾರೆಂಬುದು ಸ್ಪಷ್ಟ. ತಾಮ್ರಶಾಸನಗಳ ಕೊನೆಯ ಭಾಗದಲ್ಲಿ ವೃತ್ತಿಗಳನ್ನು ಪಡೆದವರ ಹೆಸರುಗಳೂ ದತ್ತಿ ಬಿಟ್ಟ ಗ್ರಾಮ ಅಥವಾ ಭೂಮಿಯ ಮೇರೆಗಳೂ ಅನೇಕ ಸಂದರ್ಭಗಳಲ್ಲಿ ಕನ್ನಡ ಭಾಷೆಯಲ್ಲಿರುತ್ತವೆ. ಪ್ರಾದೇಶಿಕ ಭಾಷೆಗಳ ವೈಲಕ್ಷಣ್ಯಗಳನ್ನೂ ಜನಪದ ಭಾಷೆಯನ್ನೂ ಈ ಶಾಸನಗಳಲ್ಲಿ ಕಾಣಬಹುದು. ದಕ್ಷಿಣ ಕನ್ನಡ ಜಿಲ್ಲೆಯ ಶಾಸನಗಳ ಭಾಷೆ ಒಳನಾಡಿನ ಸಮಕಾಲೀನ ಭಾಷೆಗಿಂತ ಭಿನ್ನವಾಗಿದ್ದು ತನ್ನ ಪ್ರಾದೇಶಿಕ ವೈಶಿಷ್ಟ್ಯತೆಯನ್ನುಳಿಸಿಕೊಂಡು ಬಂದಿದೆ ಎಂಬುದನ್ನು ಗಮನಿಸಬಹುದು.[12]

ಅಂದಿನ ಆರ್ಥಿಕ-ಸಾಮಾಜಿಕ ಸ್ಥಿತಿಗೆ ಅನುಗುಣವಾಗಿ ಈ ಕಾಲದ ಶಾಸನಗಳಲ್ಲಿ ಹಳ್ಳಿಗಳನ್ನು ಪಟ್ಟಣಗಳಾಗಿ ಪರಿವರ್ತಿಸಿದಾಗ, ಬೀಡು ಬಿಟ್ಟದ್ದ ಭೂಮಿಗಳನ್ನು ಸಾಗುವಳಿಗೆ ತಂದಾಗ, ಅಧಿಕಾರವರ್ಗದವರು ಹೊಸದಾಗಿ ಅಲ್ಲಿ ನೆಲಸಿದ ಜನತೆ ನೀಡುವ ಸೌಲಭ್ಯಗಳನ್ನು ಕುರಿತಾದ ಒಪ್ಪಂದಗಳು, ಅಧಿಕಾರಿಗಳ ಶೋಷಣೆಯ ವಿರುದ್ಧ ಜನತೆ ಅರಸನಲ್ಲಿ ಅಥವಾ ಸಾಮಂತನಲ್ಲಿ ನೀಡಿದ ದೂರುಗಳು ಹಾಗೂ ಅವುಗಳ ಪರಿಣಾಮವಾಗಿ ಜನತೆಗೆ ನೀಡಿದ ಆಶ್ವಾಸನೆಗಳು, ಭಾರವಾಗಿದ್ದ ಕಸಬುದಾರರನ್ನು ಮುಕ್ತಗೊಳಿಸುವುದು – ಇವೇ ಮುಂತಾದ ವಿಷಯಗಳನ್ನು ಕಾಣಬಹುದಾಗಿದೆ. ಧರ್ಮರಕ್ಷಣೆಗಾಗಿಯೇ ಸಾಮ್ರಾಜ್ಯ ಮೈವೆತ್ತಿತ್ತು ಎಂಬುದನ್ನು ಗಮನಿಸಿದಾಗ ಬುಕ್ಕ, ಇಮ್ಮಡಿ ದೇವರಾಯ, ಕೃಷ್ಣದೇವರಾಯ ಮುಂತಾದ ಪ್ರಮುಖ ಅರಸರು ದೇವಾಲಯಗಳಿಗೆ ವಿಶೇಷವಾಗಿ ನೀಡಿದ ಅಪಾರ ದತ್ತಿಗಳ ಹಿನ್ನೆಲೆ ಅಥವಾಗುತ್ತದೆ.

ಹೊಯ್ಸಳರ ಕಾಲದ ಕಾನಕಾನಹಳ್ಳಿ

ಕರ್ನಾಟಕ ಇತಿಹಾಸದಲ್ಲಿ ಅದರಲ್ಲೂ ದಕ್ಷಿಣ ಕರ್ನಾಟಕ ಪ್ರದೇಶದ ವ್ಯಾಪ್ತಿಯಲ್ಲಿ ಹೊಯ್ಸಳ ಪ್ರಾಬಲ್ಯ ಪ್ರಖ್ಯಾತವಾದುದು. ಅದರಲ್ಲೂ ಹೊಯ್ಸಳೇಶ್ವರ ವಿಷ್ಣುವರ್ಧನ ಚೋಳರನ್ನು, ಪಾಂಡ್ಯರನ್ನು ಸೋಲಿಸಿ ಕನ್ನಡ ರಾಜ್ಯವನ್ನು ವಿಸ್ತರಿಸಿದನು. ಗಂಗವಾಡಿಯನ್ನು ಚೋಳರಿಂದ ಬಿಡಿಸಿದ್ದರಿಂದ ಅದಕ್ಕೆ ಒಳಪಟ್ಟ ಬೆಂಗಳೂರು ಮತ್ತು ಕೋಲಾರ ಪ್ರದೇಶಗಳೆಲ್ಲಾ ಹೊಯ್ಸಳ ಸಾಮ್ರಾಜ್ಯದಲ್ಲಿ ಕೂಡಿಕೊಂಡವು. ಕಾನಕಾನಹಳ್ಳಿ ಪ್ರದೇಶವೂ ಕೂಡ. ನಿಜವಾಗಿ, ಈ ಪ್ರದೇಶದ ಇತಿಹಾಸ ಆರಂಭವಾಗುವುದೇ ತಲಕಾಡುಗೊಂಡ ಬಿರುದಾಂಕಿತನಾದ ವಿಷ್ಣುವರ್ಧನನ ಕಾಲದಿಂದೀಚೆಗೆ. ಹಲಗೂರು ಪಕ್ಕದ ದಳವಾಯಿ ಕೋಡಿಹಳ್ಳಿಯ ಬಸವೇಶ್ವರ ದೇವಾಲಯದಲ್ಲಿ ಸಿಕ್ಕ ಎರಡು ತಮಿಳು ಶಾಸನಗಳ (ನಂ 84/ 1171, 1184) ಕಾಲಕ್ಕೆ ಹೊಯ್ಸಳರ ಆಳ್ವಿಕೆ ಪ್ರಾರಂಭವಾಗಿರುವುದು ಖಚಿತವಾಗಿ ತಿಳಿದು ಬರುತ್ತದೆ.[13]

ಹೊಯ್ಸಳ ವಿಷ್ಣುವರ್ಧನನ ಮಗ 1ನೇಯ ನರಸಿಂಹನ (1142–73) ಕಾಲಕ್ಕೆ ಸೇರಿದ ಶಾಸನವೊಂದು (ನಂ:84ಎ) ಶ್ರೀವೀರ ನರಸಿಂಗಹೊಯ್ಸಳ 'ಕೆಳಲೆನಾಡ ಅರಸ' ಎಂದು ಹೇಳುತ್ತದೆ. ಇವನ ಮಗ 2ನೇ ವೀರ ಬಲ್ಲಾಳ (1173–1220) ಕಾಲದ್ದೆಂದು ತೋರುವ ಶಾಸನದಲ್ಲಿ (ನಂ :84ಬಿ) ವೀರಗಂಗ ಪೊಯ್ಸಳ ವೀರ ಬಲ್ಲಾಳನನ್ನು 'ಕೆಳಲೆನಾಡ ಅರಸು' ಎನ್ನಲಾಗಿದೆ. ಹಲಗೂರು ಪಕ್ಕದ ಕುಂತೂರು ಗ್ರಾಮದ ಒಂದು ವೀರಗಲ್ಲು (ನಂ 87–1218) ಹೊಯ್ಸಳನ ಮಗ ಸಕಳಗೌಡನು ಕುಂದತೂರಿನಲ್ಲಿ ಕಾದಿ ಸ್ವರ್ಗಸ್ಥಾನದ ಸಂಗತಿಯನ್ನು ದಾಖಲಿಸಿದೆ. ಈಗಿನ ಕುಂತೂರು 13ನೇ ಶತಮಾನದಲ್ಲಿ ಕುಂದತೂರು ಆಗಿತ್ತು ಎಂಬುದನ್ನು ಗಮನಿಸಬೇಕು.

ಕಾಲಮಾನದ ಆಧಾರದ ಮೇಲೆ ಶಾಸನಗಳನ್ನು ಗಮನಿಸುವುದಾದರೆ, ಮುಂದಿನ ಶಾಸನಗಳು ಹಲಗೂರಿನ ಪಕ್ಕದ ನಿಟ್ಟೂರು ಗ್ರಾಮಕ್ಕೆ ಸೇರಿದವುಗಳು. ಈ ಸ್ಥಳಗಳು ಈಗ ಹೊಸ ಆಡಳಿತ ವ್ಯವಸ್ಥೆಯಲ್ಲಿನ ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲ್ಲೂಕಿಗೆ ಹಲಗೂರು ಹೋಬಳಿ ಹಾಗು ನಿಟ್ಟೂರು ಗ್ರಾಮಗಳು ಸೇರಿವೆ.

ನಿಟ್ಟೂರಿನ ಶಾಸನದಲ್ಲಿ, ಹೊಯ್ಸಳ ದೊರೆ ಮುಮ್ಮಡಿ ವೀರ ನರಸಿಂಹನ ಕಾಲ (1253–92)ದಲ್ಲಿ ಈ ಊರು ಚಿಕ್ಕಗಂಗವಾಡಿ ಸೇರಿದ ಕೆಳಲೆನಾಡಿನ ಗ್ರಾಮವಾಗಿತ್ತು. ಎಂದಿದೆ. ಈ ಕಾಲದಲ್ಲಿ ಚಿಕ್ಕ ಗಂಗವಾಡಿಯ ರಾಜಧಾನಿಯಾದ ಹೊಂಗನೂರಿನಲ್ಲಿ ಸೋಮಣ್ಣ ದಣ್ಣಾಯಕನ ಅಳಿಯ ಗಾಯಿದಣ್ಣಾಯಕನಿದ್ದನು. ಈತನು ಆರಾಧ್ಯರ ಪುತ್ರನಿಗೆ ದತ್ತಿ ನೀಡಿದನು. ಆರಾಧ್ಯರೆಂದರೆ, ಹಡಪದಯ್ಯೊದೇವರೆಂದು ತಿಳಿಯುತ್ತದೆ.

ಮತ್ತೊಂದು ತಮಿಳು ಶಾಸನ (ನಂ 77, 78/1288) ಹೊಯ್ಸಳ ದೊರೆ ಮುಮ್ಮಡಿ ವೀರನರಸಿಂಹನ ಆಳ್ವಿಕೆಯ ಕಾಲದ್ದು. ಇದು ನಿಟ್ಟೂರಿನ ಅಂಕನಾಥೇಶ್ವರ ದೇವಾಲಯದ ವಿಮಾನವನ್ನು ದುರಸ್ತಿಪಡಿಸಿದ ವಿಷಯವನ್ನು ವಿವರಿಸುತ್ತದೆ. ಇದನ್ನು ಮಾಡಿಸಿದವನು ಮಲೆಯಾಳ ಮುಖ್ಯಾಗೋವಿಂದನೆಂಬುವನು. ಇವನು ಮಹಾವಡ್ಡಾ ವ್ಯವಹಾರಿ ಉಭಯ ನಾನಾ ದೇಶಿಯಾಗಿದ್ದನು. ನಿಟ್ಟೂರು ಕೆಳಲೆನಾಡಿಗೆ ಸೇರಿದ್ದು ಎಂದು ಇಲ್ಲಿಯೂ ಸ್ಪಷ್ಟವಾಗಿದೆ. ದೇವರ ನೈವೇದ್ಯ ಸೇರಿದಂತೆ ಪೂಜಾ ಖರ್ಚುಗಳಿಗಾಗಿ, ಹೂದೋಟದ ಮಾಲಿಗಾಗಿ ಬಂಗಾರದ ರೂಪದಲ್ಲಿ ಹಣವನ್ನು ನೀಡಲಾಯಿತು. ಈ ದಾನಿ ತನ್ನ ಜಮೀನನ್ನೇ ದತ್ತಿ ನೀಡಿದನು. ಈ ಜಮೀನಿನ ಉತ್ಪನ್ನದಲ್ಲಿ 28 ಸೋಗೆ ನಿತ್ಯ ಪೂಜೆಗೆ, ಐಂದ್ರ ಪೂಜೆಗೆ ಎಂದು ಮೀಸಲಿಡಲಾಗಿತ್ತು. ಜಮೀನು ಕ್ರಯಕ್ಕೆ ನೀಡಿದರೆ, ಮಾರಾಟದ ಹಣವನ್ನು ತೆರಿಗೆ ಹಣ ಸೇರಿದಂತೆ ದೀಪದ ಎಣ್ಣೆ. ಬಾಳೆಹಣ್ಣು, ಬೆಲ್ಲ, ಉಪ್ಪು, ಮೆಣಸು, ಅಂಗ ಭೋಗ ದ್ರವ್ಯ ಇವುಗಳ ಸಲುವಾಗಿ ಬಳಸಲು ಕಟ್ಟಳೆ ಮಾಡಲಾಗಿದೆ.

ಕಲ್ಲಹಳ್ಳಿ, ಕಾನಕಾನಹಳ್ಳಿ ಸಮೀಪದ ಒಂದು ಗ್ರಾಮ. ಇಲ್ಲಿಯ ಒಂದು ವೀರಗಲ್ಲು, ಜನರ ವೀರಜೀವನದ ಸಾಕ್ಷಿಗಲ್ಲಾಗಿದೆ. ಇದು ಮುಮ್ಮಡಿ ವೀರ ನರಸಿಂಹನ ಮಗ ಮುಮ್ಮಡಿ ವೀರಬಲ್ಲಾಳನ ಆಳ್ವಿಕೆಯ ಕಾಲದ (1292/1343)' ಶಿಲ್ಪ ಶಾಸನ. ಮಾದಿಗದೇವ ಎಂಬ ವೀರನಿಗೆ ಕಾವೇರಿವಲ್ಲಭ, ಕರದೀವದಾನಿ, ಮರೆಪೊಕ್ಕರ ಕಾವ, ತೊರೆದರ ಡೊಂಕಿ, ಬಿರುದರ ಬಾಯಬೊಂದಿಗೆ ಮೀಸೆಯರ ಗಂಡರ ಗಂಡ ಎಂಬ ಬಿರುದುಗಳಿದ್ದವು. ಇವನು. ಕಳ್ಳೇನ ಹಳ್ಳಿಗೆ ಸೇರಿದ'ತೊಲಗದ ಕಂಬ' ಎಂಬ ಬಿರುದು ಚಾಮೇಗೌಡರ ಮಗ ರಾಮಯ್ಯನಾಯಕ ಮತ್ತು ಇವನ ತಮ್ಮ ಸಾತಯ್ಯ ನಾಯಕನೊಂದಿಗೆ ಸೇರಿ, ತನ್ನನ್ನು ಅಲಕ್ಷ್ಯಮಾಡಿದ ಮೇಳಿಜೀಯನ ಮೇಲೆ ಏರಿಹೋದನು. ಆಗ ಹೋರಾಡುತ್ತಾ ಮುಂದೆ ಇದ್ದ ರಾಹುತನನ್ನು ಕೊಂದು, ಅನೇಕ ಯೋಧರನ್ನು ಕೊಂದು ಕಾದಿ ಸ್ವರ್ಗಸ್ಥನಾದರು. ಆಗ ಆ ಸಾತಯ್ಯ ನಾಯಕನ ಮಕ್ಕಳಾದ ವೀರಣ್ಣ, ರಾಮಣ್ಣ ಎಂಬ ಸಹೋದರರು ಈ ವೀರಗಲ್ಲು ಹಾಕಿಸಿದರು. ಮುಂದೆ ಈ ಸಾತಯ್ಯನಾಯಕನ ಮಗ ರಾಮಣ್ಣಗೌಡನು ಬಾಸೆಯ ಚೊಕ್ಕ ಸೆಟ್ಟಿಯೊಡನೆ ಸೆಣಸಿ ಅವನನ್ನು ಕೊಂದು ತಾನೂ ಸವರ್ಗಸ್ಥನಾದನು. ಈ ಕಳ್ಳೇನ ಹಳ್ಳಿಯೇ ಇಂದಿನ ವೆಂಕಟರಮಣಸ್ವಾಮಿ ದೇವಾಲಯವಿರುವ ಚಿಕ್ಕ ತಿರುಪತಿ ಎಂದು ಪ್ರಸಿದ್ಧಿ ಪಡೆದಿರುವ ಪವಿತ್ರ ವೈಷ್ಣವ ಕ್ಷೇತ್ರವಿರುವ ಕಲ್ಲಹಳ್ಳಿ ಇದು ಕಲ್ಲುಗಳ ಹಳ್ಳಿಯೋ ಕಳ್ಳರ ಹಳ್ಳಿಯೇ (ಕಳ್ಳಾಯ್ಯ) ಕಳ್ಳೇನ ಹಳ್ಳಿಯೋ ತಿಳಿಯದು.

ನಿಟ್ಟೂರಿನ ಅಂಕನಾಥೇಶ್ವರ ಸ್ವಾಮಿಗೆ ಪೂಜಾವ್ಯವಸ್ಥೆಗೆಂದು ಹೊಯ್ಸಳ ದೊರೆ ಮುಮ್ಮಡಿ ವೀರಬಲ್ಲಾಳನು ದತ್ತಿ ನೀಡಿದ ಸಂಗತಿ ಒಂದು ಶಾಸನದಲ್ಲಿದೆ. 9 ಇದು 1299ರಲ್ಲಿ ರಚಿಸಲ್ಪಟ್ಟಿದೆ. ಇದೊಂದು ವಿಸ್ತಾರವಾದ ಶಾಸನ. "ಮಹಾವಡ್ಡವ್ಯವಹಾರಿ, ಉಭಯ ನಾನಾದೇಸಿ, ಮಲೆಯಾಳ ಮುಖ್ಯನಾದ ವಾಸುದೇವನಾಯಕನ ಮಗನೂ, ಇನ್ನೂ ಕೆಲವರೂ; ಎಳಲಂಜಿಲಾಕಾಟು ನಾರಣ್ಣ ನಾಯಕ, ಚಿಕ್ಕಗಂಗವಾಡಿ ನಾಡೊಳಗಣ ಕೆಳಲೆನಾಡ ನಿಟ್ಟೂರು ಮಂಡಲ ಸ್ವಾಮಿಯ ಮಗ ಸೋಮಣ್ಣ ಮೊದಲಾದವರೂ ಸರ್ವೈಕಮತ್ಯವಾಗಿ ನಿಟ್ಟೂರು ಸ್ವಯಂಭು ಅಂಕನಾಥ ದೇವರ ಸ್ಥಾನಪತಿ (ಪೂಜಾರಿ) ಮಾರಿಜೀಯ ಅಪ್ಪಣ್ಣನವರ ಸೊದರಳಿಯ ರಾಮಜೀಯನ ಮಗ ಸೂರಿಜೀಯನಿಗೆ ದೇವರ ಸೇವೆ ಮೊದಲಾದುವುಗಳಿಗಾಗಿ ದೇವದೇಯವಾಗಿ ಗದ್ದೆ, ಬೆದ್ದಲು ತೋಟ ಮೊದಲಾದವನ್ನು ದತ್ತಿ ನೀಡಿದರು.

ಈ ಶಾಸನದಿಂದ ತಿಳಿಯುವ ಸಾಂಸ್ಕೃತಿಕ ಅಂಶವೇನೆಂದರೆ ನಿಟ್ಟೂರು ಅಂಕನಾಥೇಶ್ವರ ದೇವರ ಪ್ರಸಿದ್ಧಿ, ಗ್ರಾಮಜನರ ದೈವ ಭಕ್ತಿ ಐಕಮಾತ್ಯ, ಶ್ರೀಮಂತಿಕೆ ಮೊದಲಾದ ವಿವರಗಳು ಬಣ್ಣನೆಗೊಂಡಿರುವುದೇ ಆಗಿದೆ. ಈ ದೇವದೇಯದಲ್ಲಿ ಬಂದಿರುವ ಹಲವು ವ್ಯಕ್ತಿಗಳ ಹೆಸರುಗಳಲ್ಲಿ ಹದಿನೆಂಟು ಸಮಯದವರೂ ಇದ್ದಾರೆ.

ನಿಟ್ಟೂರಿನ ಮೂರು ತಮಿಳು ಶಾಸನಗಳಿವೆ. ದೇವರಿಗೆ ಭೂದಾನ ಮಾಡಿದ ವಿಷಯ ಒಂದು ಶಾಸನ (ನಂ76/1306)ದಲ್ಲಿದೆ. ಕರಾರಪಣೆಯ ಮಗ ರಾವುತ್ತನ ಮಗ ಬ್ರಹ್ಮದೇವನೂ ಇದೇ ಊರಿನ ಎಲ್ಲ ಗೌಡರು ದೇವರಿಗೆ ಭೂದಾನಿ ಮಾಡಿದ್ದಾರೆ. ಮುಂದುವರಿದಂತೆ, ಹೇಳುವುದಾದರೆ, ಇರುಗಂಡ ವರದನೆಂಬುವನು ಇದೇ ಸ್ವಾಮಿಗೆ ಪೂಜೆ ನೈವೇದ್ಯಗಳಿಗಾಗಿ ಭೂಮಿದಾನ ಮಾಡಿದ ವಿಚಾರ ಇನ್ನೊಂದು ಶಾಸನದಲ್ಲಿದೆ (ನಂ: 79/1311) ಜೊತೆಗೆ ದೇವರ ಗಂಧಕ್ಕೆ, ನಿಟ್ಟೂರ ಸುಂಕದೊಳಗೆ ವರ್ಷವರ್ತನೆಯಾಗಿ 1ಗದ್ಯಾಣ, 2ಹಣ, ಸಲ್ಲಬೇಕೆಂದು ಕನ್ನಡ ಶಾಸನ (75) ತಿಳಿಸುತ್ತದೆ.

ನಿಟ್ಟೂರು ಗ್ರಾಮದ ಇನ್ನೊಂದು ಶಾಸನ ಹೊಯ್ಸಳ ಮುಮ್ಮಡಿ ವೀರಬಲ್ಲಾಳನ ಕಾಲಕ್ಕೆ (1292–1343) ಸೇರಿದ್ದು. ವೀರ ಪಾಂಚಾಲ ವೃತ್ತಿಯವರ ಆಸ್ತಿ ವ್ಯವಹಾರದ ಕಟ್ಟಳೆ ಇಲ್ಲಿ ಬಂದಿದೆ. "ಮಾನ್ಯದೇವರ ಮಕ್ಕಳಿಗೆ ಸಲ್ಲುತ್ತದೆ, ಮಕ್ಕಳಿಲ್ಲದಿದ್ದರೆ ಅಣ್ಣತಮ್ಮಂದಿರಿಗೆ ಸಲ್ಲುತ್ತದೆ ಎಂದು ನಂ 81ನೇ ಶಾಸನ ಹೇಳುತ್ತದೆ. (1306). ಪಾಂಚಾಳರು ಕುಶಲಕರ್ಮಿಗಳಾಗಿದ್ದು ಅವರಿಗೆ ದೊರೆಯುತ್ತಿದ್ದ ಮಾನ್ಯಗಳ ಸಂಬಂಧದಲ್ಲಿ ಈ ಒಡಂಬಡಿಕೆ ನಡೆದಿರಬಹುದೆಂದು ಟಿ.ವಿ.ವಿ. ಅಭಿಪ್ರಾಯಪಡುತ್ತಾರೆ. ಈ ಪಾಂಚಾಳರು ದೇವಾಲಯವೊಂದಕ್ಕೆ ಸಲ್ಲಿಸುವುದಾಗಿ ಒಪ್ಪಿದ ಹರಕೆಯ

ವಿವರಗಳು ಕಾನಕಾನಹಳ್ಳಿಯ ವಾಜರ ಬೀದಿಯ ಚನ್ನದಾಸಯ್ಯಾನ ಮನೆಯ ಬಳಿದೊರೆತಿರುವ ತೃಟಿತ ಶಾಸನವೂ ಹೇಳುತ್ತದೆ.

ಮುದುವಾಡಿ ಗ್ರಾಮದ ವಾಯುವ್ಯ ದಿಕ್ಕಿನಲ್ಲಿರುವ ಕಾನಕಾನಹಳ್ಳಿ ಸುಬ್ಬಯ್ಯನೆಂಬುವನ ಹೊಲದಲ್ಲಿ ಸಿಕ್ಕಿರುವ ಶಾಸನ (ನಂ: 110/1306) ಸಹ ಮುಮ್ಮಡಿ ವೀರಬಲ್ಲಾಳನ ಕಾಲದ್ದಾಗಿಯೇ ತೋರುವುದು. ಇದು ವಿಶ್ವಕರ್ಮರಿಗೆ ಸೇರಿದ ವಿಶೇಷ ಶಾಸನ. "ವಿಶ್ವಕರ್ಮದ ವಂಶದವರಿಗೆ, ರಾಜಧಾನಿ ದ್ವಾರಸಮುದ್ರ (ಹಳೆಬೇಡು)ದ ಹರಿಕಮ್ಮಟ ಮತ್ತು ಬಿಟ್ಟಿಕಮ್ಮಟ ಮೊದಲಾದ ಎಲ್ಲ ದಿಕ್ಕುಗಳ ಕಮ್ಮಾರ ಅಕ್ಕಸಾಲಿ ಈ ಪ್ರಕಾರವಾಗಿ ಸಮಸ್ತ ವೀರ ಪಾಂಚಾಳಕ್ಕೆ ಅಧಿಕಾರಯುತವಾಗಿ ಕೊಟ್ಟ ತಾಮ್ರಶಾಸನಕ್ಕೆ ಶಿಲಾಶಾಸನದ ಪ್ರತಿ ಇದು. ನಿಬಂಧನೆ ಏನೆಂದರೆ, ನಾವು ಆಳುವ ರಾಜ್ಯದೊಳಗೆ ಎಲ್ಲ ಪುಣ್ಯ ಸ್ಥಳಗಳಲ್ಲಿ ಪ್ರಧಾನರ ಪಾಯಸ್ತರು ನಾಯಕವಾಡಿಗಳು ಮಕ್ಕಳು ಮತ್ತು ಸಿರಿಪುರದ ಮಹ ಮನೆಗಳು ಈ ಎಲ್ಲ ಕಡೆಗಳಲ್ಲಿಯೂ ಕಮ್ಮಾರ ಅಕ್ಕ ಸಾಲೆ ಇವರೂ ಸೇರಿದಂತೆ ಎಲ್ಲ ಸಮೂದಾಯದವರು ಚೊಕ್ಕಪ್ಪನ ಕೆರೆಯ ಸಂಬಂಧದಲ್ಲಿ ಪಂಚಕಾರುಕಕುಳದ ಕಟ್ಟಳೆಯ ತಮ್ಮ ಪಡಿಪ್ಪಣ ಮರ್ಯಾದೆ ಸಂಬಳವನ್ನು ಪಡೆಯುವುದು."

ಇಲ್ಲಿನ ಹಿರಿಕಮ್ಮಟ, ಬಿಟ್ಟಿಕಮ್ಮಟ ನಾಯಕವಾಡಿ, ಮಕ್ಕಳು ಮಹಮನೆ, ವೀರ ಪಾಂಚಾಳ, ಪದಿಪ್ಪಣ, ಪಂಚಕಾರೂಕ–ಇಂತಹ ಮಾತುಗಳು ಸಾಂಸ್ಕೃತಿಕವಾಗಿ ಗಮನಾರ್ಹವಾದುವು. 10. ವೈಯಕ್ತಿಕಕ್ಕೆ ತಾಮ್ರಶಾಸನ, ಸಾರ್ವಜನಿಕ ಅವಗಾಹನೆಗೆ ಶಿಲಾಶಾಸನ ಏಕಕಾಲಕ್ಕೆ ಪ್ರಕಟಿಸುವ ಪದ್ಧತಿಯನ್ನು ಇದು ತಿಳಿಸುತ್ತದೆ.

ಹೊಯ್ಸಳ ದೊರೆಗಳಾದ ಈ ಇಬ್ಬರ ಕಾಲದ ರಾಜಕೀಯ ವಿದ್ಯಾಮಾನಗಳನ್ನು ನೋಡಿದ ಮೇಲೆ, ಅದೇ ವಂಶದ ಸೋಮೇಶ್ವರನ ಆಳ್ವಿಕೆಯ ಕಾಲ (1235 – 53)ದ ತಮಿಳಿನ ಎರಡು ಶಾಸನಗಳನ್ನು ನೋಡಬಹುದು. ಒಂದು ಸಾತನೂರ ಗ್ರಾಮದ ಶಿವಾಲಯಕ್ಕೆ ಭೂಮಿದಾನ ಮಾಡಿದ ಶಾಸನ (ನಂ. 48, ಸು. 1250) ಎರಡನೆಯದು ಶ್ರೀ ಕೇಶವ ಚತುರ್ವೇದಿ ಮಂಗಲಂ ಎಂಬ ಪ್ರತಿನಾಮದ ಕಡಪದ ಜಮೀನುದಾರ ಕಡಪದ ಮಾರಯ್ಯನೆಂಬುವನುದಾಗಿ ಎಂಬುದು ವಿಶೇಷ. ಈ ಕಡಪ ಇಂದಿನ ಆಂಧ್ರ ಪ್ರದೇಶದ ಜಿಲ್ಲಾ ಕೇಂದ್ರವೇ ಆಗಿರಬಹುದಾಗಿದೆ.

ಸಾತನೂರು ಪಕ್ಕದ ಹೊಸಹಳ್ಳಿಯಲ್ಲಿ ಸಿಕ್ಕಿರುವ ವೀರಗಲ್ಲು ದೀರ್ಘವಾಗಿದೆ. ಇದು ವೀರಗಲ್ಲು ಶಾಸನ (ನಂ : 71/1251). ಸೋಮೇಶ್ವರನ ಮಗ 3ನೇ ನರಸಿಂಗನ ಕಾಲಕ್ಕೆ (1253 – 92) ಸೇರಿದ್ದಾಗಿದೆ. ಸೂರನಹಳ್ಳಿ ಗ್ರಾಮದ ಮೇಲೆ ದಾಳಿಕಾರರು ಏರಿ ಬಂದಾಗ ಬಾರಂಜರಕಗೌಡನ ಮಕ್ಕಳು ಊರುಳುವಿಗಾಗಿ, ತುರುಗಳನ್ನು ರಕ್ಷಿಸುವಲ್ಲಿ ಆರು ಮಂದಿ ಹೊರತುಪಡಿಸಿ,

ಉಳಿದವರು ಸ್ವರ್ಗಸ್ಥರಾದರು. ಸತ್ತ ಇಬ್ಬರ ನೆನಪಿಗೆ ಕಾಳಗೌಂಡ ಮತ್ತು ಮುದ್ದಗೌಂಡನ ಮಕ್ಕಳು ಕೂಡಿ, ಹಾಕಿಸಿದ ವೀರಗಲ್ಲು ಇದಾಗಿದೆ. ಅವರಿಗಾಗಿ ಭೂಮಿ, ಹೊಲಗದ್ದೆಗಳನ್ನು ದತ್ತಿ ಬಿಡಲಾಯಿತು.

ಮೂರನೇ ನರಸಿಂಹನ ಆಳ್ವಿಕೆಯ ಕಾಲದ (1253 – 92) ಶಾಸನವೊಂದು ದೀರ್ಘವಾಗಿದ್ದು, ಹೆಚ್ಚು ಹಾಳಾಗಿರುವುದಿಲ್ಲ. ಮದ್ದೂರಿನ ಶಿವಪುರದ "ಸ್ವಯಾಭು ವೈದ್ಯನಾಥೇಶ್ವ"ರನಿಗೆ ದೇವದಾನವಾಗಿ 1277ರಲ್ಲಿ ಕೊಡುಗೆ ಕೊಟ್ಟುದ್ದನ್ನು ಶಾಸನ ಸಂಖ್ಯೆ : 72/1277 ರಲ್ಲಿ ಹೇಳಿದೆ. ಆ ದೇವಸ್ಥಾನದ ಸ್ಥಾನಪತಿಗಳಾಗಿದ್ದ ಪರವೇಸಿಯಪ್ಪರಾದ ಬಾವಯಿಜಾದೇ ಜೀಯರ ಮಗ ಒಡೆಯಪ್ಪ ಜೀಯರು ಮತ್ತು ಭೀಮ ಜೀಯರ ಮಗ ವಯಿಜಾಡೆ ಜೀಯರಿಗೆ ಈ ಕೊಡುಗೆ ನೀಡಿದವನು ಕುಮಾರ ದೊರಭಕ್ಕರ ದಣ್ಣಾಯಕ. ಇದನ್ನು ದೇವರ ಅಮೃತ ಪಡಿಗೆ, ನಂದಾದೀಪಕ್ಕೆ, ಜೊತೆಗೆ ಹೊಯ್ಸಳ ವಂಶದ ಮೇಲೆ ವಿಸ್ತಾರವಾಗಿ ವರ್ಣಿಸಿದೆ. ಈ ಶಾಸನವು ಮದ್ದೂರಿನ ವೈದ್ಯನಾಥೇಶ್ವರ ದೇವಾಲಯದ ಪ್ರಾಚೀನತೆ ಮತ್ತು ಜನಪ್ರಿಯತೆಗೆ ಇಂದಿಗೂ ಒಳ್ಳೆಯ ಸಾಕ್ಷ್ಯವಾಗಿದೆ.

ಹೊಯ್ಸಳ ಸೋಮೇಶ್ವರನ ಇನ್ನೊಬ್ಬ ಮಗ ರಾಮನಾಥನ ಆಡಳಿತಾವಧಿಯಲ್ಲಿ (1253 – 95) ವೀರಮಲ್ಲೇಶ್ವರ ಸ್ವಾಮಿಯ ಸೇವೆಗಾಗಿ ಕೆಲವು ಕಟ್ಟಳೆಗಳನ್ನು ದಾಖಲಿಸುವ ಭೂಮಿ ದಾನ ನೀಡಿದ ಶಾಸನದಲ್ಲಿ ಮರಳವಾಡಿ ಹೋಬಳಿಯ ಚಿಕ್ಕ ಬಳ್ಳೆಕೆರೆ ಗ್ರಾಮದ ಉತ್ತರದಲ್ಲಿರುವ, ಬಸವನಗುಡಿಗೆ ಹತ್ತಿರದ ಪಶ್ಚಿಮದಲ್ಲಿ ಎರಡು ಗುಡಿಗಳ ಮಧ್ಯ ಭಾಗದಲ್ಲಿ ಸಿಕ್ಕಿದೆ. ಅದರ ಕಾಲ ನಂ : 13/1276. ಈ ಶಾಸನದಲ್ಲಿ ಪೂಜೆ, ನೈವೇದ್ಯ, ತರಕಾರಿ, ಹಣ್ಣು, ಬೆಲ್ಲ, ಹಾಲು, ಮೊಸರು, ಉಪ್ಪು ಮೆಣಸು ಇವು ನಿರ್ದಿಷ್ಟ ಪ್ರಮಾಣದಲ್ಲಿ ಸಲ್ಲುವಂತೆ ನೋಡಿಕೊಳ್ಳಬೇಕು ಎಂದಿದೆ. ಹಾಗೆಯೆ ಎರಡು ನಂದಾದೀಪ, 10 ಸಾಮಾನ್ಯ ದೀಪ, 40 ಸಂಧ್ಯಾದೀಪ, ಎರಡು ಕಳಂಜು ಅಂಗಭೋಗದ್ರವ್ಯಗಳು ಇವುಗಳ ವೆಚ್ಚಕ್ಕಾಗಿ ವ್ಯವಸ್ಥಿತವಾಗಿ ಈ ಭೂಮಿ ಸಲ್ಲಬೇಕೆಂದು ಕಟ್ಟಳೆ ವಿಧಿಸಲಾಗಿದೆ.

ಸಾತನೂರು ಹೋಬಳಿ ಕಬ್ಬಾಳು ಗ್ರಾಮದ ಕಬ್ಬಾಳಮ್ಮನ ಗುಡಿಯ ಹತ್ತಿರ ಕಂಡು ಬಂದಿರುವ ಒಂದು ವೀರಗಲ್ಲು (ನಂ. 64/1291) ಶಾಸನವಿದೆ. ಇದು 3ನೇ ವೀರಬಲ್ಲಾಳನ ಆಳ್ವಿಕೆಯ ಕಾಲಕ್ಕೆ (1292–1343) ಸೇರಿದೆ, ಕಜಂತರ ಕುಲದ ಕಬ್ಬಹಾಳು ಸೋಮೇಗೌಡನ ಮಗ ಶೌರಣ್ಣನು, ಸಾಧನೆಂಬುವನು ಹನಿಯೂರು, ಸಹನೆಯೂರ ಸಂತೆಗೆ ಹೋಗಿ ಬರುತ್ತಿರುವಾಗ ಕಳ್ಳರು ಮೇಲೆ ಬಿದ್ದರು. ಅವರೊಂದಿಗೆ ಕಾದಿ ಶೌರಣ್ಣನು ಸ್ವರ್ಗಸ್ಥನಾದನು. ಆಗ ಆತನ ಕಡೆ ಸೋಮೇಗೌಡನೂ ಆತನ ಅಣ್ಣಂದಿರು ವೀರಗಲ್ಲು ನೆಟ್ಟರು. ಇಂದಿನ ಕಬ್ಬಾಳು ಈ ಶಾಸನದಲ್ಲಿ ಕಬ್ಬಹಾಳು ಎಂದಿರುವುದನ್ನು ಗಮನಿಸುವಂತದ್ದು.

ಮುಂದಿನ ವೀರಗಲ್ಲು ಶಾಸನ ಹೊಯ್ಸಳ ವಂಶದ ದೊರೆಗಳ ಯುದ್ಧದ ಬಗೆಗೆ ಚಿತ್ರತವಾಗಿದೆ. ಇದು ಉಯ್ಯಂಬಳ್ಳಿ ಹೋಬಳಿ ಕೋಟೆಕೊಪ್ಪದಲ್ಲಿ ದೊರೆತಿದೆ. ಮುಮ್ಮಡಿ ವೀರ ಬಲ್ಲಾಳನ ಚಿಕ್ಕಪ್ಪ ರಾಮನಾಥ ದೇವನು ದಾಯಾದಿ ಕಲಹದ ಕಾರಣವಾಗಿ ಬಲ್ಲಾಳನ ರಾಜ್ಯದ ಮೇಲೆ ಸೈನ್ಯವನ್ನು ನುಗ್ಗಿಸಿದನು ಈ ಕಾರಣದಿಂದ ಹೊಯ್ಸಳ ರಾಜ್ಯ ಹೋಳಾಗುವುದನ್ನು ತಪ್ಪಿಸಲು ನಡೆಸಿದ ಪ್ರಯತ್ನದ ವಿವರ ಈ ಶಾಸನದಲ್ಲಿ ಚಿತ್ರಿತವಾಗಿದೆ. ಈ ಕಾಳಗದಲ್ಲಿ ಮಾರದೇವನೆಂಬುವನು ಕಾದಿ ಸ್ವರ್ಗಸ್ಥನಾದನು. ಆ ನಾಡು ಆಳುವಾತ ಕಾವೇರಿ ವಲ್ಲಭ ವೀರದೇವನು ಅದರ ಸಲುವಾಗಿ ಒಂದು ಕೊಡುಗೆ ನೀಡಿದನು. ವೀರದೇವನ ಅಣ್ಣ ಭೀಮಯ್ಯಸಾಹಣೆ ತಮ್ಮ ಮೇಲಿನ ನಾಡನಾಯಕ ಈ ವೀರಗಲ್ಲು ಹಾಕಿಸಿದರು ಎಂದು ತಿಳಿಸಲಾಗಿದೆ.[14]

ಈ ಎಲ್ಲಾ ವಿವರಗಳು ಡಾ॥ ಟಿ.ವಿ. ವೆಂಕಟಾಚಲ ಶಾಸ್ತ್ರೀಯವರ ಕಾನಕಾನಹಳ್ಳಿಯ ಚರಿತ್ರೆ ಪುಸ್ತಕದಲ್ಲಿ ವಿಶ್ಲೇಷಣಾತ್ಮಕವಾಗಿ ವಿಮರ್ಶಾತ್ಮಕವಾಗಿ ಮೂಡಿ ಬಂದಿರುವುದು ಗಮನಾರ್ಹ ವಿಚಾರ. ಈ ವಿವರಣೆ ಪರಿಚಯಕ್ಕಷ್ಟೇ ನಿಲ್ಲದೆ, ಶಾಸನಗಳ ಸಾಂಸ್ಕೃತಿಕ ಸಾಮಾಜಿಕ, ರಾಜಕೀಯ ಅಧ್ಯಯನಕ್ಕೂ ಸಹಕಾರಿಯಾಗಿದೆ.

ವಿಜಯನಗರ ಕಾಲದ ಕಾನಕಾನಹಳ್ಳಿ

ಹೊಯ್ಸಳರು ನಂತರ ಕರ್ನಾಟಕದಲ್ಲಿ ವಿರಾಜಮಾನ ರಾಜಕೀಯ ಆಡಳಿತ ವಿಜಯನಗರದ ಅರಸುಮನೆತನದ್ದು. ಸಂಗಮ, ಸಾಳುವ, ತುಳುವ ಮತ್ತು ಅರವೀಡು ಎಂಬ ನಾಲ್ಕು ವಂಶಸ್ಥ ಅರಸರು ವಿವಿಧ ಕಾಲಮಾನಗಳಲ್ಲಿ ಒಬ್ಬರಿಗಿಂತ ಒಬ್ಬರು ವಿಜೃಂಬಿಸಿದರು. ಮೊದಲ ಸಂಗಮ ವಂಶ(1336–1485) ಕಾನಕಾನಹಳ್ಳಿ ಪ್ರದೇಶದ ರಾಜಕೀಯ ಚರಿತ್ರೆಯಲ್ಲಿ ಯಾವ ರೀತಿ ತಮ್ಮ ಪಾತ್ರ ವಹಿಸಿದೆ ಎಂಬುದನ್ನು ನೋಡಬಹುದು.

ಕಾಲಮಾನದ ದೃಷ್ಟಿಯಿಂದ ಸದ್ಯ ದೊರೆತಿರುವ ಉಯ್ಯಂಬಳ್ಳಿಯ ಹೋಬಳಿ ಎಡಮಾರನಹಳ್ಳಿ ಶಾಸನ(ಸಂ:40/1351) ಮೊದಲನೆಯದು. ಇದು ವೀರಗಲ್ಲು. ಶಾಸನ ಸ್ಪಷ್ಟವಾಗಿ ಕಾಣಿಸುತ್ತದೆ. "ಶ್ರೀಮನ್ ಮಹಾ ಮಂಡಲೇಶ್ವರ, ಅರಿರಾಯ ವಿಭಾಡ, ಭಾಷೆಗೆ ತಪ್ಪದ ರಾಯರ ಗಂಡ. ವೀರ ಬುಕ್ಕಣ್ಣವೊಡೆಯರ ಆಳ್ವಿಕೆಯ ಕಾಲ(1356–77)ದಲ್ಲಿ ನಡೆದ ಘಟನೆಯನ್ನು ಇದು ವಿವರಿಸುತ್ತದೆ. ಒಂದನೇ ಬುಕ್ಕರಾಯನೇ ಈ ಬುಕ್ಕಣ್ಣ ಒಡೆಯರ್. ಶಿವನಗೌಡನ ಮಗ ವೀರ ಸೋಮಾಜಿ ದನ ಕಾಯಲು ಹೋದಾಗ ಆತನ ಮೇಲೆ ಹೆಬ್ಬುಲಿಯೊಂದು ಮೇಲಾಯ್ದಾಗ ಅದರೊಡನೆ ಹೋರಾಡಿ ಸತ್ತನೆಂದು ಶಾಸನದ ಒಕ್ಕಣೆ.

ಇನ್ನೊಂದು ಶಾಸನ (ಸಂ:124/1370) ಇದೇ ವೀರ ಬುಕ್ಕಣ್ಣನ ಮಗ ವೀರ ಮಲ್ಲಪ್ಪ ಒಡೆಯರ್ ಆಡಳಿತ ಕಾಲದಲ್ಲಿ ಸಾತನೂರು ಆಂಜನೇಯ ದೇವಸ್ಥಾನದಲ್ಲಿ ದೊರೆತದ್ದು. ಇದನ್ನು ಹಾಕಿಸಿದವನು ಸಜ್ಜನ ಶುದ್ಧ ಶಿವಾಚಾರ ಸಕಲಗುಣ ಸಂಪನ್ನರಾದ ಕೋಡಿಹಳ್ಳಿಯ ಮಾಚಿದೇವ ಒಡೆಯರ ಮಗ ಬೆಟ್ಟ ಸವಿತ್ತಿಯ ಮಹಾಪ್ರಭು ಗೌಂಡಪ್ಪನವರ ತಮ್ಮ ಕೊಮಾರಯ್ಯ ಗುಂಡಪ್ಪ ಎಂಬುವನು. ಈ ಶಾಸನವು ಒಕ್ಕಲು ಮಕ್ಕಳಿಗೆ ಸಹಾಯ ಮಾಡಿದ, ಒಕ್ಕಲಿನ ಅನುಭವದ ವಿಚಾರವನ್ನುದಾಖಲಿಸುತ್ತದೆ.

ಕಾನಕಾನಹಳ್ಳಿ ಹೋಬಳಿ ಮಳಗಾಳು ಗ್ರಾಮದ ಮಹದೇಶ್ವರ ದೇವಾಲಯದಲ್ಲಿ ದೊರೆತ ಶಾಸನ(ಸಂ:93/1375) ಒಂದನೇ ಬುಕ್ಕರಾಯನ ಮಗನ ಕಾಲದ್ದು. ಮಗ ಯಾರು ಎಂಬುದು ಅಳಿಸಿಹೋಗಿದೆ. ಇಲ್ಲಿ ಬುಕ್ಕರಾಯನ ಹೊಗಳಿಕೆ, ವರ್ಣನೆ ಮಾತುಗಳಿವೆ. ಇವನನ್ನು ಪೂರ್ವ ದಕ್ಷಿಣ ಪಶ್ಚಿಮ ಸಮುದ್ರಾಧಿಪತಿ, ಹಿಂದೂರಾಯ ಸುರತ್ರಾಣ ಎಂದು ಬಿರುದಾಂಕಿಸಲಾಗಿದೆ. ಇದರ ಕಾಲ 3ನೇ ಹರಿಹರರಾಯನ ಕಾಲಕ್ಕೆ ಹೊಂದುತ್ತದೆ(1377–1404).ಮಹಾಸಾಮಂತಾಧಿಪತಿ ದೊಡ್ಡಕಲ್ಲಿಮಾಯ ನಾಯಕನ ಆಜ್ಞಾನುಸಾರ ದೇವರಿಗೆ ದತ್ತಿ ನೀಡಲಾಯಿತು, ಶಾಸನ ವಿವರ ಸರಿಯಾಗಿ ತಿಳಿಯುತ್ತಿಲ್ಲ. ಕಂಪಣ್ಣ, ಕೇಸರಿಸೆಟ್ಟಿ ಎರಡು ಹೆಸರುಗಳು ಕಾಣುತ್ತವೆ.

ಅರ್ಕಾವತಿ ನದಿಯ ಪಶ್ಚಿಮ ದಂಡೆಯಲ್ಲಿ ಕಾನಕಾನಹಳ್ಳಿಯೂ ಪೂರ್ವ ದಂಡೆಯಲ್ಲಿ ಮಳಗಾಳು ಗ್ರಾಮವಿದೆ.

ಸೋಮನಹಳ್ಳಿಯ ಹಳೆ ಅಗ್ರಹಾರ ದೊಡ್ಡಿವೂರಿನಲ್ಲಿ ಕಂಡುಬಂದಿರುವ(ಸಂ:2/1407) ಶಾಸನದಲ್ಲಿ ಎರಡನೇ ಹರಿಹರನ(1377–1404) ಹೆಸರು ಉಲ್ಲೇಖಗೊಂಡಿದೆ, ಇವನ ಮಗ ರಾಮಚಂದ್ರದೇವ ಒಡೆಯನು ರಾಜ್ಯವಾಳುತ್ತಿದ್ದನೆಂದು ಶಾಸನದಲ್ಲಿ ಹೇಳಿದೆ ಆದರೆ, ಸಂಗಮರ ವಂಶ ವೃಕ್ಷದಲ್ಲಿ ರಾಮಚಂದ್ರನು ಅವನ ಮಗನೆಂದು ಗುರುತಿಸಿಲ್ಲ, ಮೊಮ್ಮಗನೆಂದು ಹೇಳಲಾಗಿದೆ ಒಂದನೇ ದೇವರಾಯನ ಮಗನೆ ಇವನು. ಈ ಶಾಸನದ ಸ್ಥಳೀಯ ವಿಷಯವೆಂದರೆ, ಇವನ ಆಳ್ವಿಕೆಯ ಕಾಲದಲ್ಲಿ ಈ ಶಾಸನವು ವೊಮ್ಮಲಿಗೆ ನಾಡಪ್ರಭು ನಂದಿನಾಥ ದೇವರ ಸನ್ನಿಧಿಯಲ್ಲಿ ಯಾವುದೋ ಅಗ್ರಹಾರವನ್ನು ನೆಲೆಗೊಳಿಸಿದನೆಂದೂ ಸುಂಕದ ಅಪ್ಪಣ್ಣ ಮೊದಲಾದವರು ತೆರಿಗೆಯ ವಿನಾಯಿತಿ ನೀಡಿದಂತೆ ಅರ್ಥ ಬರುವಂತಿದೆ.

ಹಲಗೂರು ಹೋಬಳಿ ಹರಿಹರದ ಶಾಸನ(ಸಂ:74/1412)ವು ಇಮ್ಮಡಿ ಹರಿಹರರಾಯನ ಮಗ ಒಂದನೇ ದೇವರಾಯನ ಕಾಲದಲ್ಲಿ ರಚಿತವಾಗಿದೆ. ಇವನ ಕಾಲ ಕ್ರಿ.ಶ 1406–22 ಆಗಿದೆ. ಇದರಲ್ಲಿ 1412ರಲ್ಲಿ ಬೆಟ್ಟದ ವಿಜಯವೆಂಬ ಸ್ಥಳದಲ್ಲಿ ಹರಿಹರದ ಬಸವಯ್ಯನವರೂ ಯಾವುದೊ ದುರ್ಘಟನೆಗಾಗಿ ವೀರಗಲ್ಲು ಹಾಕಲಾಗಿದೆ. ಅಕ್ಷರ ಸ್ಪಷ್ಟತೆ ಇಲ್ಲ.

ಸಾತನೂರು ಹೋಬಳಿ ಹೊನ್ನವಳ್ಳಿ ಗ್ರಾಮದ ಸೋಮನಾಥ ದೇವಾಲಯದ ಗರಡುಗಂಬದಲ್ಲಿರುವ ಶಾಸನದಲ್ಲಿ (ಸಂ:59/1425) ಮೂರನೆಯ ಬುಕ್ಕರಾಯನ (1422–24)ಮಗ ಪ್ರತಾಪ ರುದ್ರದೇವ (ಎರಡನೆಯ ಮಗ) ಆಳುತ್ತಿರುವಾಗ ಹನಿವೂರ ನಾಡಪ್ರಭು ರಾಮದೇವನ ಮಗ ದೇವಪ್ಪನು ಆ ತೀರ್ಥ ಸ್ನಾನದಲ್ಲೆ ಸ್ವರ್ಗಸ್ಥನಾದನೆಂದೂ, ಅವನಿಗಾಗಿ ಸೋಮನಾಥ ದೇವರ ದೀಪಾರಾದನೆಗೆ ಈ ಕಂಬವನ್ನು ಪ್ರತಿಷ್ಠಾಪಿಸಲಾಯಿತೆಂದು ಹೇಳಿದೆ.

ಪಾಂಚಾಳರಿಗೆ ಸಂಬಂಧಿಸಿದ ಒಂದು ಶಾಸನ(ಸಂ:65/1429) ಕಬ್ಬಾಳಮ್ಮನ ಗುಡಿಗೆ ಉತ್ತರ ಭಾಗದಲ್ಲಿ ದೊರೆತಿದೆ. ಇಮ್ಮಡಿದೇವರಾಯಮಹಾರಾಜನ ಆಳ್ವಿಕೆ ಕಾಲಕ್ಕೆ(1424–46) ಸೇರಿದೆ. ಇವನಿಗೆ ಪ್ರೌಢದೇವರಾಯ ಎಂಬ ಬಿರುದಿದೆ. ಇದೇ ಹೆಸರಿನಲ್ಲಿ ಪ್ರಸಿದ್ಧನೂ ಕೂಡ. ಈ ಶಾಸನದ ಒಕ್ಕಣೆಯಲ್ಲಿ ಚಿನ್ನ ಭಂಡಾರದ ಅಡುಕದ ಸಮಯ ಚಕ್ರವರ್ತಿ ನಖರಾಚಾರ್ಯರ ಮಕ್ಕಳು ಮಲೆಪಾಚಾರ್ಯರು ಮತ್ತು ಇತರ ವಾಜರೂಗಳು ವಿತ್ತಿರಾಯಚಾರ್ಯ, ಕೆಳಲೆಯ ನಾಡಿಗೆ ಮುಖ್ಯನಾದ ಚಿನ್ನಾಚಾರ್ಯನ ಮಗ ಮಳೂರು ದಿವೋಜ, ವಿರುಪೋಜ, ಕಡಲೂರು ಮಾಯೋಜ, ನಿಟ್ಟೂರು ಬೋಮ್ಮೋಜ, ಸಮಸ್ತ ನಗರ್ತರು, ಪಂಚಾಳರೂ, ಪೆರುಗಾಳ ಮಲ್ಲೋಜ, ಬೈರೋಜ ಎಂಬುವವರಿಗೆ ಕಬ್ಬಹಾಳು ಸ್ಥಳ ಹಿರಿಯೂರು ಇಲ್ಲಿಯ ಅಕ್ಕಸಾಲಿಕೆಯನ್ನು ಅನುಭವಿಸಿಕೊಂಡು ಬರುವಂತೆ ಶಾಸನ ಹಾಕಿಸಲಾಗಿದೆ.

ಸ್ಥಳವೊಂದರಲ್ಲಿ ಇತರರ ಸ್ಪರ್ಧೆ ಸಂಘರ್ಷಗಳಿಲ್ಲದ ಹಾಗೆ ತಮ್ಮ ವೃತ್ತಿ ಜೀವನ ನಡೆಸುತ್ತ ಒಂದು ಸಂತತಿಯ ಕರಕುಶಲಿಗಳು ನೆಮ್ಮದಿಯ ಬದುಕು ಮಾಡುವಂತೆ ಸರ್ವಸಮ್ಮತವಾದ ಈ ಒಡಂಬಡಿಕೆ ಶ್ಲಾಘ್ಯವಾದುದ್ದಾಗಿದೆ. ಇಲ್ಲಿಯೆ ಕಬ್ಬಾಳಮ್ಮನನ್ನು ಕಾಳಿಕಾದೇವಿ ಎಂದಿರುವುದು ತಿಳಿಯುತ್ತದೆ.[15]

ಬನ್ನಿಕುಪ್ಪೆಯ ದಾಖಲೆ ಗ್ರಾಮ 'ಮೊಟ್ಟು'ವಿನಲ್ಲಿ ಸಿಕ್ಕ ಶಾಸನ(ನಂ:108/1445) ತಮಿಳು ಭಾಷೆಯಲ್ಲಿದ್ದು, ಶಿವಾರಪ್ಪುರಂ ಪಮ್ಮಸೆಟ್ಟಿ ಮತ್ತು ಇತರರು ದತ್ತಿ ನೀಡಿದರು. ಶ್ರೀವೀರಭದ್ರ ಎಂದು ಕನ್ನಡದಲ್ಲಿದ್ದು ಬರವಣಿಗೆ ಮಾಡಿದವನು ತಮಿಳಿಗೆ ಶಿಲ್ಪಪಿಳ್ಳೆ ಎಂಬುವವನು.

ಮೂರನೆ ದೇವರಾಯನೆಂದು ಪ್ರಸಿದ್ಧನಾದ ಮಲ್ಲಿಕಾರ್ಜುನರಾಯರ ಆಳ್ವಿಕೆ ಕಾಲಕ್ಕೆ(1446–85) ಪವಿತ್ರಗೌಡನ ಮಗ ಶಿವಪ್ಪಗೌಡ ಕಲ್ಲಾಪುರ ಗ್ರಾಮವನ್ನು ಶ್ರೀಶೈಲದ ಮಲ್ಲಿಕಾರ್ಜುನಸ್ವಾಮಿ ಅಮೃತ ಪಡೆ ಅಂದರೆ ನೈವೇದ್ಯಕ್ಕೆ ದತ್ತಿ ನೀಡಿದ ಸಂಗತಿ, ಉಯ್ಯಂಬಳ್ಳಿ ಹೋಬಳಿಯ ಮರಳೇ ಬೇಕುಪ್ಪೆ ಗ್ರಾಮದ ಶಾಸನದಲ್ಲಿ(ಸಂ:34/1465) ದಾಖಲಾಗಿದೆ.

ಕಾನಕಾನಹಳ್ಳಿ ಹೋಬಳಿ ಚೀರಣಕುಪ್ಪೆಗೆ ಸೇರಿದ ದ್ಯಾಪೇಗೌಡನದೊಡ್ಡಿಯಲ್ಲಿ ಸಿಕ್ಕ ಶಾಸನ(ಸಂ:101/1469) ವಿವರಗಳ ಭಾಗದಲ್ಲಿ ತ್ರುಟಿತವಾಗಿದ್ದರು, ಇದು ಸಂಗಮ ಮನೆತನದ

ಕಡೆಯ ದೊರೆ ಮೂರನೆಯ ವಿರೂಪಾಕ್ಷನ ಕಾಲಕ್ಕೆ(1465-85) ಸೇರಿದ್ದೆನ್ನುವ ಮಟ್ಟಿಗೆ ಲಿಖಿತ ಉಳಿದು ಕೊಂಡಿದೆ. ಈತ ಮುಮ್ಮಡಿ ದೇವರಾಯನ ಚಿಕ್ಕಪ್ಪನ ಮಗ.[16]

ಸಾಳುವ ವಂಶದ ಆಡಳಿತ : ಸಾಳುವ ವಂಶದ ಮಹಾಮಾಂಡಳಿಕ ನರಸಿಂಗರಾಯ ಒಡೆಯರನ್ನು 'ಕಠಾರಿ ಸಾಳುವ' 'ಮೇದಿನಿ ಮೀಸೆಯರ ಗಂಡ' ಎಂಬ ಬಿರುದಿನಿಂದ ವರ್ಣಿತವಾಗಿರುವ ಶಾಸನ(ಸಂ:8/1485) ಈಗಿನ ದೊಡ್ಡಮಾರಳವಾಡಿ ಪಕ್ಕದ 'ಚಿಕ್ಕಮರಳವಾಡಿ' ಗ್ರಾಮದಲ್ಲಿ ದೊರಕಿದೆ. ಈ ನರಸಿಂಗರಾಯ ಸಾಳುವ ಮನೆತನದ ಗುಂಡನ ಮಗ ಒಂದನೇ ನರಸಿಂಹ(1485-91)ನೇ ಆಗಿದ್ದಾನೆ. ಈ ಶಾಸನದಿಂದ ಮರಳವಾಡಿ ಗ್ರಾಮದ ಇತಿಹಾಸವನ್ನು ಸಹ ತಿಳಿಯಲು ಸಹಕಾರಿಯಾಗಿದೆ. ಇದು, ಈ ಒಂದನೇ ನರಸಿಂಹನು ಮಂಗಾಡಿಹಳ್ಳಿ ಗ್ರಾಮದ ಮಾದಿರಾಜಗಳ ಮಕ್ಕಳು ದೊಮ್ಮನೆಂಬುವವನಿಗೆ ಒಪ್ಪಿಸಿದ ಪುರದ ಧರ್ಮಶಾಸನ.[17]

ಇದರ ವಿವರಣೆ: ವಿಜಯನಗರದ ಅರಸರ ವಶದ ಚನ್ನಪಟ್ಟಣದ ರಾಜ್ಯದಲ್ಲಿ ಸಲ್ಲುವ ಹೊಮ್ಮಳಿಗೆ ನಾಡಿನೊಳಗಿನದು ಈ ಚಿಕ್ಕಮಣಲವಾಡಿ, ಈ ಕೆಳಗಿನ ಹಬ್ಬುಹಳ್ಳಿ. ಇವೆರಡನ್ನು ಸರ್ವಮಾನ್ಯ ಪುರವನ್ನಾಗಿ ಮಾಡಿ ಸಹಿರಣ್ಯಧಾರ ಪೂರ್ವಕವಾಗಿ ದೊಮ್ಮನಿಗೆ ಒಪ್ಪಿಸಲಾಗಿದೆ. ಇದನ್ನು ಆತನು ಪುತ್ರ ಪೌತ್ರ ಪಾರಂಪರ್ಯೆಯಿಂದ ಅನುಭವಿಸಿಕೊಂಡು ಬರುವುದೆಂದು ಆಶಿಸಿ ತ್ರಿಕರಣಪೂರಕವಾಗಿ ಈ ಧರ್ಮಶಾಸನವನ್ನು ಹಾಕಿಸಿದೆ. ಕಾಲದ ಸ್ಪಷ್ಟತೆ,ಇಲ್ಲಿ ಶಾಸನವೊಂದು(ನಂ:09) ಚಿಕ್ಕಮರಳವಾಡಿಯಲ್ಲಿ ದೊರೆತಿದೆ. ಒಕ್ಕಣೆ: ಚಂದಿಗಣ್ಣನೆಂಬುವನು ಯಾವುದೋ(?) ಸಾಹಸ ಕಾರ್ಯದಲ್ಲಿ ಹೋರಾಡಿ ಸ್ವರ್ಗಸ್ಥನಾದನೆಂಬುದನ್ನು ಹೇಳುವಷ್ಟು ಕೃತಘ್ನವಾಗಿದೆ. ಈ ವೀರಗಲ್ಲು ಸಂಕ್ಷಿಪ್ತವಾಗಿದೆ. ಇದೇ ರೀತಿ ಚಿಕ್ಕ ಶಾಸನವೊಂದು(ನಂ:20/1485) ಕೋಡಿಹಳ್ಳಿ ಹೋಬಳಿ ಬನ್ನಿಮಕೂಡ್ಲು ಗ್ರಾಮಕ್ಕೆ ಉತ್ತರದ ಮಂದನ ಕೋಟೆಯ ಹುಟ್ಟು ಬಂಡೆಯ ಮೇಲಿದೆ. ಇದು ಶಿವನಪ್ಪ ಒಡೆಯ ಎಂಬುವನು ಆನೆಯ ಬಾಮಿ(ಬಾವಿ) ಕಟ್ಟಿಸಿದ ಘಟನೆಯನ್ನು ತಿಳಿಸುತ್ತದೆ.

ತುಳುವ ಮನೆತನದ ಆಡಳಿತ

ಸಾತನೂರು ಹೋಬಳಿ ಹಲಸೂರು ಗ್ರಾಮದ ಶಾಸನ(ನಂ:56/1513)ವನ್ನು ವೀರ ನರಸಂಹ ಒಡೆಯ (1505-09)ನ ಆಡಳಿತ ಕಾಲಕ್ಕೆ ಹಾಕಿಸಿರುವುದು. ಈತ ತುಳುವ ರಾಜ. ದೇವರವಡೆಯ ನಾಯಕರು. ಹಲಸೂರನ್ನು ಯಾರದೋ ಮೇಲಾಳ್ಕೆಗೆ ಕೊಟ್ಟ ಸಂದರ್ಭದಲ್ಲಿ ದುಗ್ಗ ಬೊಮ್ಮನಾಯಕ, ಹಾರುವ ದೇವನ ಮಗ ಮಲ್ಲನ ಮಕ್ಕಳು, ಮತ್ತು ಜೊಕ್ಕೋಜಿ ವೀರೋಜಿಗಳು ಈ ಘಟನೆಗೆ ಸಾಕ್ಷಿಯಾಗಿದ್ದರು ಎಂದು ಊಹಿಸಬಹುದಾಗಿದೆ ಇನ್ನೂ ಏನೋ ಹೇಳಿದಂತೆ ಭಾವಿಸಬಹುದಾಗಿದೆ.

ಹಲ್ಲೂರು ಹೋಬಳಿ ಹರಿಹರ ಗ್ರಾಮದ ಶಾಸನ(ನಂ:73/1518) ವಿಜಯನಗರದ ಸುಪ್ರಸಿದ್ಧ ಕೃಷ್ಣದೇವರಾಯನ ಆಳ್ವಿಕೆಯ ಕಾಲದಲ್ಲಿ(1509/29) ರಚನೆಯಾಗಿದೆ. ಈತನ ಪ್ರಧಾನನಾದ ಕಂಪಒಡೆಯ ದಣ್ಣನಾಯಕನು ನಂಜಯ್ಯ ಎಂಬುವವನಿಗೆ ಹರಿಹರ, ಚಂಬಾಪುರ, ಸೂಲಿಗಿರಿ ಹೀಗೆ ಮೂರು ಗ್ರಾಮಗಳನ್ನು ದೇವರ ಸೇವೆಗಾಗಿ ದತ್ತಿ ಬಿಟ್ಟ ವಿಷಯ ತಿಳಿಯುತ್ತದೆ.

ಕಾಲದ ಸ್ಪಷ್ಟತೆಯಿಲ್ಲದೆ ಸಣ್ಣ ಶಾಸನ(ನಂ:58)ವು ಸಾತನೂರು ಹೋಬಳಿ ಹೊನ್ನಹಳ್ಳಿ ಗ್ರಾಮಕ್ಕೆ ವಾಯುವ್ಯದಲ್ಲಿರುವ ಮಲ್ಲಪ್ಪನಕೆರೆಯ ಉತ್ತರ ಕೋಡಿಯ ಹತ್ತಿರ ಸಿಕ್ಕಿದೆ. ಇದು ಮದ್ದೂರು ತಾಲೋಕು ನಿಂಗಪಾಲಮರಾಯಿ ಇನಾಮತಿ ಭೂಮಿನಿರ್ವಾಣಪ್ಪನದು ಎಂದು ಹೇಳಿದೆ. ಅದೇ ಗ್ರಾಮದ ಮುನಿಕಲ್ಲಿಗೆ ಹೋಗುವ ಮಾರ್ಗದಲ್ಲಿ ಕೂಡ ಸದೃಶವಾದ ಇನ್ನೊಂದು ಶಾಸನವಿದ್ದು(ನಂ:60) ಇದರ ತೇದಿ ತಿಳಿಯದು.

ಈ ಶಾಸನದಲ್ಲಿ ಮದ್ದೂರು ತಾ॥ ನಿಡಘಟ್ಟದ ಛತ್ರಕ್ಕೆ ರತ್ನಂಜೀ ಸೇಟ್‌ಗೆ ಇನಾಮತಿ ಜಮೀನು ಕೊಟ್ಟದ್ದು ದಾಖಲಾಗಿದೆ. ರತ್ನಂಜೀ ಶೇಟ್ ಎಂಬ ವ್ಯಕ್ತಿನಾಮ ಈ ಎರಡು ಶಾಸನಗಳ ಸಾದೃಷ್ಯ ಈ ಪ್ರಾಂತಕ್ಕೆ ಉತ್ತರ ಪ್ರದೇಶದ ಮಾರ್ವಾಡಿ ವ್ಯಾಪಾರಿಗಳ ಆಗಮನ ಮತ್ತು ಪ್ರಾಬಲ್ಯವನ್ನು ಸೂಚಿಸುವಂತಿದೆ.[18]

ಕೃಷ್ಣದೇವರಾಯನ ತಮ್ಮ ಅಚ್ಯುತರಾಯ ಮಹಾಜನ ಆಳ್ವಿಕೆಯ ಕಾಲದ್ದೆಂದು ಹೇಳುವ ಶಾಸನ (ನಂ:3/1532) ಹಾರೋಹಳ್ಳಿ ವೆಂಗಳಯ್ಯನ ಕೆರೆಯ ತೂಬಿನ ಬಳಿ ಲಭ್ಯವಾಗಿದೆ. 1532ರಲ್ಲಿ ಹಾರುವ ಹಳ್ಳಿಗೆ ವರದ ತಿಮ್ಮಯ್ಯನೆಂಬುವನು ತಿರುವೆಂಗಡನಾಥ ದೇವರನ್ನು ಬರಮಾಡಿದಾಗ(ಪ್ರತಿಷ್ಠಾಪಿಸಿದಾಗ) ಯಾವುದೋ ಗ್ರಾಮವನ್ನು ದತ್ತಿ ನೀಡಿದಂತೆ ತಿಳಿಯುತ್ತದೆ. ಅಲ್ಲಲ್ಲಿ ತೃಟಿತವಾಗಿರುವುದರಿಂದ ಯಾವ ಗ್ರಾಮ ಎಂಬುದರ ಬಗ್ಗೆ ಸ್ಪಷ್ಟತೆಯಿಲ್ಲ ಆದರೆ, 'ಹಾರುವಹಳ್ಳಿ' ಇಂದಿನ ಹಾರೋಹಳ್ಳಿ ಎಂಬುದು ಗಮನಾರ್ಹ. ಇದೇ ಅಚ್ಯುತರಾಯ ಮಹಾರಾಜನ ಕಾಲಕ್ಕೆ ಸೇರಿದ್ದು, ಮರಳವಾಡಿ ಹೋಬಳಿ ಅಗ್ರಹಾರದ ಕೆರೆಯ ಹತ್ತಿರ ಕಂಡು ಬಂದ ಶಾಸನ(ನಂ:10/1538) ಇಲ್ಲಿ ಈಗಾಗಲೇ ಈ ಸ್ಥಳದ ಸಂಬಂಧದಲ್ಲಿ 1458ರ ವಿಜಯನಗರದ ಒಂದನೇ ನರಸಿಂಹನ ಶಾಸನ(ನಂ:8)ದಲ್ಲಿ ನೋಡಿದಂತೆ. ಚನ್ನಪಟ್ಟಣ ಸೀಮೆಯ 'ಹೊಮ್ಮಲಿಗಿ' ನಾಡಿನ ಪ್ರಸ್ತಾಪ ಬಂದಿದೆ ಈ 50 ವರ್ಷಗಳ ಅವಧಿಯಲ್ಲಿ 'ಚನ್ನಪಟ್ಟಣ'ದ ವಿಶಾಲವಾದ ಪಾಳೆಪಟ್ಟಿನೊಳಗೆ ಮರಳವಾಡಿ ನಡೆದುಕೊಂಡು ಬಂದಿರುವುದು ತಿಳಿಯುತ್ತದೆ. ಒಕ್ಕಣೆ: ಈ ನಾಡಿನ ಬ್ರಹ್ಮ ಸಮುದ್ರದ ಅಗ್ರಹಾರದ ರಾಮಣ್ಣಭಟ್ಟನ ಮಗ. ನಾಗಯ್ಯನ ಮಗ, ಪಿಳ್ಳಾರಯ್ಯ ಮೊದಲಾದವರು, ಯಾವುದೋ. ದತ್ತಿ(ವಿವರ ಸ್ಪಷ್ಟವಿಲ್ಲ)ಯ ವಿಷಯದಲ್ಲಿ. ಉಲ್ಲೇಖಗೊಂಡಿದ್ದಾರೆ. ಇನ್ನೊಂದು ವಿವರಗಳು

ಸ್ಪಷ್ಟವಿಲ್ಲದ ಶಾಸನ(ನಂ:54/1539)ವು ಕಂಚನಹಳ್ಳಿಯಲ್ಲಿ ದೊರತ್ತಿದ್ದು ಅಚ್ಯುತರಾಯನ ಹೆಸರನ್ನು ಹೇಳುತ್ತದೆ.

ಇನ್ನೊಂದು ಶಾಸನ(ನಂ:63/1561)ವು ಅಚ್ಯುತರಾಯನ ವಿಚಾರ ಪ್ರಸ್ತಾಪಿಸಿದೆ. ಅದು ಸಾತನೂರು ಹೋಬಳಿಯ ಕುರುಬರಹಳ್ಳಿ ಗ್ರಾಮದಲ್ಲಿ ದೊರೆತ್ತಿದ್ದು. ಅವನ ಆಳ್ವಿಕೆಯ ಕಾಲ(1526–42)ಕ್ಕೆ ಈ ಶಾಸನ ಕಾಲ ಹೊಂದುತ್ತಿಲ್ಲ. ಆದರೆ, ಒಕ್ಕಣೆ ಪ್ರಕಾರ: ಅಚ್ಯುತರಾಯ ಮಹಾರಾಜರು ಮಲ್ಲಪ್ಪಣ್ಣ ಅಯ್ಯನವರ ಕಾರ್ಯಕರ್ತರಾದ ವಿರುಪಣ್ಣನಾಯಕ ಅಯ್ಯನವರು ಅಮೃತನಾಥ ದೇವರಿಗೆ ಏನೋ? ದತ್ತಿ ನೀಡಿದಂತೆ ತಿಳಿಯುತ್ತದೆ. ತೇದಿಯಿಲ್ಲದ ಮತ್ತೊಂದು ಶಾಸನ(ನಂ:63) ಇದೇ ಹೋಬಳಿ ಆಲೂರು ಗ್ರಾಮದ ಪುಟ್ಟೇಗೌಡನ ದೊಡ್ಡಿಯಲ್ಲಿ ಸಿಕ್ಕಿದೆ. ಇಲ್ಲಿ ಶ್ರೀವೆಂಕಟೇಶ್ವರಸ್ವಾಮಿ ಎಂಬ ದೇವರ ಹೆಸರು ದಾಖಲಾಗಿರುವುದು, ಈ ಭಾಗದ ವೈಷ್ಣವ ಧರ್ಮದ ಪ್ರಭಾವ, ಪ್ರಸಾರಗಳನ್ನು ಆಗಿನ ದೊರೆಗಳು ಕೈಗೊಂಡಿರುವುದನ್ನು 'ವಿಜಯನಗರದ ಅರಸರ ಪ್ರಭಾವಳಿ'ಯನ್ನು ಊಹಿಸಬಹುದಾಗಿದೆ.

ತುಳುವ ಮನೆತನದ ಸದಾಶಿವರಾಯ(1542–70)ನ ಹೆಸರು ಪ್ರಸ್ತಾಪವಾಗಿರುವ ಒಂದು ದತ್ತಿ ಶಾಸನ(ನಂ:27/1563) ಉಯ್ಯಂಬಳ್ಳಿ ಹೋಬಳಿ ಚಿಕ್ಕ ಮುದುಡೆ ಗ್ರಾಮದಲ್ಲಿ ದೊರಕಿದೆ. ವಿವರಗಳು ಅಕ್ಷರ ಅಳಿಸಿ ಹೋಗಿರುವುದರಿಂದ ಕಾಣುತ್ತಿಲ್ಲ. ಇದೇ ರೀತಿ ಇನ್ನೊಂದು ಶಾಸನ ಹಾರೋಹಳ್ಳಿ ಹೋಬಳಿಯ ದ್ಯಾವಸಂದ್ರ ಗ್ರಾಮದ ವಾಯುವ್ಯ ದಿಕ್ಕಿನಲ್ಲಿ(ಆಲದ ಮರ ಬಳಿ ಎಂಬ ಲಿಪಿಯನ್ನು ದಾಖಲಿಸಿದೆ) ದೊರಕಿದೆ. ಇಲ್ಲಿ "ಆಲದ ಮರ ಸಾಕ್ಷಿ" ಎಂಬ ಸಾಂಸ್ಕೃತಿಕ ಅಂಶ ಹಾಗು ವೃಕ್ಷದ ಆಯಸ್ಸು ಹೆಚ್ಚು ಎಂಬ ಅಂಶ ನಮ್ಮ ಗಮನ ಸೆಳೆಯುತ್ತದೆ. ಈ ಶಾಸನ ಮಾದಯ್ಯ ಮೊಮ್ಮಕ್ಕಳೂ, ಚನ್ನಣ್ಣಯ್ಯನೂ, ಚುಳ್ಳಕಸೀಮೆಯಲ್ಲಿ ಕೆರೆ ಕಟ್ಟಿಸಿ ಕೊಟ್ಟ ಬೊಮ್ಮಪ್ಪನಿಗೆ ಕೆರೆಯ ಕೆಳಗಿನ ಚತುಃಸೀಮೆಯನ್ನು ಕೊಡುಗೆ ಮಾನ್ಯವಾಗಿ ಕೊಟ್ಟನೆಂಬುದು ಇಲ್ಲಿಯ ವಿಷಯ.[19]

ಮೈಸೂರು ಒಡೆಯರ ಕಾಲದ ಕಾನಕಾನಹಳ್ಳಿ

ಶಾಸನಗಳು, ದಾಖಲೆಗಳು, ಮೈಸೂರು ಒಡೆಯರ ಕಾಲದ ಶಾಸನಗಳನ್ನು ಹಾಕಿಸುತ್ತಿದ್ದ ಕೊನೆಯ ಭಟ್ಟ ಈ ದೊರೆತಿರುವ ಈ ಕಾಲದ ಐನೂರಕ್ಕೂ ಹೆಚ್ಚು ಶಾಸನ – ದಾಖಲೆಗಳನ್ನು ಮುಖ್ಯವಾಗಿ ಮೂರು ಗುಂಪುಗಳಾಗಿ ವಿಂಗಡಿಸಬಹುದು; ತಾಮ್ರಶಾಸನಗಳು, ಶಿಲಾ ಮತ್ತು ಲೋಹ ಶಾಸನಗಳು ಮತ್ತು ಸನ್ನದು, ನಿರೂಪಗಳು. ಈ ಮೂರೂ ಪ್ರಕಾರದ ಶಾಸನಗಳೂ ಒಂದರಿಂದ ಒಂದು ಭಿನ್ನ ರೀತಿಯಲ್ಲಿವೆ. ಸಂಖ್ಯಾಬಲದಲ್ಲಿ ಉಳಿದ ಎರಡಕ್ಕಿಂತ ತೀರ ಕಡಿಮೆಯಾಗಿರುವ ತಾಮ್ರಶಾಸನಗಳು ಎಲ್ಲ ದೃಷ್ಟಿಯಿಂದಲೂ ಹೆಚ್ಚು ಅಮೂಲ್ಯವಾದುವು.

ತಾಮ್ರಶಾಸನಗಳು ವಿಜಯನಗರದ ಅರಸರ ತಾಮ್ರಶಾಸನಗಳ ರಚನೆಯನ್ನನುಸರಿಸಿದ್ದರೂ ಅವುಗಳ ಹಲಗೆಯ ಗಾತ್ರದಲ್ಲಿ ದೊಡ್ಡವು; ಆಕಾರದಲ್ಲಿ ಹೆಚ್ಚು ಸುಧಾರಿಸಿವೆ. ವಿಜಯನಗರದ ಹಲಗೆಗಳ ಮೇಲ್ಭಾಗವಷ್ಟೂ ಕಮಾನಿನಾಕಾರದಲ್ಲಿ ಮುಂಚಾಚಿಕೊಂಡಿದ್ದರೆ, ಒಡೆಯರ ತಾಮ್ರಶಾಸನಗಳ ಮೇಲ್ಭಾಗದಲ್ಲಿ ಬಳೆಯನ್ನು ತೂರಿಸಲು ಒಂದು ಗುಂಡು ತೂತು ಮಾಡುವಷ್ಟು ಸ್ಥಳ ಮಾತ್ರ ಮುಂಚಾಚಿರುತ್ತದೆ. ಹಲಗೆಗಳವರೆಗೂ ಇವರ ತಾಮ್ರಶಾಸನಗಳುಂಟು. ಇವರ ಕೆಲವು ತಾಮ್ರಶಾಸನಗಳು ಬಹುಶಃ ಕರ್ನಾಟಕದ ಅರಸುಮನೆತನಗಳ ಶಾಸನಗಳಲ್ಲಿಯೇ ಅತ್ಯಂತ ದೊಡ್ಡವೆಂದು ಹೇಳಬಹುದು. 15 ಹಲಗೆಗಳಿರುವ ಒಂದು ಶಾಸನದಲ್ಲಿ 733 ಪಂಕ್ತಿಗಳಿಂದ ಕೂಡಿದೆ. ಶಾಸನದ ಹಲಗೆಗಳನ್ನು ಬಳೆಯೊಂದಕ್ಕೆ ಪೋಣಿಸಿದ್ದು, ಅವುಗಳ ಜೊತೆಗೆ ವರಾಹ ಮುದ್ರೆಯನ್ನುಳ್ಳ ಗಂಟೆಯಾಕಾರದ ದಪ್ಪ ಗುಂಡೊಂದನ್ನು ಸೇರಿಸಿರುತ್ತದೆ. ತಾಮ್ರಶಾಸನಗಳಲ್ಲಿನ ಲಿಪಿ ಆರಂಭದಲ್ಲಿ ನಂದಿನಾಗರಿ; ಅನಂತರದ ಶಾಸನಗಳಲ್ಲಿ ಗುಂಡಾದ ಕನ್ನಡ, ಭಾಷೆ ಸಾಮಾನ್ಯವಾಗಿ ಸಂಸ್ಕೃತ; ಒಮ್ಮೊಮ್ಮೆ ಕನ್ನಡದಲ್ಲಿರುವುದೂ ಉಂಟು. ಕೆಲವು ಶಾಸನಗಳಲ್ಲಿ ಮೊದಲು ಪ್ರೌಢವಾದ ಕಾವ್ಯಶೈಲಿ ಸಂಸ್ಕೃತದಲ್ಲಿದ್ದು ಅದೇ ವಿಷಯವನ್ನೇ ಕನ್ನಡ ಗದ್ಯದಲ್ಲಿ ಅನಂತರ ವಿವರಿಸಿರುತ್ತದೆ. ಈ ತಾಮ್ರಶಾಸನಗಳು ಬಹುತೇಕ ದತ್ತಿ ಶಾಸನಗಳಾಗಿದ್ದು ದತ್ತಿ ಬಿಟ್ಟ ಗ್ರಾಮಗಳ ಚತುಸ್ಸೀಮೆಗಳನ್ನು ಮಾತ್ರ ಕನ್ನಡದಲ್ಲಿಯೇ ವಿವರಿಸಲಾಗಿದೆ. ಈ ಚತುಸ್ಸೀಮೆಗಳ ವಿವರಗಳು ಬೇರೆ ರಾಜಮನೆತನಗಳ ಶಾಸನಗಳಲ್ಲಿ ಎಲ್ಲಿಯೂ ಕಂಡುಬರದಷ್ಟು ವಿವರಪೂರ್ಣವಾಗಿ, ಕೆಲವು ವೇಳೆ ಹಲಬು ಹಲಗೆಗಳನ್ನಾವರಿಸುವಷ್ಟು ವಿಸ್ತಾರವಾಗಿರುತ್ತದೆ.

ದೊಡ್ಡದೇವರಾಜ, ಚಿಕ್ಕದೇವರಾಜ, ಕಂಠೀರವ ನರಸರಾಜ, ಒಂದನೆಯ ಕೃಷ್ಣರಾಜ, ಎರಡನೆಯ ಕೃಷ್ಣರಾಜ ಇವರ ಹಲವಾರು ತಾಮ್ರ ಶಾಸನಗಳು ಮೊದಲು ವಿಷ್ಣು ಬ್ರಹ್ಮರಿಂದಾರಂಭಿಸಿ ಚಂದ್ರನ ಮೂಲಕ ಯದುರಾಯನೂ ಅವರ ದ್ವಾರಕೆಯಲ್ಲಿ ಆಳುತ್ತಿದ್ದು ಆ ವಂಶದಲ್ಲಿ ಕೆಲವರು ಕರ್ನಾಟ ದೇಶಕ್ಕೆ ಬಂದು ಇಲ್ಲಿನ ಸೌಂದರ್ಯಕ್ಕೆ ಮನಸೋತು ಇಲ್ಲಿಯೇ ನೆಲಸಿದರೆಂದೂ ಮಹಿಷಾಪುರವು ಇವರ ರಾಜಧಾನಿಯಾಯಿತೆಂದೂ ತಿಳಿಸುವುದಲ್ಲದೆ ಮುಂದೆ ಬೆಟ್ಟದ ಚಾಮರಾಜನಿಂದಾರಂಭಿಸಿ ವಂಶಾವಳಿಯನ್ನು ವಿವರಿಸುತ್ತವೆ. ಮೊದಲಿನ ಕೆಲವು ಶಾಸನಗಳು ವಿಜಯನಗರದ ಸಾರ್ವಭೌಮತ್ವವನೊಪ್ಪಿಕೊಳ್ಳುತ್ತವೆ. ಮುಂದಿನವು ಒಡೆಯರು ಸ್ವತಂತ್ರವಾಗಿ ಆಳುತ್ತಿದ್ದುದನ್ನು ಸೂಚಿಸುತ್ತವೆ. ಮುಂದಿನವು ಒಡೆಯರು ಸ್ವತಂತ್ರವಾಗಿ ಆಳುತ್ತಿದ್ದುದನ್ನು ಸೂಚಿಸುತ್ತವೆ. ಚಿಕ್ಕದೇವರಾಜ, ಕೃಷ್ಣ ರಾಜರ ಆಸ್ಥಾನಗಳಲ್ಲಿದ್ದ ತಿರುಮಲಾರ್ಯನು ಅನೇಕ ತಾಮ್ರಶಾಸನಗಳ ಕರ್ತೃ. ಈತ ರಾಮಾಯಣ, ಭಾರತ ಪಾರಾಯಣ ಮಾಡುವುದರಲ್ಲಿ ನಿಷ್ಣಾತ : ಕರ್ನಾಟಕ, ಆಂಧ್ರ, ಸಂಸ್ಕೃತ ಕವಿತ್ವದಲ್ಲಿ ನಿಪುಣ; ಗಾಂಧರ್ವ ವಿದ್ಯೆಯಲ್ಲಿ ಕುಶಲ ಎಂದು ಹೇಳಿಕೊಂಡಿದ್ದಾನೆ. ದೇವನಗರ, ತೊಂಡನೂರು, ಕಳಲೆ, ಕಂಚಿ ಮುಂತಾದ ಸ್ಥಳಗಳ ತಾಮ್ರಶಾಸನಗಳೆಲ್ಲ ಕಾವ್ಯಮಯವಾಗಿ ಸಂಸ್ಕೃತ ಕನ್ನಡಗಳೆರಡರಲ್ಲಿಯೂ ರಚಿಸಿರುವ ಈತನ

ಶಾಸನ ಪದ್ಯಗಳು ಎಷ್ಟು ಸೊಗಸಾಗಿವೆಯೆಂದರೆ ಇವುಗಳಿಂದ ಮಿತ್ರವಿಂದಾ ಗೋವಿಂದ ನಾಟಕಕ್ಕೆ ಸಿಂಗರಾರ್ಯ ಪದ್ಯಗಳನ್ನಾರಿಸಿ ಕೊಂಡಿದ್ದಾನೆ. ಅಪ್ರತಿಮ ವೀರಚರಿತ್ರೆಯಲ್ಲಿಯೂ ಈ ಶಾಸನಗಳಲ್ಲಿನ ಕೆಲವು ಪದ್ಯಗಳಿವೆ.

ಈ ತಾಮ್ರಶಾಶನಗಳಲ್ಲಿ ಚಾರಿತ್ರಿಕ ವಿಷಯಗಳು ತುಂಬಿವೆ. ಚಿಕ್ಕದೇವರಾಜ ನಡೆಸಿದ ಯುದ್ಧಗಳು, ಕೃಷ್ಣರಾಜ ಮಾಡಿದ ದಾನ ಧರ್ಮಗಳು ಮುಂತಾದ ಹಲವು ವಿವರಗಳು ಇವುಗಳಿಂದ ತಿಳಿದುಬರುತ್ತದೆ. ಈ ತಾಮ್ರಶಾಸನಗಳನ್ನು ಹಾಕಿಸಿರುವ ಮುಖ್ಯ ಉದ್ದೇಶ ಅಗ್ರಹಾರಗಳನ್ನು ರಚಿಸಿ ಹಲವು ವೃತ್ತಿಗಳಾಗಿ ವಿಂಗಡಿಸಿ ದತ್ತಿ ಬಿಡುವುದು. ಅನೇಕ ಕಾರಣಗಳಿಗಾಗಿ ಅನೇಕ ಸಂದರ್ಭಗಳಲ್ಲಿ ಹೀಗೆ ಗ್ರಾಮಗಳನ್ನು ದತ್ತಿ ಬಿಟ್ಟುದುಂಟು. ದಳವಾಯಿ ಕಳಲೆ ದೇವರಾಜಯ್ಯ ಹದಿನಾಲ್ಕು ಗ್ರಾಮಗಳಿಂದ ಕೂಡಿದ ರಾಮಚಂದ್ರಪುರ ಅಗ್ರಹಾರವನ್ನು ನಿರ್ಮಿಸಿದ ವಿಷಯವನ್ನು ತಿಳಿಸುವ ತಿರುಮಕೂಡಲು ನರಸೀಪುರ ತಾಲ್ಲೂಕಿನ ಶಾಸನವೇ ಅತ್ಯಂತ ದೊಡ್ಡದು.

ಶಿಲಾಶಾಸನಗಳು ಸಾಮಾನ್ಯವಾಗಿ ಗದ್ಯರೂಪದಲ್ಲಿ ಕನ್ನಡದಲ್ಲಿದ್ದು ಶಾಸನ ಹಾಕಿಸಿರುವ ಉದ್ದೇಶವನ್ನು ಮಾತ್ರ ತಿಳಿಸುವ ವಸ್ತುನಿಷ್ಠ ಶಾಸನಗಳೇ ಹೆಚ್ಚು ಒಡೆಯರು ಹಾಕಿಸಿರುವ ಈ ಶಾಸನಗಳಲ್ಲಿ ಶಾಸನ ಹಾಕಿಸಿದ ರಾಜನ ಮೂರು ಅಥವಾ ನಾಲ್ಕು ತಲೆಮಾರುಗಳ ವಂಶಾವಳಿಯನ್ನು ಕೊಡುವುದು ರೂಢಿ. ಚಿಕ್ಕದೇವರಾಜರ ಕಾಲದ ಮತ್ತು ಅನಂತರದ ಕೆಲವು ಶಾಸನಗಳಲ್ಲಿ ಬಿರುದೆಂತೆಂಬರ ಗಂಡ, ಕೋಕೈಕವೀರ, ಶ್ರೀ ಮನ್ಮಹಾರಾಜಾಧಿರಾಜ, ರಾಜಪರಮೇಶ್ವರ, ಪ್ರೌಢಪ್ರತಾಪನ ಪ್ರತಿಮ ವೀರನರಪತಿ ಮುಂತಾದ ಬಿರುದಾವಳಿಗಳನ್ನು ನೋಡಬಹುದು. ದೊಡ್ಡ ಶಾಸನಗಳಲ್ಲಿಯೂ ಕೂಡ ಸಾಹಿತ್ಯಾಂಶ ಇಲ್ಲವೇ ಇಲ್ಲವೆನ್ನಬಹುದು. ಚಿಕ್ಕದೇವರಾಜ ಮಳವಳ್ಳಿಯಲ್ಲಿ ಶೃಂಗಾರಕೊಳವೆಂಬ ಕೊಳವನ್ನು ಕಟ್ಟಿಸಿದ ವಿಷಯವನ್ನು ತಿಳಿಸುವ ಅಲ್ಲಿನ ಶಾಸನ ಸಂಸ್ಕೃತದಲ್ಲಿ ಸುಂದರವಾದ ವೃತ್ತಗಳಿಂದ ರಚಿತವಾಗಿದ್ದು ಕೊನೆಯಲ್ಲಿ ಕನ್ನಡದಲ್ಲಿಯೂ ಈ ವಿಷಯವನ್ನು ತಿಳಿಸುತ್ತದೆ. ಕಲ್ಲಂಬಾಳಿನ ಹೊಯ್ಸಳರ ಕಾಲದ ದೇವಾಲಯವನ್ನು ಒಡೆಯರ ಕಾಲದಲ್ಲಿ ಜೀರ್ಣೋದ್ಧಾರ ಮಾಡಿದ ವಿಷಯವನ್ನು ತಿಳಿಸುವ ಶಾಸನದ ಆರಂಭದಲ್ಲಿ ರಘುವಂಶದ ವಾಗರ್ಥಾವಿವ ಎಂದು ಮೊದಲಾಗುವ ಪ್ರಸಿದ್ಧವಾದ ಶ್ಲೋಕವನ್ನು ಕೊಟ್ಟಿರುವುದೊಂದು ವಿಶೇಷ. ಕಂಠೀರವ ನರಸರಾಜನು ಕಂಠೀರಾಯ ಹಣವನ್ನು ಟಂಕಿಸಿದುದನ್ನು ಒಂದು ಶಾಸನ ತಿಳಿಸಿದರೆ ಮತ್ತೆರಡು ಶಾಸನಗಳನ್ನು ಕಾಶಿ ಪ್ರಯಾಗಗಳಲ್ಲಿ ದಾನ ಧರ್ಮಗಳಿಗಾಗಿ ರಾಜ ದತ್ತಿ ಬಿಟ್ಟುದುದನ್ನು ತಿಳಿಸುತ್ತವೆ. ಪವಾಡಗಳನ್ನು ತಿಳಿಸುವ ಕೆಲವು ಶಾಸನಗಳೂ ಉಂಟು. 1818ರಲ್ಲಿ ಮೈಲಿಬೇನೆ ಮತ್ತು ಕಾಲರ ಹರಡಿದಾಗ ನಂಜಮ್ಮ ಎಂಬ ಕನ್ಯೆಯ ಮೇಲೆ ಕೊಲ್ಲಾಪುರದ ಮಹಾಲಕ್ಷ್ಮೀ ಮತ್ತು ಉಜ್ಜಯಿನಿಯ ಮಹಾಕಾಳಿಯರು ಆವಿರ್ಭವಿಸಿ ಎಲ್ಲ ವರ್ಣದವರಿಗೆ ಊರೋಗಾದ್ಯುಪದ್ರವಗಳನ್ನು ಪರಿಹರಿಸಿದುದಾಗಿ ಕನ್ನಂಬಾಡಿಯ ಶಾಸನವೊಂದು ತಿಳಿಸುತ್ತದೆ.

ಹಾಗೆಯೇ ಮೈಸೂರಿನಲ್ಲಿ ಪ್ಲೇಗಿನ ಉಪದ್ರವ ಹರಡಿದ್ದಾಗ ಸುಬ್ಬರಾಯದಾಸರಿಗೆ ದೇವರು ಶ್ರೀ ವೈಷ್ಣವ ಬಾಲಕನಂತೆ ಕಾಣಿಸಿಕೊಂಡು ಅಂಗಾರಾಕ್ಷತೆ ಪ್ರಸಾದವನ್ನು ದಯಪಾಲಿಸಿದಾಗ ಎಂಟು ದಿನ ಮೈಮೇಲೆ ಎಚ್ಚರವಿಲ್ಲದೆ. ಬಂದ ರೋಗಿಗಳನ್ನೆಲ್ಲ ಅಂಗಾರಾಕ್ಷತೆಗಳನ್ನು ಕೊಟ್ಟು ರೋಗ ವಾಸಿಮಾಡಿದ ಪವಾಡಗಳನ್ನು ಮೈಸೂರಿನ ಶಾಸನವೊಂದು ತಿಳಿಸುತ್ತದೆ. ಶಿಲಾಶಾಸನಗಳಲ್ಲಿಯೇ ದೊಡ್ಡದಾದ ಈ ಶಾಶನ ಎರಡು ಕಲ್ಲುಗಳ ಮೇಲಿದ್ದು ಸುಬ್ಬರಾಯದಾಸರು ನಡೆಸಿದ ತೀರ್ಥಯಾತ್ರೆಗಳು, ಮಾಡಿದ ಧರ್ಮಕಾರ್ಯಗಳನ್ನೆಲ್ಲ ವಿವರವಾಗಿ ತಿಳಿಸಿ ಅವರು ಕಟ್ಟಿಸಿದ ದೇವಾಲಯಗಳ, ಅಗ್ರಹಾರಗಳ ವಿವರಗಳನ್ನು ತಿಳಿಸುತ್ತದೆ. ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದ ನೂರಾರು ಶಾಸನಗಳಿದ್ದರೂ ಹೆಚ್ಚಾಗಿ ಮೂರ್ತಿಗಳ ಪೀಠದ ಮೇಲೆ, ಒಡವೆಗಳ ಮೇಲೆ, ದೇವಾಲಯಗಳ ಪಾತ್ರೆಗಳ ಮೇಲೆ, ಉತ್ಸವ ವಿಗ್ರಹಗಳ ಮೇಲೆ ಇರುವ ಕಿರುಶಾಸನಗಳು, ನಂಜನಗೂಡು, ಚಾಮರಾಜನಗರ, ಮೈಸೂರು, ಮೇಲುಕೋಟೆ, ಶ್ರೀರಂಗಪಟ್ಟಣ ಮುಂತಾದ ಅನೇಕ ಕಡೆ ದೇವಾಲಯಗಳಿಗೆ ನೂರಾರು ಲೋಹ ಮತ್ತು ಶಿಲಾಮೂರ್ತಿಗಳನ್ನು ಮಾಡಿಸಿದವರ ಹೆಸರಿರುತ್ತವೆ; ಈ ಶಾಸನಗಳಲ್ಲಿ ವಿಷಯ ವೈವಿಧ್ಯತೆ ಕಡಿಮೆ.

ಸನ್ನದುಗಳು, ನಿರೂಪಗಳು, ರಹದಾರಿ ಪತ್ರಗಳು ಮುಂತಾದ ಕೈಯಲ್ಲಿ ತಯಾರು ಮಾಡಿದ ಹಾಳೆಗಳ ಮೇಲಿರುವ ಐತಿಹಾಸಿಕ ದಾಖಲೆಗಳೇ ಹೆಚ್ಚು ಉಳಿದು ಬಂದಿರುವುದು. ಶೃಂಗೇರಿ, ಕೂಡಲಿ, ಪರಕಾಲ ಮಠಗಳೇ ಆದಿಯಾಗಿ ಅನೇಕ ಮಠಗಳಿಗೂ ವಿದ್ವಾಂಸರಿಗೂ ಅಧಿಕಾರಿಗಳಿಗೂ ಕೊಟ್ಟ ದಾನಪತ್ರಗಳು ಅಥವಾ ಸನ್ನದುಗಳು ಉದ್ದವಾದ ಕಾಗದದ ಸುರುಳಿಯಲ್ಲಿದ್ದು ಮೇಲೆ ರಾಜನ ಮುದ್ರೆಯೂ ಕೆಳಗೆ ಸ್ವಹಸ್ತಾಕ್ಷರದಲ್ಲಿ ಕೊಟ್ಟ ದಾನದ ವಿಷಯವೂ ರುಜುವೂ ಇರುತ್ತವೆ ಕೆಲವು ವೇಳೆ ಕನ್ನಡ, ಮರಾಠಿ ಮತ್ತು ಪಾರಸೀ ಭಾಷೆ ಮತ್ತು ಲಿಪಿಗಳಲ್ಲಿ ಈ ಸನ್ನದುಗಳಿರುವುದುಂಟು ಪತ್ರಗಾಳನ್ನು ಅಮೀಲರಿಗೆ ಉದ್ದೇಶಿಸಿದ್ದು ಅವುಗಳ ನಕಲನ್ನು ಕಡತಕ್ಕೆ ಸೇರಿಸುವ ನಿರೂಪವಿರುತ್ತದೆ. ಮಠದ ಸ್ವಾಮಿಗಳೋ ಪಂಡಿತರೋ ಸಂಚಾರ ಹೊರಟಾಗ ಅವರಿಗೆ ಅಲ್ಲಲ್ಲಿ ಅನುಕೂಲ ಮಾಡಿಕೊಡುವಂತೆ ಆಯಾ ತಾಲ್ಲೂಕಿನ ಅಮೀಲರಿಗೆ ಪೂರ್ಣಯ್ಯ ಬರೆದ ಬಂದ ಓಲೆ ಸ್ವಾರಸ್ಯವಾದುದು, ನರಸೀಪುರದಲ್ಲಿದ್ದ ವೆಂಕಟರಾಮಾಶಾಸ್ತ್ರೀಗಳೆಂದು ಶ್ರೋತ್ರಿಯರು ತೀರಿಕೊಂಡಾಗ, ಅವರ ಹೆಂಡತಿ ಯಾರು ಎಷ್ಟೇ ಸಮಾಧಾನ ಮಾಡಿದರೂ ಕೇಳದೆ ಸಹಗಮನ ಮಾಡುವುದಾಗಿ ಹಟ ಹಿಡಿದಾಗ ಅಮೀಲರು ವಿಷಯವನ್ನು ಪೂರ್ಣಯ್ಯನಿಗೆ ಬರೆದು ತಿಳಿಸಿದಾಗ ಶಾಸ್ತ್ರಿಗಳು ಶ್ರೋತ್ರಿಯರಾಗಿ ಬಾಳಿದ ಹಿರಿಯರು ಅವರ ಹೆಂಡತಿ ಹಾಗೆ ಹಟ ಹಿಡಿಯುವುದು ಸರಿಯಲ್ಲ ಎಂದು ಎಲ್ಲ ಬಗೆಯಲ್ಲೂ ತಿಳಿಹೇಳುವುದು; ಎಷ್ಟು ಮಾತ್ರಕ್ಕೂ ಒಪ್ಪದಿದ್ದಲ್ಲಿ ಸಹಗಮನಕ್ಕೆ ಒಪ್ಪಿಗೆ ಕೊಡುವುದು ಎಂದು ಉತ್ತರ ಬರೆದಿದ್ದಾನೆ.

ಮೈಸೂರು ಒಡೆಯರ ಕಾಲದ ಕಾನಕಾನಹಳ್ಳಿ

ಕಾನಕಾನಹಳ್ಳಿ ಪ್ರಾಂತ್ಯದಲ್ಲಿ ಮೈಸೂರು ಒಡೆಯರ ಹಿಡಿತದ ಆಡಳಿತದ ವಿಷಯ ತಿಳಿಯುವುದು ತುಂಗಣಿ ಹೊಬಳಿ ರಾಮಪುರ ಶಾಸನ(ಸಂ:106/1586). ಇದು ಒಂದನೇ ರಾಜ ಒಡೆಯರ ಕಾಲ(1578–1617) "ರಾವುತ್ತರ ರಾಯ ಒಡೆಯರ ಆಳ್ವಿಕೆಯ ಕಾಲದಲ್ಲಿ ನೂಲನಾಡ ಮಹಾಪ್ರಭು ತುಂಗಣಿಯ ಕಾಳಯ್ಯಜ್ಜ ಅವರ ಮಕ್ಕಳು ರಾಮಯ್ಯ ಮತ್ತು ಇತರರು ದಾಮೋದರ ದೇವರ ಅಂಗ ಭೋಗಕ್ಕೆ ರಾಮಾಪುರದ ಗದ್ಯಾಣ,12 ಹೊನ್ನುಕೊಟ್ಟುದಾಗಿಯೂ ಉಳಿದ ಗ್ರಾಮದ ಉತ್ಪನ್ನ ತಮ್ಮದು" ಎಂಬುದಾಗಿ ಶಾಸನವಿವರಿಸುತ್ತದೆ.

ಮೈಸೂರು ಒಡೆಯರಿಗೂ ಚನ್ನಪಟ್ಟಣ ಸೀಮೆಯ ಪಾಳೇಗಾರ ಜಗದೇವರಾಯನಿಗೂ ಪದೆ ಪದೇ ಸಂಘರ್ಷಗಳು ನಡೆದು ಒಬ್ಬ ಒಮ್ಮೆ ಇನ್ನೊಬ್ಬರು ಒಮ್ಮೆ ಗೆಲುವು ಪಡೆಯುತ್ತಾ ಮಸೆಯುತ್ತಿದ್ದ ವಿಷಯಾ ಚನ್ನಪಟ್ಟಣದ ಪಾಳೇಗಾರರ ಇತಿಹಾಸವನ್ನು ತಿಳಿಯುವಾಗ ವಿವರಿಸಲಾಗಿದೆ. ಕ್ರಿ.ಶ.1630ರಲ್ಲಿ ಈ ರೀತಿ ನಡೆದ ಕಾಳಗದಲ್ಲಿ ಮೈಸೂರು ಚಾಮರಾಜ ಒಡೆಯರ ಕೈ ಮೇಲಾಗುವುದನ್ನು ಕಾಣುತ್ತೇವೆ. ಈ ವೇಳೆಗೆ ಕಾನಕಾನಹಳ್ಳಿ ಪ್ರದೇಶ ಒಂದು ಸರ್ವ ಸ್ವತಂತ್ರ ಆಯಕಟ್ಟಿನ ಗುರುತಿಸಬಹುದಾದ ಆಡಳಿತ ಪ್ರದೇಶವಾಗಿ ಬೆಳೆದಿರುವುದನ್ನು ನಂತರ ಶಾಸನಗಳಲ್ಲಿ ಕಾಣುತ್ತೇವೆ. ಈ ವೇಳೆಯಲ್ಲಿಯೇ ಕಾನಕಾನಹಳ್ಳಿಯ ನಾಡಪ್ರಭು ಎಂದು ಪ್ರಸಿದ್ಧನಾದ ದೊಡ್ಡಯ್ಯ ಮಹಾ ಪ್ರಭುಗಳನ್ನು ಒಂದನೇ ಕಂಠೀರವ ನರಸರಾಜ ಒಡೆಯರು ಚನ್ನರಾಯಪಟ್ಟಣದ ಮನ್ನೇಯನನ್ನಾಗಿ ನೇಮಿಸಿರಬಹುದಾಗಿದೆ ಎಂಬುದು ಸ್ಪಷ್ಟವಾಗುತ್ತದೆ.

ಕಾನಕಾನಹಳ್ಳಿ ಸಮೀಪದ ಬೂದಿಗೂಪ್ಪೆಯಲ್ಲಿ ಸಿಕ್ಕ ಒಂದು ಶಾಸನ (ವೀರಗಲ್ಲು)(ನಂ:96/1653) ಬೂದಿಗುಪ್ಪೆಯ ಗೌಡ ಚೂಡಪ್ಪನ ಮಗ ದೇವಪ್ಪನನ್ನು ಹುಲಿಕಚ್ಚಿ ಸತ್ತನೆಂದೂ ಆಗ ಈ ವೀರಗಲ್ಲು ಹಾಕಿಸಲಾಯಿತು. ಈ ಮೂರ್ತಿ ಕೆತ್ತಿದವನು ನಾಗೋಜಿ ಎಂಬುವನಂತೆ ತಿಳಿಯುತ್ತದೆ.

ಮಳಗಾಳಿನ ಮಹದೇಶ್ವರಸ್ವಾಮಿ ದೇವಸ್ಥಾನ ಆ ಕಾಲಕ್ಕೆ ಪ್ರಸಿದ್ಧವಾಗಿದ್ದು, ಇದರ ಸೇವೆಯನ್ನು ಮೈಸೂರು ದೊರೆ ದೇವರಾಜ ಒಡೆಯುನು(1659–73) ಸಲ್ಲಿಸಿದ್ದು ಅಲ್ಲಿದ್ದ ಶಾಸನ (ನಂ:94/1662)ವು ಸಾಕ್ಷ್ಯ ಒದಗಿಸುತ್ತದೆ. ಇದು "ಮಾಳಗಾಳ ಮಹದೇಶ್ವರಸ್ವಾಮಿಯವರಿಗೆ" ಎಂದು ತಿಳಿಸಿರುವುದರಿಂದ ಈಗಿನ ಮಾಳಗಾಳು ಗ್ರಾಮದ ಹಳೆಯ ಹೆಸರು 'ಮೊಳಗಾಳು' ಎನ್ನುವುದು. ಈ ಶಾಸನ ಹಾಕಿಸಿದವರು ರಾಜನೇ ಎಂಬುದು ವಿಶೇಷ. ಜೊತೆಗೆ ಇಡೀ ಶಾಸನದಲ್ಲಿ 'ಕಾಣಿಕಾರನ ಹಳ್ಳಿ'– ಎರಡು ಬಾರಿ ಪುನರುಕ್ತಿಯಾಗಿರುವುದು ಸ್ಥಳನಾಮ ಹಾಗೆಯೇ ಉಳಿದುಕೊಂಡು ಬಂದಿರುವುದು ಗಮನಾರ್ಹ ದೇವಸ್ಥಾನ ಸ್ವಾಮಿಗಳ ದೀಪಾರಾದನೆ ರಥೋತ್ಸವ ಸೇವೆಯ ಪಡಿತರವೇ ಅಲ್ಲದೆ.

ಕಾಣಿಕಾರನಹಳ್ಳಿಯ ಗುಡಿಗಳಾಗಿ ಗುಡಿಕಾರರು, ಪಾರುಪತ್ತೆಗಾರರು, ಸುಂಕದ ಮಣೆಹಗಾರರು(ಸುಂಕ ಸಂಗ್ರಹಕಾರರು) ಶಾನುಬೋಗರು(ಜಮೀನು ಭೂಮಿ ಲೆಕ್ಕ ಇಡುವವರು) ರಾವುತರು (ಕುದುರೆ ಪಳಗಿಸುವ ಚಾಕಿಗಳು) ರಾಣುವೆಯವರು(ಖಾಸಗಿ ಸೈನ್ಯ ಇಟ್ಟುಕೊಂಡವರು) ಮೊದಲಾದವರನ್ನು ಉದ್ದೇಶಿಸಿ, ದೊರೆಯುವ ಸೇವೆಯ ಒಂದು ಕಟ್ಟು ಮಾಡಿದನು. ಅಂದರೆ, ಗುರಿಕಾರರಿಗೆ 19 ಗದ್ಯಾಣ, ಪಾರು ಪತ್ತೆಗಾರರು–3ಪಣ, ಸೇನೆಬೋಹರು ಮತ್ತು ಸುಂಕದ ಮಣೆಹಗಾರರು ಕಲಾಪಣ, ರಾವುತರಿಗೆ ಕುದುರೆಯೊಂದಕ್ಕೆ 2ಪಣ, ರಾಣುವೆಯವರು ಸುಂಕದ ಕಾರುಕೋಣರಿಗೆ(ಕಾರಕೂನ) ತಲಾ 1ಪಣ. ಹೀಗೆ ದೇವರ ಪೂಜಾ ಸೇವೆಯ ಭಂಡಾರಕ್ಕೆ ವರ್ಷಂಪ್ರತಿ(ಪ್ರತಿ ವರ್ಷವು) ಕೊಡುವುದೆಂದು ಕಟ್ಟಳೆ ವಿಧಿಸಿದನು. ಈ ರೀತಿ ಸೇವೆ ಕೊಡುವುದರಲ್ಲಿ ವಿಘ್ನವುಂಟಾದರೆ, ಅವರಿಗೆ ಕಾಶಿಯ ಭಾಗೀರಥೀ(ಗಂಗೆ) ತೀರದಲ್ಲಿ ಶ್ರೀಶೈಲದ ಗಂಗೆಯಲ್ಲಿ ಗೋವು ಕೊಂದ ಪಾಪಕ್ಕೆ ಗುರಿಯಾಗುವರು. ಸ್ಥಳದ ಅಧಿಕಾರಿಗಳ ಜವಬ್ದಾರಿ, ಗಣ್ಯರ ಕರ್ತವ್ಯ ದೇವಾಲಯದ ಸುಸ್ಥಿತಿಯ ಮಹತ್ವ, ಧಾರ್ಮಿಕ ಜಾಗೃತಿ ಇವೆಲ್ಲಾ ಸ್ಥಾನಿಕ ಆಡಳಿತ ನಿರ್ವಹಣೆಯಲ್ಲಿ ಉಲ್ಲೇಖಾರ್ಹವಾದ ಅಂಶಗಳಾಗಿವೆ. ಮೈಸೂರು ದೇವರಾಜ ಒಡೆಯರು ಕ್ರಿ.ಶ.1659–73ರ ಅವಧಿಯ ಆಳ್ವಿಕೆ ಮಾಡುವಾಗ ಕಾನಕಾನಹಳ್ಳಿಯ ದೇಗಲಮಠಕ್ಕೆ ಇದೇ ರೀತಿಯ 'ದೇವಾಲಯ ಸುಸ್ಥಿತಿ ಸೇವೆಗೆ' ಏರ್ಪಾಟು ಮಾಡಿದ ಸಂಗತಿ ಮಠದ ಶಾಸನ(ನಂ:91–1667)ದಿಂದ ತಿಳಿದು ಬರುತ್ತದೆ. "ವಿರೂಪ ಸಮುದ್ರ(ಈಗಿನ ವಿರೂಪಸಂದ್ರ)ದ ದಳವಾಯಿ ಕೊಮೊರಯ್ಯನ ತಾಯಿ ತಿಮ್ಮಮ್ಮನವರು ಸ್ವಾಸ್ತಿಯನ್ನು ಸ್ಥಿರವಾಗಿ ಆಗು ಮಾಡಿ"

ಮಠವನ್ನು ಸಾಂಗವಾಗಿ ಅನುಭವಿಸುತ್ತ ನಡೆಸಿಕೊಂಡು ಬರುವುದು ಎಂದು ವಿವರಿಸಲಾಗಿದೆ. (ವಿವರವಾಗಿ ಧರ್ಮ ಮತ್ತು ವಾಸ್ತಶಿಲ್ಪ ಅದ್ಯಾಯದ ದೇಗುಲ ಮಠ ಭಾಗದಲ್ಲಿ ನೋಡಬಹುದು)

ಇದೇ ಸ್ಥಳದಲ್ಲಿ ಹಳೆಯ ನಿರ್ವಾಣದೇವರ ಮಠ ಇದ್ದು, ಅದು ಮಣ್ಣಿನಲ್ಲೋ ಇಟ್ಟಿಗೆಯಲ್ಲೊ ಕಟ್ಟಿರಬೇಕು. ಅರ್ಕಾವತಿ ನದಿಯಲ್ಲಿ ಪ್ರವಾಹ ಹುಚ್ಚು ಬಂದು ಈ ಚಿಕ್ಕಮಠ ಕೊಚ್ಚಿ ಹೋಯಿತು. ಅದಕ್ಕೆ ಶಾಶ್ವತವಾದ ಕಲ್ಲಿನ ಮಠವನ್ನು ಕಟ್ಟಿಕೊಡುತ್ತಿರುವುದಾಗಿ ವಿವರಣೆ ಶಾಸನದಲ್ಲಿ ಬರುತ್ತದೆ.

ಮುಂದೆ, ವಿರೂಪ ಸಮುದ್ರ ಗ್ರಾಮದ ಪೂರ್ವದಿಕ್ಕಿನ ಕೆರೆಯ ಕೆಳಗೆ ಹುಟ್ಟುಬಂಡೆಯ ಮೇಲೆ ಕೆತ್ತಿಸಿರುವ ಶಾಸನ(ಸಂ:95/1671)ವನ್ನು ನೋಡಿದರೂ ಅದುಇದೇ ದೇವರಾಜ ಒಡೆಯರ ಆಳ್ವಿಕೆ ಕಾಲದಲ್ಲಿ ಉಲ್ಲೇಖಗೊಂಡಿದೆ. ಇದೂ ಮಳಗಾಳು ಮಹದೇಶ್ವರಸ್ವಾಮಿಯ ಸೇವೆಗೆ ದತ್ತಿ ಬಿಟ್ಟ ವಿಷಯವನ್ನೆ ಪ್ರಸ್ತಾಪಿಸುತ್ತದೆ. ಈ ರಾಜನ ರಾಜಧಾನಿ ಶ್ರೀರಂಗಪಟ್ಟಣ ಈ ಕಾನಕಾನಹಳ್ಳಿ ಪ್ರದೇಶ ಆತನ ಆಳ್ವಿಕೆಯ ವ್ಯಾಪ್ತಿಗೆ ಸೇರಿದ ಪ್ರದೇಶವೆಂಬುದು ಈ ಶಾಸನೊಕ್ಕಣೆಯಿಂದ ಅರಿವಾಗುತ್ತದೆ. "ಶ್ರೀರಂಗಪಟ್ಟಣಕ್ಕೆ ಸಲ್ಲವ ಕಾಣಿಕಾರನಹಳ್ಳಿಯ ಸ್ಥಳದ ಮೊಳಗಾಳ್ ಮಹದೇಶ್ವರಸ್ವಾಮಿಗೆ ದತ್ತಿ ನೀಡಿದ್ದ ವೀರೂಪಸಮುದ್ರದ ಭೂಮಿಯಲ್ಲಿ ಒಡೆದಿರುವ ಕೆರೆಯನ್ನು ಕಟ್ಟಿಸಿ ಜೀರ್ಣೋದ್ದಾರ

ಮಾಡಿದವ ಹೊರಳುಗಲ್ಲ ವೀರಣ ಒಡೆಯರ ದೇವರ ಪೌತ್ರರಾದ ವೀರ ಭದ್ರಪ್ಪದೇವರು" ಎಂದು ಮೂಲರೂಪವಿದೆ. ಈ ಕೆರೆ ಸಹ 'ಭದ್ರಪನಕೆರೆ"ಎಂದು ಹೆಸರುವಾಸಿಯಾಗಿರುವುದು ತಿಳಿದು ಬರುತ್ತದೆ ಜೊತೆಗೆ ಮಳಗಾಳು ಮಹದೇಶ್ವರಸ್ವಾಮಿ ಸನ್ನಿಧಿ ಆ ಕಾಲಕ್ಕೆ ಒಂದು ತೀರ್ಥಸ್ಥಳ ಅಥವಾ ಯಾತ್ರಾಸ್ಥಳವಾಗಿತ್ತು, ಅದರ ಸೇವೆ, ಪ್ರಸಿದ್ಧಿಗಳಿಂದ ಅಂದಿನ ಪ್ರಜೆಗಳಿಗಿದ್ದ ಧಾರ್ಮಿಕ ಭಾವ, ಭಕ್ತಿ ಉತ್ಸುಕತೆ ಎಲ್ಲಾ ಉನ್ನತವಾಗಿದ್ದವೆಂದು ಹಾಗೆಯೇ ದೇವರಾಜ ಒಡೆಯರೂ ಸಹ ಧರ್ಮ ಕಾರ್ಯಗಳಲ್ಲಿ ಮುಂದು ಎಂತಲೂ ಅರಿಯಬಹುದಾಗಿದೆ. ಈ ದೇವರಾಜ ಒಡೆಯರ ಧರ್ಮದುಂದುಭಿಯಾಗಿದ್ದರು ಎನ್ನುವುದಕ್ಕೆ ವಂಶರತ್ನಾಕರ ಕೃತಿಯನ್ನು ಗಮನಿಸಬಹುದು ಮೈಸೂರಿನ ಚಾಮುಂಡಿಬೆಟ್ಟಕ್ಕೆ ಸಾವಿರ ಮೆಟ್ಟಲುಗಳನ್ನು ಕಟ್ಟಿಸಿದ್ದು, ದೊಡ್ಡ ಬಸವನ ಮೂರ್ತಿಯನ್ನು ಮಾಡಿಸಿದ್ದು ಕ್ರಿ.ಶ.1664ರಲ್ಲಿ. ನಂತರ ಬೆಟ್ಟದ ಬುಡದಲ್ಲಿ 63 ಮನೆಗಳನ್ನು ಕಟ್ಟಿಸಿ, ಅದನ್ನು ಈ ಚಾಮುಂಡಿ ಮತ್ತು ಪೂಜೆ, ಸೇವೆ, ಉತ್ಸವಾರಿ ನೋಡಿ ಕೊಳ್ಳಲು ವಿವಿಧ ವೃತ್ತಿ ನಿರ್ವಹಣೆ ಬ್ರಾಹ್ಮಣರಿಗೆ ಅಗ್ರಹಾರವನ್ನು ನಿರ್ಮಾಣ ಮಾಡಿದರು. ಇದು ಇಂದಿಗೂ ದೇವರಾಜ ಅಗ್ರಹಾರವೆಂದು ಪ್ರಸಿದ್ಧವಾಗಿದೆ. ಈ ಅಗ್ರಹಾರದ ನಿರ್ವಹಣೆಗಾಗಿ ಚನ್ನಪಟ್ಟಣ ಪ್ರಾಂತ್ಯಕ್ಕೆ ಸೇರಿದ ಕಾನಕಾನಹಳ್ಳಿ ಪ್ರದೇಶ ಗರಕಹಳ್ಳಿ ಸೋಗಾಲ ಮುಂತಾದ 6 ಗ್ರಾಮಗಳನ್ನು ದತ್ತಿಕೊಟ್ಟು, ಈ ಅಗ್ರಹಾರಕ್ಕೆ ತಾಮ್ರದ ಶಾಸನ ಬರೆಯಿಸಿಕೊಟ್ಟರು ಎಂದು ವಂಶ ರತ್ನಾಕರ ಕೃತಿಯಲ್ಲಿ ವರ್ಣನೆಯಿದೆ(1887 ಪು:94) ಅದರ ಪುನರಾವೃತ್ತಿ 'ವಂಶಾವಳಿ' ಕೃತಿಯಲ್ಲಿಯೂ (ಭಾಗ1.1916 ಪು:99) ಹೆಚ್ಚಿನ ವಿವರಣೆ ಇದೆ ನೋಡಬಹುದು. ಜೊತೆಗೆ ಈ ಗರಕಳ್ಳಿ ಸೋಗಾಲ ಗ್ರಾಮಗಳನ್ನು ದತ್ತಿ ನೀಡಿದ ವಿವರಣೆಯನ್ನು ವಿರೂಪಾಕ್ಷಿಪುರ.

ಹೋಬಳಿ ಗರಕಹಳ್ಳಿ ಶಾಸನದಲ್ಲಿ(ನಂ:56/1666)ದಾಖಲಾಗಿದೆ. ಈಗಲೂ ಬ್ರಾಹ್ಮಣ ಕುಟುಂಬಗಳಿಗೂ ಸೋಗಾಲ, ಎಲೆತೋಟದಹಳ್ಳಿ ಮೊದಲಾದ ಗ್ರಾಮಗಳೊಂದಿಗೆ ನಿಕಟ ಸಂಬಂಧ ಏರ್ಪಟ್ಟಿರುವುದಕ್ಕೆ ಸಾಕ್ಷಿಗಳೂ ಉಂಟು.1, ಕೂಡ್ಲೂರು(ಚನ್ನಪಟ್ಟಣ, ತಾ) ಶಾಸನವೂ(ನಂ:108) ಇದನ್ನು ಸ್ಪಷ್ಟಪಡಿಸುತ್ತದೆ. ಕ್ರಿ.ಶ.ಸುಮಾರು1662–82ರ ನಡುವೆ 20 ವರ್ಷಗಳ ಅವಧಿಯಲ್ಲಿ, ದೇವರಾಜ ಒಡೆಯರು ಮತ್ತು ಚಿಕ್ಕದೇವರಾಜ ಒಡೆಯರು(1673–1704) ಇವರಿಬ್ಬರ ಆಳ್ವಿಕೆಯ ಅವಧಿಯಲ್ಲಿ ಧರ್ಮಕಾರ್ಯದ, ಸಾಹಸ ಘಟನಾವಳಿಗಳನ್ನು ಕುರಿತ ಕೆಲವಾರು ಶಾಸನಗಳು ಹಾಕಲ್ಪಟ್ಟಿವೆ ಮುದವಾಡಿ ಪಕ್ಕದ ಚಿಕ್ಕಮುದವಾಡಿಯಲ್ಲಿ. ದೊರೆತ ಶಾಸನ(ನಂ:114/1662ಇರಬಹುದು) ಮುದುವಾಡಿಯ ಗೌಡನೊಬ್ಬನಿಗೆ ಬಂಡಿಗನಹಳ್ಳಿಯ ಗ್ರಾಮವನ್ನು ಉಂಬಳಿಯಾಗಿ ಬಿಟ್ಟ ವಿಷಯ ಹೇಳುತ್ತದೆ. ಹಾಗೆಯೇ ಈ ದತ್ತಿ ಗ್ರಾಮದ ಆಂಜನೇಯ ಗುಡಿಯ ಹಿಂದೆ ಇರುವ ಹುಟ್ಟು ಬಂಡೆಯ ಮೇಲೆ ಇರುವ ಶಾಸನ(ನಂ:118/1662) ಇದೇ ಒಕ್ಕಣೆ ಇದ್ದು ಸ್ಪಷ್ಟವಾಗಿದೆ. ಪ್ರಭು ಒಡೆಯರಯ್ಯನವರು ಮುದುವಾಡಿಯ ತಿಮ್ಮೇಗೌಡರಿಗೂ ಬಂಡಿಗಾನಹಳ್ಳಿಯನ್ನು ಕೊಡುಗೆ ನೀಡಿ ಉಂಬಳಿಯಾಗಿ ಎಲ್ಲ ಕಾಲಕ್ಕು ಅದನ್ನು ಅನುಭವಿಸಿಕೊಂಡು ಬರುವುದು ಎಂದು ವ್ಯವಸ್ಥೆ ಮಾಡಲಾಗಿದೆ.

ಮುದುವಾಡಿ ಹೋಬಳಿಯ ಉದಾರಹಳ್ಳಿಯ ಶಾಸನ(ನಂ:117/1673) ಅದೇ ಊರಿನ ಸಿದ್ದೇಶ್ವರ ಬೆಟ್ಟದಲ್ಲಿ ಆ ದೇವಾಲಯದ ಮುಂಭಾಗದ ಹುಟ್ಟು ಬಂಡೆಯ ಮೇಲೆ ಇದೆ. ಇದು ಈ ದೇವಾಲಯದ ಬಾಗಿಲು ಮಾಡಿಸಿದ ಧರ್ಮಕಾರ್ಯವನ್ನು ತಿಳಿಸುತ್ತದೆ. ಇದೇ ಹೋಬಳಿಯ ಮರಕಣಿ ಎರಡು ಶಾಸನಗಳ ಒಂದರಲ್ಲಿ(ನಂ:115/1682)ದಲ್ಲಿ, ಈ ಗದ್ದೆಯ ಸಿದ್ದಾಯ ಗದ್ಯಾಣ5 ಎಂದು ಈ 5ನ್ನು ಅಕ್ಷರದಲ್ಲಿ 'ಅಯಿದು' ಎಂದಿರುವುದು ಹಣದ ಲೆಕ್ಕ, ದಾಖಲೆ ಪತ್ರಗಳ ರಚನಾ ಪದ್ಧತಿ ಅಷ್ಟೊತ್ತಿಗೆ ಸ್ಪಷ್ಟ ರೂಪ ಪಡೆದಿತ್ತು ಎಂದು ಊಹಿಸಬಹುದಾಗಿದೆ. ಹಾಗೆಯೇ ಇನ್ನೊಂದರಲ್ಲಿ (ನಂ:116/1682) ಚನ್ನಪಟ್ಟಣದ ಮಾರದೇವ ಒಡೆಯರು, ಕಗ್ಗಲ್ಲಿ ಬೈರಯ್ಯ ನಾಯಕನ ಮಗ ತಿಪ್ಪಣ್ಣ ನಾಯಕತ್ವಕ್ಕೆ ಮುರುಕಣಿ ಗ್ರಾಮವನ್ನು ಬಿಡಲಾಯಿತೆಂದು ಹೇಳಿದೆ. ಇಲ್ಲಿ ಆಗಿನ ಮುರಿಕಣಿ ಈಗಿನ ಮರಕಣಿ ಆಗಿರುವುದು ಗಮನಾರ್ಹ. ಇಲ್ಲಿಂದ, ಮೈಸೂರಿನ ಒಂದನೇ ಕೃಷ್ಣ ಒಡೆಯನ ಆಳ್ವಕೆಯ ಕಾಲ(1714–32)ದವರೆಗೆ, ಯಾವುದೇ ರಾಸನುಗಳು ಕಾನಕಾನಹಳ್ಳಿ ಪ್ರದೇಶದಲ್ಲಿ ದೊರೆತಿಲ್ಲ. ಇದಕ್ಕೆ ರಾಜ್ಯದ ಕ್ಷೋಭೆ ಕಾರಣವಿರಬಹುದು.

ಇದೇ ಕಾಲಕ್ಕೆ ಹೊಂದುವಂತೆ ಒಂದು ಶಾಸನ(ಸಂ:19/1726) ಸಿಕ್ಕಿದೆ. ಅದು ಕೋಡಿಹಳ್ಳಿ ಹೋಬಳಿಗೆ ಸೇರಿದ ದೊಡ್ಡಕಬ್ಬಳ್ಳಿ ಪಕ್ಕದ ಕೋಟೆಕಬ್ಬಳ್ಳಿ ಗ್ರಾಮವಾಗಿದೆ. ಈ ಶಾಸನ ಅನೇಕ ದೃಷ್ಟಿಯಿಂದ ಗಮನಾರ್ಹವಾಗಿದೆ. ಒಂದನೇ ಕೃಷ್ಣರಾಜನ ದತ್ತು ಪುತ್ರ ಚಾಮರಾಜ ಒಡೆಯನು (1732–34) ಗುಮ್ಮಳಾಪುರದ ಸಿಂಹಾಸನಕ್ಕೆ ಕರ್ತರಾದ ಚರಂತಿ ಗಂಗಾಧರಸ್ವಾಮಿ ಅವರಿಗೆ ಕೆಬ್ಬಳ್ಳಿ ಗ್ರಾಮದ ಪಶ್ಚಿಮಕ್ಕಿರುವ ಬಸಹಳ್ಳಿ ಗ್ರಾಮ ಒಂದಕ್ಕೆ ಸಲ್ಲುವ ಧರ್ಮಭೂಮಿಯನ್ನು ಬಿಡಿಸಿಕೊಟ್ಟು ಆ ಚಂದ್ರಾರ್ಕ ಸ್ಥಾಯಿಯಾಗಿ ಕೊಟ್ಟು ಮಠಮಾನ್ಯವನ್ನಾಗಿ ಮಾಡಿದನು ಎಂದು ಹೇಳಿದೆ. ಅಲ್ಲದೆ ಆ ಗ್ರಾಮಕ್ಕೆ ಗಂಗಾಧರ ಪುರವೆಂಬು ಪ್ರತಿನಾಮಧೇಯವನ್ನು ಕೊಡಲು ಸ್ಥಳದ ಪ್ರಭು ಮಲ್ಲಪ್ಪ ಒಡೆಯರ ಒಪ್ಪಿತವನ್ನು ಸಹ ಪಡೆಯಲಾಯಿತು. ಈ ಹಳ್ಳಿಯ ಚರಿತ್ರೆಗೆ ಈ ದಾಖಲೆ ಅಮೂಲ್ಯವಾದುದು. ಮೈಸೂರು ಒಡೆಯರ ಮನೆತನ ಮುಂದುವರಿದಿದೆ. ಮುಂದಿನ ಕಾಲಮಾನದಲ್ಲಿ ಯಾವುದೇ ಶಿಲ್ಪ, ಬಬ್ಬೈರು, ಶಾಸನ ಕಾನಕಾನಹಳ್ಳಿ ಪ್ರದೇಶದಲ್ಲಿ ದೊರೆಯುವುದಿಲ್ಲ ಆದರೆ ಇಂಗ್ಲೀಷರು ಮತ್ತು ಟೀಪುವಿನ ಮೈಸೂರು ಯುದ್ಧದ ಸಮಯದಲ್ಲಿ ಇಂಗ್ಲೀಷ್ ಸೈನ್ಯ ಕಾನಕಾನಹಳ್ಳಿ ಮಾರ್ಗ ಹೋಗಿದ್ದ ಕಾರಣ ಪ್ರಮುಖ ಚರಿತಾರ್ಹ ಘಟನೆಗೆ ಸಾಕ್ಷಿಯಾಗಿದೆ. ನಂತರ ಕ್ರಿ.ಶ.1800ರ ಆಜುಬಾಜಿನ ದಿನಗಳಲ್ಲಿ ಪ್ರವಾಸಿಯಾಗಿ ಬಂದಿದ್ದ ಫ್ರಾನ್ಸಿಸ್ ಬುಕ್ಕನನ್ನನ ಪ್ರವಾಸಿ ದಿನಚರಿಯಲ್ಲಿ ಕಾನಕಾನಹಳ್ಳಿ, ಸಾಮಾಜಿಕ, ಧಾರ್ಮಿಕ, ಬದುಕಿನ ಚಿತ್ರಣ ಖಚಿತವಾಗಿ ನಿರೂಪಿಸಲ್ಪಟ್ಟಿದೆ.[20]

ಟಿಪ್ಪಣಿಗಳು

1 ಕಾನಕಾನಹಳ್ಳಿ ಚರಿತ್ರೆ:ಲೇ.ಟಿ.ವಿ.ವಿ ಪು:67

2 ಅದೇ ಪು:68

3 ಕರ್ನಾಟಕ ವಿಷಯ ವಿಶ್ವಕೋಶ, ಮೈಸೂರು ವಿವಿ ಪುಟ – 929 / 1973

4 ಕನಕಪುರ ಎಂಬ ಕಾನಕಾನಹಳ್ಳಿ ಚರಿತ್ರೆ – ಪ್ರೊ॥ ಟಿವಿವಿ ಪುಟ – 23 / 2007

5 ಅದೇ ಪುಟ : 24

6 ಅದೇ ಪುಟ : 25

7 ಮಾಗಡಿ ಸೀಮೆ ಇತಿಹಾಸ, ಸಂಸ್ಕೃತಿ – ಲೇ ಡಾ. ಮುನಿರಾಜಪ್ಪ

8 ಅದೇ, ಪುಟ : 75

9 ಕರ್ನಾಟಕ ವಿಷಯ ವಿಶ್ವಕೋಶ – ಮೈಸೂರು ವಿವಿ ಪುಟ – 624 / 1973

10 ಕಾನಕಾನಹಳ್ಳಿಯ ಚರಿತ್ರೆ – ಡಾ. ಟಿ.ವಿ.ವಿ ಪು : 26/2007

11 ಗೆಜಿಟಿಯರ್, ಶಾಸನ ಸಂಖ್ಯೆ 76/1299

12 ಕಾನಕಾನಹಳ್ಳಿ ಚರಿತ್ರೆ ಲೇ: ಡಾ. ಟಿವಿವಿ ಪು : 31/2007

13 ಕಾನಕಾನಹಳ್ಳಿ ಚರಿತ್ರೆ, ಡಾ.ಟಿ.ವಿವಿ ಪುಟ :38/2007

14 ಕಾನಕಾನಹಳ್ಳಿ ಚರಿತ್ರೆ ಡಾ.ಟಿ.ವಿ.ವಿ.ಪುಟ : 39/2007

15 ಕಾನಕಾನಳ್ಳಿ ಚರಿತ್ರೆ ಲೆ:ಡಾ.ಟಿ.ವಿ.ವಿ.ಪು:43

16 ಕಾನಕಾನಳ್ಳಿ ಚರಿತ್ರೆ ಲೆ:ಡಾ.ಟಿ.ವಿ.ವಿ.ಪು:43

17 ಅದೇ ಪುಟ:44

18 ಅದೇ, ಪುಟ:48

19 ಅದೇ ಪುಟ:47

20 MAR 1908, Note : 57/1873 ed page : 53 R. Narashimhachar.

ಅಧ್ಯಾಯ – 4

ಪಾಳೆಯಗಾರರು

ಕರ್ನಾಟಕದಲ್ಲಿ ಆಡಳಿತ ನಡೆಸಿದ ಸಣ್ಣಪುಟ್ಟ ರಾಜಮನೆತನಗಳು ನಾಡಿನ ಇತಿಹಾಸ, ಸಂಸ್ಕೃತಿಗಳನ್ನು ಸಂಪನ್ನಗೊಳಿಸುವಲ್ಲಿ ಪ್ರಮುಖ ಪಾತ್ರ ವಹಿಸಿವೆ. ದೊಡ್ಡ ರಾಜರುಗಳ ಅಸ್ತಿತ್ವ ಇಂಥ ಪುಟ್ಟ ರಾಜವಂಶಗಳ ತಳಹದಿಯ ಮೇಲೆ ಭದ್ರವಾಗಿತ್ತು. ಆಗಾಗ್ಗೆ ಸಂಭವಿಸಿದ ಕೆಲವು ಚಾರಿತ್ರಿಕ ಘಟನೆಗಳಿಂದ ಚಿಕ್ಕ ಪ್ರದೇಶಗಳಲ್ಲಿ ಒಡೆತನವನ್ನು ನಡೆಸುತ್ತಿದ್ದ ನಾಯಕರಿಗೆ ಸಾಮಂತರು, ದೇಸಾಯರು ಪಾಳೆಯಗಾರರು ಎಂದು ಕರೆಯುವುದು ಅವರು ಆಳುತ್ತಿದ್ದ ಭೂ ವಿಸ್ತಾರ, ಸಂಪತ್ತು, ಸೈನ್ಯ, ಶಕ್ತಿಯಾಧಾರಿತವಾಗಿತ್ತು. ಪಾಳೆಯ ಎಂಬ ಪದ ದಂಡು, ಸೈನ್ಯ, ಸೇನಾವಿಭಾಗ, ಶಿಬಿರ, ಠಾಣ್ಯ ಎಂಬ ಅರ್ಥವನ್ನು ಸೂಚಿಸುತ್ತದೆ. ಅದರ ಆಡಳಿತದ ಮುಖ್ಯಸ್ಥರೇ ಪಾಳೆಯಗಾರರು. ತ್ಯಾಗಜೀವನ, ಸಾಹಸ ಕಾರ್ಯಗಳು, ದಾನ ಔದಾರ್ಯಗಳು, ಧರ್ಮಪ್ರಸಾರ, ಸಾಹಿತ್ಯ ಪೋಷಣೆ ಪ್ರಚಾರ, ಸಂಗೀತ, ನಾಟ್ಯ, ಶಿಲ್ಪ, ಚಿತ್ರಕಲೆಗಳಿಗೆ ಇವರು ಕೊಟ್ಟ ಉತ್ತೇಜನ, ಜೀವರಕ್ಷಕ ವೈದ್ಯಶಾಲೆ, ಕೆರೆಕಟ್ಟೆ ಬಾವಿಗಳನ್ನು ಕಟ್ಟಿಸಿಕೊಟ್ಟ ಸಾಮಾಜಿಕ ಸೇವಾ ಕಾರ್ಯಗಳಿಂದಾಗಿ ಇವರು ಹೆಸರಾಗಿದ್ದಾರೆ. ಇವರು ಮಹಾರಾಜರುಗಳಿಗೆ ಕಪ್ಪ ಕಾಣಿಕೆಗಳನ್ನು ಕೊಟ್ಟು ಅವರನ್ನು ಸಂತೃಪ್ತರಾಗಿರುವಂತೆ ಮಾಡುತ್ತಿದ್ದರಲ್ಲದೆ ಅವರ ಪರವಾಗಿ ಯುದ್ಧಗಳಲ್ಲಿ ಹೋರಾಡಿ ಜಯಗಳಿಸಿಕೊಡುತ್ತಿದ್ದರು. ಪ್ರಭುಭಕ್ತಿಯ ಪರಾಕಾಷ್ಠೆಗೆ ಇವರು ಮಾದರಿಯಾಗಿದ್ದರು.

ಕರ್ನಾಟಕದಲ್ಲಿ ಸು. 13ನೆಯ ಶತಮಾನದ ಅಂತ್ಯದವರೆಗೂ ಕೆಲವು ಮನೆತನದವರು ಕೆಲವು ಪ್ರದೇಶಗಳ ಮೇಲೆ ಆಂತರಿಕ ಆಡಳಿತಕ್ಕೆ ಸಂಬಂಧಿಸಿದಂತೆ ಬಹುತೇಕ ಸ್ವತಂತ್ರರಾಗಿ ಆಡಳಿತ ನಡೆಸುತ್ತಿದ್ದರು. ಆದರೆ 14ನೆಯ ಶತಮನಾನದ ಆದಿ ಭಾಗದಲ್ಲಿ ನಡೆದ ಮುಸಲ್ಮಾನ ಅರಸರ

ಧಾಳಿಗಳಿಂದ ಇಲ್ಲಿನ ರಾಜಕೀಯ ವ್ಯವಸ್ಥೆಯಲ್ಲಿ ಬದಲಾವಣೆ ಆರಂಭವಾಯಿತು. ಹೊಯ್ಸಳ 3ನೆಯ ಬಲ್ಲಾಳನ ಕಾಲದ ಹೊತ್ತಿಗೆ ಸ್ಥಳೀಯ ಸಾಮಂತ ಮನೆತನಗಳ ಪಾರಂಪರ್ಯ ಸಂಸ್ಥಾನಗಳು ಮರೆಯಾಗುತ್ತ ಬಂದವು. ರಾಜನೇ ನೇರವಾಗಿ ಕೆಲವು ದಂಡನಾಯಕರಿಗೆ ಕೆಲವು ಪ್ರದೇಶಗಳನ್ನು ಆಳುವ ಅಧಿಕಾರ ವಹಿಸಿಕೊಡುವ ರೂಢಿ ಬೆಳೆಯಿತು. ಈ ಅಧಿಕಾರಿಗಳು ರಾಜನಿಂದ ದೊರಕಿದ ಪ್ರದೇಶಗಳ ಆದಾಯಗಳನ್ನು ಅನುಭವಿಸಿಕೊಂಡು ಉತ್ತಮವಾದ ಸೈನ್ಯವನ್ನು ಸಜ್ಜಾಗಿರಿಸಿಕೊಂಡು ರಾಜನಿಗೆ ಅವಶ್ಯಕತೆ ಬಂದಾಗ ಸೈನ್ಯಸಹಾಯವನ್ನೂ ಒದಗಿಸಬೇಕಾಗುತ್ತಿತ್ತು. ಈ ವ್ಯವಸ್ಥೆಯೇ ಮುಂದುವರಿದು ಪಾಳೆಯ ಪಟ್ಟುಗಳ ಸ್ಥಾಪನೆಗೆ ನಾಂದಿಯಾಯಿತು.[1]

ಸಿಗಲನಾಡು ಪಾಳೇಗಾರರು

ಕಾನಕಾನಹಳ್ಳಿ ಪ್ರದೇಶವನ್ನು ಸರಿಸುಮಾರು 400 ವರ್ಷಗಳ ಕಾಲ ಹೊಯ್ಸಳರ, ವಿಜಯನಗರದ ಅರಸರ, ಮೈಸೂರು ಒಡೆಯರ ಮೇಲಾಳಿಕೆಯಲ್ಲಿ ತಮ್ಮದೇ ಆದ ಸಾಮಂತ ಅಸ್ಥಿತ್ವ ಪಡೆದವರು ಪಾಳೇಗಾರರು ಸಿಗಲನಾಡ ಪ್ರಭುಗಳು. ಕಾನಕಾನಹಳ್ಳಿಯ ದಕ್ಷಿಣ ಪಶ್ಚಿಮಭಾಗದ ಕೋಡಿಹಳ್ಳಿ, ಉಯ್ಯಂಬಳ್ಳಿ, ಸಾತನೂರು ಮುಳ್ಳಹಳ್ಳಿ, ದೊಡ್ಡಾಕೊಪ್ಪ, ನಾಯಕನ ಹಳ್ಳಿ ವ್ಯಾಪ್ತಿಯ ಪ್ರದೇಶ ಈ ಪಾಳೇಗಾರರ ಸುಪರ್ದಿಗೆ ಸೇರಿರುವಂತೆ ತಿಳಿದು ಬರುತ್ತದೆ. ಇವರ ಕೇಂದ್ರ ಸ್ಥಾನ ಅರುಳಹಳ್ಳಿ ಅದು ಈಗಿನ ಆರ್ಕಾವತಿಯ ಪಶ್ಚಿಮ ದಿಕ್ಕಿಗಿರುವ ಅರಳಾಳು ಗ್ರಾಮದೇ ಆಗಿದೆ. ಇವರು ಈ ಪ್ರದೇಶದ ಜನರ ಸಾಂಸ್ಕೃತಿಕ, ಸಾಮಾಜಿಕ ಜೀವನವನ್ನು ಪೋಷಿಸಿದರೆಂಬುದು ತಿಳಿದು ಬರುತ್ತದೆ.

ಈ ಸಿಗಲನಾಡಿನ ಪಾಳೇಗಾರರು ಆಡಳಿತ ನಡೆಸಿರಬಹುದು. ಹೊಯ್ಸಳರ ಸುಪರ್ದಿಗೆ ಬರುವುದಕ್ಕೆ ಮುಂಚೆ ಚೋಳರ ಅಡಿಯಾಳಾಗಿ ಆಡಳಿತ ನಡೆಸಿರಬಹುದು. ಈ ಪ್ರದೇಶ ಚೋಳರ ವಶದಲ್ಲಿರುವುದು ತಿಳಿಯವುದಕ್ಕೆ ಸಿಕ್ಕಿರುವ ಹಲವು ತಮಿಳು ಶಾಸನಗಳೇ ಸಾಕ್ಷಿ.

ಹೊಯ್ಸಳ ವಂಶದ 1ನೇ ವೀರ ನರಸಿಂಹನ ಕಾಲದ (1142–73) ತಮಿಳು ಶಾಸನದಲ್ಲಿ (ನಂ: 23/1150) ವಿವರಗಳು ಸ್ಪಷ್ಟವಾಗಿಲ್ಲದಿದ್ದರೂ, ಮೊಟ್ಟಮೊದಲಿಗೆ ಸಿಯಲ್/ಸಿಗಲ್‌ನಾಡು ಪ್ರಸ್ತಾಪವಾಗಿರುವಂತೆ ತಿಳಿದು ಬರುತ್ತದೆ. ಜೊತೆಗೆ ಮತ್ತೊಂದು ತಮಿಳು ಶಾಸನ (ನಂ. 44/1171) ರಾಜೇಂದ್ರ ಚೋಳಮಂಡಳಕ್ಕೆ ಸೇರಿದ ಯಾಂಡಿಹಳ್ಳಿಯೂ ಸಿಗಲನಾಡನ್ನು ಆಳುವ ಮಾದೇವರ್ ಎಂಬುವನು ಕಾಣಿಸಿಕೊಂಡಿರುವುದೂ ಕೂಡ ಈ ಸಿಗಲಾನಾಡು ಪ್ರದೇಶ ಅರ್ಥಾತ್ ಕಾನಕಾನಹಳ್ಳಿ ಪ್ರದೇಶವು ಹೊಯ್ಸಳರ ಆಳ್ವಿಕೆಯ ಹಿಡಿತಕ್ಕೆ ಬರುವುದರೊಳಗೆ ಚೋಳರ ಕೈಯಲ್ಲಿತ್ತೇನೋ ಎಂಬುದು ಸ್ಪಷ್ಟವಾಗುತ್ತದೆ.

ಇನ್ನೊಂದು ತಮಿಳು ಶಾಸನ (ನಂ 26/1191)ದಲ್ಲಿ ಸಿಗಲನಾಡ ದೊರೆ ಮತ್ತ ಮುರಸಾದಿರಾಯರೆಂಬುವ ನಡುವಕಾಳಗನಡೆದ ಪ್ರಸಂಗ ವರ್ಣಿತವಾಗಿದೆ. ಸಿಗಲನಾಡರಸು, ಮುರಸಾದಿ ರಾಯನ ಸೇನೆಯನ್ನು ತುಂಬಿನ ಕೆರೆ ಎಂಬಲ್ಲಿ ಎದುರಿಸಿ, ಆತನ 50 ಕುದುರೆಗಳನ್ನು ಹಿಡಿದು, ಅವರನ್ನು ಹಿಮ್ಮೆಟ್ಟಿಸಿದನು. ಅಲ್ಲಿಂದ ಕಾಲ್ತೆಗೆದ ರಾಯ ಕಾವೆಪಾಳೆಯನ್ನು ಹಾಳುಮಾಡಿ ಅಣಿಲೆವಾಡಿಗೆ ತೆರಳಿದನೆಂದು ವಿವರಿಸಿದೆ. ಮುಂದುವರೆದು ಮುಗಿಗೊಂಡು ಚೋಳ ಮಂಡಲದೊಡೆಯ ರಾಜೇಂದ್ರಚೋಳನ ವಳನಾಡಿಗೆ ಸೇರಿದ ಸಿಗಲ ನಾಡಿನಲ್ಲಿ ವೀಸನಾಯಕನ ಮಗ ಚಿಕ್ಕನಾಯಕ ಉತ್ತರ ಭಾಗದ ಅಣಲೆಪಾಡಿಯ ಕೋಟೆಯೊಳಗೆ ಸೇರಿಕೊಂಡನೆಂದು ತಿಳಿಸಿದೆ.

ಉಯ್ಯಂಬಳ್ಳಿ ಹೋಬಳಿ ಆಲನಹಳ್ಳಿ ದೊರೆತಿರುವ ತಮಿಳು ಶಾಸನ (ನಂ : 35/1178)ದಲ್ಲಿ ಸಿಯಲ್ನಾಡು ಆಳುವ ಮಾದೇವನೂ ಕಾಮಂಜ ಗಾಮುಂಡನ ಮಗ ಆಲೆಂಬಳ್ಳಿ ಕುಮಾರಾಂಡಿಯೂ ಪದಿನಾಡಿನ ಇಳಮರಂದೂರಿನಲ್ಲಿ ವಿಂಡೂರು ಕೋಟೆಯ ಕಾಳಗದಲ್ಲಿ ಸ್ವರ್ಗಸ್ಥರಾದರು ಎಂದಿದೆ. ನಂ:23ನೇ ಶಾಸನದಲ್ಲೂ ಮಾದೇವನ ಉಲ್ಲೇಖವಿದೆ.

ಈ ತಮಿಳು ಶಾಸನಗಳೆಲ್ಲಾ ಕೋಡಿಹಳ್ಳಿ ಹೋಬಳಿಗೆ, ಸೇರಿದ ಬಾಳೇಪುರ ಹುಣಸೇಕೊಪ್ಪ, ಅಳ್ಳಕಡಕಲು ಗ್ರಾಮಗಳಲ್ಲಿ ದೊರಕಿವೆ.

ಹೊಯ್ಸಳ ದೊರೆ ಮುಮ್ಮಡಿ ವೀರಬಲ್ಲಾಳನ ಆಳ್ವಿಕೆಯ ಕಾಲವನ್ನು ಚರಿತ್ರೆಕಾರರು ಕ್ರಿ.ಶ. 1292–1343 ಎಂದು ಗುರುತಿಸಿರುವುದು. ಈ ಕಾಲದಲ್ಲಿಯೇ ಸಿಗಲನಾಡು ಪ್ರಭುಗಳ ವಿಚಾರ ಹೆಚ್ಚು ಹೆಚ್ಚಾಗಿ ಕಾಣಿಸಿಕೊಳ್ಳುತ್ತದೆ. ಈ ಶಾಸನಗಳು ಕಾನಕಾನಹಳ್ಳಿ ಪ್ರದೇಶಗಳಲ್ಲಿಯೇ ಹೆಚ್ಚಾಗಿ ಸಿಕ್ಕುತ್ತವೆ. ಆದ್ದರಿಂದ ಸಿಗಲನಾಡ ಪ್ರಭುಗಳನ್ನು ಕಾನಕಾನಹಳ್ಳಿಯ ಪಾಳೇಗಾರರೆಂದು ಕರೆಯುವುದರಲ್ಲಿ ಯಾವುದೇ ತಪ್ಪಿಲ್ಲ ಎಂದು ಊಹಿಸಬಹುದಾಗಿದೆ.

ಕ್ರಿ.ಶ. 1295ರಲ್ಲಿ ಉಯ್ಯಂಬಳ್ಳಿ ಹೋಬಳಿಯ ನಾಯಕನ ಹಳ್ಳಿ ಗ್ರಾಮದಲ್ಲಿ ದೊರೆತ 47ನೇ ನಂಬರಿನ ಶಾಸನವು ಸಿಗಲನಾಡಿನ ಮಹಾಪ್ರಭುಗಳ ದಾನ ಗುಣವನ್ನು ವಿವರಿಸುತ್ತದೆ. ಅದು ಹೀಗಿದೆ. ಸಿಗಲನಾಡಿನಾಳ್ವ ಮಾರದೇವರು ಆದ ಸಿಗಲನಾಡ ಮಹಾಪ್ರಭು ಅರಳಹಳ್ಳಿ ಮಾರಪ್ಪ (ಈಗಿನ ಅರಳಾಳು).

ನಾನಾ ದೇಶಿಮುಖ್ಯರಾದ ವೀರಪ್ಪಗೌಡ, ಮಾಳಗೌಡ, ಸಿಂಗನಾಯಕ ಅಚ್ಚಪ್ಪರಾಯ, ಕೆಂಪೇಗೌಡ, ಮಾದಗೌಡ, ಚಿಕ್ಕಗೌಡ, ಮುರಗೆಯ ಚುಂಚಗೌಡ, ಸಿಂಹಗೌಡ, ಹೊನಮ್ಮಜೀಯ ಇವರೆಲ್ಲರ

ಸಮಕ್ಷವು ಮೊದಲಿ ಸೆಟ್ಟಿಯರ ಮಕ್ಕಳ ಕಾರ್ಯಕ್ಕೆ ಅವರು ಬದುಕಿರುವವರೆಗೆ ಸಲ್ಲುವಂತೆ ಕಟ್ಟಾಜ್ಞೆ ವಿಧಿಸಿ, ಅರಳುವಳ್ಳಿ ಚತುಃಸೀಮೆಯ್ಯೊಗಿರುವ ಗದ್ದೆ ಬೆದ್ದಲುಗಳನ್ನು ಸರ್ವಮಾನ್ಯ ಮಾಡಿ ಕೊಟ್ಟರು ಎಂದು ಉಲ್ಲೇಖಿಸಿದೆ.

ಉಯ್ಯಾಂಬಳ್ಳಿ ಹೋಬಳಿ ಮರಳೇ ಬೇಕುಪ್ಪೆಯ ಶಾಸನ ಸಂಖ್ಯೆ (37/1314)ರಲ್ಲೂ ಸಿಗಲನಾಡ ಪ್ರಭು ಮಾರದೇವರಾದ ಅರಳಹಳ್ಳಿ ಮಾರಪ್ಪ ಚುಂಚಗೌಡ ಎಂಬುದು ಕಾಣಿಸಿಕೊಳ್ಳುತ್ತದೆ. ಉಳಿದ ಭಾಗ ಹಾಳಾಗಿದೆ. ಸಾತನೂರು ಶಾಸನ (ಸಂ. 68/1319)ದಲ್ಲಿ ಸಿಗಲನಾಡಾಳುವ ಮಾರದೇವರು ಎಂದಿದೆ ಶಾಸನ ಸಂ: 37ರ ಅರಳಾಹಾಳು ಮಾರಪ್ಪನೊಂದಿಗೆ ಕಾಣಿಕಾರನಹಳ್ಳಿ ಚಂಚೇಗೌಡ, ತುಂಗಣಿ ಆಲಪ್ಪ ಜೊಜೆಗೆ ಅಚ್ಚಲಣಾಡು, ಉಪ್ಪನಕೆರೆ ಸ್ಥಳನಾಮಗಳೂ ಸೇರ್ಪಡೆಗೊಂಡಿವೆ. ಇಲ್ಲಿ ಸಿಗಲನಾಡಿನೊಂದಿಗೆ ಕಾನಕಾನಹಳ್ಳಿ ತಳುಕಿಹಾಕಿಕೊಂಡಿರುವುದು ಅರಳಹಾಳು (ಈಗಿನ ಅರಳಾಳು) ಕಾನಕಾನಹಳ್ಳಿಗಿಂತ ದೊಡ್ಡದಾಗಿತ್ತು. ಸಿಗಲನಾಡು ಪ್ರಭುಗಳ ಆಡಳಿತದ ಕೇಂದ್ರವಾಗಿತ್ತು ಎಂದು ಅರಿಯಬಹುದಾಗಿದೆ. ತುಂಗಣಿ ಗ್ರಾಮದಲ್ಲಿ ಸಿಕ್ಕ ನಂ: 104ನೇ ಶಾಸನದಲ್ಲಿಯೂ (1316) ಸಿಗಲನಾಡಪ್ರಭು ಮಾರದೇವ ಎಂದು ಉಲ್ಲೇಖಗೊಂಡಿದೆ.

ಕ್ರಿ.ಶ. 1320ರಲ್ಲಿ ಕೋಡಿಹಳ್ಳಿ ಹೋಬಳಿ ಹೊಸದುರ್ಗದಲ್ಲಿ ದೊರೆತ ತಮಿಳು ಶಾಸನ (ಸಂ:24)ದಲ್ಲಿ "ಹೊಯ್ಸಳ ಅಧಿರಾಜತ್ವದ ಸಿಗಲನಾಡು ಆಳುವ ಮಾರದೇವನು ಕೆಲವು ಗ್ರಾಮಗಳನ್ನು ಚತುರ್ವೇದಿ ಮಂಗಲವೆಂಬ ಅಗ್ರಹಾರಕ್ಕಾಗಿ ದತ್ತಿ ಬಿಟ್ಟ ವಿಷಯ ಪ್ರಸ್ತಾಪಿಸಿದೆ. 31 ಗ್ರಾಮಗಳನ್ನು ತೆರಿಗೆ ವಿನಾಯಿತಿಗೊಳಿಸಿ ಬ್ರಾಹ್ಮಣರಿಗೆ ಅನುಭೋಗಿಸಲು ಕೊಟ್ಟಿರುವಂತೆ ಕಾಣುತ್ತದೆ. ಆ ಬ್ರಾಹ್ಮಣರು ಪ್ರಾಯಾಗ್ಯೆ ಶ್ರೀರಂಗನಾಥ ಭಟ್ಟ ಮಂಡಲ ಪೊಡೈತನ್ ವೆಂಕಟಭಟ್ಟ ಮತ್ತು ಇತರರು ಎಂದು ಹೆಸರಿಸಲಾಗಿದೆ.

ಹಾಗೆಯೇ 'ಅಂದಿಗನ ವೋಲು' ಎಂಬ ಗ್ರಾಮವನ್ನು 12 ಮಂದಿ ಊರ ಗೌಡರ ಉಸ್ತುವಾರಿಗೆ ದತ್ತಿ ನೀಡಿದ ವಿಷಯವನ್ನು ಉಯ್ಯಾಂಬಳ್ಳಿ ಹೋಬಳಿಯ ಮುಳ್ಳಹಳ್ಳಿಗ್ರಾಮ ಬಸವನಗುಡಿಯಲ್ಲಿ ದೊರೆತ ಶಾಸನ ಹೇಳುತ್ತದೆ.

ಈ ಸಿಗಲನಾಡು ಮಾರದೇವನು ಹೊಯ್ಸಳ ಮುಮ್ಮಡಿ ವೀರಬಲ್ಲಾಳನ ಕಾಲದಲ್ಲಿ ಪ್ರಸಿದ್ಧನಾದ ಪಾಳೆಯಗಾರನಾಗಿದ್ದು, ಅಗ್ರಹಾರ ದೇವಾಲಯಗಳ ಸುಸ್ಥಿತಿಗಾಗಿ ಶ್ರಮಿಸಿ ಒಳ್ಳೆಯ ಧರ್ಮಕರ್ತನೂ ಆಗಿದ್ದನೆಂಬುದನ್ನು ಮೇಲಿನ ನಿದರ್ಶನಗಳಿಂದ ತಿಳಿಯಬಹುದಾಗಿದೆ. ಅಲ್ಲದೆ ಅವನಿಗೆ ವಿಶ್ವಸಿಗಳಾದ ಗಣ್ಯರ ಒಡನಾಟವೂ ಇತ್ತೆಂದು ತಿಳಿಯುತ್ತದೆ. ಇವನ ಕಾಲದಿಂದ ಮುಂದೆ ಕೇಂದ್ರದಲ್ಲಿ ಹೊಯ್ಸಳ ಮೇಲಾಳಿಕೆ ಕೊನೆಗೊಂಡು ವಿಜಯನಗರದ ಅರಸರ ಮೇಲಾಳಿಕೆ ಮಾಡಲಾಯಿತು. ವಿಜಯನಗರದ

ಇಮ್ಮಡಿ ಹರಿಹರ ಮಹಾರಾಜನ ಆಳಿಕೆಯ ಅವಧಿಗೆ ಸೇರಿದ (1377–1404) ಕಾನಕಾನಹಳ್ಳಿ ತಾಲ್ಲೂಕಿನ ಕೆಲವು ಶಾಸನಗಳು ಅಲ್ಲಲ್ಲಿ ಕಂಡುಬಂದಿವೆ.[2]

ಕಾನಕಾನಹಳ್ಳಿ ಹೋಬಳಿಗೆ ಸೇರಿದ ಅರಳಾಳು ಗ್ರಾಮದಲ್ಲಿ ದೊರೆತ ಎರಡು ಶಾಸನಗಳನ್ನು ನೋಡಿದರೆ, ಸಿಗಲನಾಡಿನ ಮಹಾಪ್ರಭು ಅರಳಹಾಳು (ಅರಳಾಳು) ಮಾರೇಗೌಡ (ಮಾರಪ್ಪ) ಅವನ ಮಕ್ಕಳಾದ ಸಿದ್ದಯ್ಯ ಮತ್ತು ಚಿಕ್ಕ ಐಯ್ಯಣ. ವಿಚಾರ ತಿಳಿದು ಬರುತ್ತದೆ. ಒಂದರಲ್ಲಿ ವಿಜಯನಗರದ ಒಂದನೆಯ ಬುಕ್ಕರಾಯ (1356–76)ನ ನಾರಸಿ ಒಡೆಯರ ಪ್ರಧಾನವಾದ ಸಿದ್ಧಯ್ಯನನ್ನು ತಿಳಿಸುತ್ತದೆ. ಈ ಸಿದ್ಧಯ್ಯನೇ ಮಾರಪ್ಪನ ಮಗ ಸಿದ್ದಯ್ಯ ಇರಬಹುದು.

ಈ ಶಾಸನ (ನಂ 98/1391)ದಲ್ಲಿ ಇವನು ಹಾಗಬೆ ಗುಡ್ಡದಲ್ಲಿ ಹೊಯಿಲು ತಾಗಿಸತ್ತನೆಂದು ತೋರುವುದು. ಎರಡನೇ ಶಾಸನ (ನಂ 100/1393)ದಲ್ಲಿ ಮಾರಪ್ಪನ ಇನ್ನೊಬ್ಬ ಮಗ ಚಿಕ್ಕ ಐಯ್ಯಣನ ವಿಚಾರ ತಿಳಿಯುತ್ತದೆ. ಇವನು ಶ್ರೀ ನಾರಾಯಣ ದೇವರ ಅಮೃತ ಪಡಿಗೆ ದೊಡ್ಡಕೆರೆಯ ಕೆಳಗೆ ಖಂಡುಗ ಬೆಳೆಯ ಗದ್ದೆಯನ್ನು ದತ್ತಿ ನೀಡಿದಂತೆ ಹೇಳಿದೆ. ಇದು ವೀರ ಮಲ್ಲಿರಾಯನ ಮಗ ನಾರಣದೇವ ಒಡೆಯನ ಕಾಲಕ್ಕೆ ಸರಿ ಹೊಂದುತ್ತದೆ. ಈ ನಾರಣದೇವ ವಿಜಯನಗರದ ಅರಸು ಇಮ್ಮಡಿ ಹರಿಹರನ ಚಿಕ್ಕಪ್ಪ ಎಂದು, ಇವನ ಶ್ರೇಯಸ್ಸಿಗಾಗಿ ಉಮ್ಮತ್ತೂರಿಗೆ ಸೇರಿದ ಕೊಣಗಲಾಪುರವನ್ನು ಒಂದು ಅಗ್ರಹಾರವಾಗಿ ಮಾಡಿ, ಅದಕ್ಕೆ 'ನಾರಾಯಣ ಪುರ' ಎಂದು ಹೆಸರಿಟ್ಟಿದ್ದಾರೆಂದು, ಇದನ್ನು ಬ್ರಾಹ್ಮಣರಿಗೆ ದತ್ತಿ ನೀಡಿದರೆಂದು ಆರ್. ನರಸಿಂಹ ಚಾರ್ಯರು ಹೇಳುತ್ತಾರೆ.[3]

'ಅರಳಾಹಾಳು' ಗ್ರಾಮ ರಾಜ್ಯವೆಂದು ಒಂದು ಶಾಸನ (ನಂ: 97/1400) ತಿಳಿಸುತ್ತದೆ. ಇದು, ವಿ.ನ. ಕಾಲದ ಎರಡನೇ ಹರಿಹರನ ಆಳ್ವಿಕೆಯ ಕಾಲದ್ದಾಗಿದ್ದು ಅರಳಾಳು ಗ್ರಾಮದ ಅಗ್ರಹಾರ ಬೀದಿಯಲ್ಲಿ ದೊರಕಿದೆ. ಈ ರಾಜ್ಯವನ್ನು ಅಧಿರಾಜನಾಗಿ ವೀರ ಮಲ್ಲಿರಾಯನ ಕುಮಾರ, ವೀರನಾರಾಯಣದೇವ ಒಡೆಯ ಇರುತ್ತಿರುವಾಗ ಅವನ ಪ್ರಧಾನನಾದ ಕಾಚಣ್ಣ ಒಡೆಯನು ಆಳುತ್ತಿದ್ದನೆಂದು ಹೇಳಿದೆ. ಇಲ್ಲಿ ಗೊಳಿಯೋಜನೆಂಬ ಕಲ್ಲು ಕುಟಿಗನಿಗೆ ಗದ್ದೆ ಬೆದ್ದಲು, ಮೂರಂಕಣದ ಮನೆ ಕೊಟ್ಟು, ತೂಬುಹಾಕಿಸಿದ ವಿವರವಿದೆ. ತೂಬು ಹೊಡೆದು ಹೋದರೆ ಗೂಳಿಯೋಜನೆನ ಉಂಬಳಿ ಕೆಲಸವನ್ನು ಕೊಡುವುದಾಗಿ ಉಲ್ಲೇಖಗೊಂಡಿರುತ್ತದೆ.

ಕೋಡಿಹಳ್ಳಿ ಹೋಬಳಿ ಎಡಮಾರನಹಳ್ಳಿಯ ಶಾಸನದಲ್ಲಿ (ನಂ 39/1506) ವೀರ ಚಿಕ್ಕಾರಾಯನ ಭಂಡಾರಕ್ಕೆ ಸಲ್ಲುವ ಮಾಗಣಿ ಸೀಮೆಯ (ಈಗಿನ ಮಾಗಡಿ ಇರಬಹುದು) ಸಿಗಲ ನಾಡು ಮಹಾಪ್ರಭು ವಿಘ್ನೇಶ್ವರ ಒಡೆಯನು ಹಲಗೇ ಒಡೆಯರಿಗೆ ಮಾರೇಹಳ್ಳಿ ಗ್ರಾಮವನ್ನು ಸರ್ವಮಾನ್ಯ ಮಠವಾಗಿ ದತ್ತಿ ಕೊಟ್ಟದನ್ನು ಹೇಳಿದೆ. ಈ ಚಿಕ್ಕವೀರ ಯಾರೆಂಬುದು ತಿಳಿಯುತ್ತಿಲ್ಲ.[4]

ಸಿಗಲನಾಡ ಮಹಾಪ್ರಭು ಚನ್ನವೀರಣ್ಣ ಒಡೆಯನ ಕುಮಾರ ವೀರೇಶ್ವರನ ಒಡೆಯರ ಕಾಲದ್ದೆಂದು ಹೇಳುವ ಒಂದು ಶಾಸನ (ನಂ 21/1509)ವು ಕೋಡಿಹಳ್ಳಿ ಹೋಬಳಿ ಬನ್ನಿಮಕೂಡ್ಲು ಗ್ರಾಮದ ರಾಮೇಶ್ವರದೇವರ ದೇವಾಲಯದ ಕಂಬದ ಮೇಲೆ ಇದೆ. ಇದರಲ್ಲಿ ಭೀಕರ ಬರಗಾಲದ ಪ್ರಸ್ತಾಪ ಬಂದು, ರಾಜ 120ಹೊನ್ನು, 120 ಸೊಲಗೆ ಭತ್ತ ಕೊಟ್ಟು ವೀರೇಶ್ವರ ಒಡೆಯನು ರಾಮೇಶ್ವರ ದೇವರ ಪುನರ್ ಪ್ರತಿಷ್ಠೆ ಮಾಡಿಸಿದನಂತೆ ಕಲ್ಲು ಕುಟಿಗ ಪ್ರಬೋಜನು ಹತ್ತು ಮಂದಿಯನ್ನು ಅವರ ತಲೆಬುರುಡೆ ಉರುಳಿಹೋಗುವುದರಿಂದ ತಪ್ಪಿಸಿದನೆಂದು ಹೇಳಿದೆ. ಬರಗಾಲದ ಸ್ಥಿತಿಗೂ ಇಲ್ಲಿ ಘಟಿಸಿದ ಘಟನೆಯ ಸಂದರ್ಭಕ್ಕೂ ಏನು ಸಂಬಂಧ ವಿದೆ ಎಂದು ಸ್ಪಷ್ಟವಾಗುವುದಿಲ್ಲ.[5]

ವಿಜಯನಗರದ ತುಳುವ ವಂಶದ ಅರಸು ಅಚ್ಯುತ ದೇವರಾಯ (1529–43)ನ ಕಾಲದ ಉಯ್ಯಂಬಳ್ಳಿ ಹೋಬಳಿ ನಲ್ಲಹಳ್ಳಿ, ಗ್ರಾಮದಲ್ಲಿ ದೊರೆತ ಶಾಸನ (ನಂ 31/1530) ದಲ್ಲಿ "ಆಗ್ಗೆ ಸಿಗಲನಾಡ ಮಹಾಪ್ರಭು ರಾಯ ಒಡೆಯರ ಚೆನ್ನಪ್ಪನು ತನ್ನ ಗುರುಗಳಾದ ಚೈತನ್ಯದೇವರಿಗೆ, ಅಣ್ಣಿಗನ ಹಳ್ಳಿ ಸ್ಥಳದ ಮುಕ್ಕೂಡಲು ಸೀಮೆಯೊಳಗಿನ ನಾರಾಯಣಪುರ ಮತ್ತು ನಲ್ಲಹಳ್ಳಿ ಎಂಬ ಗ್ರಾಮಗಳನ್ನು ಗುತ್ತಿಗೆ ನೀಡಿದ ವಿಚಾರ ಪ್ರಸ್ತಾಪವಾಗಿದೆ. 'ಚೈತನ್ಯದೇವ' ರಾಜಗುರು ಎಂಬುದು ವಿಶೇಷ.

ಹುಟ್ಟು ಬಂಡೆಯ ಮೇಲೆ ಕೊರೆಸಿರುವ (ಶಾಸನ ನಂ32/1548) ಇದೇ ನಲ್ಲಹಳ್ಳಿ ಗ್ರಾಮಕ್ಕೇ ಸೇರಿದ ಚನ್ನಸಂದ್ರ ದೊಡ್ಡಿಯಲ್ಲಿ ಇದೆ. ಸಾಳುವ ವಂಶದ ವಿಜಯನಗರದ ಅರಸು ಒಂದನೇ ನರಸಿಂಹ (1485–91)ನ ಮಗ ತಿಮ್ಮರಾಯನ ಹೆಸರು ಪ್ರಸ್ತಾಪಗೊಂಡಿದೆ. ತಿಮ್ಮರಾಯನ ಪ್ರಧಾನನಾಗಿದ್ದ ಆಳುವ ನರಸಿಂಹನ ಮಗ ನರಸಣ್ಣ ನಾಯಕ ವಿ.ನದಲ್ಲಿ ಇರುವತನಕ ಸಿಗಲನಾಡ ಪ್ರಭು ಸಣ್ಣನಾಯಕನ ಹಿರಿಯ ಕುಮಾರ ದೇವಪ್ಪನು ಸೀಮೆಯ ಸ್ಥಿರನಾಯಕತ್ವ ಆಡಳಿತ ನಡೆಸುತ್ತಿದ್ದನು. ಕೆಂಚ ವೀರಣ್ಣೊಡೆಯರ ಮಕ್ಕಳು ಚನ್ನಸಮುದ್ರವನ್ನು ಪ್ರದುವಾಗಿ ಕೊಟ್ಟ ಸಂಗತಿ ಇಲ್ಲಿಯ ವಿಷಯ.

ಈ ನಾಡಿಗೆ 'ಸಿಗಲನಾಡು' ಎಂದು ಹೆಸರು ಬರಲು ಕಾರಣವೇನು? ಎಂಬ ಪ್ರಶ್ನೆಗೆ, ಈ ಸೀಮೆಯಲ್ಲಿ ಸೀಗೆ ಮೆಳೆಗಳು ಯಥೇಚ್ಚವಾಗಿ ಇದ್ದವು. ಅದಕ್ಕೆ ಈ ನಾಡಿಗೆ ಸಿಗಲನಾಡು ಎಂದು ಕರೆಯುತ್ತಾರೆ.[6]

ಇನ್ನೊಂದು ಜಿಜ್ಞಾಸೆಯಲ್ಲಿ ಎ.ಎಚ್.ಕೃಷ್ಣ ರವರು ಚಿಕ್ಕಮಗಳೂರು ಜಿಲ್ಲೆ ಅಲ್ದೂರು ಹೋಬಳಿ ಕೆಳಗೂರಿನ ವೀರಗಲ್ಲು MAR 1932, PB 1935, P 189. ಶ್ರೀಕಲನಾಡ ಸೋಮಯ ತಳಿಗೆನಾಡಿಗೆ ಬರಲೊಡೆ ವಂದ ಎಂಬ ಶಾಸನ ಪಾಠದಲ್ಲಿ ಬರುವ ಸೋಮಯನಿಗೂ ತುಂಗಣಿ ಗ್ರಾಮದಶಾಸನ

(ನಂ: 104/ 1316)ದಲ್ಲಿ ಬರುವ ಸಿಗಲನಾಡನಾಳ ಸೋಮಪದದನಾಯಕನೊಂದಿಗೆ ಹೋಲಿಸಿ, ಚರ್ಚೆಗೆ ಒಳಪಡಿಸುತ್ತಾರೆ, ಇಲ್ಲಿ ಶ್ರೀಕಲ ತತ್ಸಮದ ತತ್ಭವ ರೂಪವೇ ಸಿಗಲ ಎಂಬುದಾಗಿರಬಹುದು ಶ್ರೀಕಲ ಎಂದರೆ ಒಂದು ಜಾತಿಯ ಔಷಧಿ ಸಸ್ಯ.[7]

ಚನ್ನಪಟ್ಟಣದ ಪಾಳೇಯಗಾರರು

ವಿಜಯನಗರ ಅರಸರ ಸಾಮಂತರಾಗಿ ಕ್ರಿ.ಶ. 1570–1630ರ ನಡುವೆ ಸರಿಸುಮಾರು ಆರು ದಶಕಗಳವರೆಗೆ ಮೈಸೂರು ಸಂಸ್ಥಾನದ ಕೆಲವು ಭಾಗಗಳನ್ನು ಚನ್ನಪಟ್ಟಣವನ್ನು ಕೇಂದ್ರವಾಗಿಟ್ಟುಕೊಂಡು ಪಾಳೆಯಗಾರರು ಆಳ್ವಿಕೆ ಮಾಡುತ್ತಿದ್ದರು. ಮಂಡ್ಯ ಜಿಲ್ಲೆಯ ನಾಗಮಂಗಲ, ಮದ್ದೂರು ಪ್ರದೇಶಗಳ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಚೆನ್ನಪಟ್ಟಣ ಮತ್ತು ಕಾನಕಾನಹಳ್ಳಿ ಪ್ರದೇಶಗಳು ಈ ಸಾಮಂತರ ಆಳ್ವಿಕೆಯ ವ್ಯಾಪ್ತಿಯಲ್ಲಿ ಬಂದಿದ್ದವು. ಈ ಪಾಳೆಗಾರರ ರಾಜಕೀಯ ಇತಿಹಾಸ, ಮೈಸೂರು ಒಡೆಯರ ರಾಜಕೀಯ ಇತಿಹಾಸ ಏಕಕಾಲಕ್ಕೆ ಕೆಲವು ಕಾಲ ನಡೆದುಕೊಂಡು ಬಂದು 17 ನೇ ಶತಮಾನದ ಪೂರ್ವಾರ್ಧಕ್ಕೆ ಕೊನೆಗೊಂಡಿತು.

ಈ ಪಾಳೇಗಾರರ ಪೂರ್ವಿಕರು ವಿಜಯನಗರ ಅರಸರಲ್ಲಿ ಗಣ್ಯ ಅಧಿಕಾರಿಗಳಾಗಿ ಆ ಸಾಮ್ರಾಜ್ಯದ ಶಕ್ತ ಆಡಳಿತಕ್ಕೆ ಹೆಗೆಲೆಣೆಯಾಗಿ ಸಹಕಾರಿಗಳಾಗಿದ್ದರೆಂದು ಇತಿಹಾಸಕಾರರು ಹೇಳುತ್ತಾರೆ. 2 ತಿಮಮಪ್ಪಯ್ಯಾ ಬಂಢಾರಿ ವಿಜಯನಗರದ ಅಚ್ಯುತರಾಯನ ಕಾಲದ ಅಧಿಕಾರಿ ಇವನ ಮಗ 1ನೇ ಜಗದೇವರಾಯ ಇಮ್ಮಡಿ ಜಗದೇವರಾಯ.

ಈ ಒಂದನೇ ಜಗದೇವರಾಯನ ಮಗನೇ ಇಮ್ಮಡಿ ಜಗದೇವರಾಯ ಇವನು ಪ್ರಭಾವಿಯಾದರೂ ಇವನ ಬಗ್ಗೆ ಶಾಸನಾಧಾರಗಳು ಅತ್ಯಲ್ಪ. ಇವನ ತಂದೆ ನಾಗಮಂಗಲದ ಪಾಳೇಗಾರನಾಗಿದ್ದರಂತೆ ನಾಗಮಂಗಲದ ಶಾಸನ (ನಂ. 40/1563) ತಿಳಿಸುತ್ತದೆ. ಈತನ ಮಗ ಪೆದ್ದ ಜಗದೇವರಯ ಕೂಡ ಈ ಸ್ಥಳದ ಅಧಿಕಾರಿಯಾಗಿದ್ದನೆಂದು ಮುತ್ತೆಗೆರೆ ಶಾಸನ ತಿಳಿಸುತ್ತದೆ. ಈ ಪೆದ್ದ ಜಗದೇವರಯಾನ ತಮ್ಮ 'ಇಮ್ಮಡಿ ಜಗದೇವರಾಯನೇ' ಶೌರ್ಯವುಳ್ಳ ಯೋಧನಾಗಿ ರಾಜ್ಯವನ್ನು ವಿಸ್ತರಿಸಿ ಸಮರ್ಥವಾಗಿ ಚನ್ನಪಟ್ಟಣದ ಸೀಮೆಗೆ ಅಧಿಕೃತ ಪಾಳೇಯಗಾರನಾಗಿ ಮೆರೆದನೆಂದು ಶಾಸನಗಳು ವರ್ಣಿಸುತ್ತವೆ.

ವಿಜಯನಗರದ ಚಕ್ರವರ್ತಿ ಪೆನುಗೊಂಡ ತಿರುಮಲರಾಯ ಬಹುಮನಿ ಸಾಮ್ರಾಜ್ಯದ ಗೋಲ್ಕೊಂಡ ಮತ್ತು ಅಹಮದ್ ನಗರಗಳ ಸುಲ್ತಾನರೊಡನೆ ಹೋರಾಡಬೇಕಿತ್ತು. ಇವರು ಪೆನುಗೊಂಡೆಯ ಮೇಲೆ ಆಕ್ರಮಣ ಮಾಡಿದಾಗ ಈ ತಿರುಮಲರಾಯನಿಗೆ ಜಗದೇವರಾಯ ಸಹಾಯಮಾಡಿ ಪೆನುಗೊಂಡೆಯನ್ನು ಆಕ್ರಮಣದಿಂದ ಪಾರು ಮಾಡಿದನು. ತೆಲಗು ಕವಿ ಓಬಲನ ವಾಮನಪುರಾಣದಲ್ಲಿ ಈ ಸಂಗತಿ

ವರ್ಣಿಸಲಾಗಿದೆ. ಈ ಸಾಹಸಕ್ಕೆ ಮೆಚ್ಚಿ ಬಿರುದು ನೀಡಿ, 9 ಲಕ್ಷ ಪಗೋಡವನ್ನು ವರಮಾನ ನೀಡದನು. 1 ಪಗೋಡ 3 ರೂಪಾಯಿ– ಒಂದು ದೊಡ್ಡ ಸೀಮೆಯನ್ನು ಬಳುವಳಿಯಾಗಿ ಆಳ್ವಿಕೆಗಾಗಿ ನೀಡಿದನು. ಈ ಸೀಮೆ ಬಾರಾಮಹಲ್ ಘಟ್ಟಗಳಿಂದ ಪಶ್ಚಿಮ ಘಟ್ಟಗಳವರೆಗೆ ವ್ಯಾಪಿಸಿತ್ತು. ಈತನು ಆಡಳಿತ ಸೌಕರ್ಯಕ್ಕೆ ತನ್ನ ಪೂರ್ವಿಕರ 2 ಭಂಢಾರದ ತಿಮ್ಮಪ್ಪಯ್ಯ ಏಕ (ನಂ. 53/1535)[8] ಸೀಮೆಯಾಗಿದ್ದ ಚನ್ನಪಟ್ಟಣವನ್ನೇ ಆಯ್ಕೆ ಮಾಡಿಕೊಂಡನು. ರಾಜಧಾನಿಯನ್ನಾಗಿ ಆಡಳಿತ ಕೇಂದ್ರವನ್ನಾಗಿ ಚನ್ನಪಟ್ಟಣವನ್ನು ಮಾಡಿಕೊಂಡು ಸುತ್ತಲು ಪ್ರದೇಶವಾದ ಕಾನಕಾನಹಳ್ಳಿಯಲ್ಲಿಯೋ ಆಳಲು ತೊಡಗಿದನು. ಬಹುಶಃ ಕಾನಕಾನಹಳ್ಳಿ ಕೋಟೆ ಮತ್ತು ರಂಗನಾಥ ಸ್ವಾಮಿಯ ದೇವಾಲಯವನ್ನು ಇವನೇ ನಿರ್ಮಿಸಿರಬಹುದು. ಇದು 1570ರ ಅವಧಿಯಲ್ಲಿ ಜರುಗಿರಬಹುದಾಗಿದೆ.

ಈ ಇಮ್ಮಡಿ ಜಗದೇವರಾಯನ ಮಗನೂ ಕೂಡ ಜಗದೇವರಾಯ ಎಂದೇ ಗುರುತಿಸಲಾಗಿದೆ. ಈತ 1570ರ ಸುಮಾರಿಗೆ ಪಟ್ಟಕ್ಕೆ ಬಂದ 10–12 ವರ್ಷಗಳ ಅಲ್ಪಾವಧಿಗೆ ಮಾತ್ರ ರಾಜ್ಯವಾಳಿದನು. ಈ ಜಗದೇವರಾಯನ ಮಗನೇ ಅಂಕುಶ ವೆಂಕಟಪತಿ, ಇವನ ಆಳ್ವಿಕೆಯ ಎರಡು ಶಾಸನಗಳು ದೊರಕಿವೆ. ಮೊದಲನೆಯದು (ನಂ. 40/1616) ಮದ್ದೂರಿನಲ್ಲಿ ಇನ್ನೊಂದು (ನಂ. 11/1617) ನಾಗಮಂಗಲದಲ್ಲಿ ಇವನ ಆಳ್ವಿಕೆಯ ಆಡಳಿತದ ರೀತಿಯನ್ನು ವಿವರಿಸಿ, ವಂಶಾವಳಿಯನ್ನು ದಾಖಲಿಸಿವೆ.

ವೆಂಕಟಪತಿಯ ಅನಂತರದಲ್ಲಿ ಅವನ ಸೋದರಳಿಯ ಇಮ್ಮಡಿ ಕುಮಾರ ಜಗರಾಯ (ಸು. 1620–29) ಎಂಬುವನು. ಇವನು ಕುಮಾರ ಜಗದೇವರಾಯನ ಮಗ 1621 ಮತ್ತು 1622ರ ಕಾಲದ ಎರಡು ಶಾಸನಗಳು, ರಾಜ್ಯವಾಳಿದ ವಿಷಯಗಳನ್ನು ವಿವರಿಸುತ್ತವೆ. ಇವುಗಳಲ್ಲಿ ಕಾನಕಾನಹಳ್ಳಿಯ ಅಲ್ಲಾಳಸಂದ್ರ ಗ್ರಾಮದ್ದು (ನಂ. 108) ಇದರಲ್ಲಿ "ಕೊಮರ ಇಮ್ಮಡಿ ಜಗದೇವರಾಯ ಅಯನವರು ಬಸಣಪಪಳಿ ಅಳಾಜವಾನರು ಪ್ರತಿಷ್ಠೆ ಮಾಡಿದ ಕಾಶಿವಿಶ್ವನಾಥ ಸ್ವಾಮಿಗೆ ಕನುಕನಳಿ ಸೀಮೆಯೊಳಗಿನ ಅಲಾಳ ಸಮುದ್ರ ಗ್ರಾಮವನ್ನು ಸರ್ವಮಾನ್ಯ ಗ್ರಾಮವಾಗಿ" ನೀಡಿದ ಸಂಗತಿ ದಾಖಲಾಗಿದೆ. 2ನೇ ಶಾಸನ ಚನ್ನಪಟ್ಟಣದ ದಶವಾರ ಗ್ರಾಮದ್ದು (ನಂ. 182) ಇಲ್ಲಿ ಈ ಅರಸು ಪೆದ್ದ ಜಗದೇವರಾಯನಿಗೆ ಅಮಾತ್ಯವೆಂದೂ, ಜಗದೇವ ರಾಯನ ಪುತ್ರನೆಂದೂ, ಹೇಳಿದೆ. ಜೊತೆಗೆ ಭೂದಾನವೊಂದನ್ನು ಕುರಿತ ಈ ಶಾಸನದಲ್ಲಿ ಈತ ತನ್ನನ್ನು ಚಕ್ರವರ್ತಿ ಅರವೀಡು ಮನೆತನದ ಅಳಿಯ ರಾಮರಾಯನ (1617–32) ಸಾಮಂತನೆಂದು ಹೇಳಿಕೊಂಡಿದ್ದಾನೆ.[9]

ಶ್ರೀರಂಗಪಟ್ಟಣವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳ್ವಿಕೆ ಮಾಡುತ್ತಿದ್ದ ಮೈಸೂರು ಒಡೆಯರ ವಂಶದ ರಾಜ ಒಡೆಯರು (1578–1617) ಮೈಸೂರು ಪ್ರಾಂತ್ಯವನ್ನು ಆಳುತ್ತಿದ್ದ ಕಾಲದಲ್ಲಿ ಒಂದನೆಯ ಕುಮಾರ ಜಗದೇವರಾಯನೊಂದಿಗೆ ಆಗಾಗ ಸಂಘರ್ಷ ಜಗಳಾಗುತ್ತಿದ್ದಂತೆ

ತೋರುವುದು. ಈ ಜಗಳದಲ್ಲಿ ಅರಕೆರೆ, ಕ್ಕಿಕ್ಕೇರಿ, ಹೊಸಹೊಳಲು ಈ ಕೆಲವು ಪ್ರದೇಶಗಳನ್ನು ಈ ಜಗದೇವರಾಯದಿಂದ ಕಸಿದುಕೊಂಡ ಒಡೆಯರು ವಶಪಡಿಸಿಕೊಂಡರು (1600–17) ಮುಂದೆ ಈ ಸಂಘರ್ಷ ಐದನೆಯ ಚಾಮರಾಜ ಒಡೆಯರ (1617–37) ಕಾಲಕ್ಕೆ ಮುಂದುವರಿಯುತ್ತವೆ.

ಒಂದನೇ ಕುಮಾರ ಜಗದೇವರಾಯನ ವಶದಲ್ಲಿದ್ದ ನಾಗಮಂಗಲವನ್ನು ವಶಪಡಿಸಿಕೊಳ್ಳಲು ದಳವಾಯಿ ಬೆಟ್ಟದ ಅರಸು ವಿಫಲನಾಗಿದ್ದನು (1618) ಆದರೆ ಮಂಡ್ಯದ ಕೆರಗೋಡನ್ನು ವಶಪಡಿಸಿಕೊಳ್ಳಲು ಸಫಲನಾದನು.

ಮೈಸುರಿನ ಚಾಮರಾಜ ಒಡೆಯ ಜಗದೇವರಾಯನ ಸೈನ್ಯವನ್ನು ಹಿಮ್ಮಟ್ಟಿಸಿ ತಾನೇ ಮಳವಳ್ಳಿಯನ್ನು ವಶಪಡಿಸಿಕೊಳ್ಳುತ್ತಾನೆ (1621). ಚನ್ನಪಟ್ಟಣ ಆಳುತ್ತಿದ್ದವನು 2ನೇ ಕುಮಾರ ಜಗದೇವರಾಯ ಇದೇ ಸಂದರ್ಭದಲ್ಲಿ ಇತರೆ ಪ್ರಾಂತ್ಯಗಳ ಪಾಳೇಗಾರರನ್ನು ಸೋಲಿಸಿದನು. ಈ ವೇಳೆ ಹೆಚ್ಚು ಪ್ರಬಲನಾದ ಈ ಮೈಸೂರು ಒಡೆಯ ಕ್ರಿ.ಶ. 1630ರಲ್ಲಿ ಚನ್ನಪಟ್ಟಣವನ್ನು ತನ್ನ ವಶಕ್ಕೆ ಪಡೆದನು. ಹೀಗೆ, ಕಾನಕಾನಹಳ್ಳಿ, ಚನ್ನಪಟ್ಟಣ, ಚನ್ನರಾಯಪಟ್ಟಣ ನಾಗಮಂಗಲ, ಮಳವಳ್ಳಿ ಪ್ರಾಂತ್ಯ ಪೂರ್ಣ ಮೈಸೂರು ಒಡೆಯರ ಕೈವಶವಾಗಿ ವಿಜಯನಗರದ ದೊರೆಗಳ ಕೈಕೆಳಗೆ ಪ್ರಭಾವಶಾಲಿ ಸಾಮಂತನಾಗಿ ಯಶ್ವಸ್ವಿ ರಾಜ್ಯಭಾರ ಮಾಡಿದನು.

ಈ ವಿಜಯ ಯಾತ್ರೆಗೆ, ಚಾಮರಾಜ ಒಡೆಯರಿಗೆ ಒತ್ತಾಸೆಯಾಗಿ ಸಹಕರಿಸಿದವನು ದಳವಾಯಿ ವಿಕ್ರಮರಾಯ ಚನ್ನಪಟ್ಟಣ ಸ್ವಾಧೀನವಾಗುವುದರೊಂದಿಗೆ, ಆ ಪ್ರಾಂತ್ಯದ ಸೀಮೆಗೆ ಸೇರಿದ ತುಂಗಣಿನಾಡ ಸ್ಥಳದ ಕಾಣಿಕಾರನಹಳ್ಳಿ ಎಂದರೆ ಕಾನಕಾನಹಳ್ಳಿ ಅಲ್ಲಿಯವರ ನಾಯಕತ್ವದಿಂದ ಮೈಸೂರರಸರ ಸುಪರ್ದಿಗೆ ಬಂದಿತು.

ಚನ್ನಪಟ್ಟಣ ಮತ್ತು ಕಾನಕಾನಹಳ್ಳಿಗಳನ್ನು ಚಾಮರಾಜ ಒಡೆಯನು ಜಗದೇವರಾಯನಿಂದ ವಶಪಡಿಸಿಕೊಂಡ ಮೇಲೆ (1630) ಮೈಸೂರು ಸಂಸ್ಥಾನದ ದಕ್ಷಿಣ ಮತ್ತು ನೈರುತ್ಯದಿಕ್ಕುಗಳ ಗಡಿರೇಖೆಗಳ ನೆಲೆಯಾದುವೆಂದು ವಿಲ್ಕ್ಸ್, ಅವರ ಮೈಸೂರು ಇತಿಹಾಸ ಗ್ರಂಥದ ಸಂಪಾದಕ ಮರ್ರೆ ಹ್ಯಾಮಿಕ್ ಟಿಪ್ಪಣಿ ಬರೆದಿದ್ದಾರೆ (ಸ. 1, ಪು 56 ಅ.ಟಿ).

ಇಲ್ಲಿಯೇ ಒಂದು ಮಾತನ್ನು ತಪ್ಪದೆ ಹೇಳಬೇಕಾಗಿದೆ. ಅದೆಂದರೆ; ಚನ್ನಪಟ್ಟಣದ ಸೀಮೆಯ ಈ ಪಾಳೆಯಗಾರರ ಅಥವಾ ವಿಜಯನಗರ ಸಂಸ್ಥಾನಿಕರ, ಸಾಮಂತರ ಕ್ರಮಾನುಗತವಾದ ಇತಿಹಾಸವನ್ನು ರಚಿಸುವಾಗ ಇತಿಹಾಸಕಾರರು ಶಾಸನಸಾಕ್ಷ್ಯಗಳನ್ನೇ ವಿಶೇಷವಾಗಿ ಆಧರಿಸಿದ್ದರೂ, ಮನೆತನದ ದೊರೆಗಳಲ್ಲಿ ಜಗದೇವ ಎಂಬ ಹೆಸರಿನವರು ಮತ್ತೆ ಮತ್ತೆ ಕಾಣಿಸಿಕೊಳ್ಳುವುದರಿಂದ, ಕೆಲಮಟ್ಟಿಗೆ

ತೇದಿಗಳ ಅಸ್ಪಷ್ಟತೆಯೂ ಇರುವುದರಿಂದ ಇತಿಹಾಸಕಾರರು ಈ ಮನೆತನದ ಇತಿಹಾಸವನ್ನು ತೃಪ್ತಿಕರವಾಗಿ ರಚಿಸಿರುವಂತೆ ತೋರುವುದಿಲ್ಲ. ಅಭಿಪ್ರಾಯ ಭೇದಗಳು ಕಂಡು ಬರುತ್ತಿವೆ. ಪ್ರಸ್ತುತ, ಮುಖ್ಯಾಂಶದಲ್ಲಿ ಇವರ ಆಳ್ವಿಕೆಯ ಅನುಕ್ರಮವನ್ನು ಕರ್ನಾಟಕ ಸರ್ಕಾರದ ಬೆಂಗಳೂರು ಗ್ರಾಮಾಂತರ ಜಿಲ್ಲೆ ಗೆಜೆಟಿಯರ್ ಹಿಡಿದ ಅನುಪೂರ್ವಿಯಲ್ಲಿ ನಿರೂಪಿಸಿ, ಮೈಸೂರು ಒಡೆಯರೊಂದಿಗೆ ನಡೆದ ಸಂಘರ್ಷಕಥನವನ್ನು ಹೇಳುವಾಗ ಅನ್ಯ ಆಕರಗಳನ್ನೂ ಸ್ವಂತ ವಿವೇಚನೆಯನ್ನು ಅವಲಂಭಿಸಿದೆ.[10]

ಕಾನಕಾನಹಳ್ಳಿಯ ಪ್ರಭುಗಳು

ಕಾನಕಾನಹಳ್ಳಿಯ ಪ್ರಭುಗಳ ವಿಷಯ ತಿಳಿಯಲು ಚನ್ನರಾಯಪಟ್ಟಣದ ಶಾಸನ(ನಂ:14/1648) ಹಾಗು ಹಾಸನದ ಶಾಸನ (ನಂ:38/1651)ದ ಮೂಲಕ ತಿಳಿಯಬೇಕಾಗಿರುವುದು ಕುತೂಹಲದ ವಿಷಯ. ಮೈಸೂರಿನ ಐದನೇ ಚಾಮರಾಜ ಒಡೆಯನು(1617–37) ಬೇಲೂರು ವೆಂಕಟಪ್ಪ ನಾಯಕನಿಂದ ಚನ್ನರಾಯಪಟ್ಟಣವನ್ನು ಗೆದ್ದು ಸ್ವಾಧೀನಕ್ಕೆ ಪಡೆದ ಮೇಲೆ, ಅದು ಮೈಸೂರಿನ ವಾಯುವ್ಯದ ಗಡಿಯಾಗಿತ್ತು. ಅನಂತರ, ಒಂದನೆಯ ಕಂಠೀರವ ನರಸರಾಜ ಒಡೆಯನ ಕಾಲದಲ್ಲಿ(1638–59) ಈ ದಕ್ಷನಾದ ದೊರೆಯು ತನ್ನ ವಿಶ್ವಾಸಿಯಾದ ಪಾಳೇಗಾರ ಕಾನಕಾನಹಳ್ಳಿಯ ದೊಡ್ಡಯ್ಯನನ್ನು ಚನ್ನರಾಯಪಟ್ಟಣದ ಸೀಮೆಯ ವ್ಯವಹಾರ ನೋಡಿಕೊಳ್ಳಲು ನೇಮಿಸಿ, ಆಜ್ಞಾಪಿಸಿದ ಎನ್ನುವುದೇ ಈ ಎರಡು ಶಾಸನಗಳ ಸಾರಾಂಶ.

ಮೊದಲನೆಯ ಶಾಸನದಲ್ಲಿ ನಿರೂಪಣೆ ಹೀಗಿದೆ: ಬಿರುತೆಂಬರ ಗಂಡ ಮೈಸೂರು ಕಂಠೀರವ ನ 'ರಸರಾಜವೊಡೆಯರಯ್ಯನವರು ಸುಖರಾಜ್ಯಂಗೈವಲ್ಲಿ ಚನ್ನಪಟ್ಟಣ ಸೀಮೆಯ ತುಂಗಣಿನಾಡ ಸ್ಥಳದ ಕಾನಕಾರನಹಳ್ಳಿಯ ಪ್ರಭು ಚನ್ನ ವೀರಯ್ಯ ಗೌಡನವರ ಕುಮಾರ ದೊಡ್ಡಯ್ಯನವರಿಗೆ ಚನ್ನರಾಯ ಪಟ್ಟಣವ ಕೊಟ್ಟುಯಿದ್ದಲ್ಲಿ(1, 2ನೇ ಸಾಲುಗಳು).....

ಎರಡನೆಯ ಶಾಸನದಲ್ಲಿ ಒಕ್ಕಣೆ ಹೀಗಿದೆ ಶ್ರೀಮತು ಚನ್ನಪಟ್ಟಣದ ಸೀಮೆಯ ಕಾಣಿಕಾರನಹಳ್ಳಿಯ ದೊಡ್ಯೆಯನವರು ಕಂಠೀರವ ನರಸರಾಜ್ಯೆಯನವರು ಚೆಂನರಾಯಪಟ್ಟಣದ ಸೀಮೆಯ ಹವಾಲ ಮಾಡಿದ್ದಾ ನಾಗಭಕ್ತೆಯಾಗಳ ಪ್ರತಿಷ್ಠೆಯ ಮಾಡಿ ಮಂಟಪದ ಕಟಿಸ್ತ ಸೇವೆ....

ಇನ್ನೊಂದು ಶಾಸನ(ನಂ:17/1642)ದಲ್ಲಿ "ಚನ್ನಪಟ್ಟಣದ ತುಂಗಣಿನಾಡ ಸ್ತಳದ ಕಾನಿಕಾರನ ಹಳ್ಳಿಯ ಪ್ರಭು ದೊಡ್ಡಯ್ಯನವರ...."ಎಂದು, ಮತ್ತೊಂದು' ಶಾಸನ(ನಂ:20/1647)ದಲ್ಲಿ "ಚನ್ನಪಟ್ಟಣದ ಸೀಮೆ ತುಂಗಣಿನಾಡ ಸ್ತಳದ ಕಾನಕಾರನ ಹಳ್ಳಿಯ ಪ್ರಭು ದೊಡ್ಡಯ್ಯನವರು....."ಎಂತಲೂ, ಮಗದೊಂದ ಶಾಸನ(ನಂ:38/1651)ದಲ್ಲಿ "ಚನ್ನಪಟ್ಟಣದ ಸೀಮೆಯ ಕಾನಿಕಾರನಹಳ್ಳಿಯ ದೊಡದಡಯ್ಯನವರು....."

ಮತ್ತೊಂದರಲ್ಲಿ ಹೀಗೆ ಹೇಳಿದೆ "ಚನ್ನಪಟ್ಟಣ ಸೀಮೆ ತುಂಗಣಿನಾಡ ಸ್ಥಳದ ಕಾನಕಾರನ ಹಳ್ಳಿಯ ಪ್ರಭು" ಆ ಶಾಸನ(ನಂ:15/17)ನೇ ಶತಮಾನಕ್ಕೆ ಸೇರಿದ್ದು.

ಈ ಎಲ್ಲಾ ದಾಖಲೆಗಳು ಕಾನಕಾನ ಹಳ್ಳಿಯ ಪ್ರಭುಗಳ ವಿಚಾರಗಳನ್ನು ದಾಖಲಿಸುತ್ತವೆ. ಈ ಉಲ್ಲೇಖಗಳಿಂದ ಕಾನಕಾನ ಹಳ್ಳಿ ಶ್ರೀರಂಗಪಟ್ಟಣವನ್ನು ರಾಜಧಾನಿಯಾಗಿ ಉಳ್ಳ ವಿಸ್ತಾರವಾದ ಮೈಸೂರು ರಾಜ್ಯದ ಒಂದು ಪ್ರದೇಶವಾಗಿ, ಈಗ ಕಾನಕಾನ ಹಳ್ಳಿ(ಕನಕಪುರ)– ಬೆಂಗಳೂರು ಮುಖ್ಯ ಮಾರ್ಗದಲ್ಲಿರುವ ತುಂಗಣಿ ಎಂಬ ಪ್ರದೇಶಕ್ಕೆ (ಚನ್ನಪಟ್ಟಣದ ಒಂದು ವೀರಗಲ್ಲು(ನಂ:57/1286) ತುಂಗಣಿನಾಡ ಹೆಸರಿಸುತ್ತದೆ) ಒಳಪಟ್ಟ ಒಂದು ಸಣ್ಣ ಪಾಳೆಯಪಟ್ಟು ಆಗಿದಿತ್ತು ಎಂದು ಅಭಿಪ್ರಾಯವಾಗುವುದು. ಆದರೆ ಈಗ ಕಾನಕಾನ ಹಳ್ಳಿ ಹೋಬಳಿಯ ತುಂಗಣಿಯಲ್ಲಿ ಈ ಸಂಬಂಧವಾದ ಯಾವ ಶಾಸನಗಳೂ ನಮಗೆ ಲಭ್ಯವಾಗಿಲ್ಲ.

ಚನ್ನರಾಯಪಟ್ಟಣದ ಪೂರ್ವೋಕ್ತವಾದ ಹಲವಾರು ಶಾಸನಗಳು ದೊಡ್ಡಯ್ಯನನ್ನು ಕಾಣಿಕಾರನ ಹಳ್ಳಿಯ, ಎಂದರೆ ಕಾನಕಾನಹಳ್ಳಿಯ ಫಾಸಲೆಯಲ್ಲಿ ಅವನ ಪ್ರಭುತ್ವ ಸೂಚಕವಾದ ಯಾವುದಾದರೂ ಶಾಸನಗಳು ದೊರೆಯುತ್ತವೆಯೇ ಎಂದು ನೋಡಿದರೆ, ಕಾಣುತ್ತಿಲ್ಲ. ಹಾಗೆ ನೋಡಿದರೆ, ಈ ದೊಡ್ಡಯ್ಯನ ಅಧಿರಾಜನಾದ 1ನೆಯ ಕಂಠೀರವ ನರಸರಾಜ ಒಡೆಯನ ಆಡಳಿತ ಕಾಲದ(1638–59) ಶಾಸನಗಳೇ ಕಂಡು ಬರುತ್ತಿಲ್ಲ. ಅನಂತರ ಕಾಲದ ದೇವರಾಜ ಒಡೆಯನ ಕಾಲದ(1659–73) ಶಾಸನಗಳು ಕಾಣುತ್ತಿವೆ.[11]

ಒಂದನೆಯ ಕಂಠೀರವ ನರಸರಾಜರ ಆಳ್ವಿಕೆಯ ಕಾಲದಲ್ಲಿ ಅವರ ಅಧೀನ ಪ್ರಾಂತ್ಯದ ಕೂಟದಲ್ಲಿ ಈ ಕಾನಕಾನಹಳ್ಳಿ ದೊಡ್ಡಯ್ಯ ಪ್ರಭು ತುಂಬ ಪ್ರಬಲನಾಗಿದ್ದಂತೆ ತಿಳ್ಳಿಯುತ್ತದೆ. ಈ ಪ್ರಭು ಅನೇಕ ಧಾರ್ಮಿಕ, ಸಾಮಾಜಿಕ ಕಾರ್ಯಗಳನ್ನು ಚನ್ನರಾಯಪಟ್ಟಣ ಸುತ್ತಮುತ್ತ ಕೈಗೊಂಡಿರುವ ದಾಖಲೆಗಳು ಹೇರಳವಾಗಿ ಅನೇಕ ಶಾಸನಗಳು ದೊರೆಯುತ್ತವೆ(ಚ. ರಾ. ಪ: 14, 17, 20, 38) ಇವೆಲ್ಲಾ ಕಂಠೀರವ ನರಸರಾಜ(1638–59)ರ ಆಳ್ವಿಕೆಯ ಕಾಲದವುಗಳೇ ಆಗಿವೆ. ತರುಕರಾಜಕಾರ್ಯದಲ್ಲಿ ಕಲ್ಲಕೊಟೆಯ ಕಟ್ಟಿಸಿದರು,(ಚ. ಸಂ:14) ವಿಜೆಯಪುರದ ಪಾತ್ಸಾಹನವರ ರಾಜ ಕಾರ್ಯದಲ್ಲಿ ಕಲಕೋಟೆಯ ಕಟ್ಟಿಸಿದರು(ಚ. ಸಂ:11) ಎನ್ನುವ ಶಾಸನ ಒಕ್ಕಣೆಯನ್ನು ಗಮನಿಸಿದರೆ,

ಬಿಜಾಪುರದ ಬಹುಮನಿ ಸುಲ್ತಾನರ ಆಕ್ರಮಣವನ್ನು ದೊಡ್ಡಯ್ಯನು ಎದುರಿಸಿರುವ ಅಂಶವನ್ನು ಊಹಿಸಬಹುದಾಗಿದೆ, ಈ ವಿಷಯವನ್ನು ಗೋವಿಂದ ವೈದ್ಯ 'ಕಂಠೀರವ ನರಸರಾಜ ವಿಜಯ' ಎಂಬ ಸಾಂಗತ್ಯ ಕಾವ್ಯದಲ್ಲಿ (ಕಾಲ ಕಿ.ಶ 1648)ರುವ ವರ್ಣನೆಯೊಂದಿಗೆ ತುಲನೆ ಮಾಡಿ ನೋಡಿದರೂ ಸ್ಪಷ್ಟವಾಗುತ್ತದೆ. ಈ ಕಾವ್ಯದ ಪೂರ್ವಭಾಗದಲ್ಲಿ ಬಿಜಾಪುರ

ಸುಲ್ತಾನನ ತುರುಕಪಡೆ ಶೀರಂಗಪಟ್ಟಣದತ್ತ ನುಗ್ಗಿ ಬಂದಾಗ ಕಂಠೀರವ ನರಸರಾಜ ಒಡೆಯರು ಕರೆದ ಮಂತ್ರಾಲೋಚನಾ ಸಭೆಯಲ್ಲಿ ಚನ್ನರಾಯಪಟ್ಟಣದ ಮನ್ನೆಯನೂ ಇದ್ದನೆಂದು ಹೇಳಿದೆ. ಈ ಮನ್ನೆಯನ್ನೇ ದೊಡ್ಡಯ್ಯನಿರಬಹುದು.|.[12] ಆ ಸಭೆಯಲ್ಲಿ ಎಲ್ಲಾ ಮನ್ನೆಯರು ಒಬ್ಬೊಬ್ಬರಾಗಿ ತಮ್ಮ ಪೌರುಷವನ್ನು ಹೇಳಿಕೊಂಡಾಗ "ಕದಳಿಯ ವನವ ಕಾಡಾನೆ ಹೊಕ್ಕಂದದೆ। ಸದೆದೆಬ್ಬಿಸಿ ಖಳಬಲವ। ಮುದವ ಬೀರುವೆನು...." ಎಂದು ಚನ್ನರಾಯಪಟ್ಟಣದ ಅದಟ ಮನ್ನೆಯ ಸಾರಿ ದೊರೆಗೆ ಕೈಮುಗಿದನಂತೆ(12-81)* ಆ ಕಾವ್ಯ ಭಾಗ ಮುಂದುವರೆದಂತೆ, ಆ ತುರುಕ ಪಡೆಗೆ ಎದುರಾಗಿ ದೊಡ್ಡಯ್ಯನೆ ಸೇನೆಯಲ್ಲದೆ, ನಾಗಮಂಗಲ, ಕಿಕ್ಕೇರಿ ಮನ್ನೆಯರ ಸೇನೆಯೂ ಸೇರಿಕೊಂಡು, ಭಂಗಿಸಿ ನಾಸಾಭೇದ ಮಾಡಿ ಹಿಗ್ಗಿತ್ತಂತೆ(13-60)* ಮೊದಲನೆಯದು ಪದ್ಯ ಸಂಖ್ಯೆ, ಎರಡನೆಯದು ಪುಟ ಸಂಖ್ಯೆ.

ಗೋವಿಂದ ವೈದ್ಯನ 'ಕಂಠೀರವ ನರಸರಾಜೇಂದ್ರ ವಿಜಯ'ದ ಇನ್ನಿತರ ಕಾವ್ಯಭಾಗಗಳಲ್ಲಿ ಈ ಮನ್ನೆಯನು ದೊಡ್ಡಯ್ಯನೆಂಬುದು ಖಚಿತಪಡುತ್ತದೆ. ಕ್ರಿ.ಶ. 1645 ರಲ್ಲಿ ನಡೆದ 'ಪಿರಿಯಾಪಟ್ಟಣ ಕಾಳಗ'ದಲ್ಲಿ ದೊಡ್ಡಯ್ಯನು ನೇರವಾಗಿ ಭಾಗವಹಿಸಿರುವುದು, ಅವನನ್ನು 'ದೊಡ್ಡೇಂದ್ರ' ಎಂದು ಸಂಭೋದಿಸಿರುವುದು(18-71)ಖಚಿತಪಡುತ್ತದೆ, ಅಲ್ಲದೆ ಕಂಠೀರವ ನರಸರಾಜನು ಶ್ರೀರಂಗಪಟ್ಟಣದ ರಂಗನಾಥನರಥೋತ್ಸವಕ್ಕೆ, ಚನ್ನರಾಯಪಟ್ಟಣದ ದೊಡ್ಡಯ್ಯಯ್ಯನನ್ನು ಆಹ್ವಾನಿಸಿರುವುದು ನಿರೂಪಿತವಾಗಿದೆ(25-50). ಇಲ್ಲಿಒಂದು ಪ್ರಶ್ನೆಗೆ ಅವಕಾಶವಿದೆ. ದೊಡ್ಡಯ್ಯನು ಚನ್ನರಾಯಪಟ್ಟಣದ ಮೇಲಾಳ್ಕೆ ಮಾಡುತ್ತಿದ್ದಾಗ್ಗೆ ಕಾನಕಾನ ಹಳ್ಳಿಯ ನಾಯಕತನದ ನಿರ್ವಹಣೆಯೇನು ಎನ್ನುವುದೇ ಆ ಪ್ರಶ್ನೆ. ಇದಕ್ಕೆ ಗೋವಿಂದ ವೈದ್ಯನ ಕಾಲದಲ್ಲಿಯೇ ಉತ್ತರವಿರುವಂತಿದೆ: ಶೀರಂಗಪಟ್ಟಣದ ರಂಗನಾಥಸ್ವಾಮಿಯ ರಥೋತ್ಸವಕ್ಕೆ ಬಂದಿದ್ದ ಮನ್ನೆಯರನ್ನು ಅನುಕ್ರಮವಾಗಿ ಹೇಳುವಾಗ, ಹಾಗೆ ಬಂದಿದ್ದವರಲ್ಲಿ "ಕಾನಕಾರನಹಳ್ಳಿಯ ಮುದ್ದಯ್ಯನು" ಕೂಡ ಒಬ್ಬನೆಂದು ಹೇಳಿದೆ (25-62). ಇಲ್ಲಿಯೇ 'ಮಳಲವಾಡಿಯ ಹೊನ್ನಣ್ಣ'ನ ವಿಚಾರವೂ ಬಂದಿದೆ(25-63). ಕಾವ್ಯಸ್ಥ ಪ್ರಯೋಗಗಳಲ್ಲಿ ಸ್ಥಳದ ಹೆಸರು 'ಕಾನಕಾರನಹಳ್ಳಿ' ಎಂದು ಬಂದಿರುವುದು ಗಮನಾರ್ಹ. ಅಲ್ಲದೆ, ಇದೇ ಪ್ರಾಚೀನತಮ ಕಾವ್ಯ ಪ್ರಯೋಗವೂ ಆಗಿದೆ.[13]

ದೊಡ್ಡಯ್ಯ ಮಹಾಪ್ರಭುವಿನ ಧರ್ಮಕಾರ್ಯಗಳನ್ನು ವಿದ್ವಾಂಸರಾದ, ಡಾ.ಟಿ.ವಿ. ವೆಂಕಟಾಚಲ ಶಾಸ್ತ್ರಿಗಳು ತಮ್ಮ "ಕಾನಕಾನಹಳ್ಳಿ ಚರಿತ್ರೆ" ಎಂಬ ಪುಸ್ತಕದಲ್ಲಿ ಸಾಂಸ್ಕೃತಿಕ ಮತ್ತು ಸಾಮಾಜಿಕ ಕಾರ್ಯಗಳಂತೆ ವಿಂಗಡಿಸಿ ಈ ಕೆಳಗಿನಂತೆ ಪಟ್ಟಿ ಮಾಡಿ ವಿವರಿಸಿರುತ್ತಾರೆ ಇಲ್ಲೆಲ್ಲಾ ದೊಡ್ಡಯ್ಯನನ್ನು 'ಚನ್ನಪಟ್ಟಣ ಸೀಮೆಯ, ತುಂಗಣಿನಾಡ ಸ್ತಳದ, ಕಾಣಿಕಾರನ ಹಳ್ಳಿ ಪ್ರಭು' ಎಂದು ಕರೆಯಲಾಗಿದೆ.

1. "ತುರುಕರಾಜಕಾರ್ಯದಲ್ಲಿ ಕಲ ಕೋಟೆಯ ಕಟ್ಟಿಸಿದರು" ಬಿಜಾಪುರದ ಬಹಮನಿ ಸುಲ್ತಾನರ ಹೋರಾಟವನ್ನು ತಡೆಯಲು ಶಕ್ತವಾಗುವಂತೆ ಚನ್ನರಾಯ ಪಟ್ಟಣದಲ್ಲಿ ಒಂದು ಕಲ್ಲಿನ ಕೋಟೆಯನ್ನು ನಿರ್ಮಿಸಿದನು. ಆದರೆ ಈ ಕೋಟೆಯ ಬಹುಭಾಗ ಬಿದ್ದು ಹೋಗಿ, ಈಗ ಅದರ ಅವಶೇಷಗಳನ್ನು ಮಾತ್ರ ಕಾಣಬಹುದಾಗಿದೆ.

2. "ಪಿರಂಗಿಮಟವ ಕಟ್ಟಿಸಿದರು" ತಾನು ಕಟ್ಟಿಸಿದ ಕೋಟೆಗೆ ಬುರುಜು ಅಥವಾ ಕೂಡೆಯನ್ನು ಕಟ್ಟಿಸಿದನು. ಇದನ್ನು ಈಗ ಕಾಣಲಾಗುವುದಿಲ್ಲ.[14]

3 "ರಾಮೇಶ್ವರಗೆ ಮೂರು ಅಂಕಣ ಗುಡಿಯ ಕಟಿಸಿ, ಯೆರಡು ಸಿರಸಿನ ಬಸವನ ಪ್ರತಿಷ್ಠೆ ಮಾಡಿಸಿ, ಮುಂದೆ ಕೊಳನ ಕಟಿಸಿದರು."

ಈಗ ಈ ದೇವಾಲಯ ಗದ್ದೆಗಳ ನಡುವೆ ಕಾರಣ ಗದ್ದೆ ರಾಮೇಶ್ವರನೆಂದು ಹೆಸರಾಗಿದೆ. ಈ ಶೈವದೇವಸ್ಥಾನದಲ್ಲಿ ಆ ದೇವರಿಗೆ ಮೂರು ಅಂಕಣ ಗುಡಿ ಕಟ್ಟಿಸಿ, ಮುಂದೆ ಹೊರಭಾಗದಲ್ಲಿ ಒಂದೇ ದೇಹಕ್ಕೆ ವಿರುದ್ಧ ದಿಕ್ಕುಗಳಲ್ಲಿ ಎರಡು ತಲೆಗಳಿರುವ ಪುಟ್ಟ ಬಸವನ ಮೂರ್ತಿ ಮಾಡಿಸಿದನು. ಈಗ ದೇವಾಲಯದ ಮುಂದೆ ಕಟ್ಟೆಯ ಕಲ್ಲುಗಳು ಶಿಥಿಲವಾಗಿರುವ ಸಣ್ಣದೊಂದು ಕೊಳವಿದೆ. ಚನ್ನರಾಯಪಟ್ಟಣದ ಕೇಶವ ದೇವಸ್ಥಾನದ ಶಾಸನದಲ್ಲಿ(ನಂ:1/1186) ಉಲ್ಲೇಖವಾಗಿರುವ, ಹೊಯ್ಸಳ ಇಮ್ಮಡಿ ವೀರಬಲ್ಲಾಳನ ಕಾಲದಲ್ಲಿ ಮಾಡಿದ ದಾನಗಳನ್ನು ಹೇಳಿರುವ ರಾಮೇಶ್ವರ ದೇವರ ಪ್ರಸ್ತಾವ ಯಾವುದೆಂಬುದು ತಿಳಿಯದು.

4 ."ಪಡುವಣ ಮಠವ ಕಟಿಸಿ ಕೊಳವ ಕಟಿಸಿದರು."

ಇದು ಪಶ್ಚಿಮ ದಿಗ್ಭಾಗದಲ್ಲಿರುವ ಕಾಡ ಬಸವೇಶ್ವರನ ಗುಡಿಯ ಹಿಂಭಾಗಕ್ಕೆ ನಿರ್ಮಾಣವಾಗಿದ್ದು, ಈಗ ಸಂಪೂರ್ಣವಾಗಿ ನಿರ್ನಾಮವಾಗಿರುವ ಒಂದು ಮಠವನ್ನೂ ಅದರ ಮುಂದೆ ಕಟ್ಟಿಸಲಾಗಿದ್ದ ಒಂದು ಕೊಳವನ್ನು ತಿಳಿಸುವುದು. ಕಟ್ಟಿಸಿದ್ದ ಕೊಳವನ್ನು ಈಚೆಗೆ ಮುಚ್ಚಿಸಿ, ಅಲ್ಲಿ ಒಂದು ಶಾಲೆಯನ್ನು ಮಾಡಿದೆ. ಪಡುವಣ ಮಠದ ಹಿಂದಿನ ಸ್ವಾಮಿಗಳ ಗದ್ದುಗೆ ಗುಳ್ಳಹಳ್ಳಿಯಲ್ಲಿ ಉಂಟು ಎಂದು ಸ್ಥಳೀಯರು ಹೇಳುತ್ತಾರೆ.

5. "ದೇವತಂಮಗೆ ಮೂರು ಅಂಕಣ ಗುಡಿಯ ಕಟಿಸಿ ಮುಂದೆ ಉಯಾಲೆ ಕಂಬವ ನಿಲಿಸಿದರು."

ಇದು ಈಗ ಒಳಗರಮ್ಮನ ದೇವಾಲಯವೆಂದು ಕರೆಯುವ ಗ್ರಾಮದೇವತೆಯ ಗುಡಿ. ಕೆರೆಯ ಒಳಮಗ್ಗುಲಿಗೆ ಇರುವ ಕಾರಣ ಆಹೆಸರು ಬಂದಿರಬಹುದು. ಈ ದೇವತೆ ಈಗ ಸ್ಥಳದ ಮುಖ್ಯ

ಗ್ರಾಮ ದೇವತೆ. ಉತ್ಸವ ಜಾತ್ರೆ ಮೊದಲಾದವುಗಳಿಂದ ಇದರ ಪ್ರಸಿದ್ಧ ಬೆಳೆದಿದೆ. ಮೂರು ಅಂಕಣದ ಈ ಗುಡಿಯ ಮುಂದೆ ಈಗಲೂ ದೊಡ್ಡ ಉಯ್ಯಾಲೆ ಕಂಬವನ್ನು ಕಾಣಬಹುದು. ಉತ್ಸವದ ವೇಳೆ ಅದನ್ನು ಬಳಸುತ್ತಾರೆ. ಅದರ ಮೇಲೆ ಕೆತ್ತಿದೆ ಎನ್ನಲಾದ ಶಾಸನ ಈಗ ಕಾಣುತ್ತಿಲ್ಲ; ಕಂಬದ ಬುಡದಲ್ಲಿ ಮಣ್ಣಿನೊಳಗೆ ಹೂತುಹೋಗಿರಬೇಕು.

6. "ಕೆರೆಯಲಿ ಗಂಗೆಬಸವನ ನಿಲಿಸಿದರು."

ಅಮಾನಿ ಕೆರೆಯ(ಸರ್ಕಾರದ ವಶದಲ್ಲಿರುವ ಕೆರೆ) ಒಂದು ಭಾಗದಲ್ಲಿರುವ ದೊಡ್ಡದೊಂದು ಮಂಟಪವನ್ನು ಅದರೊಳಗೆ ಪುಟ್ಟದೊಂದು ಬಸವನ ಮುರ್ತಿಯನ್ನೂ ಇದು ಸೂಚಿಸುತ್ತಿದೆ. ಈಗ ಕಲ್ಲುಗಳು ಸಡಿಲಗೊಂಡು ಮಂಟಪ ತೀರ ಶಿಥಿಲವಾಗಿದೆ. ಬಸವನ ಮೂರ್ತಿಯೂ ಹಾಳದ ಸ್ಥಿತಿಯಲ್ಲಿದೆ. ಬಸವನ ತಲೆಯ ಬಾಯಿ ಭಾಗದವರೆಗೆ ಕೆರೆಯ ನೀರು ತುಂಬಿ ಬಂದಾಗ, ಹೆಚ್ಚಿನ ನೀರು ಸಮೀಪದ ತೂಬಿನ ಮೂಲಕ ಹೊರಹೋಗುತ್ತಿದ್ದ ಪ್ರತೀತಿಯನ್ನು ಸ್ಥಳ ಮಂದಿಗರು ಸ್ಮರಿಸುತ್ತಾರೆ ಚನ್ನರಾಯಪಟ್ಟಣದ 17ನೆಯ ನಂ. ಶಾಸನದ(1642) ಪ್ರಕಾರ ಈ ಧರ್ಮಕಾರ್ಯ ದೊಡ್ಡಯ್ಯನ ಮಗ ಚನ್ನವಡೆಯನದು ಎಂದು ತಿಳಿಯುತ್ತದೆ. "ಮಯಿಸೂರ ಕಂಠೀರವ ನರಸರಾಜ ವಡೇರೈಯನವರು ಸುಕರಾಜ್ಯಂಗೈಯುತ್ತಿರುವಲ್ಲಿ ಚಂನಪಟ್ಟಣದ ಸ್ಥಳದ ತುಂಗಣಿನಾಡ ಸ್ತಳದ ಕಾನಿಕಾರನ ಹಳ್ಳಿಯ ಪ್ರಭು ದೊಡ್ಯೆಯನವರ ಕೊಮಾರಚೆಂನವಡೆಯನವರು ಗಂಗೆ ಬಸವೇಶ್ವರನ ಪ್ರತಿಷ್ಠೆಯ ಮಾಡಿಸಿ ಮಂಟಪವಂನು ಕಟಿಸಿದರೂ" ಎಂಬುದು ಅದನ್ನು ಸ್ಪಷ್ಟಪಡಿಸುತ್ತದೆ.

7. "ಸಂಧ್ಯಮಠದಲ್ಲಿ ದೇವತ ವಿಗ್ರಹವನು ಪ್ರತಿಷ್ಠೆ ಮಾಡಿಸಿ ಕೊಳವ ಕಟ್ಟಿಸಿದರು."

ಅದೇ ಅಮಾನಿ ಕೆರೆಯ ಏರಿಯ ಭಾಗದಲ್ಲಿ ನಿರ್ಮಿಸಲಾದ ವಿಶಾಲವಾದ ಕಲ್ಲು ಮಂಟಪ; ಬಾಹ್ಮಣರ ಸಂಧ್ಯಾವಂದನೆಯ ವಿಧಿಗಾಗಿ ಮಾಡಿಸಿದ ಸಂಧ್ಯಾ ಮಂಟಪ.ಈಗ ಕಲ್ಲುಗಳು ಸಡಿಲಿ ಮಂಟಪ ಶಿಥಿಲವಾಗಿದೆ. ಅಲ್ಲಿ ಪ್ರತಿಷ್ಠೆಯಾಗಿದ್ದ ದೇವತಾವಿಗ್ರಹ ಯಾವುದೋ, ಅದು ಕೂಡ ಈಗ ಕಾಣುತ್ತಿಲ್ಲ. ಕೊಳ ಎಲ್ಲಿತ್ತು ತಿಳಿಯುವುದಿಲ್ಲ. ಸಮೀಪದ ಅರಳಿಕಟ್ಟೆಯ ಬಳಿಯಲ್ಲಿ ದೊಡ್ಡಯ್ಯನ ಮಗನ ಧರ್ಮಕಾರ್ಯವನ್ನು ದಾಖಲಿಸಿದ ಶಾಸನವೂ(ನಂ.17) ಎರಡೂ ಮಾಸ್ತಿಕಲ್ಲುಗಳೂ ಕಾಣುವಂತಿವೆ. ರಸ್ತೆಯ ಪಕ್ಕದ ನೆಲಮಾಳಿಗೆ ಮಂಟಪದಲ್ಲಿ ಶಾಸನಸಹಿತವಾದೊಂದು ಗಣಪತಿಯ ಮೂರ್ತಿಯಿದ್ದು, ಅದರ ವಿವರ ತಿಳಿಯಬೇಕಾಗಿದೆ. ಸಂಧ್ಯಾಮಂಟಪವೂ ಚನ್ನವೊಡೆಯನ ಧರ್ಮಕಾರ್ಯವಿರಬಹುದು.

8. "ಹುಲಿಮುಖದ ಚಾವಡಿಯಲ್ಲಿ ತಮ್ಮ ಕುಲಸ್ವಮಿ ಕಾತ್ತಿವೀರೇಶ್ವರ ಭದ್ರಕಾಳಂಮ ಮಾಚಳೇಶ್ವರದೇವಯಿಗಳ ಪ್ರತಿಷ್ಠೆಯ ಮಾಡಿಸಿದರು."

ಕೋಟೆಯ ದ್ವಾರಪ್ರದೇಶವೇ ಬಹುಶಃ ಹುಲಿಮುಖದ ಚಾವಡಿಯಿರಬಹುದು. ಅಲ್ಲಿಗೆ ಹೊಂದಿಕೊಂಡಂತಿರುವ, ವಿಶಾಲವಾದ ಕೊಳಕ್ಕೆ ಒಂದು ಮಗ್ಗುಲಲ್ಲಿರುವ ಮೂರು ಪ್ರತ್ಯೇಕವಾದ ದೇವತಾಮೂರ್ತಿಗಳನ್ನೇ ಇಲ್ಲಿ ಉದ್ದೇಶಿಸಿರಬಹುದು. ಇಲ್ಲಿಯ ಒಂದು ಮೂರ್ತಿ ಭದ್ರಕಾಳಮ್ಮನದು; ಮಯೂರವಾಹನವಾಗಿ ಪ್ರತಿಷ್ಠಿತವಾಗಿರುವ ಕಾರ್ತಿಕೇಯನ ಮೂರ್ತಿಯೇ ಕಾತ್ತಿವೀರೇಶ್ವನಿರಬಹುದು; ಮತ್ತೊಂದು ಮಾಚಳೇಶ್ವರ. ಈ ವಿಚಾರ ಇನ್ನೂ ವಿಶದಪಡಬೇಕು.

9. "ನಾಗಭಕ್ತೈಯಗಳ ಪ್ರತಿಷ್ಠೆಯ ಮಾಡಿ ಮಂಟಪವ ಕಟಿಸ್ತ ಸೇವೆ."

ಇದು ಚನ್ನರಾಯಪಟ್ಟಣದ ದಿಂಡಗೂರಿನಲ್ಲಿ ಮಾಡಿಸಿರುವ ಧರ್ಮಕಾರ್ಯ(ನಂ. 38/1651). ನಾಗಭಕ್ತಯ್ಯ ಯಾರೆಂದು ತಿಳಿಯದು. ಈತನ ವಿಗ್ರಹದ ಪ್ರತಿಷ್ಠೆ ಮತ್ತು ಮಂಟಪದ ನಿರ್ಮಾಣ ಇವನ್ನು ಇಲ್ಲಿ ಕುರಿತಿದೆ.

10. "ಲಕ್ಕಣ್ಣೈಯನವರ ಚಂದೈಯನವರ ಪ್ರತಿಷ್ಠೆ ಮಾಡಿ ನಿಲ್ಲಿಸಿದ ಸೇವೆ." ಇದು ಚನ್ನರಾಯಪಟ್ಟಣದ ಅಣತಿ ಗಾಮದ ಕೆರೆಯ ಹಿಂದೆ ಇರುವ ಸೋಮೇಶ್ವರ ದೇವಾಲಯಕ್ಕೆ ದಕ್ಷಿಣದ ಕಲ್ಲಿನ ಮೇಲಿರುವ ಶಾಸನದಲ್ಲಿ ಉಕ್ತವಾಗಿರುವ ಸೇವಾಕಾರ್ಯ(ನಂ.81/1651). ದೊಡ್ಡಯ್ಯನು ತನ್ನ ಸ್ವಾಧೀನಕ್ಕೆ ಚನ್ನರಾಯಪಟ್ಟಣ ಹವಾಲ ಆಗಿದ್ದಾಗ, ಆಣತಿ ಸೋಮೇಶ್ವರ ಸ್ವಾಮಿಯಲ್ಲಿ ಐಕ್ಯವಾದ ಎಂದರೆ ಮೃತರಾದ ಲಕ್ಕಣಯ್ಯ ಮತ್ತು ಚಂದಯ್ಯ ಎಂಬ ಇಬ್ಬರ ಮೂರ್ತಿಗಳನ್ನು 8–2–1651ರಲ್ಲಿ ಪ್ರತಿಷ್ಠೆ ಮಾಡಿಸಿದನು.[15]

ಚನ್ನರಾಯ ಪಟ್ಟಣದ ಗದ್ದೆ ರಾಮೇಶ್ವರ ದೇವಸ್ಥಾನದ ಶಾಸನ(ನಂ:11/1648)ದಲ್ಲಿ "ವಿಜೆಯಪುರದ ಪಾತ್ಸಾಹನವರ ರಾಜಕಾರ್ಯದಲ್ಲಿ ಕಲ್ಲ ಕೋಟೆಯ ಕಟಿಸಿದರು. ಮಟ ಮಂಟಪ ಸಂಧ್ಯಾಮಟ ಕೊಳ ಬಾವಿ ಬಸವನ ಕಂಬ ಉಯಿಯಾಲೆಯ ಕಂಬ ದೇವತ ವಿಘ್ರಹಯಿಷ್ಟನು ನಿಲಿಸಿದರು" ಎಂಬುದಾಗಿ ನವರಂಗ ಮಂಟಪದ ಪೂರ್ವದ ಕಡೆ ತೊಲೆಗಳ ಮೇಲೆ ಕೆತ್ತಲಾಗಿರುವುದು ಗಮನಾರ್ಹ. ಇದೇ ಒಕ್ಕಣೆಯ ವಿವರದ ಕಥನದಲ್ಲಿ ದೊಡ್ಡಯ್ಯನ ಕೈಕೆಳಗೆ ಪಾರುಪತ್ಯ ಮಾಡುತ್ತ ಇದ್ದ ಕಸಲಗೆರೆಯ ಸ್ಥಳದ ಕೆಂಪಣ್ಣಗೌಡ ಕೊಳ ಕಲ್ಲು ಮಂಟಪ ಮಾಡಿಸಿದ್ದನ್ನು ಹೇಳಿದೆ. ಇದೇ ಕಾಲದಲ್ಲಿ(1647) ಸ್ವತಃ ದೊಡ್ಡಯ್ಯ ಕಲ್ಲಿನ ಕೋಟೆ ಕಟ್ಟಿಸುತ್ತಿದ್ದ ಸಂಗತಿಯೂ ಅಲ್ಲಿಯೇ ಇದೆ. ಚೆಂನಪಟ್ಟಣದ ಸೀಮೆ ತುಂಗಣೆನಾಡ ಸ್ಥಳದ ಕಾನಕಾರನಹಳ್ಳಿಯ ಪ್ರಭು ದೊಡ್ಡಯ್ಯನವರು ಚೆಂನರಾಯಪಟಣದ ಕಲ್ಲ ಕೋಟೆಯ ಕಟ್ಟಿಸುವಲ್ಲಿ" ಎಂಬುದಾಗಿ ಹೇಳಿರುವ ಮಾತಿನಲ್ಲಿ ಕೋಟೆಯ ನಿಲ್ದಾಣದ ಕಾಲ 22–9.1647. ದೊಡ್ಡಯ್ಯನವರ ಧರ್ಮಕಾರ್ಯಗಳಲ್ಲಿ ಬಹುಪಾಲು ಕೆಲಸಗಳು 2.9.1647 ರಿಂದ 17.4.1648ರ ನಡುವೆ ತ್ವರಿತವಾಗಿ ನಡೆದಿದೆ. ಕೆಲವು 1651ರಲ್ಲಿಯೂ ಆಗಿವೆ.

ದೊಡ್ಡಯ್ಯ ಪ್ರಭುವಿನ ಮಕ್ಕಳು

ಕಂಠೀರವ ನರಸರಾಜ ಒಡೆಯರ ಕಾಲಾನಂತರದಲ್ಲಿ ಮುಂದಿನ ದೊರೆ ದೇವರಾಜ ಒಡೆಯರ (1659–73) ಆಳ್ವಿಕೆಯ ಕಾಲದಲ್ಲಿ ದೊಡ್ಡಯ್ಯನ ಮಕ್ಕಳ ಧರ್ಮಕಾರ್ಯಗಳು ಮುಂದುವರಿದಿವೆ.

ದೊಡ್ಡಯ್ಯ ಪ್ರಭುಗಳ ಮಗ ಬಸವಯ್ಯ ಪ್ರಭು ಜಂಬೂರು ಜಕ್ಕೇಶ್ವರಸ್ವಾಮಿಯ ದೇವಿ ಕಮಲಾಂಬಿಕೆ ಸೇವೆ ಮಾಡಿಸಿದ್ದನ್ನು ಈ ಶಾಸನ(ನಂ:43/1661)ದಲ್ಲಿದೆ ಇದೇ ಬಸವಯ್ಯ ಪ್ರಭುವಿನ ಶ್ರೇಯಸ್ಸಿಗಾಗಿ ಚನ್ನರಾಯಪಟ್ಟಣದ ಕೋಟೆಯ ಚನ್ನರಾಯಸ್ವಾಮಿಗೆ ದೀಪಮಾಲಾ ಕಂಬ ಒಪ್ಪಿಸಲಾದ ಶಾಸನ(ನಂ:4/1670)ವಾಗಿದೆ. ಇದೊಂದು ಶ್ರೇಯಸ್ಸಿನ ಪ್ರಾರ್ಥನೆ. ಚಂದ್ರಶೇಖರಸ್ವಾಮಿ ಮತ್ತು ಕಾಡು ಬಸವೇಶ್ವರ ಸ್ವಾಮಿ ಗುಡಿಗಳನ್ನು ಕಟ್ಟಿಸಿದವನು ಈ ಬಸವಯ್ಯನೇ ಎಂಬುದು ಶಾಸನ ಸಂಖ್ಯೆ:7/1663ರಲ್ಲಿ ತಿಳಿಯುತ್ತದೆ. ಈ ದೇವಸ್ಥಾನಗಳು ಈಗಲೂ ಸುಸ್ಥಿತಿಯಲ್ಲಿವೆ. ಚಂದ್ರಶೇಖರ ಸ್ವಾಮಿ ಗುಡಿ ಪ್ರಸಿದ್ಧವಾಗಿದ್ದು ಕ್ರಮವಾದ ಪೂಜಾವಿಧಿಗಳು ನಡೆಯುತ್ತಿವೆ.

ಈ ದೇವಾಲಯದಲ್ಲಿ ಶಾಸನ ಶಿಲೆ ಇದೆ. ಮೂರ್ತಿವಿಗ್ರಹ ನಿಂತ ನಿಲುವಿನಲ್ಲಿ ಕೆತ್ತಲಾಗಿದೆ. ದ್ವಾರದ ಎಡಬಲ ಭಕ್ತ ವಿಗ್ರಹಗಳಿವೆ. ಇವು ಒಂದು ದೊಡ್ಡದು ಮತ್ತೊಂದು ಚಿಕ್ಕದಾಗಿದೆ. ಇವುಗಳನ್ನು ಕ್ರಮವಾಗಿ ದೊಡ್ಡಯ್ಯ ಮತ್ತು ಬಸವಯ್ಯ ಎಂದು ಜನ ಈಗಲು ಬಸವಯ್ಯನ ಪಿತೃಭಕ್ತಿಯನ್ನು ಕೊಂಡಾಡುತ್ತಾರೆ.

ದೊಡ್ಡಯ್ಯನ ನಂತರ ಬಸವಯ್ಯನೇ ತಂದೆಗಿಂತ ಮೇಲಾಗಿ ಪ್ರಭಾವಶಾಲಿಯಾಗಿ ಮೆರೆದಿರುವುದಕ್ಕೆ ಆಧಾರಗಳು ಸಿಗುತ್ತವೆ. ಮೈಸೂರು ಜಿಲ್ಲೆ ಪಿರಿಯಾಪಟ್ಟಣದ ಬೆಟ್ಟದಪುರ ಬೆಟ್ಟದ ಅನ್ನದಾನಿ ಮಲ್ಲಿಕಾರ್ಜುನ ಸ್ವಾಮಿಯ ವರ ದೇವಾಲಯದ ಮುಂಭಾಗ ಗೋಪುರದ ಎದುರಿನ ನಂದಿ ಮಂಟಪದ ಒಳಗಿನ ಸುಂದರ ನಂದಿವಿಗ್ರಹವನ್ನು ಮಾಡಿಸಿದವಳು ಬಸವಯ್ಯನ ಪುಣ್ಯಸ್ತ್ರೀ ಉಪಪತ್ನಿ ಅಥವಾ ಸೂಳೆ ಎಂದು ಆ ವಿಗ್ರಹದ ಪೀಠದ ಮೇಲಿನ ಬರಹದಿಂದ ತಿಳಿದು ಬರುತ್ತದೆ. ಅದರ ಒಕ್ಕಣೆ:"ಶ್ರೀ ಶುಭಮಸ್ತು ಕಾನಿಕಾರನಹಳ್ಳಿಯ ಪ್ರಭು ದೊಡ್ಡಯ್ಯನವರ ಕೊಮೊರರು ಬಸವೈಯನ ವರ ಪುಂಣ್ಯಸ್ತ್ರೀ ಮುದ್ದು ಮಲ್ಲಾಜಮ್ಮನವರ ಮಂಟಪಕ್ಕೆ ಮಂಗಳ ಮಹಾಶ್ರೀ" ಎಂದಾಗಿದೆ. ಈ ಬರಹದ ಉಲ್ಲೇಖ ಎಪಿಗ್ರಾಫಿಯಾ ಕರ್ನಾಟಕದಲ್ಲಿ ಉಲ್ಲೆಖಗೊಂಡಿಲ್ಲವಂದು ಡಾ.ಟಿ.ವಿ.ವಿಯವರು ಗುರುತಿಸಿದ್ದಾರೆ. ಆದರೆ ಮೈಆರಿಯಲ್ಲಿ ದಾಖಲಾಗಿದೆ![16] ಇದೇ ನಂದಿ ಮಂಟಪದ ಈಶಾನ್ಯ ದಿಕ್ಕಿನಲ್ಲಿರುವ ಸ್ತಂಭದಲ್ಲಿ ಕೈಮುಗಿದು ನಿಂತಿರುವ ಉಬ್ಬು ಶಿಲ್ಪದ ಸ್ತ್ರೀವಿಗ್ರಹವೊಂದಿದ್ದು ಬಹುಷಃ ಅದು ಆಕೆಯದೇ ವಿಗ್ರಹ ಇರಬಹುದೆಂದು ಊಹಿಸಬಹುದಾಗಿದೆ. ಈ ಸ್ತ್ರೀವಿಗ್ರಹದ ಸ್ತಂಭಕ್ಕೆ ಎದುರಿನ

ಸ್ತಂಭದಲ್ಲಿ ಒಂದು ಹೆಣ್ಣು ಮತ್ತು ರಾಜಕುಮಾರನ ಪೋಷಾಕಿನಲ್ಲಿರುವ ಒಬ್ಬ ಹುಡುಗನ ಹೆಚ್ಚು ಸ್ಫುಟವಾದ ಉಬ್ಬುಶಿಲ್ಪವಿದೆ. ಇದು ಯಾರೆಂದು ತಿಳಿಯದು. ಆದರೆ ಬೆಟ್ಟದ ಬುಡದಲ್ಲೆ ಇರುವ ತೋರಣಸ್ತಂಭದ ನಿರ್ಮಾಣವಂತು ಮುದ್ದು ಮಲ್ಲಾಜಮ್ಮನದ್ದೇ ಎಂದು ಯತಿಳಿಯಲು ಪ್ರಬಲ ಸಾಕ್ಷಿಬರಹವಿದೆ. ಅಲ್ಲಿಯೇ ಮೇಲು ತೊಲೆಯಲ್ಲಿ ಕಂಡು ಬರುವ "ಶ್ರೀ ಅನ್ನದಾನಿ ಮಲ್ಲಿಕಾರ್ಜುನ ಸ್ವಾಮಿಯವರ ಶ್ರೀಪಾದಕೆ ಮುದ್ದು ಮಲ್ಲಾಜಮ್ಮನವರು ಮಾಡಿಸಿದಂಥಾ ತೋರಣದ ಸೇವೆಗೆ ಮಂಗಳಮಹಾಶ್ರೀ ಎಂಬ ಶಾಸನ ವಾಕ್ಯ ಸಹಕರಿಸುತ್ತದೆ. ಸ್ಥಳಿಯರು ಈತೋರಣ ಸ್ಥಂಭವನ್ನು 'ಸೂಳೆತೊರಣಗಂಬ' ಎಂದು ಅದರ ಬಲಭಾಗದ ಶಿಥಿಲಾವಸ್ಥೆಯ ಕೊಳವನ್ನು ಸೊಳೆಕೊಳವಂದು ಕರೆಯುವುದು ವಿಷೇಶವಾಗಿದೆ. ಆ ಕೊಳವನ್ನು ಮುದ್ದುಮಲ್ಲಾಜಮ್ಮಳೆ ನಿರ್ಮಿಸಿರಬಹುದು ಎಂದು ಊಹಿಸಬಹುದಾಗಿದೆ. ಇದೇ ಉಯ್ಯಾಲೆಕಂಬದಂತೆ ಅದೇ ಊರಿನ ಒಳಗೇರಮ್ಮ ಗುಡಿಯ ಮುಂದಿನ ಉಯ್ಯಾಲೆ ಕಂಬವೂ ಹೋಲುವಂತಿರುವುದರಿಂದ ಅದರ ಈ ಪುಣ್ಯಸ್ತ್ರೀ ಇವರಿಬ್ಬರ ಧರ್ಮಕಾರ್ಯ ಗುಣವೇ ಕಲಸ ಮಾಡಿರಬಹುದು.

ಕಾನಕಾನಹಳ್ಳಿಗೊ ದೂರದ ಚನ್ನರಾಯಪಟ್ಟಣಕ್ಕು ಎಲ್ಲಿಂದೆಲ್ಲಿಯ ಸಂಬಂಧ ಎಂದು ಅನ್ನಿಸಬಹುದು. ವಲಸೆ ಕ್ರಿಯೆ ಆ ಕಾಲದಲ್ಲೂ ಅನೇಕ ಕಾರಣಗಳಿಂದ ಕಾಲುನಡುಗೆ, ಕುದುರೆ, ಗಾಡಿಯ ಮುಖಾಂತರ ಸ್ಥಳಾಂತರ ಸಾಧ್ಯತೆಯೂ ಇರಬಹುದು. ಅಥವಾ ವ್ಯವಸಾಯದ ಕೂಲಿಕಾರ್ಮಿಕರಾಗಿ, ಕೃಷಿಕರಾಗಿ ಭೂಮಿ ಹುಡುಕುತ್ತ ಹೊರಟಿರಬಹುದು, ಅಥವಾ ಕಂಠೀರವ ನರಸರಾಜರ ಕಾಲಕ್ಕಿಂತ ಮುಂಚೆಯೇ ದೊಡ್ಡಯ್ಯ ಪ್ರಭುಗಳು ಪೂರ್ವಿಕರು ರಾಜಾಜ್ಞೆಯನುಸಾರ ಅನುಭವಯೋಗ್ಯವಾದ ಅರ್ಹತೆ ಆಧಾರದ ಮೇಲೆ ನೇಮಕವಾಗಿರಬಹುದು. ಇವೆಲ್ಲಾ ವಿಜಯನಗರದ ಪತನಾನಂತರ ನಡೆದಿರಬಹುದೆಂದು ಊಹಿಸಬಹುದು.

ಸ್ವಾತಂತ್ರ್ಯ ಯೋಧರಾದ ಸರ್ದಾರ್ ಕೆ.ಎಂ.ವೆಂಕಟರಾಮಯ್ಯನವರು ತಮ್ಮ ಆತ್ಮಕಥೆ (ಪುಟ:10) ಯಲ್ಲಿ ನಮ್ಮ ಪೂರ್ವಿಕರು ಚನ್ನರಾಯಪಟ್ಟಣದಿಂದ ಬಂದವರೆಂದು ಈಸ್ಟ್ ಇಂಡಿಯಾ ಕಂಪನಿ ಆಡಳಿತಾವಧಿಯಲ್ಲಿ ತಮ್ಮ ಪೂರ್ವಿಕರೊಬ್ಬರ ಸೋದರ ಮಾವ ನಾರಾಯಣಪ್ಪ ಎನ್ನುವವರು ಕಾನಕಾನಹಳ್ಳಿಯ ಹೊರವಲಯದಲ್ಲಿ ಒಂದು ಕೆರೆಕಟ್ಟಿಸಿದರು ಎಂದು ಹೇಳಿದ್ದಾರೆ. ಆ ಕೆರೆ ಈಗಲೂ ಇದೆ. ಏನೇ ಇರಲಿ ಈ ಕಾನಕಾನಹಳ್ಳಿ ಪ್ರಭುಗಳ ವಂಶಸ್ಥರು ಚನ್ನಾರಾಯಪಟ್ಟಣಕ್ಕೆ ಕಾನಕಾನಹಳ್ಳಿಯಿಂದ ವಲಸೆ ಬಂದಿರಬಹುದಾಗಿದೆ. ಹಾಗೆಯೇ ಅವರ ವಂಶಸ್ಥರೂ ಕಾನಕಾನಹಳ್ಳಿಗೂ ಬಂದಿರಬಹುದು. ಯಾವುದೇ ಆಡಳಿತ ಸಂಬಂಧ ಇವರೀರ್ವರ ನಡುವೆ ಇಲ್ಲದಿದ್ದರೂ, ಸಾಮಾಜಿಕವಾಗಿ ವಾಂಶಿಕವಾಗಿ ಸಂಬಂಧವಿರಬಹುದೆಂದು ಊಹಿಸಬಹುದಾಗಿದೆ.

ಟಿಪ್ಪಣಿಗಳು

1 ಕವಿ ವಿಶ್ವಕೋಶ ಸಂ. 2 ಪುಟ: 589/90.

2 ಕಾನಕಾನಹಳ್ಳಿ ಚರಿತ್ರೆ ಡಾ. ಟಿ.ವಿ.ವಿ. ಪುಟ. 38/2007

3 MAR : 1908 : Note : 57/1973 ed Page : 53, R Narasimhachar

4 ಕಾನಕಾನಹಳ್ಳಿ ಚರಿತ್ರೆ ಡಾ. ಟಿ.ವಿ.ವಿ. ಪುಟ. 39/2007

5 ಅದೇ ಪುಟ 40

6 ಅದೇ ಪುಟ 41

7 ಮೈಸೂರು ಔಷಧಿ ಗಿಡಗಳು

8 ಚನ್ನಪಟ್ಟಣದ ಪಾಳೇಗಾರರು ಲೇ: ಎಂ.ವಿ. ಶ್ರೀನಿವಾಸ್ ಪು:307

9 ಕಾನಶನ ಹಳ್ಳಿ ಚರಿತ್ರೆ ಲೇ: ಡಾ. ಬಿವಿವಿ ಪು: 49

10 ಕಾನಕಾನಹಳ್ಳಿ ಚರಿತ್ರೆ ಲೇ: ಡಾ.ಟಿ.ವಿ.ವಿ ಪುಟ : 53/54

11 ಕಾನಕಾನ ಹಳ್ಳಿ ಚರಿತ್ರೆ: ಲೇ ಡಾ.ಟಿವಿವಿ ಪುಟ:53

12 ಕಾನಕಾನಹಳ್ಳಿ ಚರಿತ್ರೆ ಲೇ: ಡಾ. ಟಿ.ವಿ.ವಿ.ಪು:54

13 ಕಾನಕಾನಹಳ್ಳಿ ಚರಿತ್ರೆ ಲೇ: ಡಾ. ಟಿ. ವಿ.ವಿ.ಪುಟ:54

14 ಕಾನಕಾನಹಳ್ಳಿಯ ಚರಿತ್ರೆ ಪುಟ 55

15 ಕಾನಕಾನಹಳ್ಳಿ ಚರಿತ್ರೆ ಲೇ: ಡಾ.ಟಿ.ವಿ.ವಿ.ಪು:57/58

16 ಎಂ ಎ ಆರ್ 1913 ಪಿ ಬಿ 1944 ಪಿ ಪಿ 29–34

ಅಧ್ಯಾಯ – 5

ಪ್ರವಾಸಿ ಕಂಡ ಕಾನಕಾನಹಳ್ಳಿ

ಬುಕ್‌ನ್ಯಾನ್ ಹ್ಯಾಮಿಲ್ಟನ್ ಫ್ರ್ಯಾನ್ಸಿಸ್ (1762 – 1829)

ಭಾರತದಲ್ಲಿದ್ದ ಬ್ರಿಟಿಷ್ ವೈದ್ಯ 1762ರ ಫೆಬ್ರವರಿ 15 ರಂದು ಎಡಿನ್‌ಬರೊನಲ್ಲಿ ಜನಿಸಿದ. 1783ರಲ್ಲಿ ಎಮ್.ಡಿ. ಪದವಿಯನ್ನು ಪಡೆದ 1794ರಲ್ಲಿ ಈಸ್ಟ ಇಂಡಿಯಾ ಕಂಪನಿಯಲ್ಲಿ ಸೇವೆಯನ್ನು ಸ್ವೀಕರಿಸಿ, ಕೋರ್ಟ್ ಆಫ್ ಆವಾ ನಿಯೋಗದ ಸದಸ್ಯ, ಕಂಪನಿಯ ವಶಕ್ಕೆ ಬಂದಿದ್ದ ಪ್ರದೇಶಗಳ ವಸ್ತು – ಸ್ಥಿತಿ ಪರಿಶೀಲಕ. ಕಲ್ಕತ್ತಾದ ಸಸ್ಯಶಾಸ್ತ್ರೀಯ ತೋಟದ ಮೇಲ್ವಿಚಾರಕ, ಲಾರ್ಡ್ ವೆಲ್ಲಿಸ್ಲಿಯ ಸರ್ಜನ್ – ಇತ್ಯಾದಿ ಹಲವು ಕಾರ್ಯಗಳನ್ನು ನಿರ್ವಹಿಸಿದ.

ಇತ 1800 – 1801 ರಲ್ಲಿ ಮೈಸೂರು, ಕೆನರಾ (ಉತ್ತರ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ ಪ್ರದೇಶ) ಮತ್ತು ಮಲಬಾರ್‌ಗಳಲ್ಲಿ ಸಂಚಾರ ಮಾಡಿ ಈ ಪ್ರದೇಶದ ಸಸ್ಯ ಪ್ರಾಣಿ ಜನ ಸಂಪತ್ತು, ಸಾಮಾಜಿಕ ಸಾಂಸ್ಕೃತಿಕ ಸ್ಥಿತಿ, ಆಗಿನ ಆಗುಹೋಗುಗಳು ಮೊದಲಾದ ಹಲವು ವಿಷಯಗಳ ಬಗ್ಗೆ ಮಾಹಿತಿಗಳನ್ನು ಕಲೆ ಹಾಕಿದ. ಇವನ್ನು ಒಳಗೊಂಡ ಇವನ ಉದ್ಗ್ರಂಥ ರಿಪೋರ್ಟ್ ಆಫ್ ಎ ಜರ್ನಿ ಥ್ರೂ ಮೈಸೂರ್, ಕೆನರಾ ಅಂಡ್ ಮಲಬಾರ್ ಸಮಕಾಲೀನ ಕರ್ನಾಟಕದ ರಾಜಕೀಯ, ಸಾಮಾಜಿಕ, ಆರ್ಥಿಕ ಇತಿಹಾಸದ ಅಧ್ಯಯನಕ್ಕೆ ಅತ್ಯಂತ ಉಪಯುಕ್ತವಾಗಿದೆ.[1]

ಫ್ರಾನ್ಸಿಸ್ ಬುಕನನ್ ಕಾನಕಾನಹಳ್ಳಿ ಭೇಟಿ

ಬಹುಮುಖ ಪ್ರತಿಭೆ ಬುಕನನ್ ರವರನ್ನು, ಕಲ್ಕತ್ತೆಯ ಈಸ್ಟ್ ಇಂಡಿಯಾ ಕಂಪನಿಯ ಕೇಂದ್ರವು ಟಿಪ್ಪು ಸುಲ್ತಾನನ ಪತನಾನಂತರ, ಅಲ್ಲಿನ ಸ್ಥಳೀಯ ವಿದ್ಯಾಮಾನಗಳ ಅಧ್ಯಯನಕ್ಕೆ ಆದೇಶ ನೀಡಿ ನೇಮಿಸಿತು. ಈ ಆದೇಶದಂತೆ, ಕಂಪನಿಯ ವಶಕ್ಕೆ ಬಂದಿದ್ದ ಪ್ರದೇಶಗಳಲ್ಲಿ ಪ್ರವಾಸ ಕೈಕೊಂಡು, ವಸ್ತು ಸ್ಥಿತಿಯನ್ನು ಪರಿಶೀಲಿಸಿ ವರದಿ ಮಾಡಲು ಪ್ರವಾಸ ಕೈಕೊಂಡು, ವಸ್ತು ಸ್ಥಿತಿಯನ್ನು ಪರಿಶೀಲಿಸಿ ವರದಿ ಮಾಡಲು ಮೈಸೂರು ಪ್ರಾಂತ್ಯಕ್ಕೆ 1800 – 1801 ರಲ್ಲಿ ಬಂದಿಳಿದನು. ಉತ್ತರ ಮತ್ತು ದಕ್ಷಿಣ ಕರಾವಳಿ ಪ್ರದೇಶಗಳ, ಮಲಬಾರ್ ಪ್ರಾಂತ್ಯದಲ್ಲಿ ಪ್ರವಾಸ ಕೈಗೊಂಡನು.

ಈ ಪ್ರದೇಶಗಳ ಭೌಗೋಳಿಕ, ಸಾಮಾಜಿಕ, ಐತಿಹಾಸಿಕ ಪುರಾತತ್ವ ವಿಚಾರಗಳನ್ನು ಮೈಸೂರು ಒಡೆಯರ ಆಳ್ವಿಕೆಯ, ಸ್ಥಳಗಳು ಕಂಪನಿಯವರು ಟಿಪ್ಪುವಿನಿಂದ ವಶಪಡಿಸಿಕೊಂಡ ಪ್ರದೇಶಗಳಲ್ಲಿಯೂ ಸಂಚಾರ ಮಾಡಿ ಮಾಹಿತಿ ಸಂಗ್ರಹಿಸುವುದು ಅವನ ಉದ್ದೇಶವಾಗಿತ್ತು. ಇಲ್ಲಿಯ ಜನರ ಕೃಷಿ,ಕಲೆಗಳು, ವಾಣಿಜ್ಯ ವ್ಯವಹಾರ, ಧಾರ್ಮಿಕ ನಂಬಿಕೆಗಳು, ಅವರ ಸ್ವಭಾವ, ಆಚರಣೆಗಳು ಅವನು ಗ್ರಹಿಸುವ ವಿಷಯಗಳನ್ನು ಸಂಗ್ರಹಿಸಿ ಒಂದು ಪುಸ್ತಕವನ್ನೆ ಬರೆದು ಕ್ರಿ.ಶ. 1807ರಲ್ಲಿ ಮೊದಲಿಗೆ ಪ್ರಕಟಗೊಂಡು, ಕ್ರಮವಾಗಿ 1812, 1870 ನೇ ಇಸವಿಯಲ್ಲಿ ದ್ವಿತೀಯ ಮತ್ತು ತೃತೀಯ ಮುದ್ರಣವನ್ನು ಕಂಡಿತು.ಆ ಕೃತಿಯ ಹೆಸರು **"ಎಜನ್ರಿ ಫ್ರಮ್ ಮದ್ರಾಸ್ ತ್ರೂದಿ ಕಂಟ್ರೀಸ್ ಆಫ್ ಮೈಸೂರ್ ಅಂಡ್ ಮಲಬಾರ್"**.

ಎರಡು ಶತಮಾನಗಳ ಹಿಂದೆ ಕಾನಕಾನಹಳ್ಳಿಯ ವಿದ್ಯಾಮಾನಗಳನ್ನು ತಿಳಿಯಲು ಇದೊಂದು ಮಹತ್ತರ ದಾಖಲೆಯಾಗಿದೆ. ಕ್ರಿ.ಶ. 1800ರ ಜೂನ್ 4 ರಂದು ಶ್ರೀರಂಗಪಟ್ಟಣದಿಂದ ಹೊರಟು, ಜನರನ್ನು ಸಂದರ್ಶಿಸುತ್ತ ನೋಡುತ್ತಾ, ಗ್ರಹಿಸುತ್ತಾ ಆಗುವ ಅನುಭವಗಳನ್ನು ದಾಖಲಿಸಿಕೊಳ್ಳುತ್ತಾ ಅದೇ ಜೂನ್ 11 ರಂದು ಕಾನಕಾನಹಳ್ಳಿಗೆ ಬಂದು ತಂಗಿದನು. ಜೂನ್ – 12ರಲ್ಲೂ ತನ್ನ ಇರುವಿಕೆಯನ್ನು ಮುಂದುವರಿಸಿ ಅಲ್ಲೆ ಉಳಿದುಕೊಂಡು ಸ್ಥಳೀಯ ಇತಿಹಾಸದ ಜೊತೆಗೆ ಕೃಷಿ ಸಂಬಂಧವಾದ ಅನೇಕ ವಿಚಾರಗಳನ್ನು ಸ್ಥಳದ ಸರ್ಕಾರಿ ಅಧಿಕಾರಗಳ ಸಹಾಯದಿಂದ ಸಂಗ್ರಹಿಸಿಕೊಂಡನು. ಜೂನ್ – 12 ಮರಳವಾಡಿಗೆ ತೆರಳಿ, ಅಲ್ಲಿಂದ ಕಾಡು ಹಾದಿಯ ಮೂಲಕ ಈಗ ತಮಿಳುನಾಡಿಗೆ ಸೇರಿದ ತಳಿ ಎಂಬ ಗ್ರಾಮ ದತ್ತ ಹೊರಟನು. ಈ ತಳಿ ಗ್ರಾಮ ಆಗ ಕನ್ನಡ ನಾಡಿಗೇ ಸೇರಿತ್ತು.

ಆ ಎರಡು ದಿನಗಳ ದಿನಚರಿ ಸಂಕ್ಷಿಪ್ತವಾಗಿ ಹೀಗೆ ಸಂಗ್ರಹಿಸಬಹುದು.

ಜೂನ್ – 10 : ನಾನು, ಎರಡು ಸುಲ್ತಾನಿ ಕ್ರೋಶಗಳನ್ನು (ಸು. ಏಳು ಮೈಲಿ, ಪ್ರಯಾಣಿಸಿ ಸಾತನೂರು ಸೇರಿದೆ. ರಸ್ತೆಯ ಎರಡೂ ಕಡೆ ಬೆಟ್ಟಗಳು ಬುಡದಲ್ಲಿ ವಿಶಾಲವಾದ ಕಣಿವೆಗಳು. ಮಣ್ಣು

ಸಾಮಾನ್ಯವಾಗಿದ್ದು, ಬಹುಭಾಗ ಸಮತಟ್ಟದ ಭಾಗಗಳೂ ಕುರುಚಲು ಗಿಡಗಳು ಪೊದೆಗಳಿಂದ ಕೂಡಿದ್ದವು. ಗೋಪಾಲ ದುರ್ಗದಿಂದ (ಈಗಿನ ಬಸವ ಬೆಟ್ಟ) ಸಾತನೂರು ಒಂದು ಕ್ರೋಶದಷ್ಟು ದೂರ. ಇದೊಂದು ವಿಶಾಲವಾದ ಬಡಹಳ್ಳಿ. ಸುಮಾರು 30 ಮನೆಗಳಿದ್ದು, 10 ಮುಸಲ್ಮಾನರಿಗೆ ಸೇರಿದ್ದವು. ಇವರೂ ಕೃಷಿ ಅವಲಂಬಿಸಿದವರು. ಸಾರ್ವಜನಿಕ ಲೆಕ್ಕದ ಪ್ರಕಾರ ಸಾತನೂರು ಉಸೂಲ್ ಗ್ರಾಮ (ಹೋಬಳಿ ಗ್ರಾಮ). ಇಂಡಿಯಾದ ವಿಷಯದಲ್ಲಿ ನಾವು ಈ ದೊಡ್ಡ ದೊಡ್ಡ ಪದಪ್ರಯೋಗದ ಬಗ್ಗೆ ಎಚ್ಚರಿಕೆ ಇರಬೇಕು. ಇಲ್ಲಿ ಗೌಡ ಎಂಬ ಮುಖ್ಯ ಮನುಷ್ಯ ನೋಡಿರುವವರೆಲ್ಲಾ ಒಬ್ಬ ಬಡಪಾಯಿ ಪ್ರಾಣಿ. ಸಾತನೂರಿನಿಂದ ಅರ್ಧ ಕ್ರೋಶ ದೂರದಲ್ಲಿ ಒಂದು ಕಬ್ಬಿಣದ ಕುಲುಮೆ ಇದೆ.

ಜೂನ್ – 11 : ಮುಂದೆ ನಾನು ಮೂರು ಕ್ರೋಶ (ಸು. 10 – 11 ಮೈಲಿ) ದಾರಿ ಸಾಗಿ ಕಾಣಿಕಾರ್ನಹಳ್ಳಿ ತಲುಪಿದೆ. ಇದನ್ನು ಜನ ಕಾನ್‌ಕಾನ್‌ಹಳ್ಳಿ ಎಂದು ಕರೆಯುತ್ತಾರೆ. ಇವುಗಳಲ್ಲಿ ಮೊದಲಿನ ಹೆಸರೇ ಸರಿಯಾದದ್ದೆಂದು ಇಲ್ಲಿಯ ಸ್ಥಳೀಯರು ಒಟ್ಟಾಗಿ ತಿಳಿಸಿದ್ದಾರೆ. ಕಾಣಿಕಾರ ಎಂಬುವರ ಷಷ್ಠೀ ವಿಭಕ್ತಿ ರೂಪವೇ ಕಾಣಿಕಾರ್ನ ಎಂದು ಹೇಳುತ್ತಾರೆ. ತಮಿಳಿನಲ್ಲಿ ಇದರ ಅರ್ಥ ಭೂಮಿಯ ಮಾಲೀಕ (ಜಮೀನ್ದಾರ) ಎಂದಾಗುತ್ತದೆ. ಹಳ್ಳಿ ಎಂದರೆ, ಕನ್ನಡ ಭಾಷೆಯಲ್ಲಿ ಗ್ರಾಮ. ನಾನು ಬಂದ ದಾರಿಯ ಒಂದು ಕಣಿವೆ ಇದೆ. ಇದು ಕೆಲವು ಕಡೆ ಕಿರಿದಾಗಿ ಬೆಟ್ಟಗುಡ್ಡಗಳಿಂದ ಕೂಡಿದೆ. ಕೆಲವು ಕಡೆ ಅಗಲವಾಗಿದೆ. ಭಾಗಷಃ ಬೇಸಾಯ ಮಾಡುತ್ತಾರೆ. ಈ ಪ್ರದೇಶ ಚಿಕ್ಕ ಚಿಕ್ಕ ಕುಳ್ಳ ಮರಗಳಿಂದ ತುಂಬಿ ಹೋಗಿದೆ. ಇಲ್ಲಿನ ಸುತ್ತಮುತ್ತಲ ಬೆಟ್ಟಗಳು ವಿಶೇಷವಾದ ಕಲ್ಲುಗಳಿಂದಲೂ ಬಂಡೆಗಳಿಂದಲೂ ತುಂಬಿ. ಅವುಗಳಲ್ಲಿ ಹುಲಿಗಳು ಸೇರಿಕೊಂಡಿವೆ ಎಂದು ಹೇಳುತ್ತಾರೆ.[2]

ಕಾನಕಾನಹಳ್ಳಿಗೆ ಒಬ್ಬ ಅಮಲ್ದಾರನಿದ್ದನು. ಈ ಊರಿನಲ್ಲಿ ಕೋಟೆ ಇದೆ. ಇದು ಚನ್ನಪಟ್ಟಣದ ಜಗದೇಕರಾಯ ಕಟ್ಟಿಸಿದ ಕೋಟೆ. ಆ ಕಾಲದಲ್ಲಿ ಈ ಪ್ರಬಲ ಪಾಳೆಗಾರ. ಇವನ ಮುಂದಿನ ಸಂತತಿಯವನಾದ ಚನ್ನಪಟ್ಟಣದ ಇಮ್ಮಡಿ ಅಂಕುಶರಾಯನು ಕ್ರಿ.ಶ.1646ರಂದು ಶಾಸನ ಹಾಕಿಸಿದ. ಹಿಂದೂ ಶಕೆ 1546ಕ್ಕೆ ಸಮ. ಈ ಶಾಸನ ಬ್ರಾಹ್ಮಣನೊಬ್ಬನಿಗೆ ಭೂಮಿದಾನ ಮಾಡಿದ ವಿಷಯ ತಿಳಿಸುತ್ತದೆ. ಆಗ್ಗೆ ಪೆನುಗೊಂಡೆಯಲ್ಲಿ ಶ್ರೀರಂಗರಾಯನ ಮಗ ಶ್ರೀರಾಮದೇವ ಎಂಬುವನು ಇದ್ದನು. ಇದು ವಿಜಯನಗರ ಸಾಮ್ರಾಜ್ಯದ ಪತನಾನಂತರ 35 ವರ್ಷಗಳ ಬಳಿಕ ನಡೆದ ಘಟನೆ.[3]

ಆನಂತರ, ಈ ಊರು ಜಗದೇಕರಾಯನ ಸಂತತಿಯವರ ಕೈಯಿಂದ ಮೈಸೂರು ದೊರೆಗಳ ಹಿಡಿತಕ್ಕೆ ಸೇರಿತು. ದೇವಸ್ಥಾನವೊಂದರ ಎರಡು ಶಾಸನಗಳಲ್ಲಿ ಒಂದು ಚಿಕ್ಕದೇವರಾಯ ಒಡೆಯನ ಮತ್ತೊಂದು ದೇವರಾಯ ಒಡೆಯನ ಕಾಲದ್ದು. ಅದು ಹಿಂದೂ ಶಕೆ 1589ಕ್ಕೆ ಸೇರಿದ್ದು. ದೇವರಾಯನು ಇಲ್ಲಿನ ಜಂಗಮ ಮಠಕ್ಕೆ ಭೂದಾನ ಮಾಡಿದನು. ಮೈಸೂರು ಅರಸುಮನೆತನದ ಎಲ್ಲಾ ಹೆಂಗಸರೂ

ಲಿಂಗ ಧರಿಸುತ್ತಾರೆ. ದೊರೆ ಮಾತ್ರ ತಾನು ಶ್ರೀ ವೈಷ್ಣ ಬ್ರಾಹ್ಮಣರ ಅನುಯಾಯಿ ಎಂದು ಹೇಳಿಕೊಳ್ಳುತ್ತಾನೆ. ಮೈಸೂರಿನ ದೊರೆ ಕೃಷ್ಣರಾಯ ಇಲ್ಲಿಯ ಪ್ರಾಚೀನವಾದ ದೇವಾಲಯವೊಂದನ್ನು ಪುನರ್ ನಿರ್ಮಿಸುತ್ತಾನೆ. ಇದರ, ಐತಿಹ್ಯವೇನೋ ಇದನ್ನು ಶ್ರೀ ರಾಮಾಯಣ ಕರ್ತೃ ವಾಲ್ಮೀಕಿ ನಿರ್ಮಿಸಿದನು ಎಂದು ಹೇಳುತ್ತದೆ.

ಈ ಊರನ್ನು ಲಾರ್ಡ್ ಕಾರನ್‌ವಾಲೀಸ್ ಮುತ್ತಿಗೆ ಹಾಕುವ ಮೊದಲು ಇದು ಪೂರ್ತಿ ಬೇಸಾಯದ ಭೂಮಿ. ಬ್ರಿಟಿಷ್ ಸೈನ್ಯಕ್ಕೆ ಸಹಾಯ ದೊರೆಯಬಾರದೆಂದು ಟಿಪ್ಪು ಇದನ್ನು ಹಾಳು ಮಾಡಿದನು. ಕರ್ನಲ್ ರೀಡನ್ ಆಹ್ವಾನದ ಮೇರೆಗೆ ಬಂದ ಆನೇಕಲ್ಲು ಪಾಳೆಗಾರರು ಈ ಊರನ್ನು ಸೂರೆ ಮಾಡಿದರು. ಅಮಲ್ದಾರನ ಲೆಕ್ಕದಲ್ಲಿ ಇಲ್ಲಿನ 2/5 ಭಾಗ ಭೂಮಿ ಪಾಳು ಬಿದ್ದಿದೆ.ಇಲ್ಲಿನ ಕಡಿಮೆ ಜನಸಂಖ್ಯೆಯ ಕಾರಣಕ್ಕೆ ಇಲ್ಲಿನ ಕಾಡುಮೃಗಗಳು ಹೆಚ್ಚಿಕೊಂಡಿವೆ. ಸುಲ್ತಾನನ ಕಡೆಯ ಎರಡು ವರ್ಷಗಳಲ್ಲಿ ಕಾಡಿನಿಂದ ನುಗ್ಗಿಬಂದ ಹುಲಿಗಳು ಸುಮಾರು 80 ಜನರನ್ನು ಬಲಿತೆಗೆದುಕೊಂಡಿವೆ. ಈ ಕೋಟೆ ಭದ್ರಪಡಿಸಿದ್ದ ಕಾರಣಕ್ಕೆ ಜನ ನೆಮ್ಮದಿಯಿಂದ ನಿದ್ರಿಸುವಂತಾಗಿದೆ.

ಈ ವಿನಾಶಕಾರಿ ಪ್ರಾಣಿಗಳನ್ನು ತಡೆಯಲು ಊರುಗಳ ಸುತ್ತ ತಂತಿ ಬೇಲಿಗಳನ್ನು ಹಾಕ್ಕಿದ್ದಾರೆ. ಜನರಲ್ ಹ್ಯಾರಿಸ್ ನೇತೃತ್ವದಲ್ಲಿ ಬ್ರಿಟಿಷ್ ಸೈನ್ಯ ಸಮೀಪಿಸಿದಾಗ ಟಿಪ್ಪು ಈ ಊರನ್ನು ಸುಟ್ಟನು. ಈ ಒಳ್ಳೆಯ ಅವಕಾಶವನ್ನು ಇಲ್ಲಿನ ದೇವಾಲಯವನ್ನು ಹಾಳುಗೆಡವಲು ಬಳಸಿ ಕೊಂಡನು. ದೇವಾಲಯದ ಮಂಟಪ ಕೆಡವಿ ಮಹಾದ್ವಾರ ಗುಡಿ ಮಾತ್ರ ಉಳಿದುಕೊಂಡವು. ಇವನ್ನು ಹಾಳು ಮಾಡಲು ಜನ ಧೈರ್ಯ ಮಾಡಿರಲಾರರು.

ಈಗ ಕಾನಕಾನಹಳ್ಳಿ ಊರಿನಲ್ಲಿ ಇನ್ನೂರು ಮನೆಗಳು ಮಾತ್ರ ಇವೆ. ಲಾರ್ಡ್ ಕಾರನ್ ವಾಲೀಸ್‌ನ ಮುತ್ತಿಗೆಯ ಕಾಲಕ್ಕೆ ಇಲ್ಲಿ 500 ಮನೆಗಳಾದರೂ ಇದ್ದಿರಬೇಕು. ಈ ಊರು ಅರ್ಕಾವತಿ ನದಿಯ ಪಶ್ಚಿಮದ ದಂಡೆಯ ಮೇಲಿದೆ. ಈ ಅರ್ಕಾವತಿ ನದಿ, ನಂದಿಬೆಟ್ಟದಿಂದ ಹುಟ್ಟಿ ದೊಡ್ಡಾಬಳ್ಳಾಪುರಕೆರೆ ಮೂಲಕ ಹಾದು ಮಾಗಡಿ, ರಾಮಗಿರಿ(ಈಗಿನ ರಾಮನಗರ) ಮೂಲಕವಾಗಿ ಮುನ್ನಡೆದು ಕಾನಕಾನಹಳ್ಳಿಗೆ 6 ಕ್ರೋಶ(ಸುಮಾರು ಇಪ್ಪತ್ತು ಮೈಲಿ) ದೂರದಲ್ಲಿ ಕಾವೇರಿ ನದಿಗೆ ಸೇರುತ್ತದೆ. ಬೇಸಿಗೆಯ ಮೂರು ತಿಂಗಳು ಈ ನದಿಯಲ್ಲಿ ನೀರಿನ ಹರಿವಿಲ್ಲ. ಆದರೆ ಅಗೆದರೆ ಒಳ್ಳೆಯ ನೀರು ಸಿಗುತ್ತದೆ.

12ನೇ ತಾರೀಕು ನಾನು ಶ್ರೀರಂಗಪಟ್ಟಣ ಬಿಟ್ಟ ಮೇಲಿನಿಂದ ನನ್ನ ಆರೋಗ್ಯ ಸರಿ ಇರಲಿಲ್ಲ. ಚಳಿ ಜ್ವರದಿಂದ ನರಳಿದೆ. ಔಷಧಿ ತೆಗೆದುಕೊಳ್ಳಲು ಇವನು ಇಲ್ಲೆ ನಿಂತೆ. ಕೃಷಿಯ ಸ್ಥಿತಿಗತಿಗಳನ್ನು ತಿಳಿಯಲು ಈ ಸಮಯವನ್ನು ಉಪಯೋಗಿಸಿಕೊಂಡೆ. ಇದಕ್ಕೆ ಸ್ಥಳಿಯ ಅಮಲ್ದಾರು ನನಗೆ ಸಹಾಯ ಮಾಡಿದನು.

ಗ್ರಾಮಗಳು

ಇಂಡಿಯಾದಲ್ಲಿ ಬೇಸಾಯ ಮಾಡಲು ಅವರಿಗೆ ಇದ್ದ ದೊಡ್ಡ ಅಡ್ಡಿ ಎಂದರೆ, ವಾಸದ ಮನೆಗಳಿಗೂ, ಹೊಲಗದ್ದೆಗಳಿಗೆ ದೂರ ಇರುವುದು. ಗೊಬ್ಬರದ ಕೊರತೆ, ಕಡಿಮೆ ಪ್ರಮಾಣದ ಉದ್ವಾದಕತೆ, ಹಾಗು ಕನಿಷ್ಠ ಕಂದಾಯ ಪಾವತಿ. ಇಲ್ಲಿಯ ಭೂಮಿಯ ಗುಣವನ್ನು ಕಂದಾಯವೇ ನಿರ್ಧರಿಸಿದ್ದರೂ ಪ್ರತೀ ಜಮೀನಿಗೂ ಒಂದೇ ತರಹದ ಬೆಲೆ. ಕಾಲು ಭಾಗದಷ್ಟು ಬೆಲೆಯನ್ನು ಹಳ್ಳಿ ಯಿಂದ ದೂರದ ಭೂಮಿಗೆ ನೀಡದಿರುವುದು, ಹಳ್ಳಿಗಳಿಗೆ ಹತ್ತಿರವಿರುವ ಜಮೀನಿನ ಬೇಸಾಯಕ್ಕೆ ಈಗಿರುವ ಕೃಷಿಕರ ಸಂಖ್ಯೆ ಸಾಲದಿರುವುದು ಸತ್ಯ ಸಂಗತಿ.

ಕೂಲಿ

ಬಹುಪಾಲು, ಬೇಸಾಯವನ್ನು ಮೂಲ ರೈತ ಕಸುಬಿನ ಕುಟುಂಬದವರೇ ಸ್ವತಃ ಮಾಡುತ್ತಾರೆ. ಕೆಲಸ ಹೆಚ್ಚಿದಾಗ ಕೆಲವು ಕೂಲಿ ಆಳುಗಳನ್ನು ನೇಮಿಸಿಕೊಳ್ಳುತ್ತಾರೆ, ಆದರ ಜೀತದಾಳುಗಳಲ್ಲಿ. ಒಬ್ಬ ಗಂಡಾಳು ವರ್ಷಕ್ಕೆ 4ಖಂಡುಗ(200 ಸೇರು) ರಾಗಿ ಪಡೆಯುತ್ತಾನೆ. ಹಣದ ಲೆಕ್ಕದಲ್ಲಿ 28 ಫಣಂಗಳೂ; ಇದರ ಜೊತೆಗೆ 12 ಫಣಂ(1 ಪೌಂಡ್, 4 ಷಿಲ್ಲಾಂಗ್, 11 1/2 ಪೆನ್ನಿ) ಕೆಲಸದ ವೇಳೆ ಬಳ್ಳಿಗ್ಗೆ 6:30ಕ್ಕೆ ಪ್ರಾರಂಭಿಸಿ ಮಧ್ಯಾಹ್ನದವರೆಗೆ ಮತ್ತೆ 3 ಗಂಟೆಗೆ ಪ್ರಾರಂಭಿಸಿ ಹೊತ್ತು ಮುಳುಗುವವರೆಗೆ. ರಜಾದಿನಗಳು ಕಡಿಮೆ. ಸಾಂದರ್ಭಿಕವಾಗಿ ಕೂಲಿಗಳು 4–5 ದಿನಗಳು ತಮ್ಮ ಮನೆ ರಿಪೇರಿಗೆ ರಜಾ ಪಡೆಯಬಹುದು. ಬಿತ್ತನೆ ಒಕ್ಕಣೆ ಕೂಲಿ ಸ್ವಲ್ಪ ಜಾಸ್ತಿ ಇರುತ್ತದೆ. ಒಬ್ಬನ ದಿನಗೂಲಿ 1/2 ರಿಂದ 1/4ಫಣಂ(1 1/2 ಪೆನ್ನಿಯಿಂದ 2 1/2 ಪೆನ್ನಿಯವರೆಗೆ) ಹೆಣ್ಣಾಳು ಕೂಲಿ 1/4 ರಿಂದ 1/5 ಫಣಂ(ಸು 1 1/2 ಪೆನ್ನಿ).

ಕೃಷಿ ಸಲಕರಣೆಗಳು, ಭೂಮಿಯ ಅಳತೆ

ಯಾವ ರೈತರು 6 ನೇಗಿಲುಗಳಿಗಿಂತ ಹೆಚ್ಚು ಇಟ್ಟವರಲ್ಲ. 4 ನೇಗಿಲು ಇದ್ದವನೇ ಶ್ರೀಮಂತ ರೈತ. ಒಬ್ಬ ಕೂಲಿಗೆ ಒಂದು ಜೊತೆ ಎತ್ತು. ಇಲ್ಲಿನ ಅಮಲ್ದಾರನ ಪ್ರಕಾರ ಒಂದು ದಿನಕ್ಕೆ ಒಬ್ಬ ರೈತ ಹತ್ತು ಒಕ್ಕಳ(ಪಾತಿ ಇರಬಹುದು) ದಷ್ಟ ಉಳಮೆ ಮಾಡುತ್ತಾನೆ. ಇದರಲ್ಲಿ ಅರ್ಧದಷ್ಟು ರಾಗಿ ಹೊಲ. ಅಥವಾ 5 ಕೊಳಗ ಒಣ ಭೂಮಿ, 5 ಕೊಳಗ ನೀರಾವರಿ ಭೂಮಿ. ಹಳ್ಳಿ ಗೌಡನೊಬ್ಬನ ಹೇಳಿಕೆಯಂತೆ, ಒಬ್ಬ ಕೃಷಿಕ 5 ಅಥವಾ 6 ಕೊಳಗದಷ್ಟು ಬತ್ತದ ಗದ್ದೆಯನ್ನು ಒಂದು ನೇಗಿಲಿನಿಂದ ಉಳುಮೆ ಮಾಡಿದರೆ, ಅದೇ ಖುಷ್ಕಿ ಹೊಲವನ್ನು ಉಳುಮೆ ಮಾಡಲು ಸಾಧ್ಯವಿಲ್ಲ. ಆದರೂ, ಅಮಲ್ದಾರನು ಹೇಳುವಂತೆ ಈ ಖುಷ್ಕಿ ಜಮೀನನ್ನು ಅವಲಂಬಿಸದೆ ವಿಧಿ ಇಲ್ಲ.

ನಾನೊಂದು ಜಮೀನು ಅಳತೆ ಮಾಡಿದ 73,884 ಚ.ಅಡಿ ಇತ್ತು ಅದರಲ್ಲಿ 7 ಬಳ್ಳ ಬತ್ತ ಅಥವಾ 1 3/4 ಒಕ್ಕಾಳ ಬಿತ್ತನೆ ರಾಗಿ ಬೇಕಾಗುತ್ತದೆ ಎಂಬುದು ತಿಳಿಯಿತು. ಈ ಲೆಕ್ಕದ ಪ್ರಕಾರ ಒಂದು ಒಕ್ಕಳ ಅಥವಾ ಕೊಳಗ ಎಂದರೆ 42,218 ಚ.ಅಡಿ. ಏರೊಂದರಿಂದ 91 2/10 ಒಣ ಭೂಮಿ ಬೇಸಾಯ ಮಾಡಬಹುದು. ಕರ್ನಲ್ ರೀಡನ ರಾಯಕೋಟೆ ಬತ್ತದ ಬೇಸಾಯದ ಸಮೀಕ್ಷೆ ಮತ್ತು ಪ್ರಚಲಿತ ವಿದ್ಯಾಮಾನಗಳ ಪ್ರಕಾರ ನಾನು ಪಡೆದ ಮಾಹಿತಿ ಪ್ರಕಾರ ಇಲ್ಲಿ 5ಕೊಳಗ ಬೀಜ ಎಂದರೆ1 1/4 ಎಕರೆ ಬತ್ತದ ಗದ್ದೆಗೆ ಬಿತ್ತಬಹುದು. ಇದು ಅಮಲ್ದಾರನ ಅಂದಾಜು ಗೌಡರ ಮಾತು ಲೆಕ್ಕಕ್ಕಿಲ್ಲ.[4]

ಬೆಳೆಗಳು ಮತ್ತು ಕಂದಾಯ

ಇಲ್ಲಿ ನೀರಾವರಿ ಭೂಮಿ ಗಣನೀಯವಾಗಿ ಕಡಿಮೆ. ಆದರೂ ಕಬ್ಬು ಬೇಸಾಯದ ಪ್ರಯತ್ನವಿದೆ. ರಸದಾಳಿ ಜಾತಿಯ ಕಬ್ಬು ಬೆಳೆಯುತ್ತಾರೆ. ಪಟಾವಳಿ ಜಾತಿ ಬೆಳೆಸಲು ಇಲ್ಲಿ ಇನ್ನೂ ಪ್ರಚಲಿತವಿಲ್ಲ. ಭೂ ಕಂದಾಯ ಬೆಳೆಗಳು ಇಳುವರಿಯ ಅರ್ಧದಷ್ಟು ಸಲ್ಲಬೇಕು. ಒಕ್ಕಳ ಭೂಮಿಯಷ್ಟು 500 ಸೇರಿನಷ್ಟು ಅಥವಾ ಎಕರೆಗೆ 11 ಸಿ ಡಬ್ಲ್ಯೂಟಿ. ಇದು ತುಂಬ ಹೆಚ್ಚಿನ ಸಲುವಳಿ ಆದ್ದರಿಂದ, ಏನೋ ತಪ್ಪು ಲೆಕ್ಕ ಇರಬೇಕೆಂದು ನನ್ನ ಭಾವನೆ, ಕಬ್ಬಿನ ನಂತರ ಒಂದು ವರ್ಷ ಬತ್ತದ ಬೇಸಾಯ, ಮತ್ತೆ ಕಬ್ಬು ಬೆಳೆಯುತ್ತಾರೆ.

ಕೆರೆಗಳು ತುಂಬಿದಾಗ ಎರಡು ಬಾರಿ ಬತ್ತದ ಬೆಳೆ ತೆಗೆಯಬಹುದು. ಆದರೆ ಕೃಷಿಕರ ಸಂಖ್ಯೆ ಕಡಿಮೆ ಇರುವುದರಿಂದ, ಬೇಸಾಯದ ಭೂಮಿಯಲ್ಲಿ ಅರ್ಧ ಬಿತ್ತನೆ ಮಾಡಿ ಉಳಿದರ್ದ ನಂತರ ಬಿತ್ತನೆ ಮಾಡಲಾಗುತ್ತದೆ. ರೈತರಿಗೆ ಒಣ ಬೇಸಾಯಕ್ಕಿಂತ ಹೆಚ್ಚಿನ ನೀರಾವರಿ ಬೇಸಾಯದಲ್ಲಿದ್ದರೂ, ಅವರು ವಲಸೆ ಹೋಗಲು ಇಷ್ಟವಿಲ್ಲ. ಕರ್ನಾಟಕದ ಸ್ಥಳೀಯರಿಗೆ ತಮ್ಮ ಹುಟ್ಟೂರಿನ ವಿಷಯದಲ್ಲಿ ತುಂಬಾ ಮೋಹವಿದ್ದಂತೆ ತೋರುವುದು. ಟಿಪ್ಪುವಿನ ಆಳ್ವಿಕೆ ಕಾಲದಲ್ಲಿ ಬಹಳ ಜನ ಸ್ಥಳೀಯರು ತಮ್ಮ ಗುಡಿಸಲುಗಳನ್ನು ತೊರೆದು ಹೊರಟು ಹೋಗಿರುವುದನ್ನು ಕಂಡರೆ, ಅದು ಅವನ ದಬ್ಬಾಳಿಕೆಯ ಪುರಾವೆಯೇ ಆಗಿದೆ.

ಹಳ್ಳಿಗಳಿಗೆ ಹತ್ತಿರದ ಒಣ ಜಮೀನಿನಲ್ಲಿ ಬೆಳೆಯುವ ರಾಗಿ ಬೆಳೆಗೆ ಕಂದಾಯ ನಿಗಧಿಯಾಗುತ್ತವೆ. ಒಂದು ಒಕ್ಕಳ ಜಮೀನಿಗೆ 5 ರಿಂದ 2 ಫಣಂ ಇರುತ್ತದೆ. ನನ್ನ ಅಳತೆ ಪ್ರಕಾರ ಒಂದು ಎಕರೆಗೆ 3 ಫಿಲಿಂಗ್, 11/2 ಪೆನ್ನಿಯಿಂದ 1 ಪಿಲ್ಲಿಂಗ್ 21/2 ಪೆನ್ನಿಯವರೆಗೆ. ರಾಗಿಯ ನಂತರ ಸಾಮೆ ಬೆಳೆ ತೆಗೆಯುತ್ತಾರೆ. ಇದಕ್ಕೆ ರಾಗಿಯ ಅರ್ಧ ಪಾಲು ಕಂದಾಯ. ಅಮಲ್ದಾರನ ಪ್ರಕಾರ ಒಂದು ಒಕ್ಕಳಹಸನು ಜಮೀನಿನ ಉತ್ಪನ್ನ ಹೀಗಿದೆ; ಬಿತ್ತನೆ ರಾಗಿ 1 ಒಕ್ಕಳ 2 ಖಂಡುಗ ದವಸ. ಬೆಲೆ 14

ಫಣಂ, ಅವರೆ ಅಥವಾ ತೊಗರಿ 1/4 ಒಕ್ಕಳಕ್ಕೆ 1/18 ಫಣಂ ಕಂದಾಯ ಐದು ಫಣಂಗಳು ಅಥವಾ ಉತ್ಪನ್ನದ ಪ್ರತಿಶತ 28 ರಷ್ಟು.

ಎತ್ತರದ ಜಮೀನಿನಲ್ಲಿ ಸಾಗುವಳಿ ಮಾಡುವಾಗ ಗೊಬ್ಬರ ಕೊಡಲು ತುಂಬಾ ದೂರ ಎನ್ನುವ ಕಡೆ 11/4 ಕೊಳಗ ಬಿತ್ತನೆಗೆ 15 ಕೊಳಗ ಫಸಲು ಬರುತ್ತದೆ. ಬೆಲೆ 6 ಫಣಂಗಳು. ಇದರಲ್ಲಿ ಸರ್ಕಾರಕ್ಕೆ ಅರ್ಧ ಕಟ್ಟಬೇಕು. ಬೇಸಾಯ ತ್ರಾಸ ಅಲ್ಲ; ರೈತರಿಗೆ ರಾಗಿಯಿಂದಲೇ ಹೆಚ್ಚು ಆದಾಯ.

ಕಾನಕಾನಹಳ್ಳಿಯ ಅರ್ಕಾವತಿ ನದಿ ದಂಡೆಯ ಮೇಲೆ ಅನೇಕ ತೆಂಗಿನ ತೋಟಗಳಿವೆ. ಅಡಿಕೆ ಮರಗಳೂ ಇವೆ. ತೋಟದ ಜಮೀನು ಸರ್ಕಾರಕ್ಕೆ ಸೇರಿದ್ದು, ತೆಂಗಿನ ಮರಗಳು ರೈತರಿಗೆ ಸೇರಿದ್ದು. ಮರ ಬೆಳೆದು ಫಲ ನೀಡುವವರೆಗೆ, ಮಣ್ಣಿನ ಒಡೆತನ ಅವರಿಗಿರುವುದಿಲ್ಲ. ಹಳೆ ಮರ ಒಣಗಿದಾಗ ಹೊಸ ಮರ ನೆಡುವ ಪದ್ಧತಿ ಇದೆ. ಆರೇಳು ವರ್ಷ ನೀರುಣಿಸಿ ಪೋಷಿಸಿದ ಫಲ ಪ್ರಾರಂಭವಾಗುತ್ತವೆ. ಸುಮಾರು ನೂರು ವರ್ಷ ಆಯಸ್ಸು. ಅವುಗಳಲ್ಲಿ 50 ವರ್ಷ ಹೆಚ್ಚು ಫಲ ನೀಡುತ್ತವೆ. ಒಣಗಿದ ಮರವನ್ನು ಯಾರೂ ಕಡಿಯುವುದಿಲ್ಲ. ಇದಕ್ಕೆ ಯಾವ ರೀತಿಯಲ್ಲಿ ಉಪ್ಪು ಮಿಶ್ರಿತ ಗೊಬ್ಬರ ಕೊಡುವುದಿಲ್ಲ. ವರ್ಷದಲ್ಲಿ 8 ತಿಂಗಳು ಬಲಿತ ಕಾಯಿ ನೀಡುತ್ತವೆ. ಮಳೆಗಾಲದ ಪ್ರಾರಂಭದಲ್ಲಿ ಚಳಿ, ಮಳೆಯಿಂದಾಗಿ ಬಲಿತ ಕಾಯಿಗಳು ತಂತಾನೆ ತೊಟ್ಟು ಕಳಚಿ ಉದುರುತ್ತವೆ. ಮುಂದಿನ ಮೂರು ತಿಂಗಳು ಎಳನೀರು ಪಡೆಯಬಹುದು. 100 ಕಾಯಿಗೆ 5 ಫಣಂ, ಆದಾಯದ ಅರ್ಧ ಸರ್ಕಾರದ ಬೊಕ್ಕಾಸಕ್ಕೆ ಕಟ್ಟಬೇಕು. ತೆಂಗಿನ ಬೆಳೆ ಒಣ ಮತ್ತು ನೀರಾವರಿ ಇರುವ ಕಡೆ ಯಾವುದಾದರೂ ಧಾನ್ಯ ಬೆಳೆದುಕೊಳ್ಳುತ್ತಾರೆ. ಮರಗಳು ಒತ್ತಾಗಿದ್ದ ಧಾನ್ಯದ ಇಳುವರಿ ಕಡಿಮೆ ರೈತ ತನ್ನ ಫಸಲನ್ನು ತಾನೆ ಅನುಭವಿಸಬಹುದು. ರೈತ ತೋಟದ ಕಡೆ ಗಮನ ಕೊಡದೆ ಮರಗಳು ತೆಳುವಾದರೆ, ಬೆಳೆ ಬಂದದ್ದರಲ್ಲಿ ಅರ್ಧ ಸರ್ಕಾರಕ್ಕೆ ಹೋಗಬೇಕು. ಮರದಿಂದ ಮರಕ್ಕೆ ಅಂತರ ಸರ್ಕಾರದಿಂದ ನಿಗದಿಪಡಿಸಿಲ್ಲವಾದ ಕಾರಣ ಕಂದಾಯ ಅಮಲ್ದಾರನ ವಿವೇಚನೆಗೆಬಿಟ್ಟಿದ್ದು. ಇದು ಸರಿಯಲ್ಲ. ಅಮಲ್ದಾರನ ಪ್ರಕಾರ ಗಿಡದಿಂದ ಗಿಡಕ್ಕೆ 30 ರಿಂದ 36 ಅಂತರವಿರುವಂತೆ ನೆಡಬಹುದು. 36 ಅಡಿ ಅಂತರದಿಂದ ನೆಟ್ಟರೆ ಎಕರೆಗೆ 33 ಗಿಡಗಳನ್ನು ನೆಡಬಹುದು. ಒಂದು ಗಿಡದ ಒಟ್ಟು ಉತ್ಪನ್ನದಿಂದ 5 ಫಣಂಗಳು ಆದಾಯವನ್ನು ಅಂದಾಜಿಸಬಹುದು. (3 ಷಿಲ್ಲಿಂಗ್‌ಗಳಿಗಿಂತ ಸ್ವಲ್ಪ ಹೆಚ್ಚು).

ಜೂನ್ : 13 ರಂದು ಮೂರು ಕ್ರೋಶ ದಾರಿ ಸಾಣಿ ಮಳಲವಾಡಿ ಕಡೆ ಪ್ರಯಾಣಿಸಿದನು. ಇದು ಚನ್ನಪಟ್ಟಣ ಜಿಲ್ಲೆಗೆ ಸೇರಿದ ಹಳ್ಳಿ ನಾನು ನಡೆದ ದಾರಿಗುಂಟ ಕುರಚಲು ಗಿಡಗಳು ಪೊದೆಗಳು ತುಂಬಿ ಸ್ವಲ್ಪ ಭಾಗ ಕೃಷಿಯೋಗ್ಯ ಭೂಮಿ ಮಾತ್ರ ಇತ್ತು. ಸ್ವರ್ಣರೇಖಾ ಎಂಬ ಸಣ್ಣ ತೊರೆಯನ್ನು ಮೂರು

ಬಾರಿ ದಾಟಿದೆ. ಇದು ಆನೆಕಲ್ಲಿನಿಂದ ಬಂದು ಕಾನಕಾನಹಳ್ಳಿಗಿಂತ ಹಿಂದೆ ಅರ್ಕಾವತಿ ಸೇರುತ್ತದೆ. ಈ ಹಳ್ಳಿ ಶಿಥಿಲವಾದ ಕೋಟೆಯಿಂದ ಕೂಡಿದೆ. 1 ಕಾರ್ನ್‌ವಾಲೀಸನ ಮುತ್ತಿಗೆಗೆ ಮೊದಲು ಇಲ್ಲಿ 300 ಮನೆಗಳಿದ್ದವು. ಶತ್ರುಗಳಿಗೆ ಸಹಾಯವಾಗಬಾರದೆಂದು ಟಿಪ್ಪು ಈ ಊರನ್ನು ಸುಟ್ಟು ಹಾಕಿದ. ಈಗ ಇಲ್ಲಿರುವುದು 68 ಮನೆಗಳು ಮಾತ್ರ. ಕಾವೇರಿ ನದಿಗೆ 8 ಕ್ರೋಶವಿರುವ ಈ ಊರಿನ ಸುತ್ತಮುತ್ತ ಒಳ್ಳೆಯ ಖುಷ್ಕಿ ಜಮೀನುಗಳಿವೆ. ರಾಗಿ ಹುರುಳಿ ಇಲ್ಲಿಯ ಮುಖ್ಯ ಬೆಳೆ ಸ್ಥಳೀಯರ ಊಟದ ಮೂಲವೂ ಇವೇ. (ಸಂ : 3– ಪು, 425 – 31).

ಬುಕನ್ನನ ಪ್ರವಾಸ ಕಥನದಿಂದ ಈ ಕೆಳಗಿನ ಪ್ರಯೋಜನದ ಅಂಶಗಳನ್ನು ತಿಳಿಯಬಹುದಾಗಿದೆ.

1. 200 ವರ್ಷಗಳ ಹಿಂದಿನ ಹಳ್ಳಿಗಳು ಹೇಗಿದ್ದವು ಎಂದು ತಿಳಿಯಲು ಸಹಕಾರಿಯಾಗುತ್ತದೆ.
2. ಕಾಣಿಕಾರನಹಳ್ಳಿ ಕಾನಕಾನಹಳ್ಳಿಯಾಗಿ ರೂಪಾಂತ ಹೊಂದಿರುವುದು.
3. ಸಾತನೂರು, ಕಾನಕಾನಹಳ್ಳಿ ಬೆಟ್ಟಗುಡ್ಡಗಳಿಂದ, ಕುರುಚಲು ಕಾಡುಗಳಿಂದ ಕೂಡಿದ್ದು, ಇಲ್ಲಿ ಹುಲಿಗಳು ಹೆಚ್ಚಿದ್ದು, ಜನರನ್ನು ಬಲಿ ತೆಗೆದುಕೊಳ್ಳುತ್ತಿದ್ದವು ಎಂಬ ವಿಚಾರ ಗೊತ್ತಾಗುತ್ತದೆ.
4. ಕಾನಕಾನ ಹಳ್ಳಿಯ ದೊಡ್ಡ ದೇವಾಲಯವನ್ನು ಮೈಸೂರು ದೊರೆ ಪುನರ್ ನಿರ್ಮಿಸಿದ್ದು ಯಾವು ದೇವಾಲಯ ಎಂದು ಸ್ಪಷ್ಟ ಪಡಿಸಿಲ್ಲ. ಅದು ಕೋಟೆಯ ರಂಗನಾಥ ದೇವಾಲಯವೇ ಎಂದು ಊಹಿಸಲುಬಹುದು.
5. ಈ ದೇವಾಲಯ ಟಿಪ್ಪುವಿನ ಆಕ್ರಮಣದಿಂದ ಶಿಥಿಲಗೊಂಡಿರಬಹುದೆಂದು ಊಹಿಸ ಬಹುದಾಗಿದೆ.
6. ಊರನ್ನು ಸುಟ್ಟು, ದೇವಾಲಯ ಕೆಡವಿದ್ದು, ಬುಕನನ್ ಹೇಳಿಕೆಯ ಪ್ರಕಾರ ಇಂಗ್ಲೀಷ್ ಸೈನ್ಯವನ್ನು ನಿಷ್ಕ್ರಿಯಗೊಳಿಸಲು ಎಂದು ತಿಳಿಯುತ್ತದೆ.
7. ಕೃಷ್ಣರಾಜ ಒಡೆಯರು, 1ನೆಯ ಅಥವಾ 2 ನೆಯ ಎಂಬುದು ಇಲ್ಲಿ ಸ್ಪಷ್ಟವಾಗಿಲ್ಲ. ಕಂಚಿ, ಮೇಲುಕೋಟೆ ಮೊದಲಾದ ವೈಷ್ಣವ ದೇವಾಲಯಗಳಿಗೆ 1 ನೇ ಕೃಷ್ಣರಾಜ ಒಡೆಯರೇ ದಾನದತ್ತಿಕೊಟ್ಟಿರುವುದರಿಂದ ಇವರೇ ಈ ದೇವಾಲಯವನ್ನು ಜೀರ್ಣೋದ್ಧಾರ ಮಾಡಿರ ಬಹುದೆಂದು ಊಹಿಸಬಹುದಾಗಿದೆ.
8. ಈ ದೇವಾಲಯ ನಾಶವನ್ನು 1763 ರಂದಲೇ ಟಿಪ್ಪು ಮತ್ತು ಅವನ ಆಜ್ಞಾನುವರ್ತಿಗಳು ಪ್ರಾರಂಭಿರಬಹುದು. ಮುಂದಿನ ಆ ಕಾಲದಲ್ಲೇ ಪುನರ್ ನಿರ್ಮಾಣವೂ ನಡೆದಿರಬಹುದು.

9. ಕಾನಕಾನಹಳ್ಳಿಯ ಸುತ್ತಮುತ್ತಲ ಕೃಷಿ ಭೂಮಿಗೆ ಉಳುಮೆದಾರರ ಕೊರತೆ ಇತ್ತು ಎಂಬ ಅರಿವಾಗುತ್ತದೆ.

10. ರಾಗಿ, ಬತ್ತ, ಸಾಮೆ, ಕಬ್ಬು, ತೆಂಗು ಬೆಳೆಗಳ ಬೇಸಾಯ ಕ್ರಮ, ಬೆಲೆ ಅದರ ಕಷ್ಟ, ಕಂದಾಯ ನಿಗಧಿ ಮುಂತಾದ ವಿಚಾರ ಮನದಟ್ಟಾಗುತ್ತದೆ.

11. ಜನರ ವಲಸೆ, ರಾಜರುಗಳ ಯುದ್ಧ ಸಂಘರ್ಷದಿಂದ ಭಯಬೀತರಾಗಿ ಸ್ಥಳಾಂತರ ಗೊಳ್ಳುತ್ತಿದ್ದರು.

ಅಲೆಕ್ಸ್ಯಾಂಡರ್ ಬೀಟ್ಸನ್ ಎಂಬ ಪ್ರತ್ಯಕ್ಷದರ್ಶಿಯ ಕಥನ

ಕ್ರಿ.ಶ. 1800 ರಲ್ಲಿ ಲಂಡನ್ನಿನಲ್ಲಿ ಪ್ರಕಟವಾದ ತನ್ನ ಪುಸ್ತಕದಲ್ಲಿ "ಎ ವ್ಯೂ ಆಫ್ ದಿ ಆರಿಜನ್ ಅಂಡ್ ಕಂಡಕ್ಟ ಆಫ್ ದಿ ವಾರ್ ವಿಥ್ ಟಿಪ್ಪು ಸುಲ್ತಾನ್" ದಲ್ಲಿ ಬೀಟ್ಸನ್ ರವರು ಕಂಪನಿ ಮತ್ತು ಟಿಪ್ಪು ನಡುವಿನ ಯುದ್ಧದ ಪೂರ್ವಾಪರ ವಿಚಾರಗಳನ್ನು ಸಂಕಥಿಸಲಾಗಿದೆ.

ನಮ್ಮ ಗೂಢಾಚಾರಿಗಳ ಪ್ರಕಾರ ಟಿಪ್ಪು ಸೈನ್ಯ ಮದ್ದೂರಿನ ಹತ್ತಿರ ಬಿಡಾರ ಹೂಡಿತ್ತು. ನಮ್ಮ ಸೈನ್ಯ 1500 ಜನ ಕುದುರೆಯಾಳುಗಳ ಸಹಿತ ಹೊಸೂರಿನಲ್ಲಿ ಠಿಕಾಣಿ ಹಾಕಿತ್ತು. ಅವರ, ಸೈನ್ಯದ ಚಲನವಲನ ತಿಳಿಯಲು ಅವರ ಅನುಕೂಲದ ಪಡಿತರ ನಾಶ ಮಾಡಲು ಸಿದ್ಧರಾಗಿ, ಕೆಲಮಂಗಲ ಮಾರ್ಗದಿಂದ ಶ್ರೀರಂಗಪಟ್ಟಣ ಮೂರು ಬೇರೆ ಬೇರೆ ದಾರಿಗಳನ್ನು ಅರಿತು, ತಮ್ಮ ಉದ್ದೇಶ ವೈರಿಗಳಿಗೆ ಅರಿಯದಂತೆ ರಹಸ್ಯವಾಗಿಡುವುದು ಕಷ್ಟವೇನು ಆಗಿರಲಿಲ್ಲ. ಶ್ರೀರಂಗಪಟ್ಟಣಕ್ಕೆ ಮುತ್ತಿಗೆ ಹಾಕುವ ಮೊದಲು, ಈ ಹಿಂದಿನಂತೆ ಹ್ಯಾರಿಸ್ ಬೆಂಗಳೂರಿನಲ್ಲಿ ಬೀಡು ಬಿಟ್ಟಿರುವ ವಿಚಾರ ಕೆಲ ದಿನಗಳಲ್ಲೆ ಟಿಪ್ಪು ಸೈನ್ಯಕ್ಕೆ ಅರಿವಾಗದೇ ಇರಲಿಲ್ಲ. ಈ ರಹಸ್ಯದಿಂದ ನಮಗೆ ಹೆಚ್ಚು ಅನುಕೂಲವೇ ಆಯಿತು.

ಮೊದಲ ಮಾರ್ಗ : ಶ್ರೀರಂಗಪಟ್ಟಣಕ್ಕೆ ಬಹಳ ಹತ್ತಿರ ತಳಿ ಮೂಲಕ ಮರವಾಡಿ ಹಾದು ಕಾನಕಾನಹಳ್ಳಿ ತಲುಪುವ ಹಾದಿ ತಳಿಯ ಘಾಟ್ ಬಗ್ಗೆ ನಮಗೆ ಅರಿವಿರಲಿಲ್ಲ. ಶೋಧಿಸಲು ಬಹಳ ದಿನ ಹಿಡಿಯುತ್ತದೆ ಎಂದರಿತು ದಾರಿ ಹತ್ತಿರವಿದೆ ಎಂಬುದನ್ನು ಬಿಟ್ಟರೆ, ಅನಾನುಕೂಲವೇ ಹೆಚ್ಚಾಗಿತ್ತು.

ಎರಡನೇ ಮಾರ್ಗ : ಆನೇಕಲ್ ಮೂಲಕ ತಲಘಟ್ಟಪುರ ತಲುಪಿ ಕಾನಕಾನಹಳ್ಳಿ ದಾರಿ ಕ್ರಿ.ಶ. 1791ರಲ್ಲಿ ಕಾರ್ನ್‌ವಾಲೀಸ್ ಸೈನ್ಯ ಈ ದಾರಿಯಲ್ಲಿ ಸಾಗಿತ್ತಾದ ಕಾರಣ ನಮಗೆ ಆ ದಾರಿಯ ಪರಿಚಯವಿತ್ತು.

ಇನ್ನು ಮೂರನೆಯ ಮಾರ್ಗ : ಆನೇಕಲ್ಲು > ತಲಗಘಟ್ಟಪುರ > ಚನ್ನಪಟ್ಟಣದ ದಾರಿ. ಆದರೆ, ಮದ್ದೂರು ಚನ್ನಪಟ್ಟಣಕ್ಕೆ ಹತ್ತಿರವಿದ್ದುದರಿಂದ ಆ ದಾರಿ ಹಿಡಿಯುವಂತಿರಲಿಲ್ಲ.

ಹೆಚ್ಚು ಶಂಕೆಯಿಲ್ಲದ ದಾರಿಯೆಂದರೆ ತಲಗಟ್ಟಾಪುರ > ಕಾನಕಾನಹಳ್ಳಿ ಮಾರ್ಗವೇ. ಇದು ಶತ್ರುಗಳನ್ನು ವಂಚಿಸುವ ಸರಿಯಾದ ಮಾರ್ಗವಾಗಿತ್ತು. ಏಕೆಂದರೆ, ಬೆಂಗಳೂರು ಟಾರ್ಗೆಟ್ ಆದರೂ ಇದನ್ನು ಹಾಳು ಮಾಡಿದರೆ, ಸೌಕರ್ಯಗಳು ಸಿಗುತ್ತಿದ್ದುದರಿಂದ ಆ ಮಾರ್ಗ ಬಿಟ್ಟು ಈ ಮಾರ್ಗ ಹೆಚ್ಚು ಸೂಕ್ತವೆಂದರಿತು. ಶ್ರೀರಂಗಪಟ್ಟಣದ ಕಡೆಗೆ ಸಾಗಲು ನಿರ್ಧಾರವಾಯಿತು, ಜೊತೆಗೆ ಈ ದಾರಿಗುಂಟ ಕೆರೆ ತೊರೆಗಳು ಇದ್ದು ಯಾವುದೇ ಅಡ್ಡಿ ಆತಂಕಗಳನ್ನು ನಿರೀಕ್ಷಿಸುವಂತಿರಲಿಲ್ಲ.

1800ರ ಮಾರ್ಚ್ 10 ಬೆಳಗಿನ ಜಾವ ಕೆಲಮಂಗಲದಿಂದ ಸೈನ್ಯ ಬಲಭಾಗದ ಕಡೆಯಿಂದ ಸಾಗಿತ್ತು. ಅಶ್ವಾರೋಹಿಗಳು ಮುಂದೆ, ಬಲಕ್ಕೆ ಸೈನ್ಯದ ಸರಕುಗಳ ಗುಡಾರ ಹಾಸಿಗೆ ಹಗುರ ಸರಕುಗಳು, ಎಡಗಡೆ ನಿಜಾಮನ ಸೈನ್ಯ ಸಮಾನಾಂತರವಾಗಿ ದೂರದಲ್ಲಿ ಸಾಗುತ್ತಿತ್ತು. ಸುತ್ತ ಬೆಂಗಾವಲು ಪಡೆ. ಈ ಸೇನಾಪಥ ಸಾಗಣೆಯಲ್ಲಿ ಎರಡೂ ಸೈನ್ಯಗಳ ನಡುವೆ ಸಾಮಾನು ಸರಂಜಾಮು ಸಂರಕ್ಷಿತವಾಗಿದ್ದವು. ಶತ್ರುಗಳ ಕುದುರೆಯಾಳುಗಳು ಯಾವುದೇ ದಿಕ್ಕಿನಿಂದ ಬರಬಹುದಿತ್ತು, ಕಾಳು ಕಡ್ಡಿ, ದವಸ ಧಾನ್ಯ ಮೇವು ಸಂಗ್ರಹವನ್ನು ಸುಡಲು ಹವಣಿಸುತ್ತಿದ್ದರು. ಹಳ್ಳಿಗಳನ್ನು ಹಾಳು ಮಾಡಲು ಚುರುಕಾಗಿದ್ದರು.

ನಿಜಾಮನ ಒಂದು ತುಕಡಿಯ ಮೇಲೆ ಈ ರೀತಿಯ ದಾಳಿಯಾಯಿತು. ಈ ಆಕ್ರಮಣದಲ್ಲಿ 20 ಜನ ಸತ್ತರು, ಲೆಫ್ಟಿನೆಂಟ ರೇನಾಲ್ಡ್ ಮತ್ತು 36 ಜನ ಗಾಯಗೊಂಡರು, 9 ಜನ ಕಾಣೆಯಾದರು. ಆಗ ಹಳ್ಳತಿಟ್ಟನಿಂದ ಕೂಡಿದ್ದು ಸಮತಟ್ಟಾಗಿರಲಿಲ್ಲ. ಸಂಚಾರ ಆಯಾಸಕರವಾಗಿತ್ತು. ಕತ್ತಲು ಕವಿಯುವವರೆಗೆ ಬೆಂಗಾವಲು ಪಡೆ ಸ್ಥಳಕ್ಕೆ ಬರಲಿಲ್ಲ. ಪಡಿತರ ದಾರಿಯಲ್ಲೆ ಉಳಿದವು. ಸೈನ್ಯ ಕಲ್ಲಿಕೊಂಡ ಪಿಲ್ಲಿ ಎಂಬಲ್ಲಿ ಮತ್ತೆ ಒಂದು ಗೂಡಿತು. 11ನೇ ತಾರೀಖು ಅಲ್ಲೆ ತಂಗಲು ಅನಿವಾರ್ಯವಾಯಿತು. ಶಿಬಿರಕ್ಕೆ ಪಡಿ ಪದಾರ್ಥಗಳ ಅವಶ್ಯಕತೆ ಇತ್ತು.

12ರಂದು ಸೈನ್ಯ ಮುಂದುವರಿದು ಜಿಗಣಿಯಿಂದ ಮುಂದೆ ಆಗ್ನೇಯ ದಿಕ್ಕಿನಲ್ಲಿ ಬೀಡು ಬಿಟ್ಟಿತು. ಬೆಳಗ್ಗೆ ಇನ್ನೇನು ಹೊರಡಬೇಕು ಎನ್ನುವಷ್ಟರಲ್ಲಿ ಮತ್ತೆ ಶತೃಕುದುರೆಯಾಳುಗಳು ಕಾಣಿಸಿಕೊಂಡು. ಕಾಳು ಕಡ್ಡಿಗಳಿಗೆ ಬೆಂಕಿ ಹಚ್ಚಲಾಯಿತು. ಅದನ್ನು ಹುಲ್ಲಿನ ಬಣವೆಗಳಲ್ಲಿಟ್ಟು ಸ್ಥಳೀಯ. ಜನ ಸಂಗ್ರಹಿಸಿಕೊಟ್ಟರು.

ಹಳ್ಳಿಯ ಜನರಿಗೆ ನಮ್ಮವರು ಸಹಾಯಕ್ಕೆ ನಿಂತಿದ್ದರು. ಅವರಿಗೆ ಕಾವಲು ಪಡೆಕೊಟ್ಟು ರಕ್ಷಿಸಲಾಯಿತು. ನಮ್ಮ ಬಲಭಾಗಕ್ಕೆ ಆನೆಕಲ್ಲು ಅದನ್ನು ಹಿಂದಕ್ಕೆ ಹೊರಟೆವು.

ಇದೊಂದು ರಮಣೀಯ ಬತ್ತದ ಗದ್ದೆಗಳು, ತೋಟ ತುಡಿಕೆಗಳು ಸೊಂಪಾದ ಕಬ್ಬಿನ ಗದ್ದೆಗಳು ತುಂಬಿಕೊಂಡಿದ್ದವು. ಈ ಸ್ಥಳದಲ್ಲಿ ನೀರಿಲ್ಲದಂತೆ, ದವಸ ದಾನ್ಯ ಸಿಗದಂತೆ ಮಾಡುವುದು ಶತ್ರು ಸೈನ್ಯಕ್ಕೆ

ದುಸ್ಸಾಧ್ಯ. ಆನೇಕಲ್ ಬಿಟ್ಟು ಮುಂದೆ ಬಂದಾಗ ಶತ್ರು ಸೈನ್ಯದ ಕುದುರೆಯಾಳುಗಳ ಒಂದು ದೊಡ್ಡ ಗುಂಪು ಕಾಣಿಸಿಕೊಂಡಿತು. ಅದು ತೋಪು ಹಾಕಿಸಲಾಗಿ ತಕ್ಷಣ ಚದುರಿಹೋಯಿತು.

13ನೇ ತಾರೀಖು ಬೆಳಗಿನ ಜಾವ ನಡೆಯಲು ಸೈನ್ಯಕ್ಕೆ ಆದೇಶ ಹೊರಟಿತ್ತು. ಆದರೆ 12ನೇ ತಾರೀಖು, ತುಂಬು ಹೊತ್ತಿನ ಮೇಲೆ ಬಿಡಾರಕ್ಕೆ ತಕ್ಕಷ್ಟು ಪಡಿತರ, ದಾಳಿಗೆ ತಕ್ಕಷ್ಟು ಮದ್ದುಗುಂಡುಗಳು ಇಲ್ಲ ಎಂಬ ಕಾರಣಕ್ಕೆ ಅದನ್ನು ಸ್ಥಗಿತಗೊಳಿಸಲಾಯಿತು.

14ನೇ ತಾರೀಖು ಸೈನ್ಯ ಎಡಭಾಗದಿಂದ ಸಾಗಿತು. ಬೆಂಗಳೂರು ಕಾಣುತ್ತಿತ್ತು. ಅಲ್ಲಿ ಕತ್ತಿಗೆರೆ ಪೇಟೆ ಸಮೀಪದಲ್ಲಿ ಬೀಡು ಬಿಟ್ಟಿತು. ನಮ್ಮ ಬೀಡಿನ ಸುತ್ತ 4000 ಲೆಕ್ಕದ ಒಳ್ಳೆಯ ಕುದುರೆದಳ ಹಲವಾರು ಒತ್ತೊತ್ತು ಗುಂಪುಗಳು ಕಾಣಿಸಿ ಕೊಂಡವು. ನಮ್ಮ ಕುದುರೆಗಳನ್ನು ಮುಟ್ಟುತ್ತಿದ್ದಂತೆ ನಮ್ಮ ಲಘು ಫಿರಂಗಿಗಳು ಕೆಲವು ಗುಂಡುಗಳು ಸಿಡಿಯುತ್ತಿದ್ದ ಹಾಗೆಯೇ ಅವು ಬೆಂಗಳೂರಿನತ್ತ ಮುಖ ಮಾಡಿದವು.

ಶತ್ರುವಿನ ಕುದುರೆಯಾಳುಗಳ ಪಡೆ ಕೆಂಗೇರಿ ಕಡೆ ಪಲಾಯನ ಗೈಯಿತು. ಇಡೀ ಸೈನ್ಯ ನಮ್ಮ ಗೂಢಾಚಾರರ ಸುದ್ದಿಯಂತೆ ದಿವಾನ್ ಪೂರ್ಣಯ್ಯನವರ ಅಧೀನದಲ್ಲಿತ್ತು. ಈ ವೇಳೆಗೆ ಸುಲ್ತಾನ ಪಿರಿಯಾಪಟ್ಟಣದಲ್ಲಿ ಜಾನ್ ಸ್ಟುವರ್ಟ್‌ನನ್ನು ಎದುರಿಸಿದಂತೆ ಸಾಕಷ್ಟು ಹಾಸಿಯೊಂದಿಗೆ ಹಿಂದಿರುಗಿಸಲಾಯಿತೆಂದು ತಿಳಿಯಿತು.

15ನೇ ತಾರೀಖು ಸೈನ್ಯ ಅಲ್ಲೆ ತಂಗಿತ್ತು. ಶತ್ರುಗಳು ಇತ್ತ ಗಮನ ಕೊಡದಂತೆ ಗುಂಡುಗಳನ್ನು ಹಾರಿಸುತ್ತ, ನಮ್ಮ ಸೈನ್ಯವನ್ನು ಪ್ರಚೋದಿಸಲಾಯಿತು.

16ನೇ ತಾರೀಖಿನಂದು ನಮ್ಮ ಸೈನ್ಯ ಎಡಭಾಗದಿಂದ ಸಾಗಿ ತಲಗಟ್ಟಪುರದ ಮೂಲಕ ಕಾನಕಾನಹಳ್ಳಿಗೆ ಹೋಗುವ ಮುಖ್ಯ ರಸ್ತೆಗೆ ಇಳಿಯಿತು. ಹಿಂದೆಯೇ ನಿಶ್ಚಯಿಸಿದಂತೆ ಈ ದಾರಿ ಯಾವುದೇ ಅನುಮಾನ ಬಾರದ ದಾರಿಯಾಗಿತ್ತು. ಶತ್ರು ಸೈನ್ಯ ಬೆಂಗಳೂರಿನಿಂದ ಮುಂದೆ ಸಾಗಿ ಮೇವು ಮೆದೆಗಳನ್ನು ಸುಡುತ್ತಿದ್ದವು ಕಾನಕಾನಹಳ್ಳಿ ರಸ್ತೆಯಲ್ಲಿ ಆ ಕೆಲಸವನ್ನು ಇನ್ನು ಪ್ರಾರಂಭಿಸಿರಲಿಲ್ಲ. ಇನ್ನೂ ನಮ್ಮ ಸೈನ್ಯ ಬೆಂಗಳೂರಿನಲ್ಲಿ ಠಿಕಾಣಿ ಹೂಡಿರಬೇಕೆಂದು ತಿಳಿದಿರಬೇಕು. ಯುದ್ಧ ತಂತ್ರವನ್ನು ಹಿಂದಿನಂತೆ ಇಲ್ಲಿಯೂ ಪ್ರಯೋಗಿಸಲಾಯಿತು.

ತಲಗಟ್ಟಪುರ ದಾಟುತ್ತಿದ್ದಂತೆಯೇ ಮುಂದಿನ ಪ್ರದೇಶ ದಟ್ಟ ಕಾಡುಗಳಿಂದ ದಾರಿ ಅಡ್ಡಾದಿಡ್ಡಿಯಾಯಿತು. ಆ ದಿನ ಆ ಹಾದಿಯಲ್ಲಿ ಜನ ಜನವಸತಿ ಕೇಂದ್ರದಿಂದ ಓಡಿ ಹೋಗಿದ್ದರೂ, ಕಾಳು ಕಡ್ಡಿ ಮೇವು ಸಮೃದ್ಧವಾಗಿದ್ದವು. ಫಿರಂಗಿದಳ ಕಗ್ಗಲೀಪುರದ ಹತ್ತಿರದ ಒಂದು ಕಣಿವೆಯಲ್ಲಿ

ಬೀಡು ಬಿಟ್ಟಿತು. ಈ ಹಳ್ಳಿಯ ಪ್ರದೇಶ ಬಟ್ಟ ಬಯಲು ಹಿತಕರ, ಕುದುರೆ ದಳ ಕಾಲಾಳು ತುಕಡಿ ಬೀಡು ಬಿಡಲು ಅದು ಅನುಕೂಲಕರವಾಗಿತ್ತು.

15ನೇ ತಾರೀಖು ನಾವು ನೋಡಿದ ಶತ್ರು ಕುದುರೆ ಪಡೆ ನಮ್ಮ ಹಿಂಭಾಗ ಮೇಲೆ ಬೀಳುವಂತೆ ನಿಂತಿತ್ತು. ಸೈನ್ಯ ತುಂಬಾ ಹತ್ತಿರಕ್ಕೂ ಜರುಗಿ ಬರುತ್ತಿತ್ತು. ತೋಪು ಉಡಾಯಿಸುತ್ತಾ ಎದುರಿಸುತ್ತಿದ್ದರು. ಆದರೆ, ಜನರಲ್ ಫ್ರಾಯ್ಡ್ ತನ್ನ ಕುದುರೆ ಪಡೆಯ 4 ತುಕಡಿಗಳನ್ನು ಸ್ವಲ್ಪ ಪದಾತಿ ಸೇನೆ, ಫಿರಂಗಿಗಳು ಇವುಗಳ ಮೂಲಕ ಆಗಾಗ ಫಿರಂಗಿಗಳಿಂದ ತೋಪು ಹಾರಿಸುತ್ತಿದ್ದುದರಿಂದ ಶತ್ರು ಸೈನ್ಯ ದೂರಕ್ಕೆ ಸರಿದರು.

17ನೇ ತಾರೀಖು ರಮಣೀಯ ಕಣಿವೆ ಕಾಡುಗಳ ನಡುವೆ ಹಾದು ನಡೆಯುತ್ತಿತ್ತು. ಕಣಿವೆ ಇಕ್ಕಟ್ಟಾಗಿದ್ದು, ಶತೃ ಸೈನ್ಯ ನಮ್ಮ ಮೇಲೆ ಕವಿದು ಬೀಳಲು ಕಷ್ಟ ಸಾಧ್ಯವಾಯಿತು. ಎಂತಹ ಸಂದರ್ಭದಲ್ಲೂ ಕಾರ್ಯೋನ್ಮುಖರಾಗಲು ಅಸಾಧ್ಯ. ಈ ಕಣಿವೆ ಕಗ್ಗಲಿಪುರದಿಂದ ಕಾನಕಾನಹಳ್ಳಿಯವರೆಗೆ ಚಾಚಿಕೊಂಡಿದೆ. ಅಲ್ಲಿಂದ ಸುಲ್ತಾನ್ ಪೇಟೆಯವರೆಗೆ ದಾರಿಗುಂಟ ರಸ್ತೆ ಗಿಡಗಂಟಿಗಳ ಪೊದರುಗಳಲ್ಲೆ ಸಾಗುತ್ತದೆ. ಚನ್ನಪಟ್ಟಣದ ದಾರಿಯಲ್ಲಿ ಸಾಗಿದ್ದ ಶತ್ರುಗಳಿಗೆ ಸುಲಭವಾಗುತ್ತಿತ್ತು ಸಮೃದ್ಧ ಮೇವು, ನೀರು ಸಿಗುತ್ತಿದ್ದರೂ ನಮ್ಮ ನಡೆ ನಿಧಾನವಾಗಿತ್ತು. ಮಿಲಟರಿ ಸವಲತ್ತು ನಮ್ಮನ್ನು ರಕ್ಷಿಸಿದ್ದವು. ಸ್ಥಳೀಯ ಮುಖ್ಯರ ನಡುವೆ ಸ್ವಲ್ಪ ತಕರಾರು ಏರ್ಪಡುತ್ತಿತ್ತು. ಇದಕ್ಕೆ ಹಣಕಾಸು ಪದ್ಧತಿ ಕಾರಣವಿರಬಹುದು.

ಇದು ಗೋಲಂದಾಜು (ಸೈನ್ಯ ಶಸ್ತ್ರ ಇಲಾಖೆ) ಇಲಾಖೆ ಕಡೆಯಿಂದಲೂ ಇಂತಹುದೇ ಕಾರಣಗಳಿಗಾಗಿ ಹುಟ್ಟಿದ ಅಹಿತಕರ ವರದಿಗಳು ಬರುತ್ತಿದ್ದವು. ಆದ್ದರಿಂದ ಸೈನ್ಯವು 18ರಂದು ತನ್ನ ಪಥಕ್ರಮಣ ನಿಲ್ಲಿಸಿತು. ಕೆಲವು ಮಾರ್ಪಾಡುಗಳೇನೋ ಆದುವು. ಇದರಿಂದ ಹೆಚ್ಚು ಪ್ರಯೋಜನ ಆಗಲಿಲ್ಲ. ಸರಕುಸಾಗಣಿ ಗಾಡಿ ಮತ್ತು ಫಿರಂಗಿಸಾಗಣೆ ಗಾಡಿಗಳನ್ನು ಒದಗಿಸುವ ಕಾರ್ಯಬಾರಿಯಾಗಿದ್ದ ಮೇಜರ್ ಡಲ್ಲಾಸ್ ಈ ವರೆಗೆ ಸೈನ್ಯದ ಪಥಕ್ರಮಣದ ಪ್ರಗತಿಗೆ ಬಾಧಕವಾಗಿದ್ದ ಅಡಚಣೆಗಳನ್ನು ನಿವಾರಿಸುವ ಉದ್ದೇಶದಿಂದ ತಾನು ತೋಪು ಉಡಾವಣೆಯ ಫಿರಂಗಿಸಾಲು ವಿಭಾಗಕ್ಕೆ ಸೇರಿಕೊಂಡನು. ಆತನ ಸುಪರಿಚಿತ ಉತ್ಸಾಹ ಕ್ರಿಯಾಶೀಲತೆಗಳಿಂದಾಗಿ ಒಳ್ಳೆಯ ಅನುಕೂಲವಾಗುವುದೆಂದೂ ಇನ್ನೆಲ್ಲ ಸರಿಯಾಗುವುದೆಂದೂ ಭರವಸೆ ಇಟ್ಟುಕೊಳ್ಳಲಾಯಿತು.

ಈ ದಿನ ಟಿಪ್ಪುವಿನ ಕೆಲವು ಕುದುರೆಯಾಳುಗಳನ್ನು ಕ್ಯಾಪ್ಟನ್ ವಾಕರ್ ಅವರ ತಂಡ ವಶಕ್ಕೆ ತೆಗೆದುಕೊಂಡಿತು. ಜನರಲ್ ಸ್ಟೂವರ್ಟ್ ಅವರ ಮೇಲೆ ಟಿಪ್ಪು ಮಾಡಿದ ದಾಳಿಗೆ ಸಂಬಂಧಿಸಿದಂತೆ ಕೆಲವು ದಿನಗಳಿಂದ ಪ್ರಚಲಿತವಿದ್ದ ವರದಿಗಳನ್ನು ಅವರ ಕಥನಗಳು ದೃಢಪಡಿಸಿದುವು. ಈಗ ನಮಗೆ ತಿಳಿದಿದ್ದೇನೆಂದರೆ, ಅದೇನಿದ್ದರೂ ಹೊರಪಾಳೆಯಕ್ಕಷ್ಟೇ ಸೀಮಿತವಾಗಿತ್ತು ಮತ್ತು ಶತ್ರುಗಳನ್ನು ಕೊಚ್ಚಿಹಾಕಿ ಹಿಂದಟ್ಟಲಾಯಿತು ಎನ್ನುವುದು.

19ನೇಯ ತಾರೀಖಿನಂದು ಎಡಭಾಗದ ಕಾಲುಬಲ ಹಾಗೂ ಕುದುರೆಪಡೆ 5 ಮೈಲಿಗಳಷ್ಟು ದೂರ ಸಾಗಿತು. ಹಾರೋಹಳ್ಳಿಯಲ್ಲಿ (Arravully) ಬೀಡುಬಿಟ್ಟಿತು. ಶತ್ರುವಿನ ಕುದುರೆಪಡೆಯ ಒಂದು ಸಣ್ಣ ಗುಂಪು ಹೇಗೋ ನಮ್ಮ ಮುಂದೆ ಕಾಣಿಸಿಕೊಂಡು ಸುತ್ತುವರಿಯಿತು, ಕಾಳುಕಡ್ಡಿಗಳನ್ನು ಸುಟ್ಟುಹಾಕಿತು. ಆದರೆ ಎಷ್ಟೋ ದಿನಗಳವರೆಗೆ ಸೈನ್ಯದ ಎತ್ತು-ಕುದುರೆಗಳಿಗೆ ಸಾಕಾಗುವಷ್ಟು ಕಾಳುಕಡ್ಡಿ ಉಳಿದೇ ಇತ್ತು. ಇಲ್ಲಿ ಈ ನಾಡು ಇನ್ನೂ ಹೆಚ್ಚು ಖುಲ್ಲಾ ಆದ್ದರಿಂದ ಮರಳವಾಡಿ (Madwarry) ರಾಮಗಿರಿ (Ramgiry), ಸಾವನದುರ್ಗ (Sawindroog) ಮತ್ತು ಇನ್ನೂ ಹಲವು ದುರ್ಗಗಳು ಕಾಣುವಂತಿದ್ದುವು. ಪಾಳೆಯಕ್ಕೆ ಬೇಕಾಗುವಷ್ಟು ನೀರಿನ ಒದಗಣಿ ಇತ್ತು; ಬೇರೆ ಇಲ್ಲಿ ಅನುಕೂಲಗಳೂ ಇದ್ದವು.

ಹಾರೋಹಳ್ಳಿ ಒಂದು ದೊಡ್ಡ ಊರು. ಅದಕ್ಕೆ ಒಂದು ಮಣ್ಣಿನ ಕೋಟೆಯ ರಕ್ಷಣೆ ಇದೆ. ಮುಳ್ಳುಕಂಟಿಗಳು ತುಂಬಿರುವ ಆಳವಾದ ಕಂದಕವಿದೆ. ಹೂಡೆಗಳ ಪಾರ್ಶ್ವರಕ್ಷೆ ಇರುವ ಗೋಡೆಗಳು ಎತ್ತರವಾಗಿರುವುದರಿಂದ ಯಾವುದಾದರೂ ಸ್ಥಳೀಯ ಶತ್ರುಸೈನ್ಯ ಎದುರಾದರೆ, ತನ್ನನ್ನು ರಕ್ಷಿಸಿಕೊಳ್ಳಲು ಸಾಕಷ್ಟು ಸಮರ್ಥವಾಗಿರುವಂತೆ ಸುಲಭವಾಗಿ ಅದನ್ನು ಬಳಸಬಹುದು.[5]

ಈ ದಿನ ಸುಲ್ತಾನ್ ಪೇಟೆಗೆ ಸಮೀಪದಲ್ಲಿ ಹಲಗೂರು ಕಡೆಗೆ ಸುಲ್ತಾನನ ಸೈನ್ಯ ನುಗ್ಗಿದೆ ಎಂದು ಬೇಹುಗಾರಿಕೆ ಸುದ್ದಿ ಬಂದಿದೆ.

20ನೆಯ ತಾರೀಖು ಎಡಪಕ್ಕದ ಮುಂಚೂಣಿ ದಳ ಮತ್ತು ಕುದುರೆಯಾಳು ಪಡೆ ಕಾನಕಾನ ಹಳ್ಳಿಯಿಂದ ಸುಮಾರು 7 ಮೈಲಿ ಉತ್ತರಕ್ಕೆ ಒಂದು ಕಣಿವೆದಾರಿಗೆ ಸಮೀಪ ಠಾಣ್ಯ ಹೂಡಿತು. ಬಲಪಕ್ಕದ ಮುಂಚೂಣಿ ದಳ ಹಾರೋಹಳ್ಳಿಯತ್ತ ಸಾಗಿತು. ಕರ್ನಲ್ ವೆಲ್ಲೆಸ್ಲಿಯ ದೊಡ್ಡ ಸೈನ್ಯಭಾಗ ಸ್ವಲ್ಪ ದೂರದಲ್ಲಿ, ಹಿಂಬದಿಯಲ್ಲಿ ಒಂದು ಕಡೆ ತನ್ನ ನೆಲೆಯಲ್ಲಿತ್ತು.

ಕುದುರೆಪಡೆ ಅರ್ಕಾವತೀ ನದಿಯ ಪಶ್ಚಿಮದ ಕಡೆಯಿಂದ ಸ್ವಲ್ಪ ಕಾಳುಕಡ್ಡಿ ಸಂಗ್ರಹಿಸಿಕೊಂಡಿತು. ಆದರೆ ನಮ್ಮ ಎತ್ತು-ಕುದುರೆಗಳು, ಈ ವರೆಗೆ ಮಾಡಿದ ಹಾಗೆ, ಈ ಪಾಳೆಯದಲ್ಲಿ ಚೆನ್ನಾಗಿ ನಡೆದುಕೊಳ್ಳಲಾರವು ಎಂದು ಭಾವಿಸುವುದಕ್ಕೆ ಕಾರಣಗಳಿದ್ದವು. ಸೈನ್ಯದ ನಡೆಯ ಪ್ರಗತಿ ಮಂದಗತಿಯಲ್ಲಿತ್ತು. ಇದು ಎತ್ತು- ಕುದುರೆಗಳ ವರ್ತನೆಯಲ್ಲಿ ಉಂಟಾದ ಯಾವ ಬದಲಾವಣೆಯಿಂದಲೂ ಆದದ್ದಲ್ಲ. ನಿರೀಕ್ಷೆಗಿಂತ ಹೆಚ್ಚಾಗಿಯೇ ಕಾಳುಕಡ್ಡಿಗಳ ತುಂಬಿದ ಸಂಗ್ರಹವಿತ್ತು. ಅಥವಾ ಈ ಸ್ಥಳದ ಸ್ಥಿತಿಯಿಂದಾಗಿ ಅದರ ಗತಿ ನಿಧಾನವಾಯಿತೆಂದೂ ಅಲ್ಲ. ಹಾಗೆಯೇ ಇರಕಲು ದಾರಿಯಲ್ಲಿ ಸೈನಿಕರು ಒಬ್ಬರ ಹಿಂದೊಬ್ಬರು ಸಾಗಬೇಕಾದ ಸ್ಥಿತಿಯಾಗಲಿ ರಸ್ತೆಗಳಾಗಲಿ ಅಲ್ಲ. ವಿಷಯ ಏನೆಂದರೆ, ಈ ಹಿಂದೆ ಮಾರ್ಕ್ವಿಸ್ ಕಾರ್ನ್‌ವಾಲೀಸನ ಸೈನ್ಯ ಮೇ 1791ರಲ್ಲಿ ಫಿರಂಗಿ ಸಾಲುಗಳೊಂದಿಗೆ ಶತ್ರುಗಳ ದೇಶದಲ್ಲಿ 2 ತಿಂಗಳ ಕಾಲ ಇದ್ದು, ಎರಡೇ ದಿನಗಳಲ್ಲಿ ಇದೇ ಹಾದಿಯನ್ನು ಕ್ರಮಿಸಿತ್ತು. ಈಗ ಜನರಲ್ ಹ್ಯಾರಿಸ್

ಎಷ್ಟೇ ಶ್ರಮವಹಿಸಿದರೂ ಅದಕ್ಕೆ ಐದು ದಿನಗಳ ಕಾಲ ತೆಗೆದುಕೊಳ್ಳಬೇಕಾಯಿತು. ಆದ್ದರಿಂದ ಈ ತಡಕ್ಕೆ ಕಾರಣ, ಇದಕ್ಕೆ ಆಗಲೇ ಗೊತ್ತುಪಡಿಸಿದ್ದ ಕಾರ್ಯಸ್ವರೂಪವೇ ಎನ್ನುವುದು ಸ್ಪಷ್ಟ.[6]

ಮಾರ್ಚ್ 21 ನೆಯ ತಾರೀಖಿನಂದು ಸೈನ್ಯ ಕಾನಕಾನ ಹಳ್ಳಿಯಲ್ಲಿ ಶಿಬಿರ ಹಚ್ಚಿತು. 16ನೆಯ ತಾರೀಖಿನಿಂದ ಪ್ರಾಂತ ಒತ್ತೊತ್ತಾಗುತ್ತ, ಕಾಡುಮೇಡುಗಳಿಂದ ಕಿರಿದಾಗುತ್ತ ಹೋದಂತೆ ಸೈನ್ಯ ಮೂರು ದೊಡ್ಡ ವಿಭಾಗಗಳಲ್ಲಿ ಸಾಗುತ್ತಲೂ ಬೀಡುಬಿಡುತ್ತಲೂ ಇತ್ತು ಎಂದರೆ ಕುದುರೆಪಡೆ ಮತ್ತು ಎಡಪಕ್ಕದ ಮುಂಚೂಣಿದಳ ಮೊದಲು, ಬಲಪಕ್ಕದ ಮುಂಚೂಣಿದಳ ಮಧ್ಯೆ, ಕರ್ನಲ್ ವೆಲ್ಲಿಸ್ಲಿಯ ನಾಯಕತ್ವದ ದೊಡ್ಡ ಸೇನಾವಿಭಾಗ ಹಿಂದೆ ಹೀಗಿತ್ತು. ಈ ವ್ಯವಸ್ಥೆ ಬಹಳವಾದ ಇರಕಲುದಾರಿಗಳು ಕಾರಣಗಳು ಅನಿವಾರ್ಯವಾಗಿತ್ತು. ಹಾಗಲ್ಲವಾದರೆ ಒಂದೇ ದಿನದಲ್ಲಿ ಇಷ್ಟು ಅಗಾಧವಾದ ಸೈನ್ಯ, ಎತ್ತು – ಕುದುರೆ ಹಿಂಡುಗಳು ಮತ್ತು ಅವನ್ನು ಹಿಂಬಾಲಿಸುವವರು ಸೇರಿದಂತೆ ಪಥ ಕ್ರಮಣ ಮಾಡುವುದು ಸಾಧ್ಯವೇ ಇರಲಿಲ್ಲ. ಆದರೆ ಟಿಪ್ಪುಸುಲ್ತಾನನು 15 ಮೈಲಿಗಳ ಅಂತರದಲ್ಲಿಯೇ ಸಮೀಪಿಸಿದ್ದಾನೆಂಬುದು ಈಗ ತಿಳಿದು ಬಂದಿತ್ತಾದ್ದರಿಂದ ದಂಡನಾಯಕನು ಪಥಕ್ರಮಣದ ವ್ಯವಸ್ಥೆ ಮತ್ತು ಬೀಡುಬಿಡುವುದು ಇವುಗಳಲ್ಲಿ ಬದಲಾವಣೆಯಾಗಬೇಕೆಂದು ಸರಿಯಾಗಿಯೇ ನಿರ್ಣಯಿಸಿಕೊಂಡನು. ಹಲವು ತುಕುಡಿಗಳು ಈಗ ಒಗ್ಗೂಡಿದುವು. ಇಡೀ ಸೈನ್ಯ ಬಾರುಸಿಪಾಯಿಗಳ ಫಿರಂಗಿಸಾಲು ಸಹಿತವಾಗಿ ಕಾನಕಾನ ಹಳ್ಳಿಯಲ್ಲಿ ತಮ್ಮ ವ್ಯೂಹ ರಚಿಸಿಕೊಂಡವು. ಕರ್ನಲ್ ವೆಲ್ಲಿಸ್ಲಿ ನಿಜಾಮನ ಸಹಾಯಕದಳದೊಂದಿಗೆ ಕೂಡಿಕೊಂಡು ಸ್ವಲ್ಪ ದೂರದಲ್ಲಿ ಹಿಂದೆ ನೆಲೆಯಾದನು.

45 ಗಜಗಳಷ್ಟು ಅಗಲವಿರುವ ಅರ್ಕಾವತಿ ನದಿಯ ದಂಡೆಗಳ ಮೇಲೆ ಸೈನ್ಯ ಬೀಡುಬಿಟ್ಟಿತು. ಈ ಋತುಮಾನದಲ್ಲಿ ಇದರಲ್ಲಿ ತೀರ ಸಣ್ಣದಾಗಿ ನೀರು ಹರಿಯುತ್ತಿತ್ತು. ಆದರೆ ಕಾನಕಾನಹಳ್ಳಿಯ ಕೋಟೆಯ ಬುಡದಲ್ಲಿ ನಿಂತ ನೀರಿನ ಕೆಲವು ಅಳವಾದ ಸೆಲೆಗಳಿದ್ದವು. ಬಾರಿ ಸೈನ್ಯಕ್ಕೆ ಕೂಡ ಈ ನೀರು ಸಾಕಾಗಬಹುದಾಗಿತ್ತು. ಸುಲ್ತಾನನ ಕುದುರೆಪಡೆ ಕಾಳುಕಡಿಸಂಗ್ರಹವನ್ನು ಸುಡುವುದೇ ಆಗಿದ್ದರೂ, ಕಾನಕಾನ ಹಳ್ಳಿಗೆ ಕೆಲವು ಮೈಲಿಗಳಾಚೆ ಪೂರ್ವದಿಕ್ಕಿನ ಕಡೆಯ ಹಳ್ಳಿಗಳಿಂದ ಬೇಕಾದಷ್ಟು ಮೇವು ಸಂಗ್ರಹಿಸಿಕೊಳ್ಳಲಾಯಿತು.

ಸೈನ್ಯ ಈ ಜಾಗದಲ್ಲಿ ತಂಗುವುದೇ ಸರಿ ಎಂಬುದಾಗಿ ಗೊತ್ತು ಮಾಡಿ ಕೊಂಡಿತ್ತಾದರೂ ಡೆಪ್ಯೂಟಿ ಕ್ವಾರ್ಟರ್ – ಮಾಸ್ಟರ್ ಜನರಲ್ ಮೇಜರ್ ಅಲೆನ್ ಮತ್ತು ಪೂರ್ವಭಾವಿ ಮಾರ್ಗಶೋಧಕದಳದ ಕ್ಯಾಪ್ಟನ್ ಓರ್ (Caption Orr) 21ನೆಯ ತಾರೀಖು ಮಧ್ಯಾಹ್ನ ಶತ್ರುವಿನ ಚಲನವಲನಗಳ ಬೇಹುಗಾರಿಕೆಯ ಮೂಲಕ ಅಚ್ಚಲು ಎಂಬ (Achel) ಎಂಬ ಹಳ್ಳಿಯಲ್ಲಿ ಶತ್ರುವಿನ ಅಶ್ವಸೈನ್ಯದ ಒಂದು ಸಣ್ಣ ಗುಂಪಿನೊಂದಿಗೆ 2 ಫಿರಂಗಿಗಾಡಿಗಳಿದ್ದುದನ್ನು ತಿಳಿದುಕೊಂಡರು.

ಕಾನಕಾನ ಹಳ್ಳಿಯಿಂದ ಸುಲ್ತಾನ್ ಪೇಟೆ ವರೆಗಿನ ಸುದೀರ್ಘಪಥ ಕ್ರಮಣವನ್ನು ತಡೆಯಲು ಅನುಕೂಲಕರವಾಗಿ ಸಜ್ಜುಗೊಳಿಸಿಟ್ಟಿದ್ದ ಈ ಫಿರಂಗಿಗಾಡಿಗಳನ್ನು ಸ್ವಾಧೀನಪಡಿಸಿಕೊಳ್ಳಲೂ ಒಂದು ಬ್ರಿಗೇಡ್ ಮತ್ತು ಸ್ಥಳೀಯ ಕುದುರೆಪಡೆಯ ಒಂದು ರೆಜಿಮೆಂಟ್ ಇವನ್ನು ಪ್ರತ್ಯೇಕ ಕಾರ್ಯನಿಮಿತ್ತ ಕಳಿಸಿಕೊಡಲು ರಾತ್ರಿ 10 ಗಂಟೆಯ ವೇಳೆಗೆ ನಿಶ್ಚಯಿಸಿದರು. ಮರುದಿನ ಬೆಳಗ್ಗೆ ಮುಂಜಾವಿನಲ್ಲೇ ಬಲಪಕ್ಕದ ಮುಂಚೂಣಿದರ ಮತ್ತು ಉಳಿದ ಕುದುರೆಪಡೆಯೊಂದಿಗೆ ಅನುಸರಿಸಿ ಹೋಗುವುದು ಎಂದಾಗಿತ್ತು.[7]

ಕರ್ನಲ್ ರಾಬರ್ಟ್ಸ್ ನಾಯಕತ್ವದಲ್ಲಿ 5ನೆಯ ಬ್ರಿಗೇಡ್, ಮೇಜರ್ ಅಲೆನ್ ಮತ್ತು ಕ್ಯಾಪ್ಟನ್ ಓರ್ ಅವರ ನಿರ್ವಾಹಕತ್ವದಲ್ಲಿ ಮೇಜರ್ ಮೆಕಲಿಸ್ಟರ್ ಅವರ ಅಶ್ವದಳದ ರೆಜಿಮೆಂಟ್ ಗೊತ್ತಾದ ವೇಳೆಗೆ ಬಿಡಾರದಿಂದ ಹೊರಟಿತು. ಬೆಳಗಿನ 3 ಗಂಟೆ ಹೊತ್ತಿಗೆ ಇವರಿಗೆ ಶತ್ರುಪಾಳಯದ ಇಬ್ಬರು ಕಾವಲುರಾವುತರು ಎದುರಾಗಿ ಗೋಚರಿಸಿದರು. ಅವರು 300 ಕುದುರೆಗಳ ಒಂದು ದಳಕ್ಕೆ ಸೇರಿದವರು. ಈ ಕಾವಲುರಾವುತರು ಮೊಳಗಿಸಿದ ಎಚ್ಚರದ ಗಂಟೆಯಿಂದ ಅವಕಾಶವಾಯಿತು. ಆಗಲೇ ಶತ್ರು ಹಾಳುಗೆಡವಲು ಆರಂಭಿಸಿದ್ದ ಫಿರಂಗಿಗಾಡಿಗಳಂತೂ ಸ್ವಾಧೀನಕ್ಕೆ ಬಂದು ಅಷ್ಟುಮಟ್ಟಿಗೆ ಉದ್ದೇಶ ಸಫಲವಾಯಿತು.

ಈ ಫಿರಂಗಿಗಾಡಿಗಳನ್ನು ಒಂದು ಬಯಲಲ್ಲಿ ಅನುಕೂಲಕರವಾಗಿ ನಿಲ್ಲಿಸಿತ್ತು. ಜನರಲ್ ಹ್ಯಾರಿಸ್ ಸೈನ್ಯದ ಬಲಪಕ್ಕದ ದಳ ಮತ್ತು ಕುದುರೆಪಡೆಯ 5 ರೆಜಿಮೆಂಟ್‌ಗಳ ಜೊತೆಗೆ ಅಲ್ಲಿಯೇ 22ನೆಯ ತಾರೀಖಿನಂದು ಬೀಡುಬಿಟ್ಟನು. ಎಡಪಕ್ಕದ ದಳ ಮತ್ತು ಒಂದು ಕುದುರೆಪಡೆ ಫಿರಂಗಿಸಾಲಿನ ರಕ್ಷಣೆಗಾಗಿ ಕಾನಕಾನ ಹಳ್ಳಿಯಲ್ಲೇ ಉಳಿದುಕೊಂಡಿತು. ನಿಜಾಮನ ಸಹಾಯಕದಳ ಕಾನಕಾನ ಹಳ್ಳಿಯತ್ತ ಮುನ್ನಡೆಯಿತು.

23ನೆಯ ತಾರೀಖಿನಂದು ಬಲಪಕ್ಕದ ದಳ ಮತ್ತು ಅಶ್ವಸೈನ್ಯ ಅಚ್ಚಲಿನಿಂದ ಹೊರಟು ಸುಲ್ತಾನ್ ಪೇಟೆಯಲ್ಲಿ ಬೀಡುಬಿಟ್ಟವು. ಎಡಪಕ್ಕದ ದಳ ಮತ್ತು ಫಿರಂಗಿ ಸಾಲು ಅಚ್ಚಲಿನತ್ತ ನಡೆದುವು. ಕರ್ನಲ್ ವೆಲ್ಲಿಸ್ಲಿ ಕಂಟಿಂಜೆಂಟ್ ಜೊತೆಗೂಡಿ ಕಾನಕಾನ ಹಳ್ಳಿಯಿಂದ ಹೊರಟು ಹಲಗೂರಿನಲ್ಲಿ (Allagoor) ಸೈನ್ಯದ ಮುಂದೆ ಬಿಡಾರ ಮಾಡಿದನು.

ಬೆಳಗಾಗುತ್ತಿದ್ದ ಹಾಗೆ, ಮುಂದಾಗಿ ಹೊರಟಿದ್ದ ರಕ್ಷಕಪಡೆ ಸುಲ್ತಾನ್ ಪೇಟೆಯನ್ನು ತಲುಪಿತ್ತು ಎನ್ನುವಾಗ ಪಶ್ಚಿಮದ ಕಡೆಗೆ ಎದ್ದಿದ್ದ ದಟ್ಟದೂಳಿನ ಆಚ್ಛಾದನೆ ಟಿಪ್ಪುಸುಲ್ತಾನನ ಸೈನ್ಯ ಚಲಿಸುತ್ತಿದ್ದುದರ ಸ್ಪಷ್ಟಸೂಚನೆಯಾಗಿತ್ತು. ಅನಂತರ ಅದು ತನ್ನ ನೆಲೆಯಿಂದ ಕದಲಿ ಮದ್ದೂರು ಹೊಳೆಯ ಪಶ್ಚಿಮದ ದಂಡೆಯಿಂದ ನಡೆದು ಮಳವಳ್ಳಿ (Mallavally) ಯಲ್ಲಿ ಬೀಡುಬಿಟ್ಟಿರಬೇಕೆಂದು ತೋರಿತು.[8]

ಹೀಗೆ ಪ್ರವಾಸ ಮುಂದುವರಿಯುವ ವಿವರಣೆ ಬರುತ್ತದೆ. ಈ ಪ್ರತ್ಯಕ್ಷದರ್ಶಿಯ ಕಥನದಿಂದ 200 ವರ್ಷಗಳ ಹಿಂದಿನ ಕಾನಕಾನಹಳ್ಳಿಯ ಭೌಗೋಳಿಕ, ಸಾಮಾಜಿಕ, ಸೈನ್ಯ, ಯುದ್ಧ, ಜನರ ಜೀವನ ವಿಧಾನ ತಿಳಿಯುತ್ತದೆ.

ಶ್ರೀರಂಗಪಟ್ಟಣದ ಯುದ್ಧಗಳಲ್ಲಿ ಕಾನಕಾನಹಳ್ಳಿ ಪಾತ್ರ

1791ರ ಮೇ–ಜೂನ್ ತಿಂಗಳಲ್ಲಿ ಟಿಪ್ಪು ಸುಲ್ತಾನನು ಇಂಗ್ಲಿಷ್ ಸೈನ್ಯದೊಂದಿಗೆ ಹೋರಾಡಬೇಕಾದ ಸಂದರ್ಭ. ಗುತ್ತಿ ಮೊದಲಾದ ಕಡೆಗಳಿಂದ ಬಂದ ಸೇನೆಯ ತುಕುಡಿಗಳನ್ನು ಕೂಡಿಸಿಕೊಂಡು ಬೆಂಗಳೂರಿನಿಂದ ಶ್ರೀರಂಗಪಟ್ಟಣಕ್ಕೆ ಬರುವ ಬಾಟಾಮಾರ್ಗದಲ್ಲಿ (ಆಗ ಇದನ್ನು ಚನ್ನಪಟ್ಟಣದ ರಸ್ತೆ ಎನ್ನುತ್ತಿದ್ದರು) ರಾಮಗಿರಿ (ಈಗ ರಾಮನಗರ) ಶಿವನಗಿರಿ ದುರ್ಗಗಳಲ್ಲಿ ಭದ್ರವಾಗಿ ನೆಲೆನಿಂತು ಶತ್ರುಗಳನ್ನು ಎದುರಿಸಲು ಅವನು ಸಿದ್ಧವಾದನು. ಆದರೆ ಲಾರ್ಡ್ ಕಾರ್ನ್‌ವಾಲೀಸ್ ಚತುರನಾದುದ್ದರಿಂದ ಟಿಪ್ಪುವಿನ ಸೈನ್ಯದ ಸಜ್ಜುಗಳನ್ನೆಲ್ಲ ಸಕಾಲದಲ್ಲಿ ತಿಳಿದು, ಬಾಟಾ ಮಾರ್ಗವನ್ನು ತಪ್ಪಿಸಿ ಬಿಡದಿ ಚನ್ನಪಟ್ಟಣಗಳ ದಾರಿಯಿಂದ ಪಶ್ಚಿಮದ ಕಡೆಗೆ ತಿರುಗಿದನು. ಆಗ್ನೇಯ ದಿಕ್ಕಿನ ಕಡೆಯಿಂದ ತನ್ನ ಸೈನ್ಯವನ್ನು ಮುನ್ನಡೆಸಿ ಕಾನಕಾನಹಳ್ಳಿಯನ್ನು ಹಿಂದಕ್ಕಿ, ಕಬ್ಬಾಳು ದುರ್ಗವನ್ನು ಹಾಯ್ದು, ಬಹುಶ್ರಮದಿಂದ ಮಳವಳ್ಳಿಗೆ ಬಂದು ಸೇರಿದನು. ದವಸ ಧಾನ್ಯಗಳ ಅಭಾವದಿಂದ ಕುಗ್ಗುತ್ತ, ನಡುನಡುವೆ ಟಿಪ್ಪುವಿನ ಸೈನಿಕರು ಅಡ್ಡಗಟ್ಟಿ ಒಡ್ಡುತ್ತಿದ್ದ ಹೊಂಚು ದಾಳಿಗಳ ಹಿಂಸೆಯನ್ನು ಸಹಿಸುತ್ತ, ಪಾಡುಪಡಬೇಕಾಯಿತು. ಕೊನೆಗೆ ಶ್ರೀರಂಗಪಟ್ಟಣಕ್ಕೆ ಹತ್ತಿರದ ಅರಕೆರೆಯನ್ನು ಮುಟ್ಟಿದನು. ಶ್ರೀರಂಗಪಟ್ಟಣದ ಮುತ್ತಿಗೆಗೆ ಪೂರ್ವಭಾವಿಯಾಗಿ ಕೈಕೊಂಡ ಈ ದಾಳಿ ಸಾಕಷ್ಟು ಯಶಸ್ಸು ಕಂಡಿತು. ಆತ ಸಮಾಧಾನವಾಗಿ ಹಿಂದಿರುಗಿದನು.[9]

1792ರಲ್ಲಿ ಕಾರ್ನ್‌ವಾಲೀಸ್ ನೇರವೂ ಹತ್ತಿರದ್ದೂ ಆದ ಚನ್ನಪಟ್ಟಣ ಮಾರ್ಗವನ್ನು ಬಿಟ್ಟು, ದಕ್ಷಿಣ ದಿಕ್ಕಿನ ಕಡೆಯ ಕಾನಕಾನಹಳ್ಳಿಯ ದಾರಿ, ಉತ್ತರದ ತುದಿಯ ಹುಲಿಯೂರು ದುರ್ಗದ ಹಾದಿ ಇವನ್ನೇ ಬಳಸಿದ್ದನು.

ಇನ್ನೊಂದು ಸಲ, 1799ರ ಮಾರ್ಚ್ 9–24ರ ನಡುವೆ ಟಿಪ್ಪುವಿನ ಮೇಲಿನ ನಿರ್ಣಾಯಕ ಯುದ್ಧದಲ್ಲಿ ಜನರಲ್ ಹ್ಯಾರಿಸ್ ಕೂಡ ಕಾನಕಾನಹಳ್ಳಿಯ ಮಾರ್ಗವನ್ನೇ ಆಯ್ದುಕೊಂಡನು. ತನ್ನ ಸೈನ್ಯಗತಿಯಲ್ಲಿ ಆನೆಕಲ್ ಜಿಗಣಿಗಳನ್ನು ದಾಟಿ, ಬೆಂಗಳೂರು ಸಮೀಪಿಸಿದ ಮೇಲೆ ಅಲ್ಲಿಂದ ಶ್ರೀರಂಗಪಟ್ಟಣವನ್ನು ತಲುಪಲು ಇದ್ದ ಮೂರು ಮಾರ್ಗಗಳಲ್ಲಿ ಅವನಿಗೆ ಕೂಡ ಇದೇ ವಿಹಿತವಾಗಿ ಕಂಡಿತು. 1799ರ ಮಾರ್ಚ್ 16ರಂದು ಆ ದಿಕ್ಕಿನ ಕಡೆಗೆ ತನ್ನ ಸೇನೆಯೊಂದಿಗೆ ಹೊರಟನು. ನಡುವೆ ಮಿಲಿಟರಿ ಸಜ್ಜಿಗಾಗಿ ಅಲ್ಲಲ್ಲಿ ತಂಗುತ್ತ, 19ರಂದು ಪ್ರಯಾಣ ಬೆಳಸಿ, 21ರಂದು ಕಾನಕಾನಹಳ್ಳಿಯಲ್ಲಿ

ಬೀಡುಬಿಟ್ಟನು. ಮತ್ತೆ ಅಲ್ಲಿಂದ ಹೊರಟು ಮದ್ದೂರಿನ ಹೊಳೆಯ ಪಶ್ಚಿಮದಂಡೆಯನ್ನು ಸೇರಿ, ತನ್ನ ಮುಂದಿನ ಕಾರ್ಯಗತಿಯನ್ನು ನಿರ್ಧರಿಸಿದನು (HOM. vol. 3 p. 978).

ಜನರಲ್ ಹ್ಯಾರಿಸ್ ಕಾನಕಾನಹಳ್ಳಿಯ ಮಾರ್ಗವನ್ನು ಬ್ರಿಟಿಷ್ ಪಡೆಗಳ ನಡೆಗೆ ಬಳಸಿದನಷ್ಟೆ. ಟಿಪ್ಪು ಈ ಪಡೆಗಳ ನಡೆಯನ್ನು ತನ್ನ ಗೂಢಚರ್ಯ ವಿಭಾಗದ ಮೂಲಕ ಸರಿಯಾಗಿ ಗ್ರಹಿಸದೆ ಹೋದನು. ಅವು ಯಾವ ಮಾರ್ಗ ಹಿಡಿದು ತನ್ನ ರಾಜಧಾನಿಯತ್ತ ಬರಬಹುದು ಎನ್ನುವುದೂ ಅದಕ್ಕೆ ಯಾವ ಪೂರ್ವಸಿದ್ಧತೆ ನಡೆಯಬೇಕು ಎನ್ನುವುದೂ ಅವನಿಗೆ ತಿಳಿಯದೆ ಹೋಯಿತು ಎಂಬುದು ಇತಿಹಾಸಕಾರರ ವಿಚಾರವಾಗಿದೆ. ಹೀಗಾಗಿ ಬ್ರಿಟಿಷ್ ಪಡೆಗಳು ಕಾನಕಾನಹಳ್ಳಿ ಮಾರ್ಗವಾಗಿ ಹೊರಟು ಸೋಸಲೆಯ ಹತ್ತಿರ ಕಾವೇರಿ ನದಿಯನ್ನು ದಾಟಿ ಬರಬಹುದು ಎನ್ನುವುದನ್ನು ಅವನು ನಿರೀಕ್ಷಿಸಿರಲಿಲ್ಲ ಅದಕ್ಕೆ ಅವನು ಸಿದ್ಧತೆ ಮಾಡಿಕೊಂಡಿರಲಿಲ್ಲ. ಮಳವಳ್ಳಿಯ ನೆಲೆಯಲ್ಲಿ ಬ್ರಿಟಿಷರನ್ನು ಸಮರ್ಥವಾಗಿ ಎದುರಿಸಲು ಸಂದರ್ಭಗಳು ಅವನಿಗೆ ಅನುಕೂಲವಾಗಿದ್ದರೂ ಬ್ರಿಟಿಷ್ ಪಡೆಗಳ ಮುನ್ನಡೆಯನ್ನು ಮುಂದಾಗಿ ಅವನು ಗ್ರಹಿಸಲಾರದೆ ಹೋದನು. ಇದು ಅವನ ಗೆಲುವಿಗೆ ಆಘಾತಕಾರಿಯಾಯಿತು, ಸಾವಿಗೆ ಕಾರಣವೂ ಆಯಿತು (HOM. vol. 3 p. 1069).

ಆಂಗ್ಲ ಇತಿಹಾಸಕಾರರು, ಈಗ ನೋಡಿರುವಂತೆ ಬುಕನನ್, ವಿಲ್ಕ್ ಮೊದಲಾದವರು ಭಾವಿಸಿರುವಂತೆ ಬ್ರಿಟಿಷ್ ಪಡೆಯ ಕಾರ್ಯಾಚರಣೆಗಳಿಂದ ಕಾನಕಾನಹಳ್ಳಿಯ ಮತ್ತು ಆ ತಾಲ್ಲೂಕಿನ ಮಾರ್ಗ ಮಧ್ಯದ ಇತರ ಹಳ್ಳಿಗಳ ಜನ ಜಾನುವಾರುಗಳಿಗೆ ಗದ್ದೆ ಬೆದ್ದಲು ತೋಟ ತುಡಿಕೆಗಳಿಗೆ ತೊಂದರೆಯಾಗಿರುವುದು ಬಲುಮಟ್ಟಿಗೆ ಸಂಭಾವ್ಯವಾದ್ದು; ಹಾಗೆಯೇ ಆ ಪಡೆಯ ನಡಿಗೆ ಅನನುಕೂಲವುಂಟು ಮಾಡಲು ಟಿಪ್ಪು ಸುಲ್ತಾನನು ದಾರಿಯ ಹಳ್ಳಿಗಳನ್ನು ಕೂಡ ಹಾಳುಗೆಡವಿರುವುದು ಕೂಡ ಸಂಭಾವ್ಯವದ್ದೇ. ಇವನ್ನು ಆಂಗ್ಲ ಇತಿಹಾಸಕಾರರು ಒತ್ತಿ ಹೇಳಿದ್ದರೂ ದೇಶೀಯ ಇತಿಹಾಸಕಾರರು ಸಾಕ್ಷ್ಯಾಧಾರಗಳ ಅಭಾವದಿಂದಲೋ ಏನೋ ಈ ವಿಷಯವನ್ನು ಅಷ್ಟು ಸ್ಪಷ್ಟವಾಗಿ ಹೇಳಿದಂತಿಲ್ಲ. ಆದರೆ "ಕಾರ್ನ್‌ವಾಲೀಸ್ ಕಾನಕಾನಹಳ್ಳಿಯ ದಾರಿ ಹಿಡಿದು ಸೇನೆಯೊಂದಿಗೆ ಸಾಗುತ್ತಿದ್ದ ಹಾಗೆ ರಸ್ತೆಯ ಅಕ್ಕಪಕ್ಕದ ಹಳ್ಳಿಗಳನ್ನೆಲ್ಲ ಸುಟ್ಟು ಹಾಳುಗೆಡವಲಾಗಿತ್ತು; ಕಾಳುಕಡ್ಡಿ ಏನೂ ಸಿಕ್ಕಬಾರದು ಎನ್ನುವುದು ಇದರ ಉದ್ದೇಶ. ಯಾರೂ ಶತ್ರುವಿನ ಬಗ್ಗೆ ರಹಸ್ಯವಾಗಿ ಸುದ್ದಿ ಕೊಡುವವರೂ ಇರಲಿಲ್ಲ. ಮಾರ್ಗದರ್ಶನಕ್ಕೆ ಜನವಿಲ್ಲ. ಧಾನ್ಯವನ್ನು ಎಲ್ಲಿ ಬಚ್ಚಿಡಲಾಗಿತ್ತೋ ಹೇಳುವವರಿಲ್ಲ. ಈ ಕಷ್ಟಗಳ ಜೊತೆಗೆ ಸಾಲದ್ದಕ್ಕೆ ಭಾರಿ ಮಳೆ, ರಸ್ತೆಗಳ ಏರುತಗ್ಗು, ಮಧ್ಯೆ ಮಧ್ಯೆ ಹೊಳೆ ಹಳ್ಳ ಕಣಿವೆಗಳು" ಎಂಬುದಾಗಿ ಎಂ.ಎಚ್. ಖಾನ್ ಎಂಬುವರು ಬರೆದಿದ್ದಾರೆ (Story of Tippu Sultan, Calcutta, 1951).[10]

ಟಿಪ್ಪಣಿಗಳು

1 ಕವಿ ವಿಶ್ವಕೋಶ ಸಂ : 2 ಪುಟ : 1023.

2 ಕಾನಕಾನಹಳ್ಳಿ ಚರಿತ್ರೆ, ಲೇ. ಡಾ. ಟಿ.ವಿ.ವಿ., ಪುಟ 90

3 ಅದೇ ಪುಟ 94

4 ಅದೇ ಪುಟ 97

5 ಕಾನಕಾನಹಳ್ಳಿ ಚರಿತ್ರೆ ಲೇ ಡಾಟಿವಿವಿ ಪು : 84

6 ಅದೇ ಪುಟ : 85

7 ಅದೇ ಪುಟ : 86

8 ಅದೇ ಪುಟ – 87

9 HOM. vol. 3, pp. 812-13.

10 ಕಾನಕಾನಹಳ್ಳಿ ಚರಿತ್ರೆ ಲೇ ಡಾಟಿವಿವಿ ಪು : 76/77

ಅಧ್ಯಾಯ – 6

ಧರ್ಮ ಮತ್ತು ವಾಸ್ತುಶಿಲ್ಪ

ಹಿನ್ನೆಲೆ – ಶಾಸನಗಳಲ್ಲಿ ಕುಲಸಂಬಂಧಿ ಕಲಹಗಳು

ಜನಪದ ಧರ್ಮ ಹಾಗೂ ಶಿಷ್ಟಧರ್ಮ ಇವುಗಳ ನಡುವಿನ ನಿರ್ದಿಷ್ಟ ಗಡಿರೇಖೆಯನ್ನು ಗುರುತಿಸುವುದು ಕಷ್ಟಸಾಧ್ಯವಾದರೂ ಕೆಲವು ಪ್ರಮುಖ ಅಂಶಗಳಿಂದ ಸ್ವಲ್ಪಮಟ್ಟಿಗೆ ಅವುಗಳಿಗಿರುವ ವ್ಯತ್ಯಾಸಗಳನ್ನು ಕಾಣಬಹುದು. ಪ್ರಪಂಚದ ಇತರ ಜನಪದ ಧರ್ಮಗಳಂತೆ ಕರ್ನಾಟಕದ ಜನಪದ ಧರ್ಮಕ್ಕೂ ಯಾವ ಲಿಖಿತ ಗ್ರಂಥಗಳ ಆಧಾರ ಅಥವಾ ತಾತ್ತ್ವಿಕ ವಿವೇಚನೆಯ ಹಿನ್ನೆಲೆ ಇಲ್ಲವೆನ್ನಬಹುದು. ಅದು ನೈಸರ್ಗಿಕ ಧರ್ಮಕ್ಕೆ ತುಂಬಾ ಹತ್ತಿರವಾಗಿದೆ. ಜನಪದ ಧರ್ಮ ಅನುಕರಣೆ ಮತ್ತು ಆಚರಣೆಗಳಿಂದ ಉಳಿದು ಬಂದಿದ್ದು, ಹೆಚ್ಚಾಗಿ ಅತಿಮಾನುಷ ಅಂಶ. ಅಲೌಕಿಕ ಜೀವಿಗಳ ಆರಾಧನೆ ಮತ್ತು ಅನೇಕ ಧಾರ್ಮಿಕ ನಂಬಿಕೆಗಳಿಂದ ಕೂಡಿದೆ. ಅದರಲ್ಲಿ ಕಂಡುಬರುವ ಆಚಾರ–ವಿಚಾರಗಳು, ನಡಾವಳಿಗಳು, ನಂಬಿಕೆಗಳು, ಕಲೆಗಳು ಮತ್ತು ಹುಟ್ಟು ಸಾವುಗಳ ಮಧ್ಯೆ ಅನುಸರಿಸಲೇಬೇಕಾದ ಸಂಪ್ರದಾಯಗಳು ಜನರ ಜೀವನ ವಿಧಾನ ಮತ್ತು ಅವರ ಮನೋದೃಷ್ಟಿಯನ್ನು ಪ್ರತಿನಿಧಿಸುತ್ತವೆ. ತಾವು ಪರಿಪಾಲಿಸುವ ಧರ್ಮದ ಧ್ಯೇಯೋದ್ದೇಶಗಳ ಅರಿವಿಲ್ಲವಾದರೂ ತಮ್ಮ ಸುತ್ತ ಕಾಪಾಡುವ ಒಂದು ಶಕ್ತಿಯಿದೆ ಎಂಬುದನ್ನು ಜನಪದರು ನಂಬುತ್ತಾರೆ. ಹೀಗಾಗಿ ಅವರು ನದಿ ಜಲಪಾತಗಳು, ಬೆಟ್ಟ ಗುಡ್ಡಗಳು, ದಟ್ಟವಾದ ಕಾಡು ಎಲ್ಲವುಗಳಲ್ಲೂ ದೈವತ್ವವನ್ನು ಅರಸುತ್ತಾರೆ. ಇವುಗಳ ಒಡೆಯನೇ ಆ ಪ್ರದೇಶದಲ್ಲಿ ವಾಸವಾಗಿದ್ದು ಕಾಯಿಲೆ ಮತ್ತು ಅನಿಷ್ಟಗಳಿಗೆ ಕಾರಣನೆಂದು ನಂಬಿ ಅವುಗಳನ್ನು ಪೂಜಿಸುತ್ತಾರೆ. ಇಂಥ ಸರ್ವಚೇತನವಾದ ವಾಸ್ತವವಾಗಿ ಜನಪದ ಧರ್ಮದ ಅಡಿಗಲ್ಲಾಗಿದೆ ಎಂದು ಹೇಳಬಹುದು.

ನೈಸರ್ಗಿಕ ವಸ್ತುಗಳ ಸುತ್ತ ಅನೇಕ ದಂತಕಥೆ, ಪುರಾಣಗಳನ್ನು ಹೆಣೆದು ಅವುಗಳ ಪ್ರಾಮುಖ್ಯತೆಯನ್ನು ಹೆಚ್ಚಿಸುವುದಲ್ಲದೆ ಹಿಂದಿನಿಂದ ನಡೆಸಿಕೊಂಡು ಬಂದ ಜೇಕು ಬೇಡಗಳನ್ನು ತಪ್ಪದೆ ಪಾಲಿಸುತ್ತಾರೆ. ಸರ್ವಚೇತನತತ್ವದಲ್ಲಿ ಜನಪದರಿಗೆ ನಂಜಿಕೆ ಬಹಳ. ಆಲ, ಬೇವು, ಅರಳಿ, ತೆಂಗು, ತುಳಸಿ, ಎಕ್ಕ ಮುಂತಾದ ಮರಗಿಡಗಳನ್ನು ತಮ್ಮ ಇಷ್ಟಾರ್ಥ ಸಿದ್ಧಿಗೆಂದು ಪೂಜಿಸುವ ಪದ್ಧತಿ ಕರ್ನಾಟಕದ ಜನಪದ ಧರ್ಮದಲ್ಲಿದೆ. ಕೆಲವರು ಅವುಗಳನ್ನು ಕಡಿಯುವುದಿಲ್ಲ. ಪವಿತ್ರ ವೃಕ್ಷಗಳನ್ನು ನಾಶ ಮಾಡಿದರೆ ತಮ್ಮ ವಂಶವೇ ನಾಶಹೊಂದುತ್ತದೆ ಎಂಬ ಭಯ ಹಾಗೂ ನಂಬಿಕೆ ಅವರಲ್ಲಿದೆ. ಅರಳಿ-ಬೇವನ್ನು ಒಟ್ಟಿಗೆ ಬೆಳಸಿ ಅವುಗಳಿಗೆ ಕಲ್ಲುಕಟ್ಟೆಯನ್ನು ಕಟ್ಟಿಸಿ ಪೂಜಿಸುವುದನ್ನು ಕರ್ನಾಟಕದ ಎಲ್ಲ ಕಡೆ ಕಾಣಬಹುದು. ಗಿಡ-ಮರಗಳಿಂದ ದೊರಕಿದ ಮೊದಲ ಹಣ್ಣು ಅಥವಾ ಕಾಯನ್ನು ದೇವರುಗಳಿಗೆ ಅರ್ಪಿಸುವುದು, ಮರಗಳನ್ನು ನೆಟ್ಟು ಬೆಳೆಸುವುದು, ಕಣಿಗಲು ಗಿಡಗಳನ್ನು ನೆಡುವುದು ಪುಣ್ಯಕಾರ್ಯವೆಂದು ತಿಳಿಯುತ್ತಾರೆ.[1]

ಶಾಸನಗಳಲ್ಲಿ ಜನಪದ ನಂಬಿಕೆಗಳು

ಕಾನಕಾನಹಳ್ಳಿ ತಾಲ್ಲೂಕಿನ ಶಾಸನಗಳಲ್ಲಿ ಎರಡು (ನಂ. 89, 90/ಸು. 1700?) ಜನಪದ ನಂಬಿಕೆ ಆಚರಣೆಗಳ ದೃಷ್ಟಿಯಿಂದ ಕುತೂಹಲಕರವಾದವು. ಇವು ಕಾನಕಾನಹಳ್ಳಿಯಲ್ಲಿಯೇ ಅಗಸರ ನಾಗನೆಂಬುವನು ತಂದುಕೊಟ್ಟ ತಾಮ್ರ ಶಾಸನಗಳ ನಕಲುಗಳೆಂದು ಎಕ.ದ ಸಂಪಾದಕರು ತಿಳಿಸಿದ್ದಾರೆ. ಈ ಶಾಸನಗಳಲ್ಲಿ ಯಾವ ಚಾರಿತ್ರಿಕ ಸಾಕ್ಷ್ಯಗಳೂ ಇಲ್ಲವಾದುದರಿಂದ, ಯಾವ ಒಡೆಯರ ಕಾಲದಲ್ಲಿ ಹುಟ್ಟಿವೆಯೆಂದು ಹೇಳುವುದು ಕಷ್ಟ. ಮೊದಲನೆಯದರ (ತೆಲುಗು ಭಾಷೆಯದು) ಆರಂಭದಲ್ಲಿ "ರಾಯಲುವಾರಿ ಸಂ(ವ)ತ್ಸರಂನಾಡು ಪುಟ್ಟಿನದಿ ಶಾಸನಂ" ಎಂದು ಹೇಳಿದೆಯಾದರೂ, ಅದರಿಂದ ಕಾಲನಿರ್ಣಯ ಸಾಧ್ಯವಾಗದು. ಎರಡನೆಯದರ (ಕನ್ನಡ ಭಾಷೆಯದು) ಆದಿಯಲ್ಲಿ ಶಾಲಿವಾಹನ ಶಕೆ 1622 ಎಂಬುದರ ಆಧಾರದಿಂದ ಕ್ರಿ.ಶ. 1700 ಎಂದೇ ಗುರುತಿಸಲಾಗಿದೆ. ಬಹುಶಃ ಇದರ ವಸ್ತುಸಾದೃಶ್ಯ ಗಮನಿಸಿ ಮೊದಲನೆಯದರ ತೇದಿಯೂ ಅದೇ ಇರಬಹುದೆಂದು (ಸು. 1700?) ಊಹಿಸಿದೆ.

1. ಪ್ರಸ್ತುತ ತೆಲಗು ಶಾಸನದ ಸಾಮಾನ್ಯವಾದ ಅನುವಾದ ಹೀಗೆ

"ರಾಯರ ಸಂಪತ್ಸರದಂದು ಹುಟ್ಟಿದ್ದು ಶಾಸನ. ಇದನ್ನು ಅಲ್ಲ ಎನ್ನುವವರು ಕತ್ತೆಜನ್ಮದಲ್ಲಿ ಹುಟ್ಟುವರು.

ಕಲ್ಯಾಣಪಟ್ಟಣದಲ್ಲಿ ಈಶ್ವರನ ಬೆವರಿನಿಂದ ವೀರಭದ್ರನು ಹುಟ್ಟಿದನು. ಕಲ್ಯಾಣಪಟ್ಟಣದಲ್ಲಿ ಶಿಲಾಶಾಸನವಾಗಿ ವೀರಗಂಟಿ ಮಡಿವಾಳಯ್ಯನ ಜನನ. ಅ ಕಲ್ಯಾಣಪಟ್ಟಣದ ಪಶ್ಚಿಮ ಭಾಗದಲ್ಲಿ

ಮಡಿವಾಳಯ್ಯನ ಮಠವುಂಟು. ಅಲ್ಲಿ ಶಿಲಾಶಾಸನವಿಲ್ಲ (?) ಎನ್ನುವವನು ಕತ್ತೆಯ ಹೊಟ್ಟೆಯಲ್ಲಿ ಹುಟ್ಟುತ್ತಾನೆ. ಇಲ್ಲಿ ಚತುಃಸಮುದ್ರಗಳಿಗೂ ಅನ್ವಯಿಸುವಂತೆ ಸಾಂಬಶಿವನು ಮಾಡಿದ ನಿರ್ಣಯ ಹೀಗಿದೆ; ಹಾಗೆಯೇ ಮಡಿವಾಳಯ್ಯನು ಚತುಃಸಮುದ್ರಗಳ ಸೀಮೆಯೊಳಗೆ ಅದನ್ನು ಜಾರಿಗೆ ತಂದನು. ಆ ಮಡಿವಾಳಿಗಳಿಗೆ ಎಡದಿಂದ ಬಲಕ್ಕೆ ವರಸೆಯಾಗಿ ಪ್ರತಿ ಮನೆಯಲ್ಲಿಯೂ ಊಟಕ್ಕೆ ಇಟ್ಟು, ಎಲೆ ಅಡಿಕೆ ಕೊಡುವುದಾಗಬೇಕು. ಈ ಪ್ರಕಾರವಾಗಿ ಕೊಡದವರು ಕುಲಕ್ಕೆ ದೂರಸ್ಥರಾಗುತ್ತಾರೆ. ಅದು ಕಾರಣ, ಈಶ್ವರನು ನಿರ್ಣಯಿಸಿದ್ದು ಹೀಗೆ :

ಗಂಡುಮಗು ಹುಟ್ಟಿದರೆ 1 ರೂಪಾಯಿ, ಹೆಣ್ಣು ಮಗು ಹುಟ್ಟಿದರೆ ಅರ್ಧ ರೂಪಾಯಿ. ರಜಸ್ವಲೆಯಾದರೆ ವಸ್ತ್ರ. ಕೊಡುವ ಪದಾರ್ಥಗಳು ಅಕ್ಷತೆ, ಗಂಧ, ವಸ್ತ್ರ, ತುಪ್ಪ, ಬೊಗಸೆ ಅಡತೆ, 12 ಎಲೆ, ಅರಿಶಿನದ ಕೊಂಬು 12 ಇತ್ಯಾದಿ. ಈ ಪ್ರಕಾರವಾಗಿ ದೇಶದಲ್ಲಿ ಜನವೆಲ್ಲಾ ಮಡಿವಾಳಿಗೆ ನಡಸುವುದಾಗಬೇಕು. ಅಲ್ಲದೆ ಕೇಶಶೃಂಗಾರಕ್ಕೆ 1 ಗದ್ಯಾಣ, ಮದುವೆಗೆ 1 ಗದ್ಯಾಣ ಕೊಡುವುದಾಗಬೇಕು.

ಇದು ಕಲ್ಯಾಣಪಟ್ಟಣದಲ್ಲಿ ಬಸವೇಶ್ವರ ಸ್ವಾಮಿಗಳು ನಿರ್ಣಯ ಮಾಡಿದ್ದು. ಮಡಿವಾಳಯ್ಯನಿಗೆ ಸಲ್ಲತಕ್ಕದ್ದು".

2. ಈಗ ಕನ್ನಡ ಶಾಸನದ ಈಚಿನ ಕಾಲದ ಗದ್ಯರೂಪ

ಗುಂಡಲಪೇಟೆ ಹತ್ತಿರದ ಭೂತನಹಳ್ಳಿಯ ಹಜಾಮರು ಚನ್ನಿಗರಾಯಸ್ವಾಮಿ ದೇವಸ್ಥಾನದಲ್ಲಿ ತಮ್ಮ ವಾಲಗಕ್ಕೆ ಮಲ್ಲಿಗೆ ಹೂ ಮುಡಿಸಿ, ಜುಟ್ಟಿಗೆ ಹೂ ಮುಡಿದುಕೊಂಡು ವಾಲಗ ಮಾಡುತ್ತಿದ್ದರು. ಅದೇ ಗ್ರಾಮದ ಮಡಿವಾಳರ ಚನ್ನಶೆಟ್ಟಿ ಎಂಬುವನು ಈ ವಾಲಗದವರನ್ನು "ನೀವುಗಳು ಮಲ್ಲಿಗೆ ಹುವ್ವ ಮುಡಿಯತಕ್ಕ ಪದ್ಧತಿಯಲ್ಲ" ಎಂದು ಹೇಳಿ ಹೂವನ್ನು ಕೀಳಲು ಹೋದನು. ಅಷ್ಟರಲ್ಲಿ ಹಜಾಮರು "ನಮಗೆ ಸಲ್ಲುವುದೇ ಇಲ್ಲವೇ ಎನ್ನುವುದನ್ನು ತಿಳಿಯಲು ನಾವೂ ನೀವೂ ದೇಶನಾಡಿನವರ ಹತ್ತಿರಕ್ಕೆ ಹೋಗಿ ಕೇಳೋಣ" ಎಂದರು. ಆಮೇಲೆ ಇವರಲ್ಲಿ ಪ್ರತಿಷ್ಠಿತ ವ್ಯಕ್ತಿಗಳೂ ಅವರಲ್ಲಿ ಪ್ರತಿಷ್ಠಿತ ವ್ಯಕ್ತಿಗಳೂ ವಿಕರ್ತರೂ (?) ಶೆಟ್ಟಿ ಗ್ರಾಮಾದಿಗಳ ಮುಖ್ಯರೂ ದೇಶನಾಡಿನವರೂ ಇನ್ನೂ ಮುಂತಾದ ಜನಗಳೂ ಮಡಿವಾಳ ಶೆಟ್ಟಿಗಳನ್ನು "ನೀವುಗಳು ಹಜಾಮರು ಮುಡಿದುಕೊಂಡಿದ್ದ ಮಲ್ಲಿಗೆಯ ಹೂವನ್ನು ಹೇಗೆ ಕಿತ್ತಿರಿ?" ಎಂದು ಕೇಳಿದರು. ಆಗ ಈ ಮಡಿವಾಳಿ ಶೆಟ್ಟಿಗಳು "ನಮ್ಮ ತಾಯಿ ಮಲ್ಲಿಗೆ ಹೂವನ್ನು ಹಜಾಮರು ಮುಡಿಯಕೂಡದು" ಎಂಬುದಾಗಿ ದೇಶನಾಡಿನವರಿಗೆ ಹೇಳಿದರು.

ಆಗ ಹಜಾಮರಲ್ಲಿ ಪ್ರತಿಷ್ಠಿತ ವ್ಯಕ್ತಿಯಾದ ರಾಮಪುರಿ ವೆಂಕಟಚಲುವನನ್ನು ದೇಶನಾಡಿನವರು "ನಿಮಗೆ ಮಲ್ಲಿಗೆ ಹೂವು ಸಲ್ಲುವುದಿಲ್ಲ ಎಂದು ಮಡಿವಾಳ ಶೆಟ್ಟಿಗಳು ಹೇಳುತ್ತಾರೆ. ನೀವು ಹೇಗೆ ಮುಡಿದಿರಿ?" ಎಂಬುದಾಗಿ ಪ್ರಶ್ನಿಸಿದರು. ಅದಕ್ಕೆ ರಾಮಪುರಿ ವೆಂಕಟಚಲುವನು ಅವರನ್ನೂ

ನಮ್ಮನ್ನೂ ಕಂಚಿಗೆ ಕಳಿಸಿಕೊಡಿ; ಅಲ್ಲಿ ಶಾಸನದಲ್ಲಿ ಹೇಗೆ ಇರುತ್ತದೋ ಹಾಗೆ ನಡೆಯುತ್ತೇವೆ" ಎಂದು ಉತ್ತರಿಸಿದನು. ಅದಕ್ಕೆ ದೇಶನಾಡಿನವರು ಮಡಿವಾಳ ಶೆಟ್ಟಿಗಳಲ್ಲಿ ಪ್ರತಿಷ್ಠಿತ ವ್ಯಕ್ತಿಯಾದ ದೊಡ್ಡಪೇಟೆ ಪಾಳ್ಯದ ವೆಂಕಟಶೆಟ್ಟಿಯನ್ನು ಕರೆಸಿ, "ಹಜಾಮರು ಕಂಚಿಗೆ ಕರೆಯುತ್ತಾರೆ, ಏನು ಹೇಳುತ್ತೀರಿ?" ಎಂಬುದಾಗಿ ಕೇಳಿದರು. ಅದಕ್ಕೆ ಆತನು "ನಾವುಗಳು ಸುಮ್ಮನೆ ಹೋಗುವುದಿಲ್ಲ. ಕಂಚಿಯಲ್ಲಿ (ಶಾಸನ ನೋಡಿಸಿದಾಗ) ಮಲ್ಲಿಗೆ ಹೂವು ನಮಗೆ ಇಲ್ಲವಾದರೆ ನಾವುಗಳು ದೇಶನಾಡಿನವರಿಗೂ ಕುಲಕ್ಕೂ ತಪ್ಪುದಂಡ ಕೊಡುತ್ತೇವೆ; ಹಜಾಮರಿಗೆ ಇಲ್ಲವಾಯಿತೇ, ಅವರುಗಳು ಇದೇ ತಪ್ಪುದಂಡ ಕೊಡುವ ಹಾಗೆ ಕರಾರು ಪತ್ರ ಬರೆಸಿ ಕಳಿಸಿಕೊಟ್ಟರೆ ನಾವು ಹೋಗುತ್ತೇವೆ" ಎಂದು ದೇಶನಾಡಿನವರಿಗೆ ತಿಳಿಸಿದನು. ಇದಕ್ಕೆ ಮತ್ತೆ ದೇಶನಾಡಿನವರು ಹಜಾಮರಲ್ಲಿ ರಾಮಪುರಿ ವೆಂಕಟಚಲುವನನ್ನು ಕರೆಸಿ ಕೇಳಿದಾಗ, ಅದಕ್ಕೆ ಅವನು "ಹಾಗೆಯೇ ಆಗಲಿ" ಎಂದು ತಿಳಿಸಿದನು.

ಇಬ್ಬರೂ ಸೇರಿ ದೇಶನಾಡಿನವರಿಗೆ ಕರಾರು ಪತ್ರ ಬರೆದುಕೊಟ್ಟರು. ಕಂಚಿಗೆ ಪ್ರಯಾಣ ಮಾಡಿದರು. ಮಡಿವಾಳ ಶೆಟ್ಟಿಗಳ ಪೈಕಿ ದೊಡ್ಡಪೇಟೆ ವೆಂಕಟಶೆಟ್ಟಿ, ಅನಂತಗೌಡನ ಹಳ್ಳಿಯ ಚನ್ನವೀರಶೆಟ್ಟಿ, ಗುಂಡ್ಲು ರಾಮಶೆಟ್ಟಿ, ಸಾಲಿಗ್ರಾಮದ ಮುದ್ದುವೀರಶೆಟ್ಟಿ, ಪಾಳ್ಯದ ಬಸವಶೆಟ್ಟಿ ಮುಂತಾದ ಮಡಿವಾಳಿಗಳೂ ಹಜಾಮರಲ್ಲಿ ದೊಡ್ಡಪೇಟೆ ಗುಂಡಯ್ಯ ಮಾರಯ್ಯಗಳು, ಬಾತನಹಳ್ಳಿ (ಬೂತನಹಳ್ಳಿ) ಬಸವಯ್ಯ, ಸಾಲಗ್ರಾಮದ ಮುದ್ದಯ್ಯ ಮುಂತಾದವರೂ ಹೀಗೆ ಎರಡೂ ಕಡೆಗಳ ಪ್ರತಿಷ್ಠಿತ ವ್ಯಕ್ತಿಗಳು ಹೊರಟರು. ಇನ್ನು ದೇಶದವರಲ್ಲಿ ಧನಪಾಲ ಶೆಟ್ಟಿ, ಗುಂಡ್ಲು ಅಲ್ಲಯ್ಯನವರು ಸಹ ಕೂಡಿಕೊಂಡು ಕಂಚಿಗೆ ಇವರನ್ನು ಕರೆದುಕೊಂಡು ಹೋದರು. ಕಂಚಿಗ್ರಾಮದ ಅಧಿಪತಿಗಳೂ ಕರಣಿಕರೂ ದೇಶದವರೂ ನಾಡಿನವರೂ ದೊಡ್ಡ ದೊಡ್ಡ ಮನುಷ್ಯರೂ ಸುಬ್ಬಾದೀಕ್ಷಿತರೂ (?) ಮೈಸೂರು ಮಹಾಶಾಸ್ತ್ರಿಗಳೂ ವರದಯ್ಯಂಗಾರ್ಯರೂ ರಾಮಾನುಜಯ್ಯನವರೂ ಕೊಂಡಾವಧಾನಿಗಳು ತಮ್ಮ ಸ್ಥಳದವರೂ (ಸದರಿ) ಧನಪಾಲಶೆಟ್ಟರೂ ಇನ್ನೂ ಮುಂತಾದ ಸಮಸ್ತರೂ ಕೂಡಿ, ಕಂಚಿಯ ದೇಶ ನಾಡಿವರನ್ನು ಕಂಡರು. "ಹಜಾಮರು ಮಲ್ಲಿಗೆ ಹೂವು ಮುಡಿದುಕೊಂಡಿದ್ದು ಕಾರಣವಾಗಿ ಮಡಿವಾಳ ಶೆಟ್ಟಿಗಳು ಅದನ್ನು ಕಿತ್ತು ಹಾಕಿದರು. ಅದರಿಂದಾಗಿ ನಾವುಗಳು ಇವರನ್ನು ಕರೆದುಕೊಂಡು ಬಂದಿರುತ್ತೇವೆ" ಎಂಬುದಾಗಿ ಅವರಲ್ಲಿ ಧನಪಾಲಶೆಟ್ಟರು ಕೇಳಿ ಅರಿಕೆ ಮಾಡಿದರು.

ಆಗ ಕಂಚಿಯ ದೇಶ ನಾಡಿನವರು, "ನಿಶಾಕಂಭದ ದೇವಸ್ಥಾನದಲ್ಲಿ ಇರುವ ಶಾಸನವನ್ನು ತೆಗೆಸಿ ನೋಡಿದರೆ ಹೇಳುತ್ತೇವೆ" ಎಂದರು. ಅದಕ್ಕೆ ಇವರು "ತೆಗೆಯಿರಿ" ಎಂದರು. "ಆದಕ್ಕೆ ಅದರ ಖರ್ಚು 40 ರೂಪಾಯಿ ಆಗುವುದು" ಎಂಬುದಾಗಿ ಅಲ್ಲಿಯ ಗ್ರಾಮಾಧಿಪತಿಗಳು ಹೇಳಿದಾಗ. ಹಜಾಮರ ಕೈಯಲ್ಲಿ 20 ರೂಪಾಯಿ ಮತ್ತು ಮಡಿವಾಳಿ ಶೆಟ್ಟಿಗಳ ಕೈಯಲ್ಲಿ 20 ರೂಪಾಯಿ ಹೀಗೆ 40

ರೂಪಾಯಿ ಖರ್ಚು ಕೊಟ್ಟು ಶಾಸನವನ್ನು ತೆಗೆಸಿ ಓದಿಸಲಾಯಿತು. ಹೀಗೆ ಮಾಡಿದಾಗ, ಹಜಾಮರಿಗೆ ಕೆಂಪು ಗಣಿಗಿಲೆ ಹೂ, ಕೆಂಪು ಹೊದಪು ಸಾಣೆ (?), ಕಟ್ಟಕಡೆ ಬಾಗಿಲು ಸಲ್ಲುವುದು ಎಂಬುದಾಗಿ ಶಾಸನದಲ್ಲಿತ್ತು. ಇದರಿಂದ ಹಜಾಮರಿಗೆ ಮಲ್ಲಿಗೆ ಹೂವು ಸಲ್ಲುವುದಿಲ್ಲವೆಂದು ದೇಶನಾಡಿನವರೂ ಗ್ರಾಮಾಧಿಪತಿಗಳೂ ಕರಣಿಕರೂ ಸಹ ಹೇಳಿದರು. ಮತ್ತು ಮಡಿವಾಳಿ ಶೆಟ್ಟಿಗಳೂ ಶಾಸನವನ್ನು ತೆಗೆಸುವಲ್ಲಿ, ಮಡಿವಾಳಿಗೆ ಮಲ್ಲಿಗೆ ಮಹಾದೇವಿ ಸಲ್ಲುವುದು; ಅವಳು ಮಲ್ಲಿಗೆ ಹೂವು ಬಿಳಿಗಣಿಗಲೆ ಹೂವು ಬಿಳಿಯ ಛತ್ರಿ ಬಿಳಿಯ ಹೊದಪು ಕೂಡಿ ಕುದುರೆ ಏರಿ ಇರುವಳು. ಹೀಗೆ ಮಲ್ಲಿಗೆ ಮಹಾದೇವಿ ಮಡಿವಾಳ ಶೆಟ್ಟರಿಗೆ ಸಲ್ಲುವುದು ಎಂದು ಕಂಚಿಶಾಸನದಲ್ಲಿ, ಕಂಚಿ ನಿಶಾಕಂಬದ ದೇವಸ್ಥಾನದಲ್ಲಿ ಇರುವುದು ಕಂಡುಬಂದಿತು.

ಇದನ್ನು ಕಲ್ಯಾಣಪಟ್ಟಣದ ಬಸವಪ್ಪನವರು ಮಾಡಿದ ಶಾಸನ ಎಂದು ಹೇಳುವರು. ಇದನ್ನು ಭೇದವಾಗಿ ತಿಳಿದರೆ ಕಾಶಿಯಲ್ಲಿ ಗೋಹತ್ಯೆ ಮಾಡಿದ ಹಾಗೆ, ಶಿಶುಹತ್ಯೆ ಮಾಡಿದ ಹಾಗೆ, ರಾಮೇಶ್ವರದಲ್ಲಿ ಬ್ರಾಹ್ಮಣರನ್ನು ವಧಿಸಿದ ಹಾಗೆ, ಸುಬ್ರಹ್ಮಣ್ಯದಲ್ಲಿ ಸರ್ಪವನ್ನು ಕೊಂದ ಹಾಗೆ.

ಇದನ್ನು ನೋಡಿದವರು ಚೆನ್ನಾಗಿ ವಿವೇಚಿಸಿ ತಿಳಿಯುವುದು. ಹಜಾಮರು ದೇಶನಾಡಿನವರಿಗೆ ತಪ್ಪುದಂಡ ಕೊಟ್ಟು, ಇನ್ನು ತಾವು ಮಲ್ಲಿಗೆ ಹೂವನ್ನು ಮುಡಿಯುವುದಿಲ್ಲ ಎಂದು ಕಂಚಿಯಲ್ಲಿ ಕರಾರು ಬರೆದುಕೊಟ್ಟು ಬಂದಿರುತ್ತಾರೆ. ಇದರ ನಕಲನ್ನು ನಮ್ಮ ಕುಲಸ್ಥರಿಗೆ ಕಳಿಸಿರುತ್ತೇವೆ. ಇದರ ಓಲೆಪ್ರತಿ ದೊಡ್ಡಪೇಟೆಯಲ್ಲಿರುತ್ತದೆ. ಇದನ್ನು ತಿಳಿದಿರುವುದು."

ಈ ಎರಡು ಶಾಸನಗಳ ಬಗೆಗೆ ಕೆಲವು ವಿಮರ್ಶೆಯ ಮಾತುಗಳನ್ನು ಹೇಳಬಹುದಾಗಿದೆ :

ಈ ಶಾಸನಗಳು ಸಮುದಾಯದವರು ಮಾಡಿಕೊಂಡ ವಿಧಿಯಂತೆ ತಾವು ಪಡೆದುಕೊಂಡು ತಮ್ಮಲ್ಲಿರಿಸಿಕೊಂಡಿದ್ದ ಕಟ್ಟಳೆಯ ಅಧಿಕೃತ ಪತ್ರಗಳು ಎನ್ನಬಹುದಾದವು. ಎರಡನೆಯದಕ್ಕೆ ತಾಲೆಯೋಲೆ ಪ್ರತಿಯೂ ಉಂಟು ಎಂದಿದ್ದರೂ ಅದು ಇನ್ನೂ ಬೆಳಕಿಗೆ ಬಂದಂತಿಲ್ಲ.

ಮೊದಲನೆಯದು ತೆಲುಗು ಭಾಷೆಯದು. ಬಸವಣ್ಣ ಮತ್ತು ಶಿವಶರಣ ಮಡಿವಾಳ ಮಾಚಿದೇವರ ಪ್ರಸ್ತಾವವನ್ನು ಕಟ್ಟಳೆಗೆ ಒಂದು ಘನತೆ, ಪ್ರಾಚೀನತೆ, ಅಧಿಕೃತತೆ ತರುವ ಸಲುವಾಗಿ ಮಾಡಿದ್ದೆಂದು ಊಹಿಸಬಹುದು. ತಾವು ತಮ್ಮ ಶ್ರಮದ ದುಡಿಮೆಗೆ ತಕ್ಕ ಪ್ರತಿಫಲ ಪಡೆಯುವುದು ತಮ್ಮ ಹಕ್ಕೆಂದೂ ಅದನ್ನು ಅನ್ಯ ಸಾಮಾಜಿಕರು ನಡೆಸಿಕೊಡುವುದು ಅವರ ಕರ್ತವ್ಯವೆಂದೂ ಇಲ್ಲಿ ತೋರಿಸುವ ಯತ್ನವಿದೆ. ಬಟ್ಟೆ ಮಡಿ ಮಾಡುವುದು, ಪ್ರಸಾಧನ, ಮದುವೆಯಂಥ ಶುಭಕಾರ್ಯ ಇವುಗಳಲ್ಲಿ ಮಡಿವಾಳರ ಪಾತ್ರ ಏನೆಂಬುದನ್ನು ಇಲ್ಲಿ ಬಿಡಿಸಿಯೇ ಹೇಳಿದೆ.

ಎರಡನೆಯ ಶಾಸನದಲ್ಲಿ ನಾವಿದರಿಗೂ (ಸವಿತಾ ಸಮಾಜದವರಿಗೂ) ಮಡಿವಾಳರಿಗೂ ಪುಷ್ಪ ಪ್ರಸಾಧನ ಸಂಬಂಧವಾದ ಆಚಾರವೊಂದರಲ್ಲಿ ಬಂದ ಭಿನ್ನಾಭಿಪ್ರಾಯ ಮತ್ತು ಅದರ ಪರಿಹಾರಗಳ ಪ್ರಸ್ತಾವವಿದೆ. ಒಂದು ಕಾಲಕ್ಕೆ ಬಹಿರಾಚಾರಗಳು ಎಷ್ಟು ಬಲವಾಗಿ ಪಂಗಡಗಳಿಗೆ ಅಂಟಿದ್ದುವು ಎನ್ನುವುದನ್ನು ಇಲ್ಲಿ ಕಾಣಬಹುದು. ಅಲ್ಲದೆ ಈ ವಿವಾದದಲ್ಲಿ ಇಡಿಯ ಒಂದು ಸಮುದಾಯವಲ್ಲದೆ, ಸ್ಥಳ ಪರಸ್ಥಳಗಳ ಎಲ್ಲಾ ಸಮುದಾಯಗಳೂ ಹೇಗೆ ಪಾತ್ರ ವಹಿಸುತ್ತಿದ್ದುವು ಎನ್ನುವುದೂ ಗಮನಾರ್ಹ ವಿಷಯವೇ. ವಿವಾದದ ಪರಿಹಾರಕ್ಕೆ ಕಂಚಿಯೇ ಏಕೆ ನ್ಯಾಯಧೀಶನ ಪಾತ್ರ ವಹಿಸಬೇಕು, ಅಲ್ಲಿದ್ದ ನಿಶಾಕಂಭದ ದೇವಸ್ಥಾನ ಎನ್ನುವುದೂ ಶಾಸನ ಎನ್ನುವುದೂ ಯಾವುವು ಇವು ದಿಟವಾಗಿ ವಿಚಾರಯೋಗ್ಯವಾದ ಸಂಗತಿಗಳು. ಮಡಿವಾಳರಿಗೇ ಮಲ್ಲಿಗೆ ಹೂವು ಏಕೆ ಸಲ್ಲಬೇಕು, ನಾವಿದರಿಗೆ ಕೆಂಪುಗಣಗಿಲೆ, ಕಟ್ಟಕಡೆಬಾಗಿಲು ಏಕೆ? ಇವೆಲ್ಲ ಸಮಾಜಶಾಸ್ತ್ರೀಯವಾದ ಅಧ್ಯಯನಗಳಿಂದ ವಿಶದವಾಗಬೇಕು. ಬಟ್ಟೆಗಳು ಬೆಳ್ಳಗೆ ಮಡಿಯಾಗುವ ಆದರ್ಶಕ್ಕೆ ಒಂದರ ಸಂಕೇತ ಅರ್ಥವಾದರೂ, ನಾವಿದರಿಗೆ ಕಟ್ಟಳೆಯಾಗುವ ಕೆಂಪು ಯಾವ ಸಂಕೇತ? ಇದು ಏನೇ ಇದ್ದರೂ, ಸಾಮಾಜಿಕ ಕಟ್ಟುಕಟ್ಟಳೆಗಳಿಗೆ ಇಲ್ಲಿ ವಿಚಾರದ ಗ್ರಾಸವುಂಟು.

3. ಶ್ರೀರಂಗಪಟ್ಟಣದ ಯುದ್ಧಗಳಲ್ಲಿ ಕಾನಕಾನಹಳ್ಳಿ ಪಾತ್ರ

1791ರ ಮೇ–ಜೂನ್ ತಿಂಗಳಲ್ಲಿ ಟಿಪ್ಪು ಸುಲ್ತಾನನು ಇಂಗ್ಲಿಷ್ ಸೈನ್ಯದೊಂದಿಗೆ ಹೋರಾಡಬೇಕಾದ ಸಂದರ್ಭ. ಗುತ್ತಿ ಮೊದಲಾದ ಕಡೆಗಳಿಂದ ಬಂದ ಸೇನೆಯ ತುಕುಡಿಗಳನ್ನು ಕೂಡಿಸಿಕೊಂಡು ಬೆಂಗಳೂರಿನಿಂದ ಶ್ರೀರಂಗಪಟ್ಟಣಕ್ಕೆ ಬರುವ ಬಾಟಾಮಾರ್ಗದಲ್ಲಿ (ಆಗ ಇದನ್ನು ಚನ್ನಪಟ್ಟಣದ ರಸ್ತೆ ಎನ್ನುತ್ತಿದ್ದರು) ರಾಮಗಿರಿ (ಈಗ ರಾಮನಗರ) ಶಿವನಗಿರಿ ದುರ್ಗಗಳಲ್ಲಿ ಭದ್ರವಾಗಿ ನೆಲೆನಿಂತು ಶತ್ರುಗಳನ್ನು ಎದುರಿಸಲು ಅವನು ಸಿದ್ಧವಾದನು. ಆದರೆ ಲಾರ್ಡ್ ಕಾರ್ನ್‌ವಾಲೀಸ್ ಚತುರನಾದುದ್ದರಿಂದ ಟಿಪ್ಪುವಿನ ಸೈನ್ಯದ ಸಜ್ಜುಗಳನ್ನೆಲ್ಲ ಸಕಾಲದಲ್ಲಿ ತಿಳಿದು, ಬಾಟಾ ಮಾರ್ಗವನ್ನು ತಪ್ಪಿಸಿ ಬಿಡದಿ ಚನ್ನಪಟ್ಟಣಗಳ ದಾರಿಯಿಂದ ಪಶ್ಚಿಮದ ಕಡೆಗೆ ತಿರುಗಿದನು. ಆಗ್ನೇಯ ದಿಕ್ಕಿನ ಕಡೆಯಿಂದ ತನ್ನ ಸೈನ್ಯವನ್ನು ಮುನ್ನಡೆಸಿ ಕಾನಕಾನಹಳ್ಳಿಯನ್ನು ಹಿಂದಕ್ಕಿ, ಕಬ್ಬಾಳು ದುರ್ಗವನ್ನು ಹಾಯ್ದು, ಬಹುಶ್ರಮದಿಂದ ಮಳವಳ್ಳಿಗೆ ಬಂದು ಸೇರಿದನು. ದವಸ ಧಾನ್ಯಗಳ ಅಭಾವದಿಂದ ಕುಗ್ಗುತ್ತ, ನಡುನಡುವೆ ಟಿಪ್ಪುವಿನ ಸೈನಿಕರು ಅಡ್ಡಗಟ್ಟಿ ಒಡ್ಡುತ್ತಿದ್ದ ಹೊಂಚು ದಾಳಿಗಳ ಹಿಂಸೆಯನ್ನು ಸಹಿಸುತ್ತ, ಪಾಡುಪಡಬೇಕಾಯಿತು. ಕೊನೆಗೆ ಶ್ರೀರಂಗಪಟ್ಟಣಕ್ಕೆ ಹತ್ತಿರದ ಅರಕೆರೆಯನ್ನು ಮುಟ್ಟಿದನು. ಶ್ರೀರಂಗಪಟ್ಟಣದ ಮುತ್ತಿಗೆಗೆ ಪೂರ್ವಭಾವಿಯಾಗಿ ಕೈಕೊಂಡ ಈ ದಾಳಿ ಸಾಕಷ್ಟು ಯಶಸ್ಸು ಕಂಡಿತು. ಆತ ಸಮಾಧಾನವಾಗಿ ಹಿಂದಿರುಗಿದನು (HOM. vol. 3, pp. 812-13).

1792ರಲ್ಲಿ ಕಾರ್ನ್‌ವಾಲೀಸ್ ನೇರವೂ ಹತ್ತಿರದ್ದೂ ಆದ ಚನ್ನಪಟ್ಟಣ ಮಾರ್ಗವನ್ನು ಬಿಟ್ಟು, ದಕ್ಷಿಣ ದಿಕ್ಕಿನ ಕಡೆಯ ಕಾನಕಾನಹಳ್ಳಿಯ ದಾರಿ, ಉತ್ತರದ ತುದಿಯ ಹುಲಿಯೂರು ದುರ್ಗದ ಹಾದಿ ಇವನ್ನೇ ಬಳಸಿದ್ದನು.

ಇನ್ನೊಂದು ಸಲ, 1799ರ ಮಾರ್ಚ್ 9-24ರ ನಡುವೆ ಟಿಪ್ಪುವಿನ ಮೇಲಿನ ನಿರ್ಣಾಯಕ ಯುದ್ಧದಲ್ಲಿ ಜನರಲ್ ಹ್ಯಾರಿಸ್ ಕೂಡ ಕಾನಕಾನಹಳ್ಳಿಯ ಮಾರ್ಗವನ್ನೇ ಆಯ್ದುಕೊಂಡನು. ತನ್ನ ಸೈನ್ಯಗತಿಯಲ್ಲಿ ಆನೆಕಲ್ ಜಿಗಣಿಗಳನ್ನು ದಾಟಿ, ಬೆಂಗಳೂರು ಸಮೀಪಿಸಿದ ಮೇಲೆ ಅಲ್ಲಿಂದ ಶ್ರೀರಂಗಪಟ್ಟಣವನ್ನು ತಲುಪಲು ಇದ್ದ ಮೂರು ಮಾರ್ಗಗಳಲ್ಲಿ ಅವನಿಗೆ ಕೂಡ ಇದೇ ವಿಹಿತವಾಗಿ ಕಂಡಿತು. 1799ರ ಮಾರ್ಚ್ 16ರಂದು ಆ ದಿಕ್ಕಿನ ಕಡೆಗೆ ತನ್ನ ಸೇನೆಯೊಂದಿಗೆ ಹೊರಟನು. ನಡುವೆ ಮಿಲಿಟರಿ ಸಜ್ಜಿಗಾಗಿ ಅಲ್ಲಲ್ಲಿ ತಂಗುತ್ತ, 19ರಂದು ಪ್ರಯಾಣ ಬೆಳಸಿ, 21ರಂದು ಕಾನಕಾನಹಳ್ಳಿಯಲ್ಲಿ ಬೀಡುಬಿಟ್ಟನು. ಮತ್ತೆ ಅಲ್ಲಿಂದ ಹೊರಟು ಮದ್ದೂರಿನ ಹೊಳೆಯ ಪಶ್ಚಿಮದಂಡೆಯನ್ನು ಸೇರಿ, ತನ್ನ ಮುಂದಿನ ಕಾರ್ಯಗತಿಯನ್ನು ನಿರ್ಧರಿಸಿದನು (HOM. vol. 3 p. 978).

ಜನರಲ್ ಹ್ಯಾರಿಸ್ ಕಾನಕಾನಹಳ್ಳಿಯ ಮಾರ್ಗವನ್ನು ಬ್ರಿಟಿಷ್ ಪಡೆಗಳ ನಡೆಗೆ ಬಳಸಿದನಷ್ಟೆ. ಟಿಪ್ಪು ಈ ಪಡೆಗಳ ನಡೆಯನ್ನು ತನ್ನ ಗೂಢಚರ್ಯ ವಿಭಾಗದ ಮೂಲಕ ಸರಿಯಾಗಿ ಗ್ರಹಿಸದೆ ಹೋದನು. ಅವು ಯಾವ ಮಾರ್ಗ ಹಿಡಿದು ತನ್ನ ರಾಜಧಾನಿಯತ್ತ ಬರಬಹುದು ಎನ್ನುವುದೂ ಅದಕ್ಕೆ ಯಾವ ಪೂರ್ವಸಿದ್ಧತೆ ನಡೆಯಬೇಕು ಎನ್ನುವುದೂ ಅವನಿಗೆ ತಿಳಿಯದೆ ಹೋಯಿತು ಎಂಬುದು ಇತಿಹಾಸಕಾರರ ವಿಚಾರವಾಗಿದೆ. ಹೀಗಾಗಿ ಬ್ರಿಟಿಷ್ ಪಡೆಗಳು ಕಾನಕಾನಹಳ್ಳಿ ಮಾರ್ಗವಾಗಿ ಹೊರಟು ಸೋಸಲೆಯ ಹತ್ತಿರ ಕಾವೇರಿ ನದಿಯನ್ನು ದಾಟಿ ಬರಬಹುದು ಎನ್ನುವುದನ್ನು ಅವನು ನಿರೀಕ್ಷಿಸಿರಲಿಲ್ಲ ಅದಕ್ಕೆ ಅವನು ಸಿದ್ಧತೆ ಮಾಡಿಕೊಂಡಿರಲಿಲ್ಲ. ಮಳವಳ್ಳಿಯ ನೆಲೆಯಲ್ಲಿ ಬ್ರಿಟಿಷರನ್ನು ಸಮರ್ಥವಾಗಿ ಎದುರಿಸಲು ಸಂದರ್ಭಗಳು ಅವನಿಗೆ ಅನುಕೂಲವಾಗಿದ್ದರೂ ಬ್ರಿಟಿಷ್ ಪಡೆಗಳ ಮುನ್ನಡೆಯನ್ನು ಮುಂದಾಗಿ ಅವನು ಗ್ರಹಿಸಲಾರದೆ ಹೋದನು. ಇದು ಅವನ ಗೆಲುವಿಗೆ ಆಘಾತಕಾರಿಯಾಯಿತು, ಸಾವಿಗೆ ಕಾರಣವೂ ಆಯಿತು (HOM. vol. 3 p. 1069).

ಆಂಗ್ಲ ಇತಿಹಾಸಕಾರರು, ಈಗ ನೋಡಿರುವಂತೆ ಬುಕನನ್, ವಿಲ್ಕ್ ಮೊದಲಾದವರು ಭಾವಿಸಿರುವಂತೆ ಬ್ರಿಟಿಷ್ ಪಡೆಯ ಕಾರ್ಯಾಚರಣೆಗಳಿಂದ ಕಾನಕಾನಹಳ್ಳಿಯ ಮತ್ತು ಆ ತಾಲ್ಲೂಕಿನ ಮಾರ್ಗ ಮಧ್ಯದ ಇತರ ಹಳ್ಳಿಗಳ ಜನ ‹ಜಾನುವಾರುಗಳಿಗೆ ಗದ್ದೆ ಬೆದ್ದಲು ತೋಟ ತುಡಿಕೆಗಳಿಗೆ ತೊಂದರೆಯಾಗಿರುವುದು ಬಲುಮಟ್ಟಿಗೆ ಸಂಭಾವ್ಯವಾದ್ದು; ಹಾಗೆಯೇ ಆ ಪಡೆಯ

ನಡಿಗೆ ಅನನುಕೂಲವುಂಟು ಮಾಡಲು ಟಿಪ್ಪು ಸುಲ್ತಾನನು ದಾರಿಯ ಹಳ್ಳಿಗಳನ್ನು ಕೂಡ ಹಾಳುಗೆಡವಿರುವುದು ಕೂಡ ಸಂಭಾವ್ಯವದ್ದೇ. ಇವನ್ನು ಆಂಗ್ಲ ಇತಿಹಾಸಕಾರರು ಒತ್ತಿ ಹೇಳಿದ್ದರೂ ದೇಶೀಯ ಇತಿಹಾಸಕಾರರು ಸಾಕ್ಷ್ಯಾಧಾರಗಳ ಅಭಾವದಿಂದಲೋ ಏನೋ ಈ ವಿಷಯವನ್ನು ಅಷ್ಟು ಸ್ಪಷ್ಟವಾಗಿ ಹೇಳಿದಂತಿಲ್ಲ. ಆದರೆ "ಕಾರ್ನ್‌ವಾಲೀಸ್ ಕಾನಕಾನಹಳ್ಳಿಯ ದಾರಿ ಹಿಡಿದು ಸೇನೆಯೊಂದಿಗೆ ಸಾಗುತ್ತಿದ್ದ ಹಾಗೆ ರಸ್ತೆಯ ಅಕ್ಕಪಕ್ಕದ ಹಳ್ಳಿಗಳನ್ನೆಲ್ಲ ಸುಟ್ಟು ಹಾಳುಗೆಡವಲಾಗಿತ್ತು; ಕಾಳುಕಡ್ಡಿ ಏನೂ ಸಿಕ್ಕಬಾರದು ಎನ್ನುವುದು ಇದರ ಉದ್ದೇಶ. ಯಾರೂ ಶತ್ರುವಿನ ಬಗ್ಗೆ ರಹಸ್ಯವಾಗಿ ಸುದ್ದಿ ಕೊಡುವವರೂ ಇರಲಿಲ್ಲ. ಮಾರ್ಗದರ್ಶನಕ್ಕೆ ಜನವಿಲ್ಲ. ಧಾನ್ಯವನ್ನು ಎಲ್ಲಿ ಬಚ್ಚಿಡಲಾಗಿತ್ತೋ ಹೇಳುವವರಿಲ್ಲ. ಈ ಕಷ್ಟಗಳ ಜೊತೆಗೆ ಸಾಲದ್ದಕ್ಕೆ ಭಾರಿ ಮಳೆ, ರಸ್ತೆಗಳ ಏರುತಗ್ಗು, ಮಧ್ಯೆ ಮಧ್ಯೆ ಹೊಳೆ ಹಳ್ಳ ಕಣಿವೆಗಳು" ಎಂಬುದಾಗಿ ಎಂ.ಎಚ್. ಖಾನ್ ಎಂಬುವರು ಬರೆದಿದ್ದಾರೆ (Story of Tippu Sultan, Calcutta, 1951).[2]

ತಾಲ್ಲೂಕಿನ ಕೆಲವು ಹಬ್ಬ-ಜಾತ್ರೆಗಳು

ಜೀವ ವಿಕಾಸದ ಘಟ್ಟದಲ್ಲಿ ಮಾನವ ಮತ್ತು ನಿಸರ್ಗದ ಸಂಪರ್ಕ ಬೆಳೆದಂತೆಲ್ಲಾ ನಂಬಿಕೆ ಮತ್ತು ಆಚರಣೆಗಳು ಪೂರಕವಾಗಿ ಬೆಳೆದು ಧಾರ್ಮಿಕ ಸಂಪ್ರದಾಯಗಳ ಉಗಮಕ್ಕೆ ಕಾರಣವಾಯ್ತು. ಮಾನವ ಸಂಘಜೀವಿಯಾದ್ದರಿಂದ ವ್ಯವಸ್ಥಿತವಾದ ಸಮಾಜದ ಸಂಘಟನೆ ಅನಿವಾರ್ಯವಾಯ್ತು. ವ್ಯಕ್ತಿ ವ್ಯಕ್ತಿಗಳ ನಡುವಣ ಸಂಬಂಧ ಮಧುರವಾಗಿ ಬೆಳೆದು ಉಳಿದು ಬರಬೇಕಾದ ಹಿನ್ನೆಲೆಯಲ್ಲಿ ಭಾವನಾತ್ಮಕವಾಗಿ ಒಂದುಗೂಡುವುದು ಅವಶ್ಯವೆನಿಸಿ ಈ ಹಬ್ಬಗಳು, ಜಾತ್ರೆ, ಆಚರಣೆ, ಸಂಪ್ರದಾಯಗಳು ಹುಟ್ಟಿಕೊಂಡವು. ತನ್ನ ಅವಿಶ್ರಾಂತ ದುಡಿಮೆಯ ನಡುವೆ ಒಂದೆರಡು ದಿನಗಳು ಬಿಡುವು ಮಾಡಿಕೊಂಡು, ಎಲ್ಲರೊಡನೆ ಕಲೆತು, ಸಂತೋಷದಿಂದ ಕೂಡಿಬಾಳಲು ಹಬ್ಬ-ಹರಿದಿನಗಳು ಸಹಕಾರಿಯಾಗಿವೆ. ಸಾರ್ವತ್ರಿಕವಾಗಿ ಆಚರಿಸುವ ಯುಗಾದಿ, ಗೌರಿ, ದೀಪಾವಳಿ, ಸಂಕ್ರಾಂತಿ, ಶಿವರಾತ್ರಿ ಮುಂತಾದ ಹಬ್ಬಗಳು ಸಾಮಾನ್ಯ. ಹಾಗೆಯೇ ಎಲ್ಲ ಹಳ್ಳಿಗಳ ಗ್ರಾಮದೇವತೆಯ ಊರ ಹಬ್ಬಗಳ ಆಚರಣೆಯನ್ನು ಕಾಣಬಹುದು. ಕಬ್ಬಾಳಮ್ಮ, ರಂಗನಾಥಸ್ವಾಮಿ, ಮೂಗುಮಾರಮ್ಮ, ಆದಿಶಕ್ತಿ ಅಮ್ಮ, ಶಿವನಾಂಕಾರೇಶ್ವರ, ತೇರುಬೀದಿಯಮ್ಮ, ಬಾಣಂತಿ ಮಾರಮ್ಮ, ಜಟ್ಟಿದೊಡ್ಡಿ ಮಾರಮ್ಮ, ಹುಲಿಯಮ್ಮ, ಚೌಡಮ್ಮ, ಕೊಂಡದ ಮಾರಮ್ಮ, ಶ್ರೀನಿವಾಸ ದೇವರು, ಆಂಜನೇಯಸ್ವಾಮಿ, ಕಣಿವೆ ಮಾದೇಶ್ವರ ಇತ್ಯಾದಿ ದೈವಸಂಬಂಧಿ ಹಬ್ಬಗಳು, ಶಿವನಹಳ್ಳಿ, ಕನಕಪುರ, ಹಾರೋಹಳ್ಳಿ, ಕಲ್ಲಹಳ್ಳಿ ಮುಂತಾದ ದನಗಳ ವ್ಯಾಪಾರದ ಜಾತ್ರೆ ಪರಿಷೆಗಳು ತಾಲ್ಲೂಕಿನಾದ್ಯಂತ ಆಚರಣೆಯಲ್ಲಿವೆ.

ದನಗಳ ಜಾತ್ರೆ

ಕನಕಪುರದ ಆಂಜನೇಯ ಸ್ವಾಮಿ ಜಾತ್ರೆ (ಹೊಳೆ ಪರಿಸೆ)

ಪ್ರತೀ ವರ್ಷ ಡಿಸೆಂಬರ್ ತಿಂಗಳಿನಲ್ಲಿ ನಡೆಯುವ ದನಗಳ ಜಾತ್ರೆ. ಕನಕಪುರ ತಾಲ್ಲೂಕಿನ ಜನರಿಗೆ ಈ ಪರಿಷೆಯೇ ಆರಂಭ. ಈ ಪರಿಷೆಯಲ್ಲಿ ಕೊಳ್ಳುವ ಮತ್ತು ಮಾರುವ ವ್ಯಾಪಾರದ ಭರಾಟೆ ಕಂಡುಬರುವುದಿಲ್ಲ. ಇಡೀ ನಗರದ ಜನರೆಲ್ಲಾ ಸೇರಿ ಆಂಜನೇಯ ಸ್ವಾಮಿ ಪಲ್ಲಕ್ಕಿ ಉತ್ಸವವನ್ನು ಅದ್ದೂರಿಯಾಗಿ ಭಯ ಭಕ್ತಿಗಳಿಂದ ಆಚರಿಸುತ್ತಾರೆ.

ಶಿವನಹಳ್ಳಿಯ ವೀರಭದ್ರಸ್ವಾಮಿಯ ಜಾತ್ರೆ

ಈ ಜಾತ್ರೆಯು ಜನವರಿ ತಿಂಗಳ ಕೊನೆಯಲ್ಲಿ ಜರುಗುತ್ತದೆ. ಇಲ್ಲಿ ದನಗಳ ಪರಿಷೆ, ಕೊಂಡ, ರಥೋತ್ಸವ ಹೀಗೆ ಒಂದು ವಾರ ಕಾಲ ಜರುಗುತ್ತದೆ. ಈ ಪರಿಷೆಯಲ್ಲಿ ದನಗಳ ವ್ಯಾಪಾರ ಹೊರರಾಜ್ಯದ ವ್ಯಾಪಾರಿಗಳು ಬರುವ ಕಾರಣ ಜೋರಾಗಿರುತ್ತದೆ. ತಾಲ್ಲೂಕಿನ ದಕ್ಷಿಣ ಭಾಗದ (ಕೋಡಿಹಳ್ಳಿ, ಉಯ್ಯಂಬಳಿ, ಕಬ್ಬಾಳು, ಸಾತನೂರು ಮತ್ತು ದೊಡ್ಡಾಲಳ್ಳಿ) ದನಗಳನ್ನು ಮಾರುವ ಮತ್ತು ಕೊಳ್ಳುವ ರೈತಾಪಿ ಜನರಿಗೆ ಇದು ತುಂಬಾ ಅನುಕೂಲಕರವಾದ ಜಾತ್ರೆಯೆನ್ನಲಡ್ಡಿಯಿಲ್ಲ. ಶ್ರೀವೀರಭದ್ರಸ್ವಾಮಿಯ ಕೊಂಡ, ಬಂಡಿ, ರಥೋತ್ಸವಗಳು ಬಹು ವಿಜೃಂಭಣೆಯಿಂದ ಮತ್ತು ತುಂಬಾ ಭಕ್ತಿಯಿಂದ ಜರುಗುತ್ತದೆ. ಶಿವನಹಳ್ಳಿಯ ಸುತ್ತಮುತ್ತಲ ಹತ್ತಾರು ಹಳ್ಳಿಯ ಜನ ಈ ದೇವರ ಉತ್ಸವದಲ್ಲಿ ಪಾಲ್ಗೊಳ್ಳುತ್ತಾರೆ. ಹಲವಾರು ಹಳ್ಳಿಗಳ ಜನರು ಕೊಂಡಕ್ಕೆ ಯಳವಾರಗಳನ್ನು ಕಟ್ಟಿ ಸೌದೆ ತಂದು ಹಾಕಿ ದೊಡ್ಡ ಕೊಂಡವನ್ನು ನಿರ್ಮಾಣ ಮಾಡಿರುತ್ತಾರೆ. ಈ ಜಾತ್ರೆಯ ಗಮನಾರ್ಹವಾದ ಅಂಶವೆಂದರೆ ಜಾತ್ರೆ ಪ್ರಾರಂಭವಾಗುತ್ತದೆ ಎಂದು ಸಾರಿದ ದಿನದಿಂದ ಹದಿನೈದು ದಿನಗಳ ಕಾಲ "ಕಂಟು ಮುಟ್ಟು" (ಅಂಟು ಮುಟ್ಟು) ಮಾಡಕೂಡದೆಂದು ನಂಬಿಕೆಯಿಂದ ಬಲು ಕಟ್ಟುನಿಟ್ಟಾಗಿ ಪಾಲಿಸುತ್ತಾರೆ.[3]

ಕಲ್ಲಹಳ್ಳಿ ದನಗಳ ಜಾತ್ರೆ

ಶಿವನಹಳ್ಳಿ ಜಾತ್ರೆ ಮುಗಿಯುತ್ತಿದ್ದಂತೆ ಕಲ್ಲಹಳ್ಳಿ ದನಗಳ ಜಾತ್ರೆ ಆರಂಭ. ದನಗಳ ಜಾತ್ರೆ ಅಷ್ಟು ಭರ್ಜರಿಯಾಗಿರುವುದಿಲ್ಲ. ಕಲ್ಲಹಳ್ಳಿಯನ್ನು ಎರಡನೆಯ ತಿರುಪತಿ (ಚಿಕ್ಕ ತಿರುಪತಿ) ಎಂದು ಕರೆಯುವುದುಂಟು. ತಿರುಪತಿಗೆ ಹೋಗಲಾಗದವರು ಇಲ್ಲಿಗೆ ಬಂದು ಶ್ರೀನಿವಾಸನ ದರ್ಶನ ಪಡೆದರೆ ತಿರುಪತಿಗೆ ಹೋಗಿ ಬಂದಷ್ಟೇ ಪುಣ್ಯ ಬರುತ್ತದೆಂಬ ನಂಬಿಕೆ.[4] ಇದೂ ಕೂಡ ಒಂದು ವಾರ ಕಾಲ ನಡೆಯುತ್ತದೆ. ಇಡೀ ತಾಲ್ಲೂಕಿನ ಜನ ಜಾತ್ರೆ ನಡೆಯುವ ವಾರದಲ್ಲಿ ಒಂದು ದಿನವಾದರೂ ಬಂದು ಹೋಗಬೇಕೆಂಬ ಹಂಬಲವನ್ನು ವ್ಯಕ್ತಪಡಿಸುತ್ತಾರೆ. ಇಲ್ಲಿನ ಬಹುಮುಖ್ಯ ಆಕರ್ಷಣೆ ಎಂದರೆ

ಮದ್ದುಗುಂಡು. ದೇವಸ್ಥಾನದ ಮುಂದಿನ ಮೈದಾನದಲ್ಲಿ ಮೂರು ಅಡಿಕೆ ಕಂಬಗಳನ್ನು ನೆಟ್ಟು, ಮದ್ದುಗುಂಡು ತಯಾರಿಸುವವರನ್ನು ಶಿವಕಾಶಿಯಿಂದ ಕರೆಸಿ, ಕುಂಬಾರರಿಂದ ಇದಕ್ಕೆಂದೇ ತಯರು ಮಾಡಿಸಿದ ಗಡಿಗೆಗಳಲ್ಲಿ, ಸಣ್ಣ ಸಣ್ಣ ಕುಡಿಕೆಗಳಲ್ಲಿ, ಚಿತ್ರ ವಿಚಿತ್ರ ಆಕಾರಗಳ ಆ ಮಡಿಕೆ ಕುಡಿಕೆಗಳಿಗೆ ತಯಾರಾದ ಮದ್ದನ್ನು ತುಂಬಿ ನಿಲ್ಲಿಸಿರುವ ಅಡಿಕೆ ಮರಗಳಿಗೆ ಕಲಾತ್ಮಕವಾಗಿ ಕಟ್ಟುತ್ತಾರೆ. ಮೂರು ಅಡಿಕೆ ಮರಗಳಲ್ಲಿರುವ ಮದ್ದುಗುಂಡುಗಳಿಗೆ ಒಂದೇ ಕಡೆ ಸಂಬಂಧವನ್ನು ಕಲ್ಪಸಿದ ತಾಮ್ರದ ತಂತಿಗೆ ಬೆಂಕಿ ಹಚ್ಚುವ ಮೂಲಕ ಮದ್ದುಗುಂಡುಗಳನ್ನು ಸಿಡಿಸುತ್ತಾರೆ. ಮಧ್ಯರಾತ್ರಿಯಲ್ಲಿ ಸೃಷ್ಟಿಯಾಗುವ ಈ ಅದ್ಭುತ ಲೋಕವನ್ನು ನೋಡಲು ಜನಜಂಗುಳಿ ಕಾತರತೆಯಿಂದ ಕಿಕ್ಕಿರಿದು ನೆರೆದಿರುತ್ತದೆ. ಹೀಗೆ ನೆರೆದ ಜನಜಂಗುಳಿಯನ್ನು ನೋಡಿಯೇ "ಮಳ್ಳಾಕುದ್ರೆ ಮಳ್ಳಿಳಿಯೋದಿಲ್ಲ" ಎಂಬ ಮಾತು ಪ್ರಚಲಿತವಾಗಿದೆ. ಇದರ ಲಾಭ ಪಡೆಯಲು ಕಳ್ಳರು ಹೆಚ್ಚಾಗಿ ಈ ಸಂದರ್ಭದಲ್ಲಿ ಕಳ್ಳತನ ಮಾಡುವುದರಿಂದಲೇ ಕಲ್ಲಹಳ್ಳಿಯನ್ನು ಕಳ್ಳಳ್ಳಿ ಎಂದು ಕರೆಯುತ್ತಾರೆ.

ಕಬ್ಬಾಳಮ್ಮನ ಜಾತ್ರೆ

ಶಿವರಾತ್ರಿಯ ದಿನವೇ ಕೊಂಡು ನಡೆಯುವುದು ಇಲ್ಲಿಯ ವಿಶೇಷ. ಕಬ್ಬಾಳಮ್ಮನನ್ನು ಕುರಿತಂತೆ ಅನೇಕ ಐತಿಹ್ಯ ದಂತಕತೆಗಳು ಪ್ರಚಲಿತವಾಗಿವೆ. ಆಕೆಯನ್ನು ಕುರಿತಂತೆ. ಆಕೆಯ ಲೀಲೆಗಳನ್ನು ಕುರಿತಂತೆ ವಿಫುಲವಾಗಿ ಹಾಡು, ಗೀತೆಗಳು ದೊರೆಯುತ್ತವೆ. ಇಡೀ ತಾಲ್ಲೂಕಿನಲ್ಲಿ ನಡೆಯುವ ಜಾತ್ರೆಗಳಲ್ಲಿ ಕಬ್ಬಾಳಮ್ಮನ ಜಾತ್ರೆ ವೈಶಿಷ್ಟ್ಯಪೂರ್ಣವಾಗಿದೆ. ಯಳವಾರ, ಕೊಂಡ, ಬಂಡಿ, ಉತ್ಸವ, ಬಲಿ ಎಲ್ಲವೂ ನಡೆಯುತ್ತವೆ. ಸಿಡಿ ಇಲ್ಲಿಯ ವಿಶೇಷತೆ. ಈ ಕುರಿತಂತೆ ಪ್ರಚಲಿತವಿರುವ ಒಂದು ಐತಿಹ್ಯ ಹೀಗಿದೆ :

ಕಬ್ಬಾಳಮ್ಮನಿಗೆ ಮಕ್ಕಳಿರುವುದಿಲ್ಲ. ತಂಗಿ ಕೋಡಂಬಳ್ಳಿಯ ಬಿಸಿಲಮ್ಮನಿಗೆ ಏಳು ಜನ ಗಂಡು ಮಕ್ಕಳು. ಕಬ್ಬಾಳಮ್ಮನಿಗೆ ಮಕ್ಕಳೆಂದರೆ ಬಲು ಅಕ್ಕರೆ. ಹೀಗಾಗಿ ಸಮಯ ಸಿಕ್ಕಾಗಲೆಲ್ಲ ಬಿಸಿಲಮ್ಮನ ಮಕ್ಕಳನ್ನು ನೋಡಲು ತಂಗಿ ಮನೆಗೆ ಹೋಗುತ್ತಿದ್ದಳು. ಮಕ್ಕಳನ್ನು ನೋಡಿ ತಿಂಡಿ ಕೊಟ್ಟು ಲಲ್ಲೆಗರೆದು ಬರುತ್ತಿದ್ದಳು. ಒಂದು ದಿನ ಬಿಸಿಲಮ್ಮ ಕಬ್ಬಾಳಮ್ಮ ತನ್ನ ಮನೆಗೆ ಬರುತ್ತಿರುವುದನ್ನು ಕಂಡು, ತನ್ನ ಮಕ್ಕಳಲ್ಲಿ ಐವರನ್ನು ಮುಚ್ಚಿಟ್ಟು ಇಬ್ಬರನ್ನು ಮಾತ್ರ ಅಕ್ಕನಿಗೆ ತೋರಿಸುತ್ತಾಳೆ. ತಾನು ತಂದಿದ್ದ ತಿಂಡಿ ತಿನಿಸುಗಳನ್ನು ಆ ಎರಡು ಮಕ್ಕಳಿಗೆ ಕೊಟ್ಟು ಉಳಿದ ಮಕ್ಕಳು ಎಲ್ಲಿ ಹೋದರೆಂದು ಕೇಳುತ್ತಾಳೆ. ಆಗ ತಂಗಿ ಆಟವಾಡಲು ಹೋಗಿದ್ದಾರೆ ಎಂದು ಸುಳ್ಳು ಹೇಳುತ್ತಾಳೆ. ಕಬ್ಬಾಳಮ್ಮ ಆ ಐದು ಮಕ್ಕಳನ್ನು ನೋಡಿಕೊಂಡೇ ಹೋಗಬೇಕೆಂದು ಸಂಜೆವರೆಗೂ ಕಾಯುತ್ತಾಳೆ. ಬಾರದಿದ್ದಾಗ ಆಕೆಗೆ ಅರಿವಾಗಿ ಸಿಟ್ಟಿನಿಂದ "ನಿನ್ನಾಡಕೋದ್ ಮಕ್ಳು ಹಾಳಾಗೋಗ್ಲಿ. ನೀನ್ ಮುಚ್ಚಿಟ್ಟರೋ ಮಕ್ಳು ಮುಚ್‌ದಂಗೇ ಇರ್ಲಿ. ಇವರಿಬ್ಬರೂ ಮಾತ್ರ ನಮ್ಮಿಬ್ಬರ ನಡುವೆ ಸಿಡಿಯಾಡಲಿ" ಎಂದು ಶಾಪ ಕೊಡುತ್ತಾಳೆ. ಹೀಗೆಂದು

ಶಾಪ ಕೊಟ್ಟಾಗ ಮುಚ್ಚಿಟ್ಟಿದ ಮಕ್ಕಳು ಇದ್ದಲ್ಲಿಯೇ ಕಲ್ಲಾಗಿಹೋದರಂತೆ. ಹೊರಗಿದ್ದ ಇಬ್ಬರು ಮಕ್ಕಳು ಮಾತ್ರ ಸಿಡಿರಣ್ಣದಿರಾಗಿ ಸಿಡಿ ಆಡುತ್ತಾರೆ. ಕಬ್ಬಾಳಮ್ಮನ ಜಾತ್ರೆಯ ಸಂದರ್ಭದಲ್ಲಿ ಸಿಡಿಯ ಆಚರಣೆ ಇಂದಿಗೂ ನಡೆದುಕೊಂಡು ಬರುತ್ತಿದೆ.

ಹಾರೋಹಳ್ಳಿಯ ಚಾಮುಂಡೇಶ್ವರಿ ಜಾತ್ರೆ

ಇದೂ ಕೂಡ ಏಳು ದಿನಗಳ ಜಾತ್ರೆ. ಇಲ್ಲಿಯೂ ಕೂಡ ದನಗಳ ಪರಿಷೆ, ಉತ್ಸವಗಳು ವಿಜೃಂಭಣೆಯಿಂದ ನಡೆಯುತ್ತವೆ. ಮುಖ್ಯವಾಗಿ ಇಲ್ಲಿ ಉತ್ಸವ ಸಂದರ್ಭದ ವಿಶೇಷತೆಗಳನ್ನು ಗುರುತಿಸಬಹುದು. ಏಳು ದಿನಗಳು ನಡೆಯುವ ಈ ಜಾತ್ರೆಯಲ್ಲಿ ಐದು ವರ್ಗದ ಜನಾಂಗಗಳು, (ರೈಟರು? (ಹೂವಾಡಿಗರು), ಬೆಸ್ತರು, ಬ್ರಾಹ್ಮಣರು, ಗಾಣಿಗರು, ಊರೊಟ್ಟಿನವರು) ದಿನಕ್ಕೊಬ್ಬರಂತೆ ಪಲ್ಲಕ್ಕಿ ಉತ್ಸವವನ್ನು ನಡೆಸಿಕೊಡುತ್ತಾರೆ. ಪ್ರತಿಯೊಂದು ವರ್ಗದ ಜನರಲ್ಲೂ ಪ್ರತಿಷ್ಠೆಯ ಸ್ಪರ್ಧೆಏರ್ಪಟ್ಟು ದಿನದಿಂದ ದಿನಕ್ಕೆ ಉತ್ಸವ ವೈಭವೋಪೇತವಾಗಿರುತ್ತದೆ. ಜಾಜಿ, ಸಂಪಿಗೆ, ಸೇವಂತಿಗೆ, ಮಲ್ಲಿಗೆ, ಕರ್ಣಕುಂಡಲ ಮುಂತಾದ ಹೂಗಳಿಂದ ವಿಶಿಷ್ಟ ಅಲಂಕಾರ, ಬಗೆ ಬಗೆಯ ಬಣ್ಣ ಬಣ್ಣದ ದೀಪಾಲಂಕಾರ, ವಿಶಿಷ್ಟ ವಾದ್ಯಮೇಳಗಳು, ಕೀಲುಕುದುರೆಯೇ ಮುಂತಾದ ಹಲವಾರು ವಿವಿಧ ಜಾನಪದ ನೃತ್ಯಗಳು ಹೀಗೆ ವೈವಿಧ್ಯಮಯವಾದ ಉತ್ಸವವು ಜರುಗುತ್ತದೆ. ಒಂದು ದಿನ ಸಿಡಿ ಇರುತ್ತದೆ. ಕೊನೆಯ ದಿನ ಪಲ್ಲಕ್ಕಿ ಉತ್ಸವ ಬಂದು ದೊಡ್ಡ ಗುಡಿಯ ಮೈದಾನದಲ್ಲಿ ಬೃಹದಾಕಾರವಾದ ಮಹಿಷಾಸುರನನ್ನು ನಿರ್ಮಿಸಿ ಸಂಹಾರ ಮಾಡುವುದರೊಂದಿಗೆ ಜಾತ್ರೆ ಕೊನೆಗೊಳ್ಳುತ್ತದೆ.

ಹಾರೋಹಳ್ಳಿ ಸತ್ಯಮ್ಮ ಕಾಳಮ್ಮ ಜಾತ್ರೆ

ಚಿಕ್ಕೆರೆಯ ಕೋಡಿಯಲ್ಲಿ ದೇವಸ್ಥಾನಗಳಿವೆ. ಆದಿಶಕ್ತಿ ಅಮ್ಮನನ್ನು ಸತ್ಯಮ್ಮ ಮತ್ತು ಕಾಳಮ್ಮ ಎಂದು ಕರೆಯುತ್ತಾರೆ. ಇವರಿಬ್ಬರೂ ಅಕ್ಕ ತಂಗಿಯರು. ಇದೂ ಕೂಡ ತಾಲ್ಲೂಕಿನಲ್ಲಿ ಬಹು ಹೆಸರುವಾಸಿಯಾದ ಜಾತ್ರೆ. ಸುತ್ತಮುತ್ತಲ ಜನರೆಲ್ಲಾ ಸೇರುತ್ತಾರೆ. ಸೋಮವಾರದಿಂದ ಬುಧವಾರದವರೆಗೆ ನಡೆಯುವ ಮೂರು ದಿನಗಳ ಜಾತ್ರೆ. ಇಲ್ಲಿನ ವಿಶೇಷತೆಯೆಂದರೆ ನಾಡಿನ ಮೂಲೆ ಮೂಲೆಗಳಿಂದ ಜನರು ಸೋಮವಾರ ರಾತ್ರಿಯೇ ಸೇರಿ ಮಾವಿನ ತೋಪಿನಲ್ಲಿ ಗೂಡಾಕುತ್ತಾರೆ (ಬಿಡಾರ ಹೂಡುತ್ತಾರೆ). ಸಂಜೆಗೇ ಆಗಮಿಸಿದ ಭಕ್ತಾದಿಗಳಿಗೆಲ್ಲಾ ಅನ್ನ ಸಂತರ್ಪಣೆಯಿರುತ್ತದೆ. ಬೆರಕೆ ಕಾಳಿನ ಸಾರು, ಅನ್ನ ಮುದ್ದೆಯ ಪರ ನಡೆಯುತ್ತದೆ. ರಾತ್ರಿಯೆಲ್ಲಾ ದೇವರ ಮೆರವಣಿಗೆ ನಡೆದು ಮುಂಜಾನೆ ಚಿಕ್ಕ ಕೆರೆಯ ಬಳಿಗೆ ಬಂದುಅಲ್ಲಿಂದ ಕರಗದ ಮೆರವಣಿಗೆ, ತಂಬಿಟ್ಟಿನಾರತಿಯೊಂದಿಗೆ ದೇವಸ್ಥಾನದವರೆಗೆ ಸಾಗುತ್ತದೆ. ದೇವಸ್ಥಾನದ ಬಳಿ ಕೋಳಿ. ಕುರಿ ಮೇಕೆಗಳ ಬಲಿಯ ಅರ್ಪಣೆ. ಗೂಡಾಕಿರುವ ಜನರೆಲ್ಲಾ ಮಾಂಸದಡಿಗೆಯನ್ನು ತಯಾರಿಸಿ, ದೇವರಿಗೆ ಎಡೆಯಿಟ್ಟು ಊಟ ಮಾಡುತ್ತಾರೆ.

ರಾಮದೇವರ ಪರಿಸೆ

ಯುಗಾದಿ (ಮಾರ್ಚ ತಿಂಗಳಲ್ಲಿ) : ಮುಂಗಾರು ಮಳೆ ಬಿದ್ದ ಸಂದರ್ಭದಲ್ಲಿ ನಡೆಯುವ ಈ ದನಗಳ ಜಾತ್ರೆ ತಾಲ್ಲೂಕಿನಲ್ಲಿಯೇ ಮಹತ್ವವಾದುದು. ಉಳುಮೆಯ ವಯಸ್ಸಿಗೆ ಬಂದಿರುವ ರಾಸುಗಳಿಗೆ ಒಳ್ಳೆಯ ಬೆಲೆ. ಚಿಕ್ಕ ಮುದುವಾಡಿ ನರಸಿಂಹಸ್ವಾಮಿ ಪರಿಷೆಯೂ ಕೂಡ ದನಗಳ ಪರಿಷೆಯೆ.

ಬಿಳಿಕಲ್ ಬೆಟ್ಟದ ಜಾತ್ರೆ

ಕನಕಪುರ ತಾಲ್ಲೂಕು, ಮರಳವಾಡಿ ಹೋಬಳಿಯ ಬಿಳಕಲ್ ಬೆಟ್ಟದಲ್ಲಿರುವ ಶ್ರೀರಂಗನಾಥಸ್ವಾಮಿಗೆ ನಡೆಯುವ ಜಾತ್ರೆಯಿದು. ಬೆಟ್ಟದ ತುದಿಯಲ್ಲಿರುವ ಈ ದೇವರ ಸನ್ನಿಧಿಗೆ ಭಕ್ತಾದಿಗಳು ಹೋಗಿ ಸೇವೆ ಸಲ್ಲಿಸುವುದೇ ಒಂದು ಗಮನಾರ್ಹ ಸಂಗತಿ. ಈ ದೇಗುಲದ ಪ್ರಸಿದ್ಧಿ ಕನಕಪುರ ತಾಲ್ಲೂಕಿಗೆ ಮಾತ್ರವಲ್ಲದೆ, ಪಕ್ಕದ ತಾಲ್ಲೂಕುಗಳಾದ ರಾಮನಗರ, ಮಳವಳ್ಳಿ, ಚನ್ನಪಟ್ಟಣಗಳಿಗೂ ಹಬ್ಬಿದೆ. ಈ ದೇಗುಲದ ಸುತ್ತ ಅನೇಕ ಐತಿಹ್ಯಗಳು ಹೆಣೆದುಕೊಂಡಿವೆ. ಅವುಗಳಲ್ಲಿ ಕೆಲವು[5]

ಐತಿಹ್ಯ ಒಂದು

ಹಿಂದೆ ರಸ್ತ ಎಜಕ್ಕಸಂದ್ರದ ಬೈರೇದೇವರ ಗುಡ್ಡದಿಂದ ಬಿಳಿಕಲ್ ಬೆಟ್ಟದವರೆಗೂ ಬೆಟ್ಟಗುಡ್ಡಗಳ ಸಾಲು ಮತ್ತು ದಟ್ಟ ಕಾಡಿತ್ತು. ಒಮ್ಮೆ ಒಬ್ಬ ಬೇಟೆಗಾರ ಕುದುರೆಯ ಮೇಲೆ ಬೇಟೆಗೆಂದು ಈ ಕಾಡಿಗೆ ಬಂದ. ಆತ ಈ ಕಾಡಿನಲ್ಲಿ ಹುಲಿಗಳ ಹಿಂಡೊಂದನ್ನು ಕಂಡು, ಅವುಗಳನ್ನು ಬೆನ್ನಟ್ಟಿದ. ಬೇಟೆಗಾರನನ್ನು ಕಂಡ ಹುಲಿ ಹಿಂಡು ಚದುರಿತು. ಗುಂಪಿನಲ್ಲಿದ್ದ ಹುಲಿಮರಿಯೊಂದು ಬೇಟೆಗಾರನ ಕೈಯಿಂದ ತಪ್ಪಿಸಿಕೊಳ್ಳಲು ಓಡುತ್ತಿರುವಾಗ ಮುಂದೆ ಬೆಟ್ಟದ ತಪ್ಪಲಿನಲ್ಲಿ ಮೇಯುತ್ತಿದ್ದ ದನಗಳ ಗುಂಪಿನಲ್ಲಿ ಸೇರಿಕೊಂಡಿತು. ಹಿಂಬಾಲಿಸಿ ಬಂದ ಬೇಟೆಗಾರ ತಪ್ಪಿಸಿಕೊಂಡ ಹುಲಿಮರಿಯನ್ನು ಹುಡುಕಲಾಗದೆ ಹಿಂದಿರುಗಿದ. ಬೇಟೆಗಾರನಿಂದ ರಕ್ಷಿಸಿದ ದನಗಳ ಗುಂಪು ಆ ಹುಲಿಮರಿಗೆ ಪ್ರೀತಿಯಿಂದ ಹಾಲುಣಿಸಿ, ಬೆಳೆಸಿದವು. ದಿನಕಳೆದಂತೆ ಆ ಹುಲಿಮರಿ ಹಸುಗಳ ಕರುಗಳೊಂದಿಗೆ ಆಟವಾಡಿ ನಲಿಯುತ್ತಾ ಬೆಳೆಯಿತು. ತನ್ನ ಹೆತ್ತ ತಾಯಿಗಿಂತ ಹೆಚ್ಚಾಗಿ ಸಾಕಿ ಸಲಹಿದ ಹಸುಗಳ ಬಗ್ಗೆ ಆ ಹುಲಿಮರಿಗೆ ಪ್ರೀತಿ, ಗೌರವ ಬೆಳೆಯಿತು. ಬೆಳೆದು ದೊಡ್ಡದಾದ ಹುಲಿಮರಿ ಒಂದು ದಿನ ನಿಮಗೆ ಮತ್ತು ನಿಮ್ಮ ಬಂಧುಗಳಿಗೆ ಯಾವುದೇ ವಿಪತ್ತು ಬಂದರು ನನ್ನನ್ನು ನೆನೆಸಿಕೊಳ್ಳಿ. ನನ್ನ ಕೈಲಾದ ಉಪಕಾರವನ್ನು ಮಾಡುತ್ತೇನೆಂದು ಹೇಳಿ ತನ್ನ ಪಾಡಿಗೆ ತಾನು ಹೊರಟುಹೋದ ಆ ಹುಲಿ ಮುಂದೆ ಬಿಳಿಕಲ್ ಬೆಟ್ಟದ ರಂಗಸ್ವಾಮಿಯ ವಾಹನವಾಯಿತೆಂಬುದು ಒಂದು ನಂಬಿಕೆ. ಹಾಗೆಯೇ ಅದೇ ಹುಲಿಯೇ ಬಿಳಿಕಲ್ ಬೆಟ್ಟದ ಶ್ರೀರಂಗನೆಂದೂ ಕೆಲವರ ಅಂಬೋಣ.

ಅದರಂತೆ ಸುತ್ತಮುತ್ತಲ ಹಳ್ಳಿಯ ದನಗಳಿಗೆ ಬಾಯಿಲೆ ಕಸಾಲೆ ಬಂದರೆ ಹಾಲು, ಮೊಸರು, ತುಪ್ಪ, ಬೆಣ್ಣೆ ಕೊಡುತ್ತೇವೆಂದು ಬಿಳಿಕಲ್ ಬೆಟ್ಟದ ದೇವರಿಗೆ ಹರಕೆ ಹೊತ್ತರೆ ಆ ಬಾಯಿಲೆ ಕೂಡಲೇ ಪರಿಹಾರವಾಗುತ್ತದೆ ಎಂಬ ನಂಬಿಕೆ. ಪ್ರತೀ ವರ್ಷವೂ ನಡೆಯುವ ಈ ಜಾತ್ರೆಗೆ ಜನ ತಮ್ಮ ತಮ್ಮ ಮನೆಗಳಿಂದ ಹಾಲು, ಮೊಸರು, ಬೆಣ್ಣೆ, ತುಪ್ಪ, ಬೆಲ್ಲ, ಅಕ್ಕಿ (ಆಕ್ಷಡಿ) ಸಲ್ಲಿಸಿ ನಮ್ಮ ಮನೆಯ ರಾಸುಗಳನ್ನು ರಕ್ಷಿಸಿ ಯಾವುದೇ ರೋಗ ರುಜಿನಗಳು ಬರದಂತೆ ಕಾಪಾಡು ಶ್ರೀರಂಗ ಎಂದು ಬೇಡುತ್ತಾರೆ.

ಐತಿಹ್ಯ ಎರಡು

ಈ ದೇವರನ್ನೆ ಕುರಿತಂತೆ ಮತ್ತೊಂದು ಐತಿಹ್ಯ ಹೀಗಿದೆ. ಬೈರೇದೇವರ ಗುಡ್ಡದಿಂದ ಬಿಳಿಕಲ್ ಬೆಟ್ಟದವರೆಗೂ ರಂಗನಾಥನೆನಿಸಿಕೊಂಡ ಈ ಹುಲಿ ಸಂಚರಿಸುತ್ತಿತ್ತು ಎಂಬ ನಂಬಿಕೆ. ಹೀಗಿರುವಾಗ ಬೈರೇದೇವರಗುಡ್ಡೆಯ ದೇಗುಲದ ವೈಷ್ಣವ ಪೂಜಾರಿ ಒಬ್ಬರು ಸುತ್ತಲ ಹಳ್ಳಿಗಳಿಗೆ ಅಯ್ನೋರು. ಜನರೆಲ್ಲಾ ಅವರಿಗೆ ಪ್ರತೀವರ್ಷವೂ ಕಾಣಿಕೆ (ಅಡದೆ) ನೀಡುವುದು ವಾಡಿಕೆ. ಪೂಜಾರಿ ಎಂದು ಮೇಲೆ ನೇಮದಿಂದಿರಬೇಕು ಎಂಬುದು ಕಟ್ಟಳೆ. ಆದರೆ ಈ ಪೂಜಾರಿಗೆ ಮನೆಯವರ ಕಣ್ಣು ತಪ್ಪಿಸಿ ಹೆಂಡ ಕುಡಿಯುವ ಮತ್ತು ಬಾಡು ತಿನ್ನುವ ಚಪಲ. ತೆಂಗಿನ ಮರಗಳಿಂದಾವೃತವಾದ ದೊಡ್ಡಸಾದೇನಹಳ್ಳಿ, ಚಿಕ್ಕದೇವರಹಳ್ಳಿ, ಕೀರಣಗೆರೆ, ಟಿ. ಹೊಸಹಳ್ಳಿಗಳಲ್ಲಿ ಹೆಂಡ ಇಳಿಸುತ್ತಿದ್ದರು. ಬೇಕೆನಿಸಿದಾಗ ತನ್ನ ಚಪಲ ತೀರಿಸಿಕೊಳ್ಳಲು ಸಂಜೆಯ ಹೊತ್ತಿನಲ್ಲಿ ಈ ಹಳ್ಳಿಗಳ ಪೆಂಟೆಗಳಿಗೆ ಅಯ್ನೋರು ಹೋಗುತ್ತಿದ್ದರು. ಅವರನ್ನು ಕಂಡ ಕೂಡಲೇ ಪೆಂಟೆಯ ಯಜಮಾನ "ಅಯ್ನೋರು ಬಂದವರೆ, ತುಳಸಿ ಪತ್ರೇನು, ತೀರ್ಥ ತಂದುಕೊಡಿರೋ" ಎಂದು ಸೂಚ್ಯವಾಗಿ ಹೇಳುತ್ತಿದ್ದನಂತೆ. ಆಗ ಬಾಡು ಮತ್ತು ಹೆಂಡಗಳನ್ನು ತಂದು ಒಂದು ಗುಡಿಸಲಿನಲ್ಲಿ ಇಟ್ಟು ಹೋಗುತ್ತಿದ್ದರು. ಅಯ್ನೋರು ಬೇಕಾದಷ್ಟು ಕುಡಿದು, ತಿಂದು ಕತ್ತಲಾದ ಮೇಲೆ ಹಿಂದಿರುಗುತ್ತಿದ್ದರಂತೆ. ಹೀಗಿರುವಾಗ ಒಮ್ಮೆ ಅಯ್ನೋರಿಗೆ ತಮ್ಮ ಚಟಗಳನ್ನು ತೀರಿಸಿಕೊಂಡು ಹಿಂದಿರುಗಲು ತುಂಬಾ ತಡವಾಯಿತು. ಕತ್ತಲಿನಲ್ಲಿಯೇ ಬೈರೇದೇವರ ಗುಡ್ಡೆಯ ದೇಗುಲದ ದಾರಿಯಲ್ಲಿ ಬರುತ್ತಿರುವಾಗ ಕುಡಿತದ ಅಮಲು ಹೆಚ್ಚಾಗಿ ಬಿದ್ದುಬಿಡುತ್ತಾರೆ. ತನ್ನ ಪೂಜಾರಿ ಕತ್ತಲಿನಲ್ಲಿ ಬಿದ್ದಿರುವುದನ್ನು ಕಂಡು ದೆವ್ವ, ಭೂತ, ಕಳ್ಳ ಕಾಕರ ಕಾಟದಿಂದ ಆತನಿಗೆ ರಕ್ಷಣೆ ನೀಡಲೆಂದು ಇಡೀ ರಾತ್ರಿ ಹುಲಿರಾಯ ಬಂದು ಆತನ ಪಕ್ಕದಲ್ಲಿಯೇ ಮಲಗಿತ್ತಂತೆ. ಮುಂಜಾನೆಯಲ್ಲಿ ಪೂಜಾರಿಗೆ ಎಚ್ಚರವಾದಾಗ ಮೈ ಕೊಡವಿಕೊಂಡು ದೂರ ಹೋಗಿ ಹುಲಿ ನಿಂತಿತ್ತಂತೆ. ತನ್ನ ತಪ್ಪಿನ ಅರಿವಾಗಿ ನನ್ನ ಮೇಲೆ ಇಷ್ಟು ಪ್ರೀತಿಯೇ ಸ್ವಾಮಿ ಎಂದು ಅಂದಿನಿಂದ ತನ್ನ ಚಪಲವನ್ನು ಬಿಟ್ಟನಂತೆ.

ಐತಿಹ್ಯ ಮೂರು

ಬಿಳಿಕಲ್ ಬೆಟ್ಟದ ಪೂಜಾರಿ ನಿತ್ಯ ಪೂಜೆ ಮಾಡಿಕೊಂಡು, ಆತನ ಪತ್ನಿಯೊಡನೆ ಬೆಟ್ಟದಲ್ಲಿಯೇ ವಾಸವಾಗಿದ್ದನಂತೆ. ಅಡಿಗೆಗೆ ಬೇಕಾದ ಸಾಮಾನುಗಳನ್ನು ಕಾನಕಾನಹಳ್ಳಿಯಿಂದಲೇ ತರಬೇಕಿತ್ತಂತೆ. ಹೀಗಿರುವಾಗ ವಯಸ್ಸಾದ ಪೂಜಾರಿ ಸತ್ತು ಹೋಗುತ್ತಾನೆ. ಗಂಡ ಸತ್ತ ನಂತರ ಆತನ ಹೆಂಡತಿಯೇ ಪೂಜೆ ಮಾಡುತ್ತಿದ್ದಳಂತೆ. ಒಂದು ದಿನ ಮಧ್ಯರಾತ್ರಿಯಲ್ಲಿ ಕಳ್ಳರು ಬಂದು ಹೊರಗಿನಿಂದ ಬಾಗಿಲು ಮುಚ್ಚಿ ಕಳ್ಳತನ ಮಾಡಲು ಪ್ರಯತ್ನಿಸಿದರಂತೆ. ಆಗ ಎಚ್ಚರಗೊಂಡ ಅಜ್ಜಿ "ರಂಗಾ ಎಲ್ಲಿದ್ದಿ ಬಾರೋ" ಎಂದು ಕರೆದಳಂತೆ. ತಕ್ಷಣ ಹುಲಿರಾಯ ಪ್ರತ್ಯಕ್ಷನಾಗಿ ಬಾಗಿಲ ಬಳಿ ಬಂದು ಕುಳಿತನಂತೆ. ಭಯಗೊಂಡ ಕಳ್ಳರು ಓಡಿಹೋದರಂತೆ. ಪ್ರತಿನಿತ್ಯವೂ ಈ ಹುಲಿರಾಯ ರಂಗಸ್ವಾಮಿ ಮತ್ತು ಬೈರೇದೇವರ ಗುಡಿಗಳ ಮುಂಭಾಗವನ್ನು ತನ್ನ ಬಾಲದಿಂದ ಗುಡಿಸುತ್ತಿದ್ದುದಾಗಿ ಜನ ಕಥೆ ಹೇಳುತ್ತಾರೆ.

ಹಿಂದೆ ಬೆಟ್ಟ ಹತ್ತುವುದು ತುಂಬಾ ಪ್ರಯಾಸದ ಕೆಲಸವಾಗಿತ್ತು. ಕತ್ತೆಗಳ ಮೇಲೆ ಸಾಮನುಗಳನ್ನು ಹೇರಿಕೊಂಡು ಹೋಗಿ ಭಕ್ತಾದಿಗಳು ಸೇವೆ ಸಲ್ಲಿಸುತ್ತಿದ್ದರು. ಈಗ ಸಂಚಾರಿ ವ್ಯವಸ್ಥೆ ಸುಗಮವಾಗಿದ್ದು, ವಿದ್ಯುತ್ ವ್ಯವಸ್ಥೆಯನ್ನು ಮಾಡಿದ್ದಾರೆ. ಪ್ರತೀ ವರ್ಷವೂ ಜನವರಿ ತಿಂಗಳಿನಲ್ಲಿ ಈ ಜಾತ್ರೆ ಅದ್ದೂರಿಯಾಗಿ ನಡೆಯುತ್ತದೆ.[6]

ಕುಂಭಗೂಳು

ರಸ್ತೆ ಜಕ್ಕಸಂದ್ರದಲ್ಲಿ ಪ್ರತೀ ಮೂರು ವರ್ಷಗಳಿಗೊಮ್ಮೆ ನಾಡಮ್ಮ (ನಾಡುಮಾರಮ್ಮ)ನಿಗೆ ಕುಂಭಗೂಳು (ಮಡಕೆ ಅನ್ನದ ಸೇವೆ) ಸೇವೆ ನಡೆಯುತ್ತದೆ. ಈ ಹಬ್ಬಕ್ಕೆ ಸುತ್ತಮುತ್ತಲ ಹಳ್ಳಿಯ ಜನರು ಎಮ್ಮೆ ಕೋಣಗಳನ್ನು ಹರಕೆಗೆಂದು ಬಿಟ್ಟು ಬಲಿ ಕೊಡುವುದು ಪುರಾತನ ಕಾಲದಿಂದಲೂ ನಡೆದುಬರುತ್ತಿದೆ. ಮರಿ, ಕೋಳಿ ಇತ್ಯಾದಿ ಪ್ರಾಣಿಗಳ ಬಲಿ ಕೊಡುವುದಾಗಿ ಹರಕೆ ಹೊತ್ತರೂ ಒಪ್ಪದ ಮಾರಮ್ಮ ಕೋಣನ ಬಲಿಯೇ ಬೇಕು ಎಂದು ಹಠ ಹಿಡಿಯುತ್ತಾಳಂತೆ. ತೊಂದರೆಗೀಡಾದವರು ತಮ್ಮ ಮನೆಯಲ್ಲಿ ಹುಟ್ಟಿದ ಕೋಣಗರುವನ್ನು ಜಕ್ಕಸಂದ್ರದ ನಾಡಮ್ಮನಿಗೆಂದು ಬಿಡುತ್ತಾರೆ. ಮೂರು ವರ್ಷವೂ ಚೆನ್ನಾಗಿ ಸಾಕಿ ಕುಂಭಗೂಳಿನ ದಿನ ಅದನ್ನು ಒಪ್ಪಿಸಿ ಹೋಗುತ್ತಾರೆ. ಬಲಿಗೆಂದು ನಿಯೋಜಿತವಾದ ಒಂದು ವರ್ಗದ ಜನ ಅದನ್ನು ಕಡಿದು ಅದರ ರಕ್ತವನ್ನು ಮಡಕೆಯಲ್ಲಿ ತಯಾರಿಸಿದ ಅನ್ನಕ್ಕೆ ಮಿಶ್ರಮಾಡಿ ನಾಡಮ್ಮನಿಗೆ ಎಡೆ ಇಡುತ್ತಾರೆ. ಮಾಂಸವನ್ನು ತಾವು ತಿನ್ನಲು ಬಳಸುತ್ತಾರೆ.

ಬ್ರಿಟಿಷರ ಆಳ್ವಿಕೆಯಲ್ಲಿ ಕೋಣನ ಬಲಿ ಕೊಡುವುದನ್ನು ನಿಷೇಧಿಸಿದರಂತೆ. ಜನರಿಗೆ ಕುಂಭಗೂಳು ಮಾಡಲು ಭಯವಾಗಿ ಹಬ್ಬ ಮಾಡುವುದನ್ನು ನಿಲ್ಲಿಸಿದರಂತೆ. ಆಗ ಎಲ್ಲೆ ಮಾರಿಯಾದ ನಾಡಮ್ಮ ಎಲ್ಲೆ ಕಾಯುವ ತನ್ನ ಕಾರ್ಯವನ್ನು ಸ್ಥಗಿತಗೊಳಿಸಿದಳು. ಪ್ಲೇಗಮ್ಮ, ಕಾಲರದಮ್ಮ, ಸೀತಾಳಮ್ಮ,

ಸಿಡುಬುಮಾರಿ ಮುಂತಾದ ಕೆಟ್ಟ ಮಾರಿಯರು ಹಳ್ಳಿ ಹಳ್ಳಿಗಳ ಮೇಲೆ ದಾಳಿ ಮಾಡಿ ತನ್ನ ಅಟ್ಟಹಾಸವನ್ನು ಮೆರೆಯುತ್ತಿದ್ದರಂತೆ. ಒಂದು ದಿನ ಪೂಜಾರಿಯ ಕನಸಿಗೆ ಬಂದ ನಾಡಮ್ಮ "ಹಬ್ಬವನ್ನು ಏಕೆ ನಿಲ್ಲಿಸಿದಿರಿ? ನನಗೆ ಬಲಿ ಬೇಕು" ಎಂದು ಹೇಳಿದಳಂತೆ. ಆಗ ಪೂಜಾರಿ "ನಾವು ನಿನ್ನ ಸೇವೆಗೆ ಸಿದ್ಧರಿದ್ದೇವೆ ತಾಯಿ. ಆದರೆ ಕುಂಪಣಿ (ಕಂಪನಿ) ಸರ್ಕಾರ ನಮಗೆ ಅನುಮತಿ ನೀಡುತ್ತಿಲ್ಲ" ಎಂದನಂತೆ. ಯಾರ ಹೆದರಿಕೆಯೂ ಬೇಡ, ನಾನಿದ್ದೇನೆ ಕುಂಭಗೂಳು ಮಾಡಿ ಎಂದು ನಾಡಮ್ಮ ಹೇಳಿದಳಂತೆ. ಅದರಂತೆ ಜನರೆಲ್ಲ ಕೂಡಿ ಹಬ್ಬ ಮಾಡುತ್ತಿದ್ದರಂತೆ. ಜಮೇದಾರ ತನ್ನ ಸಿಬ್ಬಂದಿಯ ಜೊತೆಗೂಡಿ ಬಲಿಕೊಡುವುದನ್ನು ಅಡ್ಡಿಪಡಿಸಲು ಬಂದು ನಿಂತಿದ್ದನಂತೆ. ಹಾಗೆ ನಿಂತಿದ್ದ ಜಮೇದಾರನಿಗೆ ವಾಂತಿ ಭೇದಿ ಪ್ರಾರಂಭವಾಯಿತಂತೆ. ಏನು ಮಾಡಿದರು ಈತನಿಗೆ ವಾಂತಿ ಭೇದಿ ನಿಲ್ಲದಾದಾಗ ಆತನಿಗೆ ಅರಿವಾಗಿ ತಾನು ಅಡ್ಡಿಪಡಿಸಿದುದರ ಫಲವೆಂದು ತಪ್ಪೆಂದು ಒಪ್ಪಿ, ಅಮ್ಮನ ಕಾಲಿಗೆ ಬಿದ್ದು ಕ್ಷಮೆ ಯಾಚಿಸಿದನಂತೆ. ತಟ್ಟನೆ ಆತನ ವ್ಯಾಧಿ ಗುಣವಾಯಿತಂತೆ. ಅಂದಿನಿಂದ ಇಂದಿನವರೆಗೂ ಯಾರೂ ಅಡ್ಡಿಪಡಿಸದಂತೆ ಈ ಕುಂಭಗೂಳು ಮಾತ್ರ ಅನೂಚನವಾಗಿ ನಡೆಯುತ್ತಿದೆ. ಹರಕೆ ಬಿಟ್ಟವನು ಒಪ್ಪಿಸುವುದನ್ನು ಮರೆತರೆ ಹಬ್ಬದ ದಿನದಂದು ಕೋಣಗಳೇ ಗೊಂತು (ಗೂಟ ಬಡಿದು ಹಗ್ಗದಿಂದ ಕಟ್ಟಿದ ಜಾಗ) ಕಿತ್ತುಕೊಂಡು ಬಂದುಬಿಡುತ್ತವೆಂಬುದು ಜನರ ನಂಬಿಕೆ.

ಜನಪದ ಐತಿಹ್ಯಗಳು

ಕಾನಕಾನಹಳ್ಳಿ ಪ್ರದೇಶದ ನೂರಾರು ವರ್ಷಗಳಿಂದ ಬವಣೆಗಳೊಂದಿಗೆ ಹಾಸುಹೊಕ್ಕಾಗಿರುವ ಜಾನಪದ ಕಲಾ ಪ್ರಕಾರಗಳು, ಕಥೆ, ಕಾವ್ಯಗಳು, ಹಬ್ಬ ಆಚರಣೆಗಳು ಎಷ್ಟೋ ಇವೆ. ಇವುಗಳಲ್ಲಿ ವಿಶೇಷವಾಗಿ ಗ್ರಾಮದೇವತೆಗಳಿಗೆ ಸಂಬಂಧಿಸಿದ ಹಾಗೆ ಐತಿಹ್ಯಗಳಿಗೆ ಕೂಡ ಸ್ಥಾನವುಂಟು. ಕೆಲಮಟ್ಟಿಗೆ ಅಧ್ಯಯನಗಳು ಕೂಡ ನಡೆದಿವೆ. ಇನ್ನೂ ಸಾಕಷ್ಟು ಅಧ್ಯಯನಗಳು ನಡೆಯಬೇಕಾಗಿದೆ.

ಆಡುಮಣಕವೊಂದರ ಕಥೆಗೆ ಸಂಬಂಧಿಸಿದ್ದು ಉಜ್ಜನಪ್ಪನ ದೊಡ್ಡಿಗೆ ಹತ್ತಿರವಿರುವ ಮಣಕನ ಕಲ್ ಬೆಟ್ಟದ ಐತಿಹ್ಯ.

ತಾಲ್ಲೂಕಿನ ಬಹುಮುಖ್ಯ ಬುಡಕಟ್ಟು ಜನಾಂಗವಾದ ಇರುಳರು ಮತ್ತು ಬಾಣಂತಿ ಮಾರಮ್ಮನ ವಾರ್ಷಿಕ ಹಬ್ಬಗಳಿಗೆ ಸಂಬಂಧಿಸಿದ್ದು ಹೊಲೆರಾವಣನ ವಧೆ ಮತ್ತು ಕೂತಗೊಂಡನಹಳ್ಳಿಯ ಹೆಸರಿನ ಐತಿಹ್ಯ.

ಕಬ್ಬಾಳಮ್ಮನನ್ನು ಕುರಿತ ಹಾಗೆ ಹಾಡುಗಳು, ಐತಿಹ್ಯಗಳು ಹೇರಳವಾಗಿವೆ. ಈಕೆಯ ಜಾತ್ರೆಯ ವೇಳೆ ನಡೆಯುವ ಸಿಡಿಯ ಆಚರಣೆಗೆ ಸಂಬಂಧಿಸಿದ ಹಾಗೆ ಕಬ್ಬಾಳಮ್ಮ, ಬಿಸಿಲಮ್ಮ ಈ ಅಕ್ಕತಂಗಿಯರ ಕಥೆ ಒಂದು ಐತಿಹ್ಯವಾಗಿ ಬೆಳೆದಿದೆ ಇತ್ತೀಚೆಗೂ ಕೆಲವು ಸೇರ್ಪಡೆಗೊಂಡಿರಬಹುದು.

ಇಡೀ ತಾಲ್ಲೂಕಿನಲ್ಲಿ ಕಬ್ಬಾಳು ದುರ್ಗದ ಕಬ್ಬಾಳಮ್ಮನ ಜಾತ್ರೆ ವಿಶೇಷವಾದ್ದು, ಯಳವಾರ, ಕೊಂಡ, ಬಂಡಿ, ಉತ್ಸವ, ಬಲಿ ಇವುಗಳ ಜೊತೆಗೆ ಸಿಡಿಗೆ ಇಲ್ಲಿ ಮಹತ್ತ್ವವಿದೆ. ಈ ಸಂಬಂಧವಾದ ಐತಿಹ್ಯವನ್ನು ಇಲ್ಲಿ ದಾಖಲಿಸಬಹುದಾಗಿದೆ.

"ಕಬ್ಬಾಳಮ್ಮನಿಗೆ ಮಕ್ಕಳಿರುವುದಿಲ್ಲ. ತಂಗಿ ಕೋಡಂಬಳ್ಳಿಯ ಬಿಸಿಲಮ್ಮನಿಗೆ ಏಳು ಜನ ಗಂಡುಮಕ್ಕಳು. ಕಬ್ಬಾಳಮ್ಮನಿಗೆ ಮಕ್ಕಳೆಂದರೆ ಬಲು ಅಕ್ಕರೆ. ಹೀಗಾಗಿ ಸಮಯ ಸಿಕ್ಕಾಗಲೆಲ್ಲ ಬಿಸಿಲಮ್ಮನ ಮಕ್ಕಳನ್ನು ನೋಡಲು ತಂಗಿಯ ಮನೆಗೆ ಹೋಗುತ್ತಿದ್ದಳು. ಮಕ್ಕಳನ್ನು ನೋಡಿ ತಿಂಡಿಕೊಟ್ಟು ಲಲ್ಲೆಗರೆದು ಬರುತ್ತಿದ್ದಳು. ಒಂದು ದಿನ ಬಿಸಿಲಮ್ಮನು ಕಬ್ಬಾಳಮ್ಮ ತನ್ನ ಮನೆಗೆ ಬರುತ್ತಿರುವುದನ್ನು ಕಂಡು, ತನ್ನ ಮಕ್ಕಳಲ್ಲಿ ಐವರನ್ನು ಮುಚ್ಚಿಟ್ಟು ಇಬ್ಬರನ್ನು ಮಾತ್ರ ಅಕ್ಕನಿಗೆ ತೋರಿಸುತ್ತಾಳೆ. ಅಕ್ಕ ತಾನು ತಂದಿದ್ದ ತಿಂಡಿ ತಿನಿಸುಗಳನ್ನು ಆ ಎರಡು ಮಕ್ಕಳಿಗೆ ಕೊಟ್ಟು, ಉಳಿದ ಮಕ್ಕಳು ಎಲ್ಲಿ ಹೋದರೆಂದು ಕೇಳುತ್ತಾರೆ. ಆಗ ತಂಗಿ 'ಆಡವಾಡಲು ಹೋಗಿದ್ದಾರೆ' ಎಂದು ಸುಳ್ಳು ಹೇಳುತ್ತಾಳೆ, ಕಬ್ಬಾಳಮ್ಮ ಆ ಮಕ್ಕಳನ್ನೂ ನೋಡಿಕೊಂಡೇ ಹೋಗಬೇಕೆಂದು ಸಂಜೆಯವರೆಗೂ ಕಾಯುತ್ತಾಳೆ. ಬಾರದಿದ್ದಾಗ, ಆಕೆಗೆ ಸಂಗತಿ ಅರಿವಾಗಿ ಸಿಟ್ಟಿನಿಂದ "ನಿನ್ನಾಡಾಕೋದ್ ಮಕ್ಕಳು ಹಾಳಾಗೋಗ್ಲಿ, ನೀನು ಮುಚ್ಚಿಟ್ಟಿರೋ ಮಕ್ಕಳು ಮುಚ್ಚಿದಂಗೇ ಇರಲಿ. ಇವರಿಬ್ಬರು ಮಾತ್ರ ನಮ್ಮಿಬ್ಬರ ನಡುವೆ ಸಿಡಿಯಾಡಲಿ" ಎಂದು ಶಾಪಕೊಡುತ್ತಾಳೆ. ಹೀಗೆಂದು ಶಾಪಕೊಟ್ಟಾಗ ಮುಚ್ಚಿಟ್ಟಿದ್ದ ಮಕ್ಕಳು ಇದ್ದಲ್ಲಿಯೇ ಕಲ್ಲಾಗಿಹೋದರಂತೆ; ಹೊರಗಿದ್ದ ಇಬ್ಬರು ಮಕ್ಕಳು ಮಾತ್ರ ಸಿಡೀರಣ್ಣದಿರಾಗಿ ಸಿಡಿ ಆಡುತ್ತಾರೆ.[7]

ಬಿಳಿಕಲ್ ಬೆಟ್ಟದ ರಂಗನಾಥಸ್ವಾಮಿ ಮತ್ತು ಒಂದಾನೊಂದು ಹುಲಿ ಸಂಬಂಧವಾಗಿ ಮೂರು ಐತಿಹ್ಯಗಳು ಪ್ರಚಲಿತವಿವೆ. ರಂಗನಾಥನೇ ಹುಲಿಯೆಂದೂ ಹುಲಿ ರಂಗನಾಥನ ವಾಹನವೆಂದೂ ಭಿತ್ತಿಯಾಗಿ ಹುಟ್ಟಿರುವ ಈ ಐತಿಹ್ಯಗಳು ವಿವರಗಳಲ್ಲಿ ಕುತೂಹಲಕರವಾಗಿವೆ. ದಟ್ಟ ಅರಣ್ಯಗಳೂ ಕಡಿದಾದ ಬೆಟ್ಟಗಳೂ ತುಂಬಿರುವ ಕಾನಕಾನಹಳ್ಳಿ ತಾಲ್ಲೂಕು ಒಂದು ಕಾಲಕ್ಕೆ ಹುಲಿಗಳ ಹೆಚ್ಚಳದಿಂದ ಕೂಡಿತ್ತು ಎನ್ನುವುದು ತಿಳಿದ ವಿಷಯ. ಹೀಗಾಗಿ ರಂಜನೆಯ ಕಥೆ ಐತಿಹ್ಯಗಳು ಹುಟ್ಟಿಕೊಂಡಿವೆ.

ಜಕ್ಕಸಂದ್ರದಲ್ಲಿ ಪ್ರತಿ ಮೂರು ವರ್ಷಗಳಿಗೊಮ್ಮೆ ನಾಡು ಮಾರಮ್ಮನಿಗೆ 'ಕುಂಭಗೊಳು' ಸೇವೆ ನಡೆಯುತ್ತದೆ. ಈ ಸೇವೆಯಲ್ಲಿ ದೇವಿಗೆ ಕೋಣನ ಬಲಿಯೇ ಆಗಬೇಕು ಎಂಬ ಸಂಬಂಧದಲ್ಲಿ ಹುಟ್ಟಿರುವ ಐತಿಹ್ಯ ಹಿಂದೆ ಸಾಮಾನ್ಯವಾಗಿದ್ದ ಸಾಂಕ್ರಾಮಿಕ ಜಾಡ್ಯಗಳೊಂದಿಗೆ ಸಂಬಂಧವುಳ್ಳದಾಗಿದೆ.

ಕೊಂಗುನಾಡಿನಿಂದ ಬಂದುದಾಗಿ ತಿಳಿಯುವ ಇಬ್ಬರು ಮಾರಿಯರ ಸಂಬಂಧವಾದ ಐತಿಹ್ಯಗಳು ಜಕ್ಕಸಂದ್ರದ ಮೂಗುಮಾರಮ್ಮ, ಬಳೆಚನ್ನವಲಸೆಯ ಪಟ್ಟದಮ್ಮ, ಟಿ. ಹೊಸಹಳ್ಳಿ ಮಾರಮ್ಮ, ದೊಡ್ಡ ಸಾದೇನಹಳ್ಳಿ ದೊಡ್ಡಮ್ಮ ಮತ್ತು ಚಿಕ್ಕಮ್ಮ, ಚಿಕ್ಕಸಾದೇನಹಳ್ಳಿ ಮಾರಮ್ಮ, ಕೀರಣಗೆರೆ ಚಿಕ್ಕಮ್ಮ ಇವರಿಗೆ

ಮತ್ತು ಅವ್ವೇರಹಳ್ಳಿ ರೇವಣಸಿದ್ದೇಶ್ವರಸ್ವಾಮಿ ಇವರಿಗೆ ಸಂಬಂಧಿಸಿ ಬೆಳೆದಿವೆ. ಇವುಗಳಲ್ಲಿ ಟಿ. ಹೊಸಹಳ್ಳಿ ಸಂಬಂಧವಾದ ಕಥೆ ವಿಸ್ತಾರವಾದುದು ಇಲ್ಲಿಯೂ ಸಾಂಕ್ರಾಮಿಕ ಜಾಡ್ಯ – ಗ್ರಾಮದೇವತೆಯರ ತಾರ್ಕಿಕ ಸಂಬಂಧವನ್ನು ಕಾಣಬಹುದು.

ಏಳಗಳ್ಳಿ ಮುದ್ದಮ್ಮನನ್ನು ಚರ್ಮವ್ಯಾಧಿಯ ಜನ ಪೂಜೆ ಉಪವಾಸಗಳಿಂದ ಸೇವಿಸುವುದು ಮತ್ತು ಅಲ್ಲಿಯೇ ದೇವಾಲಯದ ಹತ್ತಿರವಿರುವ ಹುತ್ತದ ಮಣ್ಣನ್ನು ವ್ಯಾಧಿಗ್ರಸ್ತರಾದ ಮಕ್ಕಳ ಗಾಯಕ್ಕೆ ಹಚ್ಚಿ ಗಾಯ ವಾಸಿಮಾಡುವುದು – ಇದು ಪ್ರಚಲಿತವಿರುವ ನಂಬಿಕೆ.

ದೊಡ್ಡಕಲ್ ಬಾಳು ಮಾಸ್ತಮ್ಮನಿಗೆ ಒಪ್ಪಿಸುವ ತಂಬಿಟ್ಟಿನ ನೈವೇದ್ಯದ ಸಂಬಂಧವಾಗಿ ಹೆಂಗಸರಿಗೆ ವಿಧಿಸಿರುವ ವಿಧಿ ನಿಷೇಧಗಳು ಹೊರಗಿನಿಂದ ಬರುವ ಕೆಟ್ಟ ಮಾರಿಗಳನ್ನು ತಡೆದು ನಾಡಿನ ಗಡಿ ರಕ್ಷಿಸುತ್ತವೆ ಎಂಬ ನಂಬಿಕೆಯೊಂದಿಗೆ ಹೊಂದಿಕೊಂಡಿರುವುದು ಕಾಣುತ್ತದೆ.

ತಟ್ಟೆಕೆರೆಯ ಕಣಿವೆ ಮಾದೇಶ್ವರನ ಕಥೆ ಬುಡಕಟ್ಟು ಜನಾಂಗದವರಾದ ಇರುಳರ ಬದುಕಿನೊಂದಿಗೆ ಬೆಸೆದುಕೊಂಡಿದೆ. ಗೆಡ್ಡೆ ಗೆಣಸಿಗಾಗಿ ಕಾಡಿನಲ್ಲಿ ನಡೆಸುವ ಶೋಧ, ದೈವಪ್ರಭಾವ, ಹಿರಿಯರ ಆರಾಧನಪದ್ಧತಿ ಇವುಗಳ ಸುತ್ತ ಬೆಳೆದಿರುವ ಇಲ್ಲಿಯ ಕಥೆ ಜನಾಂಗೀಯ ಅಧ್ಯಯನದ ನಿಗೂಢ ಮಜಲುಗಳನ್ನು ಅಧ್ಯಯನ ಮಾಡಬೇಕಾದ ಅವಶ್ಯಕತೆಯನ್ನು ತೋರಿಸುತ್ತದೆ.

ತೇರುಬೀದಿಯ ಶಿವನಾಂಕಾರೇಶ್ವರ ಮತ್ತು ವೀರಭದ್ರಸ್ವಾಮಿ ಗುಡಿಗಳ ಸಂಬಂಧವಾದ ಐತಿಹ್ಯಗಳು ಕೂಡ ಇರುಳರ ಸಂಬಂಧವಾದ್ದೇ ಆಗಿವೆ. ತಟ್ಟೆ ಕೆರೆಯ ಕಥೆಯನ್ನು ಇದು ಕೆಲಮಟ್ಟಿಗೆ ಹೋಲುತ್ತದೆ. ಗೆಡ್ಡೆ ಗೆಣಸಿಗಾಗಿ ಶೋಧವನ್ನು ಕೈಕೊಳ್ಳುವುದು, ದೈವದ ಆವಾಹನೆ. ತೇರಿನ ಸೃಷ್ಟಿ, ವೀರಭದ್ರನಿಂದ ಮಾರಿ ಮಸಣಿಯರ ನಿಗ್ರಹ ಇತ್ಯಾದಿ ಸಂಗತಿಗಳು ಇಲ್ಲಿ ಬರುತ್ತವೆ. ಬುಡಂಗಯ್ಯನ ದೊಡ್ಡಿಯ (ದೊಡ್ಡಿ ಮರಳವಾಡಿ – ತಳಿ ಮಾರ್ಗದಲ್ಲಿಯ ಮಂಡಲಹಳ್ಳಿಯ ಸಮೀಪದ ಇರುಳರ ಹಳ್ಳಿ) ಕಥೆಯಲ್ಲಿಯೂ ಇದಕ್ಕೆ ಸದೃಶವಾದ ಕಥಾ ಸಂದರ್ಭವಿದೆ.

ಕನಕಪುರ – ಸಾತನೂರು ಮಾರ್ಗದ ಬಟ್ಟಲುಗುಂಡೇಶ್ವರ ದೇವಾಲಯದ ತಪಸ್ವಿ ನಾಗಲಿಂಗಸ್ವಾಮಿಯ ಮಹಿಮೆಯನ್ನು ಅತಿಶಯಿಸುವ ಐತಿಹ್ಯವೊಂದಿದ್ದು, ಅದು ಮಾನವನಿಗೆ ದೈವತ್ವವನ್ನು ಕೊಡುವ ರೀತಿಯಾಗಿದೆ.

ಕಟ್ಟೆಮನೆ ಸಂಬಂಧವಾದ ಮಾವತ್ತೂರ್ ಚನ್ನಾಚಾರ್ಯ ಎಂಬುವರ ಪವಾಡಗಳ ಕಥನ ಅದ್ಭುತವಾದುದು. ಗಾಳಿಯಲ್ಲಿ ಅವರು ತೇಲಿಕೊಂಡು ಹೋಗುವುದು ಯೋಗಶಕ್ತಿಯನ್ನು ನೆನಪಿಸುತ್ತದೆ. ಮಾಯದ ಸ್ವಾಮಿ ಇಬ್ಭಾಗವಾಗುವ ಗರುಡಗಂಭದಿಂದ ಶಾಸ್ತ್ರದ ಕಟ್ಟು ತೆಗೆದು ಓದುವುದು.

ಆಂಜನೇಯನೊಂದಿಗೆ ಚನ್ನಾಚಾರ್ಯರು ಮಾತನಾಡುತ್ತಿದ್ದುದು, ಅವರು ಮೈಸೂರು ಮಹಾರಾಜರ ಮನೆಯಲ್ಲಿ ಕೆಟ್ಟ ಗ್ರಹಗಳ ಕಾಟವನ್ನು ನಿವಾರಿಸಿದ್ದು ಇತ್ಯಾದಿ ಸಂಗತಿಗಳು ಹಳಗಾಲದ ಯೋಗ ಪುರುಷರ ಅಲೌಕಿಕಶಕ್ತಿಯನ್ನು ನೆನಪಿಸುವಂತಿವೆ.

ಕನಕಪುರ ತಾಲ್ಲೂಕು, ಗ್ರಾಮಾಂತರ ಪ್ರದೇಶಗಳಲ್ಲಿ ಪೌರಾಣಿಕ ಪುರುಷದೇವತೆಗಳ. ಅಜ್ಞಾತವೀರರ ಹಾಗೂ ಗ್ರಾಮದೇವತೆಗಳ ಸಂಬಂಧವಾದ ಜಾತ್ರೆ ಉತ್ಸವಗಳು, ಯಳವಾರ ಕೊಂಡ ಸಿಡಿ ಪ್ರಾಣಿಬಲಿ ಪರ್ವ ಇವೆಲ್ಲ ಎಷ್ಟೋ ಕಾಲದಿಂದ ನಡೆದುಕೊಂಡು ಬರುತ್ತಿವೆ. ಇವೆಲ್ಲ ಸಂಪ್ರದಾಯ ನಂಬಿಕೆಗಳನ್ನು ಆಧರಿಸಿದವು. (ಈ ಐತಿಹ್ಯಗಳ ವಿಸ್ತೃತ ಪಾಠಗಳಿಗೆ ನೋಡಿ : ಎಂ. ಬೈರೇಗೌಡ, ಕನಕಪುರ ತಾಲ್ಲೂಕಿನ ಗ್ರಾಮದೇವತೆಗಳು ಮತ್ತು ಐತಿಹ್ಯಗಳು, 'ಅರ್ಕಾವತಿ', 1999, ಪು. 152–69).

ಇಂಥ ಐತಿಹ್ಯಗಳಿಗೆ ಕೊರತೆಯೇನಿಲ್ಲ ಎನ್ನುವುದಕ್ಕೆ ಹಾರೋಹಳ್ಳಿಯ ಭೀಮೇಶ್ವರ ಜಡೆ ಭೀಮೇಶ್ವರನಾದ ಕಥೆಯನ್ನು ಇಲ್ಲಿ ನೆನೆಯಬಹುದು, ಭೀಮೇಶ್ವರ ಗುಡಿಯ ಅರ್ಚಕನಿಗೆ ವೇಶ್ಯೆಯೊಬ್ಬಳ ಸಹವಾಸವಿತ್ತು. ಹಗಲು ಭೀಮೇಶ್ವರನ ದೇವಾಲಯದಲ್ಲಿ ಪೂಜೆ, ಅರ್ಚನೆ; ರಾತ್ರಿಯ ವೇಳೆ ವೇಶ್ಯೆಯ ಸಹವಾಸ. ಅವಳ ಮುಡಿದ ಹೂಗಳನ್ನೇ ತಂದು ಬೆಳಗ್ಗೆ ದೇವರಿಗೆ ಅರ್ಪಿಸುತ್ತಿದ್ದ. ಒಂದು ದಿನ ರಾಜನಿಗೆ ನೀಡಿದ ಪ್ರಸಾದದಲ್ಲಿ ಕೂದಲಿದ್ದುದು ಕಾಣಿಸಿತು. ದೊರೆ "ದೇವರ ಪ್ರಸಾದದಲ್ಲಿ ಕೂದಲು ಎಲ್ಲಿಯದು?" ಎಂದು ಕೋಪದಿಂದ ಪ್ರಶ್ನಿಸಿದ. ಅರ್ಚಕ ಹೆದರಿ ನಡುಗಿದ "ದೇವರ ಮುಡಿಯದು" ಎಂದು ಸುಳ್ಳು ಒದರಿದ, "ಶಿವಲಿಂಗಕ್ಕೆ ಮುಡಿ ಇದೆಯೇ? ಹಾಗಾದರೆ ನಾಳೆ ಬಂದು ಪರೀಕ್ಷಿಸುತ್ತೇನೆ. ಅದು ಇರಲಿಲ್ಲ ಎನ್ನುವುದಾದರೆ, ನಿನ್ನ ತಲೆ ತೆಗೆಸುತ್ತೇನೆ" ಎಂದನು. ಅರ್ಚಕ ಮರುದಿನ ತನ್ನ ತಲೆ ಹೋಗುವುದು ನಿಶ್ಚಯ ಎಂದು ಹೆದರಿದ. ಗುಡಿಗೆ ಬಂದು ದೇವರ ಮುಂದೆ ಕುಳಿತು ತನ್ನ ತಪ್ಪನ್ನು ಕ್ಷಮಿಸುವಂತೆ, ತನ್ನನ್ನು ಕಾಪಾಡುವಂತೆ ಕೇಳಿಕೊಂಡ; ರಾತ್ರಿಯೆಲ್ಲ ಪ್ರಾರ್ಥಿಸಿದ. ಮರುದಿನ ರಾಜ ಗುಡಿಗೆ ಬಂದು ಪರೀಕ್ಷಿಸಿದಾಗ ಶಿವಲಿಂಗದ ಹಿಂಭಾಗದಲ್ಲಿ ಜಡೆಯಿತ್ತು. ಭಕ್ತನನ್ನು ಕಾಪಾಡಲು ಶಿವ ಜಡೆ ಬೆಳಸಿಕೊಂಡಿದ್ದ.

ಕಬ್ಬಾಳು ದುರ್ಗದ ಕಬ್ಬಾಳಮ್ಮನ ದೇವಾಲಯದ ಒಂದು ಐತಿಹ್ಯವಾದರೋ ಹೀಗಿದೆ;

ಸುಮಾರು 10 – 15 ತಲೆಮಾರುಗಳ ಹಿಂದೆ ರಾಮಯ್ಯನೆಂಬ ಒಬ್ಬ ಶಾನುಭೋಗನಿದ್ದ. ತನ್ನ ಹಸು ಹುತ್ತವೊಂದರ ಮೇಲೆ ಹಾಲು ಕರೆಯುತ್ತಿದ್ದುದು ನೋಡಿ ಆಶ್ಚರ್ಯಪಟ್ಟ. ಆ ಹುತ್ತವನ್ನು ಅಗೆಯಿಸಲಾಗಿ, ಅಲ್ಲಿ ಅವನಿಗೆ ಹೊನ್ನೆ ಮರದಲ್ಲಿ ಕೆತ್ತಿದ ಕಬ್ಬಾಳಮ್ಮನ ಮೂರ್ತಿ ಕಂಡಿತು. ಜನರ ಸಹಾಯದಿಂದ ಅದರ ಸುತ್ತ ಒಂದು ಸಣ್ಣ ದೇಗುಲ ನಿರ್ಮಿಸಿದ.

ಕನಕಪುರದ ಕೋಡಿಹಳ್ಳಿ ಹೋಬಳಿ ಗುಲವಾಡಿ ಗ್ರಾಮದಲ್ಲಿ ಆಚರಣೆಯಾಗಿ ಬಹುಕಾಲದಿಂದ ಬಂದಿರುವ ಸೀತನ ಕೊಟ್ಟದ ಜಾತ್ರೆಯ ಐತಿಹ್ಯದ ಬಗೆಗೂ ಇಲ್ಲಿ ಕೆಲವು ಮಾತುಗಳನ್ನು ಹೇಳಬೇಕಾಗಿದೆ. ಇದು ಹಳ್ಳಿಯ ಜಾನುವಾರುಗಳ ಯೋಗಕ್ಷೇಮಕ್ಕೆ ಸಂಬಂಧಿಸಿದ್ದು ಎನ್ನುವುದು ಸ್ವಾರಸ್ಯದ ಸಂಗತಿ.

ಮದುಮಗನಾದ ಸೀತಪ್ಪ ಮದುವೆಯ ದಿನವೇ ದನಗಾಹಿಯಾಗಿ ಕಾಡುಮೇಡುಗಳತ್ತ ತೆರಳಬೇಕಾಗಿ ಬಂತು. ಈ ಗೌಡರ ಹಿರಿಯ ಮಗನ ಬದಲಿಗೆ ಬೇರೊಬ್ಬ ದನ ಮೇಯಿಸಲು ಹೊರಡಲು ಸಿದ್ಧನಿದ್ದರೂ ದನಗಳು ಕೊಟ್ಟಿಗೆ ಬಿಟ್ಟು ಹೊರಡಲು ಸಿದ್ಧವಿರಲಿಲ್ಲ. ಸೀತಪ್ಪ ತನ್ನ ಹತ್ತಿರವಿಟ್ಟುಕೊಂಡಿದ್ದ ಕತ್ತಿಗೇ ಧಾರೆಯೆರೆಯುವಂತೆ ತಿಳಿಸಿ, ತಾನು ದನಗಳನ್ನು ಹೊಡೆದುಕೊಂಡು ಕಾಡಿಗೆ ಹೊರಟ, ಸ್ವೇಚ್ಛೆಯಾಗಿ ಮೇದ ದನಕರುಗಳಿಗೆ ಮಾಮೂಲಿನ ಕಡೆ ಕುಡಿಯಲು ನೀರು ಸಿಕ್ಕಲಿಲ್ಲ ಎಷ್ಟು ಅಲೆದರೂ ಪ್ರಯೋಜನವಾಗಲಿಲ್ಲ. ಅವು ಸಾಯತೊಡಗಿದುವು. ಆಗ ತನ್ನನ್ನೇ ಬಲಿದಾನವಾಗಿ ಒಪ್ಪಿಸಿಕೊಂಡ. ಕುಡುಗೋಲು ಕತ್ತರಿಸಿದ ತಲೆಯಿಂದ ಹರಿದ ರಕ್ತ ನೀರಿನ ಹೊಂಡವಾಯಿತು. ದನಗಳು ನೆಮ್ಮದಿಯಾಗಿ ನೀರು ಕುಡಿದುವು. ರಕ್ತ ಹೋಗಿ ವಿಷಯ ತಿಳಿದ ಜನ ಕಳವಳಿಸಿತು. ಸೀತಪ್ಪ ಮನೆಯ ಹಿರಿಯನ ಕನಸಿನಲ್ಲಿ ಕಾಣಿಸಿಕೊಂಡು, "ನಾನು ನಿಮ್ಮ ಮನೆಯ ದೇವರಾಗಿದ್ದೇನೆ, ಪ್ರತಿವರ್ಷ ಶಿವರಾತ್ರಿಯಂದು ಮನೆಯಲ್ಲಿ ಪೂಜೆಮಾಡಿ; ಗೌರೀ ಹಬ್ಬದಲ್ಲಿ ಬಲಿಯಾದ ಜಾಗಕ್ಕೆ ಬಂದು ಪೂಜಿಸಿ" ಎಂಬುದಾಗಿ ಹೇಳಿದ.

ಅಂದಿನಿಂದ ಜಾತ್ರೆ ನಡೆದು ಬಂತು. ಅದು ನಡೆಯುವುದು ಒಂದೇ ದಿನ ಗೌರೀಹಬ್ಬದಂದು ಹಾಲಿನೊಂದಿಗೆ ಸೀತನ ಕೊಟ್ಟಕ್ಕೆ ಬರುತ್ತಾರೆ. ಅದು ಬತ್ತದ ನೀರಿನ ಸೆಲೆ, ಅದಕ್ಕೆ ಹಾಲು ಹೊಯ್ಯುವ ಮುನ್ನ, ನಾಲ್ಕು ದಿಕ್ಕುಗಳಲ್ಲಿ ಇಟ್ಟಿರುವ ನಾಲ್ಕು ಹೊಸ ಮಡಕೆಗಳಿಗೆ ಸ್ವಲ್ಪ ಎರೆಯುತ್ತಾರೆ, ಕಾಯಿಸುತ್ತಾರ ಯಾವ ಮಡಕೆಯ ಹಾಲು ಬೇಗ ಕಾದು ಉಕ್ಕುವುದೋ, ಆ ದಿಕ್ಕಿನಲ್ಲಿ ಸಂಭಿಕ್ಷವೆಂದು ನಂಬುತ್ತಾರೆ. ಜಾನುವಾರುಗಳಲ್ಲಿ ಹಸು ಕರುಹಾಕಿದರೆ, ಕಾಯಿಲೆ ಕಸಾಲೆ ಆದರೆ ಜನ ಸೀತನ ಕೊಟ್ಟಕ್ಕೆ ಬರುತ್ತಾರೆ. ಅಲ್ಲಿಯ ನೀರು ಒಯ್ದು, ಕರು ಹಾಕಿದ ಹಸುವಿಗೆ, ಕರುವಿಗೆ ಸಿಂಪಡಿಸುತ್ತಾರೆ. ಜಡ್ಡಾದ ದನಕರುಗಳಿಗೆ ಆ ನೀರು ತಂದು ಕುಡಿಸುತ್ತಾರೆ (ನೂತನ, 10.09.2000; ಕಥಾರೂಪಕ್ಕೆ ನೋಡಿ: 'ಕಾವ್ಯ ಚಿತ್ರಗಳು', 1975, ಪು. 103-11).

ಹೊಸದುರ್ಗದ ಪಾಳೆಯಪಟ್ಟಿಗೆ ಸಂಬಂಧಪಟ್ಟ ಹಾಗೆ ಏಳು ಕಲ್ಲಿನ ಕೋಟೆಯ ಬಾಯಿಗಳ ಕಥೆ, ಅತಿದೊಡ್ಡದಾದ ಬಂಡೆಗಳ ಒಡ್ಡಿನ ಗಾಣದ ಕಲ್ಲು. ಪಾಂಡವರು ಮತ್ತು ಆನೆ ಕಟ್ಟಿದ ದೊಡ್ಡ ಎಳ್ಳುಗಾಣದ ರಾಮದೇವರ ದುರ್ಗದ ಐತಿಹ್ಯ, ವಿಶೇಷವಾದ ಜೇನುಕಲ್ಲು ಕಳ್ಳನ ಕಂಡಿಗಳು ಇವೆಲ್ಲ ಈ ಪ್ರಾಂತದ ಜಾನಪದ ಸೃಷ್ಟಿಗಳೇ ಆಗಿವೆ.

ಆರ್. ನರಸಿಂಹಾಚಾರ್ಯರು ನೆಲಮಂಗಲ ತಾಲ್ಲೂಕು ಶೋಧಕಗಳ ಬಗ್ಗೆ ಬರೆಯುವಾಗ ತಾವೂ ಒಂದು ಐತಿಹ್ಯ ದಾಖಲಿಸುತ್ತಾರೆ (ಮೈಆರಿ. 1915, ಪು, 9). ಮಾಕಳಿ ಭೀಮೇಶ್ವರ ದೇವಾಲಯದ ದೇವರು ಭೀಮಸೇನನಿಂದ ಸ್ಥಾಪಿತವಾಯಿತು, ಅರ್ಕಾವತೀ ನದಿಯ ದಂಡೆಯ ಬಂಡೆಯೊಂದರ ಮೇಲೆ ಆತನ ಎಡಹೆಜ್ಜೆಗೂ ಕಾನಕಾನ ಹಳ್ಳಿಯ ಎಲ್ಲೋ ಒಂದು ಕಡೆ ಆತನ ಬಲಹೆಜ್ಜೆಯೂ ಉಂಟು ಎಂಬುದೇ ಆ ಐತಿಹ್ಯ.

ಹಿರೇಮಡಿವಾಳದ ಶಿವನಾಂಕಾರ ಸ್ವಾಮಿಯ ಸಂಬಂಧವಾದ ಐತಿಹ್ಯ ಕೂಡ ಕುತೂಹಲಕರವಾದುದು. ಸ್ವಾಮಿ ಕೋಪಕ್ಕೆ ಗುರಿಯಾಗಿ ಸುತ್ತಲೂ ಇದ್ದ 14 ಹಳ್ಳಿಗಳು ನಾಶವಾದ ವಿಚಾರಕ್ಕೆ ಇದು ಸಂಬಂಧಿಸಿದ್ದು. ಸ್ಥಳದ ಸುತ್ತಮುತ್ತ ಕಂಡಬರುವ ಪ್ರಾಚೀನ ಅವಶೇಷಗಳಿಗೆ ಪ್ರಾಕೃತಿವೈಪರೀತ್ಯ ಅಥವಾ ಮಾನವ ಹಸ್ತಕ್ಷೇಪ ಇಂಥ ಕಾರಣಗಳಿರಬಹುದಾದುದು ಒಂದು ತೆರನಾದರೆ, ಜಾನಪದರು ನಿರೂಪಿಸುವ ಐತಿಹ್ಯ ಇನ್ನೊಂದು ತೆರನಾದುದು.

ಬಹಳ ಹಿಂದೆ ಶಿವನಾಂಕಾರ ಕೊಂಡ, ಬಂಡಿ ಜೋರಾಗಿ ನಡೆಯುತ್ತಿತ್ತು. ತಮ್ಮಡಿಗಳು ಕೊಂಡ ಹಾಯಲು ಸಾಧ್ಯವಾಗದಿದ್ದಾಗ, ಬೆಟ್ಟದ ಮೇಲೆ ಗೆಣಸು ಆಗೆಯುತ್ತಿದ್ದು ಇರುಳಿಗರ ಕಾಡ ಶಿವನಯ್ಯ ಬಂದು ಕೊಂಡ ಹಾಯುತ್ತಾನೆ. ಕೀಳು ಜಾತಿಯವನೊಬ್ಬ ಕೊಂಡ ಹಾಯ್ದುದಕ್ಕೆ ಅಸಮಾಧಾನಗೊಂಡ ತಮ್ಮಡಿಗಳು ಕೊಂಡ ಮಾಡುವುದನ್ನೇ ನಿಲ್ಲಿಸುತ್ತಾರೆ. ಇದರಿಂದ ಕೋಪಗೊಂಡ ಶಿವನಾಂಕಾರಸ್ವಾಮಿ ಸುತ್ತಲ 14 ಹಳ್ಳಿಗಳು (ಮಾವಳ್ಳಿ, ತಟ್ಟಗೋಡು, ಬಿಕ್ಕಳ್ಳಿ, ಊರತಟ್ಟಗೋಡು. ಎಡತಟ್ಟಗೋಡು, ಅಣ್ಣಳ್ಳಿ ಹೊಲ, ಬಿಕ್ಕಳ್ಳಿ, ಬೆಡ್ಲೆದಿಂಬ, ಎಳ್ಳೊಲ, ಚವರದೊಲ. ಭೂಮೇನ ಹಳ್ಳಿ, ಯಲಚಿಕುಂಟೆ, ಮಾರೆಕಂದಟಿ, ಅಜ್ಜಿಬೋರೆ) ನಾಶವಾಗಲಿ, ಮಡಿವಾಳದಲ್ಲಿ ಮೂರು ವರ್ಷಕ್ಕೆ ಒಮ್ಮೆ ಮಳೆ ಬೀಳಲಿ, ಮೂರು ವರ್ಷಕ್ಕೆ ಒಂದು ಬೆಳೆಯಾಗಲಿ ಎಂದು ಶಾಪಕೊಟ್ಟನು.[8]

ಮಡಿವಾಳದಿಂದ ಸು. ೧ ೧/೨ ಕಿ.ಮೀ. ದೂರದಲ್ಲಿರುವ ಶಿವನಾಂಕಾರ ಸ್ವಾಮಿಯ ದೇವಾಲಯ ಒಂದು ಕಾಲಕ್ಕೆ ಬಹು ದೊಡ್ಡ ದೇವಾಲಯವಾಗಿತ್ತು, ಈಗ ಅದರ ಅವಶೇಷಗಳು ಬಹುಸಂಖ್ಯೆಯಲ್ಲಿ ನದಿಯ ಉಸುಕಿನಲ್ಲಿ ಹುದುಗಿರುವಂತೆ ತೋರುವುದು. ಈಗ ಗರ್ಭಗುಡಿ ಸೇರಿದಂತೆ ಪ್ರಾಂಗಣ ಸು. 35 – 40 ಚದುರಗಳಷ್ಟು ಇದ್ದು, ಶಿವನಾಂಕಾರಸ್ವಾಮಿ, ವೀರಭದ್ರ ಮತ್ತು ಸೋಲಗಿತ್ತಿ ಇವರಿರುವ ಮೂರು ಕೋಣೆಗಳು ಉಳಿದಿವೆ.

ರಭಸವಾಗಿ ಹರಿಯುವ ಗಂಗೆ ಎಡಪಾರ್ಶ್ವದಲ್ಲಿ ಹರಿಯಲು ಎಡೆ ಸಿಕ್ಕರೆ, "ಸ್ವಾಮಿ. ನನಗೆ ಮುಂದೆ ಹರಿಯಲು ಜಾಗ ಕೊಡು" ಎಂದು ಶಿವನನ್ನು ಕೇಳುತ್ತಾಳಂತೆ. "ಎಲ್ಲಿ ಹೋಗುತ್ತೀಯೆ?" ಎಂದು ಶಿವ ಪ್ರಶ್ನಿಸಲು, "ತಮ್ಮಡಗೇರಿ (ಮಡಿವಾಳ) ಮೇಲೆ ಹೋಗುತ್ತೇನೆ. ಇಲ್ಲವೆ ನಿನ್ನ ಗುಡಿಗೋಪುರ

ಹೊತ್ತುಕೊಂಡು ಹೋಗುತ್ತೇನೆ" ಎಂದು ಗಂಗೆ ತಿಳಿಸಿದಳು. "ತಮ್ಮಡಗೇರಿಯ ಮೇಲೆ ಹೋದರೆ, ನನ್ನ ಶ್ರೀಮುಡಿಗೆ ಗಂಧ ನೀರು ಹಾಕುವವರು ಇರುವುದಿಲ್ಲ, ನನ್ನ ಗುಡಿಯನ್ನೇ ಎತ್ತಿಕೊಂಡು ಹೋಗು" ಎಂದು ಶಿವ ಉತ್ತರಿಸಿದ. ಗಂಗೆ 12 ಗಾಲಿಯ ಕಂಚಿನ ತೇರು ಸಹಿತ ದೇಗುಲವನ್ನು ರಭಸವಾಗಿ ಹೊಡೆದುಕೊಂಡು ಹೋದಳು. ಕುಪಿತನಾದ ಸ್ವಾಮಿ ಮತ್ತಿಮರದ ಉದ್ದ ಬಂದರೂ, ಮಧ್ಯಾಹ್ನದ ಹೊತ್ತಿಗೆ ಬತ್ತಿಹೋಗು" ಎಂದು ಶಾಪ ಕೊಟ್ಟನಂತೆ. ಅದರಂತೆ ಎಷ್ಟೇ ರಭಸವಾಗಿ ನೀರು ಬಂದರೂ ಕೆಲವೇ ಗಂಟೆಗಳಲ್ಲಿ ತಗ್ಗಿ ಹೋಗುವುದು ಎನ್ನುವ ನಂಬಿಕೆ ಉಂಟು (ಈ ಸಂಬಂಧವಾದ ಜನಪದಸಾಹಿತ್ಯವೂ ಉಂಟು). ಡಾ ಎಂ. ಬೈರೇಗೌಡ (ಸಾಧನೆ, 25–1.2, ಪು. 92 – 104)ರು ವಿವರವಾಗಿ ದಾಖಲಿಸಿದ್ದಾರೆ.

ಕಾನಕಾನಹಳ್ಳಿ – ರಾಮನಗರ ರಸ್ತೆಯಲ್ಲಿ ಸುಮಾರು 4 ಕಿ.ಮೀ. ದೂರದಲ್ಲಿ ಹೊಸಕೋಟೆ (ಕೋಣನ ರೆಡ್ಡು) ಎಂಬ ಹಳ್ಳಿಯ ಬುಡಕಟ್ಟು ಜನ ಇರುಳಿಗರಲ್ಲಿ ಪ್ರಚಲಿತವಿರುವ ನಂಬಿಕೆ, ಪೂಜೆ, ಆಚರಣೆ, ಸಾಹಿತ್ಯ, ಬಾಣಂತಿ ಮಾರಮ್ಮನಿಗೆ ಸಂಬಂಧಿಸಿದ್ದಾಗಿದೆ. ಸಮೀಪದ ದೇವರ ಬೆಟ್ಟ,ಕೂತಗೊಂಡನ ಹಳ್ಳಿ, ಬಿಸಿಲ ಹಳ್ಳಿ, ಮಂಚಯ್ಯನ ದೊಡ್ಡಿ ಮೊದಲಾದ ಹಳ್ಳಿಗಲ ಸಮುದಾಯವನ್ನು ಈ ದೇವತೆಯ ಐತಿಹ್ಯ ತಬ್ಬಿ ಹಬ್ಬಿಕೊಂಡಿದ್ದು, ಜಾನಪದ ಆಶಯಗಳ ದೃಷ್ಟಿಯಿಂದ ಅಧ್ಯಯನಕ್ಕೆ ಈ ಐತಿಹ್ಯವೂ ಅರ್ಹವಾಗಿದೆ.

ಇರುಳಿಗ ವಕ್ತಗಳು ಕೊಡುವ ವಿವರಣೆಗಳನ್ನು ಗಮನಿಸಿದರೆ, ಇದು ಆ ಸಮುದಾಯಕ್ಕೇ ವಿಶಿಷ್ಟವಾದುದೆನ್ನಬೇಕು. ಪ್ರಸಿದ್ಧವಾದ ಶೈವಕ್ಷೇತ್ರಗಳಾದ ಮುಡುಕುತೊರೆ ತಲಕಾಡುಗಳೂ ಕನಕಪುರದ ದೇಗುಲ ಮಠವೂ ಇವುಗಳ ಸಂಪರ್ಕವಲಯದಲ್ಲಿಯೇ ಇವೆ.

ಮುಡುಕುತೊರೆ ಮಲ್ಲರಾಯ ಮತ್ತು ತಲಕಾಡು ಪಂಚಲಿಂಗಯ್ಯ ಇವರನ್ನು ಅಣ್ಣ ತಮ್ಮಂದಿರೆಂದು ಕಲ್ಪಿಸಿರುವುದು ದೊಡ್ಡ ಕ್ಷೇತ್ರಗಳ ಪ್ರಾಧಾನ್ಯವನ್ನೂ ಆಕರ್ಷಣೆಯನ್ನೂ ಸಂಬಂಧವನ್ನೂ ಹೇಳತಕ್ಕ ಸಂಗತಿಯಾಗಿದೆ. ತಿರುಮಕೂಡಲು ನರಸೀಪುರ ತಾಲ್ಲೂಕು ಬೆಟ್ಟಹಳ್ಳಿಯ ಒತ್ತಿನ ಸೋಮಗಿರಿಯ ಮಲ್ಲಿಕಾರ್ಜುನನೇ ಇಲ್ಲಿ ಮಲ್ಲರಾಯ; ಈ ಮಲ್ಲಿಕಾರ್ಜುನಲಿಂಗ ತಲಕಾಡಿನ ಪಂಚಲಿಂಗಗಳಲ್ಲಿ ಒಂದಾಗಿದ್ದು, ಸಮೀಪದ ತಲಕಾಡು ಪಂಚಲಿಂಗಕ್ಷೇತ್ರದ ಪ್ರಸಿದ್ಧಿಗೆ ಅನುಗುಣವಾಗಿ ಪಂಚಲಿಂಗಯ್ಯ ಸೋದರನೆಂದು ಕಲ್ಪಿಸಲಾಗಿದೆ.

ಜೈನಧರ್ಮ

ಕರ್ನಾಟಕದ ಸಾಂಸ್ಕೃತಿಕ ಇತಿಹಾಸದಲ್ಲಿ ಜೈನಧರ್ಮ ಮಹತ್ತ್ವದ ಸ್ಥಾನವನ್ನು ಪಡೆದಿದೆ. ಈ ಧರ್ಮ ಉತ್ತರ ಭಾರತದಲ್ಲಿ ಉಗಮವಾದುದಾದರೂ' ಕರ್ನಾಟಕದಲ್ಲಿ ಪ್ರಚಾರಗೊಂಡಂದಿನಿಂದ

ಇಲ್ಲಿನ ಸಾಹಿತ್ಯ, ಕಲೆ, ಭಾಷೆ, ವಿದ್ಯಾಪ್ರಸಾರ ಮತ್ತು ಸಾಮಾನ್ಯ ಜನರ ಜೀವನ ವಿಧಾನ ಹಾಗೂ ನೈತಿಕ ಮೌಲ್ಯಗಳನ್ನು ರೂಪಿಸುವುದರಲ್ಲಿ ಪ್ರಮುಖ ಪಾತ್ರವಹಿಸಿದೆ. ಈ ಸಂದರ್ಭದಲ್ಲಿ ಶ್ರವಣಬೆಳಗೊಳ, ಕಾರ್ಕಳ, ಮೂಡಬಿದರೆ, ಹುಂಚ, ಲಕ್ಷ್ಮೇಶ್ವರ ಮೊದಲಾದೆಡೆಗಳ ಜೈನ ವಾಸ್ತು – ಶಿಲ್ಪ ಕೃತಿಗಳನ್ನೂ ಕನ್ನಡ ಸಾಹಿತ್ಯದಲ್ಲಿ ಜೈನಯುಗವೆಂದೇ ಹೆಸರಾಗಿರುವ 10–12ನೆಯ ಶತಮಾನಗಳ ಅವಧಿಯಲ್ಲಿ ಹುಟ್ಟಿದ ಉದ್ಧ, ಸಾಹಿತ್ಯವನ್ನೂ ನೆನೆಯಬಹುದು. ಜೈನಧರ್ಮದ ಕೊಡುಗೆಗಳಿಂದ ಕರ್ನಾಟಕ ಸಂಸ್ಕೃತಿ ಸಂಪದ್ಭರಿತವಾದಂತೆ.[9] ಜೈನಧರ್ಮಕ್ಕೆ ಕರ್ನಾಟಕದ ಕಾಣಿಕೆ ಅಲ್ಪವಾದುದೇನಲ್ಲ. ತೀರ್ಥಂಕರರೆಲ್ಲ ಉತ್ತರ ಭಾರತದಲ್ಲೆ ಜನಿಸಿ ಧರ್ಮಪ್ರಚಾರ ಮಾಡಿದವರಾದರೂ ಮುಂದೆ ಜೈನಧರ್ಮಕ್ಕೆ ಸಂಬಂಧಿಸಿದ ಶಾಸ್ತ್ರಗ್ರಂಥಗಳನ್ನು ರಚಿಸಿ ಆಚಾರವಿಚಾರಗಳನ್ನು ಪ್ರಚಾರಗೊಳಿಸಿದ ಆಚಾರ್ಯರುಗಳಲ್ಲಿ ಹೆಚ್ಚಿನವರು ಕರ್ನಾಟಕದವರೇ ಆಗಿದ್ದಾರೆ. ಕುಂದಕುಂದಾಚಾರ್ಯ (ಕೊಂಡಕುಂದಾಚಾರ್ಯ), ಸಮಂತಭದ್ರ, ಪೂಜ್ಯಪಾದ, ಅಕಲಂಕ, ವೀರಸೇನ, ಜಿನಸೇನ ಮೊದಲಾದ ಈ ನಾಡಿನ ಆಚಾರ್ಯರು ಜೈನ ಧರ್ಮದ ಇತಿಹಾಸದಲ್ಲಿ ಗೌರವಾನ್ವಿತ ಸ್ಥಾನವನ್ನು ಗಳಿಸಿದವರಾಗಿದ್ದಾರೆ.

ಜೈನಧರ್ಮದ ಕುರುಹುಗಳು

ಶ್ರವಣನ ಒಡ್ಡು

ಸಾತನೂರು ಹೋಬಳಿಯ ಹರಿಹರ ಗ್ರಾಮದಲ್ಲಿನ ಶ್ರವಣನ ಒಡ್ಡು ಎಂಬ ಸ್ಥಳದಲ್ಲಿ ಎರಡೂವರೆ ಅಡಿ ಎತ್ತರದ ಜಿನತೀರ್ಥಂಕರನ ಪ್ರತಿಮೆಯೊಂದು ಇದ್ದು ಇದನ್ನು ಸ್ಥಳೀಯ ಗ್ರಾನೈಟ್ ಕಲ್ಲಿನಿಂದ ಕೆತ್ತಲಾಗಿದೆ. ತೀರ್ಥಂಕರನು ಧ್ಯಾನಾಸಕ್ತನಾಗಿ ಪೀಠವೊಂದರ ಮೇಲೆ ಕುಳಿತಿದ್ದಾನೆ. ಲಾಂಛನ ಇರುವ ಭಾಗ ಸವೆದು ಹೋಗಿದ್ದು ತೀರ್ಥಂಕರನನ್ನು ಖಚಿತವಾಗಿ ಗುರುತಿಸಲು ಕಷ್ಟವಾದರೂ ಸಹ, ಆದಿ ತೀರ್ಥಂಕರನ ಮೂರ್ತಿ ಇದಾಗಿತ್ತೆಂದು ಊಹಿಸಬಹುದಾಗಿದೆ. ಈ ಮೂರ್ತಿ ಇರುವ ಬಂಡೆಗೆ ಹೊಂದಿಕೊಂಡಂತೆ ಇಳಿಜಾರಿನಲ್ಲಿ ಮೂರು ಅಡಿ ಅಗಲ ಎರಡೂವರೆ ಅಡಿ ಉದ್ದದ ಪೀಠವೊಂದು ಪತ್ತೆಯಾಗಿದ್ದು ಇದನ್ನು ಸಹ ಗ್ರಾನೈಟ್ ಕಲ್ಲಿನಿಂದ ಕೆತ್ತಲಾಗಿದೆ. ಪೀಠದ ಮುಂಭಾಗದಲ್ಲಿ 9 × 9 ಅಂಗುಲದ ಚೌಕಾಕಾರದ ಕುಳಿ ಇದ್ದು ಧ್ಯಾನಾಸಕ್ತನಾಗಿ ಕುಳಿತಿರುವ ಜಿನ ತೀರ್ಥಂಕರನ ಪ್ರತಿಮೆಯನ್ನು ಇದರಲ್ಲಿ ಇಟ್ಟಿದ್ದರೆಂದು ತಿಳಿಯಬಹುದಾಗಿದೆ. ಪ್ರಾಚೀನತೆಯ ದೃಷ್ಟಿಯಿಂದ ಈ ಮೂರ್ತಿಯು ಕ್ರಿ.ಶ. ಹತ್ತನೆಯ ಶತಮಾನಕ್ಕೆ ಸೇರಿದುದಾಗಿದ್ದು. ಆ ಸಮಯದಲ್ಲಿ ಜೈನರು ಈ ಗ್ರಾಮದಲ್ಲಿ ಮತ್ತು ಪರಿಸರದಲ್ಲೆಲ್ಲಾ ವಾಸಿಸುತ್ತಿದ್ದರೆಂದು ನಿರ್ಧರಿಸಬಹುದಾಗಿದೆ.[10]

ಬೋಳರೆ

ಇದೇ ಹೋಬಳಿಯ ವೀರೆಗೌಡನದೊಡ್ಡಿ ಎಂಬಲ್ಲಿನ 'ಬೋಳರೆ' ಎಂಬ ಸ್ಥಳದಲ್ಲಿ ಮತ್ತೊಂದು ಜಿನ ತೀರ್ಥಂಕರನ ಮೂರ್ತಿ ಕಂಡುಬಂದಿದ್ದು ಮೂರ್ತಿಯ ಬಹುಭಾಗ ನೆಲದಲ್ಲಿ ಹುದುಗಿಹೋಗಿದೆ. ನೆಲದಿಂದ ಮೇಲೆ ಎರಡು ಅಡಿ ಎತ್ತರ ಕಂಡುಬರುವ ಮೂರ್ತಿಯ ರುಂಡಭಾಗವನ್ನು ಕಡಿದುಹಾಕಲಾಗಿದೆ. ಈ ರುಂಡವನ್ನು ಬಳಿಯಲ್ಲಿರುವ ಲಿಂಗದ ಕೆರೆ ಎಂಬಲ್ಲಿ ಇಟ್ಟು ಪೂಜಿಸಲಾಗುತ್ತಿದೆ. ಲಾಂಛನವಿರುವ ಪೀಠದ ಭಾಗ ಮರೆಯಾಗಿರುವುದರಿಂದ ಇಲ್ಲಿಯೂ ಸಹ ತೀರ್ಥಂಕರನ ಗುರುತು ಪತ್ತೆ ಹಚ್ಚುವುದು ಕಷ್ಟವಾಗಿದೆ. ಧ್ಯಾನಾಸಕ್ತ ಮುದ್ರೆಯಲ್ಲಿ ಕುಳಿತಿರುವ ಈ ತೀರ್ಥಂಕರನ ಮೂರ್ತಿಯು ಎಪ್ಪತ್ತು ಅಡಿ ಅಗಲ ಇಪ್ಪತ್ತು ಅಡಿ ಉದ್ದದ ವಿಸ್ತಾರವಾದ ಮತ್ತು ಎತ್ತರವಾದ ವೇದಿಕೆಯ ಮೇಲೆ ಮೂವತ್ತೆರಡು ಕಲ್ಲುಕಂಬಗಳಿಂದ ರಚಿಸಲ್ಪಟ್ಟ ಕಲ್ಲು ಮಂಟಪದ ಒಳಗೆ ಒಂದು ಪಾರ್ಶ್ವದಲ್ಲಿ ಇದೆ. ಮೂರು ಪಾರ್ಶ್ವಗಳಲ್ಲಿ ರಚಿಸಿದ ಮಂಟಪದಲ್ಲಿ ಬೇರೆ ಮೂರ್ತಿಗಳು ಸಹ ಇದ್ದವೆಂದು ಕಂಡುಬರುತ್ತವೆ. ಪ್ರಸ್ತುತ ಒಂಭತ್ತು ಕಂಬಗಳ ಆಸರೆಯಾಗುಳ್ಳ ಭಾಗದ ಮಂಟಪ ಮಾತ್ರ ಸುಸ್ಥಿತಿಯಲ್ಲಿದೆ. ಇನ್ನುಳಿದವು ಅಲ್ಲೇ ಚದುರಿ ಬಿದ್ದಿವೆ. ಇಲ್ಲಿಯೇ ಜನ ವಾಸಸ್ಥಾನದ. ಇಟ್ಟಿಗೆ ಮಡಕೆ ಚೂರುಗಳೆಲ್ಲಾ ಬಿದ್ದಿದ್ದು ಸುತ್ತಮುತ್ತಲಿನ ಜೈನರಿಗೆಲ್ಲಾ ಇದೊಂದು ಪ್ರಮುಖ ಜೈನ ಕೇಂದ್ರವಾಗಿತ್ತೆಂದು ನಿರ್ಧರಿಸಬಹುದು. ಪ್ರಾಚೀನತೆಯ ದೃಷ್ಟಿಯಿಂದ ಈ ಕೇಂದ್ರವು ಕ್ರಿ.ಶ. ಹತ್ತನೆಯ ಶತಮಾನದಲ್ಲಿಯೇ ಪ್ರಸಿದ್ಧವಾಗಿತ್ತೆಂದು ನಿರ್ಧರಿಸಬಹುದು."

ಹರಿಹರ ಗ್ರಾಮದ ಶ್ರವಣನ ಒಡ್ಡುವಿನ ಜಿನ ತೀರ್ಥಂಕರ

ಹುಣಸನ ಹಳ್ಳಿ ತಾಲ್ಲೂಕಿನ ತಮಿಳುನಾಡಿನ ಮೇರೆಗೆ ಹೊಂದಿಕೊಂಡಿರುವ ಹುಣಸಹಳ್ಳಿ ಬಳಿಯ ಬೆಟ್ಟವೊಂದರ ಮೇಲೆ ಜೈನ ಸನ್ಯಾಸಿಯ ಸಮಾಧಿಯೊಂದು ಕಂಡು ಬಂದಿದೆ. ದಿಗಂಬರ ಸ್ವಾಮಿಯದು ಎಂದು ಜನತೆಯಿಂದ ಗುರುತಿಸಲ್ಪಡುವ ಈ ಸಮಾಧಿಯ ಮೂವತ್ತು ಅಡಿ ಎತ್ತರದ ಕಲ್ಲಾಸರೆಯ ಮೇಲೆ ಇದೆ. ಸ್ಥಳೀಯ ಜನತೆ ಇಂದಿಗೂ ಸಹ ಪೂಜ್ಯ ಭಾವನೆಯಿಂದ ಇದನ್ನು ಆರಾಧಿಸುತ್ತಾರೆ. ಈ ಕಲ್ಲಾಸರೆಯಲ್ಲಿಯೇ ದಿಗಂಬರ ಸ್ವಾಮಿಯಾದ ಜೈನ ಸನ್ಯಾಸಿಯ ವಾಸವಾಗಿದ್ದನೆಂದು, ಆತ ವಿಶ್ರಮಿಸಿಕೊಳ್ಳಲು ಕಲ್ಲಾಸರೆಯ ಛಾವಣಿಗೆ ಕಬ್ಬಿಣದ ಕೊಕ್ಕೆಯನ್ನು ಬಿಗಿದು ಕಟ್ಟಿದ್ದ ಉಯ್ಯಾಲೆಯ ಗುರುತುಗಳನ್ನು ಸ್ಥಳೀಯರು ಗುರುತಿಸುತ್ತಾರೆ. ಕ್ರಿ.ಶ. ಹದಿನೆಂಟನೆಯ ಶತಮಾನಕ್ಕೂ ಮೊದಲೇ ಇಲ್ಲಿ ವಾಸವಾಗಿದ್ದು ತನ್ನ ಅಂತ್ಯಜೀವನವನ್ನು ಇಲ್ಲಿಯೆ ಕಳೆದಿದ್ದಾನೆ, ಆದುದರಿಂದ ಈತನು ಓರ್ವ ಜನಪ್ರಿಯ ವ್ಯಕ್ತಿ ಆಗಿದ್ದನೆಂದು ನಿರ್ಧರಿಸಬಹುದು.

ಈಗ ದೊರೆತಿರುವ ಈ ಅವಶೇಷಗಳ ಜೊತೆಗೆ ಮತ್ತಷ್ಟು ಪ್ರಾಚ್ಯಾವಶೇಷಗಳು ಪತ್ತೆಯಾದರೆ ಈ ತಾಲ್ಲೂಕಿನ ಜೈನಧರ್ಮದ ಅಧ್ಯಯನಕ್ಕೆ ಸಹಕಾರಿಯಾದಂತಾಗುತ್ತದೆ.

ವೀರಶೈವಧರ್ಮ

ಶೈವಧರ್ಮದ ವಿವಿಧ ಶಾಖೆಗಳಲ್ಲಿ ಒಂದಾದ ವೀರಶೈವಧರ್ಮ ಬಹುಮಟ್ಟಿಗೆ ಕರ್ನಾಟಕದಲ್ಲಿ ರೂಪಗೊಂಡು ಅನಂತರ ನೆರೆಹೊರೆಯ ಪ್ರಾಂತ್ಯಗಳಾದ ಆಂಧ್ರ, ಮಹಾರಾಷ್ಟ್ರ ಮತ್ತು ತಮಿಳುನಾಡಿನ ಗಡಿ ಪ್ರಾಂತ್ಯಗಳನ್ನು ವ್ಯಾಪಿಸಿತು. ಅನೇಕ ವಿಚಾರಗಳಲ್ಲಿ ವೈದಿಕ ಧರ್ಮದಿಂದ ಭಿನ್ನವಾದ ವೀರಶೈವಧರ್ಮ ಕರ್ನಾಟಕದ ಜನಜೀವನ, ಅವರ ಸಂಸ್ಕೃತಿ ಮತ್ತು ಸಾಹಿತ್ಯ ಇವುಗಳ ಮೇಲೆ ಆಳವಾದ ಪ್ರಭಾವವನ್ನು ಬೀರಿದೆ.

ಉಳಿದ ಶೈವಧರ್ಮಗಳಂತೆ ವೀರಶೈವ ಶಿವಾಗಮಗಳ ತಳಹದಿಯ ಮೇಲೆ ರೂಪಿತವಾದ ಒಂದು ಧರ್ಮ, ಸೂಕ್ಷ್ಮಾಗಮ, ಸುಪ್ರಭೇದ, ಸ್ವಾಯಂಭುವ, ಕಾರ್ಮಿಕ, ವಾತುಲ ಮೊದಲಾದ ಆಗಮಗಳಲ್ಲಿ ವೀರಶೈವ ಧರ್ಮದ ಮೂಲತತ್ವಗಳು ಕಾಣಲು ಸಿಕ್ಕುತ್ತವೆ. ಇವೇ ಅಲ್ಲದೆ ಶಿವಯೋಗಿ ಶಿವಾಚಾರ್ಯರ ಸಿದ್ಧಾಂತ ಶಿಖಾಮಣಿ, ಶ್ರೀಪತಿ ಪಂಡಿತರ ಶ್ರೀಕರಭಾಷ್ಯ, ಸ್ವಭಾನಂದ ಶಿವಾಚಾರ್ಯವಿರಚಿತ ಶಿವಾದ್ವೈತಮಂಜರಿ ಮುಂತಾದ ಸಂಸ್ಕೃತ ಗ್ರಂಥಗಳಲ್ಲಿ ವೀರಶೈವ ವಚನಕಾರರಿಗಿಂತಲೂ ಮೊದಲೇ ಈ ಧರ್ಮ ಪ್ರತಿಪಾದಿತವಾಗಿದ್ದಿತೆಂದು ಹೇಳಿದೆ. ಹನ್ನೆರಡನೆಯ ಶತಮಾನದಲ್ಲಿ ಬಂದ ಬಸವಾದಿ ಪ್ರಮುಖ ವಚನ ಸಾಹಿತ್ಯವನ್ನು ಆಧರಿಸಿ ಸಂಪಾದಿತವಾದ ಹಾಗೂ ರೂಪತಳೆದ ಶೂನ್ಯ ಸಂಪಾದನೆ ಲಿಂಗಲೀಲಾವಿಲಾಸ, ಶಿವತತ್ತ್ವ ಚಿಂತಾಮಣಿ, ವೀರಶೈವಾಮೃತಮಹಾಪುರಾಣ ಮುಂತಾದ ಕನ್ನಡ ಗ್ರಂಥಗಳು ವೀರಶೈವಧರ್ಮವನ್ನು ವ್ಯವಸ್ಥಿತ ರೀತಿಯಲ್ಲಿ ವಿವರಿಸಲು ಶಕ್ತವಾಗಿವೆ.

ವೀರಶೈವಧರ್ಮ ಶಾಸ್ತ್ರಧಾರಗಳನ್ನು ಗೌರವಿಸುವುದಾದರೂ ಇದಕ್ಕೆ ಯಾವುದೇ ಒಂದು ನಿರ್ದಿಷ್ಟವಾದ ಪ್ರಸ್ಥಾನ ಗ್ರಂಥ ಆಧಾರವಲ್ಲ. ಶಬ್ದ ಪ್ರಮಾಣದ ಹೆಸರಿನಲ್ಲಿ ವಿಚಾರ ಮತ್ತು ಅನುಭವಾತ್ಮಕವಾಗಿ ಸದಾ ವಿನೂತನಗೊಂಡು ಬರುತ್ತಿರುತ್ತವೆ. ಅನುಭವಮಾನ್ಯವಲ್ಲದ ಆದರಣೆ ಅದಕ್ಕೆ ಎಷ್ಟೇ ಶಾಸ್ತ್ರ ಆಧಾರವಿದ್ದರೂ ಅದನ್ನು ಗೌರವಿಸಲು ವೀರಶೈವ ಧರ್ಮ ಸಿದ್ಧವಿಲ್ಲ. ಲೌಕಿಕ ಪ್ರಜ್ಞೆ ಅನುಭವದಿಂದ ದೊರೆಯುವುದಾದರೆ, ಅಲೌಕಿಕ ಅಥವಾ ದೈವಿಕ ಪ್ರಜ್ಞೆ ಅನುಭಾವದಿಂದ ಲಭಿಸುವಂಥದು.

ವೀರಶೈವದರ್ಶನವನ್ನು ಶಕ್ತಿವಿಶಿಷ್ಟಾದ್ವೈತ ಸಿದ್ಧಾಂತ ಎಂದು ಕರೆಯಲಾಗಿದೆ. ಈ ಧರ್ಮದ ಪ್ರಕಾರ ಶಕ್ತಿಯುತನಾದ ಶಿವನೊಬ್ಬನೇ ಸತ್ಯ. ವಿಶ್ವದ ಸಕಲ ಪದಾರ್ಥಗಳು ಅವನ ಶಕ್ತಿಯ ವಿಕಾಸದಿಂದ ಸಾಧ್ಯಗೊಂಡಿವೆ. ವಿಶ್ವದ ವಿಕಾಸ ಪರಶಿವನ ಒಂದು ಲೀಲೆ. ಲೀಲೆಯದೊಡೆ ಉಮಾಪತಿ. ಲೀಲೆ ತಪ್ಪಿದೊಡೆ ಸ್ವಯಂಭು, ಶಿವನ ಲೀಲೆಯಿಂದ ಈ ವಿಶ್ವ ಅಂದಮೇಲೆ ಅವನ ಲೀಲೆಗೆ ಬೇರೆ ಕಾರಣ

ಬೇಕಿಲ್ಲ. ವೀರಶೈವ ಸಿದ್ಧಾಂತದ ಪರಶಿವ ಶಂಕರಾಚಾರ್ಯರ ಬ್ರಹ್ಮನಂತೆ ನಿರ್ಗುಣನಲ್ಲ. ಶಕ್ತಿಯುಕ್ತನಾದ ಶಿವ ಸದಾ ಸಗುಣನೇ ಆಗಿದ್ದು, ಲೀಲೆಗಾಗಿ ಬೇಕೆಂದಾಗ ತನ್ನ ಶಕ್ತಿಯನ್ನು ವಿಕಾಸಗೊಳಿಸಬಹುದು ಇಲ್ಲವೆ ಸಂಕೀರ್ಣಗೊಳಿಸಿ ಅಚಲನಾಗಿ ನಿರಂಜನನಾಗಿರಬಹುದು. ಶಿವನಿಗೆ ಅವನ ನೆನಪೇ ಶಕ್ತಿ. ಅವನ ಈ ಶಕ್ತಿ ಅದ್ವೈತದಲ್ಲಿ ಕಾಣುವ ಮಾಯೆಯಂತೆ ಅನಿತ್ಯವಾದದ್ದಲ್ಲ.

ಶಿವನ ಹೊರತು ಅನ್ಯಸತ್ಯವಿಲ್ಲ ಎಂದಾದ ಮೇಲೆ ವೀರಶೈವ ಧರ್ಮದ ಪ್ರಕಾರ ಶಿವನೇ ಜೀವನಾಗುತ್ತಾನೆ. ಲಿಂಗ ಎಂಬುದು ಶಿವನಿಗೂ ಅಂಗ ಎಂಬುದು ಜೀವನಿಗೂ ಈ ಧರ್ಮದಲ್ಲಿ ಬಳಸಿರುವ ಪರ್ಯಾಯ ಪದಗಳು. ಶಿವನ ಶಕ್ತಿಯ ವಿಕಾಸದಿಂದ ಈ ಜಗತ್ತೆಲ್ಲವೂ ಶಿವಮಯವಾದದ್ದು. ಆದ್ದರಿಂದ ಇದರಲ್ಲಿ ಯಾವುದೂ ಮಾಯೆಯಲ್ಲ. ಶಿವನ ಲೀಲಾ ಪ್ರಪಂಚದಲ್ಲಿ ಜೀವ ಕ್ರಿಯಾಶೀಲನಾಗಿ ಆಸ್ಥೆಯಿಂದ ಭಾಗಿಯಾಗಬೇಕು. ಶಕ್ತಿಯ ಉತ್ಕರ್ಷದಲ್ಲಿ ಶಿವ ತನ್ನನ್ನು ಮರೆತು ಮಾನವನಾಗಿದ್ದಾನೆ. ಆದ್ದರಿಂದ ಪುನಃ ತನ್ನನ್ನು ಅರಿತು ಶರಣನಾಗಬೇಕು. ಆದ್ದರಿಂದ ವಿಶ್ವದ ಆಗುಹೋಗುಗಳಿಂದ ದೂರವಿದ್ದು, ಸನ್ಯಾಸದ ಹೆಸರಿನಲ್ಲಿ ದೈನಂದಿನ ಸಾಮಾಜಿಕ ಹೊಣೆಗಾರಿಕೆಗಳನ್ನು ನಿರ್ಲಕ್ಷಿಸುವುದು ಇವರಿಗೆ ಸರಿಕಾಣಿಲ್ಲ. ಅದಕ್ಕೆ ಬದಲಾಗಿ ಶಕ್ತಿಯಿಂದ ರೂಪಿತಗೊಂಡ ಈ ವಿಶ್ವದ ಕ್ರಿಯಾವಿಧಾನವನ್ನರಿತು ಕೊನೆಗೆ ಅದನ್ನು ಜಯಿಸಿ ನಿಲ್ಲಬೇಕೆಂಬುದೇ ವೀರಶೈವ ಧರ್ಮದ ಮೂಲಧ್ಯೇಯ. ತನ್ನ ಶಕ್ತಿಗೆ ಅಧೀನನಾಗಿ ತಾನೇ ಜೀವನಾಗಿರುವ ಶಿವನು ತನ್ನ ಶಕ್ತಿಯನ್ನು ಜಯಿಸಿ ತನ್ನ ವಿಭುತ್ವವನ್ನು ತಾನರಿಯುವನು.[12]

ದೇಗುಲ ಮಠ

ದೇಗುಲ ಮಠ ಬೆಂಗಳೂರಿಗೆ ಮೂವತ್ತೈದು ಮೈಲಿಗಳ ಮೈಸೂರಿಗೆ ಉತ್ತರ ಅರವತ್ತು ಮೈಲಿಗಳ ಅಂತರದಲ್ಲಿ ಕನಕಪುರದಲ್ಲಿದೆ. ಕನಕಪುರ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ತಾಲ್ಲೂಕು ಕೇಂದ್ರವಾಗಿದೆ. ಹದಿಮೂರನೆಯ ಶತಮಾನದಿಂದ ಹದಿನೇಳನೆಯ ಶತಮಾನದವರೆಗೆ 'ಕಾಣಿಕಾರನಹಳ್ಳಿ' ಎಂದೂ ಹದಿನೆಂಟರಿಂದ ಇಪ್ಪತ್ತನೆಯ ಶತಮಾನದ ಪೂರ್ವಾರ್ಧದವರೆಗೆ 'ಕಾನ್‌ಕಾನ್‌ಹಳ್ಳಿ'ಯೆಂದೂ, ಭಾರತಕ್ಕೆ ಸ್ವಾತಂತ್ರ್ಯ ಬಂದ ಮೇಲೆ ಕನಕಪುರವೆಂದೂ ಈ ಗ್ರಾಮಕ್ಕೆ ಹೆಸರಾಯಿತು. ಪಾಳೇಗಾರರ ಕಾಲದಲ್ಲಿ ಕಟ್ಟಿಸಿದ ಕೋಟೆಯು ಶಿಥಿಲವಾಗಿ ಅಲ್ಲಲ್ಲೇ ಅದರ ಅವಶೇಷಗಳಿವೆ. ಕೋಟೆಯ ಉತ್ತರ ಭಾಗದಲ್ಲಿ ಪೇಟೆ ಇದೆ. ಕೋಟೆಯಲ್ಲಿ ರಂಗನಾಥಸ್ವಾಮಿ ದೇವಸ್ಥಾನವಿದೆ. ಕೋಟೆಗೂ ಪೇಟೆಗೂ ಮಧ್ಯೆ ರಾಮದೇವರ ದೇವಾಲಯ, ಆಂಜನೇಯ ಗುಡಿ ಮತ್ತು ಸರ್ಕಾರಿ ಕಾರ್ಯಾಲಯಗಳ ಕಟ್ಟಡಗಳಿವೆ. ಕೋಟೆಗೆ ಅರ್ಧ ಮೈಲಿ ಪೇಟೆಗೆ ಎರಡು ಫರ್ಲಾಂಗ್ ಪೂರ್ವಕ್ಕೆ ದೇಗುಲ ಮಠವಿದೆ.

ಶ್ರೀ ಮಠದ ಶಿಲಾಶಾಸನ

ದಿವಂಗತ ಬಿ.ಎಲ್. ರೈಸ್ ರವರಿಂದ ಈಗ್ಗೆ ಸುಮಾರು ಎಪ್ಪತ್ತು ವರ್ಷಗಳ ಹಿಂದೆ ದೇಗುಲ ಮಠದ ಶಿಲಾಶಾಸನ ಎಂದು ಶಾಸನಗಳ ಸಂಪುಟ 9 ರಲ್ಲಿ ಕಾನ್‌ಕಾನ್‌ಹಳ್ಳಿ ದೇಗ(ಗು)ಲ ಶಾಸನ ಎಂದು ನಂಬರು 91 ಆಗಿ ಪ್ರಕಟಿಸಿರುವ ಶಾಸನದ ವಾಚಕವನ್ನು ಈ ಕೆಳಗೆ ಕೊಟ್ಟಿದೆ. ಕಾಲ ಕ್ರಿ.ಶ. 1667 ಮೈಸೂರು ಅರಸ ದೇವರಾಜ ಒಡೆಯರ ಆಳ್ವಿಕೆ.

ಕಾನ್‌ಕಾನ್‌ಹಳ್ಳಿಯ ದೇಗುಲ ಮಠದ ಕಲ್ಲು 91

1. ಶ್ರೀ ಶ್ರೀ ವಿಜಯ ಜಯಸ್ತು ಸ್ವಸ್ತಿ ಶಾಲಿವಾ
2. ಹನ ತತ್ಪೂರ್ವಸಂವತ್ಸರ 1608ನೇ ಪ್ಲವಂಗ ಸಂವತ್ಸರ.
3. ಜೇಷ್ಠ ಶು 15 ಯಲ್ಲು ಶ್ರೀಮದ್ರಾಜಾಧಿರಾಜ ಪ್ರ
4. ವುಡ ಪ್ರತಾಪ ಶ್ರೀ ವೀರ ಮೈಸೂರ ಸಿದ್ಧ ವಡೆಯರಾದ ದೇವ
5. ದೇವರಾಜವಡೆಯರು ಆಳುತ್ತಿರಲು ವಿರುಪಸಂದ್ರದ
6. ಗ್ರಾಮದಲ್ಲು ದಳವಾಯಿ ಕುಮಾರಯ್ಯನ ತಾ
7. ಯಿ ತಿಮ್ಮನವರು ಸ್ವಾಸ್ತಿಯನ್ನು
8. ಸ್ಥಿರವಾಗಿ ಆಗುಮಾಡಿ ಮಠವನ್ನು ಸಾಂಗವಾಗಿ
9. ನಡಸುತ್ತಾ ಅನುಭವಿಸುತ್ತಾ ಬರುವುದು.

ಇದರ ಆಂಗ್ಲಭಾಷೆಯ ಭಾಷಾಂತರ? 1667 A.D. May it be vitorious. Be it well, on the date (Specified) when the Rajadhiraja praudha pratapa the vira Maisura Siddha vadeyar Devaraja vadeyar was ruling in the Virupasandra Village, Dalavayi Komaraiya's mother Thimmamma made a grant for the matha.

ಈ ಕಂಬದ ಶಾಸನದಲ್ಲಿ ಒಟ್ಟು ಮೂವತ್ತೊಂಬತ್ತು ಪಂಕ್ತಿಗಳಿವೆ ಬೇರೆ ಬೇರೆ ಕಾಲದಲ್ಲಿ ಬರೆದ ಎರಡು ಶಾಸನಗಳಿವೆ. ರೈಸ್ ಸಾಹೇಬರು ಓದಿರುವುದು ಒಂಭತ್ತು ಪಂಕ್ತಿಗಳು ಮಾತ್ರ. ಈವೂರಿನಲ್ಲಿರುವುದು ಇದೊಂದೇ ಶಿಲಾಶಾಸನ.

ಶಾಸನದ ಪೂರ್ಣಪಾಠ

ಕನಕಪುರ ತಾಲ್ಲೂಕು ಕಸಬಾ ಗ್ರಾಮದ ದೇಗುಲ ಮಠದ ಈಶಾನ್ಯ ಮೂಲೆಯಲ್ಲಿ ನೆಟ್ಟಿರುವ ಕಲ್ಲುಕಂಬ

ಪ್ರಮಾಣ ಉದ್ದ 63 "X ಅಗಲ 20"

1. ಸ್ವಸ್ತಿ ಶ್ರೀ ವಿಜೆಯಾಭ್ಯುದಯ ಶಾಲಿವಾಹನಶಕ
2. ವರುಷ ಸಂದ 1589 ಪ್ಲವಂಗ ಸಂವತ್ಸರದ
3. ಭಾದ್ರಪತ ಶುದ್ಧ 15ಲು ಶ್ರೀ ಮದ್ರಾಜಾಧಿರಾಜ ರಾಜ ಪ
4. ರಾಮೇಶ್ವರ ಪ್ರಉಡ ಪ್ರತಾಪ ಶ್ರೀ ವೀರ ಮೈಸೂರು ಸಿಂ
5. ಹಾಸನೂಢರಾದ ದೇವರಾಜ ವಡೆಯರವ
6. ರು ಸಖದಿಂ ರಾಜ್ಯಂ ಗೈಉ ತಿರಲು ಹೊಂ? ಬ
7. ನಾಡು ಸ್ತಳದ ಕಾಣುಕಾರನಹಳಿ ಗ್ರಾಮದ
8. ಲು ನಿ (ನೆ) ರುವಾಣ ದೇವರ ಮಠದಲಿ ದಳವಾ
9. ಯಿ ಕೊಮಾರೈಯನ ತಾಯಿ ತಿಂಮಂಮ
10. ನವರು ಕಟಿಸಿದ ಮಟದ ಧರ್ಮಕೆ
11. ಕಾಣಿ ಕಾರನಹಳಿ ಗ್ರಾಮದಲು ಬೆದ
12. ಲು ಭೂಮಿ ಕಂರಗ 8 ಯಂಟುವರಹ
13. ಭೂಸ್ವಾಸ್ತಿ ಯಂನು ಸಿಲಾಪ್ರತಿಷ್ಟೆ
14. ಯಂ ಮಾಡಿಸಿ ಕೊಟ್ಟೆವಾಗಿ ಯೀ
15. ಸ್ವಾಸ್ತಿಯಂನು ಆಗು ಮಾಡಿ ಮ
16. ಟ ಧರ್ಮ ವಂನು ಸಾಂಗವಾಗಿ ಮಾಡಿ
17. ಕೊಂಡು ಸುಖದಲಿ ಬರೋದು ಎ

18. ಂದು ಬರಸಿ ಕೊಟ್ಟ ಶಿಲಾ ಶಾಸನ

19. ಯೀ ಧ ರ್ಮಮಂ ಆರು ಅಪಹರಿಸಿದರು

20. ಕಾಸಿಯಲಿ ಗೋಉ ಕೊಂದಪಾಪಕೆ

21. ಹೋಹರು.

ಇದೇ ಶಾಸನದ ಕೆಳಗಡೆ,

1. ಕಾಳಾಯುಕ್ತಿ ಸಂವತ್ಸರದ ವೈಶಾ

2. ಖ ಬ 15 ಲು ಮೈಸೂರು ಚಿಕ ದೇ

3. ವ ರಾಜು ವಡೆಯರವರು ಪ್ರುಥವಿ

4. ರಾಜಂಗೈ ವುತಿರಲು ಕಾಣಿ ಕಾ

5. ರನಹಳಿ ಗ್ರಾಮದ ನಿರುವಾಣ ದೇವ

6. ರಮಟದಲು ದಳವಾಯಿ ಕೊಮಾರೈಯನ

7. ತಾಯಿ ತಿಂಮಂಮ ನವರು ಕಟಿಸಿದ ಮ

8. ಟ ಹುಚ್ಚು ಹೊಳೆ ಬಂದು ಮಟ ಕೊಚಿ

9. ಹೋಗಲಾಗಿ ಪ್ರತಿಯಾಗಿ ಕಲ್ಲ ಮಟವಂನು ಕಟ್ಟಿಸಿ

10. ಪುನಃ ಪ್ರತಿಷ್ಟೆಯ ಮಾಡಿ ಆ ಮಟವನು

11. ಕಾಣಿಕಾರನ ಹಳಿಯ ಪಡವಲು ಬಿಟ್ಟ

12. ಬೆದಲು ಭೂಮಿಗ – 9 ಗವಿ ಮಟಕೆ ಬೆದಲು

13. ಭೂಮಿ ಕಂ 4 ಕೂಡಾ ಕಂ 18 ಪುನ

14. ಹಪ್ರತಿಷ್ಟೆಯುಂನು ಮಾಡಿಸಿ ಕೊಟರು

15. ಈ ಧರ್ಮವನು ಯಾರು ಅಪಹರಿಸಿದರು

16. ಕಾಸಿಯಲು ಗೋಉ ಕೊಂದ ಪಾಪಕೆ

17. ಹೋಹರು ಎಂದು ಬರಸಿಕೊಟ್ಟ

18. ಶಿಲಾಶಾಸನ

ಎರಡನೆಯ ಶಾಸನದಲ್ಲಿ ಕಾಳಾಯುಕ್ತಿ ಸಂವತ್ಸರದ ವೈಶಾಖ ಬ 15 ಲು ಅಂದರೆ ಕ್ರಿ.ಶ. 1678 ಏಪ್ರಿಲ್ ಇಪ್ಪತ್ತೆಂಟನೆಯ ಭಾನುವಾರ ಅಮಾವಾಸ್ಯೆಯ ದಿನ ಚಿಕ್ಕದೇವರಾಜ ವಡೆಯರು ವೃಥ್ವೀರಾಜ್ಯಂಗೆಯುತ್ತಿರಲು ಅದೇ ಕೊಮಾರಯ್ಯನ ತಾಯಿ ತಿಮ್ಮಮ್ಮನು ಹಿಂದೆ ಕಟ್ಟಿಸಿದ್ದ ನಿರ್ವಾಣದೇವರ ಮಠವು ಹುಚ್ಚು ಹೊಳೆ ಬಂದು ಕೊಚ್ಚಿ ಹೋಗಲು ಪುನಃ ಕಲ್ಲು ಮಂಟಪವನ್ನು ಕಟ್ಟಿಸಿ ಪ್ರತಿಷ್ಠೆ ಮಾಡಿ ಕಾಣಿಕಾರನಹಳ್ಳಿ ಗ್ರಾಮದ ಪಶ್ಚಿಮಕ್ಕೆ ಹೊರ್ಲಗ (ಗದ್ಯಾಣ) ಭೂಮಿಬಿಟ್ಟು ಗವಿ ಮಠಕ್ಕೆ ಕಂಕೂಡಾ ಒಟ್ಟು 18 'ಕಂ' ಅಳತೆ ಭೂಮಿಯನ್ನು ಪುನಃ ಪ್ರತಿಷ್ಠೆ ಮಾಡಿ ಕೊಟ್ಟರು. ಮುಂದೆ ಮೇಲಿನಂತೆಯೇ ಫಲ ಶ್ರುತಿ ಇದೆ.

ಈ ಎರಡು ಶಾಸನಗಳ ಸಾರಾಂಶ : 1 ದೇವರಾಜ ವಡೆಯರ ಕಾಲದಲ್ಲಿ ಶಾಲಿವಾಹನ ಶಕ 1889 ಪ್ಲವಂಗ ಸಂವತ್ಸರ ಭಾದ್ರಪದ ಶು 15 ಕ್ರಿ.ಶ. 1667ನೆಯ ತಾರೀಖು ಶುಕ್ರವಾರದಲ್ಲಿ ರಾಜಾಧಿರಾಜ ರಾಜ ಪರಮೇಶ್ವರ ವೀರ ಪ್ರತಾಪ ಶ್ರೀ ವೀರ ದೇವರಾಜವಡೆಯರು ಮೈಸೂರು ರಾಜ್ಯವನ್ನು ಆಳುತ್ತಿರುವಾಗ ಅವರ ದಳವಾಯಿ ಕೊಮಾರಯ್ಯನ ತಾಯಿ ತಿಮ್ಮಮ್ಮನು ಹೊಂಬನಾಡ ಕಾಣಿಕಾರನಹಳ್ಳಿ ನಿರ್ವಾಣದೇವರ ಮಠವನ್ನು ಕಟ್ಟಿಸಿ ಹೊಲಕಂಗ ಎಂಟು ವರಹ ಭೂಸ್ವಾಸ್ತೆಯನ್ನು ದಾನ ಮಾಡಿದಳು. ಮುಂದೆ ಧರ್ಮಾಪಹಾರ ಮಾಡಿದವರು ಕಾಶಿಯಲ್ಲಿ ಗೋವುಕೊಂದ ಪಾಪಕ್ಕೆ ಹೋಗುವವರು ಎಂದು ಹೇಳಿದೆ.[13]

ಹುಚ್ಚು ಹೊಳೆ ಬಂದು ಮಠ ಕೊಚ್ಚಿ ಹೋಯಿತು : ಇದೊಂದು ಚಾರಿತ್ರಿಕ ಘಟನೆ, ಪ್ರಕೃತಿ ಪ್ರಕೋಪವನ್ನು ತಿಳಿಸುವುದು. ಅರ್ಕಾವತೀ ದಡದಲ್ಲಿ ಕನಕಪುರವೂ ದೇಗುಲ ಮಠವೂ ಇರುವುವು. ಈ ನದಿ ಅಷ್ಟು ದೊಡ್ಡ ನದಿಯಲ್ಲ. ಇದರಿಂದ ಈ ಅನಾಹುತ ಆಗಿರಬಹುದೇ? ಎಂಬ ಶಂಕೆ ಬರುವುದು. ಈ ಪ್ರಾಂತದಲ್ಲಿ 'ಮೂಲದ ಮಳೆ' ಹೊಯ್ದು ದೇಗುಲ ಕೊಚ್ಚಿ ಹೋಯಿತು' ಎಂಬ ಗಾದೆ ರೂಢಿಯಲ್ಲಿದೆ.

ಈ ಗಾದೆ ಬಹಳ ಹಳೆಯದು. ನಮ್ಮ ಶಾಸನದಲ್ಲಿ ಈ ವಿಷಯ ಉಲ್ಲೇಖವಾಗಿದೆ. ಹಿಂದೊಮ್ಮೆ ನವೆಂಬರ್ ತಿಂಗಳಲ್ಲಿ ಚಂಡ ಮಾರುತ ಬೀಸಿ ಚಾಮರಾಜ ನಗರದ ತಾಲ್ಲೂಕು ಮತ್ತು ತಮಿಳು ನಾಡಿನಲ್ಲಿ ಆದ ಪ್ರವಾಹಗಳ ಹಾವಳಿ ನಮಗೆ ಇನ್ನೂ ಜ್ಞಾಪಕ್ಕೆ ಬರುವುದು. ಆಗಾಗ್ಗೆ ಈ ರೀತಿ ಬಾಧೆಗಳು ಆಗುತ್ತಲೇ ಇರುವುದು. 1677ರಲ್ಲಿ ಮೂಲಾ ನಕ್ಷತ್ರದ ಮಳೆಯಿಂದ ಹುಚ್ಚು ಹೊಳೆ ಬಂದು ಮಠ ಕೊಚ್ಚಿ ಹೋಗಿ 1678ರ ವೈಶಾಖದಲ್ಲಿ ಈ ಮಠವು ಜೀರ್ಣೋದ್ಧಾರವಾಗಿರುವ ವಿಷಯವು ಇದರಿಂದ

ವ್ಯಕ್ತವಾಗುವುದು. ಭಾರದಲ್ಲಿಯೇ 'ವಿಶಾಖಾನ್ತಾನಿ ಮೇಘಾನಿ' ಎಂದು ಕಾಳಿದಾಸನು ಹೇಳಿರುವಂತೆ ವಿಶಾಖೆ ಮಳೆಯೇ ವರ್ಷದ ಕೊನೆ ಮಳೆ. ಮೂಲ ನಕ್ಷತ್ರದ ಮಳೆ ನವೆಂಬರಿನಲ್ಲಿ ಹುಟ್ಟುವುದು. ಮಳೆ ಬೀಳುವುದು. ಅಪೂರ್ವ, ಹಿಂದೆ ಆದ ದುರಂತವನ್ನು ಈ ಶಾಸನ ತಿಳಿಸುವುದು.

ದೇಗುಲ ಮಠದ ಚರಿತ್ರೆ : ಈಗ ದೇಗುಲ ಮಠವೆಂದು ಕರೆಯುವ ನಿರ್ವಾಣ ದೇವರ ಮಠವು 18ನೆಯ ಶತಮಾನದಿಂದ ಪ್ರಾರಂಭವಾಗಿ ವಿಚ್ಛಿತ್ತಿ ಇಲ್ಲದೆ ಇಂದಿನವರೆಗೂ ನಡೆದು ಬಂದಿದೆ. ಈ ಮಠದಲ್ಲಿ ಹಿಂದೆ ಪೀಠಾಧಿಪತಿಗಳಾದ ಅನೇಕ ಮಂದಿಸ್ವಾಮಿಗಳ ಗದ್ದುಗೆ ಈ ಮಠದ ಸುತ್ತಲೂ ಇವೆ. ಒಬ್ಬೊಬ್ಬರೂ ಮಾಡಿರುವ ಮಹತ್ಕಾರ್ಯಗಳನ್ನು ತಿಳಿಸುವ ಜನಜನಿತವಾದ ಅನೇಕ ಕಥೆಗಳು ಈ ಪ್ರಾಂತದಲ್ಲಿ ಎಲ್ಲಾ ಕಡೆಗಳಲ್ಲೂ ಕೇಳಬಹುದು. ಒಂದು ಮಠ ಆರುನೂರು ವರ್ಷಗಳಿಂದ ಇದ್ದು ವಿದ್ಯಾದಾನ, ಪರೋಪಕಾರ, ಜ್ಞಾನೋಪದೇಶ ಮತ್ತು ಅಜ್ಞಾನಿಗಳಿಗೆ ಸನ್ಮಾರ್ಗವನ್ನು ತೋರಿಸುತ್ತಾ ಕೀರ್ತಿಗಳಿಸಬೇಕಾದರೆ ಸಾಮಾನ್ಯವಲ್ಲ.

ಈ ಹಿಂದೆ ಪೀಠಾಧಿಪತಿಗಳಾಗಿದ್ದು ಶ್ರೀ॥ ನಿ॥ ಪ್ರ॥ ಮಹಲಿಂಗಸ್ವಾಮಿಗಳು ಯೋಗ ಪುರುಷರು, ಶಾಂತಿ, ಶಮ, ದಮಾದಿಗುಣಗಳಿಂದ ಪರಿಪೂರ್ಣರು, ಸರ್ವಸಮ ದೃಷ್ಟಿಯುಳ್ಳವರು. ಈಗ್ಗೆ ಕೆಲವು ವರ್ಷಗಳ ಹಿಂದೆ ಶಿವೈಕ್ಯರಾದ ಶ್ರೀ॥ ಪ್ರ॥ ನಿರ್ವಾಣ ಮಹಾಸ್ವಾಮಿಗಳ ಗಣಾರಾಧನೆಯಲ್ಲಿ ಕನಕಪುರದ ಸುತ್ತ ಮತ್ತಲ ಗ್ರಾಮಗಳಲ್ಲಿರುವ ಶ್ರೀ ವೈಷ್ಣವರು, ಸ್ಮಾರ್ತರು, ಮಾಧ್ವರು, ಆದ ತ್ರಿಮಸ್ಥರಗಲ್ಲದೆ ಎಲ್ಲಾ ಜಾತಿ ಕೋಮಿನವರಿಗೂ ಭೂತತೃಪ್ತ್ಯರ್ಥವಾಗಿ ಅನ್ನದಾನ ಮಾಡಿದ ವಿಷಯವು ಕನಕಪುರದ ಮನೆ ಮನೆಯ ಮಾತಾಗಿದೆ. ಅಲ್ಲದೆ ತಾವು ವಾಸ ಮಾಡುವ ಮಠದ ಆವರಣದಲ್ಲೇ ಒಂದು ಪ್ರೌಢಶಾಲೆಯನ್ನೂ ಪ್ರಾಥಮಿಕ ಮಾಧ್ಯಮಿಕ ಶಾಲೆಗಳನ್ನೂ ಸಂಸ್ಕೃತ ವೇದ ಪಾಠಶಾಲೆಗಳನ್ನೂ ತೆರೆದು ಏಳುನೂರು ವಿದ್ಯಾರ್ಥಿಗಳಿಗೆ ಪಾಠ ಪ್ರವಚನಗಳು ನಡೆಯಲು ಅನುಕೂಲ ಕಲ್ಪಿಸಿ, ಉಚಿತವಾಗಿ ಅಶನ, ವಸತಿಗಳಿಗೆ ಏರ್ಪಾಡು ಮಾಡಿ ವಿದ್ಯಾದಾನ ಮಾಡುವುದು ಸ್ತೋತ್ರಾರ್ಹವಾದುದು. ಕಾಯಕವೇ ಕೈಲಾಸವೆಂದು ಶಿಷ್ಯರುಗಳಿಗೆ ಉಪದೇಶ ಮಾಡುತ್ತಾ ಲೋಕದ ಸುಧಾರಣೆಯಲ್ಲಿ ಮನಸ್ಸಿಟ್ಟು ಶ್ರಮಿಸುತ್ತಿರುವುದು ಲೋಕಾದರ್ಶಪ್ರಾಯವಾಗಿದೆ.

ಡಾ. ಬಿ.ಸಿ. ವೀರಪ್ಪನವರು ದೇಗುಲ ಮಠದ ಕೊಡುಗೆ ಎಂಬ ಲೇಖನದಲ್ಲಿ, ಕನಕಪುರ ಪ್ರದೇಶದ ದೊಡ್ಡ, ಚಿಕ್ಕ ಮಠಗಳ ಒಂದು ಪಟ್ಟಿಯನ್ನೇ ಕೊಡುತ್ತಾರೆ.

1. ದೇಗುಲಮಠ, ಕನಕಪುರ, ಕಸಬ.

2. ಹೊರಳುಗಲ್ಲು ಮಠ, ಕನಕಪುರ, ಕಸಬ

3. ಮರಳೆಗವಿ ಮಠ, ಉಯ್ಯಂಬಳ್ಳಿ ಹೋಬಳಿ, ಕನಕಪುರ ತಾಲ್ಲೂಕು.

4. ಸಂತೆ ಕೋಡಳ್ಳಿ ಮಠ, ಉಯ್ಯಂಬಳ್ಳಿ ಹೋಬಳಿ, ಕನಕಪುರ ತಾಲ್ಲೂಕು.

5. ಬಿಲ್ವಪತ್ರೆ ಗವಿಮಠ, ಸಾತನೂರು ಹೋಬಳಿ, ಕನಕಪುರ ತಾಲ್ಲೂಕು.

6. ಕೆರೆ ಭಿಕ್ಷದ ಮಠ, ಸಾತನೂರು ಹೋಬಳಿ, ಕನಕಪುರ ತಾಲ್ಲೂಕು.

7. ತೋಟಹಳ್ಳಿ ಮಠ, ಸಾತನೂರು ಹೋಬಳಿ, ಕನಕಪುರ ತಾಲ್ಲೂಕು.

8. ಹತ್ತಳ್ಳಿ ಮಠ, ಸಾತನೂರು ಹೋಬಳಿ, ಕನಕಪುರ ತಾಲ್ಲೂಕು.

9. ಗುರುವಿನ ಪುರ ಮಠ, ಸಾತನೂರು ಹೋಬಳಿ, ಕನಕಪುರ ತಾಲ್ಲೂಕು.

10. ಅಜ್ಜಬಸವನಹಳ್ಳಿ ಮಠ, ಕೋಡಳ್ಳಿ ಹೋಬಳಿ, ಕನಕಪುರ ತಾಲ್ಲೂಕು.

11. ನೇರಳಹಟ್ಟಿ ಮಠ, ಕೋಡಳ್ಳಿ ಹೋಬಳಿ, ಕನಕಪುರ ತಾಲ್ಲೂಕು.

12. ಚಿಕ್ಕಕಲ್ಲು ಬಾಳು ಮಠ, ಹಾರೋವಳ್ಳಿ ಹೋಬಳಿ, ಕನಕಪುರ ತಾಲ್ಲೂಕು.

13. ದೊಡ್ಡ ಮರಳವಾಡಿ ಮಠ, ಶಿವಪುರ ಹೋಬಳಿ, ಕನಕಪುರ ತಾಲ್ಲೂಕು.[14]

ವೈದಿಕಧರ್ಮ

ಈ ಲೇಖನದಲ್ಲಿ ಕರ್ನಾಟಕದಲ್ಲಿ ವೈದಿಕ ಧರ್ಮದ ಸೂಕ್ಷ್ಮಾವಲೋಕನ ಮಾಡಿ ಅನಂತರ ದ್ವೈತ, ಅದ್ವೈತ ಮತ್ತು ವಿಶಿಷ್ಟದ್ವೈತದ ಬಗ್ಗೆ ಕಿರುಲೇಖನಗಳನ್ನು ಅಳವಡಿಸಿದೆ.

ವೈದಿಕಧರ್ಮ ಎಂದರೆ ವೇದಾನುಸಾರಿಯಾದ ಅಥವಾ ವೇದೋಕ್ತ ಧರ್ಮ ಎಂದು ಅರ್ಥವಾಗುತ್ತದೆ. ಭಾರತೀಯರು ತಮ್ಮ ಧರ್ಮ ಮತ ಸಂಪ್ರದಾಯಗಳ ಮೂಲವನ್ನು ವೇದಗಳಲ್ಲಿ ಅರಸುತ್ತಾರೆ. ವೇದಗಳನ್ನು ಅಪೌರುಷೇಯವೆಂದೂ ಅವು ದೋಷರಹಿತವಾದ ಸ್ವತಃ ಪ್ರಮಾಣಗಳೆಂದೂ ನಂಬಿದ್ದಾರೆ. ಆದುದರಿಂದ ವೇದೋಕ್ತವಾದುದೇ ಧರ್ಮ, ಅದಕ್ಕೆ ವಿರುದ್ಧವಾದುದೆಲ್ಲವೂ ಅಧರ್ಮ ಎಂಬ ಭಾವನೆಯೂ ಅವರಲ್ಲಿದೆ.

ವೇದಗಳಲ್ಲದೆ ವೈದಿಕ ವಾಙ್ಮಯದಲ್ಲಿ ಬ್ರಾಹ್ಮಣ, ಅರಣ್ಯಕ, ಉಪನಿಷತ್ತುಗಳು; ವೇದಾಂಗಗಳೆಂದು ಪ್ರಸಿದ್ಧವಿರುವ ಶಿಕ್ಷಾ, ವ್ಯಾಕರಣ, ಛಂದಸ್ಸು ನಿರುಕ್ತ, ಜ್ಯೋತಿಷ ಹಾಗೂ ಕಲ್ಪಸೂತ್ರಗಳು; ವೇದಾರ್ಥವನ್ನು ಜನತೆಗೆ ಸುಲಭವಾಗಿ ತಿಳಿಸುವುದಕ್ಕಾಗಿ ರಚಿತವಾದುವೆಂದು ನಂಬಿರುವ ಭಾರತ, ರಾಮಾಯಣಗಳು;

ಕಾಲಪ್ರಭಾವಕ್ಕೊಳಗಾಗಿ ಲುಪ್ತವಾಗಿ ಹೋಗಿರುವ ವೇದಮಂತ್ರಗಳನ್ನು ಸ್ಮರಿಸಿಕೊಂಡು ಬರೆಯಲಾಗಿರುವ ಸ್ಮೃತಿಗ್ರಂಥಗಳು, ಹದಿನೆಂಟು ಪುರಾಣಗಳು; ಇತ್ತೀಚೆಗೆ ಅಂದರೆ ಐತಿಹಾಸಿಕ ಯುಗಕ್ಕೆ ಸೇರಿದ ಭಾಷ್ಯ, ಟೀಕಾ, ಟಿಪ್ಪಣಿ ಗ್ರಂಥಗಳು – ಹೀಗೆ ವೈದಿಕ ವಾಙ್ಮಯ ವಿಪುಲವಾಗಿದೆ. ಇವುಗಳಲ್ಲಿ ಪ್ರಾಚೀನತಮವೆಂದು ನಿರ್ವಿವಾದವಾಗಿ ನಂಬಲಾಗಿರುವ ಋಗ್ವೇದ ಇಡೀ ಮಾನವಜನಾಂಗದ ಪ್ರಾಚೀನತಮ ಗ್ರಂಥವಾಗಿವೆ.

ಭಾರತೀಯರು ವೇದಗಳನ್ನು ಅನಾದಿನಿತ್ಯವೆಂದು ನಂಬಿರುವುದರಿಂದ ತಮ್ಮ ಧರ್ಮವನ್ನು ಸನಾತನ ಧರ್ಮವೆಂದು ಕರೆದಿರುತ್ತಾರೆ. ಭಾರತವನ್ನು ಹಿಂದು ದೇಶವೆಂದು ಕರೆಯುವುದು ವಾಡಿಕೆಯಾದ ಮೇಲೆ ಇಲ್ಲಿನ ಬಹುಸಂಖ್ಯಾತರ ಧರ್ಮವನ್ನು ಹಿಂದುಧರ್ಮವೆಂದು ಕರೆಯುತ್ತಾರೆ. ಅಂತೆಯೇ ಈ ಧರ್ಮಕ್ಕೆ ಆಕರವಾದ ವೇದಾದಿ ವಾಙ್ಮಯವನ್ನು ವಂಶಪಾರಂಪರ್ಯವಾಗಿ ಅಭ್ಯಾಸ ಮಾಡುತ್ತ ಬಂದವರು ಬ್ರಾಹ್ಮಣ ಧರ್ಮ ಎಂದು ಹೆಸರಿಸಿಸುವುದೂ ವಾಡಿಕೆ. ಒಟ್ಟಿನಲ್ಲಿ ವೈದಿಕಧರ್ಮ, ಸನಾತನ ಧರ್ಮ, ಹಿಂದು ಧರ್ಮ, ಬ್ರಾಹ್ಮಣ ಧರ್ಮ ಎಲ್ಲವೂ ಪರ್ಯಾಯವಾಚಿಗಳಾಗಿವೆ.

ಕರ್ನಾಟಕದಲ್ಲಿ ವೈದಿಕ ಧರ್ಮ ಎಂದು ಹೀಗೆ ಬಂದಿತೆಂದು ಹೇಳಲು ಖಚಿತವಾದ ದಾಖಲೆಗಳು ಪುರಾವೆಗಳು ಇಲ್ಲ. ಭಾರತದ ಅವಿಭಾಜ್ಯ ಅಂಗವಾದ ಕರ್ನಾಟಕ ಪ್ರಾಗೈತಿಹಾಸಿಕ ಕಾಲದಿಂದಲೂ ವೈದಿಕ ಧರ್ಮದ ಪ್ರಭಾವಕ್ಕೆ ಒಳಗಾಗಿತ್ತೆಂದು ಹೇಳಬಹುದು. ವೇದೋಕ್ತವಾದ ಅನೇಕ ಐತಿಹ್ಯಗಳು ಹಾಗೂ ಅಖ್ಯಾಯಿಕೆಗಳು ತಲೆತಲಾಂತರದಿಂದ ಕನ್ನಡನಾಡಿನ ಜನರಲ್ಲಿ ಜೀವನಶ್ರದ್ಧೇ ಮತ್ತು ಚೈತನ್ಯವನ್ನು ತುಂಬುತ್ತ ಬಂದಿವೆ. ಇದರಂತೆ ರಾಮಾಯಣ. ಮಹಾಭಾರತ ಹಾಗೂ ಪುರಾಣಗಳೂ ತಮ್ಮ ಅಚ್ಚಳಿಯದ ಪ್ರಭಾವವನ್ನು ರಾಜಕೀಯ ಸ್ವರೂಪ, ಆಡಳಿತ, ಗೃಹಕೃತ್ಯ, ಕಲೆ, ಶಿಲ್ಪ ಮುಂತಾದವುಗಳ ಮೇಲೆ ಬೀರಿರುವುದನ್ನು ಗಮನಿಸಬಹುದಾಗಿದೆ.[15]

ಕರ್ನಾಟಕದ ಸ್ಥಳಪುರಾಣಗಳು ಮತ್ತು ಸ್ಥಳಗಳ ಹೆಸರುಗಳ ಅಧ್ಯಯನ ಮಾಡಿದರೆ ಪ್ರಾಗೈತಿಹಾಸಿಕ ಆ ಕಾಲದಿಂದಲೂ ವೈದಿಕ ಹಾಗೂ ಪೌರಾಣಿಕ ಆಖ್ಯಾಯಿಕೆಗಳ ಸಮರ್ಥನೆ ದೊರೆಯುತ್ತದೆ. ಗಾಲವ ಋಷಿಗಳ ಸಂಬಂಧವನ್ನು ಗಲಗಲಿಗೆ ಜನ ಹಚ್ಚಿದ್ದಾರೆ. ಮಾಂಡವ್ಯ ಋಷಿಗಳು ತುಂಗಾ ನದಿಯ ನಡು ದಿಬ್ಬ ಒಂದರಲ್ಲಿ ಆಶ್ರಮ ಮಾಡಿಕೊಂಡಿದ್ದರೆಂದು ಇಂದಿಗೂ ಮಂಡಗದ್ದೆಯಲ್ಲಿ ಆ ದಿಬ್ಬವನ್ನು ತೋರಿಸಿ ಹೇಳುತ್ತಾರೆ. ಅಗಸ್ತ್ಯರಿಂದ ಹತನಾದ ವಾತಾಪಿ ಎಂಬ ದೃತ್ಯನ ನೆನಪನ್ನು ಬಾದಾಮಿ ಎಂಬ ಸ್ಥಳ ಮಾಡಿಕೊಡುತ್ತದೆ. ಅಗಸ್ತ್ಯರ ಕಮಂಡಲದಲ್ಲಿದ್ದ ಗಂಗೆಯೇ ಕಾವೇರಿ ನದಿಯಾಗಿ ಹರಿಯುತ್ತಿರುವಳೆಂಬ ನಂಬಿಕೆಯಿದೆ. ಪರಶುರಾಮ ಕ್ಷೇತ್ರವೆಂದು ಪಶ್ಚಿಮ ಕರಾವಳಿ ಕ್ಷೇತ್ರ ಪ್ರಸಿದ್ಧವಿದೆ. ತೀರ್ಥಹಳ್ಳಿ ಎಂಬಲ್ಲಿರುವ ತುಂಗಾನದಿಯ ರಾಮತೀರ್ಥದಲ್ಲಿ ಪರಶುರಾಮ ತನ್ನ

ಕೊಡಲಿಯನ್ನು ತೊಳೆದಾಗ ಅದಕ್ಕೆ ಅಂಟಿಕೊಂಡಿದ್ದ ಮಾತೃಹತ್ಯಾಪಾಪದ ಸಂಕೇತವಾದ ರಕ್ತದ ಕಲೆ ಅಳಿಸಿಹೋಯಿತೆಂದು ಇಂದಿಗೂ ಅಲ್ಲಿ ಎಳ್ಳಮಾವಾಸ್ಯೆ ಎಂಬ ಜಾತ್ರೆಯನ್ನು ನಡೆಸುತ್ತಾರೆ.

ರಾಮಾಯಣದ ಕಾಲ

ರಾಮಾಯಣದ ಸಂಬಂಧವಂತೂ ಇಲ್ಲಿನ ಅನೇಕ ಸ್ಥಳಗಳೊಂದಿಗೆ ಇರುವುದು ಸುಸ್ಪಷ್ಟ. ಕರ್ನಾಟಕದ ಅನೇಕ ಭಾಗಗಳಲ್ಲಿ ವಾಲ್ಮೀಕಿಯ ಆಶ್ರಮವನ್ನು ಗುರುತಿಸಲಾಗಿದೆ. ಉದಾಹರಣೆಗೆ ಕೋಲಾರ ಜಿಲ್ಲೆಯ ಆವನಿ ಎಂಬಲ್ಲಿ ಲವಕುಶರ ಜನ್ಮವಾಗಿತ್ತೆಂದೂ ಅಲ್ಲೇ ರಾಮನ ಅಶ್ವಮೇಧದ ಕುದುರೆಯನ್ನು ಕಟ್ಟಿಹಾಕಿದ್ದರೆಂದೂ ಐತಿಹ್ಯ. ಅಂಜನೀಪರ್ವತ, ಪಂಪಾ ಸರೋವರ, ವಾಲೀ ದಿಬ್ಬ, ಕಿಷ್ಕಿಂಧೆ (ಈಗಿನ ಆನೆಗೊಂದಿ), ಮತಂಗ, ಋಷ್ಯಮೂಕ, ಮರುವಸಿ (ಮಹಿಷೀ ಸಮೀಪದಲ್ಲಿದೆ), ಜಟಿಂಗರಾಮೇಶ್ವರ ಗುಡ್ಡ – ಇವೆಲ್ಲವೂ ರಾಮಾಯಣದ ನೆನಹನ್ನು ಜೀವಂತವಾಗಿಟ್ಟಿವೆ. ಗೋಕರ್ಣೇಶ್ವರನ ಸಂಬಂಧದಲ್ಲಿರುವ ಐತಿಹ್ಯ ರಾವಣಾಸುರನ ಶಿವಭಕ್ತಿಗೂ ದುಷ್ಟರ ಇಷ್ಟಾರ್ಥಕ್ಕೆ ವಿಘ್ನವನ್ನು ತಂದೊಡ್ಡುವ ವಿಘ್ನೇಶ್ವರನ ಮಹಿಮೆಗೂ ಸಾಕ್ಷೀಭೂತವಾಗಿದೆ.[16]

ಮಹಾಭಾರತದ ಕಾಲ

ಇದರಂತೆ ಮಹಾಭಾರತದ ಸವಿನೆನಪಿನೊಡನೆ ಚೈತನ್ಯಭರಿತವಾಗಿರುವ ಹಲವಾರು ಪ್ರದೇಶಗಳಿವೆ. ಧಾರವಾಡ ಜಿಲ್ಲೆಯ ಹಾನಗಲ್ಲು ವಿರಾಟನ ರಾಜಧಾನಿಯಾಗಿತ್ತೆಂದು ಐತಿಹ್ಯ. ಚಿತ್ರದುರ್ಗದೊಂದಿಗೆ ಹಿಡಿಂಬಾಸುರನ ಸಂಬಂಧವನ್ನೂ ಕೋಲಾರ ಜಿಲ್ಲೆಯ ಕೈವಾರದ ಬಲಿಯ ಬೆಟ್ಟಕ್ಕೆ ಬಕಾಸುರನ ಸಂಬಂಧವನ್ನೂ ಹೇಳುತ್ತಾರೆ. ಶೃಂಗೇರಿ, ಹರಿಹರ, ಶಿವಮೊಗ್ಗೆಯ ಬಳಿ ಇರುವ ಹರಕೇರಿ ಕ್ಷೇತ್ರಗಳಲ್ಲಿ ಋಷ್ಯಶೃಂಗರನ್ನು ಕರೆತರುವಾಗ ಭೀಮಸೇನ ಸಹಸ್ರಲಿಂಗವನ್ನು ಒಡಮೂಡುವಂತೆ ಮಾಡಿದ್ದನೆಂದು ಪ್ರತೀತಿ. ಭೀಮನಕೋಣೆ, ಭೀಮನಮಡು, ಭೀಮನಕಲ್ಲು ಮುಂತಾದ ಹೆಸರುಗಳು ಪಾಂಡವಮಧ್ಯಮನೊಡನೆ ಸಂಬಂಧ ಹೊಂದಿದ್ದವೆಂಬುದು ಸ್ಥಳಪುರಾಣ. ಇಂಥ ಐತಿಹ್ಯ ಆಖ್ಯಾಯಿಕೆಗಳನ್ನು ಸಮರ್ಥಿಸುವ ಅನೇಕ ಸ್ಥಳ ಹೆಸರನ್ನು ಉದಾಹರಿಸುತ್ತ ಹೋಗಬಹುದು.

ವೇದಗಳ ಕಾಲ

ವೇದೋಕ್ತ ಯಜ್ಞಯಾಗಾದಿಗಳು ಕರ್ನಾಟಕದಲ್ಲಿ ಪ್ರಚಲಿತವಿದ್ದವೆಂಬುದಕ್ಕೆ ಅನೇಕ ಹೆಸರುಗಳು ಸಾಕ್ಷಿಗಳಾಗಿವೆ. ಉದಾ : ಇಟ್ಟಗಿ (ಇಷ್ಟಿಕಾ) ಎಂಬ ಊರಿನ ಹೆಸರು. ಅಲ್ಲಿ ನಡೆಸಿದ ಉತ್ಖನನದಿಂದ ಅಲ್ಲಿ ಗರುಡಚಯನ ಮತ್ತು ಅಗ್ನಿ ಷ್ಟೋಮ ಯಾಗಗಳು ನಡೆದಿದ್ದವೆಂಬುದಕ್ಕೆ ಇಟ್ಟಗಿಯ ಕುಳಿಯಲ್ಲಿ ದೊರೆತ ಉಖಪಾತ್ರದಿಂದ ಸಮರ್ಥನೆ ದೊರೆಯುತ್ತದೆ. ಯೂಪಸ್ತಂಭಗಳು ಕರ್ನಾಟಕದ ಹಲವೆಡೆಗಳಲ್ಲಿವೆ.

ಜನಪದರಲ್ಲಿ ವೈದಿಕ ಧರ್ಮ

ಕರ್ನಾಟಕದಲ್ಲಿ ಪ್ರಚಲಿತವಿದ್ದ ಜನಪದ, ಮಹಾಜನಪದ, ಮಹಾಜನ ಹಾಗೂ ದೈವವೆಂಬ ಸಂಸ್ಥೆಗಳು ವೈದಿಕ ಕಾಲದಿಂದಲೂ ಗ್ರಾಮದ ಆಡಳಿತ ನಡೆದುಬಂದ ಕ್ರಮವನ್ನು ಸೂಚಿಸುತ್ತವೆ. ಪ್ರಾಚೀನ ಕನ್ನಡ ಶಾಸನಗಳಲ್ಲಿ ಕಂಡುಬರುವ ಪದಿನೆಣ್ಬರುಂ ಪದಿನಾರ್ವರುಂ ಕಾಪಾಡುವರ್ ಎಂಬ ವಿಧಿ ವೈದಿಕ ಬೌದ್ಧ ರೀತಿಯಲ್ಲಿ ಭಾರತವನ್ನು ಹದಿನೆಂಟು ಹಾಗೂ ಹದಿನಾರು ಸಮಾನಾಧಿಕಾರವುಳ್ಳ ಜನಪದಗಳಾಗಿ ವಿಭಾಗಿಸಿದ್ದುದನ್ನು ಸಮರ್ಥಿಸುತ್ತದೆ.[17]

ಕರ್ನಾಟಕದ ರಾಜಕೀಯ ಇತಿಹಾಸ ಕ್ರಿ.ಪೂ. ಎರಡನೆಯ ಶತಮಾನದಿಂದ ಆರಂಭವಾಗುತ್ತದೆ. ಆಗ ಸಾತವಾಹನರು ತಮ್ಮ ರಾಜ್ಯವನ್ನು ಸ್ಥಾಪಿಸಿದರು. ಇವರ ಅನಂತರ ಕರ್ನಾಟಕದ ದೊರೆಮನೆತನಗಳಲ್ಲಿ ವೈಜಯಂತಿಯಲ್ಲಿ (ಬನವಾಸಿ) ಆಳಿದ ಕದಂಬರ ಹೆಸರು ಬರುತ್ತದೆ. ನಾನಾಂಕನೆಂಬ ದೊರೆಯ ನಾನಾಘಾಟ್ ಶಾಸನ ವೈದಿಕ ಹಾಗೂ ಪೌರಾಣಿಕ ದೇವರುಗಳ ನಮಸ್ಕಾರದೊಡನೆ ಪ್ರಾರಂಭವಾಗುತ್ತದೆ. ಧರ್ಮ, ಇಂದ್ರ, ಸಂಕರ್ಷಣ, ವಾಸುದೇವ, ಚಂದ್ರ, ಸೂರ್ಯ, ಯಮ, ವರುಣ, ಕುಬೇರ ಮತ್ತು ವಾಸವ – ಇವರ ಹೆಸರು ಈ ಶಾಸನದಲ್ಲಿದೆ. ನಾಸಿಕದ ಪುಳಮಾಮಿಯ ಶಾಸನದಲ್ಲಿ ಸಾತಕರ್ಣಿಯನ್ನು ರಾಮ ಕೇಶವ ಭೀಮಾದಿಗಳಂತೆ ಪರಾಕ್ರಮಿ ಎಂದು ವರ್ಣಿಸಲಾಗಿದೆ. ಒಟ್ಟಿನಲ್ಲಿ ಐತಿಹಾಸಿಕ ಯುಗ ಪ್ರಾರಂಭವಾಗುವುದಕ್ಕೆ ಮೊದಲು ರಾಜಮನೆತನಗಳ ಮೇಲೆ ವೈದಿಕ ಹಾಗೂ ಪೌರಾಣಿಕ ಮತಗಳ ಪ್ರಭಾವವಿತ್ತೆಂದು ಹೇಳಬಹುದು. ಕದಂಬರು, ವೈದಿಕ ಋಷಿಗಳ ಸಂತತಿಯವರೆಂದುಕೊಂಡಿದ್ದಾರೆ. ತಲಕಾಡಿನ ಗಂಗರು, ಬಾದಾಮಿ ಮತ್ತು ಕಲ್ಯಾಣದ ಚಾಲುಕ್ಯರು, ಮಾನ್ಯಖೇಟದ ರಾಷ್ಟ್ರಕೂಟರು, ಕಳಚುರಿಗಳು, ಯಾದವರು, ಹೊಯ್ಸಳರು ಮುಂತಾದವರೆಲ್ಲರೂ ತಮ್ಮ ವಂಶದ ಮೂಲವನ್ನು ಪ್ರತ್ಯೇಕವಾಗಿ ತಿಳಿಸಿರುತ್ತಾರೆ.

ಹಾರೋಹಳ್ಳಿಯ ಪುರಾತನ ದೇಗುಲಗಳು

ಕನಕಪುರ – ಈ ತಾಲ್ಲೂಕಿನ ಹಾರೋಹಳ್ಳಿ ಇಲ್ಲಿ ಬಹುಶಃ ಚೋಳ ಶೈಲಿಯಲ್ಲಿರುವ ಒಂದು ದೇವಾಲಯ, ಸುಮಾರು ಮೂರು ಶತಮಾನದಿಂದ ಮೂಕವಾಗಿ ನಿಂತಿರುವುದು, ಕಾಲನ ತುಳಿತಕ್ಕೆ ಸಿಕ್ಕಿ, ಮೂಕವಾಗಿ ರೋಧಿಸುತ್ತಿರುವ ದೃಶ್ಯ ಇಂದಿಗೂ ಸಿಗುತ್ತದೆ. ಅದೇ ಅರುಣಾಚಲೇಶ್ವರ ದೇವಸ್ಥಾನ. ಮುನ್ನೂರು ವರ್ಷಗಳ ಇತಿಹಾಸದೊಂದಿಗೆ ತಳುಕು ಹಾಕಿಕೊಂಡು, ನಿಗೂಢ, ಕಲ್ಪಿತ ಕತೆಗಳನ್ನು ಹೊಂದಿ. ಇಡೀ ತಾಲ್ಲೂಕಿನಲ್ಲಿ ಈ ಶೈಲಿಯ, ಇಂತಹ ಬೃಹತ್ತಾದ ರಚನೆ ಎಲ್ಲೂ ಕಾಣದಿರುವುದು, ಬಹುಶಃ ಇದರ ಬಗ್ಗೆ ಕುತೂಹಲಿಗಳಿಗೆ, ಸಂಶೋಧಕರಿಗೆ ನಿಜವಾದ ಒಂದು ಸಂಶೋಧನಾತ್ಮಕವಾದ ತಾಣ.

ಇಡೀ ದೇವಸ್ಥಾನ ದಕ್ಷಿಣೋತ್ತರವಾಗಿ ನೂರೈವತ್ತು ಅಡಿ, ಪೂರ್ವ ಪಶ್ಚಿಮವಾಗಿ ನೂರೈವತ್ತು ಅಡಿ – ಅಂದರೆ ಸುಮಾರು ಎರಡು ಸಾವಿರ ಐದುನೂರು ಚದರ ಅಡಿಗಳ ವಿಶಾಲ ಆವರಣದಲ್ಲಿ ಕಟ್ಟಲ್ಪಟ್ಟು, ತಾಲ್ಲೂಕಿನಲ್ಲೇ ಇಂತಹ ವಿಶಾಲ ರಚನೆ ಇನ್ನೊಂದಿಲ್ಲ.

ದೇವಾಲಯದ ಪ್ರಾಂಗಣದಲ್ಲಿ ಸುತ್ತಲೂ ಸುಮಾರು ಹತ್ತು ಅಡಿ ಎತ್ತರ ಎರಡು ಅಡಿ ದಪ್ಪ, ಅಗಲದ ನಲವತ್ತ ಒಂಭತ್ತು ಕಂಭಗಳಿಗೆ ಸೇರಿದಂತೆ ಕಟ್ಟಿರುವ ಐವತ್ತ ಮೂರು ಮಂಟಪಗಳು. ಒಂದೊಂದೂ, ಒಂದೊಂದೂ ದೇವರಿಗಾಗಿ ಕಟ್ಟಿರುವುದು ಕಂಡುಬರುತ್ತದೆ. [ಚಿತ್ರ – 1] ಇವುಗಳ ಒಳಗೆ ಕಟ್ಟಿರುವ ಪಾಣಿ ಪೀಠಗಳನ್ನು ಇಂದೂ ಕಾಣಬಹುದು. ಇವುಗಳ ರಚನೆಯಲ್ಲೂ ವೈಶಿಷ್ಟ್ಯವಿದೆ. ಇವು ಒಂದರಂತೆ ಇನ್ನೊಂದಿಲ್ಲ. ಬಳಸಿದ ವಸ್ತುಗಳೂ ಸಹ ಕೆಲವನ್ನು ಗಾರೆ, ಇಟ್ಟಿಗೆಯಿಂದ ಕಟ್ಟಿದ್ದರೆ – ಇವು ಪಶ್ಚಿಮದಲ್ಲಿದೆ, ಮತ್ತೆ ಕೆಲವು ಮಂಟಪಗಳಲ್ಲಿ ಕಲ್ಲಿನ ಪಾಣಿ ಪೀಠ ಕಂಡುಬರುತ್ತದೆ – ಪೂರ್ವ ಭಾಗದಲ್ಲಿ ಹಲವು ಜೀರ್ಣವಾಗಿದ್ದರು, ಹಲವು ಇಂದೂ ಸುಸ್ಥಿತಿಯಲ್ಲಿವೆ.

ಈ ಪ್ರಾಂಗಣದ ಗುಡಿಗಳಲ್ಲಿ ಒಂದೊಂದರಲ್ಲೂ ಒಂದೊಂದು ಲಿಂಗವಿತ್ತೆಂದು ಸ್ಥಳೀಯರು ಅಭಿಪ್ರಾಯಪಟ್ಟರೂ, ಭಿನ್ನವಾದ ಮೂರ್ತಿಯಾಗಲೀ ಪ್ರತಿಷ್ಠಾಪನೆಯಾದ ಕುರುಹಾಗಲೀ ಕಾಣುವುದಿಲ್ಲ. ಕೆಲವು ಕಲ್ಲಿನ ಪಾಣಿ ಪೀಠದಲ್ಲಿ ಎರಡು ಮೂರು ವಿಗ್ರಹಗಳಿಗೆ ಜಾಗ ಮಾಡಿರುವುದನ್ನು ನೋಡಿದರೆ, ಬಹುಶಃ ಇವೆಲ್ಲಾ ಪೂರ್ವವಾಗುವುದಕ್ಕೆ ಮೊದಲೇ, ಕಾಲನ ತುಳಿತಕ್ಕೆ ಸಿಕ್ಕಿರಬಹುದೆಂದು ಅನುಮಾನ ಬರುತ್ತದೆ. ಹಾಗೂ ಇಡೀ ಪ್ರಾಂಗಣ ಗುಡಿಗಳು ಕೇವಲ ಲಿಂಗ ಪ್ರತಿಷ್ಠಾಪನೆಗೆ ಮಾತ್ರ ಸೀಮಿತ್ತು ಎಂಬ ಮಾತು ಸುಳ್ಳೆನಿಸುತ್ತದೆ.

ದಕ್ಷಿಣಾಭಿಮುಖವಾಗಿ ನಿಂತ ಗೋಪುರ (ಚಿತ್ರ 2) ರಾಜಗೋಪುರ ಭವ್ಯವಾಗಿದ್ದು, ಸುಮಾರು ಹದಿನೈದು ಅಡಿ ಎತ್ತರದ ಮಹಾದ್ವಾರದ ಮೇಲೆ ಆರು ಕಂಭಗಳ ಆಸರೆಯಲ್ಲಿ ನಿಂತಿದೆ. ಇದು ಐದು ಅಂತಸ್ತುಗಳ, ಆರವತ್ತು ಅಡಿ ಎತ್ತರದ ರಚನೆ, ಸರಿಸುಮಾರು ದ್ರಾವಿಡ ಶೈಲಿಯಲ್ಲಿ, ಬಹಳಷ್ಟು ನಿಖರವಾಗಿ ಬೇಕೆಂದರೆ, ತಮಿಳುನಾಡಿನ, ತಿರುವಣ್ಣಾಮಲೆಯ ಪ್ರತಿರೂಪದಂತಿದೆ. ಎಲ್ಲಾ ಅಂತಸ್ತುಗಳಿಗೆ ಒಳಭಾಗದಲ್ಲಿ ಮರದ ಕಂಭಗಳ ಆಶ್ರಯ ಕೊಟ್ಟಿರುವುದೂ, ಗೋಪುರದ ಹೊರಭಾಗದಲ್ಲಿ ಅತ್ಯಂತ ಸೂಕ್ಷ್ಮ ಕೆತ್ತನೆಗಳಿಗೆ ಹೋಗದೇ, ಕೇವಲ ಇಟ್ಟಿಗೆ ಗಾರೆಗಳಿಂದಲೇ ಕಟ್ಟಿದ ರಚನೆ, ಇಡೀ ದೇವಾಲಯಕ್ಕೆ ಶೋಭೆ ತಂದರೂ ಅನೇಕ ವಿಚಾರಗಳಿಗೆ ಎಡೆಮಾಡುತ್ತದೆ. ಗೋಪುರ ಎಲ್ಲೂ ಧಾಳಿಗೆ ತುತ್ತಾದ ಕುರುಹು ಇಲ್ಲ. ಆದರೆ ಗಾರೆ ಸುಣ್ಣಗಳಿಂದ ಮಾಡಿದ ಮೂರ್ತಿಗಳು ಎಲ್ಲಾ ಅಂತಸ್ತುಗಳಲ್ಲಿ ಭಿನ್ನವಾಗಿರುವುದು ಪ್ರಕೃತಿಯಿಂದಲೇ ಎಂದು ತಿಳಿಯಬಹುದು. ರಾಜಗೋಪುರ ಸುಂದರ, ಸೂಕ್ಷ್ಮ, ಕೆತ್ತನೆಗಳಿಲ್ಲದಿದ್ದರೂ ಇಂದೂ ದೃಢವಾಗಿದೆ. ಮಹಾದ್ವಾರದ ಕಂಬಗಳಲ್ಲಿ ನಂದಿ, ವೀಣಾವಾದಕ, ಬೇಡರ ಕಣ್ಣಪ್ಪ, ನೃತ್ಯ ಗಣೇಶ, ಕುದುರೆ ಸವಾರ, ನಟರಾಜನ ಭಂಗಿಯ ಚಿತ್ರಗಳು ಎರಡು ಅನುಮಾನಗಳಿಗೆ ಎಡೆಕೊಡುತ್ತದೆ.

ಮೊದಲನೆಯದು ಬಹುಶಃ ನುರಿತ ಕೆಲಸಗಾರರಲ್ಲದವರು ಮಾಡಿರಬಹುದು. ಎರಡನೆಯದು – ಯಾವುದೋ ಕಾರಣಕ್ಕೆ ಆತುರದಿಂದ ರಚನೆ ಮಾಡಿರಬಹುದು.

ವಿಶಾಲ ಪ್ರಾಂಗಣದಲ್ಲಿ ಆಗ್ನೇಯಕ್ಕೆ ಪಾಕಶಾಲೆ, ಈಶ್ಯಾನದ ಯಾಗ ಮಂಟಪಗಳು ಇಂದೂ ಸುಸ್ಥಿಯಲ್ಲಿವೆ. ಮುಖ್ಯ ದೇವಾಲಯ – ಅರುಣಾಚಲೇಶ್ವರ; ದಕ್ಷಿಣೋತ್ತರವಾಗಿ ನಲವತ್ತ ಒಂದು ಅಡಿ, ಪೂರ್ವ ಪಶ್ಚಿಮವಾಗಿ ನಲವತ್ತ ಎಂಟು ಅಡಿಯಿದ್ದು ಬರೀ ಕಲ್ಲಿನ ರಚನೆ, ದಕ್ಷಿಣ ಹಾಗೂ ಪೂರ್ವದ್ವಾರಗಳ ಮೂಲಕ ಪ್ರವೇಶಿಸಬಹುದಾದರೂ, ಮೂಲ ವಿಗ್ರಹ ಪೂರ್ವಾಭಿಮುಖ – [ಚಿತ್ರ – 3] ಸುಮಾರು ಮೂರು ಅಡಿ ಎತ್ತರದ ರಚನೆ, ಲಿಂಗ – ಸಾಲಿಗ್ರಾಮ ಶಿಲೆಯದು, ಗರ್ಭಗುಡಿ, ಸುಕನಾಸಿಯಲ್ಲಾಗಲೀ ಅಂತಹ ರಚನಾ ವಿಶೇಷವಿಲ್ಲ. ಗುಡಿಯ ಪ್ರಾಂಗಣ ಹನ್ನೆರಡು ಕಂಬಗಳ ಆಸರೆಯಲ್ಲಿದೆ. ಇವುಗಳ ಮೇಲೆ ದಕ್ಷ, ಗಣೇಶ, ಷಣ್ಮುಖ, ಆಂಜನೇಯ, ಮತ್ಸ್ಯಕನ್ಯೆ, ಸರ್ಪಕನ್ಯೆ, ತುಂಬುರರ ಕೆತ್ತನೆಯಿದ್ದು, ಕೆಲವು ಕಾಮಸೂತ್ರದ ಭಂಗಿಗಳು, ಗಂಡು ಹೆಣ್ಣಿನ ಮಿಲನ, ಶಿಶು ಜನನದ ಕೆತ್ತನೆಗಳು ಕಂಡು ಬಂದರೂ, ಯಾವುದೂ ಅಷ್ಟು ಸ್ಪಷ್ಟ ಸುಂದರವಿಲ್ಲ. ಕುಶಲತೆಯೂ ಕಂಡುಬಾರದು. ಗರ್ಭಗುಡಿಯ ಇಕ್ಕೆಲಗಳಲ್ಲಿ ಗದೆ, ಡಮರುಗ, ತ್ರಿಶೂಲ, ವರದಹಸ್ತದ ದ್ವಾರ ಪಾಲಕರಿದ್ದು, ತಲೆ ಪಟ್ಟಿಯಲ್ಲಿನ ಗಜಲಕ್ಷ್ಮಿ ಕೆತ್ತನೆ ಸೋಜಿಗವನ್ನುಂಟು ಮಾಡುತ್ತದೆ, ಗರ್ಭ ಗುಡಿಯ ಹೊರಗೆ, ಎಡಪಕ್ಕದಲ್ಲಿ ಮತ್ತಷ್ಟು ದೇವತೆಗಳಿಗೆ, ಬಲಭಾಗದಲ್ಲಿ ಗಣಪತಿಯ ವಿಗ್ರಹಗಳಿಗೆ ಅವಕಾಶ ಮಾಡಿದೆ. ದೇವಾಲಯದ ಹಿಂದೆ ವಾಯವ್ಯದಲ್ಲಿ ಚಂಡೀಕೇಶ್ವರನಿದ್ದಾನೆ.

ದೇವಾಲಯದಲ್ಲಿರುವ ಗಂಡಭೇರುಂಡದ ಕೆತ್ತನೆ ಬಹುಶಃ ಇದರ ನಿರ್ಮಾಣ ಕಾಲಕ್ಕೇ ಮೈಸೂರು ರಾಜ್ಯ ಪ್ರಬಲವಾಗಿತ್ತೆಂದು ತಿಳಿಯಬಹುದು.

ಗುಡಿಯ ಹೊರಗೆ, ಪೂರ್ವಭಾಗದಲ್ಲಿ ಇರುವ ಆರು ಕಂಬಗಳಲ್ಲಿ, ಬಹುಶಃ ದೇವಸ್ಥಾನ ಕಟ್ಟಿರಬಹುದಾದ ದಳಪತಿಗಳ ಕೆತ್ತನೆ, ನಮಸ್ಕರಿಸುವ ಭಂಗಿಯಲ್ಲಿದೆ. ಎಡಭಾಗದಲ್ಲಿ ಕೆತ್ತಲಾದ ವ್ಯಕ್ತಿ ಪೇಟ ಕಿವಿಗೆ ವಂಕಿ, ಕೈಕಾಲಿನಲ್ಲಿ ಕಡಗವಿದ್ದು, ಜನಿವಾರದ ಸ್ಪಷ್ಟ ಕೆತ್ತನೆಯಿದೆ. ಬಲಭಾಗದಲ್ಲಿರುವ ಹೆಣ್ಣು ಬಾಚಿ ಕಟ್ಟಿದ ತುರುಬು, ಆಭರಣ ಸಹಿತವಾಗಿ ನಮಸ್ಕರಿಸುವ ಭಂಗಿಯಲ್ಲಿದೆ. ಬಹುಶಃ ಇವರೇ ದೇವಾಲಯದ ನಿರ್ಮಾತೃಗಳಿರಬೇಕು. ಮಂತ್ರಿಯಂತೆ ಕಾಣುವ ಮತ್ತೊಂದು ಕೆತ್ತನೆ ಮತ್ತೊಂದು ಕಂಬದಲ್ಲಿದೆ.

ಗರ್ಭ ಗುಡಿಯ ಪೂರ್ವದಲ್ಲಿ – ನೇರಕ್ಕೆ ಸುಮಾರು ಹದಿನೈದು ಅಡಿಯ ಧ್ವಜಸ್ತಂಭ, ನಂದಿ ವಿಗ್ರಹ, ಹಿಂದಿ ಎಂಟು, ಎಂಟು ಅಡಿಯ ಒಂದು ಮಂಟಪ ಇದ್ದು, ಖಾಲಿ ಬಿದ್ದಿದೆ.

ಇವೆಲ್ಲದರ ಅವಲೋಕನದಿಂದ ಈ ಕೆಳಗಿನ ತೀರ್ಮಾನಕ್ಕೆ ಬರಬಹುದು.

(1) ಅಂತಹ ನುರಿತ ಶಿಲ್ಪಿಗಳಿಂದ ಇದು ರಚಿತವಾಗಿಲ್ಲ.

(2) ಯಾವುದೋ ಅಜ್ಞಾತ ಕಾರಣಕ್ಕಾಗಿ, ಆತುರಾತುರವಾಗಿ ದೇವಾಲಯದ ರಚನೆ ಪೂರ್ತಿಯಾಗಿರಬೇಕು. ಎಲ್ಲಿಯೂ ಕುಸುರಿ ಕೆಲಸವಾಗಲೀ, ಸದೃಢ ಕಾಯವಾಗಲೀ ಕಂಡುಬರುವುದಿಲ್ಲ.

(3) ಕುಸುರಿ ಕೆಲಸ ಕೈಗೆತ್ತಿಕೊಳ್ಳುವ ಮೊದಲೇ ನಿರ್ಮಾಣ ಕಾರ್ಯ ನಿಂತಿದೆ. ಇದಕ್ಕೆ ಮುಖ್ಯ ದೇವಾಲಯದ ಪಶ್ಚಿಮ ಮತ್ತು ಉತ್ತರ ಭಾಗದಲ್ಲಿ ಮೇಲೆ ಕಟ್ಟಿರುವ, ಅರ್ಧಂಬರ್ಧವಾದ ಮಂಟಪಗಳೇ ಸಾಕ್ಷಿ.

(4) ಯಾವುದೇ ಸಣ್ಣ ದೇವಾಲಯವಾದರೂ, ಅದು ಪ್ರಾರಂಭವಾದಾಗ ಒಂದು ಶಾಸನ ದೊರಕುತ್ತದೆ. ಆದರೆ ಇಷ್ಟು ಬೃಹತ್ತಾದ ರಚನೆಯಲ್ಲಿ, ಎಲ್ಲೂ ಅದರ ಬಗ್ಗೆ ಉಲ್ಲೇಖವಿಲ್ಲ.

(5) ಸ್ಥಳಿಯರು ನಂಬುವಂತೆ ಈ ದೇವಾಲಯದ ಮೇಲೆ ಪರಕೀಯರ ದಾಳಿ ನಡೆಯಿತು, ಆದರೆ ಅದರ ಕುರುಹುಗಳು ಎಲ್ಲೂ ಸಿಗದುದ್ದರಿಂದ, ಇದು ಸುಳ್ಳೆನಿಸುತ್ತದೆ.

ಅರುಣಾಚಲೇಶ್ವರನ ಪಕ್ಕದಲ್ಲೇ ಪಾರ್ವತೀ ದೇವಿಗೆ ಗುಡಿ ಕಟ್ಟಲಾಗಿದೆ. ಕರಿಶಿಲೆಯ, ಮೂರಡಿ ಎತ್ತರದ ವಿಗ್ರಹ ಸುಂದರ.

ಸದ್ಯಕ್ಕೆ ದೊರೆಯುವ ಮಾಹಿತಿಯೆಂದರೆ, ಊರಿನ ಹಿರಿಯರಾದ ಶ್ರೀ. ಹೆಚ್.ಎಸ್. ದೊರೆಸ್ವಾಮಿ, ಹಿರಿಯ ಸ್ವಾತಂತ್ರ್ಯ ಹೋರಾಟಗಾರರು, ಶ್ರೀ ವೆಂಕಟೇಶ ಅಯ್ಯರ್, ಶ್ಯಾನುಭೋಗರು, ಇವರೂ ಸಹ ತಮ್ಮ ಹಿರಿಯರಿಂದ ಕೇಳಿದ ಕತೆಗಳೇ. ಮೊದಲು ಇಲ್ಲಿ ಬ್ರಾಹ್ಮಣರ ಪ್ರಾಬಲ್ಯವಿದ್ದುದರಿಂದ ಹಾರುವರಹಳ್ಳಿ ಹಾರೋಹಳ್ಳಿಯಾಯಿತು.

ಪ್ರಚಲಿತ ಕತೆಯಂತೆ, ದೇವಸ್ಥಾನದ ರೂವಾರಿ ಬ್ರಾಹ್ಮಣ ಜನಾಂಗದ ವೆಂಕಟಯ್ಯ. ಈತನ ಮೂಲಸ್ಥಳ ಹಿಂದಿನ ಮದ್ರಾಸ್ ರಾಜ್ಯದ ಆರ್ಕಾಟ್ ಜಿಲ್ಲೆಯ ವಿಲ್ಲಿಪುರಂ ತಾಲೂಕಿನ ಪಾನಂಪಟ್ ಎಂಬ ಗ್ರಾಮ. ಆಗ ಆರ್ಕಾಟಿನ ಮೇಲೆ ದಾಳಿ ಮಾಡಿದ್ದ ಹೈದರಾಲಿ, ಈತನಿಂದ ಯಾವುದೋ ಸಹಾಯ ಪಡೆದಿದ್ದು, ಆಗ ತಾಲ್ಲೂಕಿನ ಮುಖ್ಯ ಕೇಂದ್ರವಾಗಿದ್ದ ಈ ಗ್ರಾಮಕ್ಕೆ ಸುಬೇದಾರನನ್ನಾಗಿ ನೇಮಿಸಿದ. ಸುಬೇದಾರ ವೆಂಕಟಯ್ಯ ತನ್ನ ಬಂಧು ಬಾಂಧವರನ್ನೆಲ್ಲಾ ಇಲ್ಲಿಗೇ ಕರೆಸಿಕೊಂಡನು. ತನ್ನ ಆರಾಧ್ಯದೈವ "ತಿರುಚಿನಾಪಳ್ಳಿಯ ಅರುಣಾಚಲೇಶ್ವರನ" ದರ್ಶನಕ್ಕೆ ಹೋಗಲು ತೊಂದರೆಯಾದ್ದರಿಂದ, ಇಲ್ಲಿಯೇ ಅದರ ಒಂದು ಪ್ರತಿಕೃತಿ ದೇವಾಲಯ ಕಟ್ಟಿಸಿದನು. ಅದೇ ಈ "ಅರುಣಾಚಲೇಶ್ವರ"

ದೇವಾಲಯ. ಇದರ ನಿರ್ಮಾಣಕ್ಕೆ, ರಾಜನಿಗೆ ಸಲ್ಲಬೇಕಾದ ಕಂದಾಯದ ಹಣವನ್ನೆಲ್ಲಾ ಬಳಸಿಕೊಳ್ಳಲು, ಇದು ರಾಜನಿಗೆ ತಿಳಿದು ಸುಬೇದಾರ್ ವೆಂಕಟಯ್ಯನಿಗೆ ಮರಣದಂಡನೆ ವಿಧಿಸಿದನೆಂದು, ಸ್ಥಳೀಯರು ಹಿರಿಯರಿಂದ ಕೇಳಿದ ಕತೆ ನೆನಪಿಸುತ್ತಾರೆ.

ಸುಬೇದಾರ್ ವೆಂಕಟಯ್ಯ ಇದರ ರೂವಾರಿ, 'ಆತ ರಾಜನಿಗೆ ಸೇರಬೇಕಾದ ಹಣವನ್ನು ದೇವಾಲಯದ ರಚನೆಗೆ ಬಳಸಿದ – ಎಂಬುದನ್ನು ನಂಬಿದರೂ, ರಾಜನಿಂದ ಮೃತ್ಯುದಂಡಕ್ಕೆ ಒಳಗಾದನೆಂದರೂ, ಮುಂದೆ ಹೈದರಾಲಿಯಾಗಲೀ, ಟಿಪ್ಪುವಾಗಲೀ ದೇವಾಲಯದ ಮೇಲೆ ದಾಳಿ ಮಾಡಿದ್ದು ಮಾತ್ರ ಸುಳ್ಳೆನಿಸುತ್ತದೆ. ಬೇರೆ ಮುಸಲ್ಮಾನ ನವಾಬರಂತೆ ಇವರು ಹಿಂದೂ ದೇವಾಲಯಗಳ ಮೇಲೆ ದಾಳಿ ಮಾಡಿದುದಾಗಿ ಎಲ್ಲೂ ಪುರಾವೆ ಸಿಗುವುದಿಲ್ಲ. ಈ ಎಲ್ಲಾ ಕಾರಣಗಳಿಂದ ಈ ತೀರ್ಮಾನಕ್ಕೆ ಬರಬಹುದು.

(1) ಹಣದ ಅಡಚಣೆ

(2) ರಾಜನಿಂದ ದಂಡನೆ ಖಂಡಿತವೆಂದು ಭಾವಿಸಿ, ಆತುರಾತುರವಾಗಿ ದೇವಾಲಯದ ಮೂಲ ವಿಗ್ರಹ ಪ್ರತಿಷ್ಠಾಪಿಸಿ, ನಂತರ ಉಳಿದ ಕಾರ್ಯ ಮಾಡಬಹುದೆಂಬ ಮನೋಭಾವ, ಪ್ರಸ್ತುತ ನಿರ್ಮಾಣದಲ್ಲಿ ಕಂಡು ಬರುತ್ತದಲ್ಲದೇ, ಪರಕೀಯರ ದಾಳಿಯಲ್ಲ. ಇಡೀ ದೇವಾಲಯ ಕಲ್ಲಿನ ರಚನೆಯಿದ್ದು, ದೇವಾಲಯದ ಪ್ರಾಂಗಣದಲ್ಲಿ ಒಂದು ಪುಷ್ಕರಿಣಿಯಿತ್ತೆಂದೂ ಅಭಿಪ್ರಯ ಪಡುತ್ತಾರೆ. ಅದೇ ಜಾಗದಲ್ಲಿ ನೀರಿಗಾಗಿ ತೋಡಿದಾಗ ಒಂದು ಈಶ್ವರ ಲಿಂಗದ ಸುಂದರ ಪಾಣಿಪೀಠ ದೊರಕಿದೆ, ಇಲ್ಲಿ ಮತ್ತಷ್ಟು ಶೋಧನೆ ನಡೆದರೆ ಇತಿಹಾಸದ ಮರೆತ ಪುಟಗಳು ನಿಚ್ಚಳವಾಗಬಹುದು.

ತಿರುವಣ್ಣಾಮಲೆಯ ಅರುಣಾಚಲೇಶ್ವರ ದೇವಾಲಯದ ಒಂದು ಶಿಲಾ ಶಾಸನದಲ್ಲಿ, ಹಾರೋಹಳ್ಳಿಯ, ಅರುಣಾಚಲೇಶ್ವರ ದೇವಸ್ಥಾನದ ಉಲ್ಲೇಖವಿರುವುದಾಗಿ ಹಿರಿಯರು ಇಂದೂ ಹೇಳುತ್ತಾರೆ. ಅದರ ಬಗ್ಗೆಯೂ ವಿವರ ದೊರಕದು.[18] ದೇವಾಲಯಗಳು ಅತ್ಯಂತ ಪುರಾತನವಾದರೂ ಅವುಗಳ ಬಗ್ಗೆಯೂ ಯಾವುದೇ ನಿಚ್ಚಳ ವಿವರಣೆ ದೊರೆಯುತ್ತಿಲ್ಲ. ಮೊದಲನೆಯದು ಶ್ರೀ ಭೀಮೇಶ್ವರ ದೇವಾಲಯ ಇದು ಊರಿನ ಪಶ್ಚಿಮ ದಿಕ್ಕಿನಲ್ಲಿದ್ದು, ಕನಕಪುರ ರಸ್ತೆಯ ಭತ್ತದ ಗದ್ದೆಗಳ ಮಧ್ಯವಿದೆ.

ಇಲ್ಲಿ ಯಾವ ಶಿಲ್ಪಕಲಾ ವೈಭವವೂ ಇಲ್ಲದೆ ಸದ್ಯ ಪಾಳುಬಿದ್ದ ಪ್ರಾಕಾರದಲ್ಲಿ ನಿಂತ ಒಂದು ಸಾಧಾರಣ ಕಲ್ಲಿನ ಕಟ್ಟಡ. ಸುಮಾರು ನಾಲ್ಕು ಅಡಿ ಎತ್ತರದ ಲಿಂಗ ಒಬ್ಬರು ತಬ್ಬಲಾಗದಷ್ಟು ಗಾತ್ರದ ಕರಿಶಿಲೆಯ ಲಿಂಗದಿಂದ ಭೀಮೇಶ್ವರನೆಂಬ ಹೆಸರು. ಇದು ಉದ್ಭವ ಮೂರ್ತಿಯೆಂದೂ,

ಬೆಳೆಯುತ್ತಿದೆಯೆಂದೂ ಪ್ರತೀತಿ. ಸದ್ಯಕ್ಕೆ ಇದರ ಪಾಣಿ ಪೀಠ ಗೋಚರಿಸುತ್ತಿಲ್ಲ. ನೆಲ ಮಟ್ಟದಿಂದ ಒಳಗಿರಬಹುದೆಂಬ ಅನುಮಾನ, ಇದರ ಉದ್ದವೇ ಸುಮಾರು ಎಂಟು ಅಡಿಯಿದ್ದು ಅದನ್ನು ನೋಡಬಹುದು. ಸದ್ಯಕ್ಕೆ ಇದು ನೆಲದ ಮೇಲಿಟ್ಟ ಲಿಂಗದಂತಿದೆ. ಅಗಾಧ ಆಕಾರವಿದೆ. ದೇವಾಲಯದ ಹೊರಗೆ ಎಡಭಾಗದಲ್ಲಿ ಇಂದಿಗೂ ಇರುವ ಪುಷ್ಕರಿಣಿ, ಅಶ್ವತ್ಥ ಕಟ್ಟೆ ನಿಧಾನವಾಗಿ ಅವಸಾನ ಹೊಂದುತ್ತಿವೆ. ದೇವಾಲಯ ದಿಬ್ಬದ ಮೇಲಿರುವುದರಿಂದ, ದೇವಾಲಯದ ಅನೇಕ ಕುರುಹುಗಳೂ ಇರಬಹುದೆಂದು ಭಾವಿಸಲಾಗಿದೆ. ದೇವಾಲಯದ ಒಳಗೆ ಪಾರ್ವತಿ ದೇವಿಯ ಸಣ್ಣ ಗುಡಿಯಿದ್ದು ವಿಗ್ರಹ ಸುಂದರವಾಗಿದ್ದು, ಇತ್ತೀಚಿನದಾಗಿದೆ.

ಮತ್ತೊಂದು ಜನಪ್ರಿಯ ದೇವಸ್ಥಾನ ಶ್ರೀಚಾಮುಂಡೇಶ್ವರಿ ಅಮ್ಮನವರದು. ಊರ ದೇವತೆಯಾದ ಈಕೆಯ ದೇವಸ್ಥಾನವೂ ಸಹ ಸುಮಾರು ನೂರೈವತ್ತು ವರ್ಷಗಳ ಇತಿಹಾಸ ಹೊಂದಿದೆ. ಪ್ರತೀವರ್ಷವೂ ಕಾಮನ ಹುಣ್ಣಿಮೆಯಿಂದ ಪ್ರಾರಂಭವಾಗುವ ಒಂದು ವಾರ ನಡೆಯುವ ಜಾತ್ರೆ ಸಾಕಷ್ಟು ಪ್ರಸಿದ್ಧಿ ಹೊಂದಿದೆ. ಸುಮಾರು ಮೂರು ಅಡಿ ಎತ್ತರವಿರುವ ಮಹಿಷ ಮರ್ದಿನಿಯ ವಿಗ್ರಹ ಸುಂದರವಿದ್ದು, ಸದ್ಯಕ್ಕೆ ಅಪಾರ ಭಕ್ತಾದಿಗಳಿಗೆ ನೆಮ್ಮದಿಯ ತಾಣವಾಗಿದೆ.

ಇಲ್ಲಿ ಯಾವುದಕ್ಕೂ ಶಾಸನವಾಗಲೀ, ಲಿಖಿತ ಪುರಾವೆಗಳಾಗಲೀ ಸಿಗದಿರುವುದೊಂದು ದೊಡ್ಡ ಕೊರತೆ, ದೇವಾಲಯದ ಪೂಜಾ ವೆಚ್ಚಕ್ಕೆಂದು ಬಿಟ್ಟ ಭೂಮಿಗಳನ್ನು, ಗೇಣೀದಾರರಿಗೇ ಸರ್ಕಾರ ಹಂಚಿದ್ದರಿಂದ ದೇವಾಲಯಗಳ ಮೇಲ್ವಿಚಾರಣೆಗೆ ತೊಂದರೆಯಾಗಿ, ಅರ್ಧಾಂಶ ಪಾಳು ಬಿದ್ದಿವೆ, ಇನ್ನಾದರೂ ಇವು ಉಚ್ಛ್ರಾಯಕ್ಕೆ ಬರಲಿ.

ಕಾನಕಾನಹಳ್ಳಿಯ ದೇವಾಲಯಗಳು

ಕಾನಕಾನಹಳ್ಳಿಯ ಕೋಟೆಯ ಪ್ರದೇಶದ ಕೇಂದ್ರವೆಂದರೆ, ಇಲ್ಲಿಯ ರಂಗನಾಥಸ್ವಾಮಿ ದೇವಾಲಯ. ವಿಜಯನಗರ ಸಂಸ್ಥಾನಿಕರ ಆಶ್ರಿತರ ಕಾಲದಲ್ಲಿ ನಿರ್ಮಾಣವಾಗಿರಬಹುದಾದ ಈ ದೇವಾಲಯದ ಬಗೆಗೆ ಐತಿಹಾಸಿಕವಿವರಗಳನ್ನು ತಿಳಿದುಕೊಳ್ಳಲು ಶಾಸನಗಲ ಸಾಕ್ಷ್ಯವಾಗಲಿ, ಕಡೆಗೆ ಹಳೆಯ ಗ್ರಾಂಥಿಕ ಸಾಕ್ಷ್ಯಗಳಾಗಲಿ ಇಲ್ಲದಿರುವುದು ದೊಡ್ಡ ತೊಡಕಾಗಿದೆ.

ರಂಗನಾಥಸ್ವಾಮಿ ದೇವಾಲಯ ಒಂದು ವಿಶಾಲ, ಭವ್ಯ ದೇವಾಲಯ, ವಿಸ್ತಾರವಾದ ಒಳಪ್ರಕಾರ, ರಾಯಗೋಪುರವಿರುವ ಮಹಾದ್ವಾರ ಅದರ ಭವ್ಯತೆಯನ್ನು ಬೆಳೆಸಿವೆ. ಮುಖಮಂಟಪದ ಮೇಲುಗಡೆ ಸಾಲಾಗಿ ತೋರಣಮಾಲೆಯಂತಿರುವ ಗೂಡುಗಳಲ್ಲಿ ದಶಾವತಾರದ ಗಾರೆಯ ಮೂರ್ತಿಗಳು. ಮಂಟಪದ ಸ್ತಂಭಗಳು ವಿಜಯನಗರಶೈಲಿಯಲ್ಲಿವೆ. ಬಲಭಾಗ್ಕೆ ಇರುವ ಕೋಣೆಯಲ್ಲಿ ರಾಮ ಲಕ್ಷ್ಮಣ

ಸೀತೆಯರ ವಿಗ್ರಹಗಳಿವೆ. ಇದಕ್ಕೆ ಎದುರಾಗಿ, ಕುಳಿತ ಭಂಗಿಯಲ್ಲಿ ಇರುವ ಆಂಜನೇಯನ ಗುಡಿ. ನವರಂಗದೊಳಗೆ ಕುಳಿತ ಭಂಗಿಯ ವಿಷ್ಣುವಿನ ಮೂರ್ತಿ, ಶಂಖ ಚಕ್ರ ಗದಾ ಅಭಯಹಸ್ತಧರವಾದ್ದು, ಉಂಟು. ಬಹುಶಃ ಇದೇ ಮುಖ್ಯ ದೇವತಾವಿಗ್ರಹ ಎಂಬ ಅಭಿಪ್ರಾಯವೂ ಇದೆ. ಏಕೆಂದರೆ ಸ್ಥಳವಂದಿಗರು ಮೂಲಮೂರ್ತಿ ಭಗ್ನಗೊಂಡುದು ಕಾರಣವಾಗಿ ಈಗಿರುವ ಶ್ರೀನಿವಾಸನ ಮೂರ್ತಿ ಪ್ರತಿಷ್ಠಿತವಾಗಿದೆ ಎಂದು ಹೇಳುತ್ತಾರೆ. ಮಧ್ಯದ ಗರ್ಭಗೃಹಕ್ಕೆ ಒಂದು ಶಲಶಿಖರವುಂಟು. ಮೂರ್ತಿಗಳಿಲ್ಲದ ಗೂಡುಗಳಿರುವ ಅರ್ಧಮಂಟಪವೂ ಉಂಟು. ಮುಖ್ಯ ಪೂಜಾಸ್ಥಾನವೇ ಅಲ್ಲದೆ ಹೊರಗೆ ಬಲಭಾಗದಲ್ಲಿ ಈಚಿನ ಕಾಲದ್ದಾಗಿ ತೋರುವ ರಂಗನಾಥ ಸ್ವಾಮಿಯ ಮೂರ್ತಿಯನ್ನೂ ಕಾಣಬಹುದಾಗಿದೆ. ಮುಖ್ಯದೇವಾಲಯದ ಎಡಭಾಗದಲ್ಲಿ ಪದ್ಮಾವತಿಯ ಇನ್ನೊಂದು ಗುಡಿಯಿದ್ದು, ಅದಕ್ಕೆ ಒಂದು ಸಣ್ಣ ಅರ್ಧಮಂಟಪ ನವರಂಗಗಳು ಸೇರಿವೆ.

ಕೋಟೆ ರಂಗನಾಥ ಸ್ವಾಮಿ ದೇವಾಲಯ

ಮೈಸೂರು ಪುರಾತತ್ತ ಇಲಾಖೆಯ ಒಂದು ವರದಿಯಲ್ಲಿ (MAR : 1938, pb. 1940, pp. 44-45) ಈ ದೇವಾಲಯದ ವಿವರಗಳು ಸ್ವಲ್ಪಮಟ್ಟಿಗೆ ಬಂದಿವೆ. ಅದರ ಪ್ರಕಾರ:

"ರಂಗನಾಥ ಸ್ವಾಮಿಯ ದೇವಾಲಯ ಒಂದು ಮಧ್ಯಮಪ್ರಮಾಣದ ನಿರ್ಮಾಣ. ಜಗದೇವರಾಯನ ಕಾಲಕ್ಕೆ ಸೇರಿದೆ. ಗರ್ಭಗೃಹ, ಮುಖಮಂಟಪ, ಅದರ ಮುಂದೆ ಹೆಚ್ಚಿನದೊಂದು ಅಂಕಣ ಮತ್ತು ನಾಲ್ಕು ಕಂಬಗಳ ನವರಂಗ ಉಂಟು. ಪ್ರದಕ್ಷಿಣಾಪಥವಿಲ್ಲ, ಅಷ್ಟಕೋನಾಕೃತಿಯ ಕಂಬಗಳ ಮೇಲೆ ನರಸಿಂಹ, ವಾಲಿ ಸುಗ್ರೀವರು, ಕೃಷ್ಣ ಮೊದಲಾದ ಕೆತ್ತನೆಗಳ ಶಿಲ್ಪಗಳುಂಟು. ವಿಶ್ವಕ್ಸೇನ ಮತ್ತು ಆಳ್ವಾರರ ಶಿಲಾಮೂರ್ತಿಗಳನ್ನೂ ಕೋದಂಡರಾಮ ಲಕ್ಷ್ಮಣ ಮತ್ತು ಸೀತೆಯರ ಲೋಹಪ್ರತಿಮೆಗಳನ್ನೂ ನವರಂಗದಲ್ಲಿರಿಸಲಾಗಿದೆ. ಇದೇ ತೆರನಾದ ಸ್ತಂಭಗಳನ್ನು ಮುಖಮಂಟಪದಲ್ಲಿ ಕೂಡ ಕಾಣಬಹುದಾಗಿದೆ. ಅಲ್ಲದೆ ಶ್ರೀನಿವಾಸ, ವರದರಾಜ ಮತ್ತು ಕೋದಂಡರಾಮ ದೇವತಾವ್ಯೂಹದ ಹಲವು ಲೋಹಪ್ರತಿಮೆಗಳನ್ನೂ ಕಾಣಬಹುದಾಗಿದೆ.

ಮುಖ್ಯವಾದ ಗುಡಿಗೆ ಬಲಮಗ್ಗುಲಲ್ಲಿ ಒಂದು ಪ್ರತ್ಯೇಕವಾದ ಗುಡಿಯಿದ್ದು, ಅದರಲ್ಲಿ ರಂಗನಾಥನೆಂದು ಕರೆಯಲ್ಪಡುವ ಪದ್ಮನಾಭನ ಒಂದು ಸಾಮಾನ್ಯವಾದ ಮೂರ್ತಿಯಿದೆ. ಇದನ್ನು ಸುಮಾರು ವರ್ಷಗಳ ಹಿಂದೆ (ಎಂದರೆ ಸು. 19–07–08) ದೇವನಹಳ್ಳಿಯ ವೆಂಕಟಪ್ಪನೆಂಬುವನ್ನು ಕಂಡರಿಸಿದನು. ಎಡಮಗ್ಗುಲ ಗುಡಿಯಲ್ಲಿ ಕುಳಿತು ಭಂಗಿಯ ಲಕ್ಷ್ಮಿಯ ಮೂರ್ತಿಯಿದ್ದು. ಇದು ಕೂಡ ಒಂದು ಸಾಮಾನ್ಯವಾದ ರಚನೆ.

ರಂಗನಾಥ ಸ್ವಾಮಿಯ ಗುಡಿಯ ಮೂಲಮೂರ್ತಿ ಒಂದು ಸಾಧಾರಣ ಶಿಲ್ಪವಾಗಿರುವ ಶ್ರೀನಿವಾಸನದು. ಈ ಮೂರ್ತಿಯಿರುವ ಪೀಠ ವಿಶಾಲವಾಗಿರುವುದನ್ನು ನೋಡಿದರೆ, ಅಲ್ಲಿ ಮೂಲತಃ ಒಂದು ರಂಗನಾಥನ ಮೂರ್ತಿಯೇ ಇದ್ದಿರಬೇಕೆಂದು ತೋರುತ್ತದೆ. ಅದು ಈಗ ಕಾಣುತ್ತಿಲ್ಲ".

ಲಭ್ಯವಾದ ಆಕರಗಳಲ್ಲಿಯೂ ಸ್ಥಳವಂದಿಗರ ವ್ಯವಹಾರದಲ್ಲಿಯೂ ರಂಗನಾಥಸ್ವಾಮಿ ಗುಡಿಯೆಂದೇ ಪ್ರಸಿದ್ಧವಾಗಿದ್ದು ಕೂಡ, ಹೀಗೇಕೆ ಆಯಿತು? ಶ್ರೀನಿವಾಸನ ಪ್ರತಿಷ್ಠೆ ಆದುದು ಯಾವಾಗ?

ಗುಡಿಯ ಮೂಲಮೂರ್ತಿ ರಂಗನಾಥನ ವಿಗ್ರಹ, ಇನ್ನೂ ನಮಗೆ ಸ್ಪಷ್ಟವಾಗದ ಕಾರಣಗಳಿಂದ ಯಾವಾಗಲೋ ಭಿನ್ನವಾಗಿ, ಆ ವಿಗ್ರಹವಿದ್ದ ಪೀಠದಲ್ಲಿ ಶ್ರೀನಿವಾಸನ ಪ್ರತಿಷ್ಠೆಯಾದುದು ಬಹುಶಃ ಮೈಸೂರಿನ 1ನೆಯ ಅಥವಾ 2ನೆಯ ಕೃಷ್ಣರಾಜನ ಕಾಲದಲ್ಲಿ ಇರಬಹುದು (1713–32/1734–66). ಸ್ಥಳವಂದಿಗರು ಕೊಟ್ಟ ಮಾಹಿತಿಯ ಮೇಲೆ ಇದನ್ನೇ ಬುಕನನ್ ತನ್ನ ಪ್ರವಾಸ ಕಥನದಲ್ಲಿ "Krishnaraja of Mysore rebuilt the great temple of this palce" ಎಂದು ಹೇಳಿರಲೂ ಸಾಕು. ನದಿಗೆ ವಿಸರ್ಜನೆಗೊಂಡು ಎಲ್ಲಿಯೋ ಹುಗಿದುಹೋಗಿದ್ದು ಈಚೆಗೆ ಅರ್ಕಾವತಿಯ ದಂಡೆಯಲ್ಲಿ ಗೋಚರಿಸಿದ ಭಿನ್ನವಾದ ಸುಮಧುರ ಪ್ರಾಚೀನ ರಂಗನಾಥನ ವಿಗ್ರಹ ಈ ಗುಡಿಯ ಮೂಲಮೂರ್ತಿಯೇ ಇರಲೂಬಹುದು (ವಿವರಣೆಗೆ ನೋಡಿ: ಅಧ್ಯಾಯ 4, ಫ್ರಾನ್ಸಿಸ್ ಬುಕನನ್ ಕಾನಕಾನ ಹಳ್ಳಿಯಲ್ಲಿ ಎರಡು ದಿನ ಬಿಡಾರ ಮಾಡಿದ್ದು). ಈ ಮೂರ್ತಿಯನ್ನು ಈಗ ರಾಮನಗರ–ಚನ್ನಪಟ್ಟಣ ರಸ್ತೆಯ ಜಾನಪದ ಲೋಕದಲ್ಲಿ ಇರಿಸಲಾಗಿದೆ ಎಂದು ತಿಳಿದುಬರುತ್ತದೆ. ಇದರ ವೃತ್ತಾಂತ ಹೇಗೆ ಇರಲಿ, ಕೋಟೆಯ ರಂಗನಾಥಸ್ವಾಮಿ ದೇವಾಲಯ ಊರಿಗೆ ದೊಡ್ಡ ದೇವಾಲಯವೇ ಆಗಿದ್ದೂ, ಈ ಕೆಲವು ಕಾರಣಗಳಿಂದಾಗಿ ಮುಂದೆ ಕಳೆಗುಂದಿದ ಹಾಗೆ ಕಾಣುತ್ತದೆ.

ವಾರ್ಷಿಕಜಾತ್ರೆ ಯುಗಾದಿ ಮೊದಲುಗೊಂಡು 9 ದಿನಗಳ ಕಾಲ ನಡೆಯುತ್ತದೆ. ಈ ದನಗಳ ಜಾತ್ರೆಗೆ ತಾಲ್ಲೂಕುಸ್ಥಳಗಳಿಂದ ಮಾತ್ರವಲ್ಲದೆ ಬೇರೆ ಕಡೆಗಳಿಂದಲೂ ದನಗಳು ಪರಿಸೆಗೆ ಬರುತ್ತವೆ.

ಇನ್ನು ಕೋಟೆಯ ಗಣೇಶನ ಮತ್ತು ಕೋಟೆಯ ಸೆರಗಿನ ಭಾಗಕ್ಕೆ ಬರುವ ಕೋದಂಡರಾಮಸ್ವಾಮಿ ದೇವಾಲಯಗಳು. ಇವು ಚಟುವಟಿಕೆಯ ಕೇಂದ್ರಗಳು. ಇವು ಕೂಡ ವಿಜಯನಗರ ಶೈಲಿಯವು. ಕೋಟೆಬಾಗಿಲು ಆಂಜನೇಯ ದೇವಾಲಯ ಕೋದಂಡರಾಮಸ್ವಾಮಿ ದೇವಾಲಯಕ್ಕೆ ಮಗ್ಗುಲಲ್ಲಿರುವ ಒಂದು ಸಣ್ಣ ಗುಡಿ. ವಿದ್ಯಾಭ್ಯಾಸದ ಪ್ರಗತಿ, ಕಾರ್ಯಸಾಧನೆಯಕಾಂಕ್ಷೆ ಇವುಗಳಿಗೆ ಗಣೇಶನಿಗೆ ಹರಸಿಕೊಳ್ಳುವುದು, ಪೂಜೆ ಮಾಡಿಸುವುದು ಬಹು ಸಾಮಾನ್ಯ ವಿದ್ಯಮಾನ. ಕೋದಂಡ ರಾಮಸ್ವಾಮಿ ದೇವಾಲಯ ರಾಮೋತ್ಸವದ ವಿಶೇಷಸಂದರ್ಭದಲ್ಲಿ ಉತ್ಸವ ಮೂರ್ತಿಗಳ ಅಲಂಕಾರ ಮೆರವಣಿಗೆ ಸಲುವಾಗಿ ಎಂದಿನಿಂದಲೂ ಪ್ರಸಿದ್ಧವಾದ್ದು.

ದುರ್ಗೆಯನ್ನು ಹೋಲುವ ಒಳಕೋಟೆಮ್ಮನ (ಒಳಕೋಟೆಯಮ್ಮ) ಸಣ್ಣ ದೇವಾಲಯ ಕೋಟೆಯ ಒಳಗೆ ಬ್ರಾಹ್ಮಣಬೀದಿಗಳಲ್ಲಿ ಮಧ್ಯದ ಬೀದಿಯಲ್ಲೇ ಪ್ರತಿಷ್ಠಿತವಾಗಿರುವುದು ಒಂದು ವಿಶೇಷ. ಹಾಗಾಗಿಯೇ ಇದು ಒಳಕೋಟೆಮ್ಮ ಎನ್ನಿಸಿದೆ. ಇದು ಗ್ರಾಮದೇವತೆಯಾಗಿ ಪ್ರಸಿದ್ಧವಾದ್ದು. ಈ ಸಂಬಂಧವಾಗಿ ಉತ್ಸವದ ಆಚರಣೆ, ಕೊಂಡ ಹಾಯುವುದು ಮೊದಲಾದ ವಿಧಿಗಳು ನಡೆಯುತ್ತವೆ.[19] ರಂಗನಾಥ ಸ್ವಾಮಿಯ ದೇವಾಲಯಕ್ಕೆ ಎದುರೇ ಇರುವ ಈ ಗ್ರಾಮದೇವತೆಯ ಗುಡಿ ಒಂದು ರೀತಿಯಲ್ಲಿ ವೈದಿಕ ಮತ್ತು ಅವೈದಿಕ ಅಥವಾ ಶಿಷ್ಟ ಮತ್ತು ಗ್ರಾಮೀಣಸಂಸ್ಕೃತಿಗಳನ್ನು ಬೆಸೆದಿರುವ ಹಾಗೆ ತೋರುತ್ತದೆ. ಸ್ಥಳವಂದಿಗ ಒಕ್ಕಲುಜನ ಈ ದೇವತೆಗಳನ್ನು ಅಣ್ಣ–ತಂಗಿ ಎಂದೇ ಭಾವಿಸುತ್ತಾರೆ. ಹೀಗೆಯೇ ಹಲಸಿನ ಮರದ ದೊಡ್ಡಿಗೂ ಕುರುಪೇಟೆಗೂ ನಡುವೆ ಈಗ ವಿಶಾಲವಾದ ಆವರಣದಲ್ಲಿರುವ ಕೆಂಕೇರಮ್ಮನ ದೇವಾಲಯ 200 ವರ್ಷಗಳಷ್ಟು ಹಳೆಯದು ಎನ್ನುತ್ತಾರೆ. ಈ ದೇವಾಲಯ ಸಹ ಒಂದು ಗ್ರಾಮದೇವತೆಯ ಗುಡಿಯೇ ಆಗಿದ್ದು, ಇದಕ್ಕೆ ಹೆಚ್ಚಿನ ಪ್ರಾಶಸ್ತ್ಯ ಪ್ರಸಿದ್ದಿಗಳಿವೆ. ಉತ್ಸವ ಜಾತ್ರೆಗಳೆಲ್ಲ ಹೆಚ್ಚು ವೈಭವಗಳಿಂದ ನಡೆಯುತ್ತವೆ. ಮೊದಲು ಗೋಲಾಕೃತಿಯ ಮೂರು ಶಿಲೆಗಳ ರೂಪದಲ್ಲಿದ್ದು ಈಗ ಅವುಗಳ ಜೊತೆಗೆ ಒಳಕೋಟೆಮ್ಮನನ್ನು ಹೋಲುವ ಸ್ತ್ರೀ ವಿಗ್ರಹ ಪೂಜೆಗೊಳ್ಳುತ್ತಿದೆ.

ಹೀಗೆಯೇ ಕುರುಪೇಟೆಯ ಕೋಲ್ಲಾಪುರದಮ್ಮನ ಜಾತ್ರೆ ಉತ್ಸವಗಳೂ ಆ ಭಾಗದ ಜನ ಅತಿಶಯ ಮಹತ್ತದ್ದಾಗಿದೆ. ಕೊಲ್ಲಾಪುರದ ಮಹಾಲಕ್ಷ್ಮಿಯ ಪ್ರಸಿದ್ಧಿ ವ್ಯಾಪ್ತಿಗಳನ್ನು ಗುರುತಿಸುವ ಒಂದು ಸಾಕ್ಷ್ಯವಿದು.

ಕನಕಪುರದ ಪೇಟೆಯ ಭಾಗದಲ್ಲಿ ಸಹ ಈಚೆಯ ಕಾಲದ ಕೆಲವು ಸಣ್ಣ ಗುಡಿಗಳುಂಟು. ಪೇಟೆಯ ವಿಟ್ಠಲದೇವಾಲಯ, ಕಲ್ಯಾಣಿಯ ಕಮಲೇಶ್ವರ ದೇವಾಲಯ, ಬಾಣಂತಿ ಮಾರಮ್ಮನ ಗುಡಿ ಇವುಗಳಲ್ಲಿ ವಿಠ್ಠಲ ದೇವಾಲಯ ಪಾಂಡುರಂಗನ ಭಕ್ತರಾದ ಮರಾಠಿ ಮನೆಮಾತಿನ ವ್ಯಾಪರಿವೃತ್ತಿಯ ಸಮುದಾಯಕ್ಕೆ ಆರಾಧ್ಯದೈವ. ಹೊಳೆಕಟ್ಟೆಯ ಆಂಜನೇಯ ದೇವಾಲಯ 500 ವರ್ಷಗಳ ಹಿಂದೆ ವ್ಯಾಸರಾಯರಿಂದ ಪ್ರತಿಷ್ಠಿತವಾದ್ದು ಎನ್ನುತ್ತಾರೆ. (ತತ್ತಚಂದ್ರಿಕಾ, ಅ.ನ. 2003).

ಕಾನಕಾನ ಹಳ್ಳಿಯ ಅರ್ಕಾವತೀನದಿಗೆ ಒತ್ತಿನಲ್ಲಿರುವ ದೇಗುಲಮಠ ಒಂದು ವೀರಶೈವಮಠವಾಗಿದ್ದು, ಗುರುತಿಸಬಹುದಾದ ಒಂದು ಇತಿಹಾಸವುಳ್ಳುದಾಗಿದೆ. ಇದು ಮೈಸೂರು ಒಡೆಯರ ಕಾಲದಲ್ಲಿ ಪೋಷಣೆ ಪಡೆದ ಸಂಗತಿ, ಅದು ಧಾರ್ಮಿಕ ಮತ್ತು ವಿದ್ಯಾಕೇಂದ್ರವಾಗಿ ಬೆಳೆದ ಸಂಗತಿ ಇವನ್ನು ಪ್ರತ್ಯೇಕವಾದ ಭಾಗಗಳಲ್ಲಿ ನಾವು ನೋಡಬಹುದಾಗಿದೆ.

ಕಾನಕಾನಹಳ್ಳಿಯ ಕೋಟೆಯಲ್ಲಿ ಬ್ರಾಹ್ಮಣಸಮುದಾಯ ವಾಸಮಾಡುತ್ತಿದ್ದುದು ಕಾರಣವಾಗಿ ಇಲ್ಲಿ ಒಂದು ಸಂಸ್ಕೃತ ಪಾಠಶಾಲೆಯನ್ನು ನಡೆಸಲಾಗುತ್ತಿದ್ದಿತು ಎಂದು ಈ ಪಾಠಶಾಲೆಯಲ್ಲಿ ಕಾನಕಾನ ಹಳ್ಳಿ ನಾರಾಯಣ ಶಾಸ್ತ್ರಿ, ಕರಾಳಭಟ್ಟ ಲಕ್ಷ್ಮೀನರಸಿಂಹ ಶಾಸ್ತ್ರಿ, ಕಾನಕಾನ ಹಳ್ಳಿ ನರಸಿಂಹ

ಶಾಸ್ತ್ರಿ ಮೊದಲಾದವರು ತಮ್ಮ ಆರಂಭಕಾಲದ ಸಂಸ್ಕೃತಶಿಕ್ಷಣವನ್ನು ಪಡೆದವರೆಂದು ಡಾ. ಟಿ.ವಿ.ವಿ. ತಿಳಿಸುತ್ತಾರೆ. ಈಗ ಕೆಲವು ವರ್ಷಗಳಿಂದ ಕಾರ್ಯತತ್ಪರವಾಗಿರುವ ಶ್ರಿಮತಸ್ಥ ಬ್ರಾಹ್ಮಣಸಭೆ ತನ್ನದೇ ಕಟ್ಟಡ ಸಮುಚ್ಚಯವನ್ನು ಹೊಂದಿದ್ದು, ನಿರಂತರವಾಗಿ ಧಾರ್ಮಿಕ ಸಾಂಸ್ಕೃತಿಕ ಕಾರ್ಯಗಳಲ್ಲಿಯೂ ವೈದಿಕವಿದ್ಯಾಭ್ಯಾಸದ ಪ್ರಸಾರದಲ್ಲಿಯೂ ತನ್ನನ್ನು ತೊಡಗಿಸಿ ಕೊಂಡಿದೆ. ಉತ್ಸಾಹಶಾಲಿಯಾದ ಯುವಕರ ಸೇವೆ, ಹಿರಿಯರ ಮಾರ್ಗದರ್ಶನ ಸಭೆಯನ್ನು ಚೆನ್ನಾಗಿ ಮುನ್ನಡಸುತ್ತಿದೆ.

ಈ ವಿಷಯದಲ್ಲಿ 'ಕಾನಕಾನಹಳ್ಳಿ ಪರಿಚಯ' (1897) ಕೃತಿಕರ್ತರಾದ ವೇ॥ ರಾಮನಾಥ ಶಾಸ್ತ್ರಿಗಳು ಕೊಡುವ ವಿವರಗಳನ್ನು ಇಲ್ಲಿ ಉಲ್ಲೇಖಿಸಬಹುದಾಗಿದೆ.

"(ಈ) ಹಳ್ಳಿಯಲ್ಲಿ ಅನೇಕ ಜನ ಶ್ರೇಷ್ಠಪಂಡಿತರಿದ್ದಾರೆ. ವ್ಯಾಕರಣದ ವೇದಮೂರ್ತಿ ಪಂಡಿತರು ಶ್ರೇಷ್ಠಪಂಡಿತರ್ಳೊಬ್ಬರು. ಇವರ ಮನೆಯಿಂದಲೇವೂರು ಆರಂಭವಾಗುತ್ತದೆ. ಇದೆ ರೀತಿಯಾಗಿರುವ ಮತ್ತೊಮ್ಮ ಶ್ರೇಷ್ಠಪಂಡಿತರೆಂದರೆ ವೇ॥ ನಾರಾಯಣ ಶಾಸ್ತ್ರಿಗಳು. ಇವರು ಸನಾತನಧರ್ಮಶ್ರದ್ಧಾನಿರತರು, ಜಿಜ್ಞಾಸುಗಳು. ಇವರು ಈಗ ಬೆಂಗಳೂರಿನ ಅರಳೇಪೇಟೆಯಲ್ಲಿ ನೆಲಸಿದ್ದಾರೆ. ಅನೆಕ ಶ್ರೇಷ್ಠ ಪಂಡಿತರು ಅನೇಕ ರೀತಿಯ ರಚನೆಗಳಿಂದ ರಾಜಾಶ್ರಯವನ್ನು ಪಡೆದು ಮುಮ್ಮಡಿ ಬಹುಮಾನಿತರಗಿರುವವರಿದ್ದಾರೆ. ಅಲ್ಲದೆ ನನ್ನ ತಾತನವರೂ ಕೂಡ ಮುಮ್ಮಡಿ ಕೃಷ್ಣ ಪ್ರಭುಗಳ ಆಶ್ರಯ ಹೊಂದಿದವರಾಗಿರುತ್ತಾರೆ.

ಈ ಹಳ್ಳಿಯಲ್ಲಿ ಅನೇಕ ದೇವಾಲಯಗಳು, ಮಠಗಳು ಇವೆ. ಮಠಗಳಲ್ಲಿ ದೇವಲಮಠವು ಪ್ರಸಿದ್ಧಿಯ್ನನು ಪಡೆದಿವೆ. ಇಲ್ಲಿನ ಸ್ವಾಮಿಗಳು ಪರಮತಪಸ್ವಿಗಳು, ಮಹಾಮಹಿಮರು ಆಗಿದ್ದರು. ಈ ಸ್ವಾಮಿಗಳು ನಿರ್ವಾಣಸ್ವಾಮಿಗಳೆಂದು ಖ್ಯಾತಿ ಪಡೆದಿದ್ದರು. ಅರ್ಕಾವತೀ ತೀರದಲ್ಲಿನ ಪ್ರಕೃತಿರಮ್ಯವಾದ ಪ್ರದೇಶದಲ್ಲಿರುವ ಈ ಮಠಕ್ಕೆ ಅನೇಕ ಭಕ್ತರು ಇದ್ದಾರೆ. ದೂರದೂರ ಪ್ರದೇಶಗಳಿಂದ ಭಕ್ತರು ಆಗಮಿಸುತ್ತಿರುತ್ತಾರೆ.

ಈ ಊರಿನ ವಾಯವ್ಯದಿಕ್ಕಿನಲ್ಲಿ ಚನ್ನಕೇಶವ ದೇವಲವಿತ್ತೆಂದೂ ತುಂಬಾ ದೊಡ್ಡದಾಗಿತ್ತೆಂದೂ ಆ ಹಿರಿಯರು ಹೇಳುತ್ತಾರೆ. ಇದು ಯಾವುದೋ ವಿಚಾರಿಸಲಾಗಿ ತಿಳಿದುಬರಲಿಲ್ಲ, ಅವಶೇಷಗಳು, ಗುರುತುಗಳು, ಕಾಣಲಿಲ್ಲ. ಆದರೆ ದೇಗುಲ ಇತ್ತೆಂದು ತಿಳಿಯಲು ಶಿಥಿಲಮಂಟಪವೊಂದಿದೆ.

ಇಲ್ಲಿ ಸುತ್ತಮುತ್ತಲಿನ ಸೌಂದರ್ಯ ಅತ್ಯಂತ ಮೋಹಕವಾಗಿರುತ್ತದೆ. ನಡುನಡುವೆ ಹೊಲಗದ್ದೆಗಳೂ ತೆಂಗಿನ ಮರಗಳೂ ಇದ್ದು ಅತ್ಯಂತ ಸುಂದರವಾಗಿದೆ.

ಇದೇ ಊರಿನ ಮತ್ತೊಂದು ದೇವಾಲಯ ರಾಮೇಶ್ವರನದು. ಇದು ಕಾನಕಾನ ಹಳ್ಳಿ ವೂರಿನಿಂದ 5ಮೈಲಿ ದೂರದಲ್ಲಿದೆ. ಅತ್ಯಂತ ಶಿಥಿಲವಾಗಿರುತ್ತದೆ. ಸುಂದರವಾದ ಶಿವಲಿಂಗವಿರುತ್ತದೆ. ಇದು ಬಹಳ ಹಳೆಯದೆಂದು ತಿಳಿದುಬರುತ್ತದೆ. ಇತರ ಸಣ್ಣವಾದ ಅನೇಕ ಗುಡಿಗಳಿವೆ.

ಒಂದೆರಡು ಬಸ್ತಿಗಳೂ ಮಂದಿರಗಳೂ ಇವೆಯೆಂದು ತಿಳಿದುಬರುತ್ತದೆ. ನಾನು ಹೋಗಿ ನೋಡಿದಾಗ ಅವುಗಳ ಊರಾಚೆ ಇರುವುವು. ಅದೊಂದೆ ಊರಿನಿಂದ ಐದು ಮೈಲಿ ದೂರವಿರುವುದು. ಇಲ್ಲಿರುವ ವರ್ಧಮಾನ ಬಸ್ತಿ ಸುಂದರವಾದುದಾಗಿರುವುದು. ಇದನ್ನು ವೈದಿಕರು ತಮ್ಮ ದೇವರೆಂದು ಹಿಂದೆ ಪೂಜಿಸುತ್ತಿದ್ದರಂತೆ. ಇದನ್ನು ನನಗೆ ತಿಳಿಸಿದವರು ಬಸ್ತಿಯ ಇಂದ್ರಪಂಡಿತರು. ಈ ಬಸ್ತಿಯಲ್ಲಿ ಈಗಲೂ ಪಾಠಶಾಲೆ ನಡೆಯುತ್ತಿದೆ. ಇಲ್ಲಿಗೆ ಅನೇಕ ಪಂಡಿತರು ಬಂದು ಪಾಠ ಹೇಳುವರು. ಈ ಎಲ್ಲಾ ಪಂಡಿತರು ಮಹಾದಿಗ್ಗಂತಿಗಳೇ ಸರಿ. ಇವರುಗಳಲ್ಲಿ ನಾಗಪಟ್ಟಣದ ನರಸಿಂಹಶಾಸ್ತ್ರಿಗಳು ಹಿರಿಯರು. ಇವರನ್ನು ನಾನು ವಿಚಾರಿಸಿದಾಗ "ತಾವು ಕಾಶಿಗೆ ಹೋಗಿ ವಾಂಛೇಶ್ವರ ಶಾಸ್ತ್ರಿಗಳೆಂಬುವವರಲ್ಲಿ ವ್ಯಾಸಂಗ ಮಾಡಿರುವುದಾಗಿ ತಿಳಿಸಿದರು" (ಡಾ. ಟಿ.ವಿ.ವಿ., ಸಂದರ್ಶನ). ಮತ್ತೊಬ್ಬರು ಮೈಸೂರಿನವರು. ಇವರು ಸೋಮಶೇಖರ ಶಾಸ್ತ್ರಿಗಳು. ಇವರುಗಳೆಲ್ಲ ಈಗ ಕಾನಕಾನ ಹಳ್ಳಿಯಲ್ಲೇ ನೆಲೆನಿಂತಿರುವುದು ಸಾಧುವಾಗಿರುವುದು. ಇವರುಗಳು ದೇವಾಲಯಗಲ ಪೂಜಾಕೈಂಕರ್ಯಗಳನ್ನು ಸಹ ಒಪ್ಪಿಕೊಂಡು, ತಮ್ಮ ಕಾರ್ಯಗಳನ್ನು ಕೂಡ ಬಿಡದೆ ಶ್ರದ್ದೆಯಿಂದ ಇರುವವರು. ದೇವಾಲಯಗಳಲ್ಲಿ ಹರಿಕಥೆಗಳು, ಪ್ರವಚನಗಳು ಕೂಡ ನಡೆಯುತ್ತಿವೆ. ಇಲ್ಲಿಯ ದೇವಾಲಯಗಳು ಅತ್ಯಂತ ಸುಂದರವಾಗಿದೆ.

ಊರ ಒಳಗಣ ರಂಗನಾಥ ದೇವಾಲಯ ತುಂಬ ಪ್ರಸಿದ್ದವಾದುದು. ಈ ದೇವಾಲಯದ ಪೂಜಾರರು ರಾಮಾವಧಾನಿಗಳು. ಇವರು ಇತ್ತಿಚೆಗಷ್ಟೇ ಚನ್ನಪಟ್ಟಣದಿಂದ ಬಂದು ಪೂಜೆಯನ್ನು ಸ್ವೀಕರಿಸಿದ್ದಾರೆ. ಈ ದೇವಾಲಯವನ್ನು ಕೆಂಪೇಗೌಡನು ಜೀರ್ಣೋದ್ದಾರ ಮಾಡಿಸಿದ. ಈ ದೇವಾಲಯ 400 ವರ್ಷಗಳಷ್ಟು ಹಳೆಯದು. ಈ ದೇವಾಲಯದಿಂದ ಮೇಕೆದಾಟುವಿಗೆ ಹೋಗಲು ಸುರಂಗ ಮಾರ್ಗವಿದೆ. ಇಲ್ಲಿ ಅನೇಕ ವಿಧದ ಕೆತ್ತನೆಗಳು ಮುಂತಾದವು ಇರುವುವು. ಇದರ ಜೊತೆಗೆ ಊರಿನೊಳಗೆ ಗಣಪತಿ ದೇವಾಲಯವಿದೆ. ಈ ಗಣಪತಿ ದೇವಾಲಯ 100 ವರ್ಷ ಹಳೆಯದಂತೆ. ಇದು ಕೂಡ ಸುಂದರವಾದುದು. ಇಲ್ಲಿ ದಟ್ಟವಾದ ಅಡವಿಯಿದ್ದಿತೆಂದು ಆವೂರಿನವರಿಮದ ತಿಳಿದುಬಂತು. ಇಲ್ಲಿ ಸುಂದರವಾದ ಆಲಯ 400 ವರ್ಷ ಹಳೆಯದು. ಈ ಆಲಯದ ಉದ್ದಕ್ಕೂ ತೆಂಗು ಬೀಟೆ ತೇಗಗಳಿವೆ. ಇವುಗಳ ಅತ್ಯಂತ ಹಳೆಯವಾಗಿವೆ (ಇಲ್ಲಿಂದ ಸುಮಾರು 3 ಪುಟಗಳು ನಷ್ಟವಾಗಿದೆ).

... ಈ ವೂರು ಪ್ರಕೃತಿಯಿಂದ ವರ ಪಡೆದಿದೆಯೆಂದು ಹೇಳಿದರೆ ಅತಿಯಾಗಲಾರದು. ನಾಲ್ಕು ದಿಕ್ಕುಗಳಿಂದ ಪ್ರಕೃತಿ ಸುತ್ತುವರೆದಿದೆ. ನಡುವೆ ಊರು ಹರಡಿಕೊಂಡಿದೆ. ಇಲ್ಲಿನ ಜನಜೀವನ ಸರಿಸಮಾರಾಗಿ ನಡೆದುಕೊಂಡು ಹೋಗುತ್ತಿದೆ. ವೈದಿಕರು ಹೆಚ್ಚಿನ ಸಂಖ್ಯೆಯಲ್ಲಿ ವಾಸವಾಗಿದ್ದಾರೆ. ವೈದಿಕರು ಕೆಲಸಗಳು ಬಂದರೆ ಇತರ ಊರುಗಳಿಗೆ ಹೋಗುತ್ತಿರುತ್ತಾರೆ. ಇತರ ಜನಗಳು ಕೂಡ ಹೋಗುತ್ತಿರುತ್ತಾರೆ. ಹೀಗಾಗಿ ಈ ಊರು ಅತ್ಯಂತ ವೈಶಿಷ್ಟ್ಯ ಪಡೆದಿದೆ. ಇಲ್ಲಿ ವಿದ್ಯಾಭ್ಯಾಸ ಸಾಂಪ್ರದಾಯಿಕ

ನಿಲವಿನಲ್ಲೇ ಸಾಗುತ್ತಿದೆ. ಅನೇಕ ವಿದ್ಯಾವಂತರು ಪಂಡಿತರು ರಾಜರಿಂದ ಸನ್ಮಾನ ಪಡೆದಿದ್ದಾರೆ.." (ಮುಂದೆ ಗ್ರಂಥಭಾಗ ಲಭಿಸಿಲ್ಲ).

ಗ್ರಂಥಕರ್ತೃಗಳಾದ ವೇ॥ ರಾಮನಾಥ ಶಾಸ್ತ್ರಿಗಳು ಅಷ್ಟು ಹಿಂದೆ, ಎಂದರೆ 110 ವರ್ಷಗಳಷ್ಟು ಹಿಂದೆ ಈ ಸ್ಥಳದ ಅಭಿಮಾನದಿಂದ ಈ ಪುಸ್ತಕ ಬರೆದಿರುವುದು ಸ್ತುತ್ಯವಾಗಿದೆ. ಅವರು ಹೆಚ್ಚು ವ್ಯುತ್ಪನ್ನರಾಗಿ ತೋರದಿದ್ದರೂ, ಸ್ಥಳದ ವೈದಿಕರು, ದೇವಾಲಯಗಳು ಇವುಗಳ ಬಗ್ಗೆ ಕೊಡುವ ವಿವರಗಳು ಕುತೂಹಲಕರವಾಗಿವೆ. ಅವರು ಹೇಳುವ ವ್ಯಕ್ತಿಗಳನ್ನೂ ಗುಡಿಗಳನ್ನೂ ಬಸ್ತಿಗಳನ್ನೂ ಗುರುತಿಸುವುದೇ ಈಗ ಕಷ್ಟಕರವಾಗಿದೆ. ಇದಕ್ಕೆ ಇನ್ನೂ ಹೆಚ್ಚಿನ ಶೋಧ ಬೇಕಾಗುತ್ತದೆ. ಗ್ರಂಥ ಅಸಮಗ್ರವೂ ತ್ರುಟಿತವೂ ಆಗಿ ದೊರೆತಿದ್ದು, ಪೂರ್ಣವಾಗಿ ದೊರೆತಾಗ ಇನ್ನೂ ಹೆಚ್ಚಿನ ವಿಷಯಗಳು ವಿಶದಪಡಲು ಸಾಧ್ಯವಾಗಬಹುದು.

ತೇದಿ ಮತ್ತು ಪ್ರಕಟವಾದ ಆಕರ ಸ್ಪಷ್ಟವಾಗುವ ಇನ್ನೊಂದು ಬರಹ, ವೇ, ಬ್ರ. ಶ್ರೀ. ನಾರಾಯಣ ಶಾಸ್ತ್ರಿಗಳು ಬರೆದುದು, 'ಕಾನಕಾನಹಳ್ಳಿಯ ದೇವಾಲಯಗಳು ಮತ್ತು ವಿದ್ವತ್ತು' ಎಂಬ ಹೆಸರಿನಲ್ಲಿದ್ದು, ಇಲ್ಲಿಯ ವಿವರಗಳನ್ನು ಈ ಕೆಳಗೆ ಕೊಡಲಾಗಿದೆ. ಕರ್ತೃ ಚಾ॥ ಶ್ರೀಕಂಠ ಶಾಸ್ತ್ರಗಳ ಶಿಷ್ಯವರ್ಗದ ನಾರಾಯಣ ಶಾಸ್ತ್ರಿಗಳೇ ಇರಬಹುಹುದೇ, ನಿಶ್ಚಯವಿಲ್ಲ.[20]

"ಕಾನಕಾನ ಹಳ್ಳಿಯ ಮೈಸೂರ ಅರಸರು ನಿರ್ಮಿಸಿಕೊಟ್ಟ ಗ್ರಾಮ (ಅಗ್ರಹಾರ). ಇದು ಟಿಪ್ಪು ಹೈದರ್‌ಗಳ ನೆಲೆಯೂ ಆಗಿತ್ತು. ಇಲ್ಲಿನ ದೇವಾಲಯಗಳು ಮತ್ತು ವಿದ್ವತ್ಸಮೂಹದ ಪರಿಚಯವೇ ಇ ಲೇಖನದ ಉದ್ದೇಶವು. ಯಾವುದೇ ಫಲಾಪೇಕ್ಷೆ ಇಲ್ಲವು.

ಕಾನಕಾನಹಳ್ಳಿಯಲ್ಲಿ ಅನೇಕ ದೇವಾಲಯಗಳಿವೆ. ಇವುಗಳ ಕಿರುಪರಿಚಯ

ಗಣಪತಿ ದೇವಾಲಯ

ಇದು ಊರ ಮಧ್ಯಭಾಗದಲ್ಲಿದೆ. ಸಕಲರೂ ಇದಕ್ಕೆ ನಮಸ್ಕಾರ ಸಲ್ಲಿಸಿದ ಹೊರತು ಯಾವುದೇ ಕೆಲಸವನ್ನು ಮಾಡುವುದಿಲ್ಲ. ಈ ಗಣಪತಿಮೂರ್ತಿ ಅತ್ಯಂತ ಸುಂದರವಾಗಿರ್ಪುದು. ಈ ಮೂರ್ತಿ ಸಕಲರ ಇಷ್ಟಾರ್ಥಂಗಳ ಈಡೇರಿಸುವುದು. ಈ ದೇವಾಲಯವನ್ನು ಎಲ್ಲರೂ ಅತ್ಯವಶ್ಯಕವಾಗಿ ನೋಡಬೇಕು.

ರಂಗನಾಥ ದೇವಾಲಯ

ರಂಗನಾಥ ದೇವಾಲಯವು ಅತ್ಯಂತ ಭವ್ಯವಾಗಿರ್ಪುದು. ಆದಿಮಧ್ಯಾಂತದೊಳಿರ್ಪ ರಂಗನಾಥನೇ ಇಲ್ಲಿ ಬಂದು ನೆಲಸಿರ್ಪನು. ಈ ರಂಗನಾಥ ದೇವಾಲಯ ಬಹಳ ಪುರಾತನವಾದದ್ದು, ಬಹಳ

ಸತ್ಯವಂತರಾದ ಮೂರ್ತಿಯು. ಈ ದೇವಾಲಯದ ಬಗ್ಗೆ ರಾಮಕವಿಯ ಕಾನಕಾನ ಪಳ್ಳಿ ರಂಗನಾಥ ಮಹಾತ್ಮೆ ಎಂಬ ಕಾವ್ಯವನ್ನು ರಚಿಸಿರುವನು. ಈ ದೇವಲಯದ ಬಗ್ಗೆ ತಿಳಿಯಲು ಎಲ್ಲರೂ ಅದನ್ನು ಅವಲೋಕಿಸಬಹುದು.

ಕೋದಂಡರಾಮ ದೇವಾಲಯ

ಇದು ಕೂಡ ಬಹಳ ಸುಂದರವಾಗಿದೆ. ಈಗಿರುವ ಮೂರ್ತಿಯ ಈಚಿನ ಕಾಲದ್ದೆಂದು ತಿಳಿದುಬರುತ್ತದೆ. ಮೊದಲಿದ್ದ ಮೂರ್ತಿಯು ಸೀತಾಲಕ್ಷ್ಮಣಸಮೇತವಾಗಿದ್ದದ್ದು. ಇದರ ವಿಶೇಷವೆಂದರೆ, ಸೀತಾ ಅಮ್ಮನವರು ಬಲಗಡೆ ಇರುವುದು. ಇದು ಈಚೆಗೆ ಅತ್ಯಂತ ಶಿಥಿಲವಾಗಿರುವುದು.

ಈ ಅಗ್ರಹಾರದಲ್ಲಿ ಇನ್ನೂ ಅನೇಕ ಸಣ್ಣಪುಟ್ಟ ದೇವಾಲಯಗಳಿದ್ದರೂ ಇಲ್ಲಿ ಪ್ರಧಾನಾಲಯಗಳನ್ನು ಹೇಳಿದೆ. ಆಸಕ್ತರು ಊರನ್ನೇ ಹೋಗಿ ನೋಡಬಹುದು. ಮತ್ತೊಂದು ಪ್ರಮುಖವಾದುದು ಎಂದರೆ, ದೇಗುಲಮಠ.

ಇಲ್ಲಿನ ವಿದ್ವತ್ತು ಬಹಳ ಪ್ರಚಂಡವಾದುದು. ಅನೇಕ ಮಂದಿ ಮುಮ್ಮಡಿ ಕೃಷ್ಣ ಪ್ರಭುಗಳ ಅನುಗ್ರಹವನ್ನು ಹೊಂದಿರುವರು. ಕಾನಕಾನ ಹಳ್ಳಿ ನರಸಿಂಹಶಾಸ್ತ್ರಿಗಳು, ವ್ಯಾಕರಣದ ವೇದಮೂರ್ತಿ ಶಾಸ್ತ್ರಿಗಳು ಪ್ರಮುಖರು. ನರಸಿಂಹ ಶಾಸ್ತ್ರಿಗಳು ಪ್ರಾಕೃತವ್ಯಾಕರಣ ಕರ್ತೃಗಳು. ವೇದಮೂರ್ತಿ ಶಾಸ್ತ್ರಿಗಳು ಕರ್ಣಾಟ ಶಿವಪುರಾಣವನ್ನು ರಚಿಸಿರುವವರು. ಇಲ್ಲಿ ಅನೇಕ ವಾಕ್ಯಾರ್ಥದ ಸಭೆಗಲು ನಡೆಯಲ್ಪಡುತ್ತವೆ. ಒಮ್ಮೆ ಶೃಂಗೇರಿಯ ಜಗದ್ಗುರುಗಳು ಸಂಚಾರದಲ್ಲಿರುವಾಗ ಒಮ್ಮೆ ಈ ಸಭೆಗೆ ದಯಮಾಡಿ ಆಶೀರ್ವಚನ ನೀಡಿದರು. ಈ ಜಗದ್ಗುರುಗಳು ಸಚ್ಚಿದಾನಂದ ಶಿವಾಭಿನಯ ನೃಸಿಂಹಭಾರತಿಗಳು. ಮೈಸೂರು ಮಹಾರಾಜರ ಮಹಾಪ್ರಚಂಡ ಆಸ್ಥಾನ ವಿದ್ವಾಂಸರಾಗಿದ್ದ ಕುಣಿಗಲ್ಲು ರಾಮಶಾಸ್ತ್ರಿಗಳು ಮಕ್ಕಳು. ಅವರ ಪಾಮಡಿತ್ಯ, ಉದಾರಪರತೆ ಸರ್ವರಿಗೂ ಅನುಕರಣೀಯವಾದುದು. ಕೆಲವರು ವಿದ್ವಾಂಸರು ಮಹಾದಿಗ್ದಂತಿಗಲು. ಸೋಮೇಶ್ವರ ಶಾಸ್ತ್ರಿಗಳು ತರ್ಕ ವ್ಯಾಕರಣ ವೇದಾಂಗಗಳಲ್ಲಿ ಪಾರಂಗತರು.[21] ಇವರು ಈ ಸಭೆಯ ಮುಖ್ಯಪಂಡಿತರು. ಇವರು ಸಂಸ್ಕೃತದಲ್ಲಿ ಕಾಳಿದಾಸನ ಕಾವ್ಯಗಳ ಔಚಿತ್ಯದ ಮೇಲೆ ಚರ್ಚೆ ಆರಂಭಿಸಿದಾಗ, ಇತರ ಪಂಡಿತರು ಮತ್ತು ಕೃಷ್ಣಶಾಸ್ತ್ರಿಗಳು ವೇದ ಎಲ್ಲವುಗಳ ಆಧಾರಗಳಿಂದ ಚರ್ಚೆ ನಡೆಯಿಸಿದರು. ಇವರೆಲ್ಲರೂ ಈ ಆಗ್ರಹಾರದ ಮಹಾನುಭಾವರು.

ಮುಂದಿನ ವಾರದ ಸಂಚಿಕೆಯಲ್ಲಿ ಇನ್ನಷ್ಟು ವಿಷಯ ಬರೆಯಲ್ಪಡುತ್ತದೆ.

ಇಂತೀ

ವೇ। ಬ್ರ ಶ್ರೀ ನಾರಾಯಣ ಶಾಸ್ತ್ರಿ

ಇಲ್ಲಿ ಬರಹ ಚಿಕ್ಕದಾಗಿದ್ದರೂ ಹಲವು ಅಮೂಲ್ಯವಿಷಯಗಳಿವೆ. ಕೆಲವು ವಿಮರ್ಶೆಯ ಮಾತುಗಳು.

1. ರಾಮಕವಿ ಎಂಬುವನು 'ಕಾನಕಾನ ಹಳ್ಳಿ ರಂಗನಾಥಮಹಾತ್ಮೆ' ಬರೆದುದು.

   ಇದರ ಕರ್ತೃ ಯಾರು, ಆತನ ಇತಿವೃತ್ತವಿಚಾರಗಳೇನು, ಕಾವ್ಯ ಯಾವ ಭಾಷೆಯಲ್ಲಿತ್ತು? ಸಂಸ್ಕೃತವೇ ಕನ್ನಡವೇ? "ಎಲ್ಲರೂ ಅದನ್ನು ಅವಲೋಕಿಸಬಹುದು" ಎಂದಿರುವುದರಿಂದ ಅದುಬಹುಶಃ ಕನ್ನಡದಲ್ಲಿಯೇ ಇರಬೇಕು. ಅದು ರಚಿತವಾದ್ದು ಯಾವಾಗ? ಅಚ್ಚಾಗಿದ್ದಿತೇ, ಹಸ್ತಪ್ರತಿರೂಪದಲ್ಲಿದ್ದಿತೇ? ಕನ್ನಡ ಗ್ರಂಥಗಳ ಯಾವ ಸೂಚಿಯಲ್ಲಿಯೂ ಈ ಕಾವ್ಯದ ವಿಚಾರ ಉಲ್ಲೇಖವಾದ ಹಾಗೆ ಕಾಣಿಸಲಿಲ್ಲ; "ಕರ್ಣಾಟಕ ಕವಿಚರಿತೆ'ಯಲ್ಲಿ ಕೂಡ ಉಲ್ಲೇಖವಿಲ್ಲ. ಹೀಗಾಗಿ ಸ್ಥಳದ ಹಾಗೂ ದೇವಾಲಯದ ಹಳೆಯ ಮಾಹಿತಿ ಇರಬಹುದಾದ ಒಂದು ಅಮೂಲ್ಯವಾದ ಆಕರ ನಮಗೆ ಆಸೆ ತೋರಿಸಿ ಆಕಾಶಕಾಯದಲ್ಲಿ ಅಡಗಿಕೊಂಡ ಹಾಗೆ ಆಗಿದೆ. ಹಿಂದಿನ ಆಕರದಲ್ಲಿ ಉಲ್ಲೇಖವಾದ ರಂಗನಾಥಸ್ವಾಮಿಯ ದೇವಾಲಯದ ಅರ್ಚಕ ರಾಮಾವಧಾನಿಗಳೇ ರಾಮಕವಿ ಇರಬಹುದೇ?

2. ಕೋದಂಡರಾಮ ದೇವಾಲಯದ ದೇವತಾವಿಗ್ರಹಗಳ ವಿಚಾರ: ವಿವರಗಳು ಆ ದೇವಾಲಯದ ಇತಿಹಾಸದ ದೃಷ್ಟಿಯಿಂದ ಕುತೂಹಲಕರವಾಗಿವೆ. ಈ ಗುಡಿಯ ಪೂಜಾವ್ಯವಸ್ಥೆ ಉತ್ತಮವಾಗಿದೆ. ಸೀತೆಯ ವಿಗ್ರಹ ಎಡದಲ್ಲೇ ಇರುವುದರಿಂದ ಮತ್ತೆ ಇಲ್ಲಿ ಬದಲಾವಣೆ ಆಗಿದೆ.

3. ವ್ಯಾಕರಣದ ವೇದಮೂರ್ತಿ ಶಾಸ್ತ್ರಿಗಳೆಂಬುವರು 'ಕರ್ಣಾಟ ಶಿವಪುರಾಣ'ವನ್ನು ರಚಿಸಿದ ವಿಚಾರ:

   ಕನ್ನಡ ಭಾಷೆಯ ಈ ಕೃತಿಯ ಉಲ್ಲೇಖ ನನಗೆ ಯಾವ ಗ್ರಂಥಸೂಚಿಯಲ್ಲಿಯೂ ದೊರೆಯಲಿಲ್ಲ. ಸಂಸ್ಕೃತ ಶಿವಪುರಾಣದ ಕನ್ನಡ ರೂಪವಾಗಿರುವ ಈ ರಚನೆ ಸಾಕಷ್ಟು ವಿಸ್ತಾರವಾಗಿ ಪ್ರೌಢವಾಗಿ ಇದ್ದಿರಬಹುದು. ಈ ಗ್ರಂಥದ ಕರ್ತೃ ವ್ಯಾಕರಣದ ವೇದಮೂರ್ತಿ ಶಾಸ್ತ್ರಿಗಳ ಉಲ್ಲೇಖ ರಾಮನಾಥ ಶಾಸ್ತ್ರಿಗಳ ಪುಸ್ತಕದಲ್ಲಿ ಕೂಡ ಈಗಾಗಲೇ ಬಂದಿರುವುದ್ನನು ಇಲ್ಲಿ ನೆನೆಯಬಹುದು. ಆದರೆ ಅವರ ಬಗ್ಗೆ ಇತಿವೃತ್ತದ ಮಾಹಿತಿಯಿಲ್ಲ.

4. ಸ್ಥಳದ ವಿದ್ಯಾಂಸರಲ್ಲಿ ಕಾನಕಾನ ಹಳ್ಳಿ ನರಸಿಂಹಶಾಸ್ತ್ರಿಗಳು ಪ್ರಾಕೃತ ವ್ಯಾಕರಣಗ್ರಂಥದ ಕರ್ತೃವಾಗಿರುವುದು ಪ್ರಸಿದ್ಧವಾದ ಸಂಗತಿ. ಆ ಗ್ರಂಥ ಮೈಸೂರಿನಲ್ಲಿ ಪ್ರಕಟವಾಗಿದ್ದು ಅದರ ವಿವರಗಳು ವಿಶದಪಟ್ಟಿವೆ. ಇತರರಲ್ಲಿ ತರ್ಕ ವ್ಯಾಕರಣ ಮತ್ತು ವೇದಾಂಗಗಳಲ್ಲಿ ಪಾರಂಗತರೆಂದಿರುವ ಸೋಮೇಶ್ವರ ಶಾಸ್ತ್ರಿಗಳ ವಿಚಾರದಲ್ಲಿಯೂ ಹೆಚ್ಚು ವಿಚಾರಗಳೇನೂ

ನಮಗೆ ತಿಳಿದುಬಂದಿಲ್ಲ. ಇವರು ಸಂಸ್ಕೃತದಲ್ಲಿ ಕಾಳಿದಾಸನ ಕಾವ್ಯಗಳನ್ನು ಕುರಿತು ಚರ್ಚೆ ಮಾಡುತ್ತಿದ್ದರೆಂದು ಪ್ರಸ್ತುತ ಆಕರದಲ್ಲಿಯೇ ಬಂದಿರುವ ಸಂಗತಿಯನ್ನು ನೋಡಿದರೆ. ಇವರು ಸಾಹಿತ್ಯದಲ್ಲಿಯೂ ಪಾರಂಗತರಾಗಿದ್ದರೆಂದೂ ಸ್ಥಳದ ವಾಕ್ಯಾರ್ಥದ ಸಭೆಗಳಲ್ಲಿ ಮುಖ್ಯ ಪಂಡಿತರಾಗಿದ್ದರೆಂದಿರುವುದನ್ನು ನೋಡಿದರೆ, ಕಾನಕಾನ ಹಳ್ಳಿಯ ಪಂಡಿತಮಂಡಲಿಯಲ್ಲಿ ಹಿರಿಯರಾಗಿದ್ದರೆಂದೂ ಅಭಿಪ್ರಾಯವಾಗುತ್ತದೆ. ಕೃಷ್ಣಶಾಸ್ತ್ರಿಗಳೆಂಬವರ ವಿಚಾರದಲ್ಲಿಯೂ ಹೆಚ್ಚಿನ ಮಾಹಿತಿಯಿಲ್ಲ.

5. ಅನೇಕ ವಾಕ್ಯಾರ್ಥದ ಸಭೆಗಳು ನಡೆಯುತ್ತಿದ್ದವೆನ್ನುವುದು ಕೂಡ ಕುತೂಹಲಕರ ಸಂಗತಿಯೇ. ಇಂಥ ಒಂದು ಸಭೆಗೆ ಶೃಂಗೇರಿಯ ಜಗದ್ಗುರು ಸಚ್ಚಿದಾನಂದ ನೃಸಿಂಹಭಾರತಿಗಳು ದಯಮಾಡಿಸಿದ್ದರೆನ್ನುವುದು ಸ್ಥಳದ ವೈದಿಕ ವಾತಾವರಣದ ಹಿರಿಮೆಯನ್ನು ಸಾರತಕ್ಕ ಸಂಗತಿಯಾಗಿದೆ. ಈ ವಾಕ್ಯಾರ್ಥಗಳು ಕೋಟೆಯ ರಂಗನಾಥಸ್ವಾಮಿ ದೇವಾಲಯದಲ್ಲಿಯೇ ನಡೆಯುತ್ತಿದ್ದಿರಬೇಕು.

ಇಲ್ಲಿ ಉಲ್ಲೇಖಗೊಂಡಿರುವ ವೈದಿಕ ವಿದ್ವಾಂಸರೆಲ್ಲ ವಿಶೇಷವಾಗಿ ಕೋಟೆಯ ಸ್ಮಾರ್ತಪಂಗಡದ ತೆಲುಗು ಮತ್ತು ಕನ್ನಡ ಮನೆಮಾತಿನ ಬ್ರಾಹ್ಮಣರಾಗಿದ್ದಂತೆಯೇ ತೋರುವುದು. ಅವರ ಮನೆತನಗಳಲ್ಲಿ ಕೆಲವಾದರೂ ಈಗಲೂ ಕಾನಕಾನಹಳ್ಳಿಯಲ್ಲಿ ಮುಂದುವರಿದಿರುವುದು ಸಂಭಾವ್ಯ. ಆದರೆ ಇದಕ್ಕಾಗಿ ಹೆಚ್ಚಿನ ಉಪಪತ್ತಿಗಳು ದೊರೆಯಬೇಕು. ಸಂತತಿಯವರಿಗೆ ತಕ್ಕ ಮಟ್ಟಿಗಾದರೂ ತಮ್ಮ ಪೂರ್ವಿಕರ ಬಗ್ಗೆ ತಿಳಿದಿರಬೇಕು.

ಮಳಗಾಳು ಮಹದೇಶ್ವರ ಸ್ವಾಮಿ ದೇವಾಲಯ

ಕನಕಪುರದಲ್ಲಿ ಸುಮಾರು 2 ಕಿ.ಮೀ. ದೂರದಲ್ಲಿ, ಅರ್ಕಾವತೀನದಿಯ ದಂಡೆಯ ಮೇಲಿರುವ ಮಳಗಾಳು ಇನ್ನೂ ಹಳೆಯ ಕಾಲದ ಇತಿಹಾಸವುಳ್ಳ ಮಹಾದೇವಶ್ವರ ಸ್ವಾಮಿ ದೇವಾಲಯವಿರುವ ಗ್ರಾಮ. ಹಸಿರು ಅವರಣದ ನಡುವೆ ಇರುವ ಈ ದೇವಾಲಯ ವಿಶಾಲವಾದ ನವರಂಗ, ಅರ್ದಮಂಟಪ ಮತ್ತು ಗರ್ಭಗೃಹಗಳಿಂದ ಕೂಡಿದ ಒಂದು ಸರಳವಾದ ರಚನೆ. ಸ್ತಂಭಗಳ ರಚನೆ ವಿಜಯ ನಗರೋತ್ತರಕಾಲೀನದವಾಗಿ ಕಂಡರೂ, ದೇವಾಲಯ ಒಡೆಯನ ಕಾಲದ ವರೆಗೆ ಅದಕ್ಕೆ ಪೋಷಣೆ ದೊರೆತಿದೆ. ಬಹುಶಃ ಕನಕಮರದ ದೇವಾಲಯಗಳಿಗಿಂತ ಈ ದೇವಾಲಯ ಪ್ರಾಚೀನವಾದುದು, ಪ್ರಸಿದ್ಧವಾದುದು. ಚೈತ್ರಮಾಸದಲ್ಲಿ ರಥೋತ್ಸವ ಜರುಗುತ್ತದೆ. ಇಲಿರುವ ಮರದ ಸಿಡಿಗಂಬ ಗಮನಾರ್ಹವಾದ್ದು. ಮೊರಸಂದಮ್ಮ ಇಲ್ಲಿಯ ಗ್ರಾಮದೇವತೆ.

ಕಲ್ಲಹಳ್ಳಿ ವೆಂಕಟರಮಣ ಸ್ವಾಮಿ ದೇವಾಲಯ

ಕನಕಪುರಕ್ಕೆ ಐದು ಕಿ.ಮೀ. ದೂರಕ್ಕೆ ಬೆಂಗಳೂರು-ಕನಕಪುರ ರಸ್ತೆಗೆ ಪಶ್ಚಿಮಕ್ಕೆ ಒಂದು ತಿರುವುದಾರಿಯಲ್ಲಿರುವ ಕಲ್ಲಹಳ್ಳಿಯ ವೆಂಕಟರಮಣ ಸ್ವಾಮಿ ದೇವಾಲಯ ಸಹಸ್ರಾರು ಭಕ್ತರನ್ನು ಒಕ್ಕಲುಗಳಾಗಿ ಪಡೆದಿರುವ ಒಂದು ಪ್ರಸಿದ್ಧವಾದ ಸ್ಥಳೀಯ ಕ್ಷೇತ್ರ. ಇಲ್ಲಿ ವಿಜಯನಗರಶೈಲಿಯಲ್ಲಿರುವ ಶ್ರೀನಿವಾಸ ಅಥವಾ ವೆಂಕಟರಮಣ ಸ್ವಾಮಿ ಸುಮಾರು 2 ಮೀಟರ್ ಉದ್ದದ ಒಂದು ಪುಟ್ಟ ದೇವತಾಮೂತಿ ಇದೆ. ಇಟ್ಟಿಗೆ ಗಾರೆಯ ಶಿಖರ. ಅರ್ಧಮಂಟಪದ ಎದುರಿಗೆ ವಿಶಾಲವಾದ ನವರಂಗವಿದ್ದು, ವಿಜಯನಗರ ಶೈಲಿಯ ಸರಳವಾದ ಸ್ತಂಭಗಳಿವೆ. ವಾರ್ಷಿಕ ರಥೋತ್ಸವ ಜಾತ್ರೆಗಳು ಮಾಘಮಾಸದ ಹುಣ್ಣಿಮೆಯಲ್ಲಿ ನಡೆಯುತ್ತವೆ; ಆಗ್ಗೆ ಸುಮಾರು 15-20 ಸಾವಿರ ಮಂದಿ ಸೇರಿತ್ತಾರೆ. ಇಲ್ಲಿಗೆ ಅರ್ಧ ಕಿ.ಮೀ. ದೂರದಲ್ಲಿ ಗುಡ್ಡದ ಆಂಜನೇಯನ ಗುಡಿಯೂ ಉಂಟು.

ದೊಡ್ಡ ಮಸೀದಿ ಬಹುಶಃ ಟಿಪ್ಪು ಸುಲ್ತಾನನ ಕಾಲದ್ದಾಗಿರುವಂತೆ ತೋರುತ್ತದೆ. ಹಾಗೆಯೇ ಮೂರು ದರ್ಗಾಗಳಿದ್ದು, ಅವುಗಳಲ್ಲಿ ಒಂದು ಸುಮಾರು 200 ವರ್ಷಗಳ ಹಿಂದೆ ಇದ್ದನೆನ್ನಲಾದ ಹಜರತ್ ಸೈಯದ್ ಯಾಕುಬ್ ಅಲಿ ಹೆಸರಿನದೆಂದು ಹೇಳಲಾಗಿದೆ. ಎರಡನೆಯದು ಕಂಬ್ಳಿ ಪೀರನದು. ರಮಜಾನಿನ ಕಾಲಕ್ಕೆ ಉರಸ್ ನಡೆಯುತ್ತದೆ.

ನನ್ನ ಮಿತಿ ಕ್ರಿ.ಶ. 1800 ಆಗಿರುವುದರಿಂದ ಮುಂದಿನ ವಿಷಯಗಳು ಇಲ್ಲಿ ಅಪ್ರಸ್ತುತ ಎಂದು ತೋರುತ್ತದೆ. ಇಲ್ಲಿಯ ಮಾಹಿತಿಯನ್ನು ಕೆಲಸವನ್ನು ಪುಸ್ತಕಗಳು ಶಾಸನಗಳನ್ನು ಆಧರಿಸಿದರೆ, ಜನರ ಬಾಯಿಂದ ಬಾಯಿಗೆ ಹರಿಯುತ್ತಿರುವ ಐತಿಹ್ಯಗಳಿಂದ ಊಹಿಸಬಹುದಾಗಿರುತ್ತದೆ.

ವಾಸ್ತುಕಲೆ

ಕರ್ನಾಟಕದ ವಾಸ್ತುಕಲೆ ಭಾರತೀಯ ವಾಸ್ತುಕಲೆಯ ಒಂದು ಭಾಗವೇ ಆಗಿದ್ದರೂ ಇದಕ್ಕೆ ವಿಶೇಷವಾದ ಒಂದು ಮಹತ್ತ್ವವಿದೆ. ಭಾರತದ ಉಳಿದೆಡೆ ಕಾಣದಷ್ಟು ವೈವಿಧ್ಯಮಯ ವಾಸ್ತುಶೈಲಿಗಳು ಕರ್ನಾಟಕದಲ್ಲಿ ಗೋಚರಿಸುತ್ತವೆ. ಭಾರತದಲ್ಲಿನ ಕರ್ನಾಟಕದ ವಿಶಿಷ್ಟ ಸ್ಥಾನ ಇದಕ್ಕೊಂದು ಕಾರಣ. ತನ್ನ ಸುತ್ತಮುತ್ತ ಬೆಳೆದ ಬೇರೆ ಬೇರೆ ಶೈಲಿಗಳನ್ನು ಮೈಗೂಡಿಸಿಕೊಂಡುದೇ ಅಲ್ಲದೆ, ಅವುಗಳ ಸಂಯೋಜನೆಯಿಂದ ತನ್ನದೇ ಆದ ಹೊಸಶೈಲಿಯನ್ನು ನಿರ್ಮಾಣ ಮಾಡಿ ಅದ್ಭುತವಾಗಿ ಬೆಳೆಸಿ, ಪ್ರಪಂಚದ ವಾಸ್ತುಕಲೆಯ ಸಾಲಿನಲ್ಲಿ ನಿಲ್ಲಬಲ್ಲ ಸಾಮರ್ಥ್ಯವನ್ನು ಕರ್ನಾಟಕದ ವಾಸ್ತುಕಲೆ ಪಡೆದುಕೊಂಡಿದೆ. ಈ ವೈವಿಧ್ಯತೆಗೆ ಇಲ್ಲಿನ ಬೇರೆ ಬೇರೆ ಭಾಗಗಳಲ್ಲಿ ದೊರೆಯುವ ಬೇರೆ ಬೇರೆ ರೀತಿಯ ಮೂಲಸಾಮಗ್ರಿಯೂ ಕಾರಣ. ಕರ್ನಾಟಕದ ಪಶ್ಚಿಮ ಭಾಗದಲ್ಲಿ ಮಿದುವಾದ ಧಾರವಾಡ

ಶಿಲಾಪದರವೂ ಪೂರ್ವಭಾಗದಲ್ಲಿ ಗಟ್ಟಿಯಾದ ಗ್ರಾನೈಟ್ ಕಲ್ಲೂ ನಡುವೆ ಕೆಂಪು ಮರಳು ಶಿಲೆ ಮತ್ತು ಹಸಿರು ಬೆರೆತ ಬಿಳಿಯ ಶಾಹಬಾದ ಕಲ್ಲಿನ ಪದರಗಳೂ ಮಲೆನಾಡು ಮತ್ತು ಕರಾವಳಿ ಪ್ರದೇಶಗಳಲ್ಲಿ ಜಂಬೂಕಲ್ಲೂ ಹೇರಳವಾಗಿ ದೊರೆಯುತ್ತಿದ್ದು ವಾಸ್ತುರೀತಿಗಳು ಈ ಮೂಲ ಸಾಮಗ್ರಿಗಳಿಗೆ ಹೊಂದಿಕೊಂಡು ಬೆಳೆದುಬಂದಿವೆ. ಆಯಾ ಸ್ಥಳಗಳಲ್ಲಿ ದೊರೆಯದ ಮೂಲಸಾಮಗ್ರಿಯನ್ನು ದೂರದಿಂದ ತರಿಸಿ ವಾಸ್ತು ನಿರ್ಮಾಪಕರು ತಮ್ಮ ಅಭಿರುಚಿಗನುಗುಣವಾಗಿ ಆ ಪ್ರಾಂತ್ಯದಲ್ಲಿಲ್ಲದ ನೂತನ ಶೈಲಿಯಲ್ಲಿ ಕಟ್ಟಡಗಳನ್ನು ಕಟ್ಟಲು ಪ್ರಯತ್ನಿಸಿದ್ದರೂ ಇಂಥ ಸಂದರ್ಭಗಳು ಅಪೂರ್ವ. ವಾಯುಗುಣದ ವ್ಯತ್ಯಾಸವೂ ವಾಸ್ತುಶೈಲಿಯನ್ನು ರೂಪಿಸುವಲ್ಲಿ ತನ್ನ ಪ್ರಭಾವವನ್ನು ಬೀರಿದೆ. ವಾಸ್ತು ನಿರ್ಮಾಣಕ್ಕೆ, ಅದನ್ನೊಂದು ಕಲೆಯಾಗಿ ಬೆಳೆಸುವುದಕ್ಕೆ ಮೂಲ ತಳಹದಿ ಮತಧರ್ಮಗಳು. ಹಲವು ಮತಧರ್ಮಗಳಿಗೆ ತವರೂ ಆಶ್ರಯಸ್ಥಾನವೂ ಆಗಿದ್ದ ಕರ್ನಾಟಕದಲ್ಲಿ ಪ್ರತಿಯೊಂದು ಮತದವರೂ ತಮ್ಮದೇ ಆದ ಮಂದಿರಗಳನ್ನು ಹೊಂದುವುದರಲ್ಲಿ ತೋರಿಸಿದ ಹುರುಪು ಸಮೃದ್ಧವಾಗಿ ವಾಸ್ತು ನಿರ್ಮಾಣವಾಗಲು ಸಾಧಕವಾಯಿತು. ಇದೆಲ್ಲವನ್ನೂ ಮೀರಿ ಕರ್ನಾಟಕದಲ್ಲಿ ಕದಂಬ, ಗಂಗ, ಚಾಲುಕ್ಯ, ರಾಷ್ಟ್ರಕೂಟ, ಹೊಯ್ಸಳ ಮತ್ತು ವಿಜಯನಗರಗಳಂತಹ ಪ್ರಸಿದ್ಧವಾದ ರಾಜಮನೆತನಗಳು ಸುಭದ್ರವಾದ ಸಾಮ್ರಾಜ್ಯಗಳನ್ನು ಕಟ್ಟಿ ದೇವಾಲಯ, ಬಸದಿ, ಮಠ, ಮತ್ತಿತರ ಕಟ್ಟಡಗಳನ್ನು ನಿರ್ಮಿಸಲು ಹೇರಳವಾಗಿ ಸಹಾಯ ಮಾಡುತ್ತಿದ್ದುದರಿಂದ ಅವುಗಳನ್ನು ನಡೆಸಿಕೊಂಡು ಬರಲು ಉದಾರವಾಗಿ ದತ್ತಿಗಳನ್ನು ಬಿಟ್ಟುದರಿಂದ, ದೇವಾಲಯ ಮೊದಲಾದುವನ್ನು ಕಟ್ಟಿಸುವುದು ಒಂದು ಪುಣ್ಯ ಕಾರ್ಯವೆಂದು ಜನಸಾಮಾನ್ಯರೂ ಭಾವಿಸಿದ್ದರಿಂದ ವಾಸ್ತುಕಲೆ ಇಲ್ಲಿ ಬಹುವಾಗಿ ಬೆಳೆದುಬರಲು ಅನುವಾಯಿತು.[22]

ಶಿಲ್ಪಕಲೆ

ಕರ್ನಾಟಕದಲ್ಲಿ ವಾಸ್ತುಕಲೆ ವೈವಿಧ್ಯಮಯವಾಗಿರುವಂತೆ ಶಿಲ್ಪಕಲೆಯೂ ತನ್ನ ವಿಸ್ತಾರವಾದ ಹಲವು ರೀತಿಯ ಬೆಳವಣಿಗೆಯನ್ನು ಕಂಡಿದೆ. ಜೊತೆಗೆ ನವಶಿಲಾಯುಗದ ಕಾಲದಿಂದಾರಂಭಿಸಿ ಆಧುನಿಕ ಯುಗದವರೆಗೂ ಅವಿಚ್ಛಿನ್ನವಾಗಿ ಬೆಳೆದುಬಂದ ಪರಂಪರೆ ಇದಕ್ಕಿದೆ.

ಶಿಲ್ಪವನ್ನು ರೂಪಿಸುವಲ್ಲಿ ಜೇಡಿ, ಗಚ್ಚು, ಮರ, ಲೋಹ, ಶಿಲೆ ಮೊದಲಾದವುಗಳನ್ನು ಉಪಯೋಗಿಸಲಾಗಿದ್ದು ಅಪರೂಪವಾಗಿ ದಂತವನ್ನೂ ಬಳಸಿರುವುದು ಕಂಡುಬರುತ್ತದೆ. ಅವುಗಳಲ್ಲೆಲ್ಲ ಹೇರಳವಾಗಿರುವುದು ಕಲ್ಲಿನಲ್ಲಿ ಕಂಡರಿಸಿರುವ ಶಿಲ್ಪ. ಆದರೆ ಅತಿ ಪ್ರಾಚೀನವಾದುದು ಜೇಡಿ ಅಥವಾ ಮಣ್ಣಿನದು. ಚರಿತ್ರ ಪೂರ್ವಕಾಲದ ನವಶಿಲಾಯುಗದಲ್ಲಿಯೇ ಮೃಣ್ಮೂರ್ತಿಗಳನ್ನು ತಯಾರಿಸಿರುವುದು ಹಲವು ಪುರಾತನ ನಿವೇಶನಗಳಿಂದ ವ್ಯಕ್ತವಾಗಿದೆ. ಕುಪ್ಪಗಲ್ಲು, ಬ್ರಹ್ಮಗಿರಿ, ಪಿಕ್ಲಿಹಾಳು, ಸಂಗನಕಲ್ಲು, ತೆಕ್ಕಲಕೋಟೆ, ಹರವಗೇರಿ, ಬೋರ್ಗಿ ಮೊದಲಾದ ಕಡೆ ನಡೆಸಿದ ಪರವೀಕ್ಷಣೆ ಹಾಗೂ ಉತ್ಖನನಗಳಲ್ಲಿ

ಇಂಥ ಮಣ್ಣಿನಲ್ಲಿ ಮಾಡಿದ ಕಿರುಮೂರ್ತಿಗಳ ಅವಶೇಷಗಳು ದೊರೆತಿವೆ. ಇವು ಪೂರ್ಣರೂಪದಲ್ಲಿ ದೊರೆತಿರುವುದು ಅಪರೂಪ. ಪ್ರಾಣಿ, ಪಕ್ಷಿ ಅಥವಾ ಮಾನವನ ರೂಪಿನ ಈ ಮೃಣ್ಮೂರ್ತಿಗಳು ಕೈಯಿಂದಲೇ ತಯಾರಿಸಿದ ಮೂರ್ತಿಗಳಾಗಿದ್ದು ಕಣ್ಣು, ಕಿವಿ, ಮೂರ್ತಿಗಳು ಸ್ಪಷ್ಟವಾಗಿರುವುದಿಲ್ಲ. ಇವು ಕಣ್ಣಿಗೆ ಒಂದು ಗುಂಡುಗೆರೆ, ಬೆಟ್ಟುಗಳಿಂದ ಚಿವುಟಿ ಮಾಡಿದ ಕಿವಿ ಮೂಗುಗಳು, ಗುಂಡಾಗಿ ನೇರವಾಗಿ ಮೇಲೆ ದಪ್ಪನಾಗಿದ್ದು ಇಳಿಯುತ್ತ ಸಣ್ಣಗಾಗುವ ಕಾಲುಗಳನ್ನು ಹೊಂದಿರುತ್ತವೆ.[23]

ಶಾಸನ ಶಿಲ್ಪ

ಈ ಪ್ರದೇಶದ ಶಾಸನಗಳಲ್ಲಿನ ಶಿಲ್ಪವು ಸಾಮಾನ್ಯವಾಗಿದ್ದು, ಸರಳ ಶೈಲಿಯನ್ನು ಹೊಂದಿವೆ. ದಾನ ಶಾಸನಗಳು ಸಾಮಾನ್ಯ ಶೈಲಿಯಲ್ಲಿದ್ದು ಸ್ಮಾರಕ ಶಾಸನಗಳು ಸ್ವಲ್ಪ ಉತ್ತಮ ಶೈಲಿಯಿಂದ ಕೂಡಿದೆ.

ತಾಂಡ್ಯದ ವೀರಗಲ್ಲೊಂದು ಐದು ಜನ ವೀರರ ಶಿಲ್ಪವನ್ನು ಹೊಂದಿದೆ. ನಾಲ್ಕು ಹಂತದ ಈ ವೀರಗಲ್ಲು ಶಾಸನರಹಿತವಾಗಿದ್ದು ಐದು ಜನ ವೀರರು ಯುದ್ಧದಲ್ಲಿ ಮಡಿದ ವಿಷಯವನ್ನು ಒಳಗೊಂಡಿದೆ. ಕಬ್ಬಾಳುವಿನ ವೀರಗಲ್ಲೊಂದರಲ್ಲಿ ಕೆಳಹಂತದಲ್ಲಿ ವೀರ ಹೋರಾಡಿ ಮಡಿದಿದ್ದರೆ ಮೇಲಿನ ಹಂತದಲ್ಲಿ ಆ ವೀರ ಮತ್ತು ಅವನ ಆರು ಜನ ಮಡದಿಯರು ಕೈಮುಗಿದುಕೊಂಡು ಕುಳಿತಿದ್ದಾರೆ. ವೀರನ ಮರಣಾನಂತರ ಆರು ಜನ ಮಡದಿಯರೂ ಸಹಗಮನಮಾಡಿರುವ ಸಂಕೇತ ಇದಾಗಿದೆ. ಮೇಲಿನ ಎರಡೂ ವೀರಗಲ್ಲುಗಳೂ ಶಿಲ್ಪದ ಶೈಲಿಯಿಂದ ಕ್ರಿ.ಶ.ಸು.ಸೇರಿದ್ದಾಗಿವೆ.

ಹರಿಹರದ ಶಾಸನ ರಹಿತ ವೀರಗಲ್ಲೊಂದು ಶಿಲ್ಪಿಯ ಕಲಾನೈಪುಣ್ಯಕ್ಕೆ ಉತ್ತಮ ಸಾಕ್ಷಿಯಾಗಿದೆ.[24] ಹೂವು, ಮಣಿಗಳ ಮಾಲೆಗಳ ಅಲಂಕಾರ ಆಕರ್ಷಕವಾಗಿದೆ. ವೀರರ ಪೋಷಾಕು, ಆಭರಣಗಳು, ಅವರ ಕುದುರೆಗಳು ಬಹಳ ಸುಂದರವಾಗಿ ಮೂಡಿವೆ. ಈ ವೀರಗಲ್ಲು ಐದು ಅಡಿ ಎತ್ತರ, ಏಳು ಅಡಿ ಉದ್ದವಿದ್ದು ನಾಲ್ಕು ಹಂತದಿಂದ ಕೂಡಿದೆ. ಇಲ್ಲಿನ ಯೋಧರು ಹಿಡಿದಿರುವ ಗುರಾಣಿಗಳು, ಕತ್ತಿಗಳು ಇತರೆ ಆಯುಧಗಳ ಶೈಲಿ ಅಭ್ಯಾಸಯೋಗ್ಯವಾಗಿವೆ.

ಮೇಲಿನ ಗ್ರಾಮದಲ್ಲಿಯೇ ಒಂದು ಒಕ್ಕೈ ಮಹಾಸತಿ ಶಿಲ್ಪವಿದೆ. ಮೇಲಿನ ಹಂತದಲ್ಲಿ ವೀರನು ಬಿಲ್ಲಿನಿಂದ ಬಾಣಪ್ರಯೋಗ ಮಾಡುತ್ತಿರುವ ಚಿತ್ರವಿದೆ.

ಕಬ್ಬಾಳು ಗ್ರಾಮದಲ್ಲಿ ದೇವಾಲಯದ ಬಳಿ ಒಂದು ಒಕ್ಕೈ ಮಾಸ್ತಿ ಶಿಲ್ಪವಿದೆ. ಇದರ ಮೇಲು ಹಂತದಲ್ಲಿ ಸತಿ–ಪತಿ ಇಬ್ಬರೂ ಭಕ್ತಿ ಭಾವದಿಂದ ಕೈಮುಗಿದುಕೊಂಡು ಕುಳಿತಿದ್ದಾರೆ.

ಯಡಮಾರನಹಳ್ಳಿ ಮತ್ತು ಬೂದಿಕುಪ್ಪೆಯಲ್ಲಿ ಒಂದೊಂದು ಹುಲಿಬೇಟೆ ವೀರಗಲ್ಲಿದೆ. ಯಡಮಾರನಹಳ್ಳಿಯ ವೀರಗಲ್ಲಿನಲ್ಲಿ ನಾಲ್ಕು ಹಂತದ ಶಿಲ್ಪವಿದ್ದು ಕೆಳಹಂತದಲ್ಲಿ ವೀರನೊಬ್ಬನು ಹುಲಿಯ ಜೊತೆ ಹೋರಾಡುತಿದ್ದಾನೆ. ಹುಲಿಯು ವೀರನ ಸರಿಸಮನಾಗಿಯೇ ಚಿತ್ರಿತಗೊಂಡಿದೆ. ಪೂರ್ಣ ವೀರಗಲ್ಲು ಬಹಳ ಆಕರ್ಷಕ ಶೈಲಿಯಲ್ಲಿದೆ.

ಬೂದಿಕುಪ್ಪೆಯ ವೀರಗಲ್ಲಿನಲ್ಲಿ ವೀರ ಮತ್ತು ಹುಲಿ ಹೋರಾಡುತ್ತಿರುವ ಒಂದು ಹಂತದ ಶಿಲ್ಪವಿದೆ. ಇದರಲ್ಲಿ ಶಾಸನವಿದ್ದು ಬುದಿಕುಪ್ಪೆಯ ಗೌಡ ಚೂಡಪ್ಪನ ಮಗ ದೇವಪ್ಪನನ್ನು ಹುಲಿಕಚ್ಚಿ ಸಾಯಿಸಿದ್ದಕ್ಕೆ ಹಾಕಿಸಿದ ವೀರಗಲ್ಲೆಂದು ಹೇಳಲಾಗಿದೆ. ಅಲ್ಲದೆ ಈ ವೀರಗಲ್ಲಿನ ಶಿಲ್ಪಿ ಪಾಳೆಯದ ನಾಗೋಜಿ ಎಂಬುವನು.

ಹೀಗೆ ಕನಕಪುರ ತಾಲ್ಲೂಕಿನ ಶಾಸನಗಳು ವಿಷಯದ ದೃಷ್ಟಿಯಿಂದ, ಶಿಲ್ಪಶೈಲಿಯ ದೃಷ್ಟಿಯಿಂದ ಮಹತ್ವದವುಗಳಾಗಿದ್ದು ಇತಿಹಾಸದಲ್ಲಿ ತಮ್ಮದೇ ಆದ ಸ್ಥಾನ ಪಡೆದಿವೆ.

ಲಿಪಿಕಾರರು ಮತ್ತು ಶಿಲ್ಪಿಗಳು

ಕನಕಪುರ ತಾಲ್ಲೂಕಿನ ಶಾಸನಗಳಲ್ಲಿ ಕೆಲವೇ ಕೆಲವು ಲಿಪಿಕಾರರು ಮತ್ತು ಶಿಲ್ಪಿಗಳು ಕಂಡು ಬರುತ್ತಾರೆ. ಅವರಲ್ಲಿ ಮುಖ್ಯರಾದವರು ಈ ಕೆಳಕಂಡಂತಿದ್ದಾರೆ. ಅಗ್ರಹಾರ ದೊಡ್ಡಿ ಶಾಸನವನ್ನು ಬರೆದವನು. ಶ್ರೀದಾಮೋದರ ಹಾರೋಹಳ್ಳಿ. ಶಾಸನವನ್ನು ತಿಮ್ಮರಾಯ, ದ್ಯಾವಸಂದ್ರ ಶಾಸನ ಬರೆದ ಆದೆಪ್ಪ, ಹುಲ್ಲುಗೊಂಡನಹಳ್ಳಿ ಶಾಸನದ ಬರೆದ ಬಜಾಬಸವಯ್ಯ, ದೊಡ್ಡಕೊಪ್ಪದ ಶಾಸನವನ್ನು ಮಾರೆವೋಜನ ಮಗ ಅತಿಯೋಜ, ಮುಳ್ಳಹಳ್ಳಿ ಶಾಸನವನ್ನು ಶಾನುಭೋಗ ಅಳಿಗಡ, ಅರಳಾಳು ಗ್ರಾಮದ ಶಾಸನವನ್ನು ಶಾನುಭೋಗ ಅಪ್ಪಣ್ಣರು ರಚಿಸಿದ್ದಾರೆ. ಕೋಟೆ ಕೊಪ್ಪದ ವೀರಗಲ್ಲನ್ನು ಕೆತ್ತಿದ ಆಚಾರಿ ದೇವೋಜ, ಪುರುಷಗೊಂಡನಹಳ್ಳಿ ವೀರಗಲ್ಲನ್ನು ಕೆತ್ತಿದ ಆಚಾರಿ ಕಂದಪೋಜ, ಬೂದಿಕುಪ್ಪೆಯ ಹುಲಿಬೇಟೆ ವೀರಗಲ್ಲನ್ನು ಕೆತ್ತಿದವನು ಪಾಳಿಯದ ನಾಗೋಜಿ ಎಂದು ತಿಳಿದು ಬರುತ್ತದೆ.

ಟಿಪ್ಪಣಿಗಳು

1 ಕರ್ನಾಟಕ ವಿಷಯ ವಿಶ್ವಕೋಶ ಪುಟ. 656.

2 ಕಾನಕಾನಹಳ್ಳಿ ಚರಿತ್ರೆ ಲೇ. ಡಾ. ಟಿ.ವಿ.ವಿ., ಪುಟ. 70.

3 ಅರ್ಕಾವತಿ, ಗ್ರಾಮದೇವತೆಗಳು ಮತ್ತು ಐತಿಹ್ಯಗಳು, ಡಾ. ಎಂ. ಬೈರೇಗೌಡ, ಪುಟ. 153.

4 ಅದೇ ಪುಟ. 153.

5 ಅದೇ ಪುಟ. 156.

6 ಅದೇ ಪುಟ. 158.

7 ಕಾನಕಾನಹಳ್ಳಿ ಚರಿತ್ರೆ ಲೇ. ಡಾ. ಟಿ.ವಿ.ವಿ., ಪುಟ. 101.

8 ಅದೇ ಪುಟ 106.

9 ಕರ್ನಾಟಕ ವಿಷಯ ವಿಶ್ವಕೋಶ, ಪುಟ. 700.

10 ಹೊಸತು ಮಾಸಪತ್ರಿಕೆ, ಡಿಸೆಂಬರ್ 2002, ಲೇ. ಮುತ್ತುರಾಜು, ಪುಟ. 59.

11 ಅದೇ ಪುಟ 59.

12 ಕರ್ನಾಟಕ ವಿಷಯ ವಿಶ್ವಕೋಶ, ಪುಟ. 1355.

13 ಕನಕಪುರ ದೇಗುಲ ಮಠದ ಶಾಸನ, ಲೇ. ಆರ್. ಚಕ್ರವರ್ತಿ, ದೇಗುಲ ಸಿರಿ, ಪುಟ. 12.

14 ದೇಗುಲ ಮಠದ ಕೊಡುಗೆ, ಲೇ. ಡಾ. ಬಿ.ಸಿ. ವೀರಪ್ಪ, ಪುಟ. 15.

15 ಕರ್ನಾಟಕ ವಿಷಯ ವಿಶ್ವಕೋಶ, ಸಂಪುಟ 2, ಪುಟ. 990.

16 ಕರ್ನಾಟಕ ವಿಷಯ ವಿಶ್ವಕೋಶ, ಸಂಪುಟ 2, ಪುಟ. 991.

17 ಕರ್ನಾಟಕ ವಿಷಯ ವಿಶ್ವಕೋಶ, ಸಂಪುಟ 2, ಪುಟ. 992.

18 ಹಾರೋಹಳ್ಳಿ ಪುರಾತನ ದೇವಾಲಯಗಳು, ಲೇ. ಡಾ. ಹೆಚ್.ಎಸ್. ವೆಂಕಟೇಶ್, ಪುಟ. 196.

19 ನಮ್ಮೂರಿನ ಗ್ರಾಮದೇವತೆಯರ ಉತ್ಸವ, ಜನಪ್ರಗತಿ, 22–8–1954.

20 ಕಾನಕಾನಹಳ್ಳಿ ಚರಿತ್ರೆ, ಲೇ. ಡಾ. ಟಿ.ವಿ.ವಿ., ಪುಟ. 147.

21 ಕಾನಕಾನಹಳ್ಳಿ ಚರಿತ್ರೆ, ಲೇ. ಡಾ. ಟಿ.ವಿ.ವಿ., ಪುಟ. 148.

22 ಕರ್ನಾಟಕ ವಿಷಯ ವಿಶ್ವಕೋಶ, ಪುಟ. 1303.

23 ಕರ್ನಾಟಕ ವಿಷಯ ವಿಶ್ವಕೋಶ, ಪುಟ. 1416.

24 ಇತಿಹಾಸ ದರ್ಶನ, ಲೇ. ಮುತ್ತುರಾಜ್, ಸಂಚಿಕೆ 16.

ಅಧ್ಯಾಯ – 7

ಪ್ರಮುಖ ತಾಣಗಳು

ಕಾನಕಾನಹಳ್ಳಿ

ತಾಲ್ಲೂಕು ಕಛೇರಿಯ ಸರ್ಕಾರದ ದಾಖಲೆಗಳಲ್ಲಿಯೂ ಸಾರ್ವಜನಿಕ ವ್ಯವಹಾರಗಳಲ್ಲಿಯೂ 10–4–1952 ರಿಂದ ಕನಕಪುರ ಎಂಬುದಾಗಿರುವ ಸ್ಥಳದ ಹೆಸರು ಅದಕ್ಕೆ ಮೊದಲು ಎಷ್ಟೋ ಕಾಲದಿಂದ ಕಾನಕಾನ ಹಳ್ಳಿ ಎಂಬುದಾಗಿತ್ತು. ಹಿಂದಿನ ಪೀಳಿಗೆಗಳವರು ಈಗಲೂ ಅಭ್ಯಾಸಬಲದಿಂದ ಹಾಗೆಯೇ ಕರೆಯುವುದುಂಟು. ಅದೇ ಚೆನ್ನ ಎಂದೂ ಅವರು ಹೇಳುತ್ತಾರೆ.

20ನೆಯ ಶತಮಾನದ ಮಧ್ಯಭಾಗದಿಂದ ಹಿಂದಕ್ಕೆ ಒಂದೆರಡು ಶತಮಾನಗಳ ಅವಧಿಯವರೆಗಾದರೂ ಸರ್ಕಾರದ ದಾಖಲೆಗಳಲ್ಲಿ, ಸಾರ್ವಜನಿಕ ವ್ಯವಹಾರಗಳಲ್ಲಿ, ಇತಿಹಾಸ ಮತ್ತು ಸಾಹಿತ್ಯಗಳ ಬರಹಗಳಲ್ಲಿ ಹಾಗೂ ಪತ್ರಲೇಖನದಲ್ಲಿ ಈ ಸ್ಥಳದ ಹೆಸರು ಕಾನಕನ ಹಳ್ಳಿ ಎಂದೇ ಇರುವುದು ದೃಢವಾಗಿ ಕಾಣುತ್ತದೆ. ಅದರ ವ್ಯಾಪ್ತಿ ಸರ್ವತ್ರವಾಗಿತ್ತು. ಬರೆಯುವಾಗಲೂ ಮಾತಾಡುವಾಗಲೂ ತ್ವರಿತೋಚ್ಚಾರ ಕಾರಣವಾಗಿ ಕಾನ್‌ಕಾನ್ ಹಳ್ಳಿ ಎಂಬುದು ರೂಢಿಯಲ್ಲಿತ್ತು.

ಸುದೀರ್ಘ ಇತಿಹಾಸವನ್ನುಳ್ಳ ಕಾನಕಾನಹಳ್ಳಿ ಎಂಬ ಈ ಸ್ಥಳದ ಹೆಸರಿಗೆ ಏನಾದರೂ ಸಂಭಾವ್ಯವಾದ ನಿಷ್ಪತ್ತಿಯುಂಟೇ ಎಂದು ವಿಚಾರ ಮಾಡಿದರೆ, ಸಾಂಸ್ಕೃತಿಕವಾಗಿಯೂ ಭಾಷಾಶಾಸ್ತ್ರೀಯವಾಗಿಯೂ ಅದಕ್ಕೆ ವಿವರಣೆ ಸಾಧ್ಯವಾಗುವುದಿಲ್ಲ. ಏಕೆ ಸಾಧ್ಯವಾಗುವುದಿಲ್ಲ ಎಂದರೆ, ಈ ಹೆಸರು ತಪ್ಪುರೂಪವಾಗಿ ವ್ಯತ್ಯಾಸಗೊಂಡಿರುವುದೇ ಕಾರಣ ಎನ್ನುವುದು ವಿಮರ್ಶೆಯಿಂದ ತಿಳಿಯುತ್ತದೆ.

ಈ ಸ್ಥಳನಾಮದ ಇತಿಹಾಸವನ್ನು ಸರಿಯಾಗಿ ತಿಳಿಯಬೇಕಾದರೆ ಶಾಸನಗಳನ್ನು ನೋಡಬೇಕಾಗುತ್ತದೆ. ಸ್ಥಳದ ಇತಿಹಾಸವನ್ನು ಕಟ್ಟಿಕೊಡಲು ಅವುಗಳ ಸಹಾಯ ಮಿಗಿಲಾದುದು. ಇಂಥ ಸಹಾಯಕ್ಕೆ ಆಕರಗಳು ಪ್ರಕಟವಾಗಿರುವ ಶಾಸನಸಂಪುಟಗಳು. ಈ ಆಕರಗಳಲ್ಲಿ ಈ ಸ್ಥಳದ ನಿಜವಾದ ಹಳೆಯ ಹೆಸರೂ ಆ ಹೆಸರಿನ ರೂಪಭೇದಗಳೂ ದಾಖಲೆಯಾಗಿದ್ದು, ರೂಪಭೇದಗಳಿಗೆ ಬರಹ ಮತ್ತು ಆಡುಮಾತುಗಳು ಕಾರಣವಾಗಿರುವುದನ್ನು ವಿಮರ್ಶೆಯಿಂದ ತಿಳಿಯಬಹುದಾಗಿದೆ.

ತಾಲ್ಲೂಕಿನ ಕೆಲವು ಶಾಸನಗಳಲ್ಲಿ ಕಾನಕಾನಹಳ್ಳಿ

ಕಾಣಿಕಾರನಹಳ್ಳಿ ಪದದ ಸ್ವರೂಪ : ಕಾಣಿಕಾಜಿ ಹಳ್ಳಿ (ನಂ. 68/1319), ಕಾಣಿಕಾರನಹಳ್ಳಿ (ನಂ. 94/1662, 95/1671) ಕಾನಕಾರನ ಹಳ್ಳಿ (ನಂ. 20/1647, 4/1670, 15/17ನೆಯ ಶತಮಾನ), ಕಾನಕಾಜಿನ ಹಳಿ (ನಂ.11, 14/1648), ಕಾಣಿಕಾರನ ಹಳ್ಳಿ (ನಂ. 38/1651).

ಪಿರಿಯಾಪಟ್ಟಣ ತಾಲ್ಲೂಕಿನ ಬೆಟ್ಟದ ಪುರದ ಶಾಸನದಲ್ಲಿ

ಕಾನಿಕಾರನಹಳ್ಳಿ (MAR. 1943, pb. 1944, pp. 29-30)

ಈ ವಿಭಿನ್ನ ರೂಪಗಳಲ್ಲಿ ಕಾಣಿಕಾಜಿಹಳ್ಳಿ (1319), ಕಾಣಿಕಾರನ ಹಳ್ಳಿ (1651) ಈ ಎರಡು ರೂಪಗಳನ್ನು ವಿಶೇಷವಾಗಿ ಗಮನಿಸಬೇಕು. ಏಕೆಂದರೆ ಇವನ್ನು ಮಾತ್ರವೇ ಭಾಷೆ ಸಂಸ್ಕೃತಿಗಳ ದೃಷ್ಟಿಯಿಂದ ಸಮರ್ಪಕವಾಗಿ ವಿವರಿಸುವುದು ಸಾಧ್ಯ. ಇವುಗಳ ವಿವರಣೆ ವಿಶದಪಟ್ಟರೆ, ಉಳಿದ ರೂಪಗಳನ್ನು ರೂಢಿಯ ಶಿಥಿಲರೂಪಗಳೆಂದು ವಿವರಿಸುವುದು ಸುಲಭವಾಗುತ್ತದೆ; ಜೊತೆಗೆ ಕಾನಕಾನ ಹಳ್ಳಿ ಎಂಬ ಬಳಕೆಯ ಹೆಸರಿನ ರಚನೆಯನ್ನು ಭಾಷಿಕವಾಗಿ ತಿಳಿಯುವುದೂ ಸಾಧ್ಯವಾಗುತ್ತದೆ.[1]

ಕಾಣಿ ಎಂಬುದು ಒಂದು ನಾಮಪ್ರಕೃತಿಯಾಗಿ ಕನ್ನಡ ಮೊದಲುಗೊಂಡು ದ್ರಾವಿಡ ಭಾಷೆಗಳಲ್ಲಿ ಪರಿಚಿತವಾದ ಶಬ್ದವಾಗಿದೆ. ಅದಕ್ಕೆ ಒಂದು ಚಿಕ್ಕ ನಾಣ್ಯ, ಒಂದು ಬಗೆಯ ಸುಂಕ, ಭೂಮಿಯ ಒಂದು ಅಳತೆ, ಆಸ್ತಿ, ಅನುವಂಶಿಕ ಹಕ್ಕುದಾರಿಕೆ, ಸಂಪತ್ತು, ಹಣ, ಕಾವಲುಗಾರ, ಬೇಸಾಯ ಮುಂತಾದ ಅರ್ಥಗಳಿವೆ. ಕನ್ನಡ ಭಾಷೆಯಲ್ಲಿ ಭೂಮಿಕಾಣಿ ಒಂದು ಯಮಳಶಬ್ದವಾಗಿ ಪರಿಚಿತವಿದೆ. ಹೀಗೆಯೇ ಕಾಣಿ ಶಬ್ದಕ್ಕೆ ಕಾರ/ಕಾಜಿ ಎಂಬ ತದ್ಧಿತಪ್ರತ್ಯಯ ಸೇರಿ ಸಿದ್ಧವಾದ ಕಾಣಿಕಾರ/ಕಾಣಿಕಾಜಿ ಎಂಬ ತದ್ಧಿತನಾಮಪದಕ್ಕೆ ಕೂಡ ದ್ರಾವಿಡಭಾಷೆಯಲ್ಲಿ ಜ್ಞಾತಿಶಬ್ದಗಳಿವೆ, ಪ್ರಯೋಗಗಳಿವೆ. ಕಾಣಿಕಾರ/ಕಾಣಿಕಾಜಿ ಶಬ್ದಕ್ಕೆ ಕಾಣಾಚಿ, ಕಾಳಾಂಚಿ, ಕಾಣಿಯಾಚಿ, ಕಾಣಿಯಾಲ ಎಂಬ ಭಿನ್ನ ಅರ್ಥಚ್ಛಾಯೆಗಳ ಸದೃಶರೂಪಗಳೂ ಕಂಡುಬರುತ್ತವೆ.

ಕಾಣಿ ಮತ್ತು ಕಾಣಿಕಾರ / ಕಾಣಿಕಾಜಿ ಈ ಶಬ್ದಗಳಿಗಿರುವ ಅರ್ಥಗಳಲ್ಲಿ ಕೃಷಿ ಮತ್ತು ಕೃಷಿಮೂಲದ ವ್ಯಕ್ತಿ ಹೆಚ್ಚು ಪ್ರಸ್ತುತವಾದುದೆಂದು ಈ ಸಂದರ್ಭದಲ್ಲಿ ಹೇಳಬಹುದು. ನೇರವಾಗಿ ಕಾಣಿಕಾಜಿ ಎಂದೇ ಶಬ್ದದ ಪ್ರಯೋಗವಿರುವ ಮಳವಳ್ಳಿಯ ಶಾಸನದ ಸಾಕ್ಷ್ಯವನ್ನು ಇಲ್ಲಿ ಉದ್ಧರಿಸಬಹುದು. "ದಿಂಬರ ಸೋಮಕಗುಂಡನ ಮಕ್ಕಳು ರಾಮಗಉಂಡ ಮುಂಚೆಗಉಂಡ ಚಾಮಗಉಂಡ... ಬಿಂತೀ ಅನಿಬರು ಕಾಣಿಕಾಜನ ಭಾಗೆಯ ಬೇಕೆಂದೊಡೆ" ಎಂಬ ಈ ಪ್ರಯೋಗಕ್ಕೆ (ಎಕ. III ಮಳವ. 60–8/1155) "ಕುಲಪರಂಪರೆಯಿಂದ ಬಂದ ಊರೊಟ್ಟಿನ ಜಮೀನಿನಲ್ಲಿ ಸಮಾನಹಕ್ಕು, ಪಾಲು ಉಳ್ಳವನು; ಪಾಲುದಾರಿಕೆಯ ಹಕ್ಕುದಾರ" ಎಂಬ ಅರ್ಥವನ್ನು ಒಪ್ಪಿದೆ (ಕನ್ನಡ ನಿಘಂಟು. ಸಂ 2, ಪುಟ 1704). ಮಳವಳ್ಳಿ ಶಾಸನದ ಪ್ರಯೋಗ ಪ್ರಾಚೀನವಾದ್ದು. ಬೇಸಾಯಗಾರ ಎಂಬರ್ಥದ ಕಾಣಿಯಾಲ ಸಹ ಸಮೀಪಸಂಬಂಧಿಯಾದುದು (ಎಕ. xiv ಗುಂಡ್ಲುಪೇಟೆ 129–100/1521). ತೆಲುಗಿನಲ್ಲಿ 'ಕಾಣೆ' ಎಂಬ ಶಬ್ದಕ್ಕೆ 20 ಗುಂಟೆಗಳ ನೆಲವೆಂದೂ 'ಕಾಣಾಚಿ' ವಂಶಪರಂಪರಾಗತವಾದ, ಕುಲಮರ್ಯಾದಾಸಂಬಂಧವಾದ ಎಂದು 'ಕಾಣಾಚಿಕಾಡು' ಎಂಬುದಕ್ಕೆ ಚಿರಕಾಲದಿಂದ ಅನುಭವಿಸುತ್ತಿರುವವನು, ಚಿರಕಾಲದಿಂದ ಇರುವವನು ಎಂದೂ ಮುಂತಾದ ರೀತಿಗಳಲ್ಲಿ ಶಬ್ದರೂಪಗಳೂ ಅರ್ಥಗಳೂ ಇವೆ.[2]

ಕೃಷಿಮೂಲವಾದ ಈ 'ಕಾಣಿಕಾರ' ಶಬ್ದಕ್ಕೆ ಶಕಟರೇಫದ ' ಕಾಣಿಕಾಱ' ಎಂಬ ರೂಪ ವಿಕಲ್ಪವಾಗಿ ಬಳಕೆಯಾಗುವುದು ಶಾಸನಗಳಲ್ಲಿ ಸಾಮಾನ್ಯ. ಇವುಗಳಲ್ಲಿ ರೇಫ ಘಟಿತವಾದ್ದು ಮೊದಲೋ ಶಕಟರೇಫಘಟಿತವಾದ್ದು ಮೊದಲೋ, ಹೇಳುವುದು ಕಷ್ಟ, ಈಗ ನೋಡಿರುವ ಶಾಸನಪ್ರಯೋಗಗಳನ್ನು ಲಕ್ಷಿಸಿ ಹೇಳಬಹುದಾದರೆ, ಕಾಣಿಕಾಱಹಳ್ಳಿ / ಕಾಣಿಕಾಱನಹಳ್ಳಿ ಎಂಬುದೇ ಈ ಸ್ಥಳದ ಹಳೆಯ ನಿಜವಾದ ಹೆಸರಾಗಿದ್ದಿರಬೇಕು ಎಂದು ತರ್ಕಿಸಿದರೆ, ಬಹುಶಹ ತಪ್ಪಾಗಲಾರದು.

ಎಂದರೆ, ಈ ತಾಲ್ಲೂಕುಕೇಂದ್ರದ ಹೆಸರು ಕಾಣಿಕಾಱಹಳ್ಳಿ/ ಕಾಣಿಕಾಱನ ಹಳ್ಳಿ/ ಕಾಣಿಕಾರನಹಳ್ಳಿ > ಕಾನಕಾನಹಳ್ಳಿ>ಕನಕಪುರ (ಕಲ್ಪಿತನಾಮ) ಎನ್ನುವುದು ನಿಶ್ಚಯ. ಕಾನಕಾನ ಹಳ್ಳಿ ಎಂಬುದು ಕಾಣಿಕಾರ(ನ) ಹಳ್ಳಿ > ಕಾನಕಾರ (ನ) ಹಳ್ಳಿ>ಕಾನಕಾನ ಹಳ್ಳಿ ಎಂಬುದಾಗಿ ರೂಪಪರಿವರ್ತನೆಗೊಂಡು ರೂಢಿಯಲ್ಲಿ ಸ್ಥಿರವಾಗಿರಬಹುದು. ಇಲ್ಲಿ ಮೂರ್ಧನ್ಯಧ್ವನಿ ದಂತ್ಯಧ್ವನಿಯಾಗಿ (ಣ > ನ) ವರ್ತ್ಸ್ಯವು ಅನುನಾಸಿಕವಾಗಿ (ರ > ನ) ಇಲ್ಲವೆ ತ್ವರಿತೋಚ್ಚಾರದಿಂದ 'ಕಾನಕಾರನ' ಎಂಬ ರೂಪದಲ್ಲಿ ಉಪಾಂತಾಕ್ಷರರೇಫ ಲುಪ್ತವಾಗಿ (ಕಾನಕಾರನ > ಕಾನಕಾನ) ಪರಿವರ್ತನೆಗೊಂಡಿರುವುದು ಸಾಧ್ಯ. ಇದು ಒಂದು ಸಹಜವಾದ ಭಾಷಾವ್ಯಾಪಾರ. 'ಕಂಠೀರವ ನರಸರಾಜವಿಜಯ'ದಲ್ಲಿ (1648) ಸ್ಥಳದ ಮನ್ನೆಯನ ಹೆಸರು 'ಕಾನಕಾರನ ಹಳ್ಳಿಮುದ್ದಯ್ಯ' ಎಂಬುದಾಗಿದೆ. ಇಲ್ಲಿಂದ ಮುಂದೆ ಆಡುಮಾತಿನ ವೈಲಕ್ಷಣ್ಯಗಳು ಕಾರಣವಾಗಿ ಕಾನ್‌ಕಾನ್‌ಹಳ್ಳಿ ಸಹ ಪ್ರಚಲಿತವಾಯಿತು.

ಕಾನಕಾನಹಳ್ಳಿ ಎಂಬ ರೂಢಿಯ ರೂಪ ಎಂದಿನಿಂದ ಕಂಡುಬರುತ್ತಿದೆ

ಚನ್ನಪಟ್ಟಣ ತಾಲ್ಲೂಕು ವಿರೂಪಾಕ್ಷಪುರ ಹೋಬಳಿಯ ಕೂಡ್ಲೂರು ಶಾಸನದಲ್ಲಿ (ಚನ್ನಪಟ್ಟಣ 108/1824) "ಕಾನಕಾನಹಳ್ಳಿ ವೆಂಕಟಲಕ್ಷ್ಮಿಯು ಕೂಡ್ಲೂರು ಶ್ರೀರಾಮಸ್ವಾಮಿಯವರ ದೇವಸ್ಥಾನ ಶ್ರೀರಾಮನವಮಿ ವುತ್ಸವದ ಕಟ್ಲೆ ನಡೆಯುವಂತೆ ಕೂಡ್ಲೂರ ಶಾನುಭಾಗ ಕಪನಿಪತ್ಯೆಯ್ಯನವರಿಂದಾ ಕ್ರಯಲಬ್ಧವಾಗಿ ಬಂದು ಮತ್ತಿಕದ ತೆಂಗಿನ ತೋಟವಂನ್ನು ವಪ್ಪಿಶಿಯಿದೇನೆ" ಎಂಬುದಾಗಿ ಪಾಠವಿದ್ದು, 1824ರಲ್ಲಿ ಕಾನಕಾನ ಹಳ್ಳಿ ಎಂಬ ರೂಪ ಸ್ಪಷ್ಟವಾಗಿ ಕಾಣುತ್ತಿದೆ. ಈ ಗಡಿ ಇನ್ನೂ ಹಿಂದಕ್ಕೆ ಕೂಡ ಸರಿಯುವುದಕ್ಕೆ ವಿದೇಶೀಯ ಲೇಖಕರ ಬರಹಗಳ ಸಾಕ್ಷ್ಯಗಳುಂಟು. ಆಂಗ್ಲ ಇತಿಹಾಸಕಾರ ಅಲೆಕ್ಸಾಂಡರ್ ಬೀಟ್ಸನ್ (1800) (Cankanelli) ಎಂದೂ ಫ್ರಾನ್ಸಿಸ್ ಬುಕನನ್ (1807) Can Can-hully ಎಂದೂ ಕರ್ನಲ್ ವಿಲ್ಕ್ಸ್ (1810) Kaun kan hully ಎಂದೂ ಬಿ.ಎಲ್.ರೈಸ್ (1976) Kan kan halli ಎಂದೂ ಬಳಸಿದ್ದು, ಇವುಗಳಲ್ಲಿ ಕೊನೆಯ ರೂಪವೇ ಬಹುಕಾಲ ಚಾಲ್ತಿಯ ರೂಪವಾಗಿತ್ತು. ಈ ಆಧಾರಗಳಿಂದ ಸುಮಾರು 1800 ರಿಂದ ಕಾನಕಾನ ಹಳ್ಳಿ ಎಂಬ ಸ್ಥಳನಾಮ ಅಬಾಧಿತವಾಗಿ ವ್ಯವಹಾರದಲ್ಲಿದೆ ಎಂದು ತಿಳಿಯಬಹುದಾಗಿದೆ. ಅಲ್ಲಿಂದ ಹಿಂದಕ್ಕೆ ಎಂದಿನಿಂದ ಆ ರೂಪ 'ಕಾಣಿಕಾರನಹಳ್ಳಿ' ರೂಪವನ್ನು ಮರಸಿ ತಾನು ಕಾಣಿಸಕೊಂಡಿತೋ ತಿಳಿಯಬೇಕಾಗಿದೆ.

ಈಗ ಅಧಿಕೃತವಾಗಿ ಬಳಕೆಯಲ್ಲಿರುವ ಕನಕಪುರ ಎಂಬುದು 1952ರಿಂದ ಚಾಲ್ತಿಗೆ ಬಂದಿತು. ಹೀಗೆ ಬದಲಾಗಬೇಕೆಂದು ಕೋಟೆಯ ಗಣ್ಯವ್ಯಾಪಾರಿ ಅಪ್ರಮೇಯ ಎಂಬುವರು ಸ್ಥಳಕ್ಕೆ ಭೇಟಿನೀಡುತ್ತಿದ್ದ ಹಿರಿಯ ಸರ್ಕಾರಿ ಅಧಿಕಾರಿಗಳಲ್ಲಿ ಆಗಾಗ ಮನವಿ ಮಾಡುತ್ತಿದ್ದರೆನ್ನಲಾಗಿದೆ. 'ಕನಕಪುರ' ಎಂಬ ಹೆಸರು ಸೌಂದರ್ಯದೃಷ್ಟಿ ಪ್ರೇರಿಸಿದ ಒಂದು ಕಾಲ್ಪನಿಕಸೃಷ್ಟಿ. ಈ ಕಲ್ಪನೆಯನ್ನು 'ಕಾನಕಾನ' ಎಂಬಲ್ಲಿಯ ಮೊದಲ ಮೂರಕ್ಷರಗಳು ಮೀಟಿದ್ದರೂ ಇದ್ದೀತು, ಕನಕಪುರ ಎಂಬ ಹೆಸರಿನ ಇನ್ನೊಂದು ಊರು ಕರ್ನಾಟಕದ ಯಾವುದೋ ಒಂದು ಜಿಲ್ಲೆಯಲ್ಲಿ ಕೂಡ ಇರುವಂತಿದೆ; ಆದರೆ 'ಕಾನಕಾನಹಳ್ಳಿ' ಎಂಬುದು ಮಾತ್ರ ಏಕಮೇವಾದ್ವಿತೀಯವಾದುದು; ನಮಗೆ ಮಾತ್ರ ಸೇರಿದ್ದು.

ಈ ಸಂದರ್ಭದಲ್ಲಿಯೇ ಜನಪದನಿರುಕ್ತಿಯ ಕೆಲವು ಉಲ್ಲೇಖಗಳನ್ನೂ ಪ್ರಸ್ತಾವಿಸಿ, ಇಂಥ ನಿರುಕ್ತಿಗಳಿಗೆ ನಂಬಿಕೆಗಳೂ ಐತಿಹ್ಯಗಳೂ ಹೇಗೆ ಕಾರಣವಾಗಿರುತ್ತದೆ ಎಂಬುದನ್ನು ತಿಳಿಯಬಹುದಾಗಿದೆ. ಇತಿಹಾಸ, ಪರಂಪರೆ, ಲಿಖಿತಸಾಕ್ಷ್ಯಗಳ ಅಜ್ಞಾನದಿಂದಾಗಿ ಇಂಥವು ಹುಟ್ಟಿವೆಯೆನ್ನುವುದೂ ಇವನ್ನು ಹಗುರವಾಗಿ ತಳ್ಳಿ ಹಾಕಬಹುದು ಎನ್ನುವುದೂ ವಿದಿತ.

1. **ಫ್ರಾನ್ಸಿಸ್ ಬುಕನನ್** : Report of a journey through Mysore, Canara and Malabar (1807), vol. III, ch. XX, p. 425.

.... I went three cosses to Canicarn-hully, commonly called Can Can-hully. The former name is universally said by the natives to be the proper one; but the derivation which they give of it seems very forced. Canicarna, they say, is the genitive case of canicar, which in the Tamul language signifies a proprietor of land, and Hully, in the language of Carnata, is a village.

ಬುಕನನ್, ಚಾಲ್ತಿಯ ಕಾನ್‌ಕಾನ್ ಹಳ್ಳಿಗೆ ಹಿಂದೆ ಇದ್ದ ಕಾಣಿಕಾರನ ಹಳ್ಳಿ ಎಂಬ ಸರಿಯಾದ ರೂಪವನ್ನೇ ಸ್ಥಳೀಯರು ನಿಷ್ಪತ್ತಿಸಹಿತವಾಗಿ ಹೇಳಿದರೂ ಅದನ್ನು ಸಂದೇಹಿಸಿ, The name of the village is properly Kanya-karna, composed of two sanskrit words, Kanya virgin, or the goddess Bhawani and Karna ear" ಎಂಬುದಾಗಿ ಹೇಳಿರುವುದು ಅವರಿಗೆ ಶಾಸನಾಧಾರಗಳ ಯಾವ ತಿಳಿವಳಿಕೆಯೂ ಇಲ್ಲದಿರುವುದನ್ನೂ ದೇಶೀಯರನ್ನು ವಿನಾ ಕಾರಣ ಸಂಶಯಿಸುವ ಮೇಲರಿಮೆಯಿಂದ ಕೂಡಿರುವುದನ್ನೂ ತೋರಿಸುತ್ತದೆ. ಅವರು ಕೊಡುವ ನಿಷ್ಪತ್ತಿ ಆಧಾರರಹಿತವಾದ ಒಂದು ಪಂಡಿತನಿಷ್ಪತ್ತಿಯೇ ಸರಿ.

2. **ದೇವಚಂದ್ರ** : 'ರಾಜಾವಳೀಕಥೆ' (1838) "ತನ್ನ ದೇಶ ಕುಲ ಮೊದಲಾದವು ಶ್ರೇಷ್ಠವೆಂಬ ನಂಬುಗೆಯಿಂದನೇಕದೃಷ್ಟಂಗಳಂ ತೋರಿ ಶಾಸ್ತ್ರಮಂ ಕಲ್ಪಸುವರ್" ಎಂಬುದನ್ನು ಸಮರ್ಥಿಸಲು ದೇವಚಂದ್ರನು ಕೆಲವು ದೃಷ್ಟಾಂತ ಕಥೆಗಳನ್ನು ಹೇಳಿದ್ದಾನೆ. ಇವುಗಳಲ್ಲಿ ಬ್ರಾಹ್ಮಣವಿಡಂಬನೆಯ ಕಲ್ಪಿತಕಥೆಯಾಗಿ ಕಾನಕಾನಹಳ್ಳಿ ಎಂಬ ಹೆಸರಿನ ನಿಷ್ಪತ್ತಿಯ ಕಥೆಯೂ ಸೇರಿದೆ. ಅದೆಂದರೆ: "ಅಪ್ಪಾಜಿ ದೀಕ್ಷಿತರ ಭಾರ್ಯೆ ಒಬ್ಬ ತುರುಕನನಿಟ್ಟುಕೊಂಡು ಮಗನಾಗಲಾತಂ ತುರುಕನೆಯಾಗಿ ಖಾನಖಾನವೆಂಬ ಪೆಸರಾಗೆ ಉತ್ತರದೇಶದೊಳು ಕೆಲವು ರಾಜ್ಯಮನಾಳಿ ಖಾನಖಾನ ಹಳಿಯೆಮಬ ಪುರಮಂ ಕಟ್ಟಿಸಿ ಬ್ರಾಹ್ಮಣರಿಗೆ ಆ ಗ್ರಾಮಮಂ ಕೊಟ್ಟು ಪ್ರಸಿದ್ಧಿವಡೆದಂ (ಪು. 202)".

ಈ ಕಥನದಲ್ಲಿ ದೇವಚಂದ್ರನ ಅಜ್ಞಾನವೂ ಅದಕ್ಕಿಂತ ಹೆಚ್ಚಾಗಿ ಮತೀಯವಾದ ಅಸಹನೆಯೂ ಎದ್ದುತೋರಿವೆ.

"ಖಾನ್ ಖಾನ್ ಎಂಬ ಮುಸ್ಲಿಂ ಪಾಳೆಯಗಾರನೊಬ್ಬನು ಹಿಂದೆ ಇಲ್ಲಿ ಆಳುತ್ತಿದ್ದನೆಂದೂ ಆತನಿಂದ ಈ ಊರಿಗೆ ಕಾನಕಾನಹಳ್ಳಿ ಎಂದು ಹೆಸರಾಯಿತೆಂದು ಕೆಲವರು ಹೇಳುತ್ತಾರೆ" ಎಂಬ ಮಾತನ್ನು ಉಲ್ಲೇಖಿಸುತ್ತ, "ಆದರೆ ಮುಸ್ಲಿಂ ಪಾಳೆಯಗಾರನೊಬ್ಬನು ಆಳುತ್ತಿದ್ದನೆಂಬುದಕ್ಕೆ ಈ ಊರಿನಲ್ಲಿ ಯಾವ ಐತಿಹಾಸಿಕ ಆಧಾರವೂ ಇಲ್ಲ" ಎಂದು ಅಭಿಪ್ರಾಯಪಟ್ಟಿರುವುದು (ಬಿ. ನಂಜುಂಡಪ್ಪ, ಕನ್ನಡ ನುಡಿ, 10-38, ಪು. 1) ಸರಿಯಾಗಿಯೇ ಇದೆ.

"ಖಾನ್ ಖಾನ್ ಎಂಬ ಒಬ್ಬ ರಾಜಕೀಯ ಮುತ್ಸದ್ದಿಯೋ ನವಾಬನೋ ಇದ್ದ. ಅವನ ಸಮಾಧಿ ಇಂದಿಗೂ ಮೈಸೂರುರಸ್ತೆಯಲ್ಲಿದೆ. ವರ್ಷಕ್ಕೊಮ್ಮೆ ಇಲ್ಲಿ ನಡೆಯುವ ಉರುಸ್ ಹಿಂದು–ಮುಸ್ಲಿಂ ಏಕತೆಗೆ ಒಳ್ಳೆಯ ನಿದರ್ಶನ" (ತರಂಗ, 5–6–1983) ಎನ್ನುವ ಇನ್ನೊಂದು ಹೇಳಿಕೆಯೂ ಇದೆ. ಸಮಾಧಿಯ ವಿಷಯವೂ ಉರುಸ್ ವಿಷಯವೂ ಏನೇ ಇರಲಿ, ದಿಟವೇ ಇರಲಿ, ಈ ವ್ಯಕ್ತಿಗೂ ಸ್ಥಳದ ಹೆಸರಿಗೂ ಯಾವುದೇ ಸಂಬಂಧವನ್ನು ಕಲ್ಪಿಸಬೇಕಾದುದಿಲ್ಲ. ಈ ಮುಸ್ಲಿಂ ಮಹಾಶಯನ ಹೆಸರು ಕೂಡ ಒಂದು ತೆರನಾಗಿ ಐತಿಹ್ಯವಿರಬಹುದು.

ಇನ್ನೊಂದು ನಿಷ್ಪತ್ತಿ: "ಈವೂರಿನಲ್ಲಿ ಅನೇಕ ಕರಣಿಕರು ನೆಲಸಿದ್ದರಾಗಿ ಕರಣಿಕರ ಕಾರಣದಿಂದ ಕಾನಕಾನಹಳ್ಳಿ ಎಂಬು ಹೆಸರು ಬಂತೆಂದು ತಿಳಿಯುವುದು ಸಾಧುವಾಗಿರುವುದು" (ಕಾನಕಾನಹಳ್ಳಿ ಪರಿಚಯ, 1897, ಪು. 1). ಇದನ್ನು ಸ್ಥಳದ ಕರಣಿಕ ದೇವಪ್ಪಯ್ಯನೂ ಒಪ್ಪುವನೆಂದು ಅಲ್ಲಿಯೇ ಹೇಳಿದೆ. "ಮೈಸೂರು ದೇಶದಲ್ಲಿ ಕಾನಕಾನಹಳ್ಳಿ ತಾಲ್ಲೂಕು ಬಹು ದೊಡ್ಡದು ಹಳ್ಳಿಗಳ ಸಂಖ್ಯೆಯೂ ಹೆಚ್ಚು. ಆ ಹಳ್ಳಿಗಳೆಲ್ಲಕ್ಕೂ ಸಂಬಂಧಪಟ್ಟ ಎಲ್ಲಾ ಶಾನುಭೋಗ (ಕರಣಿಕ)ರೂ ಈ ಊರಿನಲ್ಲೆ ನೆಲಸಿದ್ದರಿಂದ ಈ ಊರಿಗೆ 'ಕರಣಿಕರಹಳ್ಳಿ' ಎಂದು ಪ್ರತೀತಿ ಇದ್ದಿರಬಹುದು. ಆ ಮಾತೇ ಜನರ ಬಾಯಲ್ಲಿ ಕಾಲಕ್ರಮದಲ್ಲಿ 'ಕಾನಕಾನಹಳ್ಳೀ' ಎಂದಾಗಿರಬಹುದು". ಇದನ್ನು ಉಲ್ಲೇಖಿಸುತ್ತ, "ಇದು ವಿಚಾರಕ್ಕೆ ಸಿಕ್ಕುವ ಮಾತಲ್ಲ" ಎಂದಿದೆ (ಕನ್ನಡ ನುಡಿ, 10–38). ಇದು ಸರಿ.

ಹಿಂದೆ ಇನ್ನೂ ಕೆಲವು ಇಂಥವೇ ನಿರರ್ಥಕ ನಿಷ್ಪತ್ತಿಗಳು ಹೊರಟಿವೆ (ನಿರ್ವಾಣಶ್ರೀ, ಪು 1). ಹೈದರಲಿಯ ಕಾಲದಿಂದ ಈಚೆಗೆ ಕಾನ್‌ಕಾನ್‌ಹಳ್ಳಿ ಎಂಬ ಹೆಸರಿನಿಂದ ಕರೆಯಲ್ಪಡುವ ಈ ಊರು ಹೊಸ ತುರ್ಕಿಭಾಷೆಯ ಖಾನ್ ಶಬ್ದವು ಹಳೆಯ ತುರ್ಕಿಭಾಷೆಯಲ್ಲಿ 'ಕಾನ್' ಎಂಬುದಾಗಿತ್ತು. 'ಕಾನ್' ಶಬ್ದವು ವಿಕಾರ ಹೊಂದಿ ಕಾನ ಎಂಬುದಾಗಿರಬಹುದೆಂದೂ 'ಕಾನ್' ಶಬ್ದವು ಪೂರ್ವದ್ರಾವಿಡದ 'ಕೋನ್' ಅಥವಾ 'ಕೋ' ಎಂದಾಗಿ ನಾಯಕ ಅಥವಾ ದೇವರು ಎಂಬ ಅರ್ಥಕೊಡುವ ಶಬ್ದಗಳಿಂದ ಮೂಡಿಬಂದಿರಬಹುದು ಎಂದೂ 'ಕಾನ್' ಎಂದರೆ 'ಕಾಡು' ಎಂಬ ಅರ್ಥವೂ ಇರುವುದರಿಂದ ಕಾಡುಗಳಿಂದ ಕೂಡಿದ ಹಳ್ಳಿ ಕಾನ್‌ಕಾನ್ ಹಳ್ಳಿ ಏಕಾಗಿರಬಾರದೆಂದೂ ಮುಂತಾಗಿ ತಿಳಿಯಲಾಗಿದೆ.

ಇವಾದರೂ ಇತಿಹಾಸ ಪರಂಪರೆ ಲಿಖಿತಸಾಕ್ಷ್ಯಗಳ ಅಜ್ಞಾನದಿಂದಲೇ ಹುಟ್ಟಿರುವ ಕಲ್ಪನೆಯ ಕುದುರೆಗಳಾಗಿವೆ. ಭಾಷಿಕವಾಗಿ ಆಗಲಿ, ಸಾಂಸ್ಕೃತಿಕವಾಗಿ ಆಗಲಿ ಇವನ್ನು ಸಮರ್ಥಿಸುವುದಕ್ಕೆ ಸಾಧ್ಯವೇ ಇಲ್ಲ.

ಈಗಾಗಲೇ ಗಮನಿಸಿರುವಂತೆ ಕಾಣಿಕಾಜನಹಳ್ಳಿ / ಕಾಣಿಕಾರನಹಳ್ಳಿ ಎಂಬ ಸ್ಥಳನಾಮರೂಪವನ್ನು ಆಧಾರವಾಗಿಟ್ಟುಕೊಂಡು, ಕಾನಕಾನಹಳ್ಳಿ / ಕಾನ್‌ಕಾನ್‌ಹಳ್ಳಿ ಎಂಬ ರೂಪವನ್ನು ಭಾಷಿಕವಾಗಿ ನಿಷ್ಪನ್ನಗೊಳಿಸುವುದೇ ಸರಿಯಾದ ಕ್ರಮ.

ಈ ಹಳ್ಳಿ ಈ ಪ್ರದೇಶ ಅರ್ಕಾವತಿ ನದಿಯ ಪಶ್ಚಿಮದ ದಂಡೆಯಲ್ಲಿ ವಿಸ್ತಾರವಾಗಿ ಹಬ್ಬಿದೆ. ಕೋಟೆ ಮತ್ತು ಪೇಟೆ ಎಂಬುದಾಗಿ ವಿಭಾಗಗೊಂಡಿರುವ ಈ ಊರಿನಲ್ಲಿ ಕೋಟೆಯೇ ಹಳೆಯ ಪ್ರದೇಶ. ಹಳಗಾಲದ ಒಂದು ಜಾತಿ ಪಂಗಡ ವೃತ್ತಿಗಳ ವ್ಯವಸ್ಥೆಗೆ ಅನುಗುಣವಾಗಿ ಇಲ್ಲಿಯೂ ಕೇರಿಗಳ, ಮನೆಗಳ ಸರಣಿ ಕಂಡುಬರುತ್ತದೆ. ಅಲ್ಲೊಂದು ಇಲ್ಲೊಂದು ಹಳೆಯ ಕಾಲದ ತಾರಸಿಮನೆಗಳನ್ನು ಹೊರತುಪಡಿಸಿದರೆ ಹೆಚ್ಚಿನವು ಹಂಚಿನ ಮನೆಗಳು. ಮುಂದೆ ಜಗಲಿ, ಮುಂಗಟ್ಟುಗಳು; ಹಿಂದೆ ವಿಶಾಲವಾದ ಹಿತ್ತಿಲು, ಸಣ್ಣ ಕೈದೋಟಗಳು.

ಒಂದು ಕಾಲಕ್ಕೆ ಕೋಟೆಯ ಭಾಗದಲ್ಲಿ ಅರ್ಕಾವತಿ ನದಿಯ ಕಡೆಗೆ ಕೆಳಗಿನ ಬೀದಿಗಳಲ್ಲಿ ಶ್ರೀವೈಷ್ಣವರ, ಮಧ್ಯದ ಬೀದಿಯಲ್ಲಿ ಪುರೋಹಿತವರ್ಗದ ತೆಲುಗು ಸ್ಮಾರ್ತರ ಮತ್ತು ಮೇಲಿನ ಬೀದಿಯಲ್ಲಿ ಜಮೀನುದಾರರಾದ ಹೊಯ್ಸಳಕರ್ನಾಟಕ ಬ್ರಾಹ್ಮಣ ಪಂಗಡದವರ ಹಾಗೂ ಈ ಅರ್ಧವರ್ತುಲಾಕಾರದ ಬ್ರಾಹ್ಮಣ ಬೀದಿಗಳಲ್ಲಿ ಕೋಟೆಯ ಗಣೇಶನ ಗುಡಿಯನ್ನು ಎಡಗಡೆಗೆ ಬಳಸಿದಂತೆ ಮಾಧ್ವಬ್ರಾಹ್ಮಣರ ಮನೆಗಳು ವಿಶೇಷವಾಗಿ ಕಂಡುಬರುತ್ತಿದ್ದವು. ಈಗ ಕಾಲಗತಿಯನ್ನು ಹಿಡಿದು ಈ ವ್ಯವಸ್ಥೆ ವ್ಯತ್ಯಸ್ತಗೊಂಡಿದೆ.

ಇನ್ನು ಪೇಟೆಯ ಭಾಗ. ಮುಖ್ಯವಾಗಿ ವ್ಯಾಪಾರವಹಿವಾಟುಗಳ ಮುಖ್ಯ ಬೀದಿಯಿಂದ ಕೂಡಿದ್ದು, ಬೀದಿಗೆ ಪೂರ್ವಪಶ್ಚಿಮಗಳಲ್ಲಿ ವೈಶ್ಯರು, ವೀರಶೈವರು, ಬಣಜಿಗರು, ನೇಕಾರರು, ಮುಸ್ಲಿಮರು ಮತ್ತು ಇತರರು ವಾಸಿಸುತ್ತಿದ್ದಾರೆನ್ನಲಾಗಿದೆ.

ಒಂದು ಕಡೆ ಕೋಟೆಯ ಪ್ರದೇಶಕ್ಕೆ ಹೊಂದಿಕೊಂಡಂತೆ ಪೂರ್ವಕ್ಕೆ ವೃತ್ತಿಕಾರರ ವಸತಿಗಳು, ಪಶ್ಚಿಮಕ್ಕೆ ಹಲಸಿನಮರದ ದೊಡ್ಡಿ ಎಂಬ ಬಡವಾಣೆಯಲ್ಲಿ ಕೃಷಿಕರ ಮತ್ತು ಇತರರ ವಸತಿಗಲು, ಇನ್ನೊಂದು ಸೆರಗಿನಲ್ಲಿ ಅವನ್ನು ದಾಟುತ್ತಿದ್ದಂತೆ ಕುರುಪೇಟೆಯೆಂಬ ಗಂಗೆ ಮತಸ್ಥ (ಬೆಸ್ತರು) ಪಂಗಡದವರು ಹೆಚ್ಚಾಗಿ ವಾಸಿಸುವವರ ವಸತಿಗಳು ಕಂಡು ಬರುತ್ತವೆ. ಈಚಿನ ದಶಕಗಳಲ್ಲಿ ನಗರದ ಬೆಳವಣಿಗೆಗೆ ಅನುಸಾರವಾಗಿ ಹೊಸ ಕಾಲೊನಿಗಲು ಹುಟ್ಟಿಕೊಂಡಿವೆ. ಹಿಂದೆಯೇ ತಲೆಯೆತ್ತಿದ ಎಲೆಕ್ಟ್ರಿಲ್ ಕಾಲೊನಿಯೂ ಅದರ ಮಾನಸ್ತಂಭದಂತಿರುವ ವಿದ್ಯುದಾಗಾರಕೇಂದ್ರವೂ ವಿಶೇಷವಾಗಿಯೇ ಉಲ್ಲೇಖಿಸಬೇಕಾದವು.

ಕನಕಪುರ ಎಂದು ಕರೆಯುತ್ತಿರುವ ಕಾನಕಾನಹಳ್ಳಿ ಒಂದು ಅಗ್ರಹಾರವೋ ಉಂಬಳಿಗ್ರಾಮವೋ ಆಗಿ ಬೆಳೆದು ಬಂದು ಸ್ಥಳವಲ್ಲ. ಈ ಸಂಗತಿಯನ್ನು ಪೋಷಿಸುವ ಶಾಸನಸಾಕ್ಷ್ಯಗಳಿಲ್ಲ. ಮುಖ್ಯವಾಗಿ ಅದು ಒಕ್ಕಲುಮಕ್ಕಳ ನೆಲೆ: ಚನ್ನಪಟ್ಟಣಕ್ಕೆ ವಳಿತವಾಗಿ ವಿಜಯನಗರದ ಸಂಸ್ಥಾನಿಕರ ಆಶ್ರಿತರು ಅದನ್ನು ಕಟ್ಟಿ ಬೆಳಸಿದರು; ಬಳಿಕ ಅದು ಮೈಸೂರರಸರ ಕಾಲದಲ್ಲಿ ಶ್ರೀರಂಗಪಟ್ಟಣಕ್ಕೆ ವಳಿತವಾಗಿ ಬೆಳೆದು ಕೊಂಡುಬಂದಿತ್ತು.ತಮ್ಮ ನಿತ್ಯವಿಧಿಗಳು ಪೂಜಾದಿಗಳಿಗೆ ಒದಗುವ ನದೀತೀರ, ದೇಗುಲಗಳ ನೆರೆ ಬಯಸುವ ಬ್ರಾಹ್ಮಣಕುಟುಂಬಗಳು ಕರ್ನಾಟಕದ, ವಿಶೇಷವಾಗಿ ಮೈಸೂರು ಸಂಸ್ಥಾನದ, ಬೇರೆ ಬೇರೆ ಜಿಲ್ಲೆಗಳಿಂದಲೂ ಆಂಧ್ರ ಮತ್ತು ತಮಿಳು ನಾಡುಗಳಿಂದಲೂ ವಲಸೆ ಬಂದು ಇಲ್ಲಿ ವಸತಿಮಾಡಿದರೆಂದು ಅವರ ಮನೆತನಗಳ ಪೂರ್ವವೃತ್ತಾಂತಗಳಿಂದ ತಿಳಿಯಬಹುದಾಗಿದೆ. ಹೊಯ್ಸಳ ಕರ್ನಾಟಕ ಕುಟುಂಬಗಳು ಹೆಚ್ಚಿನ ಮಟ್ಟಿಗೆ ಹಾಸನಜಿಲ್ಲೆಯವು, ಆಂಧ್ರರು ಕಡಪ ಅನಂತಪುರ ಮತ್ತು ಬಾರಾಮಹಲ್ ಪ್ರದೇಶಗಳವರು, ಮಾಧ್ವರು ಮಾಗಡಿ ಮೊದಲಾದ ಕಡೆಗಳಿಂದ ಬಂದವರು.

ಹೊಯ್ಸಳ ಕರ್ನಾಟಕರು ಇಲ್ಲಿಯ ಬ್ರಾಹ್ಮಣ್ಯವನ್ನು ಬಲಪಡಿಸಿದವರು. ಇವರೂ ಕೃಷಿಕರೂ ಪರಸ್ಪರರನ್ನು ಪೋಷಿಸಿದರು. ಇವರ ಗೃಹಕೃತ್ಯದ ಪೌರೋಹಿತ್ಯವ್ನು ತೆಲುಗು ಮನೆಮಾತಿನ ಆಂಧ್ರ ಬ್ರಾಹ್ಮಣರು ನಿರ್ವಹಿಸುತ್ತಿದ್ದರು, ನಿರ್ವಹಿಸುತ್ತಿದ್ದಾರೆ. ಮಾಧ್ವಬ್ರಾಹ್ಮಣರೂ ವೃತ್ತಿವಂತರೇ. ಹಾಗೆಯೇ ವೈಷ್ಣವ ದೇವಾಲಯಗಳ ಪೂಜಾಕಾರ್ಯಕ್ಕೆ, ಲೌಕಿಕ ಉದ್ಯೋಗನಿಮಿತ್ತ ಶ್ರೀವೈಷ್ಣವರು ಇಲ್ಲಿ ನೆಲಸಿದರಲ್ಲದೆ ಇವರೂ ವೃತ್ತಿವಂತರಾಗಿ ಬೆಳೆದುದುಂಟು. ಅನಂತರದ ದಶಕಗಳಲ್ಲಿ ಲೌಕಿಕ ವಿದ್ಯೆಯಲ್ಲಿ ಮುಂದೆ ಬಂದು ಹೆಚ್ಚಿನ ಬ್ರಾಹ್ಮಣ ಕುಟುಂಬಗಳು ನಗರಗಳತ್ತ ವಲಸೆಹೋದವು.

ಕನಕಪುರ

ರಾಮನಗರ ಜಿಲ್ಲೆಯ ಒಂದು ತಾಲ್ಲೂಕು, ಈಗಿನ ವಿಸ್ತೀರ್ಣ 1549 ಚ.ಕಿ.ಮೀ. ಜನಸಂಖ್ಯೆ 3,36,625. ಜಿಲ್ಲೆಯ ಅತ್ಯಂತ ದಕ್ಷಿಣಕ್ಕಿರುವ ಈ ತಾಲ್ಲೂಕನ್ನು ಪೂರ್ವದಲ್ಲಿ ತಮಿಳುನಾಡಿನ ಸೇಲಂ ಜಿಲ್ಲೆ, ಈಶಾನ್ಯದಲ್ಲಿ ಆನೇಕಲ್ಲು ತಾಲ್ಲೂಕು, ಉತ್ತರದಲ್ಲಿ ದಕ್ಷಿಣ ಬೆಂಗಳೂರು ತಾಲ್ಲೂಕು, ವಾಯವ್ಯದಲ್ಲಿ ರಾಮನಗರ ತಾಲ್ಲೂಕು, ಪಶ್ಚಿಮದಲ್ಲಿ ಚನ್ನಪಟ್ಟಣ ಮತ್ತು ಮಳವಳ್ಳಿ ತಾಲ್ಲೂಕುಗಳು ಸುತ್ತುವರಿದಿವೆ. ದಕ್ಷಿಣದಲ್ಲಿ ತಾಲ್ಲೂಕಿನ ಎಲ್ಲೆಯಾಗಿ ಕಾವೇರಿ ನದಿ ಇದೆ. ನದಿಯ ಆಚೆದಡದಲ್ಲಿ ಕೊಳ್ಳೇಗಾಲ ತಾಲ್ಲೂಕು ಇದೆ. ಕನಕಪುರ ತಾಲ್ಲೂಕಿನಲ್ಲಿ ಹಾರೋಹಳ್ಳಿ, ಕನಕಪುರ, ಮರಳವಾಡಿ, ಕೋಡಿಹಳ್ಳಿ, ಉಯ್ಯಂಬಳ್ಳಿ ಮತ್ತು ಸಾತನೂರು ಹೋಬಳಿಗಳಿದ್ದು, ಒಟ್ಟು 258 ಹಳ್ಳಿಗಳಿವೆ.

ಈ ತಾಲ್ಲೂಕು ಬಹುಮಟ್ಟಿಗೆ ಕಣಶಿಲೆಯ ಪ್ರದೇಶ, ಹೆಚ್ಚಿನ ಭಾಗದಲ್ಲಿ ಇದೇ ತಳಶಿಲೆ. ಕನಕಪುರದಿಂದ ರಾಮನಗರದ ಕಡೆಗೆ ಕಣಶಿಲೆಯ ಬೋಳುಗುಂಡುಗಳ ಬೆಟ್ಟಗುಡ್ಡಗಳು ಹರಡಿವೆ.

ಕೆಲವೆಡೆ ಉದ್ಗತ ಕರಿಶಿಲೆಯ ಹೊಡೆಸಾಲುಗಳೂ (ಡೈಕ್) ಕಂಡುಬರುವುದುಂಟು ತಾಲ್ಲೂಕಿನ ಉತ್ತರದಲ್ಲಿರುವ ಹಾರೋಹಳ್ಳಿಯ ವಾಯವ್ಯಭಾಗದಲ್ಲಿ ಚಾರ್ನಕೈಟ್ ಜಾತಿಯ ಹಾಗೂ ಹಾರ್ನ್‌ಬ್ಲೆಂಟ್‌ನ ಹೊಡೆಸಾಲೂಗಳು ಸ್ವಲ್ಪ ಮಟ್ಟಿಗೆ ಇವೆ. ಹಾರೋಶಿವರದ ಬಳಿ ಕಬ್ಬಿಣದ ಅದುರೂ ಸಾಲಹುಣಿಸೆ ಮತ್ತು ಮರಳಹಳ್ಳಿಗಳ ಬಳಿ ಪದ್ಮರಾಗವೂ ದೊರಕುತ್ತವೆ.[3]

ಹಾರೋಹಳ್ಳಿ

ಕನಕಪುರ ತಾಲ್ಲೂಕಿನ ಒಂದು ಗ್ರಾಮ. ಕನಕಪುರದ ಉತ್ತರಕ್ಕೆ 16 ಕಿ.ಮೀ. ದೂರದಲ್ಲಿದೆ. ಈ ಊರಿನ ಐತಿಹಾಸಿಕ ಪ್ರಾಮುಖ್ಯತೆ ವಿಜಯನಗರದ ಕಾಲದಿಂದ ಪ್ರಾರಂಭವಾಗುತ್ತದೆ. ವಿಜಯನಗರ ಕಾಲದ ದೇವಾಲಯಗಳು ಮತ್ತು ಶಾಸನಗಳು ಇಲ್ಲಿ ಕಂಡು ಬಂದಿದೆ. 1532ರ ಒಂದು ಶಾಸನದಲ್ಲಿ ಈ ಗ್ರಾಮವನ್ನು ಹಾರುವಹಳ್ಳಿ ಎಂದು ಹೆಸರಿಸಲಾಗಿದೆ. ಅಂದರೆ ಇದೊಂದು ಅಗ್ರಹಾರವಾಗಿತ್ತೆಂದು ತೋರುತ್ತದೆ. ಈ ಗ್ರಾಮದಲ್ಲಿ ಅರುಣಾಚಲೇಶ್ವರ, ಕೃಷ್ಣಸ್ವಾಮಿ, ಭೀಮೇಶ್ವರ ಮತ್ತು ಅಂಜನೇಯ ದೇವಾಲಯಗಳಿವೆ. ಇಲ್ಲಿನ ಹೆಚ್ಚಿನ ದೇವಾಲಯಗಳು ವಿಜಯನಗರ ಕಾಲದಲ್ಲಿಯೇ ನಿರ್ಮಾಣಗೊಂಡಿರುವುದು ಶಾಸನಗಳಿಂದ ತಿಳಿದುಬರುತ್ತದೆ. ಅರುಣಾಚಲೇಶ್ವರ ಮತ್ತು ಕೃಷ್ಣಸ್ವಾಮಿ ದೇವಾಲಯಗಳು ಮಾತ್ರ ವಿಶಾಲವಾದ ದೇವಾಲಯಗಳಾಗಿದ್ದು ವಿಜಯನಗರ ಕಾಲದ ದ್ರಾವಿಡ ವಾಸ್ತುಶೈಲಿಯನ್ನು ಹೊಂದಿದೆ.

ಅರುಣಾಚಲೇಶ್ವರ ದೇವಾಲಯ ವಿಶಾಲವಾದ ಪ್ರಾಕಾರವನ್ನು ಹೊಂದಿದೆ. ಗರ್ಭಗೃಹ, ಸುಕನಾಸಿನಿ, ನವರಂಗ ಮತ್ತು ಮುಖಮಂಟಪಗಳನ್ನು ಹೊಂದಿದೆ. ಗರ್ಭಗೃಹದಲ್ಲಿ ಶಿವಲಿಂಗವಿದೆ. ನವರಂಗದ ಕಂಬಗಳು ಚತುರ್ರಸ ಮತ್ತು ಅಷ್ಟಸ್ರ ಶೈಲಿಯಲ್ಲಿವೆ. ಕಂಬಗಳ ಚೌಕಟ್ಟಾದ ಮುಖಗಳು ಹಲವಾರು ಸುಂದರವಾದ ಶಿಲ್ಪಗಳನ್ನು ಹೊಂದಿವೆ. ದೇವಾಲಯದ ಮುಂದಿನ ಮಂಟಪವನ್ನು ಹೈದರ್ ಅಲಿ ಮತ್ತು ಟಿಪ್ಪುಸುಲ್ತಾನರ ಸುಬೇದಾರರಾದ ಸೂರ್ಯನಾರಾಯಣ ಅಯ್ಯರ್ ಮತ್ತು ವೆಂಕಟೇಶ ಅಯ್ಯರ್ ನಿರ್ಮಿಸಿದರೆಂದು ತಿಳಿದು ಬರುತ್ತದೆ. ದೇವಾಲಯದ ಎಡಭಾಗದಲ್ಲಿ ಪಾರ್ವತಿ ದೇವಾಲಯವಿದೆ. ದೇವಾಲಯದ ಪ್ರಕಾರದ ಪ್ರವೇಶ ಮಂಟಪದ ಮೇಲೆ ವಿಜಯನಗರ ಕಾಲದ ರಾಯಗೋಪುರ ಇದೆ. ಇದರಲ್ಲಿ ಹಲವಾರು ಸುಂದರವಾದ ಗಾರೆಶಿಲ್ಪಗಳು ಕಂಡುಬರುತ್ತವೆ.

ಕೃಷ್ಣಸ್ವಾಮಿ ದೇವಾಲಯ ವಿಜಯನಗರ ಕಾಲದಲ್ಲಿ ನಿರ್ಮಾಣಗೊಂಡಿದ್ದರೂ ಸಂಪೂರ್ಣವಾಗಿ ಜೀರ್ಣೋದ್ಧಾರ ಹೊಂದಿದೆ. ಗರ್ಭಗೃಹ, ಅರ್ಧಮಂಟಪ, ನವರಂಗಗಳು ಕಂಡುಬರುತ್ತವೆ. ಗರ್ಭಗೃಹದ ಇಕ್ಕೆಲಗಳಲ್ಲಿ ಇನ್ನೆರಡು ಚಿಕ್ಕ ಆಲಯಗಳಿವೆ. ಬಲಭಾಗದ ಆಲಯದಲ್ಲಿ ಲಕ್ಷ್ಮೀ ಶಿಲ್ಪವೂ ಎಡಭಾಗದ ಆಲಯದಲ್ಲಿ ಶ್ರೀದೇವಿ ಮತ್ತು ಭೂದೇವಿಯರೊಂದಿಗೆ ಇರುವ ವೆಂಕಟೇಶ್ವರನ ಶಿಲ್ಪವೂ

ಇದೆ. ಈ ಶಿಲ್ಪದ ಉಲ್ಲೇಖ ಇಲ್ಲಿ ದೊರೆತ ವೀರ ಪ್ರತಾಪ ಅಚ್ಯುತರಾಯನ 1532ರ ಶಾಸನದಲ್ಲಿ ಕಂಡುಬರುತ್ತದೆ. ಈ ಶಾಸನದಲ್ಲಿ ತಿರುವೆಂಗಳನಾಥ ದೇವರನ್ನು, ಅಚ್ಯುತರಾಯನ ಅಧಿಕಾರಿಯಾದ ವರದತಿಮ್ಮಯ್ಯನು ತಂದನೆಂದು, ದೇವಾಲಯಕ್ಕೆ ಭೂಮಿಯನ್ನು ದಾನ ನೀಡಿದನೆಂದು ವಿವರ ದೊರೆಯುತ್ತದೆ. ಗ್ರಾಮದ ಹೊರವಲಯದಲ್ಲಿ ಭೀಮೇಶ್ವರ ದೇವಾಲಯವಿದ್ದು, ಇದೂ ಕೂಡಾ ವಿಜಯನಗರ ಶೈಲಿಯಲ್ಲಿದೆ. ದೇವಾಲಯ ಒಳಭಾಗದಲ್ಲಿ ಯಾವುದೇ ಶಿಲ್ಪಗಳು ಕಂಡುಬರುವುದಿಲ್ಲ. ಗರ್ಭಗೃಹದಲ್ಲಿ ಶಿವಲಿಂಗವಿದೆ. ಪಕ್ಕದಲ್ಲಿ ಅಮ್ಮನವರ ದೇವಾಲಯವಿದೆ. ದೇವಾಲಯದ ಗರ್ಭಗೃಹದ ಇಕ್ಕೆಲಗಳಲ್ಲಿ ದ್ವಾರಪಾಲಕರ ಶಿಲ್ಪಗಳು ಕಂಡುಬರುತ್ತವೆ.[4]

ಇದು ವಿಜಯನಗರದ ಕಾಲದಿಂದ ಪರಿಚಿತವಾದ್ದು. 18ನೆಯ ಶತಮಾನದ ಕಾಲಘಟ್ಟದಲ್ಲಿ ಇದರ ನಿರ್ಮಾಣವಾಯಿತೆಂದೂ ವಡಮರೆಂಬ ಶೈವಬ್ರಾಹ್ಮಣಪಂಗಡಕ್ಕೆ ಸೇರಿದ ಸುಬೇದಾರ್ ವೆಂಕಟಯ್ಯ ಎಂಬವನು ಇದರ ನಿರ್ಮಾಪಕನೆಂದೂ ಕೆಲವರು ತಿಳಿದಿದ್ದರೆ (ಎಚ್. ಎಸ್. ದೊರೆಸ್ವಾಮಿ, 'ನೆನಪಿನ ಸುರಳಿ ತೆರೆದಾಗ', 1998, ಪು. 1), ಈಸ್ಟ್ ಇಂಡಿಯಾ ಕಂಪೆನಿ–ಅರ್ಕಾಟ್ ನವಾಬ–ಮೈಸೂರು ದೊರೆಗಳ ನಡುವೆ ನಡೆಯುತ್ತಿದ್ದ ಪೂರ್ವಸಮುದ್ರತೀರದ ಘಟ್ಟದ ಕೆಳಗಣ ಕರ್ಣಾಟಿಕ್ ಪ್ರದೇಶಗಳ ಯುದ್ಧಗಳು ಕಾರಣವಾಗಿ ನೆಮ್ಮದಿಯ ನೆಲೆಗಳನ್ನು ಹುಡುಕಿಕೊಂಡು, ವಡದೇಶದ ವಡಮರು ಚೆದುರಿಹೋದರೆಂದೂ ಅವರಲ್ಲಿ ಒಂದು ಗುಂಪು ವಿಲ್ಲಿಪುರಂ ಎಂಬಲ್ಲಿಂದ ಹೊರಟು ಹಾರೋಹಳ್ಳಿಯಲ್ಲಿಯೂ ಅದಕ್ಕೆ ಸಮೀಪದ ಮರಳವಾಡಿ, ಬೈರಮಂಗಲ ಮತ್ತು ಕಂಬೀಪುರಗಳಲ್ಲಿಯೂ ನೆಲೆಯೂರಿ, ಕೆರೆಗಳನ್ನು ಕಟ್ಟಿಸಿ, ಕೃಷಿಗೆ ತೊಡಗಿದರೆಂದೂ ಇನ್ನು ಕೆಲವರು ತಿಳಿದಿದ್ದಾರೆ.

ವಿಜಯನಗರದ ಕೃಷ್ಣದೇವರಾಯನ ತಮ್ಮ ಅಚ್ಯುತರಾಯನ ಆಳ್ವಿಕೆಯ ಕಾಲದ (1529 – 42) ಸ್ಥಳದ ಶಾಸನದಲ್ಲಿಯೇ (ನಂ 2/1532) 'ಹಾರುವ ಹಳ್ಳಿ' 'ತಿರುವೆಂಗಡನಾಥ' ಎಂಬ ಮಾತುಗಳು ಬಂದಿರುವುದರಿಂದ, ಈ ಊರು 18ನೆಯ ಶತಮಾನಕ್ಕೆ ಹಿಂದೆಯೇ ಒಂದು ಬ್ರಾಹ್ಮಣ ಅಗ್ರಹಾರವಾಗಿದ್ದಿರಬೇಕು ಎನ್ನುವುದು ಸ್ಪಷ್ಟ. ಅಲ್ಲಿಗೆ ಬೇರೆ ಬೇರೆ ಕಾಲಘಟ್ಟಗಳಲ್ಲಿ ವಿಲ್ಲಿಪುರಂ ಮೊದಲಾದ ತಮಿಳು ಪ್ರದೇಶಗಳಿಂದ ಸಂಸಾರಗಳು ಬಂದು ನೆಲಸಿರಬೇಕು. ಬಹುಶಃ ವಿಜಯನಗರದ ಅರಸರ ಆಶ್ರಿತರ ಕಾಲದಲ್ಲಿಯೇ ಅಥವಾ ಇನ್ನೂ ಹಿಂದೆ ಚೋಳಪ್ರಾಬಲ್ಯದ ಕಾಲದಲ್ಲಿಯೇ ಈ ಸ್ಥಳ ಒಂದು ಅಗ್ರಹಾರವಾಗಿ ನೆಲೆಗೊಂಡಿರಬೇಕು.

ಒಂದು ವಿಷಯವಂತೂ ನಿಜ. ಇಲ್ಲಿ ವಡಮಬ್ರಾಹಣರೇ ಹೆಚ್ಚಿನ ಸಂಖ್ಯೆಯಲ್ಲಿದ್ದು, ಇತರ ಪಂಗಡಗಳವರು ಕಡಮೆ. ಇವರ ವಲಸೆಯೂ ತುಂಬ ಹಿಂದೆಯೇ ನಡೆದಿರುವುದು ಸಾಧ್ಯ. ಈ

ಸಂಬಂಧವಾಗಿ ಪ್ರಚಲಿತವಾಗಿರುವ ಮೌಖಿಕವೃತ್ತಾಂತಗಳನ್ನು ಖಚಿತಪಡಿಸಲು ಯಾವುದೇ ಲಿಖಿತ ಆಧಾರಗಳೂ ದೊರೆಯುತ್ತಿಲ್ಲ.

ಈ ಸ್ಥಳದಲ್ಲಿ ಅರುಣಾಚಲೇಶ್ವರ, ಕೃಷ್ಣಸ್ವಾಮಿ, ಭೀಮೇಶ್ವರ ಮೊದಲಾದ ದೇವಾಲಯಗಳಿವೆ. ಇದು ಕೂಡ ಬ್ರಾಹ್ಮಣಪ್ರಾಬಲ್ಯವನ್ನು ಸಾರುವ ಸಂಗತಿಯೇ. ಇವುಗಳಲ್ಲೆಲ್ಲ ಅಪೂರ್ಣನಿರ್ಮಿತಿಯೋ ಭಗ್ನವೋ ಆಗಿ ತೋರುವ ದೊಡ್ಡಗುಡಿ ಎಂದು ಬಹುಪರಿಚಿತವಾಗಿರುವ ಅರುಣಾಚಲೇಶ್ವರ ದೇವಾಲಯವೇ ಪ್ರಸಿದ್ಧವಾದುದು, ಭವ್ಯವಾದುದು. ದಕ್ಷಿಣೋತ್ತರವಾಗಿ 150 ಅಡಿ, ಪೂರ್ವ ಪಶ್ಚಿಮವಾಗಿ 150 ಅಡಿ ಹೀಗೆ ಚಚ್ಚೌಕದ ವಿಶಾಲವಾದ ಆವರಣದಲ್ಲಿರುವ, 41'–48' ವಿಸ್ತಾರದ ಶಿಲಾರಚನೆಯ ದೇವಾಲಯವಿದು. 49 ಕಂಬಗಳಿಗೆ ಸೇರಿದಂತೆ 53 ಮಂಟಪಗಳಿವೆ. ಇದಕ್ಕೆ ವಿಸ್ತಾರವಾದ ಒಳಪ್ರಾಕಾರವಿದ್ದು, ಒಳಗೆ ಸೋಮೇಶ್ವರ, ನಾರಾಯಣ, ಲಕ್ಷ್ಮೀ ಮತ್ತು ಸುಬ್ರಹ್ಮಣ್ಯ ಇಂಥ ಚಿಕ್ಕ ಗುಡಿಗಳಿವೆ. ಗರ್ಭಗೃಹದಲ್ಲಿ ಮೂರು ಅಡಿಗಳ ಎತ್ತರದ ಸಾಲಿಗ್ರಾಮಶಿಲೆಯ ಶಿವಲಿಂಗವಿದ್ದು. ಇದು ಬಹುಶಹ ಹೊಯ್ಸಳರ ಕಾಲಕ್ಕೆ ಸೇರಿದ್ದಿರಬಹುದು ಎಂದು ತಿಳಿಯಲಾಗಿದೆ. ಹಾಗಿದ್ದರೆ, ಸ್ಥಳ ವಿಜಯನಗರಕಾಲಕ್ಕೆ ಹಿಂದೆಯೇ ಅಸ್ತಿತ್ವದಲ್ಲಿತ್ತೆನ್ನಬಹುದು. ಮರಳವಾಡಿ ಮೊದಲಾದ ಪ್ರದೇಶಗಳಲ್ಲಿ ಚೋಳರ ಕಾಲದ ಶಾಸನಗಳು ಕಂಡು ಬಂದಿರುವುದರಿಂದ ಹಾರೋಹಳ್ಳಿ ಸಹ ಒಂದು ಕಾಲಕ್ಕೆ ಮುದಿಗೊಂಡ ಚೋಳರ ಆಡಳಿತದ ವ್ಯಾಪ್ತಿಗೆ ಬಂದಿದ್ದಿರಲೂ ಬಹುದು (ಸು. 12ನೆಯ ಶತಮಾನ).

ಅರುಣಾಚಲೇಶ್ವರ ದೇವಾಲಯದ ಶಿಖರ ದ್ರಾವಿಡಶೈಲಿಯದು. ನವರಂಗದಲ್ಲಿ 4 ವಿಜಯನಗರಶೈಲಿಯ ಸ್ತಂಭಗಳಿದ್ದು, ಇವುಗಳಲ್ಲಿ ಸುಂದರ ಉಬ್ಬುಶಿಲ್ಪಗಳಿವೆ. ಹೈದರ್ ಟಿಪ್ಪುಗಳ ಕಾಲದ ಸುಬೇದಾರರು ಕ್ರಮವಾಗಿ ಸೂರ್ಯನಾರಾಯಣ ಅಯ್ಯರ್, ವೆಂಕಟೇಶ್ವರ ಅಯ್ಯರ್ ಎಂಬುವರು ಸೇರಿಸಿದ್ದೆನ್ನಲಾದ ಒಂದು ಹೊರಮಂಟಪವೂ ಇದೆ. ಪ್ರಾಕಾರದ ಒಳಗೆ ಹೊಯ್ಸಳ ಕಲಾಕೌಶಲದ ಕೆಲವು ಭಗ್ನಶಿಲ್ಪಗಳು ಬಿದ್ದಿವೆ. ಮುಖ್ಯ ದೇವಾಲಯದ ಎಡಭಾಗದಲ್ಲಿ ಕೃಷ್ಣಶಿಲೆಯ ಮೂರು ಅಡಿ ಎತ್ತರದ ಸುಂದರವಾದ ಅಮ್ಮನವರ (ಪಾರ್ವತಿ) ಮೂರ್ತಿಯಿರುವ ಗುಡಿಯಿದೆ. ದೇವಾಲಯಕ್ಕೆ ಪ್ರವೇಶ ದಕ್ಷಿಣದ ಕಡೆಯಿಂದ. ಅಲ್ಲಿ 15 ಅಡಿ ಎತ್ತರದ 6 ಕಂಬಗಳ ಮಹಾದ್ವಾರದ ಮೇಲೆ ವಿಜಯನಗರಶೈಲಿಯ ರಾಯಗೋಪುರವನ್ನು ನಿರ್ಮಿಸಲಾಗಿದೆ. ಇದು 5 ಅಂತಸ್ತುಗಳ, ಸುಮಾರು 70 ಅಡಿ ಎತ್ತರದ ಇಟ್ಟಿಗೆಯ ರಚನೆ. ಗೋಪುರಭಿತ್ತಿಯ ಮೇಲೆ ಶೈವಪುರಾಣಸಂಬಂಧವಾದ ಗಾರೆಕೆಲಸದ ಶಿಲ್ಪಗಳಿವೆ. ದೇವಾಲಯದ ಕಂಬವೊಂದರ ಮೇಲೆ ಇರುವ ಗಂಡಭೇರುಂಡದ ಕೆತ್ತನೆ, ಗುಡಿಯ ಹೊರಭಾಗದ ಕಂಬಗಳೆರಡರಲ್ಲಿ ನಮಸ್ಕಾರ ಭಂಗಿಯ ದಂಪತಿಗಳ ಕೆತ್ತನೆ ಇವು ಐತಿಹಾಸಿಕವಾಗಿ ಕುತೂಹಲಕರವಾದವು. ಇವು ಗುಡಿಯ ನಿರ್ಮಾಣದ ಕಾಲ ಕರ್ತೃತ್ವಗಳ ಬಗೆಗೆ

ಬೆಳಕು ಬೀರಬಹುದೇನೋ? ಈ ಗುಡಿ ಟಿಪ್ಪುವಿನ ಕಾಲದಲ್ಲಿ ನಿರ್ಮಿಸಲಾದ ಇಲ್ಲವೆ ವಿಸ್ತರಿಸಲಾದ ಕೋಟೆಯ ಭಾಗದಲ್ಲಿದೆ ಎಂದು ಹೇಳಲಾಗಿದ್ದರೂ, ಇದಕ್ಕೆ ಸಾಕ್ಷ್ಯವೇನೂ ತಿಳಿದುಬಂದಿಲ್ಲ.

ಕೋಟೆಯ ಕೃಷ್ಣಸ್ವಾಮಿ ದೇವಾಲಯ ಈಗ ಪುನರುಜ್ಜೀವನಗೊಂಡಿದೆ. ಇದರ ಗರ್ಭಗೃಹವೂ ಅರ್ಧಮಂಟಪವೂ ವಿಜಯನಗರೋತ್ತರಕಾಲದ ಲಕ್ಷಣಗಳಿಂದ ಕೂಡಿದೆ. ಗರ್ಭಗೃಹದ ಉಭಯಪಾರ್ಶ್ವಗಳಲ್ಲಿಯೂ ಎರಡು ಕೋಣೆಯಲ್ಲಿ ಶ್ರೀದೇವಿ ಭೂದೇವಿಯರೊಂದಿಗೆ ನಿಂತಿರುವ ವೆಂಕಟೇಶನ ವಿಗ್ರಹವುಂಟು. ಇರಬಹುದು. ವರದತಿಮ್ಮಯ್ಯ ಎಂಬ ಅಧಿಕಾರಿ ಆ ವಿಗ್ರಹವನ್ನು ಹಾರುವಹಳ್ಳಿಗೆ ತಂದನೆಂದೂ ಆ ಸ್ವಾಮಿಯ ಪೂಜಾದಿಗಳಿಗಾಗಿ ಭೂದಾನ ಮಾಡಿದನೆಂದೂ ಅಲ್ಲಿಯೇ ಹೇಳಿರುವುದನ್ನು ನೆನೆಯಬಹುದು.[5]

ಕೋಟೆಯ ಪ್ರದೇಶದ ಕೇಂದ್ರವೆಂದರೆ, ಇಲ್ಲಿಯ ರಂಗನಾಥಸ್ವಾಮಿ ದೇವಾಲಯ. ವಿಜಯನಗರ ಸಂಸ್ಥಾನಿಕರ ಆಶ್ರಿತರ ಕಾಲದಲ್ಲಿ ನಿರ್ಮಾಣವಾಗಿರಬಹುದಾದ ಈ ದೇವಾಲಯದ ಬಗೆಗೆ ಐತಿಹಾಸಿಕವಿವರಗಳನ್ನು ತಿಳಿದುಕೊಳ್ಳಲು ಶಾಸನಗಲ ಸಾಕ್ಷ್ಯವಾಗಲಿ, ಕಡೆಗೆ ಹಳೆಯ ಗ್ರಾಂಥಿಕ ಸಾಕ್ಷ್ಯಗಳಾಗಲಿ ಇಲ್ಲದಿರುವುದು ದೊಡ್ಡ ತೊಡಕಾಗಿದೆ.

ರಂಗನಾಥಸ್ವಾಮಿ ದೇವಾಲಯ ಒಂದು ವಿಶಾಲ, ಭವ್ಯ ದೇವಾಲಯ, ವಿಸ್ತಾರವಾದ ಒಳಪ್ರಕಾರ, ರಾಯಗೋಪುರವಿರುವ ಮಹಾದ್ವಾರ ಅದರ ಭವ್ಯತೆಯನ್ನು ಬೆಳೆಸಿವೆ. ಮುಖಮಂಟಪದ ಮೇಲುಗಡೆ ಸಾಲಾಗಿ ತೋರಣಮಾಲೆಯಂತಿರುವ ಗೂಡುಗಳಲ್ಲಿ ದಶಾವತಾರದ ಗಾರೆಯ ಮೂರ್ತಿಗಳು. ಮಂಟಪದ ಸ್ತಂಭಗಳು ವಿಜಯನಗರಶೈಲಿಯಲ್ಲಿವೆ. ಬಲಭಾಗ್ಕೆ ಇರುವ ಕೋಣೆಯಲ್ಲಿ ರಾಮ ಲಕ್ಷ್ಮಣ ಸೀತೆಯರ ವಿಗ್ರಹಗಳಿವೆ, ಇದಕ್ಕೆ ಎದುರಾಗಿ, ಕುಳಿತ ಭಂಗಿಯಲ್ಲಿ ಇರುವ ಆಂಜನೆಯನ ಗುಡಿ. ನವರಂಗದೊಳಗೆ ಕುಳಿತ ಭಂಗಿಯ ವಿಷ್ಣುವಿನ ಮೂರ್ತಿ, ಶಂಖ ಚಕ್ರ ಗದಾ ಅಭಯಹಸ್ತಧರವಾದ್ದು, ಉಂಟು. ಬಹುಶಃ ಇದೇ ಮುಖ್ಯ, ದೇವತಾವಿಗ್ರಹ ಎಂಬ ಅಭಿಪ್ರಾಯವೂ ಇದೆ. ಏಕೆಂದರೆ ಸ್ಥಳವಂದಿಗರು ಮೂಲಮೂರ್ತಿ ಭಗ್ನಗೊಂಡುದು ಕಾರಣವಾಗಿ ಈಗಿರುವ ಶ್ರೀನಿವಾಸನ ಮೂರ್ತಿ ಪ್ರತಿಷ್ಠಿತವಾಗಿದೆ ಎಂದು ಹೇಳುತ್ತಾರೆ. ಮಧ್ಯದ ಗರ್ಭಗೃಹಕ್ಕೆ ಒಂದು ಶಲಶಿಖರವುಂಟು. ಮೂರ್ತಿಗಳಿಲ್ಲದ ಗೂಡುಗಳಿರುವ ಅರ್ಧಮಂಟಪವೂ ಉಂಟು. ಮುಖ್ಯ ಪೂಜಾಸ್ಥಾನವೇ ಅಲ್ಲದೆ ಹೊರಗೆ ಬಲಭಾಗದಲ್ಲಿ ಈಚಿನ ಕಾಲದ್ದಾಗಿ ತೋರುವ ರಂಗನಾಥ ಸ್ವಾಮಿಯ ಮೂರ್ತಿಯನ್ನೂ ಕಾಣಬಹುದಾಗಿದೆ. ಮುಖ್ಯದೇವಾಲಯದ ಎಡಭಾಗದಲ್ಲಿ ಪದ್ಮಾವತಿಯ ಇನ್ನೊಂದು ಗುಡಿಯಿದ್ದು, ಅದ್ಕೆ ಒಂದು ಸಣ್ಣ ಅರ್ಧಮಂಟಪ ನವರಂಗಗಳು ಸೇರಿವೆ.

ಮೇಕೆದಾಟು

ರಾಮನಗರ ಜಿಲ್ಲೆ ಕನಕಪುರ ತಾಲ್ಲೂಕಿನ ದಕ್ಷಿಣ ಭಾಗದಲ್ಲಿ ಧಟ್ಟವಾದ ಅರಣ್ಯದ ನಡುವೆ ಕಾವೇರಿ ನದೀಪಾತ್ರದಲ್ಲಿ ಇರುವ ಒಂದು ಪ್ರೇಕ್ಷಣೀಯ ಸ್ಥಳ ಬೆಂಗಳೂರಿನ ದಕ್ಷಿಣಕ್ಕೆ ಸಾತನೂರು ಮಾರ್ಗವಾಗಿ 113 ಕಿ.ಮೀ. ದೂರದಲ್ಲೂ ದೂರದಲ್ಲೂ ಇರುವ ಈ ಸ್ಥಳ ಹಿಂದಿನಿಂದಲೂ ಪ್ರವಾಸಿಗರನ್ನು ಆಕರ್ಷಿಸುತ್ತಿದೆ.



ಮೇಕೆದಾಟಿನ ಬಳಿ ಕಾವೇರಿಯ ಹರಿವು

ಕನಕಪುರ ಮಾರ್ಗವಾಗಿ ಅರ್ಕಾವತಿ ನದಿ ಸು. 32 ಕಿ.ಮೀ. ಮೈದಾನ ಪ್ರದೇಶದಲ್ಲಿ ಹರಿದು ಕಡೆಗೆ ತಾಲ್ಲೂಕಿನ ದಕ್ಷಿಣದ ಅರಣ್ಯ ಪ್ರದೇಶವನ್ನು ಹೊಕ್ಕು ಕಾವೇರಿಯನ್ನು ಸಂಗಮ ಎನ್ನುವೆಡೆಯಲ್ಲಿ ಸೇರುತ್ತದೆ. ಅಲ್ಲಿ ಸಂಗಮೇಶ್ವರನ ದೇವಾಲಯ ಮತ್ತು ಒಂದು ಪ್ರವಾಸಿ ಮಂದಿರವಿದೆ. ಇಲ್ಲಿಂದ ಅರ್ಕಾವತಿಯನ್ನು ದಾಟಿ ಕಾವೇರಿಯ ಎಡದಂಡೆಯ ಮೇಲೆ ಸು. 5 ಕಿ.ಮೀ. ದೂರದಲ್ಲಿರುವ ಮೇಕೆದಾಟು ಸಿಕ್ಕುತ್ತದೆ. ಪ್ರವಾಸಿಗರಿಗೆ ಮುಖ್ಯ ಆಕರ್ಷಣೀಯ ಕೇಂದ್ರ ಮೇಕೆದಾಟು ಎಂದು ಪ್ರಸಿದ್ಧವಾಗಿದ್ದರೂ, ಆ ಆಕರ್ಷಣೀಯ ಪೂರ್ವಸಿದ್ಧತೆ ಸಂಗಮದಿಂದಲೇ ಆರಂಭವಾಗುತ್ತದೆ. ಅರ್ಕಾವತಿಯೊಡಗೂಡಿದ ಕಾವೇರಿ ದಟ್ಟವಾದ ಅರಣ್ಯದ ನಡುವೆ ಮುಂದೆ ಪ್ರವಹಿಸಿದಂತೆ ಅದರ ಪಾತ್ರ ಕ್ರಮ ಕ್ರಮವಾಗಿ ಕಿರಿದಾಗುತ್ತ ಬರುತ್ತದೆ. ಅಲ್ಲಿಂದ ಇಳಿಜಾರು ಹೆಚ್ಚುತ್ತ ಹೋಗುವುದರಿಂದ ನೀರಿನ ಪ್ರವಾಹ ಬೋರ್ಗರೆಯುತ್ತಾ ದನಾಂತರ ಪ್ರದೇಶವನ್ನೆಲ್ಲ ಗಂಭೀರ ಸ್ವರದಿಂದ ತುಂಬಿರುತ್ತದೆ. ಶತಶತಮಾನಗಳ ಪ್ರವಾಹದ ಹೊಡೆತಕ್ಕೆ ಸಿಕ್ಕಿದ ಇಕ್ಕೆಲಗಳ ಬೆಟ್ಟಗಳ ಬಂಡೆಗಳು ಚಿತ್ರವಿಚಿತ್ರವಾಗಿ



ಕೊರೆದು ಹೋಗಿ ನಿಸರ್ಗ ನಿರ್ಮಿಸಿರುವ ಮಹೋನ್ನತ ಶಿಲ್ಪಕಲಾಕೃತಿಗಳ ಕಂಗೊಳಿಸುತ್ತಿರುತ್ತವೆ. ಪಾತಾಳದಲ್ಲಿ ಭೋರ್ಗರೆಯುತ್ತ ಇಳಿದೋಡುತ್ತಿರುವ ನದಿಯ ಎತ್ತರವಾದ ಎರಡು ಪಾರ್ಶ್ವಗಳಲ್ಲೂ ಮರಗಳ ಸಾಲಿನ ಹಸುರಿನ ಸಾಂದ್ರತೆ ಪ್ರಪಾತದ ಪ್ರವಾಹದ ಮೇಲೆ ಕತ್ತಲು ಗರೆಯುತ್ತ ಅದರ ಗಂಭೀರತೆಯನ್ನು ಮತ್ತಷ್ಟು ಹೆಚ್ಚಿಸಿದೆ. ಇಂಥ ಗಂಭೀರತೆಯ ನಡುವೆ ಮುಂದೆ ಪ್ರವಹಿಸಿದಂತೆ ನದಿಯ ಪಾತ್ರ ತೀರ ಇಕ್ಕಟ್ಟಾಗುತ್ತ ಬಂದು ಕೊನೆಗೆ ಮೇಕೆದಾಟನ್ನು ಸೇರುತ್ತದೆ. ಇಲ್ಲಿ ನದಿಯ ಪಾತ್ರ ಕೆಲವೇ ಅಡಿಗಳಷ್ಟು ಅಗಲವಾಗಿದ್ದು ಇಡೀ ಜಲರಾಶಿಯೆಲ್ಲ ಆ ಅಂತರದೊಳಗೆ ಪ್ರವಹಿಸಿ ನದಿಯ ಹಿಂದಿನ ದೃಶ್ಯದ ಗಂಭೀರತೆ; ಪರಾಕಾಷ್ಠತೆಯನ್ನು ಮುಟ್ಟಿದಂತೆ ತೋರುತ್ತದೆ. ಇಲ್ಲಿ ನದಿಯ ಪಾತ್ರ ಮೇಕೆ ಸಹ ದಾಟುವಷ್ಟು ಇದೆ ಎಂದು ಉತ್ಪ್ರೇಕ್ಷೆಯಿಂದ ಹೇಳುವಷ್ಟು ಕಿರಿದಾಗಿದೆ. ಹಿಂದೆ ಇಲ್ಲಿ ಒಂದು ಮೇಕೆ ಹಾಗೆ ದಾಟಿದ್ದರಿಂದ ಮೇಕೆದಾಟು ಎಂಬ ಹೆಸರು ಬಂದಿತೆಂದು ಹೇಳುವುದೂ ಉಂಟು. ನದಿಯ ಎಡದಡದಲ್ಲಿ ದುಮ್ಮಿಕ್ಕುವ ನೀರಿಗೆ ಸೋಕುವಂತೆ ಪಕ್ಕದಲ್ಲಿ ಅಗಲವಾದ ಚಪ್ಪಟೆ ಬಂಡೆಕಲ್ಲೊಂದಿದೆ. ಅದನ್ನು ಟೇಬಲ್ ರಾಕ್ ಎನ್ನುವರು. ಪ್ರವಾಸಿಗರು ಅದರ ಮೇಲೆ ನಿಂತು ದೃಶ್ಯದ ಸೊಬಗನ್ನು ವೀಕ್ಷಿಸುವುದು ವಾಡಿಕೆ. ಎಚ್ಚರ ತಪ್ಪಿ ಎಲ್ಲಿ ಈಜಲು ಹೋಗುವವರು ದುರಂತ ಮರಣ ಅಪ್ಪುವ ಪ್ರಸಂಗಗಳು ನಡೆಯುತ್ತಿರುತ್ತವೆ. ನದಿ ಮುಂದಕ್ಕೆ ಪ್ರವಹಿಸಿದಂತೆ ಅದರ ಪಾತ್ರ ಮತ್ತೆ ವಿಸ್ತರಿಸುತ್ತ ಹೋಗುತ್ತದೆ. ಜಲರಾಶಿ ಹರಡಿಕೊಂಡು ಹೆಚ್ಚು ಇಳಿಜಾರಿಲ್ಲದ ಬಯಲಿನಲ್ಲಿ ನಿಧಾನವಾಗಿ ಮುಂದೆ ಸಾಗುತ್ತದೆ. ಟೇಬಲ್‌ರಾಕಿನ ಮೇಲೆ ನಿಂತು ನೋಡುವಾಗ ನದಿಯ ಹಿಂದಿನ ಗಂಭೀರತೆಯ ರುದ್ರರಮಣೀಯತೆಯನ್ನೂ ಅದರ ಮುಂದಿನ ಮಧುರ ಮಂಜುಳ ಮನೋಹರತೆಯನ್ನೂ ಏಕಕಾಲದಲ್ಲಿ ನೋಡಿ ಆನಂದಿಸಬಹುದು ಮುಂದೆ ನದಿ ಕೊಳ್ಳೇಗಾಲ ತಾಲ್ಲೂಕಿನ ಪೂರ್ವ ಮತ್ತು ದಕ್ಷಿಣದ ಗಡಿಗಳನ್ನೂ ಆವರಿಸಿದಂತೆ ಹರಿದು ತಮಿಳುನಾಡನ್ನು ಸೇರುತ್ತದೆ.[6]

ಅರ್ಕಾವತಿ ನದಿ

ನೆಲಮಂಗಲದ ಪಶ್ಚಿಮ ಕಡೆಯಿಂದ ಬರುವ ಶಿಲಾ ಬೆಟ್ಟಗಳು, ಮಾಗಡಿ, ರಾಮನಗರ, ತಾಲ್ಲೂಕುಗಳನ್ನು ಹಾಯ್ದು ಈ ತಾಲ್ಲೂಕನ್ನು ಉತ್ತರಭಾಗದಿಂದ ಪ್ರವೇಶಿಸಿ ಪೂರ್ವ ಪಶ್ಚಿಮ ಮತ್ತು ದಕ್ಷಿಣ ಅಂಚಿನಲ್ಲಿ ಕವಚದಂತೆ ಒತ್ತಾಗಿ ಹಬ್ಬಿವೆ. ಬೆಟ್ಟಗಳಲ್ಲಿ ಮುಖ್ಯವಾದವು ಪಶ್ಚಿಮದಲ್ಲಿ ಬಾಣಂತಿಮಾರಿ ಬೆಟ್ಟ (1043 ಮೀ) ಭೀಮಕಂಡಿ, ಕಡಕಲ್ ಮತ್ತು ಮುದವಾಡಿ. ನೈಋತ್ಯದಲ್ಲಿ ಪತ್ತಧಾರಿದೇವ, ಅಗ್ನೇಯದಲ್ಲಿ ದೇವರಬೆಟ್ಟ, ಕೊಪ್ಪಬೆಟ್ಟ (870 ಮೀ) ಮತ್ತು ಬರೀಕಲ್ಲು ಬೆಟ್ಟ, ಪೂರ್ವದಲ್ಲಿ ಬಿಳೀಕಲ್ಲುಬೆಟ್ಟ ಮತ್ತು ಗುಲಕಲ್ ಬೆಟ್ಟ, ಉತ್ತರದಲ್ಲಿ ಗಂಗಾಧರಬೆಟ್ಟ, ಭೂಮಿ ಉತ್ತರದಿಂದ ದಕ್ಷಿಣದ ಕಾವೇರಿ ಕಣಿವೆಯ ಕಡೆಗೆ ಇಳಿಜಾರಾಗಿದೆ. ದಕ್ಷಿಣದ ತ್ರಿಭುಜಾಕೃತಿಯ ತಗ್ಗು ಪ್ರದೇಶದಲ್ಲಿ ಎರೆಮಣ್ಣಿದೆ. ಉಳಿದ ಕಡೆಗಳಲ್ಲಿ ಅಗ್ನಿಶಿಲೆಯಿಂದಾದ ಹಗುರ ರಚನೆಯುಳ್ಳ ಕೆಂಪುಮಣ್ಣಿದೆ.

ಸಂಗಮು : ಅರ್ಕಾವತಿ ನದಿ ವಾಯವ್ಯದಿಂದ ಈ ತಾಲ್ಲೂಕನ್ನು ಪ್ರವೇಶಿಸಿ ತಾಲ್ಲೂಕಿನ ಮಧ್ಯದಲ್ಲಿ ಉತ್ತರದಿಂದ ದಕ್ಷಿಣ ಮುಖವಾಗಿ ಹರಿದು ಸಂಗಮದ ಬಳಿ ಕಾವೇರಿಯನ್ನು ಕೂಡಿಕೊಳ್ಳುತ್ತದೆ. ವೃಷಭಾವತಿ ನದಿ ಮುದುವಾಡಿಯ ಬಳಿ ತಾಲ್ಲೂಕಿನ ಎಲ್ಲೆಯಲ್ಲೇ ಆರ್ಕಾವತಿಯನ್ನು ಸೇರಿಕೊಳ್ಳುವುದು. ಈಶಾನ್ಯದಿಂದ ಹರಿದು ಬರುವ ಅಂತರಗಂಗೆ, ಬಸವನ ಹೊಳೆ, ಕೊಟ್ಲೆ ಹೊಳೆಗಳು ಕನಕಪುರದ ಬಳಿ ಅರ್ಕಾವತಿಯನ್ನು ಸೇರುವುವು. ಆಗ್ನೇಯದ ಎಲ್ಲೆಯವರೆಗೂ ದೊಡ್ಡ ಹೊಳೆ ಹರಿದು ಬಂದು ಸಂಗಮದ ಎದುರು ದಂಡೆಯಲ್ಲೆ ಮಾಹಳ್ಳಿಯ ಬಳಿ ಅರ್ಕಾವತಿಯನ್ನು ಸೇರುತ್ತದೆ. ಬಂಡಿಹಳ್ಳ ಉಯ್ಯಂಬಳ್ಳಿ ಕಬ್ಬಾಳ ರಸ್ತೆಗೆ ಸಮಾನಾಂತರವಾಗಿ ಹರಿದು ಪಶ್ಚಿಮದ ಕಡೆಯಿಂದ ಅರ್ಕಾವತಿಯನ್ನು ಸೇರುವುದು.

ಮೇ– ನವೆಂಬರ್ ವರೆಗೆ ನೈಋತ್ಯ ಮಾರುತಗಳಿಂದ ಇಲ್ಲಿ ಸು. 607 ಮಿಮೀ ಮಳೆಯಾಗುತ್ತದೆ. ತಾಲ್ಲೂಕಿನ ಹೆಚ್ಚು ಪ್ರದೇಶ ಬೆಟ್ಟಕಾಡುಗಳಿಂದ ಕೂಡಿದೆ. ತಾಲ್ಲೂಕಿನ ಉತ್ತರ ಮತ್ತು ಮಧ್ಯಭಾಗಗಳಲ್ಲಿ ನದಿ ಹೊಳೆಗಳ ದಡಗಳಲ್ಲಿ ವ್ಯವಸಾಯ ಸಾಧ್ಯ. ಅರ್ಕಾವತಿ ನದೀ ಬಯಲು ಮುಖ್ಯವಾದದ್ದು. ಇಡೀ ಜಿಲ್ಲೆಯ ಬೇಸಾಯದ ಭೂಮಿಯಲ್ಲಿ 1/6 ಭಾಗದಷ್ಟು ಇಲ್ಲಿ ಇದೆ. ಇಲ್ಲಿನ ಮುಖ್ಯ ಬೆಳೆಗಳು ರಾಗಿ ಮತ್ತು ಬತ್ತ, ಹಿಪ್ಪನೇರಳೆ, ಅವರೆ, ತೆಂಗು, ಹರಳು, ಹುಣಿಸೆ ಇತರ ಬೆಳೆಗಳು. ತಾಲ್ಲೂಕಿನಲ್ಲಿ ನೂರಕ್ಕೂ ಹೆಚ್ಚು ಕೆರೆಗಳಿವೆ. ಇವು ಬಹುತೇಕ ಸಣ್ಣವು ಕನಕಪುರದ ದಕ್ಷಿಣಕ್ಕೆ 16 ಕಿ.ಮೀ. ದೂರದಲ್ಲಿರುವ ಸಾತನೂರು ಬಳಿಯ ಅಣೆಕಟ್ಟು ಮಧ್ಯಮ ತರಗತಿಯ ನೀರಾವರಿ ಯೋಜನೆಗಳಲ್ಲೊಂದು ಇದರಿಂದ 10,000 ಎಕರೆ ಭೂಮಿ ನೀರಾವರಿಗೆ ಒಳಪಡುವುದು. ಅರ್ಕಾವತಿ ನದಿಗೆ ಹಾರೋಬಲೆಯ ಸಮೀಪದಲ್ಲಿ ಕಟ್ಟೇಕಟ್ಟುವ ಕಾರ್ಯ ನಡೆಯುತ್ತಿದೆ. ಮೇಕೆದಾಟು ವಿದ್ಯುತ್ ಯೋಜನೆಯೂ ಪರಿಶೀಲನೆಯಲ್ಲಿದೆ.

ಹಾರೋಹಳ್ಳಿ, ಮರಳವಾಡಿ, ಕೋಡಿಹಳ್ಳಿ, ಸಾತನೂರು, ಮಾವತ್ತೂರು ಇವು ತಾಲ್ಲೂಕಿನ ಕೆಲವು ಮುಖ್ಯ ಗ್ರಾಮಗಳು ಬೇಚಿರಾಕ್ ಬಸವಾಪಟ್ಟಣ, ವೀರ ಸಂದ್ರದಲ್ಲಿರುವ ವೀರಶೈವ ಗುರು ಹುಚ್ಚಬಸವಪ್ಪನ ಗುಡಿ ಈ ಭಾಗದಲ್ಲಿ ಪ್ರಸಿದ್ಧ. ತಾಲ್ಲೂಕಿನ ದಕ್ಷಿಣ ಅಂಚಿನಲ್ಲಿರುವ ಮೇಕೆದಾಟು (ನೋಡಿ) ಸುಂದರ ಪ್ರೇಕ್ಷಣಿಯ ಸ್ಥಳ.

ಕನಕಪುರ ಈ ತಾಲ್ಲೂಕಿನ ಮುಖ್ಯ ಊರು, ಆಡಳಿತ ಕೇಂದ್ರ, ಬೆಂಗಳೂರಿಗೆ 56 ಕಿ.ಮೀ. ದಕ್ಷಿಣಕ್ಕೆ ಬೆಂಗಳೂರು ಮಳವಳ್ಳಿ ಮಾರ್ಗಮಧ್ಯದಲ್ಲಿ ಅರ್ಕಾವತಿ ನದಿಯ ಬಲದಂಡೆಯ ಮೇಲಿದೆ ಜನಸಂಖ್ಯೆ 47,047.

1947ರ ವರೆಗೂ ಈ ಊರಿಗೆ ಕಾನಕಾನಹಳ್ಳಿ ಎಂಬ ಹೆಸರಿತ್ತು. 13ನೆಯ ಶತಮಾನದ ಶಾಸನದಲ್ಲಿ ಕಾಣಿಕಾರಹಳ್ಳಿ ಎಂಬ ಉಲ್ಲೇಖವಿದೆ. ಇಲ್ಲಿನ ಕೋಟೆ ಚನ್ನಪಟ್ಟಣದ ಪಾಳೆಯಗಾರನಾಗಿದ್ದ ಜಗದೇವರಾಯ ಕಟ್ಟಿಸಿದ್ದೆಂದು ತೋರುತ್ತದೆ. 1630ರಲ್ಲಿ ಮೈಸೂರಿನ ಚಾಮರಾಜ ಇದನ್ನು ವಶಪಡಿಸಿಕೊಂಡ. ಶ್ರೀರಂಗಪಟ್ಟಣಕ್ಕೆ ಬರುತ್ತಿದ್ದ ಬ್ರಿಟಿಷ್ ಸೇನೆಗೆ ಈ ಊರು ತಂಗು ನಿಲ್ದಾಣವಾಗ ಕೊಡದೆಂಬ ಉದ್ದೇಶದಿಂದ ಟಿಪ್ಪುಸುಲ್ತಾನ ಎರಡು ಸಾರಿ ಈ ಪಟ್ಟಣವನ್ನು ಹಾಳುಗೆಡವಿದ್ದ. ಹಳೆಯ ಕೋಟೆಯಲ್ಲಿ ಜೀರ್ಣವಾದ ರಂಗನಾಥ ದೇವಾಲಯವಿದೆ.[7]

ಚುಂಚಿ

ಕನಕಪುರದಿಂದ ಸುಮಾರು 30 ಕಿ.ಮೀ. ದೂರದಲ್ಲಿ ಅರ್ಕಾವತಿ ನದಿ ಕಾವೇರಿಯನ್ನು ಕೂಡಿಕೊಳ್ಳುವ ಸಂಗಮಕ್ಕೆ ಮೊದಲು ಚುಂಚಿಗ್ರಾಮದ ಹತ್ತಿರ ಅರ್ಕಾವತಿಗೆ ಸೃಷ್ಟಿಯಾಗಿರುವ ಜಲಪಾತ ಬಹುಕಾಲದಿಂದ ಅಲಕ್ಷಿತವಾಗಿರುವ ಪ್ರಕೃತಿಯ ಒಂದು ರಮಣೀಯ ದೃಶ್ಯ ಕಾವ್ಯ. ಇಲ್ಲಿ ಅರ್ಕಾವತಿ ಸುಮಾರು 150 ಅಡಿಗಳಷ್ಟು ಎತ್ತರದಿಂದ ಎರಡು ಹಂತಗಳಲ್ಲಿ ಕೆಳಕ್ಕೆ ಧುಮುಕುತ್ತದೆ. ನದಿ ಬಂಡೆಗಳ ನಡುವೆ ಬಳುಕಿ ಹರಿಯುತ್ತ, ಜೋಡಿ ಮರಗಳನ್ನು ಬಳಸಿ ಪುಟ್ಟುಕೊಳವೊಂದನ್ನು ನಿರ್ಮಿಸಿ ಒಮ್ಮಲೇ ಸುಮಾರು. 250 ಅಡಿಗಳಷ್ಟು ಅಳಕ್ಕೆ ಧುಮುಕುತ್ತದೆ. ಕನಕಪುರದಿಂದ ಖಾಸಗಿ ವಾಹನದಲ್ಲಿ ನೇರವಾಗಿ ಚುಂಚಿಗೆ ಹೋಗಬಹುದು; ಇಲ್ಲವೆ ನಲ್ಲಹಳ್ಳಿಗೆ ತಲುಪಿ ಅಲ್ಲಿಂದ ಮಣ್ಣುಹಾದಿಯಲ್ಲಿ ನಡೆದುಹೋಗಲೂ ಬಹುದು. ಚಾರಣಪ್ರಿಯರಿಗೆ ಇದೊಂದು ಒಳ್ಳೆಯ ಆಕರ್ಷಣೆ.[8]

ಪುರಿಗೆರೆ

ಬಸವಸೆ 12,000, ಕಿಸುಕಾಡು 70, ಬಾಗೆನಾಡು 70ನ್ನು ಆಳುತ್ತಿದ್ದರು. ಈ ರೀತಿಯ ಉಲ್ಲೇಖಗಳು ಗಂಗವಾಡಿ ಎನ್ನುವುದು ಒಂದು ಗೊತ್ತಾದ ವಿಸ್ತಾರವುಳ್ಳ ಪ್ರಾಂತ್ಯವಾಗಿದ್ದು ಅದು 6,000 ನಾಡಾಗಿತ್ತೆಂಬುದನ್ನು ಸ್ಪಷ್ಟಪಡಿಸುತ್ತವೆ.

ಚೋಳರು ಗಂಗರನ್ನು ಸೋಲಿಸಿ ಗಂಗವಾಡಿಯ ಅನೇಕ ಭಾಗಗಳನ್ನು ತಮ್ಮ ರಾಜ್ಯಕ್ಕೆ ಸೇರಿಸಿಕೊಂಡರೂ ಚಾಳುಕ್ಯರು ಗಂಗವಾಡಿ 96,000ದ ಮೇಲಿನ ತಮ್ಮ ಆಧಿಪತ್ಯವನ್ನು ಹೇಳಿಕೊಳ್ಳುತ್ತಾರೆ. 6ನೆಯ ವಿಕ್ರಮಾದಿತ್ಯ ಯುವರಾಜನಾಗಿ ಗಂಗವಾಡಿ 96,000 ವನ್ನು ಬಳ್ಳಿಗಾವೆಯಿಂದ ಆಳುತ್ತಿದ್ದ ಹೊಯ್ಸಳ ವಿನಯಾದಿತ್ಯನೂ ಇದೇ ಪ್ರಾಂತ್ಯವನ್ನಾಳುತ್ತಿದ್ದಂತೆ ಹೇಳಿಕೊಳ್ಳುತ್ತಾನೆ. ಆದರೆ ವಿಷ್ಣುವರ್ಧನ ತಲಕಾಡಿನಲ್ಲಿ ಆಳುತ್ತಿದ್ದ ಚೋಳ ಪ್ರತಿನಿಧಿಯನ್ನು ಸೋಲಿಸಿ ಓಡಿಸಿದಾಗ ಇಡೀ ಪ್ರಾಂತ್ಯ ಹೊಯ್ಸಳರ ಅಧೀನಕ್ಕೆ ಬಂತು ಮುಂದೆ ಹೊಯ್ಸಳರು ಆಳುತ್ತಿದ್ದ ಅನೇಕ ಪ್ರಾಂತ್ಯಗಳಲ್ಲಿ ಗಂಗವಾಡಿ 96,000

ಮುಖ್ಯವಾದ ಪ್ರಾಂತ್ಯವಾಗಿತ್ತು. ಹೊಯ್ಸಳರ ಪತನಾನಂತರ ಗಂಗವಾಡಿ ಎಂಬ ಪ್ರಾದೇಶಿಕ ಹೆಸರು ಮರೆಯಾಯಿತು. ಆದರೆ ಈ ಪ್ರಾಂತ್ಯದಲ್ಲಿ ಹಿಂದಿನಿಂದಲೂ ನೆಲಸಿ ಆರಂಭಮಾಡಿಕೊಂಡು ಬರುತ್ತಿರುವ ಒಂದು ವರ್ಗದವರಿಗೆ ಗಂಗಡಿಕಾರರೆಂಬ ಹೆಸರಿದ್ದು, ಇದು ಗಂಗವಾಡಿಯ ನೆನಪನ್ನು ಉಳಿಸಿದೆ. ಗಂಗಡಿಕಾರ ಎಂಬುದು ಗಂಗವಾಡಿಕಾರ ಎಂಬುದರಿಂದ ಬಂದ ರೂಪ.

ಕಬ್ಬಾಳು

ಕಬ್ಬಾಳುದುರ್ಗದ ಇತಿಹಾಸ ಹೊಯ್ಸಳರ ಕಾಲದಿಂದಲೂ ಪ್ರಸಿದ್ಧವಾದ್ದು; ಕಬ್ಬಹಾಳು ಎಂಬ ಹೆಸರಿನಲ್ಲಿ ಅದರ ಉಲ್ಲೇಖ ಕಾಣುತ್ತದೆ. ದುರ್ಗದ ತಪ್ಪಲಿನ ಹಳ್ಳಿಯಲ್ಲಿ ಕಬ್ಬಾಳಮ್ಮ ಎಂಬ ಗ್ರಾಮದೇವತೆಯ ದೇವಾಲಯವಿದೆ. ಹಳಗಾಲದಲ್ಲಿ ಇದು ಒಂದು ವ್ಯಾಪಾರಕೇಂದ್ರವಾಗಿದ್ದಂತೆ ತೋರುವುದು. ಕಬ್ಬಾಳಮ್ಮ ಎನ್ನುವುದು ವಿಜಯನಗರಕಾಲೀನವಾದ ಶಾಸನದಲ್ಲಿ ಕಾಳಿಕಾದೇವಿ ಎಂಬ ಉಲ್ಲೇಖಗೊಂಡಿದೆ. ಈ ದೇವಿಯ ಗುಡಿ ಶಿಲ್ಪಗಳಿಲ್ಲದ ಚೌಕಾಕೃತಿಯ ಕಂಬಗಳಿಂದ ಕೂಡಿದ ವಿಜಯನಗರಶೈಲಿಯ ಸಾಮಾನ್ಯರಚನೆ. ಗರ್ಭಗೃಹದ ಮೇಲಿನ ಶಿಖರ ಇಟ್ಟಿಗೆ ಗಾರೆ ಕೆಲಸದ ಈಚಿನ ಕಾಲದ ರಚನೆ. ಕಬ್ಬಾಳಮ್ಮನ ಜಾತ್ರೆ ಶಿವರಾತ್ರಿಯ ಕಾಲದಲ್ಲಿ ಒಂದು ವಾರ ಕಾಲ ನಡೆಯುತ್ತದೆ; ಸಾವಿರಾರು ಜನ ಸೇರುತ್ತಾರೆ. ಪ್ರತಿ ಮಂಗಳವಾರ ಶುಕ್ರವಾರಗಳಲ್ಲಿ ವಿಶೇಷಪೂಜೆ ನಡೆಯುತ್ತಿದ್ದು, ಜನ ದೇವಾಲಯಕ್ಕೆ ಬರುತ್ತಾರೆ. ಜಾತ್ರೆಯ ವೇಳೆ ಗುಡಿಯ ಮುಂದಿನ ಕೊಂಡದಲ್ಲಿ ಕೊಂಡ ಹಾಯುವ ಆಚರಣೆಯುಂಟು. ದೇವಾಲಯದ ಉತ್ತರದಿಕಿನಲ್ಲಿ ಬಸವೇಶ್ವರ ದೇವಸ್ಥಾನವಿದ್ದು, ಕೊಂಡದ ಮಾರನೆಯ ದಿನ ಕಬ್ಬಾಳಮ್ಮನಿಗೂ ಆಕೆಯ ಸೋದರನೆಂಬ ನಂಬಿಕೆಯ ಬಸವೇಶ್ವರನಿಗೂ ಒಟ್ಟಿಗೆ ತೇರು ನಡೆಯುತ್ತದೆ; ಸಿಡಿಗಂಬದಲ್ಲಿ ಸಿಡಿಯ ಹರಕೆ ಸಲ್ಲಿಸಲಾಗುತ್ತದೆ. ಸಮೀಪದ 2 ವೀರಗಲ್ಲುಗಳ ವಿಚಾರವನ್ನು ಹೊಯ್ಸಳರ ಮತ್ತು ವಿಜಯನಗರ ಕಾಲದ ತಾಲ್ಲೂಕಿನ ಇತಿಹಾಸಭಾಗದಲ್ಲಿ ಈಗಾಗಲೇ ಗಮನಿಸಲಾಗಿದೆ.

"ಕಬ್ಬಾಳುದುರ್ಗ ಸಾಕಷ್ಟು ಎತ್ತರವಿರುವುದರಿಂದ ಇದರ ಮೇಲಿಂದ ಕಾಣುವ ದೃಶ್ಯಗಳು ನಯನಮನೋಹರ. ಬೆಟ್ಟದ ಉತ್ತರದಿಕ್ಕಿನಲ್ಲಿ ಮತ್ತು ಕುಡಿಕೆ (ಬೆಟ್ಟದ ಹೆಸರು) ಮೇಲಿಂದ ನೋಡಿದಾಗ ಸಣ್ಣ ದಿಬ್ಬದಂತೆ ತೋರುತ್ತದೆ. ಈಶಾನ್ಯದಲ್ಲಿ ಕೆಳಗೆ ಕಬ್ಬಾಳುಗ್ರಾಮ ಬೆಂಕಿಪೊಟ್ಟಣದಲ್ಲಿ ಮಾಡಿ ಇಟ್ಟಂತೆ ತೋರುತ್ತದೆ. ಗ್ರಾಮದ ಸುತ್ತಣ ಪ್ರದೇಶದ ಹಸಿರುಹಸಿರಾಗಿ ಅದರ ನಡುವೆ ಹಾಯುವ ಕಂದುಬಣ್ಣದ ಡೊಂಕಾದ ಹಾವಿನಂತಹ ರಸ್ತೆಗಳು ಚಿತ್ರದಲ್ಲಿ ಬರೆದಿಟ್ಟಂತೆ ತೋರುತ್ತದೆ. ಆಚೆಯ ಬದಿಗೆ ಗೋಚರಿಸುವ ಬೆಟ್ಟಗಳನ್ನು ಭೀಮನ ಬೆಟ್ಟಗಳೆಂದು ಕರೆಯುತ್ತಾರೆ".[9]

ಬಿಳೀಕಲ್ ಬೆಟ್ಟ

ಕನಕಪುರದಿಂದಲೇ ಕಾಣುವ ಬೆಟ್ಟ. ಇಲ್ಲಿಗೆ ಗೌಡಪಳ್ಳಿ ಹೊಸಹಳ್ಳಿ ಮತ್ತು ಸುಂದಘಟ್ಟಗಳ ಮೂಲಕ ಹೋಗಬೇಕಾಗುತ್ತದೆ. ಹೊಸಹಳ್ಳಿಯಿಂದ ಬೆಟ್ಟದ ತಪ್ಪಲಿಗೆ 3 ಕಿ.ಮೀ ಮೇಲೇರಲು ಮತ್ತೆ 4 ಕಿ.ಮೀ ಈ ಬೆಟ್ಟ ತಲುಪುವ ಮೊದಲು ಮೂರು ಗುಡ್ಡಗಳನ್ನು ದಾಟಿಹೋಗಬೇಕಾಗುತ್ತದೆ. ಸುಂದ ಘಟ್ಟದ ಹಾದಿಯಲ್ಲಿ 2 ಕಿ.ಮೀ ನಡೆದರೆ ಸಾಕು; ಮಾರ್ಗಮಧ್ಯೆ ಜೋಡುಕೆರೆ ಎಂದು ಕರೆಯುವ ಅವಳಿಕೊಳಗಳು. ಬೆಟ್ಟದ ಮೇಲೆ ದೊಡ್ಡಗುಂಡು ಒಂದರ (ಎತ್ತರ 20 ಅಡಿಗಳು) ತಳದಲ್ಲಿ ಒಂದು ಗವಿ. ಹತ್ತಿರವೇ ಒಂದು ವಸತಿ ಮತ್ತು ತೇರೊಂದರ ಕಲ್ಲುಚಕ್ರಗಳು. ವಸತಿಗೆ ಹಿಂಭಾಗದಲ್ಲಿ ಸಾಮಾನ್ಯವಾದ ಕಂಬಗಳಿರುವ ರಂಗನಾಥನ ಗುಡಿ. ರಂಗನಾಥ ಎಂಬುದಾಗಿ ಸ್ಥಳೀಯರು ಕರೆಯುತ್ತಿದ್ದರೂ ದೇವತಾಮೂರ್ತಿ ಶಂಖಚಕ್ರಗದಾ ಅಭಯಹಸ್ತಗಳ ನಾರಾಯಣಮೂರ್ತಿಯೇ ಆಗಿದೆ. ಮಕರಸಂಕ್ರಾಂತಿಯ ಬಳಿಕ ಜಾತ್ರೆ ರಥೋತ್ಸವಗಳು ಜರುಗುತ್ತವೆ. 500 ಜನರ ಮೇಲೆ ಸೇರುತ್ತಾರೆ.

ಹತ್ತಿರದಲ್ಲಿಯೇ ಮೂರು ವೃಂದಾವನಗಳು. ಸಮೀಪದಲ್ಲಿ ನವಶಿಲಾಯುಗ ಕಾಲದ ಉಪಕರಣಗಳನ್ನು ಕಾಣಬಹುದು. ಈ ದೇಗುಲಕ್ಕೆ ಸ್ವಲ್ಪ ದೂರದಲ್ಲಿ ಒಂದು ವಿಶ್ರಾಂತಿಗೃಹ. ಸೋಪಾನಕಟ್ಟೆಗಳಿರುವ ಕೊಳವೊಂದುಂಟು. ಆಗಾಗ ಕಾಡಾನೆಗಳ ಹಿಂಡು ಬೆಟ್ಟದಲ್ಲಿ ಸುಳಿಯುತ್ತದೆ. ಕನಕಪುರ ತಾಲ್ಲೂಕಿನ ಒಂದು ಪ್ರವಾಸಸ್ಥಳವಿದು. ಬೆಟ್ಟದ ನೆತ್ತಿಯ ಮೇಲೆ ಇರುವ ಬೃಹದಾಕಾರದ ಒಂಟಿ ಬಂಡೆಯು ನೋಡಲು ಆಕರ್ಷಕವಾಗಿದೆ.

ಬನವಾಸಿ

ಹಾರೋಹಳ್ಳಿಯಿಂದ ಹೊರಟರೆ, ಮರಳವಾಡಿಗೆ ಒಂದು ತಿರುವು ಹಾದಿಯಲ್ಲಿದೆ; ಮೂರು ಕಡೆಗಳಲ್ಲಿ ಗಿರಿಶ್ರೇಣಿಗಳು ಕವಿದಂತಿರುವ ರಮಣೀಯವೂ ಪ್ರಶಾಂತವೂ ಆದ ಸ್ಥಳ. ಇಲ್ಲಿ ಆಲದ ಮರವೊಂದರ ಸಮೀಪದ ಮಾರಮ್ಮನ ಗುಡಿ ಸುಮಾರು ವರ್ಷಗಳಷ್ಟು ಹಳೆಯದು ಎಂದು ತೋರುತ್ತದೆ. ಗ್ರಾಮೀಣ ಶೈಲಿಯ ಕೆತ್ತನೆಯ ಶಿಲಾವಿಗ್ರಹ ದೇವಿಯದು. ದುರ್ಗೆಯ ವಿಗ್ರಹವಿರುವ ಕರಡಿ ಮಾರಮ್ಮನ ಇನ್ನೊಂದು ಗುಡಿಯೂ ಉಂಟು. ಇಲ್ಲಿಯೇ ಸುಂದರವಾದ ಕೀರ್ತಿಮುಖವುಳ್ಳ ಒಂದು ಕಾಷ್ಠಶಿಲ್ಪವೂ ಉಂಟು. ಪಕ್ಕದಲ್ಲೇ ಸಣ್ಣದೊಂದು ಆಂಜನೆಯ ಗುಡಿ. ಇಲ್ಲಿಗೆ ಹತ್ತಿರುವ ತೊರೆ ದಾಟಿ ಹೋದರೆ ಒಡೇರಹಳ್ಳಿ ಎಂಬಲ್ಲಿ ದಿಣ್ಣೆಯ ಮೆಲೆ ಮಲ್ಲೇಶ್ವರ ಗುಡಿ ಇದೆ. ಇಲ್ಲಿಂದ 2 ಕಿ.ಮೀ. ದೂರದಲ್ಲಿ ಅಂತರಗಂತೆ. ಇಲ್ಲಿಗೆ ಕನಕಪುರ–ಆನೇಕಲ್ಲು ರಸ್ತೆಯ ಗೋಡೂರಿಂದಲೂ ಬರಬಹುದು. ಹತ್ತಿರದ ಗವಿಯ ಶಿವಲಿಂಗ, ಇದಕ್ಕೆ ಹೊಂದಿಕೊಂಡಂತೆ ಶ್ರೀನಾರಾಯಣ ಭಾರತಿಗಳೆಂಬ ಬ್ರಹ್ಮಚಾರಿ

ಯತಿಗಳ ಸಮಾಧಿ, ಇನ್ನೂ ಐದು ಲಿಂಗಗಳು ಇರುವ ಇನ್ನೊಂದು ಗವಿ ಮತ್ತು ನೀರಿನ ದೊಣೆ. ಶಿವರಾತ್ರಿಯ ದಿನ ಜಾತ್ರೆ ನಡೆಯುತ್ತದೆ.[10]

ಅಚ್ಚಲು

ಕಾನಕಾನಹಳ್ಳಿ ಪ್ರದೇಶದ ಪ್ರಮುಖ ಆಡಳಿತ ಕೇಂದ್ರ ಸ್ಥಳವಾಗಿದ್ದುದು ಹಲವು ಶಾಸನಗಳಿಂದ ತಿಳಿದುಬರುತ್ತದೆ

ಕಾನಕಾನಹಳ್ಳಿ ಪ್ರದೇಶದ ಈ ಗ್ರಾಮ ಹೊಯ್ಸಳರ ಮೂರನೆಯ ಬಲ್ಲಾಳನ ಕಾಲದಿಂದಲೂ ಪರಿಚಿತವಾದ್ದು. ಇದು ಅಚ್ಚಲನಾಡು ಎನ್ನಿಸಿತ್ತು. ಇದರ ಇತಿಹಾಸ ತಾಲ್ಲೂಕಿನ ಪರಿಚಿತವಾದ್ದು. ಇದು ಅಚ್ಚಲನಾಡು ಎನ್ನಿಸಿತ್ತು. ಇದರ ಇತಿಹಾಸ ತಾಲ್ಲೂಕಿನ ಹೊಯ್ಸಳರ ಇತಿಹಾಸಭಾಗದಲ್ಲಿ ಈಗಾಗಲೇ ಬಂದಿದೆ. ಇಲ್ಲಿಯ ಬೆಟ್ಟದ ಮೇಲೆ ಗವಿ ಮುನೇಶ್ವರನೆಂಬ ಶಿವಲಿಂಗವಿರುವ ಒಂದು ಸಾಮಾನ್ಯವಾದ ಗವಿಯುಂಟು. ಮಕರಸಂಕ್ರಾಂತಿಯ ವೇಳೆ ವಾರ್ಷಿಕಜಾತ್ರೆ ಆಗುತ್ತದೆ. ಆಂಜನೇಯ ಮೂರ್ತಿ ಸುಮಾರು ಒಂದು ಮೀಟರ್ ಉದ್ದವಿದ್ದು, ತನ್ನ ಒಂದು ಕೈಯಲ್ಲಿ ಒಂದು ಮರದ ರಂಬೆ ಹಿಡಿದು ಕೊಂಡಂತೆ ಶಿಲ್ಪವಿದೆ. ಹತ್ತಿರದ ಗುಡ್ಡದಲ್ಲಿ ಬಸವೇಶ್ವರನ ಗುಡಿಯೂ ಉಂಟು. ಈ ಸ್ಥಳದ ಇತಿಹಾಸದಲ್ಲಿ ಕಾನಕಾನ ಹಳ್ಳಿಯ ಹಾಗೂ ಸಿಗಲನಾಡು ಪ್ರಭುಗಳ ಸಂಬಂಧವೂ ಬೆಸೆದುಕೊಂಡಿದ್ದು. ಇವುಗಳ ಪ್ರಸ್ತಾವ ಈಗಾಗಲೇ ಬಂದಿದೆ.

ಕನ್ನಡದ ರಾಜರುಗಳ, ಈ ಸೀಮೆ ಆಳಿದ ಪಾಳೇಗಾರರುಗಳ ಕಾಲದಲ್ಲಿ ಅನೇಕ ಐತಿಹಾಸಿಕ ಘಟನೆಗಳಿಗೆ ಸಾಕ್ಷಿಭೂತವಾಗಿದೆ.[11]

ಹರಿಹರ

ಕಾನಕಾನಹಳ್ಳಿ ತಾಲ್ಲೂಕಿನ ಬಸವನಬೆಟ್ಟ ಅರಣ್ಯದ ಅಂಚಿನಲ್ಲಿರುವ ಒಂದು ಗ್ರಾಮ. ಇಲ್ಲಿ ವಿಜಯನಗರದ ಪ್ರೌಢದೇವರಾಯನ ಮತ್ತು ಕೃಷ್ಣದೇವರಾಯನ ಕಾಲದ ಶಾಸನಗಳು (ನಂ. 74/1412; 73/1518) ದೊರೆತಿರುವುವಲ್ಲದೆ. 12 ವೀರಗಲ್ಲುಗಳನ್ನು ಗುರುತಿಸಲಾಗಿದೆ; ಸಮೀಪದ ಕುಪ್ಪೆದೊಡ್ಡಿಯಲ್ಲಿ ಗಮನಾರ್ಹವಾದ 4 ವೀರಗಲ್ಲುಗಳಿವೆ. ಮೊದಲ ಶಾಸನದಲ್ಲಿ ಉಕ್ತನಾಗಿರುವ ಪ್ರೌಢದೇವರಾಯ (1ನೆಯ ದೇವರಾಯ: 1407 – 22) ನನ್ನು ಹರಿಹರರಾಯನ (ಇಮ್ಮಡಿ ಹರಿಹರ: 1377–1404) ಕುಮಾರ ಎಂದಿರುವುದರಿಂದ, ಈ ಗ್ರಾಮವನ್ನು ಹರಿಹರವೆಂದು ಕರೆಯಲು ಕಾರಣವಾಯಿತೋ ಏನೋ, ಎರಡನೆಯದರಲ್ಲಿ ಹರಿಹರದೇವರನ್ನು ಕುರಿತಿದ್ದು, ಈ ದೇವರ ದೇವಾಲಯ ಆ ದೊರೆಯ ಸ್ಮರಣೆಗಾಗಿಯೇ ನಿರ್ಮಿತವಾಗಿದ್ದಿರಬಹುದು: ಗ್ರಾಮಕ್ಕೆ ಕೂಡ ಆ ಹೆಸರಾಗಿರಬಹುದು. ದೇವಾಲಯಕ್ಕೆ

ಬೆಂಕಿ ಬಿದ್ದು ಇಲ್ಲಿದ್ದ ಗಣಪತಿ, ಬಸವ, ದುರ್ಗೆಯರ ಪ್ರತಿಮೆಗಳು ಹಾಳಾಗಿವೆ. ಗಣಪತಿಯ ಮೂರ್ತಿ ಅಕ್ಷಮಾಲೆ ಹಿಡಿದಿರುವ ಅಪರೂಪದ ಮೂರ್ತಿಯಾಗಿದ್ದು, 14ನೆಯ ಶತಮಾನದ್ದು ಇರಬಹುದೆಂದೂ ಇದು ಶಕ್ತಿಗಣಪತಿಯ ಮೂರ್ತಿಯೆಂದೂ ಭಾವಿಸಲಾಗಿದೆ. ಈಗ ಮೂರ್ತಿ ಭಗ್ನವಾಗಿದೆ.

ಅರಳಾಳು

ಅರ್ಕಾವತಿ ನದಿ ದಂಡೆಯ, ಅರುಳಾಹಾಳ ರಾಜ್ಯವೆಂದೇ ಉಲ್ಲೇಖಿತವಾದ ಇದು ಸೀಗಲನಾಡ ಪ್ರಭುಗಳ ಕೇಂದ್ರ ಸ್ಥಾನವಾಗಿತ್ತು.

ಕಾನಕಾನಹಳ್ಳಿಯ ಒಂದು ಶಾಸನದಲ್ಲಿ (ನಂ 93) ಅರುಳಹಾಲ ರಾಜ್ಯವೆಂದೇ ಉಲ್ಲೇಖಗೊಂಡಿರುವ ಈ ಗ್ರಾಮ ಅರ್ಕಾವದಿ ನದಿ ದಂಡೆಯ ಮೇಲಿದೆ. ಸೀಗಲನಾಡ ಪ್ರಭುಗಳ ಮುಖ್ಯ ಕೇಂದ್ರವಾಗಿತ್ತು. ವಿಜಯನಗರ ಕಾಲದ ರಾಜಕೀಯ ಚಟುವಟಿಕೆಯ ಕೇಂದ್ರವಾಗಿತ್ತೆನ್ನಲಾಗಿದೆ. ಅನೇಕ ವೀರಗಲ್ಲುಗಳು ದೊರಕಿವೆ. 8 ಅಡಿ ಎತ್ತರದ ದೊಡ್ಡ ಶಿವಲಿಂಗವಿದ್ದ ಶಿವಾಲಯವೊಂದರ ಅವಶೇಷ ಕಂಡು ಬಂದಿದ್ದು ಬಹುಶಃ ಇದು ಗಂಗರ ಕಾಲಕ್ಕೆ ಸೇರಿದ್ದಾಗಿರಬಹುದು.

ಸ್ಥಳದ ಪ್ರಾಚೀನವಾದ ವಿಷ್ಣುದೇವಾಲಯ ಸಾಕಷ್ಟು ವಿಶಾಲವಾದುದು. ಅದರ ಹೊರಗಿನ ಮಂಟದಲ್ಲಿ ಉಬ್ಬುಶಿಲ್ಪಗಳಿರುವ ಸುಂದರ ಶಿಲಾಸ್ತಂಭುಗಳು, ವಿಜಯನಗರ ಶೈಲಿಯವು, ಇರುವುದನ್ನು ಕಾಣಬಹುದಾಗಿದೆ. ಈಗಾಗಲೇ ಗಮನಿಸಿರುವಂತೆ ನಾರಾಯಣದೇವರ ಮಾನ್ಯದ ಹೊಲದ ಶಾಸನದಲ್ಲಿ (ನಂ. 100 / 13923) ಸಿಗಲನಾಡು ಶಂಗ ಅಪ್ಪ (ಚಂಗಪ್ಪ?) ಎಂಬವನ ಕಾಲದಲ್ಲಿ ಅರುಳಹಾಳ ಮಾರಗೌಡನ ಮಗ ಚಿಕ್ಕ ಐವಣ್ಣನು ನಾರಾಯಣದೇವರಿಗೆ ಭೂದಾನ ಮಾಡಿದನೆಂಬುದು ವಿದಿತವಿದೆ. ಈ ದೇವರಿಗೆ ಫಾಲ್ಗಣದಲ್ಲಿ ಜಾತ್ರೆ ನಡೆಯುತ್ತದೆ. ಇಲ್ಲಿಯೇ ಇರುವ ವೆಂಕಟಸ್ವಾಮಿದೇವಾಲಯ ಸಹ ವಿಶಾಲವಾದ್ದು, ಪ್ರಾಚೀನವಾದ್ದು, ಜಾತ್ರೆಯೂ ಉಂಟು. ಇದು ಫಾಲ್ಗುಣ ಮಾಸದಲ್ಲಿ ನಡೆಯುತ್ತದೆ. ಸಾವಿರಾರು ಭಕ್ತರು ಸೇರುತ್ತಾರೆ. ಇತರ ಗುಡಿಗಳು ಎಂದರೆ, ಬಸವೇಶ್ವರ, ಮಾರಮ್ಮ ಮತ್ತು ಕೊಲ್ಲಾಪುರದಮ್ಮ ಎಂಬ ದೇವತೆಗಳಿಗೆ ಸಂಬಂಧಿಸಿದ್ದು. ಅಲ್ಲದೆ ಬಸವಣ್ಣ ಗುಡಿಯೆಂಬುದೂ ಉಂಟು. ಹರಿಜನರ ಕೇರಿಯಲ್ಲಿ ದೊರೆತ ಒಂದು ವೀರಗಲ್ಲಿನಲ್ಲಿ ಭೀಕರವಾದ ಕದನದ ದೃಶ್ಯವೊಂದರ ಕೆತ್ತನೆಯಿದೆ. ಇನ್ನೊಂದು. ಸಮೀಪದ ಅಗ್ರಹಾರ ಬಯಲಿನಲ್ಲಿ ದೊರೆತ ಶಾಸನ (ನಂ 87 / 1400). ಮಾರಸಮುದ್ರದ ಕೆರೆಯ ತೂಬಿನ ದುರಸ್ತಿಗೆ ಸಂಬಂಧಿಸಿದ ಸಾಮಾಜಿಕ ಪ್ರಾಮುಖ್ಯದ ಶಾಸನವಾಗಿದ್ದು, ಇದನ್ನು ವಿಜಯನಗರದ ಇತಿಹಾಸಭಾಗದಲ್ಲಿ ಈಗಾಗಲೇ ಗಮನಿಸಿದೆ. ಹಾಗೆಯೇ ಸಿಗಲನಾಡಿನೊಳಗೆ ಅರುಳಹಾಳು ಸ್ವಾಮಿತ್ವವನ್ನು ಒಪ್ಪಿಕೊಂಡ ರಾಜಕೀಯ ಪ್ರಾಮುಖ್ಯದ ಮತ್ತೊಂದು ಶಾಸನದ (98 / 1391)

ವಿಚಾರವನ್ನು ಸಿಗಲನಾಡು ಇತಿಹಾಸಭಾಗದಲ್ಲಿ ತಿಳಿಸಿದೆ. ಅರಳಾಳು ಗ್ರಾಮದಲ್ಲಿ ಮಂಟೇಸ್ವಾಮಿಯ ಗದ್ದುಗೆಯಿರುವುದೂ ಒಂದು ವಿಶೇಷ.

ಮಡಿವಾಳ

ಅರ್ಕಾವತಿ ಮತ್ತು ಕಾವೇರಿ ನದಿಗಳು ಕೂಡುವ ಸಂಗಮ. ಕನಕಪುರಕ್ಕೆ 32 ಕಿ.ಮೀ. ದೂರದಲ್ಲಿದೆ. ಇಲ್ಲಿಂದ 5 ಕಿ.ಮೀ. ದೂರದಲ್ಲಿ ಮೇಕೆದಾಟು, 7 ಕಿ.ಮೀ. ದೂರದಲ್ಲಿ ಮಡಿವಾಳ ಎಂಬ ಪ್ರಕೃತಿರಮ್ಯಸ್ಥಳಗಳಿವೆ. ಚೋಳ ವಾಸ್ತು ಶೈಲಿಯ ಶಿವನಾಂಕಾರೇಶ್ವರ ಎಂಬುದಾಗಿ ರೂಢಿಯಲ್ಲಿ ಕರೆಯುವ ದೇವಾಲಯ ತಾಲ್ಲೂಕಿನ ಸಾವಿರಾರು ಕುಟುಂಬಗಳಿಗೆ ಕುಲದೈವವಾಗಿದೆ. ಕಾಡಿನ ಮಧ್ಯೆ ಕಾಲುಹಾದಿಯಲ್ಲಿ ಚಾರಣ ಕೈಕೊಂಡರೆ, ಸೀತನ ಕೊಟ್ಟ ನದಿಯನ್ನು ಎರಡು ಸಲ ದಾಟಿದಾಗ ಕಾಣುವುದು, ಈ ದೇವಾಲಯ. ನದಿ ಅಂಕುಡೊಂಕಾಗಿ ಹರಿಯುತ್ತದೆ. ಮೂರು ದಿಕ್ಕುಗಳಲ್ಲಿಯೂ ಹರಿದ್ವರ್ಣದ ಸಸ್ಯರಾಶಿ ತುಂಬಿದ ದೊಡ್ಡ ಬೆಟ್ಟಗಳು, ನದೀತಟದ ದೇವಾಲಯವಿದೆ 25 ಅಂಕಣಗಳಷ್ಟು ವಿಶಾಲವಾದ ದೇವಾಲಯ ಈಗ ಶಿಥಿಲಾವಸ್ಥೆಯಲ್ಲಿದೆ.

ವೆಂಕಟರಾಯನ ದೊಡ್ಡಿ

ಕನಕಪುರದಿಂದ 11 ಕಿ.ಮೀ ದೂರದಲ್ಲಿರುವ ವೆಂಕಟರಾಯನ ದೊಡ್ಡಿಗೆ ಹೋಗಿ, ಅಲ್ಲಿಂದ ಅತ್ತಿಕಟ್ಟೆ ದಾರಿಯಲ್ಲಿ 1.5 ಕಿ.ಮೀ ಕಾಲುನಡಗೆಯಲ್ಲಿ ಸಾಗಿದರೆ, ಒಂದು ಮಾವಿನ ತೋಪು ಸಿಕ್ಕುತ್ತದೆ. ಅಲ್ಲಿ ಪೂರ್ವಾಭಿಮುಖವಾಗಿ ಒಂದು, ಉತ್ತರಾಭಿಮುಖವಾಗಿ ಇನ್ನೊಂದು ಹೀಗೆ ಎರಡು ಹಾಳುಬಿದ್ದಗುಡಿಗಳಿದ್ದು, ಒಟ್ಟಿಗೆ ಸೋಮೇಶ್ವರನ ಗುಡಿ ಎಂದು ಕರೆಯುವುದು ರೂಢಿಯಾಗದೆ. 20 ಅಡಿ ಎತ್ತರದ ಗರುಡಗಂಬದಿಂದ ಸ್ಥಳವನ್ನು ಗುರುತಿಸಬಹುದು. ಇದು ಚೋಳರ ಕಾಲದ ದೇವಾಲಯವೆಂದು ತಿಳಿಯಲಾಗಿದೆ.

ಕಲಾತ್ಮಕವಾದ ಪ್ರವೇಶದ್ವಾರ, ನಂದಿಯ ವಿಗ್ರಹ, ಪುರಾಣಸಂದರ್ಭಗಳ ಶಿಲ್ಪಗಳನ್ನು ಕೆತ್ತಿರುವ ಏಳು ಕಂಬಗಳು, ವಿಶಾಲ ಸಭಾಂಗಣ ಇವುಗಳಿಂದ ಈ ದೇವಾಲಯ ಕೂಡಿದೆ. ಗರ್ಭಗುಡಿಯನ್ನು ಪ್ರವೇಶಿಸುವ ಮೊದಲು ನಂದಿ, ಸಿಂಹ, ತಮಟೆಗಾರ, ಮೀನಿನ ಮೇಲೆ ಕುಳಿತ ಬಾಲಕ, ನರ್ತಕರು ಇವುಗಳ ಕೆತ್ತೆನೆಗಳ ಎರಡು ಕೋಣೆಗಳುಂಟು.

ದೇವಸ್ಥಾನದ ಹೊರಗೋಡೆಯ ಮೇಲೆ ಮೂರು ಬಾಲಗಳನ್ನು ಹೊಂದಿರುವ ತ್ರಿಕೋನಾಕೃತಿಯ ಮೀನಿನ ಚಿತ್ರ, ಸಿಂಹಮುಖ ಮಾನವ ಶರೀರದ ಚಿತ್ರ ಇರುವ ವಿಶೇಷ ಶಿಲ್ಪಕೃತಿಗಳಿವೆ. ಅಲ್ಲಲ್ಲಿ ಭಗ್ನಶಿಲ್ಪಗಳೂ ಶಿಲಾಶಾಸನಗಳು ವೀರಗಲ್ಲೂ ಚೆದುರಿಬಿದ್ದಿವೆ.

ಸೋಲಿಗೇರಿ

ಕನಕಪುರ ತಾಲ್ಲೂಕು ಬಸವನ ಬೆಟ್ಟ ಹಾಗೂ ಬನ್ನಾರೆ ಅರಣ್ಯಪ್ರದೇಶದ ನಡುವೆ ಇರುವ ಗಿರಿಧಾಮ ಸೋಲಿಗೇರಿ. ಸಾತನೂರು ಹೊನ್ನಿಗನಹಳ್ಳಿ ಮಾರ್ಗವಾಗಿ ಹರಿಹರ ಗ್ರಾಮದವರೆಗೆ ಸಾರಿಗೆವ್ಯವಸ್ಥೆಯಿದೆ. ಇಲ್ಲಿಂದ ಮುಂದೆ ಸು. 8 ಕಿ.ಮೀ ಚಾರಣದಿಂದ ಈ ಸ್ಥಳ ತಲುಪಬಹುದು. ಬೆಟ್ಟದ ತುದಿಯಲ್ಲಿ ಸು. 100 ವರ್ಷಗಳಷ್ಟು ಹಿಂದೆ ನಿರ್ಮಿಸಿದಂತೆ ತೋರುವ ಪ್ರವಾಸಿಬಂಗಲೆ ಆಂಗ್ಲರ ಆಡಳಿತದ ಪಳೆಯುಳಿಕೆಯೆಂಬಂತಿದೆ. ಬೆಟ್ಟದ ವ್ಯೂ ಪಾಯಿಂಟ್ ಇದರ ಸೂರ್ಯೋದಯ ಸೂರ್ಯಾಸ್ತಗಳನ್ನು ನೋಡುವುದು ಒಂದು ರೋಮಾಂಚಕರವಾದ ಅನುಭವ. ಹತ್ತಾರು ಬೆಟ್ಟಗಳ ಅಲೆಗಳ ಸಾಲು, ಕಣಿವೆಯಂಚಿನ ಕಾವೇರಿ ನಯನಮನೋಹರ.

ಸೋಲಿಗೇರಿಯಿಂದ ಕಾಣುವ ಗಿರಿವನಗಳ ದೃಶ್ಯಗಳ ಕಣ್ಣು ತುಂಬುತ್ತವೆ. ಚಾಮುಂಡಿ ಮಲೆ ಮಹದೇಶ್ವರ ಬೆಟ್ಟಗಳು, ಹನೂರು ಅರಣ್ಯಪ್ರದೇಶ, ಶಿವನ ಸಮುದ್ರ, ಗಾಳಿಬೋರೆ, ಕೊಳ್ಳೇಗಾಲ, ಹಲಗೂರು, ತೊರೆಕಾಡನ ಹಳ್ಳಿ ಇತ್ಯಾದಿ. ಇಲ್ಲಿಂದ ಮುತ್ತತ್ತಿಗೆ ಸು. 8 ಕಿ. ಮೀ. ಕಾಲುಹಾದಿ. ಬೆಟ್ಟದ ತುದಿಯಿಂದ ಅಳದ ಕಣಿವೆಯಲ್ಲಿ ಕಾಣುವ ಕಾವೇರಿಯ ಕಡೆಗೆ ಬನ್ನಾರೆ ಅರಣ್ಯದ ಮೂಲಕ ಇಳಿದಾಗ ಆಗುವ ಅನುಭವ ರೋಮಾಂಚಕ. ವನ್ಯಪ್ರಾಣಿಗಳ ದರ್ಶನ ಲಾಭವೂ ಉಂಟು.

ಭೀಮನಕಿಂಡಿ ಬೆಟ್ಟ

ಭಾರತದಲ್ಲಿಯೇ ಅತಿ ದೊಡ್ಡದಾದುದು ಎಂದು ಹೇಳಲಾದ ನಿಸರ್ಗ ನಿರ್ಮಿತ ಶಿಲಾಸೇತುವೆ ಇದು. ಸಾತನೂರು ಹೋಬಳಿ ಕಬ್ಬಾಳುಗ್ರಾಮದಿಂದ ಕಂಚನ ಹಳ್ಳಿಗೆ ಹೋಗುವ ರಸ್ತೆಯ ಮೂಲಕ ಈ ಸ್ಥಳವನ್ನು ತಲುಪಬಹುದು. ಕಡಿದಾದ ಬೆಟ್ಟದ ಮೇಲಿರುವ ಈ ಸ್ಥಳ ಗಟ್ಟಿಯಾದ ಗ್ರಾನೈಟ್ ಹೆಬ್ಬಂಡೆಯ ಕೊರೆತದಿಂದಾದುದು. ಇದಕ್ಕೆ ಐತಿಹ್ಯವೂ ಉಂಟು. ತಾಯಿ ಕುಂತಿಗೆ, ಸೋದರರಿಗೆ ಆಹಾರ ಒದಗಿಸುವ ದಾರಿಯಲ್ಲಿ ತಡೆಯಾಗಿದ್ದ ಬೆಟ್ಟವನ್ನು ಭೀಮನು ಒಡೆದು ಕಿಂಡಿಯನ್ನು ನಿರ್ಮಿಸಿದನಂತೆ.

ಟಿಪ್ಪಣಿಗಳು

1 ಕಾನಕಾನಹಳ್ಳಿ ಚರಿತ್ರೆ, ಲೇ. ಡಾ. ಟಿ.ವಿ.ವಿ., ಪುಟ. 132.

2 ಕಾನಕಾನಹಳ್ಳಿ ಚರಿತ್ರೆ, ಲೇ. ಡಾ. ಟಿ.ವಿ.ವಿ., ಪುಟ. 134.

3 ವಿಷಯ ವಿಶ್ವಕೋಶ, ಸಂಪುಟ 1, ಪುಟ. 250.

4 ಕವಿ ವಿಶ್ವಕೋಶ, ಸಂಪುಟ 2, ಪುಟ. 1328.

5 ಅಂತರಗಂಗೆ, ಲೇ. ಮುತ್ತುರಾಜು, ಪುಟ. 28–32.

6 ಕವಿ ವಿಶ್ವಕೋಶ, ಸಂಪುಟ. 2, ಪುಟ. 693.

7 ಕವಿ ಕೋಶ. ಸಂಪುಟ. 1, ಪುಟ. 226.

8 ಕಾನಕಾನಹಳ್ಳಿ ಚರಿತ್ರೆ, ಲೇ. ಡಾ. ಟಿ.ವಿ.ವಿ., ಪುಟ. 119.

9 ಕಬ್ಬಾಳುದುರ್ಗ, ಸುಧಾ. 20–01–1980, ಲೇ. ಎಚ್. ಆರ್ ಸುದರ್ಶನಪ್ರಸಾದ್.

10 ಕಾನಕಾನಹಳ್ಳಿ ಚರಿತ್ರೆ, ಲೇ. ಡಾ. ಟಿ.ವಿ.ವಿ., ಪುಟ. 110.

11 ಕಾನಕಾನಹಳ್ಳಿ ಚರಿತ್ರೆ, ಲೇ. ಡಾ. ಟಿ.ವಿ.ವಿ., ಪುಟ. 109.

ಅಧ್ಯಾಯ – 8

ಸಮಾರೋಪ

ಭೌಗೋಳಿಕ ಶ್ರೀಮಂತವಾದ ಭೂ ರಚನೆಯ ವೈಶಿಷ್ಯಗಳಲ್ಲಿ ಈ ಕಾನಕಾನಹಳ್ಳಿ ಪ್ರದೇಶವೂ ಒಂದು. ದಟ್ಟವಾದ ಕಾಡುಗಳು, ಸಾಲು ಸಾಲು ಬೆಟ್ಟಗುಟ್ಟಗಳು, ಆಳವಾದ ಕಣಿವೆಗಳು, ಇವುಗಳ ನಡುವೆ ಶತ ಶತಮಾನಗಳಿಗೆ ಪೋಷಿತವಾಗಿ ಬಂದಿರುವ ಗ್ರಾಮ, ಉಪಗ್ರಾಮಗಳು. ಅನೇಕ ಜಾತಿಯ ಕಾಡು ಮೃಗ ಪಕ್ಷಿಗಳು. ಅವುಗಳೊಂದಿಗಿನ ಮಾನವನ ಒಡನಾಟ ನಿರಂತರವಾಗಿ ಸಾಗುತ್ತಾ ಬಂದಿದೆ.

ಅರ್ಕಾವತಿ ನದಿಯ ಪಶ್ಚಿಮ ದಂಡೆಯಲ್ಲಿರುವ ಈ ಊರಿಗೆ ಪ್ರಾಕೃತಿಕ, ಸಾಮಾಜಿಕ, ಸಾಂಸ್ಕೃತಿಕ ಮತ್ತು ಐತಿಹಾಸಿಕ ಮಹತ್ವವಿರುವವುದನ್ನು ಈ ಮಹಾಪ್ರಬಂಧದಲ್ಲಿ ಗುರುತು ಹಚ್ಚಲು ಪ್ರಯತ್ನಿಸಿದ್ದೇನೆ.

ಮನುಷ್ಯ ಸಾವಿರಾರು ವರ್ಷಗಳ ಹಿಂದೆ ಪ್ರಾಣಿಗಳಿಂದ ಬೇರ್ಪಟ್ಟು ತಾನೇ ಸ್ವತಂತ್ರವಾಗಿ ಬದುಕುವ ಪ್ರಯತ್ನ ಮಾಡಿದ. ಮಾನವ ವಿಕಾಸದ ದಿನಗಳಿಂದಲೂ ಕಾನಕಾನಹಳ್ಳಿ ಪ್ರದೇಶ ಜನ ವಸತಿ ತಾಣವಾಗಿತ್ತು ಎಂಬುದು ಪ್ರಾಗಿತಿಹಾಸದ ನೆಲಗಳಿಂದ ತಿಳಿದು ಬರುತ್ತದೆ. ಗೊಟ್ಟಿಗೆ ಹಳ್ಳಿ, ಹರಿಹರ, ಉದಾರಪಳ್ಳಿ ಮುಂತಾದ ಕಡೆಗಳಲ್ಲಿ ಸಿಕ್ಕಿರುವ ಶಿಲಾ ಸಮಾಧಿಗಳ ಕುರುಹುಗಳು ಇದನ್ನು ಸ್ಪಷ್ಟಪಡಿಸುತ್ತವೆ. ಇತಿಹಾಸ ತಜ್ಞರುಗಳಿಗೆ, ಮಾನವ ವಿಜ್ಞಾನಿಗಳಿಗೆ, ಸಮಾಜಶಾಸ್ತ್ರಜ್ಞರುಗಳಿಗೆ ಕುತೂಹಲದ ಸ್ಥಳವಾಗಿ ಅವರ ಅಧ್ಯಯನದ ವಸ್ತುವಾಗಿ ಈ ಪೂರ್ವದ ಮಾನವರ ನೆಲೆಗಳ ಸಹಾಕಾರಿಯಾಗುತ್ತವೆ.

ಇಳಿಜಾರು ಕಣಿವೆಗಳು, ಹಳ್ಳ, ತೊರೆ, ಮಡುವುಗಳು ದಟ್ಟವಾದ, ಹಸಿರು ಮುಕ್ಕುವ ಕುರುಚಲು ಗಿಡಗಳು, ಎತ್ತರವಾದ ಬೆಟ್ಟ ಸಾಲುಗಳು ಈ ಪೂರ್ವದ ಶಿಲಾಯುಗದ ಮಾನವರಿಗೆ ನೆಲೆಗಳಾಗಿದ್ದವು ಎಂಬುದಕ್ಕೆ ಇಂದಿಗೂ ಸಾಕ್ಷಿ ಒದಗಿಸುತ್ತವೆ. ಕೋಟಿವರ್ಷಗಳು ಗತಿಸಿಹೋದರೂ. ಸಾವಿರಾರು ಪೀಳಿಗೆಯ ತಲೆಸೂರುಗಳು ಉರುಳಿದರೂ, ಅವರು ಬಾಳಿರಬಹುದಾದ ಪರಿಕರಗಳು ಜೀವಿಸಿರಬಹುದಾದ ಗುರುತುಗಳು ಪತ್ತೆ ಆಗಿರುವುದು, ಮಾನವ ವಿಕಾಸದ ಹಂತಗಳನ್ನು ಗುರುತಿಸಲು ಸಹಾಯ ಒದಗಿಸುತ್ತವೆ.

ಬೆಟ್ಟಗಳ ಬಂಡೆಗಳು, ನದಿಗಳ ದೊಗರುಗಳು, ಕೋಟಿ ವರ್ಷಗಳಿಂದ ಹಾಗೇ ಇವೆ. ಗಿಡಗಳು ಹುಟ್ಟಿವೆ ಸತ್ತಿವೆ. ಪ್ರಾಣಿ ಪಕ್ಷಿಗಳು ಬಾಳಿವೆ ಅಳಿದಿವೆ. ಮಾನವರು ಹೋರಾಡಿದ್ದಾರೆ, ಸತ್ತಿದ್ದಾರೆ, ದಾಖಲೆಗಳು, ಸಾಕ್ಷಿಗಳು ಸಿಕ್ಕಷ್ಟು ಮಾತ್ರ. ಉಳಿದವು ಕಲ್ಪನೆ, ಊಹೆಗಳೆ.

ಚರಿತ್ರೆಯ ದೃಷ್ಟಿಯಿಂದ ಮಸುಕಾದ ಮಾಹಿತಿಗಳು ಮಾತ್ರ ದೊರೆಯುತ್ತವೆ. ಶಾಸನಗಳು, ಶಿಲ್ಪಗಳು, ಪಾಳು ಕೋಟೆ, ಮಂಟಪಗಳು, ಕೆರೆ, ತೂಬುಗಳು, ದೇವಾಲಯ ಆಧಾರಗಳಾಗಿ ಇದ್ದರೂ ಬೇರೆ ಐತಿಹಾಸಿಕ ದಾಖಲೆ, ಗಮನಾರ್ಹ ಘಟನಾವಳಿಗಳು ಸ್ಪಷ್ಟವಾಗಿ ಸಿಗುವುದಿಲ್ಲ. ಆದರೂ ಅಲ್ಲಲ್ಲೇ ಚಿಕ್ಕ ಚಿಕ್ಕ ಘಟನೆಗಳು ನಡೆದಿದ್ದರ ಬಗ್ಗೆ ಆಧಾರಗಳು ಸಿಗುತ್ತವೆ.

ಕಾನಕಾನಹಳ್ಳಿ ಐತಿಹಾಸಿಕವಾಗಿ ಒಂದು ಸಾವಿರ ವರ್ಷಗಳ ಆಜುಬಾಜಿನಲ್ಲಿ ಕಣ್ಣು ಬಿಡುತ್ತದೆ. ಕನ್ನಡ ನಾಡನ್ನು ಆಳಿದ ಪ್ರಾರಂಭದ ದೊರೆಗಳಾದ ಕದಂಬರು ನಂತರದ ರಾಷ್ಟ್ರಕೂಟರು ಮುಂದಿನ ಚಾಲುಕ್ಯರ ಯಾವ ಮಾಹಿತಿಯೂ ಈ ಪ್ರದೇಶದಲ್ಲಿ ದೊರೆಯುವುದಿಲ್ಲ. ಮೊದಲಿಗೆ, ಇಮ್ಮಡಿ ರಾಚಮಲ್ಲನ ಕಾಲ (870-919)ದ ವೀರಗಲ್ಲು ಸಾತನೂರಿನಲ್ಲಿ ಸಿಕ್ಕಿರುವುದೇ ವಿಶೇಷ ಈ ದೊರೆಯನ್ನು ಎರೆಯಪ್ಪರಸ ಎಂದು ಕರೆದಿರುವುದು ಸಾತನೂರಿಗೆ ಹಿಂದಿನ ಹೆಸರು 'ಸಾಂತನ ಊರು' ಎಂದು ಇತ್ತು ಎಂಬ ಅಂಶ ತಿಳಿದು ಬರುತ್ತದೆ. ಗಂಗವಾಡಿಯ ಪ್ರದೇಶ ವ್ಯಾಪ್ತಿಗೆ ಈ ಪ್ರಾಂತ್ಯವೂ ಸೇರಿತ್ತು.

ಯಾರೇ ರಾಜರು, ಕಾನಕಾನಹಳ್ಳಿ ಆಳ್ವಿಕೆ ಮಾಡಿದ್ದರೂ ಪಾಳೇಗಾರರು, ಮಂಡಲಿಕರನ್ನು ಬಿಟ್ಟರೆ, ರಾಜವಂಶಸ್ಥರು ಯಾರೂ ಕೂಡ ಇಲ್ಲಿ ತಮ್ಮ ರಾಜಧಾನಿ. ಕೇಂದ್ರಾಡಳಿತ ಪ್ರದೇಶವನ್ನಾಗಿ ಮಾಡಿಕೊಂಡು ಸ್ವತಂತ್ರವಾಗಿ ಆಳಿರುವ ಮಾಹಿತಿ ಇಲ್ಲ. ಆ ರಾಜರುಗಳು ತಮ್ಮ ಕೈಕೆಳಗಿನ ಸಾಮಂತರಿಗೆ ವಹಿಸಿ, ಈ ಪ್ರದೇಶವನ್ನು ರಾಜಕೀಯ ನಿರ್ವಹಿಸಿದ ವಿಚಾರ ತಿಳಿದು ಬರುತ್ತದೆ.

ಈ ಪ್ರದೇಶದಲ್ಲಿ ದೊರೆತ ಮುವ್ವತ್ತುಕ್ಕು ಹೆಚ್ಚು ತಮಿಳು ಶಾಸನಗಳು, ಮತ್ತು ಈ ಸ್ಥಳ ತಮಿಳುನಾಡಿನ ಪಕ್ಕದಲ್ಲೇ ಇರುವುದರಿಂದ ಚೋಳರು ಇಲ್ಲಿ ತಮ್ಮ ಆಳ್ವಿಕೆ ಮಾಡಿರುವ ಅಂಶಗಳು

ತಿಳಿಯುತ್ತವೆ. ಕ್ರಿ.ಶ. 1000ಕ್ಕಿಂತ ಹಿಂದೆ ಗಂಗರ ಪ್ರಾಬಲ್ಯಕ್ಕಿಂತ ಮುಂಚೆ ಚೋಳರ ಆಳ್ವಿಕೆಗೆ ಕಾನಕಾನಹಳ್ಳಿ ಪ್ರದೇಶ ಒಳಗೊಂಡಿತ್ತು ಎಂಬ ಅರಿವಾಗುತ್ತದೆ. ಈ ಪ್ರದೇಶವನ್ನು 'ಚೋಳಮಂಡಲ' ಎಂದು ಕರೆಯುತ್ತಿದ್ದುದು. ಇಲ್ಲಿನ ಶಾಸನಗಳಿಂದ ಸ್ಪಷ್ಟವಾಗುತ್ತದೆ. ಹೊಯ್ಸಳ ವಿಷ್ಣುವರ್ಧನನ ಸೇನಾನಿ 'ಗಂಗರಾಜ' ಈ ಚೋಳರನ್ನು ಓಡಿಸಿದ ಮೇಲೆ ಹೊಯ್ಸಳರ ಪಾರುಪತ್ಯ ಪ್ರಾರಂಭವಾಗುತ್ತದೆ. ಗಂಗವಾಡಿಯನ್ನು ಚೋಳರ ಹಿಡಿತದಿಂದ ಬಿಡಿಸಿದ ಮೇಲೆ ನಿಜವಾದ ಕಾನಕಾನಹಳ್ಳಿ ಪ್ರದೇಶದ ಇತಿಹಾಸ ಪ್ರಾರಂಭವಾಗುವುದು ಗಮನಾರ್ಹ. ಹೊಯ್ಸಳ ದೊರೆ ವಿಷ್ಣುವರ್ಧನ ಒಂದನೆಯ ದೊರೆ ವೀರನರಸಿಂಗನನ್ನು 'ಕೆಳಲೆನಾಡ' ದೊರೆ ಎಂದು ಶಾಸನಗಳು ಹೇಳುತ್ತವೆ.

ನಿಟ್ಟೂರಿನ ಎರಡು ಶಾಸನಗಳು ಚಿಕ್ಕ ಗಂಗವಾಡಿಗೆ ಸೇರಿದ ಕೆಳಲೆ ನಾಡು ಎಂದು ಈ ಪ್ರದೇಶವನ್ನು ಕರೆದಿರುವುದು ವಿಶೇಷ. ಈ ರಾಜರುಗಳನ್ನು ಕಾವೇರಿವಲ್ಲಭ, ಮೀಸೆಯರ ಗಂಡರ ಗಂಡ, ಮೊರೆವೊಕ್ಕರ ಕಾವ, ಕರೆದೀವದಾನಿ, ಬಿರುದರಬಾಯಿಬೊಂದಿಗೆ ಬಿರುದುಗಳೊಂದಿಗೆ ಅವರ ವೀರ ಆಡಳಿತ ವೈಖರಿಯನ್ನು ತೋರುತ್ತವೆ. ಇವರ ಕಾಲದಲ್ಲಿ ದೈವಭಕ್ತಿ, ಐಕಮತ್ಯ, ಶ್ರೀಮಂತಿಕೆಯನ್ನು ಪ್ರತಿಬಿಂಬಿಸುವ ಅನೇಕ ಶಾಸನಗಳು ಕಾಣಿಸಿಕೊಂಡಿವೆ. ಇವುಗಳಲ್ಲಿ ವೀರ ಬಲ್ಲಾಳನ ಕಾಲದವೇ ಹೆಚ್ಚು. ವಿಸ್ತೃತವೂ ವಿವರಣೆಯಿಂದ ಕೂಡಿರುವುವು ಹಾಗೂ ಖಚಿತತೆಯಿಂದಲೂ ಪ್ರಮುಖವಾಗಿದೆ.

ಕಾನಕಾನಹಳ್ಳಿಯ ಪ್ರದೇಶವನ್ನು ರಾಜರುಗಳ ಬೇರೆ ಬೇರೆ ವಂಶಸ್ಥ ಕಾಲದಲ್ಲಿ ಬೇರೆ ಬೇರೆ ಉಪ ಮಾಂಡಲಿಕರು, ಸಾಂತರು, ಪಾಳೆಗಾರರು ಆಳ್ವಿಕೆ ಮಾಡಿರುವುದು ಈ ನಾಡಿಗೆ ಬೇರೆ ಬೇರೆ ಹೆಸರಿನಿಂದ ಕರೆಯಲಾಗಿದೆ. ಅವುಗಳೆಂದರೆ ಸಿಗಲನಾಡು, ನೂಲನಾಡು, ತುಂಗಣಿನಾಡು, ಕೆಳಲೆನಾಡು, ಹೊಮ್ಮಳಿಗೆನಾಡು, ಎಳವಲೆನಾಡು, ದೇಸಿಗರನಾಡು, ಅಚ್ಚಲುನಾಡು, ಚೊಕ್ಕನಾಡು, ಮಹಾನಾಡು ಈ ಮೊದಲಾದ ಹೆಸರುಗಳಿಂದ ಕೂಡಿದೆ. ಇವು ಕೆಲವು ಗ್ರಾಮಗುಚ್ಚಗಳು ಆಡಳಿತ ಕೇಂದ್ರಗಳಾಗಿ ಸಾಂಸ್ಕೃತಿಕ ಅಂಶಗಳ ಆಧಾರದ ಮೇಲೆ ಹೆಸರುಗಳು ಬಂದಿರಬಹುದೆಂದು ಊಹಿಸಬಹುದಾಗಿದೆ. ರಾಜಕೀಯ ಇತಿಹಾಸದ ಕಾಲಕ್ಕೆ ಕಾನಕಾನಹಳ್ಳಿ ಪ್ರದೇಶವು ಅಥವಾ ಗ್ರಾಮವು ಅಷ್ಟೇನು ಪ್ರಸಿದ್ಧವಾಗಿರಲಿಲ್ಲ. ಅವುಗಳಿಗಿಂತ ಅಚ್ಚಲು ತುಂಗಣಿ, ಅರಳಾಳು ಬಹಳ ಜನಜನಿತವಾಗಿದ್ದವು ಎಂಬುದು ತಿಳಿದುಬರುತ್ತದೆ. ಇವುಗಳ ಆಡಳಿತ ಮಾಡಿದ ಪ್ರಮುಖರನ್ನು ಹಾಗೆಯೇ ಗೌವುಂಡರು ನಾಯಕರು ನಾಡಪ್ರಭುಗಳು ಮಂದಾಳತ್ವದ ಮಹನೀಯರನ್ನು ಸ್ಮರಿಸಿರುವ ಆಧಾರಗಳು ದೊರೆಯುತ್ತವೆ.

ಕಾನಕಾನಹಳ್ಳಿಯ ದಕ್ಷಿಣದ ಕಡೆಯ ಸಾತನೂರು. ಕೋಡಿಹಳ್ಳಿ, ಉಯ್ಯಂಬಳ್ಳಿ, ಮುಳ್ಳಹಳ್ಳಿ. ದೊಡ್ಡಕೊಪ್ಪ, ನಾಯಕನಹಳ್ಳಿ ಅರಳಾಳು ಈ ಕೆಲವು ಹಳ್ಳಿಗಳ ಸಮುಚ್ಚಯವನ್ನು ಸಿಗಲನಾಡು ಎಂದು ಕರೆದಿರುವುದಕ್ಕೆ ಆಧಾರವಿದೆ.

ಈ ಸಿಗಲ ಎಂಬುದು ಸಿಯಲ್ ನಾಡು ಎಂದು ಕರೆಸಿಕೊಳ್ಳುವುದಕ್ಕಿಂದ ಮುಂಚೆ ಇದು ಹೊಯ್ಸಳರ ಹಿಡಿತಕ್ಕೆ ಬರುವುದಕ್ಕೆ ಮೊದಲು ಚೋಳರ ಆಳ್ವಿಕೆಗೆ ಒಳಪಟ್ಟಿತ್ತು ಎಂಬುದು ತಮಿಳು ಶಾಸನಗಳ ವಿವರಣೆಯಲ್ಲಿ ಸ್ಪಷ್ಟವಾಗುತ್ತದೆ. ಈ ತಮಿಳು ಶಾಸನಗಳು ಕೋಡಿಹಳ್ಳಿ ಹೋಬಳಿಯ ಬಾಳೇಪುರ, ಹುಣಸೇಕೊಪ್ಪ, ಅಳ್ಳಿಕಡಕಲು, ಆಲನಹಳ್ಳಿಗಳಲ್ಲಿ ಹೆಚ್ಚಾಗಿ ದೊರಕಿವೆ. ಈ ಸಿಗಲನಾಡಿನ ಪ್ರಮುಖ ನಾಡಪ್ರಭು ಮಾರದೇವ ಅಥವಾ ಮಾರಪ್ಪಗೌಡ ಎಂದು ದಾಖಲೆಯಾಗಿದೆ. ಜೊತೆಗೆ ಇವನನ್ನು ಕಾವೇರಿವಲ್ಲಭ ಎಂಬ ಬಿರುದು ದೊರೆತಿರುವುದು ಗಮನಾರ್ಹ. ಈ ನಾಡಿಗೆ 'ಸಿಗಲ' ಎಂಬ ಹೆಸರು ಹೇಗೆ ಬಂತು ಎಂಬುದಕ್ಕೆ ಎಲ್ಲೂ ಸ್ಪಷ್ಟತೆ ಇಲ್ಲ. ಆದರೆ ಇಲ್ಲೆಲ್ಲಾ ಕಾಡು ಒದೆಯಾಗಿ, ಸೀಗೆಮೆಳೆಗಳು ಯತೇಚ್ಚವಾಗಿ ಇರುವುದರಿಂದ ಈ ಹೆಸರು ಬಂದಿರಬಹುದೆಂದು ಊಹಿಸಬಹುದಾಗಿದೆ. ಆದರೆ ಡಾ.ಟಿ.ವಿವಿಯವರು ಶ್ರೀಕಲ ಎಂದರೆ ಅದರ ತಧ್ಭವ ರೂಪ ಸಿಗಲ ಬಂದಿರಬಹುದು ಎಂದು ಗುರುತಿಸುತ್ತಾರೆ. ಶ್ರೀಕಲ ಒಂದು ಬಗೆಯ ಔಷಧಿ ಸಸ್ಯ. ಇದು ಈ ಪ್ರದೇಶದಲ್ಲಿ ಇತ್ತೇನೋ ಎಂದು ಭಾವಿಸುತ್ತಾರೆ.

ಹೊಯ್ಸಳ ವಂಶ ಅಂತ್ಯಕ್ಕೆ ವಿಜಯನಗರದ ಅರಸರು ಮುಂದುವರಿದಿರುವುದು ನಮಗೆ ತಿಳಿಯುವುದರಿಂದ ಈ ಕಾಲಕ್ಕೆ ಬುಕ್ಕಣ್ಣ ಒಡೆಯರ ಕಾಲದಿಂದ ಕಾನಕಾನಹಳ್ಳಿಯ ರಾಜಕೀಯ ಇತಿಹಾಸ ಪ್ರಾರಂಭವಾಗುತ್ತದೆ. ಇವನ ಮತ್ತು ಇವನ ಮಗನ ಕಾಲಕ್ಕೆ ಹಲವು ಶಾಸನಗಳು ಈ ಪ್ರದೇಶದಲ್ಲಿ ಸಿಕ್ಕಿವೆ. ಇಮ್ಮಡಿ ಹರಿಹರರಾಯ ಅವನ ಮಗ ಒಂದನೇ ದೇವರಾಯನ ಕಾಲದ ಆಳ್ವಿಕೆ ನಿಚ್ಚಳವಾಗಿ ದಾಖಲಾಗಿದೆ.

ಹಾಗೆಯೇ ಇಮ್ಮಡಿ ದೇವರಾಯ ಅಂದರೆ ಪ್ರೌಢದೇವರಾಯನೆಂದು ಪ್ರಸಿದ್ಧನಾದ ಈ ದೊರೆ ಕಬ್ಬಾಳಮ್ಮ ದೇವಸ್ಥಾನದಲ್ಲಿ ಕರಕುಶಲಿಗಳಾದ ಪಾಂಚಾಳರ ಒಡಂಬಡಿಕೆಗೆ ಸಂಬಂಧಿಸಿದ ಶಾಸನ ಗಮನಾರ್ಹವಾದುದು. ಇಲ್ಲಿ ಕಬ್ಬಾಳು ಕಬ್ಬಹಾಳ ಎಂತಲೂ ಈ ಅಮ್ಮನನ್ನು ಕಾಳಿಕಾದೇವಿ ಎಂದು ಕರೆದಿರುವುದು ಈ ಶಾಸನದ ಸಾಂಸ್ಕೃತಿಕ ಮಹತ್ವವನ್ನು ಸಾರುತ್ತದೆ.

ಮುಮ್ಮಡಿದೇವರಾಯನೆಂದು ಪ್ರಸಿದ್ಧನಾದ ವಿಜಯನಗರದ ಮಲ್ಲಿಕಾರ್ಜುನರಾಯನು ಶ್ರೀಶೈಲದ ಮಲ್ಲಿಕಾರ್ಜುನ ಸ್ವಾಮಿಗೆ ನೈವೇದ್ಯಕ್ಕೆ ಇಲ್ಲಿನ 'ಕಲ್ಲಾಪುರ' ಗ್ರಾಮವನ್ನು ದತ್ತಿ ನೀಡಿರುವುದು. ಎಲ್ಲಿಯ ಕಾನಕಾನಹಳ್ಳಿ ಎಲ್ಲಿಯ ಶ್ರೀಶೈಲ ಎಂದು ಆಶ್ಚರ್ಯವಾಗುತ್ತದೆ.

ತುಳುವ ವಂಶದ ದೊರೆ ವೀರನರಸಿಂಹನ ಕಾಲದಲ್ಲಿ ಉಲ್ಲೇಖವಾದ ಶಾಸನ ಸಿಕ್ಕಿದ್ದರೂ ಅದರ ಸ್ಪಷ್ಟತೆ ಇಲ್ಲ. ಹಾಗೆಯೇ ಮುಂದುವರಿದು ಗುರುತಿಸುವುದಾದರೆ ಶ್ರೀಕೃಷ್ಣದೇವರಾಯನ ಕಾಲದ ಶಾಸನವೊಂದರಿಂದ ಈ ರಾಜ ದಣ್ಣಾಯಕ ನಂಜಯ್ಯನ ಮೂಲಕ ಈ ನಾಡನ್ನು ಪಡೆದು

ಆಳ್ವಿಕೆ ಮಾಡಿರುವಂತೆ ತೋರುತ್ತದೆ. ನಂತರ ಕೃಷ್ಣದೇವರಾಯನ ತಮ್ಮ ಅಚ್ಯುತರಾಯ ಕೂಡ ಈ ಪ್ರದೇಶವನ್ನು ತನ್ನ ಹಿಡಿತಕ್ಕೆ ಪಡೆದಿರುವುದು ಹಾರೋಹಳ್ಳಿ ಶಾಸನದಿಂದ ತಿಳಿಯುವುದೇ ಅಲ್ಲದೆ, ಇಂದಿನ ಹಾರೋಹಳ್ಳಿ ಆಗ ಹಾರುವಹಳ್ಳಿ ಎಂದು ಕರೆಯುತ್ತಿದ್ದುದು ಇದೊಂದು ಅಗ್ರಹಾರವಿರಬಹುದೆಂದು ಊಹಿಸಲಾಗಿದೆ. ಒಂದನೇ ನರಸಿಂಹನ ಕಾಲ್ಲದಲಿ ಚನ್ನಪಟ್ಟಣ ಸೀಮೆಯನ್ನು "ಹೊಮ್ಮಳಿಗೆ ನಾಡು" ಎಂದು ಕರೆದಿರುವುದು, ಅಚ್ಯುತರಾಯನ ಕಾಲಕ್ಕೂ ಮುಂದುವರೆದಿರುವುದು ತಿಳಿಯುತ್ತದೆ.

ತುಳುವ ವಂಶದ ಸದಾಶಿವ ಮಹಾರಾಯನ ಕಾಲದ ಶಾಸನದಲ್ಲಿ 'ಆಲದಮರ' ವನ್ನು ವಿಳಾಸದ ಲ್ಯಾಂಡ್ ಮಾರ್ಕ್ ಆಗಿ ಬಳಸಿರುವುದು ವೃಕ್ಷಪ್ರೇಮ ಮತ್ತು ವೃಕ್ಷ ವಯೋಮಾನ ಅಂದಿನ ಜನರಿಗೆ ಅರಿವಿತ್ತು ಎಂಬುದನ್ನು ಭಾವಿಸಬಹುದು.

ಇಲ್ಲಿಂದ ಮುಂದೆ ಮೈಸೂರು ಒಡೆಯರ ದೊರೆ ಒಂದನೇ ರಾಜ ಒಡೆಯನ ಕಾಲದಿಂದ ಈ ಪ್ರದೇಶದಲ್ಲಿ ಶಾಸನಗಳು ಕಾಣಿಸಿಕೊಳ್ಳುತ್ತವೆ. ಚನ್ನಪಟ್ಟಣದ ಜಗದೇವರಾಯನಿಗೂ, ಮೈಸೂರು ಸಂಸ್ಥಾನಕ್ಕೂ ಆಗಾಗ ತಿಕ್ಕಾಟ ನಡೆಯುತ್ತ ಒಂದೊಂದು ಬಾರಿ ಒಬ್ಬೊಬ್ಬರ ಕೈ ಮೇಲಾಗುತ್ತಿದ್ದನ್ನು ಗಮನಿಸಿದ ಒಡೆಯರು ಈ ಪ್ರದೇಶದ ಪ್ರಭುತ್ವ ಸಾಧಿಸಲು, ಸ್ಥಳೀಯ ಮಾಂಡಲಿಕರನ್ನು ಹಣಿಯಲು ಪ್ರಯತ್ನಿಸಿದ್ದರೆಂಬುದಕ್ಕೆ ಶಾಸನಗಳು ದಾಖಲರ್ಹವಾಗಿದೆ.

ಅರ್ಕಾವತಿ ನದಿಯ ಪೂರ್ವದಂಡೆ ಅರಳಾಳುವಿನ ಮಹಾದೇಶ್ವರಸ್ವಾಮಿಗೆ ಮೈಸೂರು ದೊರೆ ದೇವರಾಜ ಒಡೆಯರ ಸೇವೆ ಕೈಂಕರ್ಯ ಮತ್ತು ಜೀರ್ಣೋದ್ಧಾರ ಮಾಡಿದ ಸ್ಪಷ್ಟ ಸಾಕ್ಷ್ಯಾಧಾರಗಳು ಸಿಗುತ್ತವೆ. ಇವರ ಕಾಲದಲ್ಲಿಯೇ ಅನೇಕ ಆಡಳಿತದ ವಿವಿಧ ಹಂತಗಳ ವೃತ್ತಿ ವಿಂಗಡಣೆಯ ಸರ್ಕಾರಿ ಕ್ರಮವನ್ನು ಕಾಣಬಹುದಾಗಿದೆ. ಗುಡಿಕಾರರು, ಪಾರುಪತ್ತೆಗಾರರು, ಸುಂಕದ ಮಣಿಹಗಾರರು, ಶಾನುಭೋಗರು, ರಾವುತರು, ರಾಣವೆಯವರು ಇವರಿಗೆಲ್ಲಾ ದೊರೆ ಕಟ್ಟು ಕಟ್ಟಳೆ ಮಾಡಿದ ಅಂಶ ಅಲ್ಲಿನ ಶಾಸನ (ನಂ. 94/1662) ವಿವರಿಸುತ್ತದೆ.

ಇದೇ ದೇವರಾಜ ದೊರೆಯ ಆಳ್ವಿಕೆಯ ಕಾಲದಲ್ಲಿ ಕಾನಕಾನಹಳ್ಳಿಗೆ ಮೊದಲ, ಮತ್ತು ಶ್ರೇಷ್ಠವಾದ ವೀರಶೈವರ ದೇಗುಲ ಮಠಕ್ಕೆ ಸುಸ್ಥಿತಿಗಾಗಿ ದಾನ ನಿಡಿದ ಶಾಸನ ಒಕ್ಕಣಿಸುತ್ತದೆ. ಹಾಗೆಯೇ ಇವನ ಈ ರಾಜನ ಆಳ್ವಿಕೆಯ ಕಾಲ್ಲದಲಿಯೇ ಅವನ ದಳವಾಯಿಯಾಗಿದ್ದ ಕೋಮಾರಯ್ಯನ ತಾಯಿ ತಿಮ್ಮಮ್ಮ ಕಾನಕಾನಹಳ್ಳಿ ನಿರ್ವಾಣ ದೇಗುಲಮಠ ಕಟ್ಟಿಸಿ, ಅದಕ್ಕೆ ಧರ್ಮಾರ್ಥ ಭೂಮಿ ಮತ್ತು 8 ವರಹವನ್ನು ದತ್ತಿಯಾಗಿ ನೀಡಿದ್ದು ಒಂದು ಶಾಸನದಿಂದ ತಿಳಿದುಬರುತ್ತದೆ. ಈ ಕೋಮಾರಯ್ಯ ಚಿಕ್ಕದೇವರಾಯ ಒಡೆಯರಿಗೆ ಹೆಣ್ಣು ಕೊಟ್ಟ ಮಾವನೂ ಕೂಡ ಎಂಬುದು ಇಲ್ಲಿ ವಿಶೇಷ.

ಈ ಕೋಮಾರಯ್ಯ ತನ್ನ ತಾಯಿ ಕಟ್ಟಿಸಿದ ಮಠ ಮಣ್ಣಿನಲ್ಲಿ ಕಟ್ಟಿದ್ದರಿಂದ ಅದು ಹುಚ್ಚುಹೊಳೆ ಬಂದು ಕೊಚ್ಚಿಹೊಗಲಾಗಿ ಕಲ್ಲುಮಠ ಕಟ್ಟಿಸಿ ಅದರ ಧರ್ಮಾರ್ಥ ಭೂಮಿ ಬಿಟ್ಟು 18 ಕಂಠಿರಾಯ ಪಣದ ವ್ಯವಸ್ಥೆ ಮಾಡಿ ಶಾಸನ ಹಾಕಿಸಲಾಯಿತು ಎಂದು ಇನ್ನೊಂದು ಶಾಸನದಿಂದ ಮನದಟ್ಟಾಗುತ್ತದೆ.

ಮಳಗಾಳು ಮಹಾದೇವಸ್ವಾಮಿ ದೇವಾಲಯ ಒಂದು ಕಾಲಕ್ಕೆ ಕಾನಕಾನಹಳ್ಳಿಯ ಸುತ್ತಣ ಪ್ರದೇಶಕ್ಕೆ ಪವಿತ್ರ ತೀರ್ಥ ಸ್ಥಳವಾಗಿತ್ತೆಂದು ಅದರ ವರ್ಣನೆಯಿಂದ ತಿಳಿದುಬರುತ್ತದೆ. ಈ ದೇವರಾಜ ಒಡೆಯ ಭಕ್ತಿಭಾವದಲ್ಲಿ ದೊಡ್ಡ ಕೊಡುಗೈದಾನಿ. ಚಾಮುಂಡಿ ಬೆಟ್ಟದ ಸಾವಿರ ಮೆಟ್ಟಿಲು, ಬೆಟ್ಟದ ಮೇಲಿನ ನಂದಿ ವಿಗ್ರಹವನ್ನು ಕೆತ್ತಿಸಿ ಅವುಗಳ ಸೇವಾರ್ಥಕ್ಕೆಂದು 63 ಬ್ರಾಹ್ಮಣರ ಮನೆಗಳನ್ನು ಕಟ್ಟಿಸಿ ಅವರಿಗೆ ಕಾನಕಾನಹಳ್ಳಿ ಪ್ರದೇಶಕ್ಕೆ ಸೇರಿದ ಗರಕಹಳ್ಳಿ, ಸೋಗಾಲ ಮುಂತಾದ ಗ್ರಾಮಗಳನ್ನು ಉಂಬಳಿಯಾಗಿ ನೀಡಿರುವುದು ಅತ್ಯಂತ ಮಹತ್ವದ್ದೆಂಬಂತೆ ಚಿತ್ರಿಸಿದ್ದಾನೆ.

ಇಲ್ಲಿ ಮಹತ್ವದ ವಿಷಯವೇನೆಂದರೆ ಟಿಪ್ಪುವಿನ ಮತ್ತು ಕಂಪನಿ ಸರ್ಕಾರದ ನಡುವೆ ಯುದ್ಧ ನಿರ್ಣಾಯಕಗೊಂಡು ಈ ಪ್ರಾಂತ್ಯವನ್ನು ಸುಲ್ತಾನನಿಂದ ಬಿಡಿಸಿ ಆಳ್ವಿಕೆ ಮುಂದುವರಿಕೆಗಾಗಿ ಮೈಸೂರು ಒಡೆಯರಿಗೆ ಒಪ್ಪಿಸಲಾಯಿತು.

ಕಾನಕಾನಹಳ್ಳಿಯನ್ನು ಆಳ್ವಿಕೆ ಮಾಡದಿದ್ದರೂ ಚನ್ನರಾಯಪಟ್ಟಣದಲ್ಲಿದ್ದುಕೊಂಡು ಮೈಸೂರು ಅರಸ ಅಧೀನ ಮಾಂಡಳಿಕ ದೊಡ್ಡಯ್ಯ ಪ್ರಭುಗಳನ್ನು ತುಂಗಣಿನಾಡ ಕಾನಕಾನಹಳ್ಳಿ ಸೀಮೆಯ ನಾಡಪ್ರಭು ಎಂದು ಕರೆದಿರುವುದು ಸೋಜಿಗದ ವಿಷಯವಾಗಿದೆ. ಇಲ್ಲಿಯ 'ಕಾನಕಾನಹಳ್ಳಿ ಪ್ರಭು' ಎಂದು ಚನ್ನರಾಯಪಟ್ಟಣದ ಶಾಸನ ಹೇಳಿದರೂ ಈ ಸೀಮೆಯಲ್ಲಿ ದೊಡ್ಡಯ್ಯನಿಗೆ ಸಂಬಂಧಿಸಿದ ಒಂದು ಶಾಸನವೂ ಸಿಗದಿರುವುದು ಆಶ್ಚರ್ಯಕರ ವಿಚಾರ.

ಮೈಸೂರು 5ನೇ ಚಾಮರಾಜ ಒಡೆಯನ ಕಾಲದಲ್ಲಿ ಬೇಲೂರು ವೆಂಕಟಪ್ಪನಾಯಕನಿಂದ ಗೆದ್ದುಕೊಂಡ ಮೈಸೂರು ಪ್ರಾಂತ್ಯದ ಗಡಿಭಾಗಗಳಾದ ಹಾಸನ ಚನ್ನರಾಯಪಟ್ಟಣದ ಸೀಮೆಗೆ 1ನೇ ಕಂಠೀರವ ನರಸರಾಜರು ತನ್ನ ವಿಶ್ವಾಸಿ ದಂಡನಾಯಕ ಪಾಳೇಗಾರನೊಬ್ಬನಾದ ದೊಡ್ಡಯ್ಯ ಪ್ರಭುಗಳನ್ನು ಅಧಿಪತಿಯನ್ನಾಗಿ ಮಾಡಿರುವುದು ಗಮನಿಸತಕ್ಕ ಐತಿಹಾಸಿಕ ಘಟನೆಯಾಗಿದೆ. ಇವನನ್ನು ಚನ್ನಪಟ್ಟಣದ ಶಾಸನವೊಂದು "ಚನ್ನಪಟ್ಟಣ ಸೀಮೆಯ ತುಂಗಣಿನಾಡಸ್ಥಳದ ಕಾಣಿಕಾರನಹಳ್ಳಿಯ ಪ್ರಭು ಚನ್ನವೀರಯ್ಯಗೌಡನವರ ಕುಮಾರ ದೊಡ್ಡಯ್ಯ' ಎಂದು ಕರೆದಿರುವುದು.

ಆದರೆ ಈ ಕಾನಕಾನಹಳ್ಳಿ ಪ್ರದೇಶದಲ್ಲಿ, ದೊಡ್ಯಯ್ಯಪ್ರಭು ಅಥವಾ ಅವನ ಮಗ ಬಸವಯ್ಯಪ್ರಭು ಇವರಿಬ್ಬರ ಬಗ್ಗೆಯಾಗಲೀ ಇವರ ವಂಶದ ಯಾವ ವಿಚಾರವನ್ನು ತಿಳಿಸುವ ಶಾಸನಗಳು ಸಿಗುವುದಿಲ್ಲ.

ಇವರ ಮೂಲ ಆಲೂರು ಎಂದು ತಿಳಿದರು ಅದು ಹಾಸನದ ಪಕ್ಕದ ಆಲೂರೇ. ಕಾನಕಾನಹಳ್ಳಿ ಪ್ರದೇಶದಲ್ಲಿ ಯಾವುದಾದರೂ ಆಲೂರು ಇತ್ತೆ ಎಂಬುದು ತಿಳಿಯುತ್ತಿಲ್ಲ.

ಇನ್ನೂ ಈ ಪ್ರದೇಶದ ಸಾಮಾಜಿಕ ಭೌಗೋಳಿಕ ಜನರ ಜೀವನವಿಧಾನಗಳನ್ನು ತಿಳಿಯುವುದು ಪ್ರಾನ್ಸಿಸ್ ಬುಕನ್ನನ ಪ್ರವಾಸಕಥನದಿಂದ. 1800ರಲ್ಲಿ ಇಲ್ಲಿ ಹಳ್ಳಿಗಳು ಅವರ ಬದುಕು, ಬೆಟ್ಟಗುಡ್ಡ ಕಣಿವೆ ಕಾಡು ಜಮೀನು ಬೆಳೆಪದ್ಧತಿ ಮುಂತಾದ ಅನೇಕ ವಿವರಗಳನ್ನು 2 ದಿನಗಳು ಕಾನಕಾನಹಳ್ಳಿ ಹಳ್ಳಿಯಲ್ಲಿ ತಂಗಿದ್ದು ಖುದ್ದು ಕಂಡುಂಡು ವಿವರಿಸಿದ್ದಾನೆ. ಇವನ ಕಾಲಕ್ಕೆ ಕಾಣಿಕಾರನಹಳ್ಳಿ ಕಾನಕಾನಹಳ್ಳಿ ಆಗಿತ್ತು ಎಂಬುದು ತಿಳಿಯುವುದೇ ಅಲ್ಲದೆ. ಅಂದಿನ ಹಳ್ಳಿಗಳ ಸರ್ವತೋಮುಖ ಸ್ಥಿತಿಯ ಪರಿಚಯವಾಗುವುದರಲ್ಲಿ ಎರಡು ಮಾತಿಲ್ಲ.

ಹಾಗೆಯೇ ಅಲೆಗ್ಸಾಂಡರ್ ಬೀಟ್ಸನ್ ಕಂಪನಿ ಸೈನ್ಯದಲ್ಲಿದ್ದು. ಅಂದಿನ ಸೈನ್ಯದ ಬಿಡಾರ, ಅವರ ದಾಳಿಯ ಕ್ರಮಗಳು, ಟಿಪ್ಪುವಿನ ಇಂಗ್ಲೀಷರ ವೈರುಧ್ಯದಗುಣ, ಅವನ ಆಕ್ರಮಣವೇ ಅಲ್ಲದೆ ಅಂದಿನ ಕಾಡು, ಕಣಿವೆ, ಜನರ ಸಂಕಷ್ಟಗಳು ಯುದ್ಧದ ರೇಜಿಗೆ ಅವರ ಆಕ್ರಮಣ ದಾಳಿಗಳು ಜನರ ಆತಂಕ ಭಯಗಳನ್ನು ಹುಟ್ಟಿಸಿ ಹೇಗೆ ವಲಸೆಗೆ ಕಾರಣವಾಗುತ್ತಿದ್ದವು ಎಂಬ ವಿಚಾರವನ್ನು ತಿಳಿಯಬಹುದಾಗಿದೆ.

ಈ ಭಾಗದಲ್ಲಿ ಸಿಕ್ಕಿರುವ ಐತಿಹಾಸಿಕ ದಾಖಲೆಗಳಲ್ಲಿ ವೀರಗಲ್ಲುಗಳೇ ಹೆಚ್ಚಾಗಿವೆ. ಊರಿನ ಉಳಿವಿಗಾಗಿ ಪ್ರಭುಗಳ ರಕ್ಷಣೆಗಾಗಿ, ಯುದ್ಧದಲ್ಲಿ, ವನ್ಯಮೃಗಗಳೊಂದಿಗೆ ಹೋರಾಡಿ ವೀರಸ್ವರ್ಗ ಪಡೆದ ನೂರಾರು ಯೋಧರ ರೋಚಕ ಕಥೆಗಳು ವೀರಗಲ್ಲುಗಳಲ್ಲಿ ಕೆತ್ತಲ್ಪಟ್ಟಿವೆ. ಹಾಗೇ ಎಷ್ಟೋ ವೀರಗಲ್ಲುಗಳು ಬರೀ ಶಿಲ್ಪಗಳಾಗಿ ಕಥೆ ಹೇಳಿದರೆ ಮತ್ತೆ ಕೆಲವು ಶಾಸನಪಾಠವನ್ನು ಕೆತ್ತಿ ಆ ಶಿಲ್ಪಗಳಿಗೆ ದತ್ತಿಬಿಟ್ಟ ವಿಷಯ ಆ ಕಾಲದ ರಾಜ, ಪಾಳೆಯಪಟ್ಟು, ಅವರ ದಾನಗುಣವನ್ನು ವಿವರಿಸುತ್ತವೆ.

ದಾನಶಾಸನಗಳಲ್ಲಿ ಮುಖ್ಯವಾಗಿ ದೇವಾಲಯಗಳಿಗೆ ಭೂಮಿ, ಹಣ, ಸೇವಾಕಟ್ಟಳೆಗಳನ್ನು ಮಾತ್ರ ವಿವರಿಸಿದೆ. ಶಿಷ್ಟಾಚಾರ ಅಂದಿನ ಜನರ ಧಾರ್ಮಿಕ ಭಾವನೆಗಳು ದೇವರ ಬಗ್ಗೆ ಭಯ, ಜನರಲ್ಲಿ ಸೌಹಾರ್ದಸೌಜೀವನಕ್ರಮ ಇನ್ನೂ ಮುಂತಾದ ಅನೇಕ ಒಳ್ಳೆಯ ಗುಣಾವಳಿಗಳನ್ನು ಈ ಶಾಸನಗಳು ಬಿಂಬಿಸುತ್ತವೆ. ಅಂತಹ ದಾನಬಿಟ್ಟ ಧಾರ್ಮಿಕ ಸಂಸ್ಥೆಗಳು ಅನೇಕ ಇದ್ದರೂ, ಇಂದಿಗೂ ದೊಡ್ಡದಾಗಿ ಬೆಳೆದದ್ದು ಅಂದಿನ ದಾನಗುಣದಿಂದಲೇ ಎಂಬುದು ವೇದ್ಯವಾಗುತ್ತದೆ.

ಅಂದಿನ ದೇವಾಲಯಗಳು ಸ್ಥಾವರಶಿಥಿಲವಾಗಿದ್ದರೂ ಈ ಶಾಸನಗಳಿಂದ ಜಂಗಮತ್ವದ ಗುಣ ಪಡೆದ ಅಂದಿನ ಸ್ಮಾರಕಗಳಾಗಿ, ಐತಿಹಾಸಿಕ ಕುರುಹುಗಳಾಗಿ, ದೈವತ್ವದ ಮಹತ್ವವನ್ನು ಸಾರುತ್ತ ಸಾಂಸ್ಕೃತಿಕ ಔನ್ನತ್ಯವನ್ನು ಮೆರೆಯುತ್ತಿವೆ.

ಧರ್ಮದ ವಿಷಯಕ್ಕೆ ಬಂದರೆ ಜನಪದಧರ್ಮ ಮತ್ತು ಶಿಷ್ಟಧರ್ಮ ಎಂದು ವಿಂಗಡಿಸಿದರೂ, ಸ್ಥಾವರಗಳಿಂದಾದ ಧರ್ಮವೇ ಶಿಷ್ಟಧರ್ಮ, ಜಂಗಮಗೊಳಿಸಿದುದು ಜನಪದಧರ್ಮ ಎಂದು ಸೂಕ್ಷ್ಮವಾಗಿ ವಿಂಗಡಿಸಿದರೂ ಎರಡೂ ಒಂದೇ. ಪ್ರಾಚೀನ ಧರ್ಮಗಳಲ್ಲಿ ಈ ಪ್ರದೇಶದಲ್ಲಿ ಪತ್ತೆಯಾಗಿರುವ ಶಿಲ್ಪಶಾಸನಗಳ ಆಧಾರದಲ್ಲಿ ಜೈನಧರ್ಮ ಮಾತ್ರ ಮೊದಲನೆಯದು. ನಂತರ ವೀರಶೈವ, ವೈಷ್ಣವಧರ್ಮಗಳ ವಿಚಾರಗಳು ಪ್ರಾಚೀನ ದೇವಾಲಯಗಳು, ಶಿಲ್ಪಗಳು, ಶಾಸನಗಳ ಆಧಾರಗಳಿಂದ ಗುರುತಿಸುವ ಚಿಕ್ಕ ಪ್ರಯತ್ನ ನಡೆದಿದೆ.

ಹರಿಹರ, ಉದಾರಹಳ್ಳಿ, ಅರಾಳಾಳು, ಮಳಗಾಳು, ಹಾರೋಹಳ್ಳಿ, ಕಲ್ಲಹಳ್ಳಿ, ಕಾನಕಾನಹಳ್ಳಿ ಮುಂತಾದ ಕಡೆ ಪ್ರಾಚೀನ ದೇವಾಲಯಗಳ ವಿವರಣೆಗಳನ್ನು ಸ್ಮಾರಕಗಳ ಸಹಿತ ವಿವರಿಸಲಾಗಿದೆ.

ನಂದಿಬೆಟ್ಟದಲ್ಲಿ ಹುಟ್ಟಿ ಕಾನಕಾನಹಳ್ಳಿ ಪ್ರದೇಶಕ್ಕೆ ಪ್ರವೇಶ ಪಡೆದು, ಈ ಪ್ರಾಂತ್ಯದ ಕಾವೇರಿ ಸಂಗಮದಲ್ಲಿ ಲೀನವಾಗುವ ಅರ್ಕಾವತಿ ನದಿಗೆ ಅದರದೆ ಆದ ಭೌಗೋಳಿಕ ಪಥ ನಿರ್ಮಾಣವಾಗಿರುವುದೇ ಅಲ್ಲದೆ, ಕಾಲಾಂತರದಿಂದ ಕಾನಕಾನಹಳ್ಳಿ ಪ್ರದೇಶದ ಇತಿಹಾಸ ಸಂಸ್ಕೃತಿ, ಜನಪದ ಎಲ್ಲಾ ತನ್ನದಂಡೆಯ ತೋಳ ತೆಕ್ಕೆಯಲ್ಲಿ ಅಪ್ಪಿಕೊಂಡು ಶತಶತಮಾನಗಳಿಂದ ಈ ಗಿಡದ ಸೀಮೆಯನ್ನು ಪೋಷಿಸಿಕೊಂಡು ಬಂದಿದೆ. ಅನೇಕ ಬೆಟ್ಟಗಳ ಕಿಬರಿಗಳಿಂದ ಹುಟ್ಟಿದ ಸಣ್ಣ ತೊರೆ ಹಳ್ಳಗಳನ್ನು ತನ್ನೊಳಗೆ ಹುದಗಿಸಿಕೊಂಡು, ನೂರಾರು ಹಳ್ಳಿಗಳ ಜೀವನಾಡಿಯಾಗಿ, ಲಕ್ಷಾಂತರ ಪ್ರಾಣಿಪಕ್ಷಿಗಳ ತಾಯಿಯಂತೆ ಪೋಷಿಸಿಕೊಂಡು ಬರುತ್ತಿದೆ.

ಹಾಗೆಯೇ ಕರ್ನಾಟಕ ಜೀವನದಿ ಕಾವೇರಿ ಮುತ್ತತ್ತಿಯಲ್ಲಿ ಈ ಕಾನಕಾನಹಳ್ಳಿ ಪ್ರಾಂತ್ಯಕ್ಕೆ ಪ್ರದೇಶ ಪಡೆದರೆ ಎತ್ತರವಾದ ಬೆಟ್ಟಗಳ ನಡುವೆ ಹರಿದು ಮೇಕೆದಾಟು ವಿಭಾಗದಲ್ಲಿ ಕೇವಲ 25 ಅಡಿಯಷ್ಟು ಚಿಕ್ಕ ಜಾಗದಲ್ಲಿ ಕಿರಿದಾಗಿ ಹರಿದು ತಮಿಳುನಾಡಿನ ಕಡೆ ದಾಂಗುಡಿ ಇಡುತ್ತದೆ. ಈ ನದಿಯೂ ಅಷ್ಟೇ ಅನೇಕ ರಾಜರುಗಳ ಆಡಳಿತವನ್ನು ಸುಲಭಗೊಳಿಸಿದೆ. ಜನರ ಕಷ್ಟಗಳಿಗೆ ಆಗಿ, ಆಳುವವರ ಭಾರವನ್ನು ಕಡಿಮೆಮಾಡಿದೆ. ಈ ಪ್ರಾಂತ್ಯದ ಅನೇಕ ರಾಜ, ಮಾಂಡಲಿಕರು 'ಕಾವೇರಿವಲ್ಲಭ' ಎಂದು ಬಿರುದಾಂಕಿತರಾಗಿರುವುದು. ಈ ನದಿಯ ಪ್ರಾಮುಖ್ಯತೆ ಹಾಗೂ ವೈಶಿಷ್ಟ್ಯತೆ ಸೂಚಿಸುತ್ತದೆ.

ಈ ಕಾನಕಾನಹಳ್ಳಿ ಬೆಟ್ಟಗುಡ್ಡಗಳ ನಾಡು. ಅರೆಮಲೆನಾಡು ಎಂದು ಕರೆಯುವುದೇ ಅದಕ್ಕಾಗಿ. ಇವುಗಳಲ್ಲಿ ಕಬ್ಬಾಳು ದುರ್ಗ ಪ್ರಸಿದ್ಧವಾದುದು. ಇಲ್ಲಿ ಕೋಟೆ ಇದ್ದು ಅನೇಕ ರಾಜರುಗಳ ರಕ್ಷಣೆ ಸ್ಥಳವಾಗಿ ಮಾನ್ಯಗೊಂಡಿದೆ. ಆಡಳಿತ ಕೇಂದ್ರವೇ ಅಲ್ಲದೆ ದುರ್ಗಮವಾಗಿ ಕಡಿದಾದ ಎತ್ತರವಾದ ನೆತ್ತಿವೈರಿಗಳ ಶಿಕ್ಷಾತಾಣವಾಗಿತ್ತೆಂದು ಐತಿಹ್ಯಗಳಿವೆ. ಇಲ್ಲಿಯ ಮಹಾಗ್ರಾಮದೇವತೆ ಕಬ್ಬಾಳಮ್ಮ ಬಹಳ ಜನಪ್ರಿಯ. ಇವಳ ವರ್ಣನೆಯ ಅನೇಕ ಶಾಸನಗಳೂ ದೊರಕಿವೆ.

ಬಿಳಿಕಲ್ ಬೆಟ್ಟವೂ ಸುಂದರವೂ, ರಮಣೀಯವಾದುದು ಆಗಿದೆ. ನೆತ್ತಿಯ ಮೇಲೆ ಏಕಶಿಲೆಯೊಂದಿದ್ದು ಸುಂದರವಾಗಿದೆ. ಇದು ಪ್ರಾಚೀನ ಜನವಸತಿ ಪ್ರದೇಶವಾಗಿತ್ತು. ಪ್ರಾಚೀನ ಕಾಲದಿಂದಲೂ ಜನರ ಕುತೂಹಲ ಸಾಹಸ ಚಾರಣದ ಬೆಟ್ಟವಾಗಿದ. ಬಾಣಂತರಮಾರಮ್ಮನ ಬೆಟ್ಟವು ಅನೇಕ ಐತಿಹ್ಯದ ಕಟ್ಟು ಕತೆಗಳ ಹಂದರವಾಗಿದೆ. ಹಾಗೆಯೇ ಬಸವನ ಬೆಟ್ಟ, ಜೇನುಕಲ್ಲುಬೆಟ್ಟ ಇವುಗಳೇ ಅಲ್ಲದೆ ಕಾನಕಾನಹಳ್ಳಿ ಪ್ರದೇಶದಲ್ಲಿ ನೂರಾರು ಚಿಕ್ಕಪುಟ್ಟ ಬೆಟ್ಟಗಳು ಸ್ಥಳೀಯ ಜನರ ಬದುಕಿನ ಭಾಗವಾಗಿ, ಸಹಕಾರಿ ಮತ್ತು ಮಾರಕವಾಗಿ ಬೆಸೆದುಕೊಂಡಿವೆ. ಇಲ್ಲಿನ ಜನ ಈ ಬೆಟ್ಟಗಳ ಕಿಬರಿಗಳಲ್ಲಿ ವಾಸಿಸುವ ಕಾಡುಪ್ರಾಣಿಗಳಿಗೆ ಆಹುತಿಯೂ ಆಗಿದ್ದಾರೆ. ಅವುಗಳೊಂದಿಗೆ ಹೋರಾಡಿ ವೀರಮರಣ ಅಪ್ಪಿದ್ದಾರೆ, ಜಯಿಸಿಯೂ ಇದ್ದಾರೆ.

ಇನ್ನು ಮುತ್ತತ್ತಿಯ ಕಾವೇರಿನದಿಯ ಹರಿವು ವಿಹಂಗಮ ನೋಟ, ಜಲಶಿಲ್ಪಿಯೇ ಕೆತ್ತಿರುವ ಸುಂದರ ಸೃಷ್ಟಿ ಶಿಲ್ಪಗಳೇ ತುಂಬಿರುವ 'ಮೇಕೆದಾಟು' ಅದ್ಭುತದೃಶ್ಯ. ಅರ್ಕಾವತಿ ನದಿಯಿಂದ ಧುಮುಕುವ ಜಲನಟಿಯ ನಿರ್ಭೀಳುವ ನಾಟ್ಯ ವೈಭವ ಇವೆಲ್ಲವೂ ಸಾವಿರಾರು ವರ್ಷಗಳಿಂದ ನಿರಂತರವಾಗಿ ಇಲ್ಲಿಯ ಮನುಷ್ಯನಿಗೆ ಪಾಠವಾಗಿ, ಆಸರೆಯಾಗಿ, ಎದೆಸವರುವ, ಬೆನ್ನುತಟ್ಟುವ ಶಕ್ತಿಯಾಗಿ, ಜನಜೀವನವನ್ನು ಸಂಭಾಳಿಸಿಕೊಂಡು ಬರುತ್ತಿವೆ.

ಈ ಕಾನಕಾನಹಳ್ಳಿಯ ಪ್ರದೇಶದ ಐತಿಹಾಸಿಕ ಸಾಮಾಜಿಕ, ಸಾಂಸ್ಕೃತಿಕ, ಜನಪದ ಅಂಶಗಳನ್ನು ಸಿಕ್ಕಿರುವ ಶಾಸನಗಳು, ಕೃತಿಗಳು, ಜನಪದ ಅಂಶಗಳನ್ನು ಸಿಕ್ಕಿರುವ ಶಾಸನಗಳು, ಕೃತಿಗಳು, ವಿದ್ವಾಂಸರು, ಸಿಕ್ಕ ಕುರುಹುಗಳು ಉಳಿದಿರುವ ಗುರುಗಳ ಮೂಲಕ ಹೊರ ತೆಗೆಯಲು ಪ್ರಯತ್ನಿಸಿದ್ದೇನೆ.

ಯಾವುದೇ ಸಂಶೋಧನೆಯೂ ಅಪೂರ್ಣ ಎಂಬ ವಿನಮ್ರತೆಯಿಂದಲೇ ಈ ಮಹಾಪ್ರಬಂಧವನ್ನು ಪೂರ್ಣಗೊಳಿಸಿದ್ದೇನೆ.

ಅನುಬಂಧಗಳು

ಅನುಬಂಧ 1

GOVERNMENT OF MYSORE

GENERAL AND REVENUE DEPARTMENTS.

G.O. No R. 279-352—R.M. 20-51-25, dated 10th April 1952.

'Kanakapura'.

Sanctions the change of the name of Kankanhalli Town and Taluk to —— .

READ.—

Letter No. C. 10-1963—50-51, dated 25th July 1951, from the Revenue Commissioner in Mysore, requesting sanction to the change of the present name of Kankanhalli to "Kanakapura".

2. Correspondence ending with letter No. 89—44-A-3-1, dated 7th January 1952, from the Director, Southern Circle, Survey of India, conveying the approval of the Surveyor-General of India to the change of spelling of name from 'Kankanhalli' to 'Kanakapura'.

ORDER No. R. 279-352—R.M. 20-51-25, DATED BANGALORE, THE 10TH APRIL 1952.

It is reported that the Town Municipal Council, Kankanhalli, and the Taluk Development Committee, Kankanhalli, have unanimously resolved that the name of Kankanhalli Town and Taluk may be changed to 'Kanakapura' and as the Taluk Development Committee represents the members from the various parts of the Taluk, there is no objection to the proposal. The Deputy Commissioner, Bangalore District, recommends that the name of Kankanhalli may be changed to 'Kanakapura' and the Superintendent of Land Records, Survey and Settlement in Mysore, who was consulted in the matter is agreeable to the proposal.

The Revenue Commissioner in accordance with the concurrent opinion of all those concerned requests sanction to the proposal of the Deputy Commissioner, Bangalore, to change the name of Kankanhalli to that of 'Kanakapura'. The proposal of the Revenue Commissioner, agreed to by the Surveyor-General of India to change the name of Kankanhalli Town and Taluk to 'Kanakapura' is sanctioned.

B. T. KEMPANNA,
Secretary to Government,
Revenue Department.

To—The Revenue Commissioner in Mysore, Bangalore, with records.
The Commissioner for Settlement and Land Records in Mysore.
The Accountant-General, Mysore, Bangalore.
The Other Heads of Departments.
The Secretaries to Government.
The Post Master-General, Madras Circle, Madras.
The Director, Southern Circle, Survey of India, Bangalore.

Exd.—T.N.S.

WD 2392—GPB—408—9-5-52.

ಕಾನಕಾನ ಹಳ್ಳಿ ಕನಕಪುರ ಎಂದು ಹೆಸರು ಪಡೆದ ದಾಖಲೆ

ಕೃಪೆ: ವಿಭಾಗಾಧಿಕಾರಿಗಳು, ರಾಜ್ಯ ಪತ್ರಾಗಾರ ಇಲಾಖೆ, ಮೈಸೂರು

ಅನುಬಂಧ 2



Illustrator : Trapand Elisha (1750-1828)

The Kankanahalli River (Cankanelly river, 21-3-1799)

ಅನುಬಂಧ 3

ಕನಕಪುರ ತಾಲ್ಲೂಕು ಗ್ರಾಮಗಳು

ಅಗರ
ಅಂಗರದ ಹಳ್ಳಿ
ಅಗ್ರಹಾರ
ಅಚ್ಚಲು
ಅಜ್ಜನ ಬಸವನ ಹಳ್ಳಿ
ಅಜ್ಜೇಗೌಡನ ವಲಸೆ
ಅಂಜನಾಪುರ
ಅಣಜವಾಡಿ
ಅತ್ತಿಕಟ್ಟೆ
ಅತ್ತಿಗುಪ್ಪೆ
ಅತ್ತಿಹಳ್ಳಿ
ಆನಂದನ ಹಳ್ಳಿ
ಅನಮನ ಹಳ್ಳಿ
ಅರಕೆರೆ
ಅರಟಬೆಲೆ
ಅರನ ಕುಪ್ಪೆ
ಅರಳಗಡಕಲ್ಲು
ಅರಳಾಳು
ಅರಳಾಳುಸಂದ್ರ
ಅರೆಕಟ್ಟೆದೊಡ್ಡಿ
ಅರೆಕೊಪ್ಪ
ಆರೆಹೊಸಹಳ್ಳಿ
ಅವರೇಮಾಳ

ಆಲಹಳ್ಳಿ
ಆಲ್ಕುಳಿ
ಆಲೂರು
ಇನಾಮಕೊಪ್ಪ (ಚಿಕ್ಕೊಪ)
ಇರಲಪೋಡು
ಉದಾರಹಳ್ಳಿ
ಉಯ್ಯಂಬಳ್ಳಿ
ಉರಗನ ದೊಡ್ಡಿ
ಎಳವಳ್ಳಿ
ಏಡಮಡು
ಏತಂಗೆರೆ
ಏಳಗಳ್ಳಿ
ಕಗ್ಗಲ ಹಳ್ಳಿ
ಕಚುವನ ಹಳ್ಳಿ
ಕಡಸೀಕೊಪ್ಪ
ಕುಣಿವೆ ಕಟ್ಟೆ
ಕತ್ತರಿನತ್ತ
ಕನಕಪುರ (ಕಾನಾಕಾನ ಹಳ್ಳಿ)
ಕಬ್ಬಳ್ಳಿ
ಕಬ್ಬಾಳು
ಕಬ್ಬಾಳು ಅರಣ್ಯ
ಕಮಲಾಪುರ
ಕಂಬಸಾಗರ

ಕಾಂಚನಹಳ್ಳಿ
ಕಾಡಚಿಕ್ಕಸಂದ್ರ
ಕಾಡುವನ ಹಳ್ಳಿ
ಕಾಡಹಳ್ಳಿ
ಕಾನೂರು (ಕುನ್ನೂರು)
ಕಾಳೇಗೌಡನ ದೊಡ್ಡಿ
ಕೀರನ ಗೆರೆ
ಕುಗ್ಗೆ ದೊಡ್ಡಿ
ಗುಡಿಗಳನೆ
ಕುರಿಗೌಡನ ದೊಡ್ಡಿ
ಕುರುಬರ ದೊಡ್ಡಿ
ಕುರುಬರ ಹಳ್ಳಿ
ಕೂತಹಳ್ಳಿ
ಕೂತಗಳೆ
ಕೂತುಗೊಂಡನ ಹಳ್ಳಿ
ಕೂನೂರು
ಕೃಷ್ಣಯ್ಯನ ದೊಡ್ಡಿ
ಕೃಷ್ಣಾಬೋವಿ ದೊಡ್ಡಿ
ಕೆ.ಪಾಳ್ಯ
ಕೆಂಗಲುನತ್ತ ಗೊಲ್ಲಹಳ್ಳಿ
ಕೆಬ್ಬೆಹಳ್ಳಿ
ಕೆಬ್ರೆ (ಕೆಬ್ಬರೆ)
ಕೆಂಪಲ ನತ್ತ

ಅಳ್ಳಿಮಾರನಹಳ್ಳಿ
ಆನೆಹೊಸಹಳ್ಳಿ
ಆರ್ಜುನ ಹಳ್ಳಿ
ಆಲನತ್ತ
ಕೊಕ್ಕರೆ ಹೊಸಹಳ್ಳಿ
ಕೊಂಗಾಣಿ ದೊಡ್ಡಿ
ಕೊಟ್ಟಗೆರೆ
ಕೊಣ್ಣಾಳ ದೊಡ್ಡಿ
ಕೊತ್ತನೂರು ದೊಡ್ಡಿ
ಕೊಳಗೊಂಡನ ಹಳ್ಳಿ
ಕೊಳಾಲಗುಂದಿ
ಕೋಟಗಲ್ಲು
(ಕೊಟ್ಟಗಾಳು)
ಕೋಟೆಕೂಪ್ಪ
ಕೋಡಿಪುರ
ಕೋಡಿಹಳ್ಳಿ
ಕೋಣನ ಗುಂದಿ
ಕೋನಸಂದ್ರ
ಕೋಲಗೊಂಡನ ಹಳ್ಳಿ
ಗಂಗನ ಹಳ್ಳಿ
ಗಂಗಯ್ಯನ ದೊಡ್ಡಿ
ಗಡಸಹಳ್ಳಿ
ಗಬ್ಬಾಡಿ
ಗರಳಾಪುರ
ಗಾಣಾಳು
ಗುಡ್ಡೇವಿರನ ಹೊಸಹಳ್ಳಿ

ಕರೀಕಲ್ ದೊಡ್ಡಿ
ಕಲ್ಲನ ಕುಪ್ಪೆ
ಕಲ್ಲ ಹಳ್ಳಿ
ಕಲ್ಲಿಗೌಡನ ದೊಡ್ಡಿ
ಗೂಗೇರ ದೊಡ್ಡಿ
ಗೂಡೂರು
(ಗೋಡೂರು)
ಗೇರಹಳ್ಳಿ
ಗೊಟ್ಟಿಗೆ ಹಳ್ಳಿ
ಕಾರವನ ಪುರ
ಗೊಲ್ಲರ ದೊಡ್ಡಿ
ಗೊಲ್ಲಹಳ್ಳಿ (ಉ.ಹೋ)
ಗೊಲ್ಲಹಳ್ಳಿ (ಹಾ.ಹೋ)
ಗೋದೂರು
ಗೋಪಸಂದ್ರ
ಚನ್ನಸಂದ್ರ
ಚಂಬಲಿಕೆ ದೊಡ್ಡಿ
ಚಾಕನ ಹಳ್ಳಿ
ಚಿಕ್ಕ ಕೊಪ್ಪ
ಚಿಕ್ಕ ಕಲ್‌ಬಾಳು
ಚಿಕ್ಕ ಗೊಂಡನ ಹಳ್ಳಿ
ಚಿಕ್ಕ ಬೆಟ್ಟಹಳ್ಳಿ
ಚಿಕ್ಕ ಮರಳವಾಡಿ
ಚಿಕ್ಕ ಮುದುವಾಡಿ
ಚಿಕ್ಕ ಮುದುಡೆ
ಚಿಕ್ಕ ಸಾದೇನ ಹಳ್ಳಿ

ಕೆಂಪೇಗೌಡನ ದೊಡ್ಡಿ
ಕೆಮ್ಮಾಳೆ
ಕೆರಳಾಳುಸಂದ್ರ
ಕೇಮಪಾಲ ನತ್ತ
ಚೀಲಂದವಾಡಿ
ಚಿಲಂದವಾಡಿ ಅರಣ್ಯ
ಚೀಲೂರು
ಚುಲುಕನ ಕಾವಲು
ಚೂಡಹಳ್ಳಿ
ಚೊಕ್ಕಸಂದ್ರ
ಚಿಕ್ಕಸಂದ್ರ
ಚಕ್ಕಸಂದ್ರ ಕಾಡು
ಜಕ್ಕೇಗೌಡನ ದೊಡ್ಡಿ
ಟಿ. ಬೇಕುಪ್ಪೆ
ಟಿ. ಮಣಿಯಂಬಾಳು
ತಟ್ಟಿಗುಪ್ಪೆ
ತಟ್ಟೇಕೆರೆ (ಕೋ.ಹೋ)
ತಟ್ಟೇಕೆರೆ (ಮ.ಹೋ)
ತಾಮಸಂದ್ರ
ತಾಯಲೂರು ಅರಣ್ಯ
ತಾವರೆ ಗಟ್ಟ
ತಿಗಳರ ಹೊಸಹಳ್ಳಿ
ತಿಟ್ಟ ಮೇಲಿನ ಗೊಲ್ಲಹಳ್ಳಿ
ತಿಮ್ಮನ ದೊಡ್ಡಿ
ತಿಮ್ಮಸಂದ್ರ
ತುಂಗಣಿ

ಗುತ್ತಲ ಹುಣಸೆ	ಚಿಕ್ಕೇಗೌಡನ ದೊಡ್ಡಿ	ತುರುಕರ ಹೊಸಹಳ್ಳಿ (ಟಿ. ಹೊಸಹಳ್ಳಿ)
ಗುಳ್ಳಹಟ್ಟಿ ಕಾವಲು	ಚಿಕ್ಕೊಪ್ಪ	ತೆಂಗನಾಯಕನ ಹಳ್ಳಿ
ಗುಳಿಗನ ಹಳ್ಳಿ	ಚೀರನ ಗುಪ್ಪೆ	ತೇರನ ದೊಡ್ಡಿ
ತೇರುಬೀದಿ	ನಲ್ಲಹಳ್ಳಿ ದೊಡ್ಡಿ	ಬಾಣಂತಮಾರಿ
ತೈಲೂರು	ನಾಗಾರಸನ ಕೋಟೆ	ಬಾಲಗೊಂಡನ ಹಳ್ಳಿ
ತೈಲೂರು ಕಾಡು	ನಾಯಕನ ಹಳ್ಳಿ	ಬ್ಯಾಲಾಳು
ತೊಪ್ಪಗನ ಹಳ್ಳಿ	ನಾರೀ (ನರೀ) ಪುರ	ಬಿಲನ ಕುಪ್ಪೆ
ದಾಳಿಂಬ	ನಿಡಗಲ್ಲು	ಬಿಳಿಕಲ್ಲು ಅರಣ್ಯ
ದ್ಯಾವಸಂದ್ರ	ನಿಡಗಲ್ಲು ಅರಳಸಂದ್ರ	ಬಿಳಿಗನ ಕುಪ್ಪೆ
ದಿಂಬದ ಹಳ್ಳಿ	ಪಡುವಣ ಗೆರೆ	ಬಿಳಿದಾಳೆ
ದುನ್ನಸಂದ್ರ	ಪುರದ ದೊಡ್ಡಿ	ಬೀರನ ಗುಪ್ಪೆ
ದೂಂತೂರು	ಪುರುಷಗೊಂಡನ ಹಳ್ಳಿ	ಬೂಹಳ್ಳಿ
ದೇವರ ಕಲ್ಲಹಳ್ಳಿ	ಪಿಚ್ಚನ ಕೆರೆ	ಬೆಟ್ಟಹಳ್ಳಿ ಕಾವಲು
ದೇವರ ಹಳ್ಳಿ	ಪಿಳ್ಳೇಗೌಡನ ದೊಡ್ಡಿ	ಬೆಟ್ಟೇಗೌಡನ ದೊಡ್ಡಿ
ದೇಶವಳ್ಳಿ	ಬಚ್ಚಹಳ್ಳಿ	ಬೆಂಡಗೋಡ್ಲು
ದೊಡ್ಡ ಕಬ್ಬಳ್ಳಿ	ಬಂಟನಾಳು	(ಬೆಣ್ಣೆಗೋಡ್ಲು)
ದೊಡ್ಡ ಕಲ್ಬಾಳು	ಬನವಾಸಿ	ಬೇಕುಪ್ಪೆ
ದೊಡ್ಡ ಕುರುಬರ ಹಳ್ಳಿ	ಬನ್ನಳ್ಳಿ	ಬೇಲಿ ಕೊತ್ತನೂರು
ದೊಡ್ಡ ಗುಳಿ	ಬನ್ನಿಕುಪ್ಪೆ	ಬೇವಿನ ಮರದ ದೊಡ್ಡಿ
ದೊಡ್ಡ ಬಾದಗೆರೆ	ಬನ್ನಿಮುಕ್ಕೊಡಲು	ಬೈರೇಗೌಡನ ದೊಡ್ಡಿ
ದೊಡ್ಡ ಬಿಜ್ಜಲಟ್ಟಿ	ಬರಡನ ಹಳ್ಳಿ	ಬೊಮ್ಮನ ಹಳ್ಳಿ
ದೊಡ್ಡ ಬೆಟ್ಟಹಳ್ಳಿ	ಬಸವನ ಬನ್ನಿಕುಪ್ಪೆ	ಬೊಮ್ಮಸಂದ್ರ
ದೊಡ್ಡ ಮರಳವಾಡಿ	ಬಸವನ ಹಳ್ಳಿ	ಭೀಮಗೊಂಡ ಹಳ್ಳಿ
ದೊಡ್ಡ ಮುದುವಾಡಿ	ಬಸವಾಪಟ್ಟಣ ವೀರಸಂದ್ರ	ಭೀಮಸಂದ್ರ (ಮ.ಹೋ)
ದೊಡ್ಡ ಸಾದೇನ ಹಳ್ಳಿ	ಬಳ್ಳಗೆರೆ	ಭೀಮಸಂದ್ರ (ಸಾ. ಹೋ)
ದೊಳ್ಳಹಳ್ಳಿ	ಬಳೆ ಜನ್ನವಲಸೆ	ಮಕ್ಕಲಂದೆ

ನಲ್ಲಹಳ್ಳಿ
ಮಣಿಯಂಬಾಳು
ಮರಸರ ಹಳ್ಳಿ
(ಮೊರಸರ ಹಳ್ಳಿ)
ಮರಳಗೆರೆ
ಮರಳೆ
ಮರಳೇಬೇಕುಪ್ಪೆ
ಮರೀಗೌಡನ ದೊಡ್ಡಿ
ಮಲ್ಲಪ್ಪನ ಹೊಸಹಳ್ಳಿ
ಮಲ್ಲಾಪುರ (ಕೋ.ಹೋ)
ಮಲ್ಲಾಪುರ (ಸಾ.ಹೋ.)
ಮಲ್ಲಿಗೆಮೊಟ್ಲು
ಮಹಿಮನ ಹಳ್ಳಿ
ಮಾದನ ಹಳ್ಳಿ
ಮಾದಪುರದ ದೊಡ್ಡಿ
ಮಾದರ ಹಳ್ಳಿ
ಮಾರದೇವನ ಹಳ್ಳಿ
ಮಾರಸಂದ್ರ (ಮ.ಹೋ)
ಮಾರಸಂದ್ರ (ಹಾ.ಹೋ)
ಮಾರ್ಗದಯ್ಯನ ಗುಂದಿ
ಮಾವತ್ತೂರು
ಮಾಹಳ್ಳಿ
ಮುಗುರು (ಮುಗ್ಗೂರು)
ಮುಗುರು ಅರಣ್ಯ
(ಮುಗ್ಗೂರು ಅರಣ್ಯ)
ಮುದೇನಹಳ್ಳಿ

ಬಾಚಿಹಳ್ಳಿ
ಮುರುಸಾನಿ
ಮುಳ್ಳಹಳ್ಳಿ
ಮೂಡಲಸ್ವಾಮಿ ಕುಪ್ಪೆ
ಮೇದಮಾರನ ಹಳ್ಳಿ
ಯಕ್ಕುಲಿ
ಯಡಮರನ ಹಳ್ಳಿ
ಯಡವನ ಹಳ್ಳಿ
ಯದುಗೌಡನ ಹಳ್ಳಿ
ಯರಮಗೆರೆ
ಯರೇಹಳ್ಳಿ
ಯಲಚವಾಡಿ
ಯೆರಹಳ್ಳಿ
ರಾಗೀಹಳ್ಳಿ (ಅರಣ್ಯ)
ರಾಮನ ಹಳ್ಳಿ
ರಾಮಪುರ
ರಾಮಪುರ
ಕರುವಿನ ಹಟ್ಟಿಕಾವಲು
ರಾಮಪುರ
ಗುತ್ತಲ ಕೆರೆಕಾವಲು
ರಾಮಪುರದ ದೊಡ್ಡಿ
ರಾಮಸಾಗರ
ರಾಯಸಂದ್ರ
ಲಿಂಗನ ಪುರ
ವಡ್ಡರ ಕುಪ್ಪೆ
ವಡ್ಡರ ದೊಡ್ಡಿ

ಮಂಜುನಾಥ
ವಾಡೆ ದೊಡ್ಡಿ
ವಿರೂಪಸಂದ್ರ (ಕೆ.ಹೋ)
ವಿರೂಪಸಂದ್ರ (ಸಾ.ಹೋ)
ವೀರಸಂದ್ರ
ವೆಂಕಟರಾಯರ ದೊಡ್ಡಿ
ಶಿವನ ಹಳ್ಳಿ
ಶಿವನೇ ಗೌಡನ ದೊಡ್ಡಿ
ಶ್ರೀನಿವಾಸನ ಹಳ್ಳಿ
ಸಂಗಮ
ಸಂಬಾಪುರ
ಸಂಬೇಗೌಡನ ದೊಡ್ಡಿ
ಸಾತನೂರು
ಸಾಲಬನ್ನಿ
ಸಾಸಲಾಪುರ
ಸಿಂಗಸಂದ್ರ
ಸಿದ್ಧಾಪುರ
ಸೀಗೇಕೋಟೆ
ಸೀತಲವಾಡಿ
ಸುಂದಗಟ್ಟ
ಸೂರನ ಹಳ್ಳಿ
ಸೆಟ್ಟಿಕೆರೆ ದೊಡ್ಡಿ
ಸೊಂಬೇನ ಹಳ್ಳಿ
ಸೋಮನಾಥಪುರ
ಸೋಮೇದ್ಯಾವನ ಹಳ್ಳಿ

ಮುನಿನಗರ
ಮುರಕಣಿ
ಮುರಡಿ ಹೊಸಹಳ್ಳಿ
ಹನಕಡಬೂರು
ಹನುಮನ ಹಳ್ಳಿ
ಹನುಮಂತ ನಗರ
ಹರಿಹರ
ಹಲನತ್ತ
ಹಲಸಿನ ಮರದ ದೊಡ್ಡಿ
ಹಲಸಿನ ಮರದ ಹಳ್ಳಿ
ಹಲಸೂರು
ಹಲಸೂರು ಜೋಡಿ
ಹಳ್ಳಿ ಹೊನಗಲ ದೊಡ್ಡಿ
ಹಾರೋಬೆಲೆ
ಹಾರೋವತಿ ಪಾಳ್ಯ
ಹಾರೋಶಿವನ ಹಳ್ಳಿ
ಹಾರೋಹಳ್ಳಿ
ಹುಣಸನ ಕೋಡಿಹಳ್ಳಿ
ಹುಣಸನ ಹಳ್ಳಿ
ಹುಣಸಲ ನತ್ತ
ಹುಯಲಪ್ಪನ ಹಳ್ಳಿ
ಹುಲಿಬೆಲೆ

ವಡೇರ ಹಳ್ಳಿ
ವರದೇನ ಹಳ್ಳಿ

ಹುಲುಗೊಂಡನ ಹಳ್ಳಿ
ಹುಳ್ಯ
ಹೂಕುಂದ
ಹೆಗ್ಗನೂರು
ಹೆಬ್ಬಿದಿರ ಮೊಟ್ಲು
ಹೇರಂದ್ಯಾಪನ ಹಳ್ಳಿ
ಹೇಳಿಗೆ ಹಳ್ಳಿ
ಹೊದಿಕೆ ಕಟ್ಟೆ
ಹೊನ್ನಲಗನ ದೊಡ್ಡಿ
ಹೊನ್ನ ಹಳ್ಳಿ
ಹೊನ್ನಿಗನ ಹಳ್ಳಿ
ಹೊರಳಗಲ್ಲು
ಹೊಸಕೋಟೆ
ಹೊಸ ಗಬ್ಬಾಡಿ
ಹೊಸದುರ್ಗ
ಹೊಸದೊಡ್ಡಿ
ಹೊಸಹಳ್ಳಿ (ಮ.ಹೋ)
ಹೊಸಹಳ್ಳಿ (ಸಾ.ಹೋ)*

ಸೋರೆಕಾಯಿ ದೊಡ್ಡಿ
ಸೋಲಿಗೆರೆ
ಹಂಚಿಗುಳಿ

ಅನುಬಂಧ 4

ಶಾಸನಗಳು ಲಭ್ಯವಾಗಿರುವ ಸ್ಥಳಗಳು

1. **ಉಯ್ಯಂಬಳ್ಳಿ ಹೋಬಳಿ** : ಚಿಕ್ಕಮುದಡೆ, ಕೋಟೆಕೊಪ್ಪ, ದೊಡ್ಡಕೊಪ್ಪ, ಚಿಕ್ಕಕೊಪ್ಪ, ನಲ್ಲಹಳ್ಳಿ, ಚನ್ನಸಂದ್ರದೊಡ್ಡಿ, ಆಲಹಳ್ಳಿ, ಮರಳೇ ಬೇಕುಪ್ಪೆ (ಕೃಷ್ಣಪ್ಪನ ದೊಡ್ಡಿ), ಸಾವಕನ ಕಟ್ಟೆ, ಎಡಮಾರನಹಳ್ಳಿ, ಮುಳ್ಳಹಳ್ಳಿ, ಮಡಿವಾಳ (ಗಾಣದೊಡ್ಡಿ), ಮರಸಗೊಂಡ ಹಳ್ಳಿ, ನಾಯಕನ ಹಳ್ಳಿ, ಇನಾಂ ಚಿಕ್ಕೊಪ್ಪ ಗ್ರಾಮ.

2. **ಕಾನಾಕಾನ ಹಳ್ಳಿ ಹೋಬಳಿ** : ಕಾನಕಾನ ಹಳ್ಳಿ (ಕನಕಪುರ), ಮಳಗಾಳು, ವಿರುಪಸಂದ್ರ, ಬೂದಿಕುಪ್ಪೆ, ಅರಳಾಳು, ಚೀರಣ ಕುಪ್ಪೆ (ದ್ಯಾಪೇಗೌಡನ ದೊಡ್ಡಿ), ಶ್ರೀನಿವಾಸನ ಹಳ್ಳಿ, ಬೇಕುಪ್ಪೆ, ತುಂಗಣಿ, ರಾನುಪುರ, ಕಲ್ಲಹಳ್ಳಿ, ಅಲ್ಲಾಳುಸಂದ್ರ, ಬನ್ನಿಕುಪ್ಪೆ (ದಾಖಲೆ ಹೆಬ್ಬಿದುರು ಮೊಟ್ಲು), ಶಿವನ ಹಳ್ಳಿ.

3. **ಕೋಡಿಹಳ್ಳಿ ಹೋಬಳಿ** : ಕೋಡಿಹಳ್ಳಿ, ದೊಡ್ಡ ಕಬ್ಬಹಳ್ಳಿ (ಕೋಟೆ ಕಬ್ಬಹಳ್ಳಿ), ಬನ್ನಿಮುಕ್ಕೂಡ್ಲು (ಮಂದನ ಕೋಟೆ), ಗಟ್ಟಿಗುಂದ, ಬಾಳೇಪುರ, ಹೊಸದುರ್ಗ, ಕೊಳಗೊಂಡ ಹಳ್ಳಿ (ಅಳ್ಳ ಕಡಕಲು).

4. **ಮರಳವಾಡಿ ಹೋಬಳಿ** : ಚಿಕ್ಕಮರಳವಾಡಿ, ಅಗ್ರಹಾರ, ದೇವರಹಳ್ಳಿ, ಎಲಚವಾಡಿ, ಚಿಕ್ಕ ಬಳ್ಳಿಗೆರೆ, ತೇರುಬೀದಿ.

5. **ಮುದವಾಡಿ ಹೋಬಳಿ** : ಮುದವಾಡಿ, ದೊಡ್ಡಮುದವಾಡಿ, ಚಿಕ್ಕಮುದವಾಡಿ, ಮುರಕಣಿ, ಉದಾರ ಹಳ್ಳಿ, ಬಂಡಿಗನ ಹಳ್ಳಿ.

6. **ಸಾತನೂರು ಹೋಬಳಿ** : ಸಾತನೂರು, ಕಮ್ಮಾಳ, ದೂಂತೂರು (ಕುಂದೂರುದೊಡ್ಡಿ), ಕಂಚನ ಹಳ್ಳಿ, ಹಲಸೂರು, ಹೊನ್ನಹಳ್ಳಿ (ಶ್ಯಾಮಯ್ಯನ ದೊಡ್ಡಿ), ಚೂಡಹಳ್ಳಿ, ಆಲೂರು, ಕುರುಬರ ಹಳ್ಳಿ, ಕಬ್ಬಾಳು, ಅಚ್ಚಲು, ಚಕ್ಕಾಲ ಹಳ್ಳಿ, ಹೊಸಹಳ್ಳಿ, ಗೇರಹಳ್ಳಿ, ಅಜ್ಜೇಗೌಡನ ಮನೆ ಗ್ರಾಮದ ಮಾದಾಪುರದೊಡ್ಡಿ.

7. **ಸೋಮನ ಹಳ್ಳಿ ಹೋಬಳಿ** : ನಟ್ಟಗೆರೆ, ಹಳೆಯ ಅಗ್ರಹಾರ ದೊಡ್ಡಿವೂರು.

8. ಹಲ್ಲೂರು, ಹರಿಹರ, ನಿಟ್ಟೂರು, ದಳವಾಯಿ ಕೋಡಿಹಳ್ಳಿ, ಹಗದೂರು, ಎಲಚವಾಡಿ, ಕುಂತೂರು, ಎಲಚಗೆರೆ.

9. **ಹಾರೋಹಳ್ಳಿ ಹೋಬಳಿ** : ಹಾರೋಹಳ್ಳಿ, ದ್ಯಾವಸಂದ್ರ, ಗಾಣಾಳುಕೊಪ್ಪ, ಹುಲ್ಲುಗೊಂಡಹಳ್ಳಿ.

ಅನುಬಂಧ 5

ಶಾಸನಶಿಲ್ಪಗಳು, ಶಿಲ್ಪಿಗಳು

ಹರಿಹರ ಗ್ರಾಮದ ವೀರಗಲ್ಲು ೬೧/೨ ಅಡಿ ಎತ್ತರ, ೬೧/೨ ಅಡಿ ಅಗಲದ ಗ್ರಾನೈಟ್ ಶಿಲೆಯ ಬೃಹತ್ ಗಾತ್ರದ ವೀರಗಲ್ಲು. ಇದು ೪ ಹಂತಗಳನ್ನು ಉಳ್ಳದ್ದು. ಯುದ್ದಕ್ಕೆ ಹೊರಡುವುದು, ಯುದ್ಧ ಮಾಡುತ್ತಿದ್ದುದು, ಮೂವರು ಯೋಧರು ಮಡಿದಿರುವುದು ಮತ್ತು ಮಡಿದ ಯೋಧರ ಶಿರೋಭಾಗಗಳು ಇವುಗಳನ್ನು ಆ ಹಂತಗಳಲ್ಲಿ ಕಂಡರಿಸಿದೆ. ಯೋಧರ ಕೈಗಳಲ್ಲಿ ಈಟಿ ಕತ್ತಿ ಗುರಾಣಿಗಳು ಇದ್ದು, ಬಿಲ್ಲುಬಾಣಗಳ ಪ್ರಯೋಗದೃಶ್ಯ ಸಹ ಉಂಟು. ಮಡಿದ ಯೋಧರನ್ನು ಸ್ವರ್ಗಕ್ಕೆ ಒಯ್ಯುವ, ಕೈಲಾಸವಾಸಿಗಳಾದ ಚಿತ್ರಣಗಳೂ ಉಂಟು. ಇದರಲ್ಲಿ ಸಮೀಪದಲ್ಲಿಯೇ ಇನ್ನೂ ಕೆಲವು ವೀರಗಲ್ಲುಗಳುಂಟು.

ಚೌಡೇಗೌಡನ ಕಟ್ಟೆ ಎಂಬ ಸಮೀಪದ ಸ್ಥಳದಲ್ಲಿ ಹಸುವನ್ನು ಹುಲಿ ಕೊಲ್ಲಲು ಬಂದಾಗ ವೀರನೊಬ್ಬ ಹಸುವನ್ನು ರಕ್ಷಿಸಿ ಹುಲಿಯ ಜೊತೆಗೆ ಹೋರಾಡುತ್ತಿರುವ, ಅವನನ್ನು ಅಪ್ಸರೆಯರು ಸ್ವರ್ಗಕ್ಕೆ ಒಯ್ಯುತ್ತಿರುವ ಕಂಡರಣೆಯಿದೆ. ತುರುವನ್ನು ರಕ್ಷಿಸುತ್ತಲೇ ಹುಲಿಯೊಂದಿಗೆ ಕಾದಾಡುತ್ತಿರುವ ವೀರಗಲ್ಲುಗಳ ಕಂಡರಣೆ ವಿರಳ.

ಅಲ್ಲದೆ ಸಮೀಪದ ಮಾಸ್ತಿಕಲ್ಲುಗಳು, ಆ ಸಂಬಂಧವಾದ ಐತಿಹ್ಯಗಳಿಗೂ ಕೊರತೆಯಿಲ್ಲ. ಈ ಗ್ರಾಮದ 'ಮಾಸ್ತಿ ತೋಪಿನ ಬೋರೆ' ಎಂಬಲ್ಲಿ ಮಾಸ್ತಿ ನಡೆಯುತ್ತಿದ್ದ ಸನ್ನಿವೇಶ ಇಲ್ಲಿಯ ಬೂದಿರಾಶಿಯಿಂದಲೂ ಸುವಿದಿತ. ಯುದ್ಧ ಹತರಾದ ಯೋಧರ ದಹನಕಾರ್ಯವೂ ಇಲ್ಲಿ ನಡೆಯುತ್ತಿದ್ದಿರಬೇಕು.

ಉದಾರಹಳ್ಳಿಯಲ್ಲಿ ದೊರೆತ ವೀರಗಲ್ಲುಗಳಲ್ಲಿ (ಸುಮಾರು ೧೧-೧೨ನೆಯ ಶತಮಾನ) ಒಂದು ಹುಲಿಬೇಟೆಯನ್ನು, ಇನ್ನೊಂದು ಅಶ್ವಾರೋಹಿ ವೀರನ ಹೋರಾಟವನ್ನು ಒಳಕೊಂಡಿವೆ. ಕಾದುವ ವೀರರ ವೇಷಭೂಷಣಗಳು, ವಿಶೇಷವಾಗಿ ಎತ್ತಿಕಟ್ಟಿರುವ ತುರುಬು ಮತ್ತು ಕರ್ಣಕುಂಡಲಗಳು ಗಮನಾರ್ಹವಾಗಿವೆ.

ಶಾಸನದ ಬರಹವಿಲ್ಲದ ತಾಂಡ್ಯದ ವೀರಗಲ್ಲು ಐವರು ವೀರರ ಶಿಲ್ಪದಿಂದ ಕೂಡಿದೆ. ೪ ಹಂತಗಳಲ್ಲಿದೆ. ಯಾವುದೇ ಯುದ್ಧದಲ್ಲಿ ಅವರು ಮಡಿದುದನ್ನು ಸೂಚಿಸುತ್ತದೆ.

ಕಬ್ಬಾಳುವಿನ ವೀರಗಲ್ಲು ಒಂದರಲ್ಲಿ ಕೆಳಹಂತದಲ್ಲಿ ವೀರನು ಹೋರಾಡಿ ಮಡಿದ, ಮೇಲಿನ ಹಂತದಲ್ಲಿ ಆ ವೀರನೂ ಅವನ ೬ ಮಂದಿ ಮಡದಿಯರೂ ಕೈಮುಗಿದು ನಿಂತಿರುವ ದೃಶ್ಯಗಳಿವೆ.

ಬಹುಶಃ ವೀರನ ಮರಣದ ಬಳಿಕ ಆ ಹೆಂಗುಸರ ಸಹಗಮನವನ್ನು ಇದು ಹೇಳುತ್ತದೆ. ಶಿಲ್ಪದ ಶೈಲಿ ಸುಮಾರು ೧೪ನೆಯ ಶತಮಾನಕ್ಕೆ ಸೇರಿದ್ದು. ಕಬ್ಬಾಳು ಗ್ರಾಮದ ದೇವಾಲಯದ ಹತ್ತಿರವೂ ಒಂದು ಒಕ್ಕೈ ಮಾಸ್ತಿಶಿಲ್ಪವಿದೆ. ಮೇಲುಹಂತದಲ್ಲಿ ಭಕ್ತಿಭಾವದಲ್ಲಿ ಕೈಮುಗಿದುಕೊಂಡು ಕುಳಿತಿರುವ ಸತಿಪತಿಗಳ ಕಂಡರಣೆ ಇದೆ.

ಎಡಮಾರನ ಹಳ್ಳಿ ಬೂದಿಗುಪ್ಪೆಗಳಲ್ಲಿ ಹುಲಿಬೇಟೆಯ ವೀರಗಲ್ಲುಗಳಿವೆ. ಮೊದಲನೆಯದರಲ್ಲಿ ೪ ಹಂತದ ಶಿಲ್ಪವಿದ್ದು, ಕೆಳಹಂತದಲ್ಲಿ ವೀರನೊಬ್ಬ ಹುಲಿಯೊಂದಿಗೆ ಹೋರಾಡುತ್ತಿರುವ ಆಕರ್ಷಕವಾದ ಕಂಡರಣೆಯಿದೆ. ಎರಡನೆಯದರಲ್ಲಿ ವೀರ ಮತ್ತು ಹುಲಿ ಹೋರಾಡುತ್ತಿರುವ ಒಂದು ಹಂತದ ಶಿಲ್ಪವಿದೆ. ಶಾಸನದ ಬರಹದಲ್ಲಿ ವಿವರಣೆಯೂ ಇದೆ. ಶಿಲ್ಪಿ ಪಾಳೆಯದ ನಾಗೋಜಿ ಎಂದಿದೆ.

ಕನಕಪುರ ತಾಲ್ಲೂಕು ಅರಳಾಳು, ಸಾತನೂರು ವೀರಭೂಮಿಗಳಾಗಿದ್ದುದು ಅಲ್ಲಿ ದೊರೆಯುವ ಬಹು ಸಂಖ್ಯೆಯ ವೀರಗಲ್ಲುಗಳಿಂದ ತಿಳಿಯುತ್ತದೆ. ಸಾತನೂರು ಹೋಬಳಿಯ ಅವಳಿ ಗ್ರಾಮಗಳಾದ ಅಲಸೂರು ಕಾಡಹಳ್ಳಿಗಳಲ್ಲಿ ಹತ್ತಾರು ವೀರಗಲ್ಲುಗಳು (ಸು. ೧೨ನೆಯ ಶ. –೧೫ನೆಯ ಶ) ದೊರೆತಿವೆ. ಸಾತನೂರಿಗೆ ೪ ಕಿ.ಮೀ ದೂರದಲ್ಲಿರುವ ಅಲಸೂರು ಒಂದರಲ್ಲೇ ೮ ವೀರಗಲ್ಲುಗಳು ಗೋಚರಿಸಿವೆ; ಹಾಗೆಯೇ ಸೂರ್ಯ ದುರ್ಗೆ ಹೀಗೆ ಕೆಲವು ದೇವತಾಪ್ರತಿಮೆಗಳೂ ಕಂಡುಬಂದಿವೆ. ೬ ವೀರಗಲ್ಲುಗಳನ್ನು ಇಲ್ಲಿಯ ಮಹಾದೇವಮ್ಮನ ಗುಡಿಯ ಎಡಬಲಗಳಲ್ಲಿ ನಿಲ್ಲಿಸಿವೆ. ಹಿರಿದ ಕತ್ತಿಯನ್ನೆತ್ತಿ ಹಿಡಿದ ವೀರರ, ವಿವಿಧ ಭಂಗಿಗಳಲ್ಲಿರುವ ಸತಿಯರ ಸಣ್ಣ ಪ್ರಮಾಣದ ವೀರಗಲ್ಲುಗಳು ಇವು.

ಸ್ವಲ್ಪ ದೊಡ್ಡ ಪ್ರಮಾಣದ ಒಂದು ವೀರಗಲ್ಲು ಆಭರಣಭೂಷಿತರಾದ ಪತಿ ಪತ್ನಿಯರ ಕಂಡರಣೆಯಿಂದ ಕೂಡಿರುವುದು, ಸತಿ ನೃತ್ಯಭಂಗಿಯಲ್ಲಿರುವುದು ಒಂದು ವಿಶೇಷ. ಇದೇ ಗುಡಿಯ ಮುಂದೆ ಇರುವ ಖಾಲಿ ಹೊಲದಲ್ಲಿ ಎತ್ತರ ೫ ಅಡಿ, ಅಗಲ ೪ ಅಡಿ ಇರುವ ಒಂದು ವೀರಗಲ್ಲು ಸಹ ಹೀಗೆಯೇ ಗಮನ ಸೆಳೆಯುವಂತಿದೆ, ಗೋವುಗಳನ್ನು ರಕ್ಷಿಸಲು ಬಂದ ವೀರರನ್ನು ಇರಿಯುತ್ತಿರುವ ಗತ್ತುಗಳು, ಮಡಿಯುತ್ತಿರುವ ವೀರನ ಧೀರಭಂಗಿ ಇವು ವೀರಗಲ್ಲು ಸರಣಿಯ ಚಿತ್ರಗಳಲ್ಲಿವಿರಳ ಎನ್ನುವಂಥದು. ೨-೩ನೆಯ ಹಂತಗಳಲ್ಲಿ ವೀರರ ಸ್ವರ್ಗಗಮನ, ಕೈಲಾಸಲೋಕ ಪ್ರಾಪ್ತಿಗಳ ಕಂಡರಣೆಯಿದೆ.

ಹನುಮಂತರಾಯನ ಕೆರೆಯ ಬಲಭಾಗದಲ್ಲಿರುವ ವೀರಗಲ್ಲು ಸಹ ಮೂರು ಹಂತಗಳಲ್ಲಿವೆ. ಮೂರು ಜನ ಖಡ್ಗಧಾರಿ ವೀರರ ಸಂಬಂಧವಾದ ಈ ವೀರಗಲ್ಲಿನಲ್ಲಿ ಮೂರನೆಯ ಹಂತದಲ್ಲಿ ಸಾಮಾನ್ಯವಾಗಿ ಕಾಣುವ ಪದ್ಮಾಸನಸ್ಥಿತ ವೀರನಿಗೆ ಬದಲಾಗಿ ವೀರಮಂಡಿಯಲ್ಲಿರುವಂತೆ ವೀರನ ಕಂಡರಣೆಯಿದೆ. ಇದು ಒಂದು ವಿಶೇಷ. ಹಾಗೆಯೇ ದುರ್ಗೆಯ ವಿಗ್ರಹ ಖಡ್ಗ–ಡಮರು ಪಾನಪಾತ್ರೆ–

ತ್ರಿಶೂಲ ಧಾರಿಯಾಗಿರುವುದರ ಜೊತೆಗೆ ಬುಡದಲ್ಲಿ ಸರ್ಪದ ಕಂಡರಣೆಯಿರುವುದೂ ಒಂದು ವಿಶೇಷವೇ.

ಇನ್ನು ಕಾಡುಹಳ್ಳಿಯಲ್ಲಿಯ ವೀರಗಲ್ಲಿನ ವಿಚಾರ. ದಂಡಿನ ಮಾರಮ್ಮನ ಗುಡಿಯ ಬಳ್ಳಿಯಲ್ಲಿ ೫ ೧/೨ ಅಡಿ ಎತ್ತರದ, ೩ ಹಂತಗಳು ಶಿಲೆಯಿದು. ಐವರು ವೀರರಿಗೆ ಸಂಬಂಧಿಸಿದ್ದು, ಅವರಿಗೆ ಎದುರಿನ ಅಶ್ವದೊಂದಿಗೆ ಹೋರಾಟದ ಚಿತ್ರ. ಹುಲಿಬೇಟೆಗೆ ಸಿಕ್ಕಿದ ಗೋವಿನ ದಾರುಣಸ್ಥಿತಿ ಚಿತ್ರವಾದ ಇನ್ನೊಂದು ವೀರಗಲ್ಲು ಕೂಡ ಚಿತ್ತವೇಧಕವಾದ್ದು ಮಡಿದ ಗೋವಿಗೆ ನಿಲ್ಲಿಸಿದ್ದ ಸ್ಮಾರಕಶಿಲೆ.

ಶಾಸನದ ಲಿಪಿಕಾರರು, ವೀರಗಲ್ಲಿನ ಶಿಲ್ಪಿಗಳು: ಅಗ್ರಹಾರದೊಡ್ಡಿ– ದಾಮೋದರ, ಹಾರೋಹಳ್ಳಿ – ತಿಮ್ಮರಾಯ, ದ್ಯಾವಸಂದ್ರ–ಆದೆಪ್ಪ, ಹುಲ್ಲುಗೊಂಡನಹಳ್ಳಿ–ಬಜಾ ಬಸವಯ್ಯ, ದೊಡ್ಡಕೊಪ್ಪ – ಮಾರೆವೋಜನ ಮಗ ಅತಿವೋಜ, ಮುಳ್ಳಹಳ್ಳಿ – ಶಾನುಭೋಗ ಆಳಿಗಡ, ಅರಳಾಳು, ಶಾನುಭೋಗ ಅಪ್ಪಣ್ಣ, ಕೋಟೆಕೊಪ್ಪ–ಆಚಾರಿ ದೇವೋಜ, ಪುರಸಗೊಂಡನಹಳ್ಳಿ ಆಚಾರಿ ಕಂದವೋಜ, ಬೂದಿಗುಪ್ಪೆ – ಪಾಳೆಯದ ನಾಗೋಜಿ, ಹೆಬ್ಬಿದುರುಮೊಟ್ಲು ಶೆಲ್ಲ ಪಿಳ್ಳೈ.

ಅನುಬಂಧ 6

ವೀರರ ಗುಡಿಗಳು

ಕರ್ನಾಟಕದಲ್ಲಿ ಕೆಲವು ಪ್ರದೇಶಗಳಲ್ಲಿ ವೀರಗಲ್ಲುಗಳನ್ನು ಬಯಲಿನಲ್ಲಿ ಹಾಗೆಯೇ ನಿಲ್ಲಸದೆ, ಅವುಗಳಿಗೆ ಸಾಮಾನ್ಯರೀತಿಯ ಗುಡಿಗಳನ್ನು ಕಟ್ಟಿಸುವ ಒಂದು ಸಂಪ್ರದಾಯ ಸುಮಾರು ೧೦ನೆಯ ಶತಮಾನದಿಂದ ೧೫ನೆಯ ಶತಮಾನದ ವರೆಗೆ ಇದ್ದಂತೆ ತಿಳಿದುಬರುತ್ತದೆ. ಮಡಿದ ವೀರನ ಆತ್ಮ ರಕ್ಷಣೆಗೆ ಆಶ್ರಯವನ್ನು ಕಲ್ಪಿಸಲು ಹೀಗೆ ಸ್ಥಳವನ್ನು ಮಾಡಿ, ಅಲ್ಲಿ ಆರಾಧನೆಗೆ ಸಹ ವ್ಯವಸ್ಥೆ ಮಾಡಿರುವುದನ್ನು ನಾವು ಕಾಣುತ್ತೇವೆ. ಅಲ್ಲದೆ ಅಲ್ಲಿ ಪೂಜೆಗಾಗಿ ನೇಮಕಗೊಳ್ಳುವ ಪೂಜಾರಿಗಳಿಗೆ ದತ್ತಿಗಳನ್ನು ಕೂಡ ಬಿಡುತ್ತಿದ್ದರು. ಇಂಥ ಸ್ಥಳಗಳೇ ವೀರರ ಗುಡಿ ಎನ್ನಿಸುತ್ತಿದ್ದುವು. ಇಂತಹ ವೀರರ ಗುಡಿಗಳು ಕಾನಕಾನಹಳ್ಳಿ ತಾಲ್ಲೂಕಿನಲ್ಲಿಯೂ ಸಾಕಷ್ಟು ಸಂಖ್ಯೆಯಲ್ಲಿ ಕಂಡು ಬಂದಿರುವುದನ್ನು ಸಂಶೋಧಕರು ಗುರುತಿಸಿದ್ದಾರೆ.

ಹೋಬಳಿ	ಗ್ರಾಮ	ಶಾಸನಸಂಖ್ಯೆ ತೇದಿ
ಉಯ್ಯಂಬಳಿ	ಪುರಸಗೊಂಡನ ಹಳ್ಳಿ	೪೬/೧೨೬೩
	ಎಡಮಾರನ ಹಳ್ಳಿ	೪೦/೧೩೫೧
	ಅಲಹಳ್ಳಿ	೩೫/೧೧೭೮
	ಚಿಕ್ಕ ಮುದಡೆ ಗ್ರಾಮ	೨೭/೧೫೬೩
	ಮುಳ್ಳಹಳ್ಳಿ	೪೪/೧೧೭೧
ಕಾನಕಾನಹಳ್ಳಿ	ಕಲ್ಲಹಳ್ಳಿ	೧೧೯
ಸಾತನೂರು	ಹೊಸಹಳ್ಳಿ	೭೧/೧೨೫೯
		೬೪/೧೨೯೧
		೧೨೮
	ಕಬ್ಬಾಳು	
	ಸಾತನೂರು	
ಹಲ್ಲೂರು	ಹರಿಹರ ಗ್ರಾಮ	೭೪/೧೪೧೨

ಅನುಬಂಧ 7

ಗ್ರಾಮಗಳ ಹಿಂದಿನ ಹೆಸರುಗಳು

	ಶಾಸನಸಂಖ್ಯೆ	ಹಿಂದಿನ ಹೆಸರು	ಈಗಿನ ಹೆಸರು
೧.	೯೭,೧೦೦	ಅರುಳ ಹಾಳು	ಅರಳಾಳು
೨.	೧೦೮	ಅಲ್ಲಾಳ ಸಮುದ್ರ	ಅಲ್ಲಾಳಸಂದ್ರ
೩.	೬೪	ಕಬ್ಬಹಾಳು	ಕಬ್ಬಾಳು
೪.	೧೦೭	ಕಳ್ಳೇನ ಹಳ್ಳಿ	ಕಲ್ಲಹಳ್ಳಿ
೫.	೪೭,೬೮,೯೪	ಕಾಣಿಕಾರ(ನ)ಹಳ್ಳಿ/ ಕಾಣಿಕಾರನಹಳ್ಳಿ	ಕಾನಕಾನಹಳ್ಳಿ/ಕನಕಪುರ
೬.	೮೭	ಕುಂದತೂರ	ಕುಂತೂರು
೭.	೬	ಗಾಳಿಹಾಳು	ಗಾಣಾಳು ಕೊಪ್ಪ
೮.	೫೨	ದೂಣೆತೂರು	ದೂಂತೂರು
೯.	೧೧೮	ಬಂಡಿಗಾನಹಳ್ಳಿ	ಬಂಡಿಗನಹಳ್ಳಿ
೧೦.	೧೦೨	ಬೇವುಕುಪ್ಪೆ	ಬೇಕುಪ್ಪೆ
೧೧.	೯೪,೯೫	ಮೊಳಗಾಳು	ಮಳಗಾಳು
೧೨.	೧೧೪, ೧೧೮	ಮುದುವಾಡಿ	ಮುದವಾಡಿ
೧೩.	೧೧೨	ಮುರುಕುಣಿ	ಮುರಕಣಿ
೧೪.	೯೫	ವಿರೂಪಸಮುದ್ರ	ವಿರುಪಸಂದ್ರ
೧೫.	೧೨೫	ಸಾಂತನೂರು/ಶಾಂತನೂರು	ಸಾತನೂರು
೧೬.	೩	ಹಾರುವಹಳ್ಳಿ	ಹಾರೋಹಳ್ಳಿ
೧೭.	೨೮	ಪೂಕುಂದ	ಹೂಕುಂದ

ಅನುಬಂಧ 8


ನಕ್ಷೆಗಳು




ನಕ್ಷೆ 4. ಸು. ಕ್ರಿ.ಶ. 750ರಲ್ಲಿ ಗಂಗವಾಡಿ. ಕೃಪೆ : ಬಿ.ಎಲ್. ರೈಸ್




ನಕ್ಷೆ 5. ಸು. ಕ್ರಿ.ಶ. 1050ರಲ್ಲಿ ಮೈಸೂರು ಪ್ರದೇಶ ಕೃಪೆ : ಬಿ.ಎಲ್. ರೈಸ್



ಕನಕಪುರ ತಾಲ್ಲೂಕಿನ ನಕ್ಷೆ


ಸಾಸಲು
ಹೊಸಹಳ್ಳಿ
ಮಾದಲಕೋಟೆ
ತಿಮ್ಮಸಂದ್ರ
ದೊಡ್ಡಬಳ್ಳಾಪುರ
ಅವತಿ
ಬಿಜ್ಜಾವರ
ದೇವನಹಳ್ಳಿ
ಗಾಡಿಗಾರಪಾಳ್ಯ
ಶಿವಗಂಗೆ
ಮೊಗೇನಹಳ್ಳಿ
ತಾವರೆಕೆರೆ
ಬೇಗೂರು
ಚಿಕ್ಕಜಾಲ
ಸುಗ್ಗೇನಹಳ್ಳಿ
ಹೊಸಕೋಟೆ
ನೆಲಮಂಗಲ
ತಿಪ್ಪಸಂದ್ರ
ಮೆಣಸಿಗನಹಳ್ಳಿ
ವೀರಾಪುರ
ಅಗ್ರಹಾರ
ಮಾಗಡಿ
ಬೆಂ ಗ ಳೂ ರು ಗ್ರಾ ಮಾಂ ತ ರ ಜಿ ಲ್ಲೆ
ಬೈಯಪ್ಪನಹಳ್ಳಿ
ಹೆಜ್ಜಾಲ
ಬಿಡದಿ
ಮಾರಳ್ಳಿ
ರಾಮನಗರ
ಬೇವೂರು
ಅರ್ಕಾವತಿ
ಹಾರೋಹಳ್ಳಿ
ಚನ್ನಪಟ್ಟಣ
ಮುದವಾಡಿ
ಮಾಲೂರು
ಕಬ್ಬಾಳ
ಕನಕಪುರ
ಕೋಡಿಹಳ್ಳಿ
ಸಾತನೂರು
ಶಿವನಳ್ಳಿ
ಹಳೇಹಳ್ಳಿ
ಕೋಟೆಕೊಪ್ಪ
ವೀರಸಂದ್ರ
ಸಂಗಮ
ಮೇಕೆದಾಟು
ಚಾ ಮ ರಾ ಜ ನ ಗ ರ ಜಿ ಲ್ಲೆ
0 10 20
ಕಿಲೋಮೀಟರುಗಳು
ಬೆಂಗಳೂರು
ಗ್ರಾಮಾಂತರ ಜಿಲ್ಲೆ

ಪುರಾತತ್ತ್ವ ಉತ್ಖನನ ವಿಧಾನ ಮತ್ತು ಕಾಲನಿರ್ಣಯ




1. ಸಾಂಸ್ಕೃತಿಕ ಪದರಗಳಿಂದ ಪ್ರತ್ಯೇಕಿಸಲ್ಪಟ್ಟ ಇಟ್ಟಿಗೆ ಕಟ್ಟಡ (ಅವೈಜ್ಞಾನಿಕ ವಿಧಾನ) 2. ನಿಶ್ಚಿತ ಸ್ತರಕ್ರಮದಲ್ಲಿ ಇಟ್ಟಿಗೆ ಕಟ್ಟಡ ನಿರ್ಮಾಣವನ್ನು ತೋರಿಸುವ ಅನುಕ್ರಮ ಪದರಗಳ ಚಿತ್ರ(ವೈಜ್ಞಾನಿಕ ವಿಧಾನ) 3. ಅನುಕ್ರಮಗಳ ಪದರಗಳ ಕಸದ ಗುಂಡಿಯ ಗುಣ-ಲಕ್ಷಣಗಳನ್ನು ಮತ್ತು ಗುಂಡಿಯ ಪದರಿನ ಹಂತವನ್ನು ತೋರಿಸುವ ಚಿತ್ರ 4. ನೆಲದಡಿಯ ಬೃಹತ್ ಶಿಲಾ ಕೋಣೆ ಗೋರಿಯ ಉತ್ಖನನ ವಿಧಾನ. ಬ್ರಹ್ಮಗಿರಿ 5. ಒಂದು ಸಂಸ್ಕೃತಿ ನೆರೆಯ ಉಬ್ಬು-ತಗ್ಗುಗಳನ್ನು ಚಿತ್ರಿಸುವ ವಿಧಾನ 6. ಬೃಹತ್ ಶಿಲಾ ವೃತ್ತದೊಳಗಿನ ಶವ ಸಂಸ್ಕಾರ ಗುಂಡಿಯ ಉತ್ಖನನ ಕ್ರಮ 7. ಇಂಗಾಲ-14 ಪ್ರಯೋಗಾಲಯ 8. ನಿಲುಸುಗಳ್ಳಿನ ಉತ್ಖನನ ವಿಧಾನ. ಬೂರ್ಜಹೋಮ್ 9. ಲಂಬ ಉತ್ಖನನ ಕ್ರಮ 10. ನವಶಿಲಾ-ಬೃಹತ್ ಶಿಲಾ-ಆದಿ ಇತಿಹಾಸ ಕಾಲದ ಅನುಕ್ರಮ ಪದರಗಳನ್ನು ತೋರಿಸುವ ಉತ್ಖನನ ಗುಂಡಿ. ಬ್ರಹ್ಮಗಿರಿ. 11. ಉತ್ಖನನದ ಗುಂಡಿಯಲ್ಲಿ ಕಾಣುವ ವಿವಿಧ ಪದರಗಳನ್ನು ನಿಗದಿತ ಚಿಹ್ನೆಗಳಿಂದ ತೋರಿಸುವ ವಿಧಾನ 12. ಚತುರ್ಭಾಗ ಉತ್ಖನನ 13. ಮಹಾತ್ರೆ ಅಂಕಣ


ಅನುಬಂಧ 9

ವಿವಿಧ ರಾಜಮನೆತನದ ವಂಶವೃಕ್ಷಗಳು

ಗಂಗರ ವಂಶಾವಳಿ



ಹೊಯ್ಸಳರ ವಂಶಾವಳಿ:


ಸಳ
ಮಾರ- (ನೃಪಕಾಮ)
ನೃಪಕಾಮII
(ಸು. 1000–45)
ಉಪ್ಪಿಡಿಪೊಯ್ಸಳ
ವಿನಯಾದಿತ್ಯII
(ಸು. 1045–98)
ಎರೆಯಂಗ
ತಳೆಕಾಡುಪೊಯ್ಸಳ
ಎರೆಯಂಗ
(ಸು. 1098–1100)
ಉದಯಾದಿತ್ಯ
ಕುಂಟವಿನಯಾದಿತ್ಯ/ವಿನಯಾದಿತ್ಯI
(1006–20)
ಬಲ್ಲಾಳ I
(ಸು.1100–1108)
ವಿಷ್ಣುವರ್ಧನ
(ಸು.1108–42)
ಉದಯಾದಿತ್ಯII
ಬಲ್ಲಾಳದೇವ
ನರಸಿಂಹ I
(1142–73)
ವಿಜಯನಾರಾಯಣ
ಬಲ್ಲಾಳ II
(1173–1220)
ನರಸಿಂಹ II
(1220–35)
ಸೋಮೇಶ್ವರ
(1235– ಸು. 53)
ನರಸಿಂಹ III
(ಸು. 1253–92)
ರಾಮನಾಥ
(ಸು.1253–95)
ಬಲ್ಲಾಳ III
(1292–1343)
ವಿರೂಪಾಕ್ಷ ಬಲ್ಲಾಳ IV
(1343–ಸು. 46)

ವಿಜಯನಗರದ ಅರಸರ ವಂಶಾವಳಿ

ಸಂಗಮ ವಂಶ

- ಸಂಗಮ I
  - ಹರಿಹರ I (1336–56)
  - ಬುಕ್ಕ I (1356–77)
    - ಹರಿಹರ II (1377–1404)
      - ಬುಕ್ಕ II (1404–06)
      - ವಿರೂಪಾಕ್ಷ II (1404–06)
      - ದೇವರಾಯ I (1406–22)
        - ವಿಜಯಬುಕ್ಕIII (1422–24)
          - (ಪ್ರೌಢದೇವರಾಯ) ದೇವರಾಯ II (1424–46)
            - ಮಲ್ಲಿಕಾರ್ಜುನ (ದೇವರಾಯ III) (1446–85)
              - ರಾಜಶೇಖರ
          - ಪ್ರತಾಪದೇವ (ವಿಜಯರಾಯ)
            - ವಿರೂಪಾಕ್ಷ III (1465–85)
              - ಪ್ರೌಢದೇವರಾಯ
        - ವೀರಮಲ್ಲಪ್ಪ
        - ಹರಿಹರ III
        - ರಾಮಚಂದ್ರ
      - ಚಿಕ್ಕರಾಯ
    - ಕಂಪಣ II (ಕಂಪಣ್ಣ)
    - ವಿರೂಪಾಕ್ಷ I
    - ಭಾಸ್ಕರ
    - ಮಲ್ಲಿನಾಥ
    - ಇತರರು
  - ಕಂಪಣ(ಕಂಪಣ್ಣ)
    - ಸಾವಣ
    - ಸಂಗಮ
  - ಮಾರಪ್ಪ
  - ಮುದ್ದಪ್ಪ

ವಿಜಯನಗರ

ಸಾಳುವ ಮನೆತನ

- ಗುಂಡ
  - ನರಸಿಂಹ I (1485–91)
    - ತಿಮ್ಮ
    - ನರಸಿಂಹ II (1491–1505)

ತುಳುವ ಮನೆತನ

- ತಿಮ್ಮ
  - ಈಶ್ವರನಾಯಕ
    - ನರಸನಾಯಕ
      - ವೀರನರಸಿಂಹ (1505–09)
      - ಕೃಷ್ಣದೇವರಾಯ (1509–29)
        - ತಿರುಮಲ
      - ಅಚ್ಯುತರಾಯ (1529–42)
        - ವೆಂಕಟಾದ್ರಿ
      - ರಂಗ
        - ಸದಾಶಿವ (1542–70)

ಆರವೀಡು ಮನೆತನ

- ಪಿನ್ನಮ
  - ಬುಕ್ಕ
    - ಸಿಂಗರಾಜ
    - ರಾಮರಾಜ
      - ತಿಮ್ಮ
      - ಪೆದ್ದುಕೊಂಡ
        - (ಅಳಿಯ)ರಾಮರಾಯ
          - ಪೆದ್ದ ತಿರುಮಲ
          - ಶ್ರೀರಂಗ
            - ವೆಂಕಟಪತಿ II (1632–42)
            - ಚಿನ್ನವೆಂಕಟ ಶ್ರೀರಂಗ III (1642–46)
        - ತಿರುಮಲ (1570–78)
          - ಶ್ರೀರಂಗ I (1578-86)
          - ರಾಮ
            - ತಿರುಮಲ
            - ಶ್ರೀರಂಗ II
              - ರಾಮದೇವ (1617–32)
          - ವೆಂಕಟಪತಿ I (1586-1614)
        - ವೆಂಕಟಾದ್ರಿ
      - ಶ್ರೀರಂಗ

ಮೈಸೂರು ಒಡೆಯರು

- ಯದುರಾಯ (ವಿಜಯ) – (1399–23)
  - ಹಿರಿಯ ಬೆಟ್ಟದ ಚಾಮರಾಜ ಒಡೆಯರ್ I – (1423–59)
    - ತಿಮ್ಮರಾಜ ಒಡೆಯರ್ I – (1459–78)
      - ಹಿರಿಯ ಚಾಮರಾಜ ಒಡೆಯರ್ II – (1478–1513)
        - ಹಿರಿಯ ಬೆಟ್ಟದ ಚಾಮರಾಜ ಒಡೆಯರ್ III – (1513–53)
          - ತಿಮ್ಮರಾಜ ಒಡೆಯರ್ II (1553–72)
          - ಕೃಷ್ಣರಾಜ ಒಡೆಯರ್
            - ಬೆಟ್ಟದ (ದೇವರಾಜ) ಒಡೆಯರ್ (1576–78)
              - ರಾಜ ಒಡೆಯರ್ I (1578–1617)
                - ನರಸರಾಜ ಒಡೆಯರ್
                  - ಚಾಮರಾಜ ಒಡೆಯರ್ V (1617–37)
                - ನಂಜರಾಜ ಒಡೆಯರ್
                - ಬೆಟ್ಟದ ಒಡೆಯರ್
                - ರಾಜ ಒಡೆಯರ್ II (1637–38)
              - ಬೆಟ್ಟದ ಚಾಮರಾಜ ಒಡೆಯರ್
                - ಕಂಠೀರವ ನರಸರಾಜ ಒಡೆಯರ್ I (1638–59)
              - ಮುಪ್ಪಿನ ದೇವರಾಜ ಒಡೆಯರ್
                - ದೊಡ್ಡ ದೇವರಾಜ ಒಡೆಯರ್
                  - ಚಿಕ್ಕದೇವರಾಜ ಒಡೆಯರ್ (1673–1704)
                    - ಕಂಠೀರವ ನರಸರಾಜ ಒಡೆಯರ್ II (1704–14)
                      - ಕೃಷ್ಣರಾಜ ಒಡೆಯರ್ I (1714–32)
                        - (ದತ್ತು) ಚಾಮರಾಜ ಒಡೆಯರ್ (1732–34)
                        - (ದತ್ತು) ಕೃಷ್ಣರಾಜ ಒಡೆಯರ್ II (1734–66)
                          - ನಂಜರಾಜ ಒಡೆಯರ್ (1766–70)
                          - ಬೆಟ್ಟದ ಚಾಮರಾಜ ಒಡೆಯರ್ VII (1770–76)
                          - (ದತ್ತು) ಖಾಸಾ ಚಾಮರಾಜ ಒಡೆಯರ್ VIII (1776–96)
                            - ಕೃಷ್ಣರಾಜ ಒಡೆಯರ್ III (1799–1831)
                              - (ದತ್ತು) ಚಾಮರಾಜ ಒಡೆಯರ್ IX (1881–94)
                                - ಕೃಷ್ಣರಾಜ ಒಡೆಯರ್ IV (1895–1940)
                                  - (ದತ್ತು) ಜಯಚಾಮರಾಜ ಒಡೆಯರ್ (1940–50)
                                - ಕಂಠೀರವ ನರಸಿಂಹರಾಜ ಒಡೆಯರ್
                  - ಕಂಠೀರವ ಒಡೆಯರ್
                - ಚಿಕ್ಕದೇವರಾಜ ಒಡೆಯರ್
                - ದೇವರಾಜ ಒಡೆಯರ್ (ಕೆಂಪದೇವರಾಜ ಒಡೆಯರ್) (1659–73)
                - ಮರಿ ದೇವರಾಜ ಒಡೆಯರ್
              - ಚಾಮರಾಜ ಒಡೆಯರ್
          - ಬೋಳ ಚಾಮರಾಜ ಒಡೆಯರ್ IV (1572–76)

ಅನುಬಂಧ 10

ಕಾನಕಾನಹಳ್ಳಿ ಪ್ರದೇಶದ ಪ್ರಮುಖ ಚಿತ್ರಗಳು

ಕನಕಪುರ ತಾಲ್ಲೂಕಿನ ಕೆಲವು ಪ್ರಾಗೈತಿಹಾಸಿಕ, ಐತಿಹಾಸಿಕ ನೆಲೆಗಳು

ಕೃಪೆ: ಮುತ್ತುರಾಜ್
ಜವಹರ್ ನವೋದಯ ವಿದ್ಯಾಲಯ, ಉಡುವಳ್ಳಿ



ನವಶಿಲಾಯುಗದ ಆಯುಧಗಳು
ಬಸವನ ಬೆಟ್ಟ


ಬೃಹತ್ ಶಿಲಾಯುಗದ
ಕಂಡಿಕಲ್ಲು ಸಮಾಧಿ
ಸಂಬಾಪುರ






ಬೃಹತ್ ಶಿಲಾಯುಗದ
ಸಮಾಧಿಯ ಮುಚ್ಚುಗಲ್ಲು
ಉದಾರ ಹಳ್ಳಿ

ಭೈರವಿ ಶಿಲ್ಪಗಳು
ಉದಾರ ಹಳ್ಳಿ





ದುರ್ಗಿ ಶಿಲ್ಪ
ಉದಾರ ಹಳ್ಳಿ



ತುರುವಿಗಾಗಿ ಹುಲಿಯೊಡನೆ
ಹೋರಾಡಿದ ಸಂದರ್ಭದ
ವೀರಗಲ್ಲು, ಹರಿಹರ



ಅಕ್ಷಮಾಲಾಗಣಪತಿ
ಹರಿಹರ



ಅರ್ಹಂತನ ಮೂರ್ತಿ
ಶ್ರವಣನ ಒಡ್ಡು, ಹರಿಹರ









ಮೇಕೆದಾಟು



ಬಿಳೇಕಲ್ಲು ಬೆಟ್ಟ



ಬಸವನ ಬೆಟ್ಟದ ವಿಹಂಗಮ ನೋಟ



ಚುಂಚಿ ಜಲಪಾತ



ಮುತ್ತತ್ತಿ








ಅರ್ಕಾವತಿ ನದಿಮೂಲ






ಅರ್ಕಾವತಿ ದಕ್ಷಿಣಸೇತುವೆಯ ಬಳಿ ದೊರೆತ ಶ್ರೀ ರಂಗನಾಥಸ್ವಾಮಿಯ ಪ್ರಾಚೀನಶಿಲ್ಪ





ಶ್ರೀ ನರಸಿಂಹನ ಸ್ತಂಭಶಿಲ್ಪ

ಶ್ರೀ ಆಂಜನೇಯ ಸ್ವಾಮಿ



ಶ್ರೀ ರಂಗನಾಥಸ್ವಾಮಿ
ನೂತನಶಿಲ್ಪ



ಕೋಟೆ ಗಣಪತಿ



ಕೋದಂಡರಾಮಸ್ವಾಮಿ
ದೇವಾಲಯದ
ದೇವತಾಮೂರ್ತಿಗಳು



ಅರ್ಕಾವತಿ ಹೊಳೆಕಟ್ಟೆ
ಶ್ರೀ ಆಂಜನೇಯಸ್ವಾಮಿ

ಕನಕಪುರ ತಾಲ್ಲೂಕಿನ ಇತರ ಗ್ರಾಮಗಳ ದೇವಾಲಯಗಳು

ಚಿತ್ರಕೃಪೆ: ಕೆ.ಎಸ್. ಸುಬ್ರಹ್ಮಣ್ಯ



ಶ್ರೀ ನಾರಾಯಣಸ್ವಾಮಿ ದೇವಾಲಯ, ಅರಳಾಳು



ಕುದುರೆಸವಾರನ ಒಂದು ಸುಂದರಶಿಲ್ಪ
ಅರಳಾಳು



ಶ್ರೀ ನಾರಾಯಣಸ್ವಾಮಿ



ಹೊಲದಲ್ಲಿ ಬಿದ್ದಿರುವ ಪ್ರಾಚೀನವಾದ ಶಿವಲಿಂಗ, ಅರಳಾಳು












ಪ್ರಾಚೀನ ಗಣಪತಿಯ ಮೂರ್ತಿ
ಮರಳವಾಡಿ



ಶ್ರೀ ಅನ್ನಪೂರ್ಣೇಶ್ವರಿ
ದೇವಾಲಯ, ಮರಳವಾಡಿ



ಶ್ರೀಮಾತಾ ಅನ್ನಪೂರ್ಣೇಶ್ವರಿ
ಮರಳವಾಡಿ



ದೇವರಾಳಮ್ಮ, ದೇವರಹಳ್ಳಿ




ಶ್ರೀ ಆಂಜನೇಯಸ್ವಾಮಿ ದೇವಾಲಯ, ಸಂತೆ ಕೋಡಿಹಳ್ಳಿ



ಶ್ರೀ ವೆಂಕಟರಮಣಸ್ವಾಮಿ ದೇವಾಲಯ, ಸಂತೆ ಕೋಡಿಹಳ್ಳಿ

ಪಿರಿಯಾಪಟ್ಟಣ ತಾಲ್ಲೂಕು ಬೆಟ್ಟದ ಪುರದ ಅನ್ನದಾನಿ ಮಲ್ಲಿಕಾರ್ಜುನಸ್ವಾಮಿ ದೇವಸ್ಥಾನದ ಸಮೀಪದ ವಾಸ್ತುಗಳು ಕಾನಕಾನ ಹಳ್ಳಿ ಪ್ರಭುಗಳ ಕುಟುಂಬದವರ ಧರ್ಮಕಾರ್ಯಗಳು

ಚಿತ್ರಕೃಪೆ: ಪುರಾತತ್ವವಿಭಾಗ, ಕರ್ನಾಟಕ ಸರ್ಕಾರ



ಹಾಳುಬಿದ್ದಿರುವ ಸೂಳೇಕೊಳ




ತೋರಣಗಂಬ




ಉಯ್ಯಾಲೆ ಕಂಬ



ನಂದಿಮಂಟಪ



ನಂದಿಮಂಟಪದ
ಶಿಲಾಲೇಖ



ಸ್ತ್ರೀ ಭಕ್ತವಿಗ್ರಹ




ಸ್ತ್ರೀ ಭಕ್ತವಿಗ್ರಹ ಮತ್ತು ರಾಜಕುಮಾರ
ಪೋಷಾಕಿನ ಬಾಲಕ











ಸೋಮೇಶ್ವರ ದೇವಸ್ಥಾನದಲ್ಲಿ ದೊಡ್ಡಯ್ಯನು ಲಕ್ಕಣಯ್ಯ ಚೆಂದಯ್ಯನವರ

ಕಬ್ಬಾಳುದುರ್ಗ




ಅರುಣಾಚಲೇಶ್ವರ ದೇವಸ್ಥಾನ (ಹಾರೋಹಳ್ಳಿ)







ಫ್ರಾನ್ಸಿಸ್ ಬುಕನನ್



ಗ್ರಂಥ ಋಣ – ಇಂಗ್ಲೀಷ್

1. A Journey from Madras through the countries of Mysore, Canara and Malabar, performed under the orders of the Most Noble the Marquis Wellesley, Governor General of India, for the express purpose of investigating the state of Agriculture, Arts and commerce, the religion, manners and customs; the History natural and civil, and Antiquities in the Domains of the Rajah of Mysore, and the countries acquired by the Honourable East India Company, in the late and former wars, from Tippu Sultan.

   Dr. Francis Buchanan, London, 1807.

2. Archaeology in Myore (MAR), 1906 - 11, vol.l,

   Ed. T.T. Sharman, K. Narayana lyengar, The Mythic Society, Bangalore, 1973.

3. A view of the origin and conduct of the war with Tippoo Sultan; comprising a narrative of the operations of the Army under the command of lietenant - General George Harris, and of the seige of Seningapatam

   Lieutenant - Colonel Alexander Beatson, London, 1800

4. Epigraphia Carnatica, Vol. ix (unpublished supplement also included) Ed. B. Lewis Rice, Bangalore, 1905

5. Historical sketeches of the South India in an attempt to trace the History of Mysore from the origin of the Hindu Government of the state, to the extinction of the Mohammedan dynasty in 1799, founded chiefly on Indian authorities.

   Coloner Mark wilks, Ed. Murray, Hammick, Asia Educational Services, New Delhi, Madras, 1989 (I Ed. 1810)

   History of Mysore, vol. I, II,III

   C. Hayavadana Rao, Government of Mysore, Banglore, 1943, 1945, 1946.

6. Index Volumes of M.A.R

7. Karnataka State Gazetteer : Bangalore Rural District. Ed. Suryanath U. Kamath, Government of Karnataka, 1989.

8. Mysore and Coorg : Imperial Gazetteer of India. B.L. Rice, Calcutta, 1908.

9. Mysore and coorg from the Inscriptions B.L. Rice, London, 1909.

10. Mysore : A Gazetteer compiled for Government. volume - II B. Lewis Rice, Bangalore, 2004 (Ied. 1876, Revised ed. 1897)

11. Mysore Gazetteer, Vol. I-IV

    C. Hayavadana Rao, Government Press, Bangalore, 1927 - 30.

12. Register for Muzrai Institutions, Kankanhalli Taluk, 1902.

13. Story of Tippu Sultan M.K. Khan, Calcutta, 1951.

ಗ್ರಂಥ ಋಣ – ಕನ್ನಡ

14. ಅಂತರಗಂಗೆ : ಕನಕಪುರ ತಾಲ್ಲೂಕು ಐದನೆಯ ಕನ್ನಡ ಸಾಹಿತ್ಯ ಸಮ್ಮೇಳನದ ನೆನಪಿನ ಸಂಚಿಕೆ. ಸಂ.ತಾ.ಸಿ ತಿಮ್ಮಯ್ಯ, ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತು, ಕನಕಪುರ, ೨೦೦೦.

15. ಅಂಬಾರಿ : ಬೆಂಗಳೂರು ಗ್ರಾಮಾಂತರ ಜಿಲ್ಲಾ ಎರಡನೇ ಕನ್ನಡ ಸಾಹಿತ್ಯ ಸಮ್ಮೇಳನದ ನೆನಪಿನ ಸಂಚಿಕೆ, ಆನೇಕಲ್, ಸಂ. ಅ.ರಾ. ಮಿತ್ರ, ಗಂಗಾನಿವಾಸ, ಆನೇಕಲ್, ೧೯೮೧.

16. ಅರ್ಕಾವತಿ : ಅಖಿಲಭಾರತ ೬೭ನೆಯ ಕನ್ನಡ ಸಾಹಿತ್ಯ ಸಮ್ಮೇಳನ ಸ್ಮರಣ ಸಂಚಿಕೆ, ಕನಕಪುರ. ಸಂ. ಎಂ. ಭೈರೇಗೌಡ, ತಾ.ಸಿ. ತಿಮ್ಮಯ್ಯ, ಕನ್ನಡ ಸಾಹಿತ್ಯ ಪರಿಷಿತ್ತು, ಬೆಂಗಳೂರು, ೧೯೯೯.

17. ಎಪಿಗ್ರಾಫಿಯ ಕರ್ನಾಟಿಕ – ಸಂ. ೭, ೧೦ ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು, ೧೯೭೯, ೧೯೯೯.

18. ಇತಿಹಾಸ ಅಕಾಡೆಮಿ ಬೆಂಗಳೂರು – ಇತಿಹಾಸ ದರ್ಶನ ಸಂಪುಟಗಳು

19. ಬಿ.ಎಲ್. ರೈಸ್ – ಎಫಿಗ್ರಾಫಿಯಾ ಕರ್ನಾಟಕ ಶಾಸನ ಸಂಪುಟ.

20. ಡಾ.ಎಂ. ಚಿದಾನಂದ ಮೂರ್ತಿ – ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ

21. ಕನಕಚಕ್ರ ರಜತಮಹೋತ್ಸವ ಸ್ಮರಣಸಂಚಿಕೆ : ರೋಟರಿ, ಕನಕಪುರ, ೨೦೦೨

22. ಕನಕಪುರ ತಾಲ್ಲೂಕು ದರ್ಶನ : ವೇಣುಗೋಪಾಲ ಸೊರಬ, ಐ.ಬಿ.ಎಚ್. ಪ್ರಕಾಶನ, ಬೆಂಗಳೂರು–೯, ೧೯೮೪.

23. ಕನಕರಶ್ಮಿ : ಕನಕಪುರ ತಾಲ್ಲೂಕು ಕನ್ನಡ ಸಾಹಿತ್ಯ ಸಮ್ಮೇಳನ ಕನಕಪುರ. ಸಂ. ಈ. ನಂಜಪ್ಪ, ಕನಕಪುರ, ೧೯೯೧.

24. ಕನಕಸಿರಿ : ಅಖಿಲಭಾರತ ೬೭ನೆಯ ಕನ್ನಡ ಸಾಹಿತ್ಯ ಸಮ್ಮೇಳನ ಸಂಸ್ಮರಣ ಸಂಪುಟ, ಸಂ. ಎಚ್.ಎಸ್. ಗೋಪಾಲರಾವ್, ಜಿ. ಅಬ್ದುಲ್ ಬಷೀರ್, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ೧೯೯೯.

25. ಕನ್ನಡ ವಿಷಯ ವಿಶ್ವಕೋಶ : ಕರ್ನಾಟಕ : ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ೧೯೭೯ (ಪರಿಷ್ಕೃತ ಸಂಪುಟ ೧, ೨೦೦೫).

26. ಕಬ್ಬಾಳು ಕುಳಿಯಲ್ಲಿ ಹುಲಿ : ಸಂ. ಕ್ಯಾತನಹಳ್ಳಿ ರಾಮಣ್ಣ, ಪ್ರಸಾರಾಂಗ, ಮೈ.ವಿ.ವಿ. ಮೈಸೂರು. ೨೦೦೫.

27. ಕಾನಕಾನಹಳ್ಳಿ ಪರಿಚಯ : ವೇ॥ ರಾಮನಾಥ ಶಾಸ್ತ್ರಿ, ವೆಸ್ಲಿಯನ್ ಪ್ರೆಸ್, ಮೈಸೂರು, ೧೮೯೭.

28. ಗ್ರಾಮ ವಿದ್ಯಾಪ್ರಚಾರಕ ಸಂಘದ ಬೆಳ್ಳಿಹಬ್ಬದ ಸ್ಮರಣಸಂಚಿಕೆ : ಸಂ ಎಚ್.ಜಿ. ರಾಮಕೃಷ್ಣ ಅಡಿಗ, ವೇಣುಗೋಪಾಲ ಸೊರಬ, ಬಿ.ವಿ. ಕೃಷ್ಣೇಗೌಡ, ಕನಕಪುರ, ೧೯೭೪.

29. ದೇಗುಲಕಿರಣ : ಶ್ರೀ ನಿರಂಜನಚರಪಟ್ಟಾಧಿಕಾರ ಮಹೋತ್ಸವಸ್ಮರಣಸಂಚಿಕೆ, ಶ್ರೀ ದೇಗುಲ ಮಠ, ಸಂ.ಜಿ.ವಿ. ಶಿವಸ್ವಾಮಿ, ಶ್ರೀ ದೇಗುಲಮಠ, ಕನಕಪುರ, ೧೯೭೭.

30. ದೇಗುಲಜ್ಯೋತಿ : ಸಂ. ಎಸ್. ಮಹಾದೇವಪ್ಪ, ಬಿ. ನಂಜುಂಡಪ್ಪ, ಕನಕಪುರ.

31. ದೇಗುಲಸಿರಿ : ನಿರಂಜನಚರ ಪಟ್ಟಾಧಿಕಾರ ಮಹೋತ್ಸವ ನೆನಪಿನ ಸಂಚಿಕೆ, ಸಂ.

32. ಎಚ್. ಪಿ. ವೀರಭದ್ರಯ್ಯ ಇ. ದೇಗುಲಮಠ, ಕನಕಪುರ ೧೯೯೮.

33. ನಿರ್ವಾಣಶ್ರೀ : ಶ್ರೀ ಮುಮ್ಮಡಿ ನಿರ್ವಾಣಸ್ವಾಮಿಗಳವರ ಪಟ್ಟಾಧಿಕಾರ ರಜತ ಮಹೋತ್ಸವ ಸಂಪುಟ, ಸಂ.ಟಿ.ಆರ್. ಮಹಾದೇವಯ್ಯ, ರಜತ ಮಹೋತ್ಸವ ಸಮಿತಿ, ಕನಕಪುರ, ೨೦೦೫.

34. ನೆನಪುಗಳು : ಕೆ ವಾಸುದೇವಾಚಾರ್ಯ, ಕಾವ್ಯಾಲಯ, ಮೈಸೂರು ೧೯೬೨ (ದ್ವಿಮು. ೧೯೭೮).

35. ಡಾ. ವೈ.ಸಿ ಭಾನುಮತಿ (ಸಂ) – ನೂರೊಂದಯ್ಯ ವಿರಚಿತ ಸೌಂದರ್ಯ ಕಾವ್ಯ.

36. ಬೆಳ್ಳಿಬೆಳಕು : ಬೆಳ್ಳಿ ಹಬ್ಬದ ನೆನಪಿನ ಸಂಪುಟ, ಸಂ, ಎಲ್. ಚಿಕ್ಕಪ್ಪಾಜಿ ಇ ಬೆಂಗಳೂರು ಗ್ರಾಮಾಂತರ ಜಿಲ್ಲಾ ಕನ್ನಡ ಸಾಹಿತ್ಯಪರಿಷತ್ತು, ಬೆಂಗಳೂರು, ೧೯೯೭.

37. ಭಾಗ ೧ : ಮಾಸ್ತಿ ವೆಂಕಟೇಶ ಅಯ್ಯಂಗಾರ್, ಜೀವನ ಕಾರ್ಯಾಲಯ ಟ್ರಸ್ಟ್, ಬೆಂಗಳೂರು, 1989 (ಪ್ರ. 1968), ಪು. ೧೧೫ – ೨೧.

38. ಮುಂಬೆಳಗು : ಹಾರೋಹಳ್ಳಿ ಗ್ರಾಮಾಮತರ ಪ್ರೌಢಶಾಲೆಯ ಬೆಳ್ಳಿಹಬ್ಬದ ಸ್ಮರಣ ಸಂಚಿಕೆ, ಸಂ. ಎಂ. ವಿ. ಶ್ರೀನಿವಾಸನ್, ಹಾರೋಹಳ್ಳಿ, 1984.

39. ಡಾ.ಎಸ್. ಶ್ರೀಕಂಠಶಾಸ್ತ್ರಿ – ಭಾರತೀಯ ಸಂಸ್ಕೃತಿ

40. ಮೈಸೂರು ಶ್ರೀಈಮನ್ಮಹಾರಾಜ ಶ್ರೀಕೃಷ್ಣರಾಜೊಡೆಯರ್ : ಬಹದ್ದೂರ್ ಜಿ.ಸಿ. ಎಸ್.ಐ., ಜಿ.ಬಿ.ಇ. ಇವರ ಭಾಷಣಗಳು (೧೯೦೨ – ೧೯೨೦) : ಗೌರ್ನಮೆಂಟ್ ಬ್ರ್ಯಾಂಚ್ ಪ್ರೆಸ್, ಮೈಸೂರು, ೧೯೭೩.

41. ಡಾ. ಸೂರ್ಯನಾಥ ಕಾಮತ್ (ಪ್ರ.ಸಂ) – ಬೆಂಗಳೂರು ರೂರಲ್ ಡಿಸ್ಟ್ರಿಕ್ಟ್ ಗೆಜೆಟಿಯರ್

42. ವಂಶರತ್ನಾಕರ (ಶ್ರೀಮನ್ಮಹಾರಾಜ ಚಾಮರಾಜೇಂದ್ರ ಒಡೆಯರವರ ವಂಶರತ್ನಾಕರ) : ಎಂ.ವಿ.ಕೆ. ಮತ್ತು ಎಂ.ಎಲ್. ಎನ್., ಅರಮನೆಯ ಜಗನ್ಮೋಹನ ಮುದ್ರಾಕ್ಷರ ಶಾಲೆ, ಮೈಸೂರು, 1887.

43. ಸಿ.ಹಯವದನರಾವ್ (ಸಂ) – ಮೈಸೂರು ಗೆಜೆಟಿಯರ್ 5 ಸಂಪುಟಗಳು

44. ರೈಸ್ ಬಿ. ಲೆವೀಸ್ (ಸಂ) – ಮೈಸೂರು ಗೆಜೆಟಿಯರ್ 2 ಸಂಪುಟಗಳು

45. ಶಾಸ್ತ್ರಕೂತೂಹಲ : ಗರ್ಗೇಶ್ವರಿ ವೆಂಕಟಸುಬ್ಬಯ್ಯ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೩.

46. ಶ್ರೀಮನ್ಮಹಾರಾಜರವರ ವಂಶಾವಳಿ, ಭಾಗ ೧,೨ : ಬಿ, ರಾಮಕೃಷ್ಣರಾವ್, ಮೈಸೂರು, ೧೯೨೨.

47. ಸತ್ಯಾಗ್ರಹಿ : ಒಂದು ಜೀವನ ಕಥೆ : ಸರ್ದಾರ್ ವೆಂಕಟರಾಮಯ್ಯ ಸ್ಮಾರಕ ಸಮಿತಿ, ಬೆಂಗಳೂರು – ೧, ೧೯೮೫ (ಪ್ರಮು. ೧೯೮೩).

48. ಸೋಸಲೆ ಗರಳಪುರೀ ಶಾಸ್ತ್ರಿಗಳ ಚರಿತ್ರೆ : ಸಿ. ವೆಂಕಟರಮಣ ಶಾಸ್ತ್ರಿ, ಕಾದಂಬರೀ ಸಂಗ್ರಹ ಗ್ರಂಥಮಾಲೆ–೪೩, ಮೈಸೂರು, ೧೯೧೯.

ಲೇಖನಗಳು

1. ಅನಾಥ ಈ ಸೋಮೇಶ್ವರ (ವೆಂಕಟರಾಯನ ದೊಡ್ಡಿ – ಅತ್ತಿಕಟ್ಟೆ ಮಾರ್ಗ) : ಚಿದಾನಂದ ಅ. ಪಾಟೀಲ, ಪ್ರಜಾವಾಣಿ, ೫–೭–೨೦೦೭.

2. ಅರುಣೋದಯ ಕಾಣದ ಹಾರೋಹಳ್ಳಿಯ ಅರುಣಾಚಲ : ಡಾ॥ ಎಂ. ಸತ್ಯನಾರಾಯಣ ರಾವ್, ಸುಧಾ, ೭–೧೧–೧೯೭೬.

3. ಕನಕಪುರ ತಾಲ್ಲೂಕಿನ ಅಲಸೂರು ಮತ್ತು ಕಾಡಹಳ್ಳಿಯ ಪ್ರಾಚೀನ ವೀರಗಲ್ಲುಗಳು ಹಾಗೂ ಮೂರ್ತಿಗಳು : ಮುತ್ತುರಾಜು, ಕರ್ನಾಟಕ ಲೋಚನ, ೨೦–೨, ಪು. ೧೨೧೭.

4. ಕನಕಪುರ ತಾಲ್ಲೂಕಿನ ಕೆಲವು ಬೃಹತ್ ಶಿಲಾಯುಗದ ಶಿಲಾಗೋರಿಗಳು : ಮುತ್ತುರಾಜು, ಇತಿಹಾಸದರ್ಶನ, ಸಂ ೧೧, ೧೯೯೬.

5. ಕನಕಪುರ ತಾಲ್ಲೂಕಿನಲ್ಲಿ ದೊರೆತ ಕೆಲವು ಪ್ರಾಚ್ಯಾವಶೇಷಗಳು : ಮುತ್ತುರಾಜು, ಕರ್ನಾಟಕ ಲೋಚನ, ಸಂ. ೧೬–೨, ಡಿ. ೨೦೦೨.

6. ಕನಕಪುರ ಪ್ರಾಚೀನ ರಂಗನಾಥಶಿಲ್ಪ : ಮುತ್ತುರಾಜು, ಹೊಸತು, ಫೆ. ೨೦೦೨.

7. ಕನಕಪುರದ ಸಾಹಿತ್ಯೇತಿಹಾಸ ೧, ೨ : ಟಿ.ವಿ. ವೆಂಕಟಾಚಲ ಶಾಸ್ತ್ರೀ, ಶಾಸ್ತ್ರೀಯ – ೪, ಸಪ್ನ ಬುಕ್ ಹೌಸ್, ಬೆಂಗಳೂರು – ೯, ೧೯೯೯, ಪು. ೬೦೫–೨೫.

8. ಕಬ್ಬಾಳುದುರ್ಗ : ಎಚ್.ಆರ್. ಸುದರ್ಶನ ಪ್ರಸಾದ್, ಸುಧಾ, ೨೦–೧–೧೯–೦.

9. ಕಾನಕಾನಹಳ್ಳಿ ನಾರಾಯಣ ಶಾಸ್ತ್ರಿಗಳು : ಕಾದಂಬರೀ ಸಂಗ್ರಹ, ೨೧.೧–೩, ೧೯೩೪.

10. ಕಾನಕಾನಹಳ್ಳಿ ವರದಾಚಾರ್ಯರು : ಡಿ.ವಿ. ಗುಂಡಪ್ಪ, ಸಂಕೀರ್ಪಸ್ಮೃತಿ ಸಂಪುಟ.

೧೯೭೭, ಪು. ೧೯೧ : ಕೆ. ವೆಂಕಟರಾಮಪ್ಪ, ಕನ್ನಡಪ್ರಭ ೧೭–೧, ೧೯೯೧, ಪು. ೩; ವಿ.ಸೀ. 'ಕಾಲೇಜು ದಿನಗಳು', ೧೯೭೧, ಪು. ೧೨೮–೨೯; ಡಿ.ವಿ.ಜಿ. ಸಾಹಿತ್ಯೋಪಾಸಕರು, ೧೯೭೦, ಪು. ೧೭೩; ಕ.ವೆಂ. ರಾಘವಾಚಾರ್, ನಂದಾನೆನಪು, ೧೯೭೩.

11. ಪು. ೧೨೪; ಕಸಾಪ. ೨೭–೧, ಪು. ೯೦; ಪ್ರಕ., ೨೪–೧; ಎನ್.ಎಸ್. ತಾರಾನಾಥ್, 'ನಾಲ್ವರು ಸಾಹಿತ್ಯೋಪಾಸಕರು', ೨೦೦೧, ಪು. ೫–೧೪.

12. ಕಾನಕಾನಹಳ್ಳಿ ಹೆಸರಿನ ಇತಿಹಾಸ : ಬಿ. ನಂಜುಂಡಪ್ಪ, ಕನ್ನಡ ನುಡಿ, ೧೦–೩೮, ಆಗಸ್ಟ್ ೬, ೧೯೪೮.

13. ಗೊಟ್ಟಿಗೆಹಳ್ಳಿಯಲ್ಲಿ ಬೃಹತ್ ಶಿಲಾಯುಗದ ಶಿಲಾಸಮಾಧಿಗಳು – ಹೊಸಶೋಧ : ಮುತ್ತುರಾಜು, ಕರ್ನಾಟಕ ಲೋಚನ, ೭–೧, ಜೂನ್, ೧೯೯೪.

14. ನಮ್ಮೂರಿನ ಗ್ರಾಮದೇವತೆಯರ ಉತ್ಸವ : ಟಿ.ವಿ. ವೆಂಕಟಾಚಲ ಶಾಸ್ತ್ರೀ, ಜನಪ್ರಗತಿ, 22–8–1954.

15. ಬಾಣಂತಿ ಮಾರಮ್ಮ : ಒಂದು ಜಾನಪದೀಯ ಅಧ್ಯಯನ : ಎಂ. ಭೈರೇಗೌಡ, ಸಾಧನೆ, 26 – 2, 1997.

16. ಬೆಂಗಳೂರು ಜಿಲ್ಲೆ – ಇತಿಹಾಸ, ಸಾಹಿತ್ಯ : ಟಿ.ವಿ. ವೆಂಕಟಾಚಲ ಶಾಸ್ತ್ರೀ, 'ಶಾಸ್ತ್ರೀಯ – 4', ಸಪ್ನಬುಕ್ ಹೌಸ್, ಬೆಂಗಳೂರು, 1999, ಪು. 597–604.

17. ವನ ಚಿನ್ನಪ್ಪರ ಬೇಡುದಲೆ (ಹಾರೊಬೆಲೆ) : ಎಫ್. ಎಂ. ನಂದಗಾವ್, ಸುಧಾ, 27–12–1998.

18. ವೇದಾಧ್ಯಯನಕ್ಕೊಂದು ಶಾಂತಿಧಾಮ (ಸಂಗಮ) : ಬಿ. ವಿಶ್ವನಾಥ, ಸುಧಾ.

19. ಸಂಕ್ರಮಣಸ್ಥಿತಿಯಲ್ಲಿ ಕನಕಪುರ : ವೇಣುಗೋಪಾಲ ಸೊರಬ, ತರಂಗ, 5–6–1983.

20. ಸೀತನ ಕೊಟ್ಟ : ಟಿ.ವಿ. ವೆಂಕಟಾಚಲ ಶಾಸ್ತ್ರೀ, 'ಕಾವ್ಯಚಿತ್ರಗಳು' ಮೈಸೂರು 1975.

21. ಸೀತನ ಕೊಟ್ಟ ಜಾತ್ರೆ : ಮಣಿಕಾಂತ್, ನೂತನ, 10–9–2000.

22. ಸೂಳೆಕಲ್ ಮಠದ ಗುಹಾಚಿತ್ರಗಳು : ಮುತ್ತುರಾಜು, ಇತಿಹಾಸ ದರ್ಶನ, ಸಂ. 10, 1995.

23. ಹರಿಹರಗ್ರಾಮದ ಪ್ರಾಚ್ಯಾವಶೇಷಗಳು : ಮುತ್ತುರಾಜು, ಇತಿಹಾಸದರ್ಶನ.

24. ಹಾರೊಬೆಲೆಯ ಮಹಿಮೆ : ಎಫ್. ಎಂ. ನಂದಗಾವ್, ಸುಧಾ

25. ಹಿರೇಮಡಿವಾಳದ ಶಿವನಾಂಕಾರೇಶ್ವರ ದೇವಾಲಯ – ಒಂದು ಜಾನಪದೀಯ ಅಧ್ಯಯನ : ಎಂ. ಭೈರೇಗೌಡ, ಸಾಧನೆ, 25–1, 1996.

26. ಹೊಮ್ಮಳಿಗೆ ನಾಡು, ಬನ್ನೇರುಘಟ್ಟ – ಸ್ಥಳನಾಮಪರಿಶೀಲನೆ : ಪಿ.ವಿ. ಕೃಷ್ಣಮೂರ್ತಿ, ಸಾಧನೆ 25–1,2, 1996.